# ಸಾಂಸ್ಕೃತಿಕ ಧ್ರುವ ತಾರೆಗಳು

ಸಂಪಾದಕರು : ಅನಿಲ ದೇಸಾಯಿ



ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಸಾಂಸ್ಕೃತಿಕ ಧೃವ ತಾರೆಗಳು

# ಸಾಂಸ್ಕೃತಿಕ ಧ್ರುವತಾರೆಗಳು

ಪ್ರಧಾನ ಸಂಪಾದಕರು

**ಡಾ. ಶಾಂತಾ ಇಮ್ರಾಪೂರ**

ಸಂಪಾದಕರು

**ಅನಿಲ ದೇಸಾಯಿ**

ಸಿರಿಗನ್ನಡಂ ಗೆಲ್ಗೆ

ಸ್ಥಾಪನೆ : ೨೦ ಜುಲೈ ೧೮೯೦

**ಕರ್ನಾಟಕ ವಿದ್ಯಾವರ್ಧಕ ಸಂಘ**

**ಧಾರವಾಡ**

☆ ☆ ☆ ☆

☆ ಸಾಂಸ್ಕೃತಿಕ ಧೃವ ತಾರೆಗಳು

☆ ☆

`SANSKRUTIKA DHRUVATAAREGALU' a collection of articles on eminent persons in kannada by Anil Desai Programme executive AIR Dharwad. Published by Shankar Halagatti Gen. Secretary, Karnatak Vidyavardhak Sangah, Dharwad-580 001.

© Publishers

| | | |
|---|---|---|
| First Edition | : | 2014 |
| Copies | : | 1000 |
| Pages | : | x + 324 |
| Size | : | 1/8 Demy |
| Paper Used | : | 80 GSM N.S Maplitho |
| Price | : | 200/- |

| | | |
|---|---|---|
| ಹಕ್ಕುಗಳು | : | ಪ್ರಕಾಶಕರು |
| ಮೊದಲ ಮುದ್ರಣ | : | ೨೦೧೪ |
| ಪ್ರತಿಗಳು | : | ೧೦೦ |
| ಪುಟಗಳು | : | x + ೩೨೪ |
| ಆಕರ | : | ೧/೮ ಡೆಮಿ |
| ಪೇಪರ ಬಳಕೆ | : | ೮೦ ಜಿಎಸ್‌ಎಂ ಎನ್.ಎಸ್. ಮ್ಯಾಪ್ಲಿತೊ |
| ಸಂಪಾದಕರು | : | ಅನಿಲ ದೇಸಾಯಿ, ಕಾರ್ಯಕ್ರಮ ನಿರ್ವಾಹಕರು<br>ಆಕಾಶವಾಣಿ, ಧಾರವಾಡ-೫೮೦ ೦೦೮ |
| ಪ್ರಕಾಶಕರು | : | ಶಂಕರ ಹಲಗತ್ತಿ, ಪ್ರಧಾನ ಕಾರ್ಯದರ್ಶಿ<br>ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ<br>೦೮೩೬-೨೪೪೭೦೨೮೩., ೨೪೩೬೧೭೬<br>Fax No. 2447355<br>kvvsangha@gmail.com<br>www.karnatakvidyavardhak.com |
| ಬೆಲೆ | : | ೨೦೦ |
| ಮುದ್ರಣ | : | ಸರಸ್ವತಿ ಆಪ್ಸೆಟ್ ಮುದ್ರಣ, ಧಾರವಾಡ |
| ಮುಖಪುಟ | : | ಚಿತ್ತಾರ, ಧಾರವಾಡ |

ವಿಭಾಗಗಳಿಗೆ ಒಬ್ಬೊಬ್ಬ ಸಂಪಾದಕರನ್ನಾಗಿ ಗುರುತಿಸಿ ಆ ವಿಭಾಗದ ಗ್ರಂಥ ಸಂಪಾದನೆಯ ಜವಾಬ್ದಾರಿಯನ್ನು ನೀಡಲಾಗಿದೆ.

ಈ ಯೋಜನೆಯ ಮೊದಲ ಗ್ರಂಥವಾಗಿ ಕಲಾವಿದರ ಅಂದರೆ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಜಾನಪದಗಳ ಕ್ಷೇತ್ರದ ಚೇತನಗಳ ಒಟ್ಟು ಸಂಘದಲ್ಲಿಯ ಭಾವಚಿತ್ರಗಳ ಪರಿಚಯಿಸುವ ಕೃತಿಗಳು ಹೊರಬರಬೇಕೆಂದು ಬಹಳಷ್ಟು ಬಾರಿ ಒತ್ತಾಯಿಸಿದವರು ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಹಾಗೂ ಸಂಘದ ಮೂಲ ಆಶಯದಂತೆ ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಬೇಕೆಂಬ ಒತ್ತಾಸೆಯನ್ನು ಮಾಡಿದ್ದು, ಸಂಘದ ಹಿಂದಿನ ಕಾರ್ಯಾಧ್ಯಕ್ಷ ಡಾ. ಕೆ. ಎಸ್. ದೇಶಪಾಂಡೆ ಅವರಿಗೆ ಸಲ್ಲುತ್ತದೆ. ಕಲಾವಿದರ ಅಂದರೆ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಜಾನಪದ ಕ್ಷೇತ್ರದ ಒಟ್ಟು ೪೧ ಚೇತನಗಳ ಸಂಕ್ಷಿಪ್ತ ಪರಿಚಯವನ್ನು **'ಸಾಂಸ್ಕೃತಿಕ ಧ್ರುವತಾರೆಗಳು'** ಈ ಗ್ರಂಥದಲ್ಲಿ ನೀಡಿದೆ. ಈ ಗ್ರಂಥದ ಸಂಪಾದನೆಯನ್ನು ಕಲಾವಿದ, ಸಂಗೀತಗಾರರ ಒಡನಾಡಿ, ಆಕಾಶವಾಣಿಯ ಅಧಿಕಾರಿ ಅನಿಲ ದೇಸಾಯಿವರು ತುಂಬಾ ಶ್ರಮ ವಹಿಸಿ ಸಂಪಾದನೆ ಮಾಡಿದ್ದಾರೆ. ಅವರ ಶ್ರಮ ಮತ್ತು ಕಾಳಜಿಯನ್ನು ಗೌರವದೊಂದಿಗೆ ಸ್ಮರಿಸುವೆ.

ಎರಡೂವರೆನೂರಕ್ಕೂ ಹೆಚ್ಚು ವ್ಯಕ್ತಿಗಳ ಪರಿಚಯ ಸಂಗ್ರಹಿಸುವುದು ಒಂದು ಸವಾಲಾಗಿತ್ತು. ಇಂಥ ಸವಾಲಿನ ಕಾರ್ಯಕ್ಕೆ ಕೈ ಜೋಡಿಸಿದವರು ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಹೊಂದಿದ ಶ್ರೀ ಪ್ರಕಾಶ ಮುಳಗುಂದರು. ಇವರದು ವಿಶಿಷ್ಟವಾದ ನಡತೆ ಮತ್ತು ಸೇವೆ. ತಮ್ಮ ನಿವೃತ್ತಿ ವೇತನದಲ್ಲಿ ಸತ್ಕಾರ್ಯಗಳಿಗೆ ಸಹಾಯ ಮಾಡುತ್ತಿರುವುದು ವಿಶಿಷ್ಟವಾದರೆ, ತಾವು ನೀಡಿದ ಹಣ ಮತ್ತು ಸಹಾಯ ಯಾರಿಗೂ ಗೊತ್ತಾಗಬಾರದು ಎಂಬ ಅವರ ನಿಃಸ್ವಾರ್ಥ ನಡತೆ ಮೆಚ್ಚುವಂತಹದ್ದು. ಪ್ರತಿದಿನ ಸಂಘಕ್ಕೆ ಬಂದು ನಮಗೆ ದೊರಕದೇ ಇದ್ದ ಹಲವಾರು ಮಹನೀಯರ ಮಾಹಿತಿಗಳನ್ನು ಸಂಗ್ರಹಿಸಿಕೊಡುವಲ್ಲಿ ಮಾಡಿದ ಸೇವೆ ಸ್ಮರಣೀಯ. ಇವರನ್ನು ಅತ್ಯಂತ ಪ್ರೀತಿಪೂರ್ವಕ ಗೌರವಗಳೊಂದಿಗೆ ನೆನಪಿಸಿಕೊಳ್ಳುವೆ. ಅಷ್ಟೇ ಆಸಕ್ತಿ ಮತ್ತು ಕಾಳಜಿ ತೆಗೆದುಕೊಂಡವರು ಸಂಘದ ಅಧೀಕ್ಷಕ ಶ್ರೀ ಶಿವಪುತ್ರಯ್ಯ ರಾಚಯ್ಯನವರ ಹಾಗೂ ಎನ್. ಎಸ್, ಕಾಶಪ್ಪನವರ. ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು ಹಾಗೂ ಪದಾಧಿಕಾರಿಗಳು ನೀಡಿದ ಸಹಕಾರವನ್ನು ಕೃತಜ್ಞತಾಭಾವದಿಂದ ಸ್ಮರಿಸಿಕೊಳ್ಳುವೆ. ಹಾಗೆಯೇ ಅಂದವಾಗಿ ಮುಖಪಟ ರಚಿಸಿದ ಬಿ. ಮಾರುತಿಯವರನ್ನು, ಒಳಪುಟ ವಿನ್ಯಾಸ ಮಾಡಿದ ಆರ್ಟೆಕ್‌ದ ರವೀಂದ್ರ ವಿಶ್ವಜ್ಞರನ್ನು, ಡಿಟಿಪಿ ಮಾಡಿದ ಚಿದಾನಂದ ಈ. ಮಾಸನಕಟ್ಟಿ, ವಿರೇಶ ಜಾಲಿಕಟ್ಟಿಯವರನ್ನು, ಕರಡು ತಿದ್ದಲು ಸಹಕರಿಸಿದ ಡಾ. ಬಿ.ಜಿ. ಬಿರಾದಾರ, ಶ್ರೀನಿವಾಸ ಸಿದ್ದಾಂತಿ ಅವರಿಗೆ, ಅಂದವಾಗಿ ಮುದ್ರಿಸಿದ ಸರಸ್ವತಿ ಮುದ್ರಣದ ಜಗದೀಶ ಘಾಣೆಕರರ ಕಾರ್ಯವನ್ನು ನೆನಪಿಸಿಕೊಳ್ಳುತ್ತಾ ಅಭಿನಂದಿಸುವೆ.

ಈ ಬೃಹತ್ ಗ್ರಂಥ ಮುಂದಿನ ಪೀಳಿಗೆಗೆ ಹಿರಿಯರ ಕೊಡುಗೆಯನ್ನು ಸ್ಮರಿಸಿಕೊಳ್ಳಲು ಮತ್ತು ವಿದ್ಯಾರ್ಥಿಗಳಿಗೆ ಒಂದು ಆಕರ ಗ್ರಂಥವಾಗುವಂತಿದೆ. ನಾಡಿನ ಪ್ರತಿ ಗ್ರಂಥಾಲಯ ಮತ್ತು ಶಾಲಾ-ಕಾಲೇಜುಗಳಲ್ಲಿ ಅವಶ್ಯವಾಗಿ ಇರಲೇಬೇಕಾದ ಗ್ರಂಥ. ಇದು ಕರ್ನಾಟಕ ವಿದ್ಯಾವರ್ಧಕ ಸಂಘದ ಹೆಮ್ಮೆಯ ಪ್ರಕಟಣೆಯಾಗಿದೆ. ಓದುಗರು ಪ್ರೀತಿಯಿಂದ ಕೈಗೆತ್ತಿಕೊಳ್ಳುವಂತಾಗಲಿ ಎಂದು ಆಶಿಸುವೆ.

**ಶಂಕರ ಹಲಗತ್ತಿ**
ಪ್ರಧಾನ ಕಾರ್ಯದರ್ಶಿ

## ಸಂಪಾದಕೀಯ

**ಸಾಹಿತ್ಯ ಸಂಗೀತ ಕಲಾವಿಹೀನಃ**

**ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ**

**–ಅನಿಲ ನಾರಾಯಣರಾವ್ ದೇಸಾಯಿ**

ಸಂಗೀತ ಸಾಹಿತ್ಯ ಕಲೆಗಳಲ್ಲಿ ಆಸಕ್ತಿಯಿಲ್ಲದವರು, ಕಲಾಸ್ವಾದನೆಯನ್ನು ಅರಿಯದವರು, ಪ್ರಾಣಿಗಳಿಗಿಂತ ಕಡೆ ಎನ್ನುತ್ತದೆ ಈ ಸುಭಾಷಿತ. ಅಂದರೆ ಸಾಂಸ್ಕೃತಿಕ ಹಿನ್ನಲೆ ಇಲ್ಲದ ಜನಾಂಗ ಅಥವಾ ನಾಗರಿಕತೆ ಅಪೂರ್ಣ ಎಂಬುದನ್ನು ಇದು ಸೂಚಿಸುತ್ತದೆ. ಹಾಗೆಯೇ ವಿಶ್ವ ವಿಖ್ಯಾತ ಕವಿ ನಾಟಕಕಾರ ವಿಲಿಯಂ ಶೆಕ್ಸ್‌ಪೀಯರ್ "ಕಲೆಯನ್ನು ಪ್ರೀತಿಸದವನನ್ನು ನಂಬಬಾರದು. ಅವನ ಮನಸ್ಸು ಅಪಾಯಕಾರಿ" ಎಂದು ಹೇಳುತ್ತಾನೆ. ಆದ್ದರಿಂದಲೇ ಭಾರತೀಯ ಪರಂಪರೆಯಲ್ಲಿ ಕಲೆ–ಸಂಸ್ಕೃತಿಗೆ ಬಹಳ ಪ್ರಾಮುಖ್ಯವಿದೆ. ಇಲ್ಲಿ ತೊಟ್ಟಿಲಿನಿಂದ ಹಿಡಿದು ಚಟ್ಟ ಏರುವವರೆಗೂ ಕಲೆಯ ವಿಸ್ತಾರವಿದೆ. ಪಾಮರರಿಂದ ಪಂಡಿತರವರೆಗೂ ಕಲಾಸ್ವಾದನೆ ನಡೆದೇ ಇರುತ್ತದೆ, ಅಷ್ಟೇ ಏಕೆ, ನಮ್ಮ ಆರಾಧ್ಯ ದೈವಗಳೂ ಕೂಡ ಕಲಾಪ್ರಿಯರು. ಒಂದು ಸಮೃದ್ಧ ಶ್ರೀಮಂತ ಸಂಸ್ಕೃತಿ ಒಂದು ಉತ್ತಮ ನಾಗರಿಕತೆಯ ತಳಹದಿ. ಇಂತಹ ಸಂಸ್ಕೃತಿ ಹಲವು ಕಲಾ ಪ್ರಕಾರಗಳಲ್ಲಿ ಸಾಗರದಷ್ಟು ಆಳವಾಗಿ, ಪರ್ವತದಷ್ಟು ಎತ್ತರವಾಗಿ ಹರಡಿಕೊಂಡಿದೆ. ಪ್ರಕೃತಿಯ ಶಿಶುವಾದ ಮಾನವ ತರು, ಲತೆ, ಪ್ರಾಣಿ–ಪಕ್ಷಿಗಳಿಂದ ಸಂಗೀತದ ಸಪ್ತಸ್ವರಗಳನ್ನು ಎತ್ತಿಕೊಂಡಿದ್ದಾನೆ, ನೃತ್ಯ, ಚಿತ್ರಕಲೆ, ಶಿಲ್ಪಕಲೆಗಳಿಗೆ ನಿಸರ್ಗದಿಂದ ಸ್ಫೂರ್ತಿಪಡೆದಿದ್ದಾನೆ. ಒಂದರ್ಥದಲ್ಲಿ ಕಲಾರಾಧನೆ ಎಂದರೆ ಪ್ರಕೃತಿಯ ಅಥವಾ ದೈವ–ದೇವರ ಆರಾಧನೆ. ಕಲೆಯ ಮೂಲಕ ಆತ್ಮಸಾಕ್ಷಾತ್ಕಾರ ಪಡೆಯಲು ನಮ್ಮಲ್ಲಿ ಅನೇಕ ಸಾಧಕರು ಕಲೆಯನ್ನು ತಪಸ್ಸನ್ನಾಗಿ ಆಚರಿಸಿ ಸಾಧನೆಗೈದಿದ್ದಾರೆ.

ನಮ್ಮ ಜನಪದರು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ನೂರಾರು ಜನಪದಕಲಾ ಪ್ರಕಾರಗಳನ್ನು ಆವಿಷ್ಕರಿಸಿ ಶತಮಾನಗಳ ಕಾಲದಿಂದ ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸಿದ್ದಾರೆ.

ಸಂಗೀತ, ಸಾಹಿತ್ಯ, ಚಿತ್ರಕಲೆ, ದೇಶಿಸಂಗೀತ, ರಂಗಭೂಮಿ ಹೀಗೆ ಬಹಳ ಮಹತ್ವದ ಕಲಾ ಪ್ರಕಾರಗಳಿವೆ. ಇವೆಲ್ಲ ಪ್ರಕಾರಗಳಿಗೆ ಧಾರವಾಡ ನೆಲದ ಕೊಡುಗೆ ಅನನ್ಯ ಹಾಗೂ ಅವಿಸ್ಮರಣೀಯ. ಧಾರವಾಡದ ಸಾಂಸ್ಕೃತಿಕ ಸಾಧನೆ ಮುಂಬರುವ ಹಲವು ತಲೆಮಾರಿಗೆ ಮಾರ್ಗದರ್ಶಕವಾಗಬಲ್ಲಷ್ಟು ಬಲಿಷ್ಠವಾಗಿದೆ. ಧಾರವಾಡ ನೆಲದ ಅಣುರೇಣುತೃಣಕಾಷ್ಠಗಳಲ್ಲಿ ಕಲಾ ಪ್ರಕಾರಗಳು ತುಂಬಿತುಳುಕುತ್ತಿವೆ. ಧಾರವಾಡ ಮಣ್ಣಿನ ಫಲವತ್ತತೆ ಹುಲಸಾದ ಬೆಳೆಯನ್ನು ನೀಡುತ್ತಲೇ ಮುನ್ನಡೆದಿದೆ. ಇದು ಸಾಧಕರು

ನಡೆದಾಡಿದ ಪುಣ್ಯ ಭೂಮಿ. ಹಾಗೆಂದೆ ಚೆಂಬೆಳಕಿನ ಕವಿ ಚನ್ನವೀರ ಕಣವಿಯವರು "ಧಾರವಾಡದ ನೆಲದ ಗುಣವೇನು ಋಣವೇನು ಕವಿಗಾಳಿ ಸವಿಗಾಳಿ ತೀಡುತಿಹುದು" ಎಂದು ಹಾಡಿದ್ದಾರೆ. ಧಾರವಾಡವೆಂದರೆ ಅದು ಸಾಂಸ್ಕೃತಿಕ ವಿಶ್ವವಿದ್ಯಾಲಯ.

ಹಿಂದುಸ್ತಾನಿ ಸಂಗೀತದ 'Line of control' (Loc) ಅಂದರೆ ಹಿಂದುಸ್ತಾನಿ ಸಂಗೀತದ ಭದ್ರ ಸುಭದ್ರ ಗಡಿರೇಖೆ ಎನ್ನಬಹುದಾದ ಧಾರವಾಡ ಸಂಗೀತ ಭೂಪಟದಲ್ಲಿ ಮೌಲಿಕ ಹಾಗೂ ಮಹತ್ವದ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ಇದು ಇತರ ಕಲಾ ಪ್ರಕಾರಗಳಿಗೂ ಸಮರ್ಥವಾಗಿ ಅನ್ವಯಿಸುತ್ತದೆ. ತಮ್ಮ ತಮ್ಮ ಕಲಾ ಪ್ರಕಾರಗಳಲ್ಲಿ ಇಡೀ ಜೀವಮಾನವನ್ನೇ ತೊಡಗಿಸಿಕೊಂಡು, ಯಾವ ಫಲಾಪೇಕ್ಷೆಯಿಲ್ಲದೆ ಅಹರ್ನಿಶಿ ಶ್ರಮಿಸಿದ ಈ ಮಹನೀಯರು ಪ್ರಾತಃಸ್ಮರಣೀಯರು ಎನಿಸಿದ್ದಾರೆ. ಅಂಥ ಸಾಧಕರ ಜೀವನ ಮುಂಬರುವ ಪೀಳಿಗೆಗೆ ದಾರಿದೀಪವಾಗಲಿ ಎಂಬ ಕಕ್ಕುಲಾತಿ ತುಂಬಿದ ಉದ್ದೇಶ ಈ ಗ್ರಂಥದ ಅಡಿಪಾಯ. ಪುಸ್ತಕದ ಪುಟಗಳಲ್ಲಿ ತೆರೆದುಕೊಳ್ಳುವ ಈ ಕಲಾ ಸಾಧಕರು ಭೂಮಿತೂಕದವರು. ಕಡುಬಡತನದ ಪಾಡನ್ನು ತಮಗಿರಿಸಿಕೊಂಡು ಅದರ ಹಾಡನ್ನಷ್ಟೇ ನಮಗೆ ನೀಡಿ, ತಮ್ಮೆದೆಯ ಕಲ್ಲುಸಕ್ಕರೆ ಅಮೃತದ ಸವಿಯನ್ನು ನೀಡಿದವರು. ಪರಮಗುರು ಪಂ.ನೀಲಕಂಠಬುವಾ ಮಿರಜಕರ, ಸವಾಯಿ ಗಂಧರ್ವರು, ಪಂ. ಪಂಚಾಕ್ಷರಿ ಗವಾಯಿಗಳಿಂದ ಹಿಡಿದು ಇಂದಿನ ತಲೆಮಾರಿನ ಶ್ರೇಷ್ಠ ಗಾಯಕರವರೆಗೆ, ಸಿತಾರರತ್ನ ರಹಮತ್‌ಖಾನ್‌ರಿಂದ ಮೊದಲ್ಗೊಂಡು ಪಂ.ಬಿ.ಡಿ. ಪಾಠಕರವರೆಗೆ ಹಿಂದುಸ್ತಾನಿ ಸಂಗೀತದ ಮೇರು ಕಲಾವಿದರ ದರ್ಶನ ನಮಗೆ ಇಲ್ಲಿ ಲಭ್ಯ.

ಕನ್ನಡ ವೃತ್ತಿರಂಗಭೂಮಿಯ ಅಧ್ವರ್ಯು, ನಿಜಾರ್ಥದಲ್ಲಿ ರಂಗಭೂಮಿಯ ಮಾಸ್ತರರೆಂದೇ ಆರಾಧಿಸಲ್ಪಡುವ ಸವಣೂರು ವಾಮನರಾಯರಿಂದ ಆರಂಭಿಸಿ ಕಳೆದ ೬ ದಶಕಗಳಿಂದ ನಿರಂತರವಾಗಿ ರಂಗಕ್ರಿಯೆಯಲ್ಲಿ ತೊಡಗಿಕೊಂಡಿರುವ ಶ್ರೀ ಗಜಾನನ ಮಹಾಲೆಯವರವರೆಗೆ ಈ ಗ್ರಂಥದ ರಂಗಯಾತ್ರೆ ನಡೆಯುತ್ತದೆ.

ಜನಪದ ಸಂಗೀತದ ಮಹಾ ಸಾಧಕರಾದ ಶ್ರೀಮತಿ ಫಕ್ಕಿರವ್ವ ಗುಡಿಸಾಗರ, ಸಾವಿರ ಹಾಡಿನ ಸರದಾರ ಶ್ರೀ ಹುಕ್ಕೇರಿ ಬಾಳಪ್ಪನವರು, ಕುಂಚ ಬ್ರಹ್ಮರಾದ ಶ್ರೀ ಡಿ.ವ್ಹಿ. ಹಾಲಭಾವಿ ಹಾಗೂ ಶ್ರೀ ಎಂ.ಎ. ಚೆಟ್ಟಿ ಅವರು ನೀಡಿದ ಕಾಣ್ಕೆಯ ಲೇಖನಗಳು ಈ ಅಪರೂಪದ ಹಾಗೂ ಅಷ್ಟೇ ಮಹತ್ವದ ಗ್ರಂಥದ ಕ್ಷಿತಿಜವನ್ನು ವಿಸ್ತರಿಸಿ ಆಪ್ಯಾಯಮಾನಗೊಳಿಸಿವೆ.

ಇಂಥ ಗ್ರಂಥವನ್ನು ಕರ್ನಾಟಕ ಶಕ್ತಿಕೇಂದ್ರ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಸಾರಸ್ವತ ಲೋಕಕ್ಕೆ ಅರ್ಪಿಸುತ್ತಿದೆ. ಶತಮಾನೋತ್ತರ ರಜತಮಹೋತ್ಸವದತ್ತ ಮುನ್ನೆಡೆದಿರುವ ಕನ್ನಡಿಗರ ಹೆಮ್ಮೆಯ ಪ್ರಾತಿನಿಧಿಕ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘ ಈ ಗ್ರಂಥದ ಸಂಪಾದಕತ್ವದ ಸುವರ್ಣ ಅವಕಾಶ ನೀಡಿರುವದಕ್ಕೆ ನಾನು ಚಿರಋಣಿ. ವಿವಿಧ ಕ್ಷೇತ್ರದ ಮಹನೀಯರನ್ನು ಕುರಿತು ಅತ್ಯಂತ ಶ್ರದ್ಧೆ ಹಾಗೂ ಸಮರ್ಪಣಭಾವದಿಂದ ಲೇಖನಗಳನ್ನು ಒದಗಿಸಿದ ಎಲ್ಲ ಲೇಖಕರಿಗೂ ನಾನು ಕೃತಜ್ಞ. ಆಯಾ ಕ್ಷೇತ್ರದಲ್ಲಿ ಸಾಧನೆಯಲ್ಲಿ ತೊಡಗಿರುವವರೇ ಈ ಲೇಖನಗಳನ್ನು ಬರೆದಿರುವುದು ಗ್ರಂಥದ ಇನ್ನೊಂದು ವಿಶೇಷ.

*ಸಾಂಸ್ಕೃತಿಕ ಧೃವ ತಾರೆಗಳು* ☆

☆ ☆

ಬರೀ ಬಾಯಿಮಾತುಗಾರನಾಗಿದ್ದ ನನ್ನ ಕೈಯಲ್ಲಿ ಲೇಖನಿ ಬರುವಂತೆ ಪ್ರೀತಿಯಿಂದ ಒತ್ತಾಯಿಸಿದ ಆತ್ಮೀಯ ಹಿರಿಯ ಮಿತ್ರ, ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರ ಹಲಗತ್ತಿಯವರನ್ನು ಸ್ಮರಿಸದೇ ಇರಲಾರೆ. ನನ್ನ ಕಾರ್ಯಕ್ಕೂ ಮುನ್ನ ಲೇಖಕರನ್ನು ಸಂಪರ್ಕಿಸಿದ ಶ್ರೀ ಪ್ರಕಾಶ ಮುಳಗುಂದ, ಶ್ರೀ ಎನ್.ಎಸ್. ಕಾಶಪ್ಪನವರ, ಅತ್ಯಂತ ಆಸ್ಥೆಯಿಂದ ಡಿಟಿಪಿ ಮಾಡಿದ ಶ್ರೀ ಚಿದಾನಂದ ಈ. ಮಾಸನಕಟ್ಟಿಯವರ ಸಹಕಾರವನ್ನು ಮರೆಯಲಾರೆ.

"ಕರ್ನಾಟಕವೆಂದರೆ ಅದು ಮೃತರಾಷ್ಟ್ರವಲ್ಲ, ನಿತ್ಯ ಜಾಗೃತ" ಎಂದು ನಮ್ಮನ್ನು ಹುರಿದುಂಬಿಸಿದ ಆಲೂರು ವೆಂಕಟರಾಯರನ್ನು ನೆನೆವಂತೆ "ಧಾರವಾಡ ದಾರಿ ತೋರಿಸ್ತು" ಎಂಬ ಸಾರ್ವಕಾಲಿಕ ಸತ್ಯವನ್ನು ಅರುಹಿದ ಕನ್ನಡದ ಧೀಶಕ್ತಿ ನನ್ನ ಮಾರ್ಗದರ್ಶಕರು, ಹಿತಚಿಂತಕರು ನಾಡೋಜ ಡಾ. ಪಾಟೀಲ ಪುಟ್ಟಪ್ಪನವರನ್ನು ತುಂಬು ಹೃದಯದಿಂದ ಸ್ಮರಿಸುತ್ತೇನೆ.

–ಅನಿಲ ನಾರಾಯಣರಾವ್ ದೇಸಾಯಿ

ದಿನಾಂಕ: ೨೦-೦೭-೨೦೧೩ ಧಾರವಾಡ

■ ■ ■

# ಪರಿವಿಡಿ

| | ಕಲಾವಿದರು | ಲೇಖಕರು |
|---|---|---|
| 1) | ಪಂ. ನೀಲಕಂಠಬುವಾ ಮಿರಜಕರ (ಆಲೂರಮಠ) | ಶ್ರೀ ಅನಿಲ ದೇಸಾಯಿ |
| 2) | ಪಂ. ಸವಾಯಿ ಗಂಧರ್ವ | ಪ್ರೊ. ಸದಾನಂದ ಕನವಳ್ಳಿ |
| 3) | ಪಂ. ಪಂಚಾಕ್ಷರಿ ಗವಾಯಿಗಳು | ಪಂ. ಎಂ. ವೆಂಕಟೇಶಕುಮಾರ |
| 4) | ಪಂ. ಮಲ್ಲಿಕಾರ್ಜುನ ಮನಸೂರ | ಡಾ. ಮೃತ್ಯುಂಜಯ ಶೆಟ್ಟರ |
| 5) | ಡಾ. ಗಂಗೂಬಾಯಿ ಹಾನಗಲ್ | ಶ್ರೀಮತಿ ದಮಯಂತಿ ನರೇಗಲ್ |
| 6) | ಪಂ. ದೇಶಪಾಂಡೆ ಗುರುರಾಯರು | ಡಾ. ಶಶಿಧರ ನರೇಂದ್ರ |
| 7) | ಪಂ. ಭೀಮಸೇನ ಜೋಶಿ | ಡಾ. ಮಲ್ಲಿಕಾರ್ಜುನ ಎಸ್. ತರ್ಲಗಟ್ಟಿ |
| 8) | ಡಾ. ಬಸವರಾಜ ರಾಜಗುರು | ಡಾ. ಶಾಂತಾರಾಮ ಹೆಗಡೆ |
| 9) | ಪಂ. ಪುಟ್ಟರಾಜ ಗವಾಯಿಗಳು | ಡಾ. ಮೃತ್ಯುಂಜಯ ಶೆಟ್ಟರ |
| 10) | ಪಂ. ಸಿದ್ಧರಾಮ ಜಂಬಲದಿನ್ನಿ | ಶ್ರೀಮತಿ ಜಯದೇವಿ ಜಂಗಮಶೆಟ್ಟಿ |
| 11) | ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ | ಶ್ರೀಮತಿ ಜಿ. ಸುರೇಖಾ ಸುರೇಶ |
| 12) | ಪಂ. ಸಂಗಮೇಶ್ವರ ಗುರವ | ಡಾ. ಮೀರಾ ಶಿವಶಂಕರ ಗುಂಡಿ |
| 13) | ಪಂ. ವೆಂಕಟೇಶ ಬುರ್ಲಿ | ಡಾ. ಹನುಮಂತ ಬುರ್ಲಿ |
| 14) | ಪಂ. ಅರ್ಜುನಸಾ ನಾಕೋಡ | ಶ್ರೀ ಶಂಕರ ಹಲಗತ್ತಿ |
| 15) | ಪಂ. ಚಂದ್ರಶೇಖರ ಪುರಾಣಿಕಮಠ | ಡಾ. ಶಾರದಾ ವ್ಹಿ. ಭಟ್ಟ |
| 16) | ಪಂ. ಹೂಗಾರ ಮಾಸ್ತರ | ಡಾ. ವೀರಣ್ಣ ಹೂಗಾರ |
| 17) | ಪಂ. ಮಾಧವ ಗುಡಿ | ಶ್ರೀ ರವೀಂದ್ರ ಕವತೇಕರ |
| 18) | ಪಂ. ಕೇಶವ ಗುರುಂ | ಶ್ರೀ ದಿವಾಕರ ಹೆಗಡೆ |
| 19) | ಪಂ. ವಸಂತ ಕನಕಾಪುರ | ಶ್ರೀ ರವೀಂದ್ರ ಕವತೇಕರ |
| 20) | ಪಂ. ರಾಜಶೇಖರ ಮನಸೂರ | ಡಾ. ಚಂದ್ರಿಕಾ ಕಾಮತ್ |
| 21) | ಪಂ ಎಂ. ವೆಂಕಟೇಶಕುಮಾರ | ಶ್ರೀ ರವೀಂದ್ರ ಕವತೇಕರ |
| 22) | ಉಸ್ತಾದ್ ರಹಿಮತ್‌ಖಾನ್ | ಶ್ರೀ ರವೀಂದ್ರ ಕವತೇಕರ |
| 23) | ಪಂ. ಜಿ. ಆರ್. ನಿಂಬರಗಿ | ಶ್ರೀ ಅನಿಲ ದೇಸಾಯಿ |
| 24) | ಪಂ. ಬಸವರಾಜ ಬೆಂಡಿಗೇರಿ | ಡಾ. ರವಿಕಿರಣ ನಾಕೋಡ |
| 25) | ಪಂ. ಡಿ. ಆರ್. ಪರ್ವತೀಕರ | ಶ್ರೀ ಸತೀಶ ಬಿ. ಪರ್ವತೀಕರ |
| 26) | ಉಸ್ತಾದ್ ಬಾಲೇಖಾನ್ | ಶ್ರೀ ರಾಘವೇಂದ್ರ ಆಯಿ |
| 27) | ಡಾ. ಬಿ. ಡಿ. ಪಾಠಕ | ಪ್ರೊ. ರಾಮಚಂದ್ರ ವ್ಹಿ. ಹೆಗಡೆ |
| 28) | ಶ್ರೀ ಸವಣೂರು ವಾಮನರಾವ್ ಮಾಸ್ತರ | ಡಾ. ಪ್ರಕಾಶ ಗರುಡ |
| 29) | ಶ್ರೀ ಗರುಡ ಸದಾಶಿವರಾಯರು | ಡಾ. ಪ್ರಕಾಶ ಗರುಡ |

☆ *ಸಾಂಸ್ಕೃತಿಕ ಧ್ರುವ ತಾರೆಗಳು*

☆ ☆

| | |
|---|---|
| 30) ಶ್ರೀ ಕಂದಗಲ್ ಹಣಮಂತರಾಯರು | ಶ್ರೀ ವಿನೋದ ಅಂಬೇಕರ |
| 31) ಶ್ರೀಮತಿ ಜುಬೇದಾಬಾಯಿ ಸವಣೂರ | ಡಾ. ಶಶಿಧರ ನರೇಂದ್ರ |
| 32) ಶ್ರೀ ಬಸವರಾಜ ಮನಸೂರ | ಶ್ರೀ ಮಾರ್ತಾಂಡಪ್ಪ ಕತ್ತಿ |
| 33) ಶ್ರೀ ನಲವಡಿ ಶ್ರೀಕಂಠಶಾಸ್ತ್ರಿಗಳು | ಡಾ. ಮೃತ್ಯುಂಜಯ ಹೊರಕೇರಿ |
| 34) ಡಾ. ಏಣಗಿ ಬಾಳಪ್ಪ | ಶ್ರೀ ರವಿ ಕುಲಕರ್ಣಿ |
| 35) ಡಾ. ರಾಜಕುಮಾರ | ಡಾ. ಶಶಿಧರ ನರೇಂದ್ರ |
| 36) ಶ್ರೀ ಗಜಾನನ ಮಹಾಲೆ | ಶ್ರೀ ಸಂತೋಷ ಮಹಾಲೆ |
| 37) ಶ್ರೀ ಹುಕ್ಕೇರಿ ಬಾಳಪ್ಪ | ಡಾ. ಬಾಳಣ್ಣ ಶೀಗಿಹಳ್ಳಿ |
| 38) ಶ್ರೀಮತಿ ಫಕೀರವ್ವ ಗುಡಿಸಾಗರ | ಶ್ರೀ ಸಿ. ಎಂ. ಚನ್ನಬಸಪ್ಪ |
| 39) ಶ್ರೀ ಪುತ್ತಿಗೆ ವೆಂಕಟರಮಣ ಉಪಾಧ್ಯಾಯ | ಶ್ರೀ ಆರೂರು ಲಕ್ಷ್ಮಣ ಶೇಟ |
| 40) ಶ್ರೀ ಡಿ. ವ್ಹಿ. ಹಾಲಭಾವಿ | ಶ್ರೀ ಸುರೇಶ ಡಿ. ಹಾಲಭಾವಿ |
| 41) ಶ್ರೀ ಎಂ. ಎ. ಚೆಟ್ಟಿ | ಶ್ರೀ ಸುರೇಶ ಡಿ. ಹಾಲಭಾವಿ |

# ಅರ್ಪಣೆ

ಸಂಘವನ್ನು ಕಟ್ಟಿ ಬೆಳೆಸಿದ
ಎಲ್ಲ ಚೇತನಗಳಿಗೆ

# ಹಿಂದುಸ್ತಾನಿ ಸಂಗೀತ ಗಾಯಕರು



# ಸಂಗೀತ ಶಿರೋಮಣಿ
# ಪಂ.ನೀಲಕಂಠಬುವಾ ಮಿರಜಕರ (ಆಲೂರಮಠ)
# (೧೮೬೦-೧೯೩೫)

● ಅನಿಲ ನಾರಾಯಣರಾವ್ ದೇಸಾಯಿ

ಸಂಗೀತವೆಂದರೆ ತಪಸ್ಸು. ಅದನ್ನು ತ್ರಿಕರಣಶುದ್ಧವಾಗಿ ಸಾಧಿಸಿದಾಗ, ಸಮರ್ಥ ಗುರುವಿನ ಕೃಪಾಶೀರ್ವಾದ ಲಭಿಸಿದಾಗ ಸಂಗೀತದಲ್ಲಿ ಸಾಧನೆ ಸಾಧ್ಯ ಎಂದು ನಂಬಿ ತಪಗೈದು, ಉನ್ನತ ಸ್ಥಾನಕ್ಕೇರಿದವರು ಪಂ. ನೀಲಕಂಠಬುವಾ ಆಲೂರಮಠ ಅಥವಾ ಪಂ. ನೀಲಕಂಠಬುವಾ ಮಿರಜಕರ.

ಗ್ವಾಲಿಯರ್ ಘರಾಣೆಯ ದಿಗ್ಗಜರಾಗಿದ್ದ ಶ್ರೇಷ್ಠ ಸಂಗೀತ ವಿದ್ವಾಂಸ ನೀಲಕಂಠಬುವಾ ಅವರು ಹಿಂದುಸ್ತಾನಿ ಸಂಗೀತ ಕ್ಷೇತ್ರಕ್ಕೆ ನೀಡಿದ ಮಹತ್ವದ ಕಾಣಿಕೆ ಎಂದರೆ, ಅವರ ಶಿಷ್ಯರಾದ ಗಾನಯೋಗಿ ಶಿವಯೋಗಿ ಪಂ. ಪಂಚಾಕ್ಷರಿ ಗವಾಯಿಗಳವರು ಹಾಗೂ ಸ್ವರಸಾಮ್ರಾಟ್ ಸಂಗೀತಸಂತ ಪಂ. ಮಲ್ಲಿಕಾರ್ಜುನ ಮನಸೂರ ಅವರು. ಶಾಸ್ತ್ರೀಯ ಸಂಗೀತದಲ್ಲಿ ಸಾಧನಾ ಮಾರ್ಗವೆಂದರೆ ಅದು ಸುಲಭ ಮಾರ್ಗವಲ್ಲ. ಸಂಗೀತ ಬಯಸಿದವರಿಗೆಲ್ಲ ದಕ್ಕುವುದೂ ಅಲ್ಲ. ಸಂಗೀತ ಸ್ವರಮಾಧುರ್ಯವನ್ನು ಆಸ್ವಾದಿಸಬಯಸುವವ ಅದಕ್ಕಾಗಿ ತನ್ನನ್ನೇ ಸಮರ್ಪಿಸಿಕೊಳ್ಳಬೇಕಾಗುತ್ತದೆ. ಸಂಗೀತಪಥಿಕನಾದವನು ಎದುರಾಗುವ ಅನೇಕ ಸಂಕಷ್ಟಗಳಲ್ಲಿ ಸುಟ್ಟುಕೊಂಡು ಅಪ್ಪಟ ಚಿನ್ನವಾಗಬೇಕಾಗುತ್ತದೆ. ನೀಲಕಂಠಬುವಾ ಅಂತಹ ಒಬ್ಬ ಸಂಗೀತದ ಅಪರಂಜಿ.

ನೀಲಕಂಠಬುವಾ ಮಿರಜಕರ ಅವರ ಮೂಲ ಅಡ್ಡ ಹೆಸರು ಆಲೂರಮಠ. ಏಕೆಂದರೆ ಅವರ ಪೂರ್ವಜರು ಮೂಲತಃ ಇಂದಿನ ಬಾಗಲಕೋಟೆ ಜಿಲ್ಲೆಯ ಹೊಳೆಆಲೂರಿನ ಹಿರೇಮಠ ಮನೆತನದವರು. ೧೯ನೆಯ ಶತಮಾನದಲ್ಲಿ ಕಾರಣಾಂತರಗಳಿಂದ ಅವರು ಮಿರಜಗೆ ಬಂದು ನೆಲೆ ನಿಂತರು. ಶ್ರೀ ದಾನಯ್ಯ ಹಾಗೂ ಶ್ರೀಮತಿ ಮಹಾಲಿಂಗಮ್ಮನವರ ಉದರದಲ್ಲಿ ೧೮೬೦ ರಲ್ಲಿ ದ್ವಿತೀಯ ಸುಪುತ್ರನಾಗಿ ಶ್ರೀ ನೀಲಕಂಠಬುವಾ ಜನಿಸಿದರು. ಶಂಭಯ್ಯ ಇವರ ಹಿರಿಯ ಸಹೋದರ. ಆದರೆ ಕ್ರೂರವಿಧಿ ತನ್ನ ಆಟವನ್ನು ಆರಂಭಿಸಿತ್ತು. ನೀಲಕಂಠ ಬುವಾ ಚಿಕ್ಕವರಿದ್ದಾಗಲೇ ಅವರ ತಂದೆ ತಾಯಿಗಳು ಶಿವನಪಾದ ಸೇರಿದರು. ಹೀಗಾಗಿ ಹಿರಿಯಣ್ಣ ಶಂಭಯ್ಯನವರು ನೀಲಕಂಠನನ್ನು ಪ್ರೀತಿಯಿಂದ ಬೆಳೆಸಿದರು. ಮಿರಜದ ಲಿಂಗಾಯತಮನೆಗಳಲ್ಲಿ ಜಂಗಮವೃತ್ತಿ ಮಾಡಿ ಜೀವನ ನಡೆಸುತ್ತಿದ್ದರು. ಅದರಿಂದ ಜೀವನನಿರ್ವಹಣೆ ಕಠಿಣವಾದಾಗ ಹೊಲಿಗೆ ಕಲಿತು ಜನರ ಬಟ್ಟೆ ಹೊಲೆದು ಜೀವನ ನಿರ್ವಹಿಸಿ ಹಣ ಸಂಪಾದಿಸಿ ಅಲ್ಪ ಜಮೀನನ್ನು ಖರೀದಿಸಿದರು.

ನೀಲಕಂಠ ಉತ್ತಮವಾಗಿ ಓದಿ ನೌಕರಿ ಪಡೆಯಲಿ ಎಂಬುದು ಅಣ್ಣ ಶಂಭಯ್ಯನ ಹಂಬಲವಾಗಿತ್ತು. ಆದರೆ ನೀಲಕಂಠನಿಗೆ ಸಂಗೀತದ ಗೀಳು ಬಾಲ್ಯದಿಂದಲೇ ಅಂಟಿಕೊಂಡಿತ್ತು. ಒತ್ತಾಯದಿಂದ ಶಾಲೆಗೆ ಕಳಿಸಲ್ಪಟ್ಟ ನೀಲಕಂಠಯ್ಯ ದಾರಿಯಲ್ಲಿ ಶಾಸ್ತ್ರೀಯ ಸಂಗೀತ ಕಿವಿಗೆ ಬಿದ್ದರೆ ಅಲ್ಲಿಯೇ ನಿಂತುಬಿಡುತ್ತಿದ್ದ. ಮನೆಯಲ್ಲಿ ಹೇಳದೆ ಕೇಳದೇ ಸಂಗೀತ ಕಾರ್ಯಕ್ರಮಗಳಿಗೆ ಹೋಗಿ ಅದರಲ್ಲಿ ಮೈಮರೆತು ಬಿಡುತ್ತಿದ್ದ.

ಇಚಲಕರಂಜಿ ಸಂಸ್ಥಾನದಿಂದ ಮಿರಜಗೆ ಬಂದು ನೆಲೆನಿಂತಿದ್ದ ಆ ಕಾಲದ ಹೆಸರಾಂತ ಗಾಯಕ ಪಂ. ಬಾಳಕೃಷ್ಣಬುವಾ ಮಿರಜದಲ್ಲಿ ಗುರುಕುಲ ಮಾದರಿಯ ಸಂಗೀತಶಾಲೆ ನಡೆಸುತ್ತಿದ್ದರು. ದಿನ ರಾತ್ರಿ ನಡೆಯುತ್ತಿದ್ದ ಗಾಯನವನ್ನು ಕೇಳುತ್ತ ನೀಲಕಂಠ ಹೊರಗೆ ಊಟ, ನಿದ್ದೆ ಇಲ್ಲದೆ ಕುಳಿತು ಬಿಡುತ್ತಿದ್ದ. ಇದನ್ನು ಗಮನಿಸಿದ ಪಂ. ಬಾಳಕೃಷ್ಣಬುವಾ ಶಂಭಯ್ಯನ ಮನವೊಲಿಸಿ ನೀಲಕಂಠಯ್ಯನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಇದು ನೀಲಕಂಠಬುವಾರ ಜೀವನದಲ್ಲಿ ಮಹತ್ವದ ತಿರುವು.

ಹಿಂದುಸ್ತಾನಿ ಸಂಗೀತ ಕ್ಷೇತ್ರದ ಮಹತ್ವದ ಘರಾಣೆಗಳಲ್ಲಿ ಒಂದಾಗಿರುವ ಗ್ವಾಲಿಯರ್ ಘರಾಣೆ ಸಂಗೀತ ಕ್ಷೇತ್ರಕ್ಕೆ ಅನನ್ಯ ಕಲಾವಿದರನ್ನು ನೀಡಿದೆ, ನೀಡುತ್ತಿದೆ. ತಮ್ಮ ಅಮೂಲ್ಯವಾದ ಸಂಗೀತ ಸಾಧನೆಯಿಂದ ಗ್ವಾಲಿಯರ್ ಘರಾಣೆಗೆ ವಿಶೇಷ ಮೆರಗನ್ನು ತಂದಿತ್ತ ಹಿರಿಯ ಗಾಯಕರಾದ ಉಸ್ತಾದ್ ರಹಮತ್‌ಖಾನರು "ಭೂಗಂಧರ್ವ" ರೆಂದೇ ಪ್ರಸಿದ್ಧರು. ತಮ್ಮ ಕಂಠಮಾಧುರ್ಯ ಸ್ವರಸಾಧನೆಗಳಿಂದ ಉಸ್ತಾದ್ ರಹಮತ್‌ಖಾನರ ವಿಶೇಷ ಕೃಪೆಗೆ ಪಾತ್ರರಾದ ಬಾಳಕೃಷ್ಣ ಬುವಾ ಸತತ ೧೫ ವರ್ಷಗಳ ಕಾಲ ಸಂಗೀತಶಿಕ್ಷಣ ಪಡೆದು ಗ್ವಾಲಿಯರ್ ಪರಂಪರೆಯನ್ನು ಮುಂದುವರೆಸಿದರು. ಅಂತಹ ಪಂಡಿತ ಬಾಳಕೃಷ್ಣಬುವಾ, ನೀಲಕಂಠಯ್ಯನಿಗೆ ಗುರುಗಳಾಗಿ ದೊರೆತದ್ದು ಭಾಗ್ಯ ವಿಶೇಷ.

ಪಂ. ಬಾಳಕೃಷ್ಣಬುವಾ ಅವರ ಪ್ರೀತಿ ತುಂಬಿದ ಮಾರ್ಗದರ್ಶನದಲ್ಲಿ ೨೦ ವರ್ಷಗಳ ಕಾಲ ಅಹೋರಾತ್ರಿ ಸಂಗೀತ ಸಾಧನೆ ಮಾಡಿದ ನೀಲಕಂಠಬುವಾ ಅವರು ಗ್ವಾಲಿಯರ್ ಗಾಯನಶೈಲಿಯ ಆಳವಾದ ಅಧ್ಯಯನ ಮಾಡಿ ಶ್ರೇಷ್ಠ ಗಾಯಕರಾಗಿ ಹೊರಹೊಮ್ಮಿದರು. ನಾದದ ಅಲೆ ಹುಡುಕಿ ಹೊರಟ ನೀಲಕಂಠಬುವಾ ಅವರಿಗೆ ಸಂಗೀತದ ಸಾಧನೆಯ ಮೂಲಕ ತಮ್ಮ ಜೀವನದ ನಿಶ್ಚಿತ ನೆಲೆ ದೊರೆತಿತ್ತು. ನಿರಂತರ ಸಂಗೀತ ಸಾಧನೆಯಿಂದಾಗಿ ನೀಲಕಂಠಬುವಾರ ಸಂಗೀತಭಂಡಾರ ಶ್ರೀಮಂತವಾಗಿದ್ದರೂ ಹಣ ಭಂಡಾರದ ಸ್ಥಿತಿ ಅಷ್ಟಕ್ಕಷ್ಟೆ. ಅವರಿಗೆ ಮಿರಜದಲ್ಲಿ ಆರ್ಥಿಕ ತೊಂದರೆಗಳು ಬಾಧಿಸತೊಡಗಿದವು.

೧೯೨೦ ರ ಸುಮಾರಿಗೆ ಹಾನಗಲ್ಲದ ಕುಮಾರಸ್ವಾಮಿಗಳು ಬದಾಮಿ ಹತ್ತಿರ ಶಿವಯೋಗ ಮಂದಿರದಲ್ಲಿ ಗುರುಕುಲಮಾದರಿಯ ಸಂಗೀತ ಪಾಠಶಾಲೆ ನಡೆಸುತ್ತಿದ್ದರು. ಅಲ್ಲಿಗೆ ಮಿರಜದಿಂದ ನೀಲಕಂಠಬುವಾ ಅವರನ್ನು ಕರೆಸಿಕೊಳ್ಳಲಾಯಿತು. ಹಾವೇರಿಯ ಶ್ರೀ ಶಿವಬಸವ ಮಹಾಸ್ವಾಮಿಗಳ ಪ್ರೀತಿ, ಗೌರವ ತುಂಬಿದ ಸ್ನೇಹಪರತೆ, ಶ್ರೀ ಹಾನಗಲ್ ಕುಮಾರ ಮಹಾಸ್ವಾಮಿಗಳ ಆಶೀರ್ವಾದ, ಶಿವಯೋಗ ಮಂದಿರದ ನಿಸರ್ಗ ಸೌಂದರ್ಯದ ಆಹ್ಲಾದಕರ ವಾತಾವರಣ ನೀಲಕಂಠಬುವಾರಲ್ಲಿ ವಿನೂತನ ಶಕ್ತಿ ತುಂಬಿದವು. ಶಿವಯೋಗ ಮಂದಿರದಲ್ಲಿಯೇ ಶ್ರೀ ಪಂಚಾಕ್ಷರಿ ಗವಾಯಿಗಳು

ನೀಲಕಂಠಬುವಾ ಅವರಿಗೆ ಶಿಷ್ಯರಾಗಿ ದೊರೆತದ್ದು ಈ ನಾಡಿನ ಮಹಾಭಾಗ್ಯ. ಪಂಚಾಕ್ಷರಿಬುವಾ ಅವರ ಸಂಗೀತಶ್ರದ್ಧೆಯಿಂದ ಆನಂದಗೊಂಡ ನೀಲಕಂಠಬುವಾ ಗ್ವಾಲಿಯರ್ ಘರಾಣೆಯ ನೂರಾರು ಚೀಜ್‌ಗಳನ್ನು, ಅನೇಕ ರಾಗಗಳನ್ನು ಪಂಚಾಕ್ಷರಿಬುವಾ ಅವರಿಗೆ ಧಾರೆಯೆರೆದು ಅವರಿಗೆ ಹಿಂದುಸ್ತಾನಿ ಸಂಗೀತದ ದೀಕ್ಷೆ ನೀಡಿದರು. ಅವರಂತೆಯೇ ಅನೇಕ ಶಿಷ್ಯರನ್ನು ತಯಾರಿಸಿದರು.

ಪಂಚಾಕ್ಷರಿ ಗವಾಯಿಗಳಿಗೆ ಸಂಗೀತ ಶಿಕ್ಷಣವನ್ನು ಒಂದು ಹಂತದವರೆಗೆ ಕಲಿಸಿದ ನಂತರ ಬೇರೆಡೆ ನೆಲೆನಿಂತು ಹಿಂದುಸ್ತಾನಿ ಸಂಗೀತ ಪ್ರಸಾರ ಮಾಡಬೇಕೆಂದು ಪಂ. ನೀಲಕಂಠಬುವಾ ಬಯಸಿದ್ದರು. ಹುಬ್ಬಳ್ಳಿಯ ಮೂರುಸಾವಿರ ಮಠಕ್ಕೆ ಬರಲು ಆಶಿಸಿದ್ದರು. ಆದರೆ ಅದು ಕಾರಣಾಂತರಗಳಿಂದ ಕೈಗೂಡದಿದ್ದಾಗ ಮತ್ತೆ ಮಿರಜಗೆ ಬಂದು ನೆಲೆನಿಂತರು. ಅಲ್ಲಿಯ ಸೋನಾರ ಗಲ್ಲಿಯ ನೀಲಕಂಠಬುವಾ ಅವರ ಸಂಗೀತಶಾಲೆ ಗ್ವಾಲಿಯರ್ ಘರಾಣೆಯ ಸಂಗೀತ ಪರಂಪರೆಯ ತರಬೇತಿ ಕೇಂದ್ರವಾಗಿ ಮಾರ್ಪಟ್ಟಿತು .

ಸುಮಾರು ೧೯೧೦ ರಲ್ಲಿ ನೀಲಕಂಠಬುವಾ ಅವರ ಮದುವೆ ಅಥಣಿಯ ಶಿವವ್ವ ಅವರೊಡನೆ ನೆರವೇರಿತು. ಆದರೆ ಈ ದಾಂಪತ್ಯ ಬಹುಕಾಲ ಉಳಿಯಲಿಲ್ಲ. ೧೯೧೪ ರಲ್ಲಿ ಶ್ರೀಮತಿ ಶಿವವ್ವ ನಿಧನರಾದರು. ನಂತರ ಗುರುಹಿರಿಯರ ಒತ್ತಾಸೆಯಂತೆ ೧೯೧೭ರಲ್ಲಿ ನೀಲಕಂಠಬುವಾ ಎರಡನೆಯ ಮದುವೆಯಾದರು. ಚಿಕ್ಕೋಡಿಯ ಗಂಗಮ್ಮನವರು ಪತ್ನಿಯಾಗಿ ಮನೆ ತುಂಬಿದರು. ಅವರಿಬ್ಬರದು ಅನ್ಯೋನ್ಯ ದಾಂಪತ್ಯ ಪ್ರೀತಿಯ ಮಡದಿ ಗಂಗಮ್ಮ ಮೂರು ಮಕ್ಕಳನ್ನು ಹೆತ್ತರು. ಕೊನೆಯ ಮಗ ಅಕಾಲದಲ್ಲಿ ನಿಧನವಾದ. ಆದರೆ ಇನ್ನಿಬ್ಬರು ಮಕ್ಕಳಾದ ಚಂದ್ರಶೇಖರಯ್ಯ ಹಾಗೂ ಶಂಭುಲಿಂಗಯ್ಯನವರಿಗೆ ಸಂಗೀತ ವಿದ್ಯೆಯು ಹತ್ತಲಿಲ್ಲವೆಂದು ಕಾಣುತ್ತದೆ.

ಶಿವಯೋಗಮಂದಿರದಲ್ಲಿ ಸಂಗೀತ ಶಾಲೆ ನಡೆಸಿ, ಪಂಚಾಕ್ಷರಿ ಗವಾಯಿಗಳಂತಹ ಶ್ರೇಷ್ಠ ಶಿಷ್ಯರನ್ನು ನೀಡಿದ ಪಂ. ನೀಲಕಂಠಬುವಾ ಅವರು ಶಿವಯೋಗಮಂದಿರದಿಂದ ಮಿರಜಗೆ ಬರುವಾಗ ಮಾರ್ಗಮಧ್ಯದಲ್ಲಿ ಬಾಗಲಕೋಟೆಗೆ ಭೇಟಿ ಕೊಟ್ಟರು. ಆಗ ಬಾಗಲಕೋಟೆಯಲ್ಲಿ ಕರ್ನಾಟಕ ವೃತ್ತಿರಂಗಭೂಮಿಯ ದಿಗ್ಗಜ ಶ್ರೀ ಸವಣೂರು ವಾಮನರಾವ್ ಮಾಸ್ತರರ 'ವಿಶ್ವಗುಣಾದರ್ಶ ನಾಟಕ ಕಂಪನಿ' ಕ್ಯಾಂಪ್ ಮಾಡಿತ್ತು. ಅಲ್ಲಿ ನೀಲಕಂಠಬುವಾರ ಶಿಷ್ಯ ಪಾಂಡೋಬಾ ಹಾರ್ಮೋನಿಯಂ ಮಾಸ್ತರಾಗಿದ್ದರು. ಅದೇ ಕಂಪನಿಯಲ್ಲಿ ಬಸವರಾಜ ಮನಸೂರ ಹಾಗೂ ಮಲ್ಲಿಕಾರ್ಜುನ ಮನಸೂರ ಅವರು ಪಾರ್ಟ್ ಮಾಡುತ್ತಿದ್ದರು. ಪಾಂಡೋಬಾ ಮಾಸ್ತರರು ಮಲ್ಲೇಶಿ (ಮಲ್ಲಿಕಾರ್ಜುನ ಮನಸೂರ) ಯ ಹಾಡನ್ನು ನೀಲಕಂಠಬುವಾ ಅವರಿಗೆ ಕೇಳಿಸಿದಾಗ ಸಖೇದ ಆನಂದ ಆಶ್ಚರ್ಯಭರಿತರಾದ ನೀಲಕಂಠಬುವಾ ಮಲ್ಲೇಶಿಯ ಸಂಗೀತಸಾಮರ್ಥ್ಯವನ್ನು ಅರಿತು ವಾಮನರಾಯರ ಹಾಗೂ ಬಸವರಾಜ ಮನಸೂರರ ಮನವೊಲಿಸಿ ಮಲ್ಲಿಕಾರ್ಜುನ ಮನಸೂರರನ್ನು ತಮ್ಮೊಂದಿಗೆ ಮಿರಜಗೆ ಕರೆದುಕೊಂಡು ಬಂದರು.

ಸತತ ೬ ವರ್ಷಗಳ ಕಾಲ ಮಲ್ಲಿಕಾರ್ಜುನ ಮನಸೂರವರನ್ನು ತಮ್ಮ ಮಗನೆಂದೇ ತಿಳಿದು ಪ್ರೀತಿಸಿ, ಪೋಷಿಸಿ, ಹಗಲಿರುಳೆನ್ನದೇ ತಮ್ಮ ಸಂಗೀತದ ಸರ್ವಸ್ವವನ್ನೂ

ಮನಸೂರರಿಗೆ ಧಾರೆಯೆರೆದರು. ಅದೇ ರೀತಿಯಾಗಿ ತಮ್ಮ ಜೀವನವನ್ನೇ ಪಣಕ್ಕೊಡ್ಡಿ ಮಲ್ಲಿಕಾರ್ಜುನ ಮನಸೂರರು ತಪಗೈದು ಸಂಗೀತವನ್ನು ಕಲಿತರು. ಅದರ ಫಲವೆಂದರೆ ಇಂದು ಪಂಡಿತ ಮಲ್ಲಿಕಾರ್ಜುನ ಮನಸೂರರು ಹಿಂದುಸ್ಥಾನಿ ಸಂಗೀತದ ಶ್ರೇಷ್ಠ ಗಾಯಕರಾಗಿ ಪಂಡಿತ ನೀಲಕಂಠಬುವಾ ಅವರ ಹೆಸರನ್ನು ಅಜರಾಮರವಾಗಿಸಿದ್ದಾರೆ.

ಜೈಪುರ ಅತ್ರೌಲಿ ಘರಾಣೆಯ ಅದ್ವಿತೀಯ ಗಾಯಕರೆಂದೇ ಡಾ. ಮಲ್ಲಿಕಾರ್ಜುನ ಮನಸೂರ ಪ್ರಸಿದ್ಧರಾದರೂ ಅವರಿಗೆ ಗ್ವಾಲಿಯರ್ ಘರಾಣೆಯ ಭದ್ರ ಅಡಿಪಾಯವನ್ನು ಪಂ. ನೀಲಕಂಠಬುವಾ ಹಾಕಿದ್ದರು. ನೀಲಕಂಠಬುವಾ ಅವರು ಸಂಗೀತ ಕಲಿಸುವ ರೀತಿಯನ್ನು ಪಂ. ಮಲ್ಲಿಕಾರ್ಜುನ ಮನಸೂರ ವರ್ಣಿಸಿದ ರೀತಿ ಹೀಗಿದೆ: "ನಮ್ಮ ಗುರುಗಳ ಕೈಯಲ್ಲೇ ಎಲ್ಲ ತಾಳಗಳಿದ್ದವು. ಅವರು ಪಾಠ ಹೇಳುವಾಗ ತಬಲಾ ಬಾರಿಸುತ್ತಲೇ ಆಯಾ ರಾಗದ ವೈಶಿಷ್ಟ್ಯಗಳನ್ನು ಲಯಕಾರಿ ಮಾಡಿ ಹಾಡಿ ತೋರಿಸಿ ಕಲಿಸುತ್ತಿದ್ದರು. ಅವರ ಧ್ವನಿ ಬಹಳ ಸುರೇಲ, ತಾರಸಪ್ತಕದ ನಿಷಾದದವರೆಗೂ ಸಹಜವಾಗಿ ಹೋಗುತ್ತಿತ್ತು. ಗುರುಗಳಿಗೆ ಅಂದಾಜು ೨೦೦೦ ಚೀಜ್‌ಗಳ ಹಾಡುಗಾರಿಕೆಯ ಸಂಗ್ರಹವಿತ್ತು. ನಮ್ಮ ಗುರುಗಳು ಸ್ವರ ಹಚ್ಚಿ ಹಾಡಲು ಆರಂಭಿಸಿದರೆ ಸ್ವರಗಳ ಜೀವನಾಡಿಯೇ ಮಿಡಿಯುತ್ತಿರುವಂತೆ ಭಾಸವಾಗುತ್ತಿತ್ತು. ನನಗೆ ಸ್ವರಗಳ ಹುಚ್ಚು ಹಿಡಿಸಿದವರೇ ನಮ್ಮ ಗುರುಗಳು".

ಪಂ. ನೀಲಕಂಠಬುವಾ ಮಿರಜಕರವರು ಅನೇಕ ಶಿಷ್ಯರನ್ನು ಸಂಗೀತಲೋಕಕ್ಕೆ ಸಮರ್ಪಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಗಾನಯೋಗಿ, ಶಿವಯೋಗಿ, ಅಂಧರ ಬಾಳಿನ ಬೆಳಕು, ಉಭಯಗಾನವಿಶಾರದ, ಪಂ. ಪಂಚಾಕ್ಷರಿ ಗವಾಯಿಗಳು, ಪದ್ಮವಿಭೂಷಣ, ತಾನ್‌ಸೇನ–ಕಾಳಿದಾಸ–ದೇಶಿಕೋತ್ತಮ ಪ್ರಶಸ್ತಿ ಪುರಸ್ಕೃತರಾದ ಪಂ. ಮಲ್ಲಿಕಾರ್ಜುನ ಮನಸೂರ, ಹೆಸರಾಂತ ಸಂಗೀತಜ್ಞ, ಸಂಗೀತ ವಿಮರ್ಶಕ ಶ್ರೀಪಾದರಾವ್ ಜೋಶಿ, ಗುಣಬುವಾ ಗೊಂದಲಿ, ಯಲ್ಲೂಬಾಯಿ ಮಾನೆ, ಗೋವಾದ ದೇವಿ ನಾಯ್ಕಿಣಿ, ಮಥುರಾಬಾಯಿ ಮುಂತಾದವರು.

೭೫ ವರ್ಷಗಳ ಕಾಲ ಜೀವಿಸಿದ ಪಂ. ನೀಲಕಂಠಬುವಾರವರು ತಮ್ಮ ಸಂಪೂರ್ಣ ಜೀವನವನ್ನು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕಾಗಿಯೇ ಸಮರ್ಪಿಸಿದರು. ಕೊನೆಯವರೆಗೂ ಎಲೆಮರೆಯ ಕಾಯಿಯಂತೆಯೇ ಸಂಗೀತ ಸರಸ್ವತಿಯ ಸೇವೆಗೈದರು. ಪಂ. ನೀಲಕಂಠಬುವಾ ಅವರದು ಪ್ರಸಿದ್ಧಿಯ ಸಂಗೀತವಲ್ಲ, ಅದು ಸಿದ್ಧಿಯ ಸಂಗೀತ. ೧೯೩೫ ರಲ್ಲಿ ಗ್ವಾಲಿಯರ್ ಘರಾಣೆಯ ಮೇರು ಗಾಯಕ, ಸಹೃಯದ ಸಂಗೀತ ಸಾಧಕ ಪಂ. ನೀಲಕಂಠಬುವಾ ಅವರು ಸಂಗೀತ ಸರಸ್ವತಿಯ ಪಾದ ಸೇರಿದರು.

ಸಂಗೀತಭಂಡಾರಿ ನೀಲಕಂಠಬುವಾ ತಮ್ಮ ಸಂಗೀತದ ಉತ್ತರಾಧಿಕಾರಿ ಮಲ್ಲಿಕಾರ್ಜುನ ಮನಸೂರವರ ಮೇಲೆ ಸಂಪೂರ್ಣ ಭರವಸೆಯನ್ನಿರಿಸಿ ನಾದಬ್ರಹ್ಮನಲ್ಲಿ ಲೀನವಾದರು. ಅಂತಹ ಗುರುಗಳ ನಿರೀಕ್ಷೆಯನ್ನು ನಿಜವಾಗಿಸಿ ಸಾಕಾರಗೊಳಿಸಿದ ಸ್ವರಯೋಗಿ ಪಂ.ಮಲ್ಲಿಕಾರ್ಜುನ ಮನಸೂರ ನಿಜಕ್ಕೂ ಧನ್ಯರು. ಇಂತಹ ಗುರು–ಶಿಷ್ಯರನ್ನು ಪಡೆದ ಈ ನಾಡು ಧನ್ಯ.. ಧನ್ಯ.

■ ■ ■

ಸಾಂಸ್ಕೃತಿಕ ಧೃವ ತಾರೆಗಳು



ಸವಾಯಿ ಗಂಧರ್ವ

# ಸವಾಯಿ ಗಂಧರ್ವ

## (೧೮೮೬-೧೯೫೨)

● ಪ್ರೊ. ಸದಾನಂದ ಕನವಳ್ಳಿ

ಕುಂದಗೋಳ ಧಾರವಾಡ ಜಿಲ್ಲೆಯ ಒಂದು ಚಿಕ್ಕ ಊರು. ಹುಬ್ಬಳ್ಳಿಯ ದಕ್ಷಿಣಕ್ಕೆ ೧೯ಕಿ.ಮೀ. ಆದರೆ ಹಿಂದುಸ್ತಾನಿ ಸಂಗೀತಕ್ಷೇತ್ರದಲ್ಲಿ ಅದಕ್ಕೆ ಅಖಿಲ ಭಾರತ ಖ್ಯಾತಿ. ಅದಕ್ಕೆ ಕಾರಣ, ಜನೆವರಿ ೧೯, ೧೮೮೬ರಂದು ಜನಿಸಿದ ರಾಮಚಂದ್ರ. ರಾಮಭಾವು ಕುಂದಗೋಳಕರ್ ಆಗಿ ಬೆಳೆದು ಸವಾಯಿ ಗಂಧರ್ವನಾದುದು, ಈ ಸಾಧನೆಗೆ ನೀರೆರೆದುದು ಕುಂದಗೋಳದ ನಾಡಿಗೇರ ಮನೆತನ.

ರಾಮಚಂದ್ರನ ತಂದೆ ಗಣಪತರಾಯರು ಮೂಲತಃ ಪಕ್ಕದ ಊರಾದ ಸಂಶಿಯವರು. ನಾಡಿಗೇರ ರಂಗನಗೌಡರಲ್ಲಿ ಗುಮಾಸ್ತರು. ಮಗ ಕಲಿತು ದೊಡ್ಡ ಹುದ್ದೆ ಪಡೆಯಬೇಕೆಂಬ ಆಸೆ. ರಾಮಚಂದ್ರನ ಪ್ರಾಥಮಿಕ ಶಿಕ್ಷಣ ಕುಂದಗೋಳದಲ್ಲಿ ಮುಗಿಯಿತು. ಇಂಗ್ಲೀಷ್ ಶಾಲೆಗೆ ಹುಬ್ಬಳ್ಳಿಗೆ ಹೋಗಬೇಕು. ಕೆಲಕಾಲ ಲ್ಯಾಮಿಂಗ್ಟನ್ ಹೈಸ್ಕೂಲಿಗೆ ಅಡ್ಡಾಡಿದ್ದೂ ಆಯಿತು. ಒಂದು ದಿನ ಹುಬ್ಬಳ್ಳಿಯ ರೈಲ್ವೆ ಕ್ಲಬ್‌ನಲ್ಲಿ ಉತ್ತರ ಭಾರತದ ಹದಿವಯದ ಅಬ್ದುಲ್ ಕರೀಮಖಾನರ ಕಛೇರಿ. ರಾಮಚಂದ್ರ ಶಾಲೆಗೆ ಚಕ್ಕರ್ ಹೊಡೆದು ಅಲ್ಲಿಗೆ ಓಡಿದ. ಜನಸಂದಣಿಯಲ್ಲಿ ಎಲ್ಲೋ ದೂರ ನಿಂತು ಆಲಿಸಿದ. ಗಾಯನ ಅವನ ಕಿವಿ, ಮನ ತುಂಬಿತು. ಅವರನ್ನೇ ಗುರುಗಳನ್ನಾಗಿ ಮಾಡಿಕೊಳ್ಳಬೇಕೆಂಬ ಕನಸು ಕಂಡ. ಆಗ ಅದು ಕೈಗೆಟುಕದ ಕನಸು. ಆರ್ಥಿಕ ಅಡಚಣೆಯಿಂದ ಶಾಲಾಶಿಕ್ಷಣ ನಿಂತಿತು.

ದೈವ ಅವನಿಗೆ ಬೇರೆ ಏನನ್ನೊ ಕಾದಿರಿಸಿತ್ತು. ಕೆಲ ಕಾಲಾನಂತರ ಅಬ್ದುಲ್ ಕರೀಮಖಾನರು ಕುಂದಗೋಳದ ನಾಡಿಗೇರರಲ್ಲಿಗೆ ಬಂದರು. ಹಾಗೆ ಬಂದಾಗಲೆಲ್ಲ ತಿಂಗಳಾನುಗಟ್ಟಲೆ ಇರುತ್ತಿದ್ದರು. ಆಗ ಹಲವಾರು ಬೈಠಕಗಳಾಗುತ್ತಿದ್ದವು. ಸುತ್ತಮುತ್ತಣ ರಸಿಕಗಣ ಹಾಜರಾಗುತ್ತಿತ್ತು. ಅಂಥ ಪ್ರಸಂಗಗಳಲ್ಲಿ ರಾಮಚಂದ್ರ ವಾಡೆ ಬಿಟ್ಟು ಕದಲುತ್ತಿರಲಿಲ್ಲ. ಅಬ್ದುಲ್ ಕರೀಮಖಾನರ 'ಜಮುನಾ ಕೆ ತೀರ' ಭೈರವಿ ಚೀಜ್ ಕೇಳಿದ ಮೇಲಂತೂ ತಲೆಯಲ್ಲಿ ಅದೇ ಗುಂಗು. ಅದನ್ನೇ ಗುನುಗುನಿಸುತ್ತ ಕರೀಮಖಾನರ ಸುತ್ತ ಸುಳಿದಾಡುತ್ತಿದ್ದ. "ಕೌನ ಹೈ ಯೆ ಲಡಕಾ, ಗಲಾ ಅಚ್ಛಾ ಹೈ?" ಎಂದು ಕರೀಮಖಾನ ವಿಚಾರಿಸಿದರು. ಇದಕ್ಕಾಗಿಯೇ ಕಾದಿದ್ದ ರಂಗನಗೌಡರು "ಅವನು ನಿಮ್ಮಿಂದ ಗಾಯನ ಕಲಿಯಬಯಸಿದ್ದಾನೆ" ಎಂದು ನಿವೇದಿಸಿದರು. ಅಬ್ದುಲ್ ಕರೀಮಖಾನರು "ಆಗಲಿ" ಎಂದುಬಿಟ್ಟರು.

ಇದಕ್ಕೆ ಮುನ್ನ ಕುಂದಗೋಳದಲ್ಲಿ ವಾಸವಾಗಿದ್ದ ಬಳವಂತರಾವ್ ಕೊಲ್ಹಟಕರರಿಂದ ರಾಮಚಂದ್ರ ೧೮೯೮ರ ವರೆಗೆ ಒಂದೂವರೆ ವರ್ಷದಲ್ಲಿ ಸುಮಾರು ೭೫ ಧ್ರುಪದ, ೧೦೦ ಖ್ಯಾಲ ಚೀಜಗಳನ್ನು, ಕೆಲವು ತಾಳಗಳನ್ನು ಕಲಿತಿದ್ದ. "ಆಗಲಿ' ಎಂದ ಅಬ್ದುಲ್ ಕರೀಮಖಾನರು ರಾಮಚಂದ್ರನನ್ನು "ಬಾ" ಎನ್ನದೆ ಹೊರಟುಹೋದರು. ಪುನಃ ಒಂದು ವರ್ಷದ ನಂತರ ಹುಬ್ಬಳ್ಳಿಗೆ ಬಂದಾಗ ರಾಮಚಂದ್ರ ಭೆಟ್ಟಿಯಾಗಿ ವಿಚಾರಿಸಿದ. "ಯೆ ಬಾತ ಹೈ ತೊ ಚಲೋ ಹಮಾರೆ ಸಾಥ" ಎಂದು ಕರೆದೊಯ್ದರು. ಹಿಂದುಸ್ತಾನಿ ಸಂಗೀತ ಪ್ರಪಂಚದಲ್ಲಿ ಒಂದು ಅದ್ಭುತ ಗುರು-ಶಿಷ್ಯ ಜೋಡಿ ಬೆಸೆಯಿತು.

ಅಬ್ದುಲ್ ಕರೀಮಖಾನರದು ಗುರುಕುಲಪದ್ಧತಿ. ಶಿಷ್ಯ ಗುರುವಿನ ಮನೆಯಲ್ಲಿಯೇ ವಾಸಿಸುತ್ತ ಗುರುಗೃಹದ ಕೆಲಸ ಕಾರ್ಯಗಳ ಸೇವೆ ಮಾಡುತ್ತ ಕಲಿಯುವ ಪದ್ಧತಿ. ಅಬ್ದುಲ್ ಕರೀಮಖಾನರದು ಕಠೋರ ಶಿಸ್ತು. ಅರ್ಧಮರ್ಧ ಕಲಿತು ಶಿಷ್ಯರು ತಮ್ಮ ಹೆಸರು ಕೆಡಿಸುವುದು ಅಬ್ದುಲ್ ಕರೀಮಖಾನರಿಗೆ ಸುತರಾಂ ಇಷ್ಟವಿರಲಿಲ್ಲ. ಅದಕ್ಕಾಗಿ ಎಂಟು ವರ್ಷ ಬಿಟ್ಟು ಹೋಗುವುದಿಲ್ಲ ಎಂಬ ಕರಾರುಪತ್ರವನ್ನು ಶಿಷ್ಯರಿಂದ ಬರೆಯಿಸಿಕೊಳ್ಳುತ್ತಿದ್ದರು. ಶಿಷ್ಯರು ನೀಡಬೇಕಿದ್ದ ಗುರುದಕ್ಷಿಣೆ ಶ್ರದ್ಧೆಯೊಂದೆ. ರಾಮಚಂದ್ರ ೧೯೦೦ ರಿಂದ ೧೯೦೭ರ ವರೆಗೆ ಅಬ್ದುಲ್ ಕರೀಮಖಾನರಲ್ಲಿ ನಿಷ್ಠೆಯಿಂದ ಸಂಗೀತ ವಿದ್ಯಾಭ್ಯಾಸಗೈದ. ಅಚ್ಚುಮೆಚ್ಚಿನ ಶಿಷ್ಯನಾದ.

ಅಬ್ದುಲ್ ಕರೀಮಖಾನರು ಕಲಿಸುವ ಪದ್ಧತಿ ವಿಶಿಷ್ಟವಾಗಿತ್ತು. ಸ್ವರಪ್ರಸ್ತಾರ ಎಂದೂ ಬರೆಸುತ್ತಿದ್ದಿಲ್ಲ. ಪುಸ್ತಕ ನೋಡಿ ಕಲಿಸುತ್ತಿದ್ದಿಲ್ಲ. "ಸಂಗೀತದ ಮೇಲೆ ಎಷ್ಟೊಂದು ಪುಸ್ತಕಗಳಿವೆಯಲ್ಲ! ಅವನ್ನೋದಿ ಎಷ್ಟು ಸಂಗೀತಗಾರರು ತಯಾರಾಗಿದ್ದಾರೆ?" ಎಲ್ಲವನ್ನೂ ತಲೆಯಲ್ಲಿಟ್ಟುಕೊಳ್ಳಿರೆಂದು ಶಿಷ್ಯರಿಗೆ ಉಪದೇಶಿಸುತ್ತಿದ್ದರು. ಸಿದ್ಧಾಂತ ಮತ್ತು ಪ್ರಯೋಗ ಬೇರೆ ಬೇರೆಯಾಗಿ ಕಲಿಸುತ್ತಿರಲಿಲ್ಲ. ಪ್ರಯೋಗದಲ್ಲಿಯೆ ಸಿದ್ಧಾಂತವನ್ನು ಅಂತರ್ಗತಿಸಿ ಕಲಿಸುತ್ತಿದ್ದರು. ಎಲ್ಲವನ್ನೂ ಸ್ವತಃ ಹಾಡಿ ತೋರಿಸಿ, ಶಿಷ್ಯರಿಂದ ಹಾಡಿಸಿ ಮನದಟ್ಟು ಮಾಡಿಕೊಡುತ್ತಿದ್ದರು. ಸ್ವರಜ್ಞಾನ, ವಾದಿ-ಸಂವಾದಿ ಸ್ವರಗಳು, ವರ್ಜ್ಯಾವರ್ಜ್ಯ ಸ್ವರಗಳು, ಒಂದೇ ಸ್ವರ ಬೇರೆ ಬೇರೆ ರಾಗಗಳಲ್ಲಿ ಹೇಗೆ ಪ್ರಯೋಗ ಮಾಡಬೇಕು ಎಂಬುದನ್ನು ಪ್ರತ್ಯಕ್ಷವಾಗಿ ತಿಳಿಸಿಕೊಡುತ್ತಿದ್ದರು.

ನಸುಕಿನಲ್ಲಿ ಪಾಠ ಆರಂಭ. ಎಂಟು ಘಂಟೆಯವರೆಗೆ. ಪುನಃ ಮಧ್ಯಾಹ್ನ ಮತ್ತು ಸಂಜೆಗೆ. ಒಂದು ವರ್ಷವಿಡಿ ಪೂರಿಯಾ ರಾಗವನ್ನೇ ತೀಡಿಸಿದರು. ಒಟ್ಟು ಎಂಟು ವರ್ಷಗಳಲ್ಲಿ ಕಲಿಸಿದ್ದು ಮೂರೇ ರಾಗಗಳು: ತೋಡಿ, ಮುಲ್ತಾನಿ, ಪೂರಿಯಾ. ಮೂರು ರಾಗಗಳಿಂದ ನೂರಕ್ಕೆ ಬುನಾದಿ. ಮೇಲಾಗಿ, ಗುರುಗಳ ಜೊತೆಗೆ ಸಂಚಾರ. ಅವರ ಬೈಠಕಗಳಲ್ಲಿ ತಂಬೂರಿ ಸಾಥ. ಗಾಯನ ನೆರವು. ಇದೆಲ್ಲವೂ ಮೇಲ್ತರಗತಿಯ ಶಿಕ್ಷಣವೆ.

ರಾಮಚಂದ್ರ ಈಗ ರಾಮಭಾವು ಕುಂದಗೋಳಕರ. ಅಬ್ದುಲ್ ಕರೀಮಖಾನರಲ್ಲಿ ಶಿಕ್ಷಣ ಪೂರೈಸಿದ ಬಳಿಕ ರಾಮಭಾವು ಅವರಿಗೆ ಇನ್ನೂ ಕಲಿಯಬೇಕೆಂಬ ಪಿಪಾಸೆ. ರಾಮಭಾವು ನಾಟ್ಯಕಲಾ ಪ್ರವರ್ತಕ ಮಂಡಳಿ ಸೇರಿದಾಗ ನಟವರ್ಗಕ್ಕೆ ಸಂಗೀತ ಹೇಳಿಕೊಡಲು ನಿಸ್ಸಾರ ಹುಸೇನ ಖಾನರಿದ್ದರು. ಅವರಿಂದ ರಾಮಭಾವು ಜೀವನಪುರಿ,

ಲಂಕಾದಹನಸಾರಂಗ, ಭೈರವಬಹಾರ ರಾಗಗಳನ್ನು ಕಲಿತುಕೊಂಡರು. ಹೈದರಾಬಾದಿನ ರಹೀಮ ಭಕ್ಷರಿಂದ ಜಯಂತಕಲ್ಯಾಣ, ಹಿಂದೋಲಬಹಾರ, ಖಟ್, ಚೈತಾಶ್ರೀ ಕಲಿತುಕೊಂಡರು. ಮುರಾದಖಾನ್ ಬೀನಕಾರರಿಂದ ಮಲುಹಾ, ಭಂಕಾರ, ನಟ್‌ಮಲ್ಹಾರ, ಜೈಜೈವಂತಿ ಕಲಿತುಕೊಂಡರು. ಭಾಸ್ಕರಬುವಾ ಬಖಲೆ, ರಾಮಕೃಷ್ಣಬುವಾ ವಝೆ ಅವರಿಂದ ಮಾರ್ಗದರ್ಶನ ಪಡೆದರು. ಭೂಗಂಧರ್ವ ರೆಹಮತ್‌ಖಾನ್ ಮತ್ತು ಮಂಜಿಖಾನರ ಗಾಯನದಲ್ಲಿನ ಉತ್ತಮಾಂಶಗಳನ್ನು ತಮ್ಮ ಕಿರಾಣಾ ಪಡಿಯಚ್ಚಿನಲ್ಲಿ ಎರಕ ಹೊಯ್ದರು. ಹೀಗಾಗಿ, ಸವಾಯಿ ಗಂಧರ್ವರ ಗಾಯನವು ಆಲಾಪ, ಮೀಂಡ, ಬಢತ್, ಘಸೀಟ್, ಪಲ್ಟಾ, ಬೋಲ್‌ತಾನ್, ಮೂರ್ಛನಾ, ಖಟಕಾ, ತಾನಪಲಟ, ಫಿರತ್, ಮುರ್ಕಿ, ಡೌಲದಾರ ತಾನಗಳ ಮುಪ್ಪುರಿಯಾಗಿತ್ತು.

ಅಬ್ದುಲ್ ಕರೀಮಖಾನರ ಗಾಯನದಲ್ಲಿ ಕರುಣರಸ ಉಕ್ಕುತ್ತಿದ್ದರೆ, ಸವಾಯಿ ಗಂಧರ್ವರ ಗಾಯನದಲ್ಲಿ ಭಕ್ತಿರಸ ಹೊರಸೂಸುತ್ತಿತ್ತು. ಸವಾಯಿ ಗಂಧರ್ವರು 'ಗೋಪಾ ಮೇರೆ ಕರುಣಾ ಕ್ಯೊಂನ ಆವೆ' ಮತ್ತು 'ರಾಮಹರಿಕಾ ಭೇದನ ಪಾಯೊ' ಎಂಬ ಭಜನ್‌ಗಳನ್ನು ಹಾಡಿದರೆ ಅಬ್ದುಲ್ ಕರೀಮಖಾನರೇ ಹಾಡುತ್ತಿರುವರೇನೊ ಎಂದು ಭಾಸವಾಗುತ್ತಿತ್ತು. ಸವಾಯಿ ಗಂಧರ್ವರು ಠುಮರಿ ಹಾಡುವ ಕಲೆಯನ್ನು ಕರಗತ ಮಾಡಿಕೊಂಡರು. ಅವರ ಧ್ವನಿ ಬಲು ಮಧುರ. ಆದರೆ, ಧ್ವನಿ ಕೂಡಲೆ ಹತ್ತುತ್ತಿರಲಿಲ್ಲ. ಒಮ್ಮೊಮ್ಮೆಯಂತೂ ಬಹಳ ಕಷ್ಟಪಡಬೇಕಾಗುತ್ತಿತ್ತು. ಆದರೆ, ಧ್ವನಿ ಹತ್ತಿತೊ, ಅವರನ್ನು ಹಿಡಿಯುವವರಿರಲಿಲ್ಲ.

ಬಡತನ, ನಾಟಕದ ಗಮ್ಮತ್ತಿನ ಜೀವನದ ಆಕರ್ಷಣೆ, ಗೋಪಾಳರಾವ ಮರಾಠೆ ಅವರ ಆಗ್ರಹ, ಶುರುವಿಗೇ ತಿಂಗಳಿಗೆ ನೂರು ರೂಪಾಯಿ ಸಂಬಳದ ಆಮಿಷ ಇವುಗಳು ಸವಾಯಿ ಗಂಧರ್ವರನ್ನು ಗುರುಗಳ ಮನಸ್ಸಿನ ವಿರುದ್ಧ ಬಣ್ಣದ ಬದುಕಿಗೆ ಸೆಳೆದವು. ೧೯೦೭ರಲ್ಲಿ ಮರಾಠೆ ಅವರ ನಾಟ್ಯಕಲಾ ಪ್ರವರ್ತಕ ಮಂಡಳಿ ಸೇರಿದರು. ಅಭಿನಯಿಸಿದ ಪ್ರಥಮ ನಾಟಕ 'ಸಂತಾಪ ಶಮನ'. ಕಂಪನಿ ಎಲ್ಲ ಚೆನ್ನಾಗಿತ್ತು. ಹಾಡುವವರೇ ಇರಲಿಲ್ಲ. ಸವಾಯಿ ಗಂಧರ್ವರು ಆ ಕೊರತೆಯನ್ನು ತುಂಬಿದರು. ಮುಂಚೆ ಇದ್ದುದು ಹಳೆಯ, ಸಾದಾ ಹಾಡುಗಳು. ಶಾಸ್ತ್ರೀಯ ಗಾಯನಪ್ರಧಾನ ಹಾಡುಗಳನ್ನು ಅಳವಡಿಸಲು ಸವಾಯಿ ಗಂಧರ್ವರು ಸೂಚಿಸಿದ್ದರು. ಮರಾಠೆಯವರು ಸ್ತ್ರೀ ಪಾತ್ರ ಬಿಟ್ಟಮೇಲೆ ಅವು ಸವಾಯಿ ಗಂಧರ್ವರ ಪಾಲಿಗೆ ಬಿದ್ದವು. ಸುಭದ್ರಾ, ತಾರಾ, ಸಂತಸಖೂ ಪಾತ್ರಗಳಲ್ಲಿ ಮಿಂಚಿದರು. ಹಾಡುಗಾರಿಕೆಯಂತೂ ಅಪ್ರತಿಮವಾಗಿತ್ತು. ಕಿರ್ಲೋಸ್ಕರ್ ಕಂಪನಿ, ಶಾಹು ನಗರವಾಸಿ ಕಂಪನಿಗಳ ಸ್ಪರ್ಧೆ ಎದುರಿಸಿ ಪುಣೆಯಲ್ಲಿಯೆ ಆರು ತಿಂಗಳು ಮುಕ್ಕಾಮು ಮಾಡಿ ಚೆನ್ನಾಗಿ ಹಣ ಗಳಿಸಿದ ಶ್ರೇಯಸ್ಸು ಸವಾಯಿ ಗಂಧರ್ವರದು. ಕಂಪನಿ ಪುಣೆಯಿಂದ ಮುಂಬೈಗೆ ಹೋದಾಗ ಪುಣೆಯ ರಸಿಕರು ಪ್ರತಿ ಶನಿವಾರ ಸವಾಯಿ ಗಂಧರ್ವರ ಅಭಿನಯ ನೋಡಲು, ಗಾಯನ ಕೇಳಲು ಮುಂಬೈಗೆ ಬರುತ್ತಿದ್ದರು.

ಒಮ್ಮೆ ಒಂದು ಮೋಜಿನ ಪ್ರಸಂಗ ನಡೆಯಿತು. ಬಳ್ಳಾರಿಯಲ್ಲಿ 'ಮಾನಾಪಮಾನ' ನಾಟಕ ನಡೆದಿತ್ತು. ಸವಾಯಿ ಗಂಧರ್ವರು ಧೈರ್ಯಧರನ ಪಾತ್ರದಲ್ಲಿ. 'ಚಂದ್ರಿಕಾ ಜಣೂ ಠೇಮಿಯಾ' ಹಾಡು. ಅದರ ಮುಂದಿನ ಸಾಲು 'ಶೋಭಾ'ದಿಂದ ಆರಂಭವಾಗುವುದು.

ಸವಾಯಿ ಗಂಧರ್ವರ ಧ್ವನಿ ಕೈಕೊಟ್ಟಿತು. 'ಶೋಭಾ, ಶೋಭಾ' ಎನ್ನುತ್ತ ಮುಂದೆ ಸಾಗಲೊಲ್ಲದು. ಶ್ರೋತೃವೊಬ್ಬ ಕೀಟಲಿಸಿದ: "ಅತಾ ಝಾಲಿ ಏವಡ ಶೋಭಾ, ಪುಡೆ ಚಲಾ" (ಈಗ ಇಷ್ಟು ಶೋಭಾ ಸಾಕು, ಮುಂದೆ ಸಾಗಿರಿ). ಕೆಟ್ಟ ಅನಿಸಿಕೊಂಡು ಕೊಸರಿ ಹಾಡಿದರು. ಷಡ್ಜ ಸರಿಯಾಗಿ ಹತ್ತಿತು. 'ಒನ್ಸ್‌ಮೋರ್'ಗಳು ಸುರಿದವೆಂದು ಬೇರೆ ಹೇಳಬೇಕಿಲ್ಲ.

ಸವಾಯಿ ಗಂಧರ್ವ ಮತ್ತು ಭಾವುರಾವ ಜೋಶಿ ಪಾಲುದಾರರಾಗಿ ೧೯೧೪ರಲ್ಲಿ ನೂತನ ಸಂಗೀತ ನಾಟಕ ಮಂಡಳಿ ಆರಂಭಿಸಿದರು. ಕೆಲ ದಿನಗಳ ನಂತರ ಅದರ ಸಂಪೂರ್ಣ ಜವಾಬ್ದಾರಿ ಸವಾಯಿ ಗಂಧರ್ವರ ಮೇಲೆಯೇ ಬಿತ್ತು. ಸವಾಯಿ ಗಂಧರ್ವರು ಉತ್ತಮ ಗಾಯಕ-ನಟರೆ ಹೊರತು ವ್ಯವಹಾರಚತುರರಲ್ಲ. ಸಾಲಸೋಲದ ಭಾರದಿಂದಾಗಿ ೧೯೨೪ರಲ್ಲಿ ಕಂಪನಿ ಮುಚ್ಚಿತು. 'ಉಸ್ಸಪ್ಪಾ, ಇನ್ನು ಬಣ್ಣದ ಬದುಕು ಸಾಕು ಎಂದರೆ ಅದು ಅವರನ್ನು ಬಿಡಬೇಕಲ್ಲ!' ಗುರುಬಂಧು ಶಂಕರರಾವ್ ಸರನಾಯಕರು ಆಗ್ರಹ ಮಾಡಿ, ತಮ್ಮ 'ಯಶವಂತ ಸಂಗೀತ ನಾಟಕ ಮಂಡಳಿ'ಗೆ ಕರೆದೊಯ್ದರು. ಒಮ್ಮೆ ಇವರದು ಸ್ತ್ರೀಪಾತ್ರವಾದರೆ, ಮತ್ತೊಮ್ಮೆ ಅವರದು. ಬಲು ಅಪರೂಪದ ಜೋಡಿ. ಸವಾಯಿ ಗಂಧರ್ವರು ಧೈರ್ಯಧರನಾಗಿ 'ಚಂದ್ರಿಕಾ ಹಿ ಜಣು ತೇವಿಯಾ' ಹಾಡಲಿ, ಸುಭದ್ರೆಯಾಗಿ 'ಕಿತಿಕಿತಿ ಸಾಂಗೂ ತುಲಾ, ವದ ಜಾವೂ ಕುಣಾಲಾ, ಶರಣ' ಹಾಡಲಿ, 'ಒನ್ಸ್‌ಮೋರ್'ಗಳು ಇದ್ದುದೇ. ಅವರ ರಂಗಗೀತೆಗಳು ನೋಟಕರನ್ನು ಎಷ್ಟೊಂದು ಮಂತ್ರಮುಗ್ಧಗೊಳಿಸಿದ್ದವೆಂದರೆ ಒಮ್ಮೆ ಸ್ತ್ರೀಪಾತ್ರದ ಟೋಪನ್ ಕೆಳಗೆ ಸರಿದುದರ ಪರಿವೆಯೇ ನೋಟಕರಿಗಿರಲಿಲ್ಲ. 'ಪಾಂಡುನೃಪತಿ ಜನಕ ಜಯ' ಎಂಬ ಸುಭದ್ರೆಯ ಹಾಡಿಗೆ ಏಳು 'ಒನ್ಸ್‌ಮೋರ್'ಗಳು ಬಂದುದೊಂದು ದಾಖಲೆ. ಅಂದರೆ, ಏಳು ಸಲವೂ ಆ ಹಾಡನ್ನು ಪುನಃ ಹಾಡಬೇಕು. ಅದು ಅಂದಿನ ರಂಗಸಂಪ್ರದಾಯ. ೧೯೨೯ ರಿಂದ ೧೯೩೧ ರವರೆಗೆ ಹೀರಾಬಾಯಿ ಬಡೋದೆಕರ ಅವರ ನೂತನ ಸಂಗೀತ ವಿದ್ಯಾಲಯ ನಾಟ್ಯಶಾಖೆಯಲ್ಲಿ ದುಡಿದರು. ಮೀರಾಬಾಯಿ ನಾಟಕದಲ್ಲಿ ಹೀರಾಬಾಯಿಯವರದು ಮೀರಾಬಾಯಿ ಪಾತ್ರ, ಸವಾಯಿ ಗಂಧರ್ವರದು ಸಾಧು ದಯಾನಂದ ಪಾತ್ರ. ರಂಗಗೀತೆಗಳ ಸುರಿಮಳೆ.

೧೯೧೯ ಬಾಲಗಂಧರ್ವರ ಕಂಪನಿ ಮತ್ತು ರಾಮಭಾವು ಕುಂದಗೋಳಕರರ ಕಂಪನಿ ಎರಡೂ ಅಮರಾವತಿಯಲ್ಲಿ ಕ್ಯಾಂಪ್ ಮಾಡಿದ್ದವು. ಇಬ್ಬರೂ ಒಂದೇ ಕಥಾನಕದ-ದ್ರೌಪದಿ ವಸ್ತ್ರಾಪಹರಣದ ಬೇರೆ ಬೇರೆ ನಾಟಕಗಳನ್ನು ಆಡುತ್ತಿದ್ದರು. ರಸಿಕರು ಇಬ್ಬರ ನಾಟಕಗಳನ್ನೂ ನೋಡಿದರು, ಸಂಗೀತಾನಂದದಲ್ಲಿ ಮಿಂದರು. ಯಾರು ಹೆಚ್ಚು, ಯಾರು ಕಡಿಮೆ? ಒಂದು ರಾತ್ರಿ ವರ್‍ಹಾಡದ ಅನಭಿಷಿಕ್ತ ದೊರೆ, ರಸಿಕೋತ್ತಮ ದಾದಾಸಾಹೇಬ ಖಾಪರ್ಡೆ 'ರಾಮಭಾವುರ' ನಾಟಕ ನೋಡುತ್ತ, ಗಾಯನ ಕೇಳುತ್ತ ಮಗ್ನರಾಗಿದ್ದರು. ಒಂದಾದ ಮೇಲೊಂದರಂತೆ ಸುಮಧುರ ಗೀತೆಗಳು ಹೊರಹೊಮ್ಮುತ್ತಿದ್ದಂತೆ ಖಾಪರ್ಡೆ ಅವರ ಬಾಯಿಯಿಂದ "ಹೇ ತರ್ ಸವಾಯಿ ಗಂಧರ್ವ ಆಹೇತ್" ಎಂಬ ಉದ್ಗಾರ ತಾನೇತಾನಾಗಿ ಹೊರಬಿತ್ತು. ಅಂದರೆ "ಇವರೇ ಸವಾಯಿ ಗಂಧರ್ವ" ಎಂದರ್ಥ. ಮರಾಠಿಯಲ್ಲಿ ಸವಾಯಿ ಎಂದರೆ ಹೆಚ್ಚಿನ, ಮಿಗಿಲಾದ

ಎಂದರ್ಥ. ಅವರೋ ಬಾಲಗಂಧರ್ವರು, ಇವರೋ ಸವಾಯಿ ಗಂಧರ್ವರು ಎಂಬ ಮೆಚ್ಚುಗೆ, ಅಭಿವಂದನೆ. ರಾಮಚಂದ್ರ, ರಾಮಭಾವು ಕುಂದಗೋಳಕರ ಆಗಿ, ಈಗ ಸವಾಯಿ ಗಂಧರ್ವರಾಗಿ ಗಂಧರ್ವಮಾಲಿಕೆ ಸೇರಿದ್ದರು. ಮರುದಿನ ಅಮರಾವತಿಯ ಕ್ಲಬ್ಬಿನಲ್ಲಿ ಬೈಠಕ್. ಅಸನಾರೆ ವಕೀಲರ ಹಸ್ತದಿಂದ ಸವಾಯಿ ಗಂಧರ್ವ ಎಂದು ಕೆತ್ತಿದ ಚಿನ್ನದ ಪದಕ ಪ್ರದಾನ. ಅಂದಿನಿಂದ ಸವಾಯಿ ಗಂಧರ್ವ ಎಂಬ ಹೆಸರೇ ಚಿರಸ್ಥಾಯಿಯಾಯಿತು. ಬಾಲಗಂಧರ್ವರು ಮರಾಠಿ ರಂಗಭೂಮಿಯಲ್ಲಿ ಸೂಪರ್‌ಸ್ಟಾರ್ ಆಗಿ ಮೆರೆಯುತ್ತಿದ್ದ ಕಾಲದಲ್ಲಿ, ಇದು ಸಾಮಾನ್ಯ ಸಾಧನೆಯಾಗಿರಲಿಲ್ಲ. ಅಚಿತಹವೇ ಪದಕ, ಮಾನಪತ್ರ ಅಂಕೋಲಾ, ಪುಣೆ, ಧಾರವಾಡ, ಹೈದರಾಬಾದಗಳಲ್ಲೂ ಕೊಡಮಾಡಲ್ಪಟ್ಟವು.

ಇದು ರಾಜ–ಮಹಾರಾಜರ ಕೃಪಾಶ್ರಯದ ಬಿರುದಾಗಿರದೆ, ಗುಣಿಜನರಿತ್ತ ಬಿರುದಾಗಿತ್ತು. ಸವಾಯಿ ಗಂಧರ್ವರ ಪ್ರತಿಭೆಯಂತೂ ಸರಿಯೆ. ಇಲ್ಲಿ ಮರಾಠಿ ಜನರ ಗುಣಗ್ರಾಹಿತನವನ್ನೂ ಮೆಚ್ಚಬೇಕು. ಮೊದಮೊದಲು 'ಹಾ ಕಾಯ್‌ಗಾತೊ ಕಾನಡಿ ಅಪ್ಪಾ' ಎಂದು ಮೂದಲಿಸಿದ ಮರಾಠಿಗರೇ ರಾಮಭಾವುರ ಪ್ರತಿಭೆಗೆ ಮಣಿದು ಸವಾಯಿ ಗಂಧರ್ವರೆಂದು ಮಾನ್ಯ ಮಾಡಿದರು. ಭಾಷೆ, ರಾಜ್ಯಗಳ ಎಲ್ಲೆಯನ್ನೂ ಮೀರಿದ ಗೌರವ. ಪ್ರತಿಭೆಯನ್ನು ಕೊಂಡಾಡಬೇಕು, ಪ್ರತಿಭೆಯನ್ನು ಗುರುತಿಸಿದ ರಸಿಕರನ್ನೂ ಕೊಂಡಾಡಬೇಕು. 'ಸ್ವದೇಶೇ ಪೂಜ್ಯತೇ ರಾಜಾ, ವಿದ್ವಾನ್ ಸರ್ವತ್ರ ಪೂಜ್ಯತೇ' ಎಂಬುದಕ್ಕೆ ಬೇರೆ ನಿದರ್ಶನ ಬೇಕೆ?

೧೯೩೧ ರಲ್ಲಿ ಕಂಪನಿ ಮುಚ್ಚಿ ಸವಾಯಿ ಗಂಧರ್ವರ ಬಣ್ಣದ ಬದುಕಿಗೆ ಕೊನೆಯ ತೆರೆ ಬಿತ್ತು. ಕಚೇರಿ ಸಂಗೀತದ ಮೇಲೆ ಬದುಕುವ ಆತ್ಮವಿಶ್ವಾಸ ಹೊರಟುಹೋಗಿತ್ತು. ಹತಾಶೆ ಆವರಿಸಿತ್ತು. ಆತ್ಮವಿಶ್ವಾಸ ಮರಳಿ ಪಡೆಯಲು ಪ್ರೋತ್ಸಾಹ ನೀಡಿದವರು ನಾಗಪುರದ ಬಾಬುರಾವ್ ದೇಶಮುಖ. ಅಲ್ಲಲ್ಲಿ ಅವರ ಕಚೇರಿ ಏರ್ಪಡಿಸಿದರು. ಹಲವುಗಳನ್ನು ತಮ್ಮ ಮನೆಯಲ್ಲಿಯೇ ಏರ್ಪಡಿಸಿದರು.

ಸವಾಯಿ ಗಂಧರ್ವರು ತಮ್ಮ ಸಂಗೀತದ ಕಾಲುಗಳ ಮೇಲೆ ನಿಲ್ಲಲಾರಂಭಿಸಿದ್ದು ನಾಗಪುರದಲ್ಲಿಯೆ. ಮುಂದೆ ತಮ್ಮ ಗಾಯನಪರಾಕ್ರಮದಿಂದ ಮುಂಬಯಿಯನ್ನು ಅಲ್ಲಾಡಿಸಿದರು. ಭಾರತದ ಎಲ್ಲೆಡೆಗಳಿಂದ ಆಕಾಶವಾಣಿ ಕಾರ್ಯಕ್ರಮಗಳಿಗೆ ಹಾಗೂ ಕಚೇರಿಗಳಿಗೆ ಆಹ್ವಾನ ಸುರಿದವು. ಪ್ರಸಿದ್ಧಿ ದೂರ ದೂರದವರೆಗೆ ಹಬ್ಬಿತು. ಮುಂಬಯಿ ಗಣೇಶೋತ್ಸವದಲ್ಲಿ ಹಾಡಲು ಸತತ ಏಳು ದಿನ ಆಹ್ವಾನಿಸಲಾಗಿತ್ತು. ಅಂದಿನ ಕಾಲದಲ್ಲಿ ಗಾಯಕರನ್ನು ಪ್ರಾಣಿಗಳಿಗೆ ಹೋಲಿಸುವುದಿತ್ತು. ಭಾಸ್ಕರಬುವಾ ಬಖಲೆ ಸಿಂಹವಾದರೆ ಸವಾಯಿ ಗಂಧರ್ವರು ಹುಲಿ ಎಂಬ ಮಾತು ಪ್ರಚಲಿತವಿತ್ತು. ಸವಾಯಿ ಗಂಧರ್ವರ ಪ್ರಭಾವಿ, ಆಕ್ರಮಣಶೀಲ ಗಾಯನ ಹಾಗೆನ್ನಲು ಕಾರಣವಾಗಿತ್ತು. ರಂಗಭೂಮಿಯಿಂದ ನಿವೃತ್ತರಾದ ಬಳಿಕ ಸವಾಯಿ ಗಂಧರ್ವರು ರೇಡಿಯೋ ಕಾರ್ಯಕ್ರಮಗಳು, ಬೈಠಕುಗಳು, ಶಿಷ್ಯರಿಗೆ ವಿದ್ಯಾದಾನ ಇವುಗಳ ಮೇಲೆ ಗಮನ ಕೇಂದ್ರೀಕರಿಸಿದರು.

ಸವಾಯಿಗಂಧರ್ವರು ರಂಗಭೂಮಿ ಸೇರುವ ಮೊದಲೂ ಗವಾಯಿಯಾಗಿದ್ದರು. ರಂಗಭೂಮಿಯಲ್ಲಿದ್ದಾಗಲೂ ಗವಾಯಿಯಾಗಿದ್ದರು. ರಂಗಭೂಮಿ ಬಿಟ್ಟ ಮೇಲೂ

ಗವಾಯಿಯಾಗಿದ್ದರು. ಇವೆಲ್ಲ ಅವಸ್ಥಾಂತರಗಳಲ್ಲೂ ಅವರ ಪ್ರದರ್ಶನ ಉಜ್ವಲವಾಗಿತ್ತು. ೨೫ ವರ್ಷಗಳ ರಂಗಭೂಮಿಯ ನಂಟು ಅವರ ಗಾಯನಕ್ಕೆ ಹೆಚ್ಚಿನ ಮೆರುಗು ತಂದಿತ್ತು. ಮೊದಲಿನಿಂದ ಕೊನೆಯವರೆಗೂ ಶ್ರೋತೃವಿನ ಮನಸ್ಸನ್ನು ಹಿಡಿದಿಟ್ಟುಕೊಳ್ಳುವ ಪರಿಣತಿ ಪ್ರಾಪ್ತವಾಗಿತ್ತು. ಅವರ ಗಾಯನ ಅಧಿಕ ಪ್ರೌಢವೂ, ಚಿತ್ತಾಕರ್ಷಕವೂ ಆಗಿತ್ತು.

ಸವಾಯಿ ಗಂಧರ್ವರು ಅಬ್ದುಲ್ ಕರೀಮಖಾನರ ಗೌರಿಹರವಾಣಿ (ಭಾವ ಮನಗಳನ್ನು ಹೊತ್ತೊಯ್ಯುವ) ಗಾಯನಶೈಲಿಗೆ ವಾರಸುದಾರರಾಗಿದ್ದರು. ಸ್ವರಗಳನ್ನು ಒಂದರಲ್ಲೊಂದು ಹೆಣೆಯುವ ಅವರ ಕಲೆ ವರ್ಣಿಸಲಸದಳ. ವಿಲಂಬಿತದಲ್ಲಂತೂ ಗುರುವೆ ಹಾಡುತ್ತಿರುವರೇನೋ ಎಂದು ಭಾಸವಾಗುತ್ತಿತ್ತು. ಸವಾಯಿ ಗಂಧರ್ವರ ವಿಲಂಬಿತ ಬೆಳದಿಂಗಳಿನಲ್ಲಿ ನೌಕಾವಿಹಾರದಂತಿತ್ತು. ತಾನ ಆರಂಭವಾದಾಗ ವಾತಾವರಣ ಒಮ್ಮೆಲೆ ಬದಲಾಗುತ್ತಿತ್ತು. ಅವರ ಆಕ್ರಮಣಕಾರಕತೆ ಮುಂಚೂಣಿಗೆ ಬರುತ್ತಿತ್ತು. ಸರಳ, ಸಂಕೀರ್ಣ, ಜಟಿಲ ತಾನಗಳ ಸುರಿಮಳೆಯಾಗುತ್ತಿತ್ತು.

ಸವಾಯಿ ಗಂಧರ್ವರದು ಅಬ್ದುಲ್ ಕರೀಮಖಾನರಂಥ ಮೃದು ಧ್ವನಿಯಲ್ಲ. ಆದರೆ ಅದನ್ನು ಪರಿಶ್ರಮಪಟ್ಟು ಪಳಗಿಸಿದ್ದರು. ಪ್ರತಿಸಲವೂ ಸ್ವರವಿನ್ಯಾಸ ಭಿನ್ನ. ಮಧ್ಯಷಡ್ಜದ ಎಡಬಲಕ್ಕಿರುವ ಸ್ವರಗಳನ್ನು ಪ್ರೇಕ್ಷಣೀಯಗೊಳಿಸುವ ಸವಾಯಿ ಗಂಧರ್ವರ ಕಲೆ ಅನ್ಯರಲ್ಲಿ ನೋಡಸಿಗದು. ಮಧ್ಯಸಪ್ತಕದಿಂದ ತಾರ ಸಪ್ತಕಕ್ಕೆ ಬರಲು ಅವರಿಗೆ ಒಂದು ತಾಸು ಬೇಕಾಗುತ್ತಿತ್ತು. ಒಳ್ಳೆಯ ಶ್ರೋತೃಗಳು ಎದುರಿಗಿದ್ದರೆ ಸವಾಯಿ ಗಂಧರ್ವರು ಒಂದೇ ರಾಗವನ್ನು ಎರಡು ತಾಸಿಗೂ ಮಿಕ್ಕಿ ಹಾಡಬಲ್ಲವರಾಗಿದ್ದರು. ಯಾವುದನ್ನೂ ಪುನರಾವರ್ತಿಸದೇ ಇಷ್ಟು ದೀರ್ಘಕಾಲ ಹಾಡುವುದು ಅಂತಿಂಥವರ ಆಳವಲ್ಲ. ದೊಡ್ಡ ದೊಡ್ಡ ಸಂಗೀತಗಾರರೂ ಸವಾಯಿ ಗಂಧರ್ವರ ಗಮಕ ತಾನಗಳಿಗೆ ತಲೆದೂಗುತ್ತಿದ್ದರು. ಇವೆಲ್ಲ ಅಂಶಗಳು ಕಾಮನಬಿಲ್ಲಿನ ಬಣ್ಣಗಳಂತೆ ಬೆರೆತುಕೊಂಡಿರುತ್ತಿದ್ದವು. ಒಂದರಿಂದ ಇನ್ನೊಂದು ಸ್ವರಕ್ಕೆ ನಿಧಾನವಾಗಿ ಸಾಗುವ ಅವರ ವಿಧಾನ ಅನನ್ಯ. ತಮ್ಮ ಮಧುರ ಸ್ವರಗಳಿಂದ ಶ್ರೋತೃಗಳು ಮಂತ್ರಮುಗ್ಧರಾದಾಗ ಸವಾಯಿ ಗಂಧರ್ವರ ಕಣ್ಣಿನಿಂದ ಆನಂದಬಾಷ್ಪ ಉದುರುತ್ತಿದ್ದವು. ರಾತ್ರಿಯಿಡಿ ಹಾಡಿದರೂ "ಇಷ್ಟು ಬೇಗ ಮುಗಿಯಿತೆ?" ಎಂದು ಶ್ರೋತೃಗಳು ಉದ್ಗರಿಸುತ್ತಿದ್ದರು. ಖ್ಯಾಲ್ ಅಲ್ಲದೆ ಠುಮರಿ, ನಾಟ್ಯಗೀತ, ಅಭಂಗ, ಗೌಳಣಿಗಳನ್ನೂ ತದೇಕಪರಿಣತಿಯಿಂದ ಹಾಡುತ್ತಿದ್ದರು.

೧೯೧೯ ರಲ್ಲಿ ಮುಂಬೈಯ ಚರ್ನಿರೋಡ್‌ನ ಮನೆಯೊಂದರಲ್ಲಿ ಖಾಸಗಿ ಬೈಠಕ್. 'ಉಗಿಚ ಕಾ ಕಾಂತಾ' ಹಾಡಿ ಶ್ರೋತೃಗಳನ್ನು ಅಳಿಸಿಬಿಟ್ಟರು. ನಂತರ ಹಾಡಬೇಕಿದ್ದ ಕೇಶವರಾವ ಭೋಸ್ಲೆ 'ಸವಾಯಿ ಗಂಧರ್ವರು ಇಷ್ಟೊಂದು ಚೆನ್ನಾಗಿ ಹಾಡಿದ ಮೇಲೆ ನಾನು ಹಾಡಲೊಲ್ಲೆ' ಎಂದು ಬಿಟ್ಟರು. ಕಲಕತ್ತೆಯ ಸಂಗೀತ ಸಮ್ಮೇಳನದಲ್ಲಿ ಸವಾಯಿ ಗಂಧರ್ವರ ಗಾಯನ ಕೇಳಿ ಓಂಕಾರನಾಥ ಠಾಕೂರ ಅಪ್ಪಿಕೊಂಡು ಕೊಂಡಾಡಿದರು.

೧೯೩೯ ರಲ್ಲಿ ಮುಂಬೈಯ ವನಮಾಲಿ ಭವನದಲ್ಲಿ ಕಛೇರಿ. ಅಂದು ಧ್ವನಿಯೂ ಮೇಣದಂತಿತ್ತು. ಅಸಾವರಿ ರಾಗ ಹಾಡಿ ಮುಗಿಸಿದಾಗ ಎಲ್ಲರ ಕಣ್ಣಲ್ಲಿ ನೀರು. ಫಿರೋಜ

ದಸ್ತೂರ, ಗಂಗೂಬಾಯಿ ಹಾನಗಲ್ ಮುಂದಿನ ಸಾಲಿನಲ್ಲಿ ಕುಳಿತಿದ್ದರು. ಯಾರಿಗೂ ಚಪ್ಪಾಳೆ ತಟ್ಟುವ ಪರಿವೆಯೂ ಉಳಿದಿರಲಿಲ್ಲ. ಎಲ್ಲರಿಗಿಂತ ಪ್ರಭಾವಿತರಾದವರೆಂದರೆ ಬಸವರಾಜ ರಾಜಗುರು. ಅವರು ಹಿಂದೆ ಕುಳಿತು ತಂಬೂರಿ ನುಡಿಸುತ್ತ ನೆರವು ಗಾಯನ ನೀಡುತ್ತಿದ್ದರು. ಸವಾಯಿ ಗಂಧರ್ವರು ಅಸಾವರಿ ಮುಗಿಸಿ, ಭೈರವಬಹಾರ ರಾಗ ಎತ್ತಿಕೊಂಡರೂ ರಾಜಗುರು ಬಾಯಲ್ಲಿ ಅಸಾವರಿ ಸ್ವರಗಳೇ ಹೊರಡುತ್ತಿದ್ದವು. ಸವಾಯಿ ಗಂಧರ್ವರು ಕನ್ನಡದಲ್ಲಿ ಗದರಿದರು. ಏನು ಮಾಡಿದರೂ ರಾಜಗುರು ಅವರಿಗೆ ಅಸಾವರಿ ರಾಗದ ಸ್ವರಗಳದೇ ಗುಂಗು. ಅಸಾವರಿ ಪ್ರಭಾವದಿಂದ ಹೊರಬರಲಾಗಲಿಲ್ಲ. ಆದ್ದರಿಂದ, ಸುಮ್ಮನೆ ತಂಬೂರಿ ಮೀಟಿದರೆ ವಿನಃ ಧ್ವನಿಗೂಡಿಸುವ ಗೋಜಿಗೆ ಹೋಗಲಿಲ್ಲ.

ಇಂಥ ಗ್ರಾಯಕ ಸವಾಯಿ ಗಂಧರ್ವರನ್ನು ಧ್ವನಿಮುದ್ರಣ ಕಂಪನಿಗಳು ಬಿಟ್ಟಾವೆಯೆ! ಧ್ವನಿಮುದ್ರಿಕೆಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದ ಎಚ್.ಎಂ.ವಿ. (ಹೀಜ್ ಮಾಸ್ಟರ್ಸ್ ವ್ಹಾಯಿಸ್) ಸವಾಯಿ ಗಂಧರ್ವರ ಹಲವಾರು ಗಾನತಟ್ಟೆಗಳನ್ನು ಹೊರತಂದಿತು. ಅಂದು ಇಂದಿನಂತೆ ಲಾಂಗ್ ಪ್ಲೇ ಧ್ವನಿಮುದ್ರಿಕೆಗಳಿರಲಿಲ್ಲ. ಇದ್ದುದು ಮೂರು ನಿಮಿಷ, ಐದು ನಿಮಿಷಗಳ ದೊಡ್ಡ ಗಾನತಟ್ಟೆಗಳು. ಕ್ಯಾಸೆಟ್ಟುಗಳ ಸೊಲ್ಲು ಇರಲೇ ಇಲ್ಲ. ಹೀಗಾಗಿ, ಗಾಯಕರ ವಿದ್ಯೆಗೆ ಆ ಅಲ್ಪಾವಧಿಯ ಗಾನತಟ್ಟೆಗಳು ಪೂರ್ಣಾವಕಾಶ ಒದಗಿಸುತ್ತಿರಲಿಲ್ಲ. ಅಂಥ ಸೀಮಿತತೆಯಲ್ಲಿಯೇ ಸವಾಯಿ ಗಂಧರ್ವರು ಆಯಾ ರಾಗಗಳನ್ನು ಸಾರವತ್ತಾಗಿ ಪ್ರಸ್ತುತಪಡಿಸುವ ಕಲೆಯನ್ನು ಅರಿತಿದ್ದರು. ಹಲವು ವರ್ಷಗಳ ಅವಧಿಯಲ್ಲಿ ಎಚ್.ಎಂ.ವಿ. ೧೭ ರಾಗಗಳಲ್ಲಿ ೧೯ ಗಾನತಟ್ಟೆಗಳನ್ನು ಮತ್ತು ೧ ನಾಟ್ಯಗೀತೆ ತಟ್ಟೆ ಹೊರತಂದಿತು: ಸುಹಾ ಕಾನಡಾ (ತೂ ಹೈ ಮೊಹಮ್ಮದಸಾ), ಭೈರವಿ (ಲಗತ ಕಲೇಜವಾ, ಭಾಯಿ ಮೈ ತೋರಿ), ಮಿಂಯಾ ಮಲ್ಹಾರ (ಮೋಮದಸಾ ರಂಗೀಲೆ), ಶಂಕರಾ (ಕಲ ನಾ ಪರೆ), ಅಡಾಣಾ (ಜೋ ತೇರಿ ರಝಾ), ಬಹಾರ (ಕಲಿಯನ ಸಂಗ), ಸೂರಮಲ್ಹಾರ (ಬಾದರವಾ ಬರಸನ ಲಾಗಿ), ಮಾಂಡ (ಕಿಶೋರಿ ಬಾಲ ಮೋಹಿತೊ), ತಿಲಂಗ (ಜಾವೊ ಜಾವೊ ಸಖಿ ಮಧುಬನ ಮೆ), ಧಾನಿಕಾಫಿ (ಕಾಹೆ ರಾಜಾ ಮಾನತ), ಹಿಂದೋಲ (ಲಾಲ ಜಿನ ಕರ ಹೋ), ದೇಸಕಾರ (ಝುನನ ಝುನನ ಬಾಜೆ), ನಟಮಲ್ಹಾರ (ಬನರಾ ಬ್ಯಾಹನ), ತೋಡಿ (ಸಮಜ ಮನ ಗೋರಖಂಡದಾ), ಅಸಾವರಿ (ಪ್ರೀತ ಕರೊ ಅರಜ ಸುನೊ), ನಾಟ್ಯಗೀತ (ವದ ಜಾವೂ ಕುಣ್ಹಾಲಾ ಪ್ರಿಯಕರ ಮಾಝೆ). ಇವು ಇಂದಿಗೂ ಸವಾಯಿ ಗಂಧರ್ವರ ಗಾಯನಪ್ರೌಢಿಮೆಗೆ ಸಾಕ್ಷಿಯಾಗಿ ನಿಂತಿವೆ.

೧೯೩೨ ರಲ್ಲಿ ನಾಗಪುರದ ಗಾನಪ್ರೇಮಿ ಮಂಡಳಿಯಿಂದ ಸನ್ಮಾನ ಮತ್ತು ಹಮ್ಮಿಣಿ ಅರ್ಪಣೆ. ೧೯೩೩ ರಲ್ಲಿ ಮುಂಬೈನ ದಾದರ್ ಗಾಯನ ಶಾಲೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ. ಅದೇ ವರ್ಷ ಹೈದರಾಬಾದ್ ಕರ್ನಾಟಕ ಸಂಘವು ಮಾನಪತ್ರ ಅರ್ಪಿಸಿ ಸತ್ಕರಿಸಿತು. ೧೯೩೫ ರಲ್ಲಿ ಮುಂಬೈಯಲ್ಲಿ ಜರುಗಿದ ಗಾಯನ ಕಛೇರಿ ಸಂದರ್ಭದಲ್ಲಿ ಧರ್ಮಪುರ ಮಹಾರಾಜರ ಹಸ್ತದಿಂದ ಸುವರ್ಣಪದಕ ನೀಡಿಕೆ. ಅದೇ ವರ್ಷ ಶೃಂಗೇರಿಯಲ್ಲಿ ವಿದ್ಯಮಾನರಾದ ಶ್ರೀ ವಾಲುಕೇಶ್ವರ ಭಾರತಿ ಸ್ವಾಮಿಗಳಿಂದ ಗಾನಕೇಸರಿ ಬಿರುದು. ೧೯೩೮ ರಲ್ಲಿ ಹುಬ್ಬಳ್ಳಿ ಆರ್ಟ್ ಸರ್ಕಲ್ಲಿನ ಮೊದಲ

ವಾರ್ಷಿಕೋತ್ಸವದ ಅಧ್ಯಕ್ಷತೆ. ೧೯೩೯ ರಲ್ಲಿ ಬಂಗಾಲ ಸಂಗೀತ ಸಮ್ಮೇಳನದಲ್ಲಿ ಸುವರ್ಣಪದಕ. ೧೯೪೦ ರಲ್ಲಿ ಪುಣೆಯ ಗಂಧರ್ವ ಮಹಾವಿದ್ಯಾಲಯದ ವಾರ್ಷಿಕೋತ್ಸವದ ಅಧ್ಯಕ್ಷತೆ.

೧೯೪೨ ರಲ್ಲಿನ ಸಾಂಗ್ಲಿ ರಾಜವಾಡೆಯಲ್ಲಿಯ ಕಛೇರಿಯೆ ಕೊನೆಯದು. ಸವಾಯಿ ಗಂಧರ್ವರಿಗೆ ಪಾರ್ಶ್ವವಾಯು ತಗಲಿತು. ವೈದ್ಯಕೀಯ ಚಿಕಿತ್ಸೆಯಿಂದ ಸ್ವಲ್ಪ ಚೇತರಿಸಿಕೊಂಡರೂ ಪುನಃ ಹಾಡುವಂತಿರಲಿಲ್ಲ.

೧೯, ಜನೆವರಿ ೧೯೪೯. ಪುಣೆಯ ಸಂಗೀತ ಇತಿಹಾಸದಲ್ಲಿ ಚಿರಸ್ಮರಣೀಯ ದಿನ. ಸವಾಯಿ ಗಂಧರ್ವರ ಷಷ್ಟ್ಯಬ್ದಿ ಉತ್ಸವ. ವಯಸ್ಸು, ಪರಂಪರೆ ಮತ್ತು ಅಂತಸ್ತುಗಳಿಂದಾಗಿ ಸವಾಯಿ ಗಂಧರ್ವರನ್ನು ಮಹಾರಾಷ್ಟ್ರದ ಹಿಂದುಸ್ತಾನಿ ಸಂಗೀತಪ್ರಭೃತಿಗಳಲ್ಲಿಯೇ ಹಿರಿಯರೆಂದು ಪರಿಗಣಿಸಲಾಗಿತ್ತು. ಬಾಳಕೃಷ್ಣಬುವಾ ಇಚಲಕರಂಜಿಕರ, ಭಾಸ್ಕರಬುವಾ ಬಖಲೆ ಮತ್ತು ರಾಮಕೃಷ್ಣಬುವಾ ವಝೆ ಮೊದಲಾದ ಪ್ರಚಂಡರ ಪರಂಪರೆಯನ್ನು ಉಜ್ವಲಗೊಳಿಸಿದವರಲ್ಲಿ ಸವಾಯಿ ಗಂಧರ್ವರೇ ಕೊನೆಯವರು. ಉತ್ಸವವನ್ನು ಪುಣೆ ಮ್ಯೂಜಿಕ್ ಸರ್ಕಲ್‌ದವರು ಹೀರಾಬಾಗ್‌ನ ವಿಶಾಲ ಅಂಗಣದಲ್ಲಿ ಏರ್ಪಡಿಸಿದ್ದರು. ಕಿರಾಣಾ ಘರಾಣೆಯ ದೊರೆಗೆ ಗೌರವ ಸಲ್ಲಿಸಲು ಸಂಗೀತಗಾರರು ಘರಾಣೆಯ ಎಲ್ಲೆಗಳನ್ನು ಮೀರಿ ಭಾಗವಹಿಸಿದ್ದರು. ಸವಾಯಿ ಗಂಧರ್ವರು ಸಪ್ಟಂಬರ್ ೧೨, ೧೯೫೨ ರಂದು ಪುಣೆಯಲ್ಲಿ ಕೊನೆಯುಸಿರೆಳೆದರು.

ಸವಾಯಿ ಗಂಧರ್ವರ ಸ್ಮರಣಾರ್ಥ ಕರ್ನಾಟಕದಲ್ಲಿಯೇ ದೊಡ್ಡದಾದ ಸಂಗೀತಾರಾಧನೆ ಅವರ ಜನ್ಮಭೂಮಿ ಕುಂದಗೋಳದಲ್ಲಿ ಶಿಷ್ಯೆ ಗಂಗೂಬಾಯಿ ಹಾನಗಲ್‌ರ ನೇತೃತ್ವದಲ್ಲಿ ಪ್ರತಿ ವರ್ಷ ಜರಗುತ್ತದೆ. ಮಹಾರಾಷ್ಟ್ರದಲ್ಲಿಯೆ ದೊಡ್ಡದಾದ ಸಂಗೀತೋತ್ಸವ ಸವಾಯಿ ಗಂಧರ್ವರ ಕರ್ಮಭೂಮಿಯಾಗಿದ್ದ ಪುಣೆಯಲ್ಲಿ ಶಿಷ್ಯ ಭೀಮಸೇನ ಜೋಶಿ ನೇತೃತ್ವದಲ್ಲಿ ಜರುಗುತ್ತದೆ. ೧೯೬೪ ರಲ್ಲಿ ಪುಣೆಯ ಸಂಭಾಜಿ ಪಾರ್ಕಿನಲ್ಲಿ ಸವಾಯಿ ಗಂಧರ್ವರ ಪುತ್ಥಳಿ ಪ್ರತಿಷ್ಠಾಪಿತವಾಗಿದೆ. ಹುಬ್ಬಳ್ಳಿಯಲ್ಲಿ ಸವಾಯಿ ಗಂಧರ್ವ ಕಲಾಭವನ ನಿರ್ಮಿತವಾಗಿದೆ. ಗಂಗೂಬಾಯಿ ಹಾನಗಲ್ ಸವಾಯಿ ಗಂಧರ್ವರ ಪುತ್ಥಳಿ ಮಾಡಿಸಿಕೊಟ್ಟಿರುವರು.

ಸವಾಯಿ ಗಂಧರ್ವರು ಪಂ. ಫಿರೋಜ ದಸ್ತೂರ, ಗಾನಗಂಗೆ ಡಾ. ಗಂಗೂಬಾಯಿ ಹಾನಗಲ್, ಭಾರತರತ್ನ ಪಂ. ಭೀಮಸೇನ ಜೋಶಿಯಂತಹ ಶಿಷ್ಯರತ್ನರನ್ನು ಸಂಗೀತಲೋಕಕ್ಕೆ ನೀಡಿದ್ದಾರೆ.

■■■



ಪಂ. ಪಂಚಾಕ್ಷರಿ ಗವಾಯಿಗಳು

# ಗಾನಯೋಗಿ ಶಿವಯೋಗಿ
# ಪಂ. ಪಂಚಾಕ್ಷರಿ ಗವಾಯಿಗಳು
## (೧೮೯೨-೧೯೪೪)

● ಪಂ. ಎಂ. ವೆಂಕಟೇಶಕುಮಾರ

ಕೋಟ್ಯಂತರ ಜನ ವಾಸಿಸುವ ಈ ಜಗತ್ತಿನಲ್ಲಿ ತಮ್ಮ ಬದುಕನ್ನು ನಿಃಸ್ವಾರ್ಥಪೂರ್ಣವಾಗಿ, ಸಂಪೂರ್ಣ ಶುದ್ಧವಾಗಿ, ಸಮೃದ್ಧಭರಿತ ಜ್ಞಾನಪೂರ್ಣತೆಯಿಂದ ಸಾರ್ಥಕವಾಗಿಸಿಕೊಂಡವರು ತುಂಬಾ ವಿರಳ. ಆ ವಿರಳರಲ್ಲಿ ಕೆಲವರು ಪ್ರಾತಃಸ್ಮರಣೀಯರು. ಅಂತಹ ಪ್ರಾತಃಸ್ಮರಣೀಯರಲ್ಲೊಬ್ಬರು ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳು. ಬದುಕಿಗೆ ಬೆಳಕು ಕಣ್ಣುಗಳು, ಜಗತ್ತನ್ನು, ದೇವಸೌಂದರ್ಯವನ್ನು ಕಾಣಲು ಕಣ್ಣುಗಳು ಬೇಕೇ ಬೇಕು. "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಮ್". "ನಯನ ಕುಂದದ ಜ್ಯೋತಿ" ಎಂದ ಶರಣ ಮಲ್ಲಯ್ಯ, "ಎನ್ನ ಕಂಗಳ ಸಿಂಹಾಸನವ ಮಾಡಿದಿರಯ್ಯಾ" ಎಂದ ಷಣ್ಮುಖ ಶಿವಯೋಗಿ, ಈ ಹೇಳಿಕೆಗಳಿಂದ ಕಣ್ಣೇ ಬದುಕು, ಬದುಕಿನ ಬೆಳಕು. ಕಣ್ಣಿಲ್ಲದ ಬದುಕು ಬರಡು, ಕೊನರದ ಕೊರಡು ಎಂಬುದು ಯಾರಿಗಾದರೂ ಮನವರಿಕೆಯಾಗುವ ವಿಷಯವಾಗಿದೆ.

ಇಲ್ಲಿ ಈ ಕಣ್ಣುಗಳ ಮಹತ್ವದ ಬಗೆಗಿನ ಹೇಳಿಕೆಯ ಔಚಿತ್ಯವನ್ನು ಯೋಚಿಸಲಾಗಿ ಪಂಚಾಕ್ಷರಿ ಗವಾಯಿಗಳು ಜನ್ಮತಃ ಅಂಧರು. ಭೌತಿಕದೃಷ್ಟಿ ವಂಚಿತರಾದ ಇವರು ನಿರ್ಗತಿಕ ಕುರುಡ-ಕುಂಟರಾದಿಗಳ ಉದ್ಧಾರಕ್ಕೆ, ರಾಜ-ಮಹಾರಾಜರು ಗಮನ ಹರಿಸದಿದ್ದ ಕಾಲದಲ್ಲಿ, ಕುರುಡಾದಿಗಳ ಬದುಕು ಭವ್ಯವಾಗಿಸಿದ, ಧ್ವನಿಗುಂದಿದ ಮಾತೆ ಸರಸ್ವತಿಗೆ ಕಂಠದಾನಮಾಡಿದ ಶುದ್ಧ ಸಂಸ್ಕಾರಯುತ ಅದ್ಭುತ ಕ್ರಾಂತಿಯನ್ನು, ಪವಾಡ ಸದೃಶವಾಗಿ ಮಾಡಿದವರಾಗಿದ್ದಾರೆ. ಇಂತಹ ಮಹಾಚೇತನವೊಂದು ನಮ್ಮ ಕನ್ನಡನಾಡಲ್ಲಿ ಸಂಗೀತಸಂಸ್ಕೃತಿ ಸದಾ ಬೆಳಗುವಂತೆ ಮಾಡಿದ್ದು, ಕನ್ನಡ ನಾಡಿನ ಹೆಮ್ಮೆ. ಜಗತ್ ಜನಜನಿತವಾದ ಹೇಳಿಕೆಯಂತೆ ಪ್ರತಿಭೆಯು ಯಾವಾಗಲೂ ಗುಡಿಸಲಿನಲ್ಲಿ ಅರಳುವಂತೆ ಪಂಚಾಕ್ಷರಿ ಗವಾಯಿಗಳ ಬಾಲ್ಯವನ್ನು ಗಮನಿಸಲಾಗಿದೆ.

ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಕಾಡಶೆಟ್ಟಿಹಳ್ಳಿ ಒಂದು ಚಿಕ್ಕ ಊರು. ಅದಕ್ಕೆ ಇಂದು ಖ್ಯಾತಿ ಸಂದಿರುವುದು ಪಂಚಾಕ್ಷರಿ ಗವಾಯಿಗಳ ಜನ್ಮಸ್ಥಳವೆಂದು. ಅವರ ಮೂಲ ಹೆಸರು ಗದಿಗೆಯ್ಯಾ. ಹುಟ್ಟು ಕುರುಡರಾಗಿ ಗದಿಗೆಯ್ಯಾ ಜನಿಸಿದ್ದು ಫೆಬ್ರುವರಿ ೨, ೧೮೯೨ ರಂದು. ತಂದೆ ಗುರುಪಾದಯ್ಯ, ತಾಯಿ ನೀಲಮ್ಮನವರು. ಮೊದಲ ತುತ್ತಿಗೆ ಹರಳು ಬಂದಿತೆಂಬ ವಿಷಗಾದೆಯಂತೆ ಇವರಿಗೆ ಪ್ರಥಮ ಪುತ್ರ ಗುರುಬಸಯ್ಯಾ ಕುರುಡನಾಗಿ ಹುಟ್ಟಿದ್ದಾನೆ. ಈಗ ಎರಡನೆಯ ಪುತ್ರ ಗದಿಗೆಯ್ಯಾ ಸಹಿತ ಜನ್ಮಾಂಧರು. ಸಹಜವೆಂಬಂತೆ ತಂದೆ ತಾಯಿಗಳಿಬ್ಬರೂ ಚಿಂತಾಕ್ರಾಂತರಾಗಿದ್ದರು.

ಮನೆಗೆಲಸದಲ್ಲಿ ತಾಯಿ ಹಾಡುವ ಜನಪದ ಗೀತೆಗಳನ್ನು, ಲಿಂಗಪೂಜೆಯಲ್ಲಿ ತಂದೆ ಹಾಡುವ ದೇವರ ನಾಮಗಳನ್ನು ಕೇಳಿ ಕಲಿತು ಸುಮಧುರವಾಗಿ ಹಾಡುತ್ತಿದ್ದರು ಗದಿಗೆಯ್ಯನವರು.

ಬಾಲಕ ಗದಿಗೆಯ್ಯನ ಮೇಲೆ ಯುಗಪುರುಷ ಹಾನಗಲ್ ಕುಮಾರ ಶಿವಯೋಗಿಗಳ ಕೃಪಾದೃಷ್ಟಿ ಬಿತ್ತು. ಕುಮಾರ ಶಿವಯೋಗಿಗಳು ಅವರನ್ನು ಹಾನಗಲ್ಲಿನ ಮಠಕ್ಕೆ ಕರೆತಂದರು. ಮುಂದೆ ಭವಿಷ್ಯತ್ತಿನಲ್ಲಿ ಸಂಗೀತಸೌಗಂಧ ಬೀರಬಲ್ಲ ಸ್ವರಪಾರಿಜಾತವಾಗುತ್ತಾರೆ ಎಂಬುದನ್ನು ಅರಿತುಕೊಂಡ ತ್ರಿಕಾಲಜ್ಞಾನಿ ಕುಮಾರ ಶಿವಯೋಗಿಗಳು ಇವರಿಗೆ ಸಂಗೀತ ಕಲಿಸುವ ಏರ್ಪಾಡು ಮಾಡಿದರು. ಆಗೆಲ್ಲ ಉತ್ತರ ಕರ್ನಾಟಕದಲ್ಲಿ ಕರ್ನಾಟಕಿ ಸಂಗೀತವೇ ಪ್ರಚಲಿತವಾಗಿತ್ತು. ಹಿಂದುಸ್ತಾನಿ ಸಂಗೀತದ ಸೊಲ್ಲಿರಲಿಲ್ಲ. ಸುಮಾರು ೧೯೦೦ ರ ಸಂದರ್ಭದಲ್ಲಿ ತಂಜಾವೂರಿನಲ್ಲಿ ಕಲಿತು ಬಂದ ಹರಪನಹಳ್ಳಿಯ ಸಂಗೀತವಿದ್ವಾನ್ ಭೀಮರಾಯರನ್ನು ಹಾನಗಲ್ಲಿಗೆ ಕರೆಯಿಸಿ, ಸಂಗೀತಪಾಠದ ವ್ಯವಸ್ಥೆ ಮಾಡಿದರು. ಕರ್ನಾಟಕಿ ಸಂಗೀತದ ಸರಳಿ, ಜಂಟಿ, ಅಲಂಕಾರ, ಸ್ವರಪಟ್ಟು, ತಾಲಪಟ್ಟು, ಸ್ವರಗೀತಾದಿಗಳನ್ನು ಕ್ರಮಬದ್ಧವಾಗಿ ಭೀಮರಾಯರಿಂದ ಕಲಿತ ಗದಿಗೆಯ್ಯರಿಗೆ ನಂತರ ಶಿರಾಳಕೊಪ್ಪದ ಗಾಯಕಶ್ರೇಷ್ಠ ಗದಿಗೆಪ್ಪಯ್ಯನವರಲ್ಲಿ ಸಂಗೀತಾಭ್ಯಾಸ ದೊರಕಿತು. ಸಂಗೀತ ಕಲಿಸಿದ ಪ್ರಸನ್ನಭಾವದಿಂದ ಗದಿಗೆಪ್ಪಯ್ಯನವರು ಶಿವಸನ್ನಿಧಿಯ ಕಂಬಲಾಶ್ವತರೇ ಈ ರೂಪದಲ್ಲಿ ಬಂದಿದ್ದಾರೆ ಎಂದು ಭಾವಿಸಿದರು. ಆದರೆ ಗದಿಗೆಯ್ಯನವರ ಜ್ಞಾನತೃಷೆ ಹಿಂಗಲಿಲ್ಲ, ಇನ್ನೂ ಕಲಿಯುವಾಸೆ. ಕುಮಾರ ಶಿವಯೋಗಿಗಳು ಗದಿಗೆಯ್ಯನನ್ನು ಮೈಸೂರಿಗೆ ಕಳುಹಿಸಿಕೊಟ್ಟರು. ಅಲ್ಲಿ ದಿನಾಲೂ ಮುಂಜಾನೆ ತಂಬೂರಿ ಬಾರಿಸುತ್ತಾ ಭಜನೆ, ತತ್ವಪದಗಳನ್ನು ಹಾಡುತ್ತಾ, ಮನೆ ಮನೆಗೆ ಹೋಗಿ ಕಂತೆಭಿಕ್ಷೆ ಸ್ವೀಕರಿಸಿ ತಂದು, ಪ್ರಸಾದ ಮಾಡುತ್ತಾ, ಬಲು ಪ್ರಯತ್ನದಿಂದ ದೊಡ್ಡ ವಿದ್ವಾಂಸರಾಗಿದ್ದ ಶ್ರೀ ವೆಂಕಟರಮಣಯ್ಯನವರ ಬಳಿ ೮-೧೦ ವರ್ಷಗಳಲ್ಲಿ ಕಲಿಯುವ ವಿದ್ಯೆಯನ್ನು ೪-೫ ವರ್ಷಗಳಲ್ಲಿ ಕಲಿತು ಮುಗಿಸಿದ. ಈತನ ಗಾಯನ ಕೇಳಿ ಸ್ವತಃ ವೆಂಕಟರಮಣಯ್ಯನವರು "ಅದ್ಭುತ ವ್ಯಕ್ತಿತ್ವದ ಹುಡುಗ" ಎಂದು ಉದ್ಗಾರ ತೆಗೆದರು. ವೀಣೆ ಶೇಷಣ್ಣನವರು ಗದಿಗೆಯ್ಯನ ಗಾಯನವಿದ್ಯೆಯನ್ನು ವಿಶೇಷವಾಗಿ ಮೆಚ್ಚಿಕೊಂಡು ಮಹಾರಾಜರ ದರ್ಶನ ಪಡೆಯುವಂತೆ ಸೂಚಿಸಿದರು. ತಮ್ಮ ಗುರುಗಳಾದ "ಕುಮಾರ ಶಿವಯೋಗಿಗಳ ಅಪ್ಪಣೆಯಾದರೆ, ಮೈಸೂರರಸರ ದರ್ಶನ ಮಾಡ್ತೀನಿ" ಎಂದು ಮೈಸೂರಿನಿಂದ ಹೊರಟು ಗಾನಶಾರ್ದೂಲ ಗದಿಗೆಯ್ಯ ಕುಮಾರ ಶ್ರೀಗಳ ದರ್ಶನಕ್ಕೆಂದು ಶಿವಯೋಗ ಮಂದಿರಕ್ಕೆ ಬಂದರು.

ಡಿಸೆಂಬರ್ ೨೮, ೨೯, ೩೦, ೧೯೦೮ ರಂದು ಬಾಗಲಕೋಟೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ನಾಲ್ಕನೆಯ ಅಧಿವೇಶನದಲ್ಲಿ ಗದಿಗೆಯ್ಯನ ಸಂಗೀತ ಕಛೇರಿ ಏರ್ಪಡಿಸಿ "ಪಂಡಿತ ಪಂಚಾಕ್ಷರಿ ಗವಾಯಿಗಳು" ಎಂಬ ನೂತನ ಅಭಿಧಾನವಿರಿಸಿ ಹಾನಗಲ್ ಶಿವಯೋಗಿಗಳು ಆಶೀರ್ವದಿಸಿದರು. ಸಭಾಸದರು "ಪಂಚಾಕ್ಷರಿ ಗವಾಯಿಗಳಿಗೆ ಜಯವಾಗಲಿ" ಎಂದು ಜಯಘೋಷ ಮಾಡಿದರು.. ಮುಂದೆ ಪಂಚಾಕ್ಷರಿ ಗವಾಯಿಗಳು ಶ್ರೀ ಮ.ಘ.ಚ. ಪ್ರಭುಕುಮಾರ ಶಿವಾಚಾರ್ಯರಿಂದ ಶಿವದೀಕ್ಷೆ ಜಂಗಮಯ್ಯಾಚಾರ ಪಡೆದರು. ದಿನಗಳು ಸಾಗಿರಲು ಕುಮಾರಶ್ರೀಗಳು ತಮ್ಮ

ಶಿಷ್ಯರಾದ ಪಂ. ದ್ಯಾಪಾಪುರದ ಬಸವಲಿಂಗ ಶಾಸ್ತ್ರಿಗಳಲ್ಲಿ ಪಂಚಾಕ್ಷರಿ ಗವಾಯಿಗಳು ಕೀರ್ತನೆ ಕಲಿಯುವ ವ್ಯವಸ್ಥೆ ಮಾಡಿದರು. ಹೀಗೆ ಪಂಚಾಕ್ಷರಿ ಗವಾಯಿಗಳ ವಿದ್ವತ್ತನ್ನು ತಿಳಿದ ಜನ ಒಮ್ಮೆ ಸಂಗೀತ ಕಾರ್ಯಕ್ರಮ, ಒಮ್ಮೆ ಕೀರ್ತನ ಕಾರ್ಯಕ್ರಮ ಆಯೋಜಿಸುತ್ತಿದ್ದರು. ಪಂಚಾಕ್ಷರಿಯವರು ಸಂಗೀತ ವೇದಿಕೆಯಲ್ಲಿ ಪ್ರಭಾವಿ ಗಾಯಕ, ಕೀರ್ತನ ವೇದಿಕೆಯಲ್ಲಿ ಪರಿಣಾಮಕಾರಿ ಪ್ರವಚನಕಾರ ಎಂಬ ಶಹಭಾಷ್‌ಗಿರಿಗೆ ಪಾತ್ರರಾದರು. ಕಲಿಕೆಯ ತೃಷೆ ಹಿಂಗದ ಪಂಚಾಕ್ಷರಿ ಗವಾಯಿಗಳವರ ಉತ್ತರಾದಿ ಸಂಗೀತ ಕಲಿಯುವ ಆಸೆಯನ್ನು ಕುಮಾರ ಶಿವಯೋಗಿಗಳು ತಿಳಿದು, 'ತಥಾಸ್ತು' ಎಂದು ಆಶೀರ್ವದಿಸಿ, ಮಹಾನ್ ಗಾಯಕರಾದ ಮಿರಜದ ನೀಲಕಂಠ ಬುವಾಅವರಿಂದ ಉತ್ತರಾದಿ ಸಂಗೀತಪಾಠ ಹೇಳಿಸಲಣಿ ಮಾಡಿದರು. ಕಷ್ಟಪಟ್ಟು ಪಂಚಾಕ್ಷರಿಯವರು ೨–೩ ವರುಷದಲ್ಲಿ ಹಿಂದುಸ್ತಾನಿ ಹಾಡುಗಾರಿಕೆಯಲ್ಲಿ ಧೀರೋದಾತ್ತ ಗವಾಯಿಯಾದರು.

ಸಮಾಜಸೇವೆಯ ರೂಪದಲ್ಲಿ ಕುಮಾರ ಮಹಾಸ್ವಾಮಿಗಳ ಆಶೀರ್ವಾದದಿಂದ ಪಂಚಾಕ್ಷರಿ ಗವಾಯಿಗಳು ಶಿವಯೋಗ ಮಂದಿರದಲ್ಲಿ ಸಂಗೀತಶಾಲೆ ಆರಂಭಿಸಿದರು. ಊಟ, ಬಟ್ಟೆ, ವಸತಿಯನ್ನಿತ್ತು, ಉಚಿತವಾಗಿ ಸಂಗೀತ, ಕೀರ್ತನಾದಿ ಕಲಿಸಲಾರಂಭಿಸಿದರು. ನಿಧಾನವಾಗಿ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಾ ಸಾಗಿತು. ಇದು ದಕ್ಷಿಣ ಭಾರತದಲ್ಲಿಯೇ ಪ್ರಥಮ ಸಂಗೀತ ಶಾಲೆ. ಜೊತೆಗೆ ಪಂಚಾಕ್ಷರಿ ಗವಾಯಿಗಳು ಅಂಧ ಅನಾಥರಿಗೆ, ಶಿಷ್ಯರಿಗೆ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯವನ್ನು ಕಲಿಸುವ ವ್ಯವಸ್ಥೆ ಮಾಡಿದರು. ಸಂಸ್ಕೃತ ಪಂಚ ಮಹಾಕಾವ್ಯ ಮತ್ತು ಕನ್ನಡದ ಶಬರಶಂಕರವಿಳಾಸ, ರಾಜಶೇಖರವಿಳಾಸ, ಜೈಮಿನಿಭಾರತ ಇತ್ಯಾದಿ. ಗವಾಯಿಗಳ ಈ ನಿಷ್ಕಾಮಕರ್ಮ ವರಕವಿ ಬೇಂದ್ರೆ, ವಚನಪಿತಾಮಹ ಫ.ಗು. ಹಳಕಟ್ಟಿ ಮತ್ತು ರಂಗನಿರ್ದೇಶಕ ಗರುಡ ಸದಾಶಿವರಾಯರಂಥವರ ಪ್ರಶಂಸೆಗೆ ಪಾತ್ರವಾಯಿತು. ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ, ಮುಂತಾದವರ ವಚನಗಳನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿದ ಮೊದಲಿಗರು ಪಂಚಾಕ್ಷರಿ ಗವಾಯಿಗಳು. ತಮ್ಮ ಬಾಲಶಿಷ್ಯರ ಗಿಳಿವಿಂಡನ್ನು ಸೊಲ್ಲಾಪುರಕ್ಕೆ ಕರೆದೊಯ್ದು ೧೯೩೨ ರಲ್ಲಿ ವಚನಗಾಯನದ ಪ್ರಥಮ ಸಾರ್ವಜನಿಕ ಕಾರ್ಯಕ್ರಮ ನೀಡಿದರು. ಕೆಲವು ವರ್ಷಗಳ ಕಾಲದಲ್ಲಿ ನಿಡಗುಂದಿ ಕೊಪ್ಪದಲ್ಲಿದ್ದ "ಸಂಚಾರಿ ಸಂಗೀತ ಪಾಠಶಾಲೆ" ಹೆಸರಿಗೆ ತಕ್ಕಂತೆ ಕಾರ್ಯಾರಂಭ ಮಾಡಿತು. ಹಳ್ಳಿ ಪಟ್ಟಣಗಳಲ್ಲಿ, ವರ್ಷದುದ್ದಕ್ಕೂ ನಿರಂತರವಾಗಿ ಸಂಚರಿಸುತ್ತಾ, ಸಂಗೀತ, ಕೀರ್ತನ ಕಾರ್ಯಕ್ರಮಗಳನ್ನು ಮಾಡುತ್ತಾ, ಭಕ್ತರೊಲಿದಿತ್ತ ಧನ, ಧಾನ್ಯಾದಿಗಳಿಂದ ಪಾಠಶಾಲೆಯ ಮಕ್ಕಳ ಲಾಲನೆ, ಪೋಷಣೆ ಮಾಡುತ್ತಾ, ವಿದ್ಯಾದಾನ ಮಾಡಿದ ಶ್ರಮವಂತ ಬದುಕು ಪಂಚಾಕ್ಷರಿಯವರದು.

ಪಂಚಾಕ್ಷರಿಯವರು ಮತ್ತು ಅವರ ಶಿಷ್ಯಬಳಗ ಮೈಸೂರರಸರ ಆಶ್ರಯ ಬಯಸಿ ಮಾಡಿದ್ದ ಮೈಸೂರು ಪ್ರವಾಸ, ಗಾಳಿಗೆ ಗುದ್ದಿ ಮೈ ನೋವು ಮಾಡಿಕೊಂಡಂತೆ ಬರೀ ಆಯಾಸವಾಗಿತ್ತು. ಇದರಿಂದಾಗಿ ಮೈಸೂರುಪ್ರಯಾಣ ಸಾಲಕ್ಕೆ ಕಾರಣವಾಯ್ತು. ಅದನ್ನು ತೀರಿಸಲು ಬೆಂಗಳೂರಿನಲ್ಲಿ ಸಾಲ ಮಾಡಬೇಕಾಯ್ತು. ಇದನ್ನೆಲ್ಲಾ ತೀರಿಸಲು ಅವರು ತಮ್ಮ ಶಿಷ್ಯ ಪುಟ್ಟರಾಜರ ಸಲಹೆಯಂತೆ ಕ್ರಿ.ಶ. ೧೯೩೯ ನೇ ಇಸ್ವಿ ಬಸವಜಯಂತಿಯ ಶುಭದಿನದಂದು "ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟ್ಯ

ಸಂಘ" ಸ್ಥಾಪಿಸಿದರು. ಇದರಿಂದಾಗಿ ಜನಮನದಲ್ಲಿ ಭಕ್ತಿ, ಧಾರ್ಮಿಕ ಶ್ರದ್ಧೆ ಮೂಡಿಸುವ ಕ್ರಾಂತಿಯೇ ಆಯಿತು.

ಪಂಚಾಕ್ಷರಿ ಗವಾಯಿಗಳ ಸಮಾಜಮುಖಿಯಾದ ಈ ದಣಿವಿರದ ಸೇವೆಯನ್ನು ಮನಗಂಡ "ಬರಗಾಲಬಂಟ ಬಸರೀಗಿಡದ ವೀರಣ್ಣ" ನೆಂದು ಪ್ರಸಿದ್ಧರಾದ ವೀರಪ್ಪನವರು "ಮೊದಲು ಗವಾಯಿಗಳ ಹಾಗೂ ಅನಾಥ ಅಂಧಮಕ್ಕಳ ಯೋಗಕ್ಷೇಮ" ನಂತರ "ನನ್ನ ಮೋಟಾರ್ ಕಂಪನಿ ಹಾಗೂ ಮನೆಯ ಯೋಗಕ್ಷೇಮ" ಎಂದು ತಮ್ಮ ಹೊಲವನ್ನು ಪಂಚಾಕ್ಷರಿ ಗವಾಯಿಗಳ ನಿಃಸ್ವಾರ್ಥಕಾರ್ಯಕ್ಕೆ ದಾನ ಮಾಡಿದರು. ಮುಂದೆ ಅದೇ 'ವೀರೇಶ್ವರ ಪುಣ್ಯಾಶ್ರಮ' ಎಂದು ಪ್ರಸಿದ್ಧಿಯಾಯಿತು. ಇಲ್ಲಿ ಪಂಚಾಕ್ಷರಿ ಗವಾಯಿಗಳು ನೆಲೆಸುವಂತಾಗಿ ಸಂಗೀತ, ಶಾಸ್ತ್ರಾದಿ ಅಭ್ಯಾಸ ಮುಂದುವರಿಯಿತು. ಸಂಚಾರಿ ಶಾಲೆ ಪುಟ್ಟರಾಜರ ನೇತೃತ್ವದಲ್ಲಿ ಮುಂದುವರೆಯಿತು.

ಈ ರೀತಿಯಾಗಿ ಕಬ್ಬರಿದಂತೆ ಕಷ್ಟಪಟ್ಟು ಸಮಾಜಕ್ಕೆ ಸಿಹಿ ನೀಡಿದ ಪಂಚಾಕ್ಷರಿ ಗವಾಯಿಗಳ ವ್ಯಕ್ತಿತ್ವ ಸಾಟಿಯಿಲ್ಲದ್ದು ಎಂಬುದನ್ನು ಅವರ ಜೀವನದ ಕೆಲವು ಸಂಗತಿಗಳಿಂದ ತಿಳಿಯಬಹುದಾಗಿದೆ. ಪಂಚಾಕ್ಷರಿಯವರ ಸಂಗೀತ ಕೀರ್ತಿವಾರ್ತೆ ಕೇಳಿದ ಮುಂಬೈನ ಹಚ್.ಎಂ.ವಿ. ಕಂಪನಿ ಗೀತೆಗಳ ಧ್ವನಿಮುದ್ರಣಕ್ಕಾಗಿ ಆಹ್ವಾನಿಸಿತು. ನಂತರ ಆ ಹೆಚ್.ಎಂ.ವಿ. ರಿಕಾರ್ಡ್ ಕಂಪೆನಿಯ ಅಧಿಕಾರಿ "ಮಾರಾಟದ ದೃಷ್ಟಿಯಿಂದ ಕೇವಲ ಮರಾಠಿ ಹಾಡುಗಳನ್ನು ಹಾಡಬೇಕು" ಎಂದು ಹೇಳಿದಾಗ ಪಂಚಾಕ್ಷರಿ ಗವಾಯಿಗಳು "ನನ್ನ ಸಂಗೀತ ಮಾರಾಟಕ್ಕಿರಿಸುವ ಅಗ್ಗದ ಪ್ರಸಾರವಲ್ಲ, ಹಾಡೆಂದರೆ ಕೇವಲ ಕನ್ನಡ ಗೀತೆಗಳನ್ನು ಹಾಡುತ್ತೇನೆ, ರಿಕಾರ್ಡ್ ಮಾಡಿಕೊಳ್ಳಿ, ಇಲ್ಲವಾದರೆ ಇಲ್ಲ" ಎಂದು ಖಡಾಖಂಡಿತವಾಗಿ ಹೇಳಿದರು. ಕ್ಷಮೆ ಕೇಳಿಕೊಂಡ ಅಧಿಕಾರಿ ಕನ್ನಡ ಗೀತೆಗಳಿಗೆ ರಿಕಾರ್ಡಿಂಗ್ ವ್ಯವಸ್ಥೆ ಮಾಡಿದರು. ಸ್ವಾತಂತ್ರ್ಯ ಹೋರಾಟಗಾರ ಧನಶೆಟ್ಟಿ ಮಲ್ಲಪ್ಪನವರ ಪರಿಚಯದಿಂದ ಸ್ಫೂರ್ತಿಪಡೆದ ಪಂಚಾಕ್ಷರಿಯವರು ತಾವು ಬೆಳಗಾವಿಗೆ ಬಂದಾಗ ಗಾಂಧೀಜಿಯವರ ದರ್ಶನದಿಂದ ಉತ್ತೇಜಿತರಾಗಿ ಖಾದಿಬಟ್ಟೆ ಧರಿಸಿದರು. ಬೆಳಗಾವಿ ಹತ್ತಿರದ ಶಹಾಪುರದ ಕೋಂಕಾಳಿಮಠದ ಸ್ವಾಮಿಯ ಮಗ ಶಿವಪುತ್ರಯ್ಯನ ಗಾಯನ ಕೇಳಿ ಈತ "ಗಂಧರ್ವಕುಮಾರ" ನೆಂದು ಆಶೀರ್ವದಿಸಿದರು. ಮುಂದೆ ಅದೇ ಶಿವಪುತ್ರಯ್ಯ ಕುಮಾರ ಗಂಧರ್ವರೆಂದು ಪ್ರಸಿದ್ಧಿ ಪಡೆದುದು ಜಗತ್ತಿಗೇ ಗೊತ್ತು. ಕುಮಾರ ಗಂಧರ್ವರು "ತಮ್ಮ ಶ್ರೇಯಸ್ಸಿಗೆ ಪಂಚಾಕ್ಷರಿ ಗವಾಯಿಗಳ ಆಶೀರ್ವಾದವೇ ಕಾರಣ" ಎಂದು ನೆನಪಿಸಿಕೊಳ್ಳುತ್ತಿದ್ದರು.

ಅದೇ ರೀತಿಯಾಗಿ ಪಂ. ಗುರುರಾವ್ ಜೋಶಿಯವರ ಪುತ್ರ ಭೀಮರಾಯರನ್ನು ಹರಸಿದ ಪಂಚಾಕ್ಷರಿ ಗವಾಯಿಗಳು 'ಈತ ಸಂಗೀತ ಕಲಿತರೆ ಭೀಮಸೇನನಾಗುತ್ತಾನೆ' ಎಂದರು. ಹಾಗೆಯೇ ಮುಂದೆ ಅವರು ಭಾರತರತ್ನ ಪಂ. ಭೀಮಸೇನ ಜೋಶಿ ಎಂದು ಹೆಸರಾದರು.


ಹುಬ್ಬಳ್ಳಿಯ ದತ್ತೋಪಂತ ದೇಸಾಯಿಯವರು, ಸುಮಧುರ ಕಂಠದ ಪುತ್ರಿ "ಗಂಗೂಗೆ ಕಲಿಸಿರಿ" ಎಂದು ಪಂಚಾಕ್ಷರಿ ಗವಾಯಿಗಳ ಬಳಿ ಕೇಳಿಕೊಂಡಾಗ "ಈಕೆ ಸಂಗೀತಸರಸ್ವತಿಯ ವರಪುತ್ರಿ" ಎಂದು ಹರಸಿ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಮಾಡಿದಾಗ

ಪಾಠ ಹೇಳಿದರು. ಈಕೆಯೇ ಮುಂದೆ ಸಂಗೀತಲೋಕದ ಸಾಮ್ರಾಜ್ಞೆಯಾಗಿ ಹೆಸರಾದರು.

ಪಂಚಾಕ್ಷರಿ ಗವಾಯಿಗಳ ಶಿಷ್ಯಬಳಗ ದೊಡ್ಡದು. ಅದರಲ್ಲಿ ಕೆಲವರು; ಮೃತ್ಯುಂಜಯಸ್ವಾಮಿ ಪುರಾಣಿಕಮಠ, ಬಸವರಾಜ ರಾಜಗುರು, ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ಅರ್ಜುನಸಾ ನಾಕೋಡ, ಚಂದ್ರಶೇಖರಸ್ವಾಮಿ ಪುರಾಣಿಕಮಠ, ಆರ್.ವಿ. ಶೇಷಾದ್ರಿ ಮುಂತಾದವರು. ಗಂಗಾಧರಶಾಸ್ತ್ರಿ ಚಿತ್ತರಗಿ, ಶಿವಮೂರ್ತಿಸ್ವಾಮಿ ದೇವಗಿರಿ ಮುಂತಾದವರು ರಂಗಭೂಮಿಯಲ್ಲಿ ಬೆಳಗಿ ಕನ್ನಡ ನಾಟ್ಯಕಲೆಯ ಹಿರಿಮೆ ಮೆರೆದರು.

ತಮ್ಮ ತಾರುಣ್ಯಾವಸ್ಥೆಯಲ್ಲಿ ಬಯಸಿದ್ದ ಸಂಸಾರಿಯಾಗಬೇಕೆಂಬ ತಮ್ಮ ಇಚ್ಛೆಯನ್ನು ಬದಿಗೊತ್ತಿ "ಕುಮಾರ ಶಿವಯೋಗಿಯೇ ಆರಾಧ್ಯ ದೈವ, ಸಕಲಜಾತಿಯ ಅಂಧ-ಅನಾಥರಿಗೆ ವಿದ್ಯಾದಾನ ಮಾಡುವುದೇ ನಿಜಪೂಜೆ" ಎಂದು ಸಮಾಜಮುಖಿಯಾಗಿ ಬ್ರಹ್ಮಚರ್ಯವನ್ನೂ ಪಾಲಿಸಿದರು. ಇಂತಹ ಚೇತನ ಜೂನ್ ೧೧, ೧೯೪೪ ರಂದು ಶಿವಪೂಜೆಯಲ್ಲಿ ಶಿವನಿಗೆ ಬಿಲ್ವಪತ್ರಿಯನ್ನು ನೀಡುತ್ತಾ, ತಮ್ಮನ್ನೇ ಶಿವನಿಗೆ ಅರ್ಪಿಸಿಕೊಂಡರು. ಅಂದಿಗೆ ಪಂಚಾಕ್ಷರಿ ಎಂಬ ದಿವ್ಯ ಚೇತನ ಅಚಿತರ್ಧಾನವಾಯಿತು.

■ ■ ■



ಪಂ. ಮಲ್ಲಿಕಾರ್ಜುನ ಮನಸೂರ

# ಸಂಗೀತ ಶಿವಯೋಗಿ

# ಪಂ. ಮಲ್ಲಿಕಾರ್ಜುನ ಮನಸೂರ

## (೧೯೧೦-೧೯೯೨)

● ಡಾ. ಮೃತ್ಯುಂಜಯ ಶೆಟ್ಟರ

ವಿಶ್ವವಿಖ್ಯಾತ ಸಂಗೀತ ಸಾಮ್ರಾಟ್ ಪಂ. ಡಾ॥ ಮಲ್ಲಿಕಾರ್ಜುನ ಮನಸೂರರ ಗಾಯನದ ಆಳೆತ್ತರಗಳನ್ನು ಅರಿತ ವಿಖ್ಯಾತ ಮರಾಠಿ ಲೇಖಕ, ಸಂಗೀತಗಾರ, ವಿಮರ್ಶಕ ಶ್ರೀ ಪು.ಲ.ದೇಶಪಾಂಡೆ :- "ನಾನು ದೇವರನ್ನು ಕಾಣಲು, ಪಾಪವನ್ನು ತೊಳೆದುಕೊಳ್ಳಲು ಕಾಶಿ, ಕೇದಾರಗಳಿಗೆ ಹೋಗುವುದಿಲ್ಲ, ಧಾರವಾಡಕ್ಕೆ ಹೋಗುತ್ತೇನೆ. ಮನಸೂರರ ಗಾಯನ ಕೇಳಿದರೆ ಸಾಕು, ಪಾಪ ಕಳೆಯುತ್ತದೆ, ಅವರ ಗಾನಸಾಗರದಲ್ಲಿ ಮಿಂದು ಪುನೀತನಾಗಿ, ಪಾವನನಾಗಿ, ಹೊಸ ಮನುಷ್ಯನಾಗುತ್ತೇನೆ" ಎನ್ನುತ್ತಿದ್ದರು.

ಧಾರವಾಡಕ್ಕೆ ಬಹಳ ಹತ್ತಿರವಿರುವ ಮನಸೂರ ಎಂಬ ಹಳ್ಳಿಯಲ್ಲಿ ಡಿಸೆಂಬರ್ ೩೧-೧೯೧೦ ರಂದು ಅಮಾವಾಸ್ಯೆಯ ದಿನ, ಭೀಮರಾಯಪ್ಪ ಮತ್ತು ನೀಲಮ್ಮ ಎಂಬ ಮುಗ್ಧ ಹಾಗೂ ಭಕ್ತಿಭಾವದ ದಂಪತಿಗಳ ಉದರದಲ್ಲಿ ಜನಿಸಿದರು. ಸಂಗೀತದ ಒಂದು ಸರ್ವಶ್ರೇಷ್ಠ, ಅಮೂಲ್ಯ ರತ್ನ ವಿಶ್ವಕ್ಕೆ ಆಗಮಿಸಿದ ಅಮೃತ ಘಳಿಗೆ ಅದು ಎನ್ನಬಹುದು.

ಅವರ ತಾಯಿ ನೀಲಮ್ಮ ಹಾಗೂ ತಂದೆ ಭೀಮರಾಯಪ್ಪ ಅವರಿಗೆ ಮಗ ಮಲ್ಲಿಕಾರ್ಜುನ ವಿದ್ಯಾವಂತನಾಗಬೇಕೆಂಬ ಬಲವಾದ ಬಯಕೆ ಇತ್ತು. ಆದರೆ ತಾಯಿಯ ಕುಟ್ಟುವ-ಬೀಸುವ-ಜಾನಪದ ಹಾಡುಗಳು, ತತ್ವಪದಗಳು ಮಲ್ಲಿಕಾರ್ಜುನರಿಗೆ ಗುಂಗು ಹಿಡಿಸುತ್ತಿದ್ದವು. ಮಗನನ್ನು ಗಾಂವಠಿ ಶಾಲೆಗೆ ಸೇರಿಸಿದರು. ವಿದ್ಯೆ ಕಲಿಯುವ ಲಕ್ಷಣಗಳು ಮಗನಲ್ಲಿ ಕಾಣಲಿಲ್ಲ. ಅದೇ ಹಳ್ಳಿಯಲ್ಲಿ ಅಪ್ಪಯ್ಯ ಎಂಬುವರು ಮಲ್ಲಿಕಾರ್ಜುನರ ಅಣ್ಣ ಬಸವರಾಜರಿಗೆ ಕರ್ನಾಟಕ ಸಂಗೀತದ ಪಾಠಗಳನ್ನು ಹೇಳುತ್ತಿದ್ದರು. ಮಲ್ಲಿಕಾರ್ಜುನರು ಕೂಡ ಹೆಚ್ಚು ಒಲವನ್ನು ಸಂಗೀತದ ಕಡೆಗೆ ತೋರಿಸಿದರು. ಅಂದಿನ ಖ್ಯಾತ ನಾಟಕಕಾರರಾದ ಶ್ರೀ ವಾಮನರಾವ ಮಾಸ್ತರರ ನಾಟಕ ಕಂಪನಿಗೆ ಅಣ್ಣ ಬಸವರಾಜ ಸೇರಿಕೊಂಡರು. ಬೇಗನೆ ಶಾಲೆಯನ್ನು ಬಿಟ್ಟು ಮಲ್ಲಿಕಾರ್ಜುನರು ಕೂಡ ಹೇಗೋ ಮಾಡಿ ಮ್ಯಾನೇಜರ್ ರಾಮಚಂದ್ರಪ್ಪ ಅವರಲ್ಲಿ ಕೇಳಿಕೊಂಡು, ಅಣ್ಣನ ವಿರೋಧದ ನಡುವೆಯೂ ವಾಮನರಾವ ಮಾಸ್ತರರ ಈ ನಾಟಕ ಕಂಪನಿ ಸೇರಿದರು. ಚಿಕ್ಕವಯಸ್ಸಿನಲ್ಲಿಯೇ "ಭಕ್ತಪ್ರಹ್ಲಾದ" ದಲ್ಲಿ ಪ್ರಹ್ಲಾದ, "ಕೃಷ್ಣಲೀಲೆ" ಯಲ್ಲಿ ವಿಜಯ, "ಮಹಾನಂದಾದಲ್ಲಿ" ನಾರದ, "ಬಾಜೀರಾವ" ದಲ್ಲಿ ಸ್ವರಾಜ್ಯಲಕ್ಷ್ಮೀ, "ವರಪ್ರದಾನ" ದಲ್ಲಿ ವಿದ್ಯಾರಣ್ಯ ಮುಂತಾದ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದರು. ಅಂದಿನ ನಾಟಕಗಳು ಹಿಂದುಸ್ತಾನಿ ಸಂಗೀತ ಆಧಾರಿತ ಸುಂದರ ಹಾಡುಗಳಿಂದ ಕೂಡಿರುತ್ತಿದ್ದವು. ಅಣ್ಣ ತಮ್ಮಂದಿರು ತಮ್ಮ ಸುಶಾರೀರದಿಂದ ಪ್ರೇಕ್ಷಕಪ್ರಭುಗಳನ್ನು ಮಂತ್ರಮುಗ್ಧಗೊಳಿಸಿ

ಸಂತೋಷದ ಚಪ್ಪಾಳೆ ಗಿಟ್ಟಿಸುತ್ತಿದ್ದರು.

ಕೇವಲ ಒಂಬತ್ತು ವರುಷದವರಿದ್ದಾಗಲೇ ಸ್ವಾಮಿತ್ವಕ್ಕೆ ನಿಜವಾದ ಬೆಲೆ ಮತ್ತು ಘನತೆಯನ್ನು ತಂದುಕೊಟ್ಟ ಮಹಾನ್ ಸಂತರು, ಶಿವಯೋಗಿ ಎಂಬ ಪದಕ್ಕೆ ಅನ್ವರ್ಥಕ ಎಂಬಂತಿದ್ದ ಶ್ರೀಮದ್ ಅಥಣಿ ಶಿವಯೋಗಿಗಳ ದಿವ್ಯ ಆಶೀರ್ವಾದ ಮಲ್ಲಿಕಾರ್ಜುನರಿಗೆ ದೊರಕಿತು. "ನೀನೇನು ಯೋಚಿಸಬೇಡಾ. ಹೆಸರು ಗಳಿಸುವಿ" ಅಂದರು. ಬಹುಶಃ ಈ ಘಟನೆ ಮನಸೂರರ ಜೀವನದಲ್ಲಿ ಬಹಳ ಮಹತ್ವ ಪಡೆದಿದೆ.

ಮುಂದೆ ಪಂ. ಬಾಳಕೃಷ್ಣಬುವಾ ಇಚಲಕರಂಜಿಕರ ಅವರ ಶಿಷ್ಯರಾದ ಪಂ. ನೀಲಕಂಠಬುವಾ ಮಿರಜಕರ ಅವರು ಮಲ್ಲಿಕಾರ್ಜುನನನ್ನು ತಾವೇ ಗುರುತಿಸಿ ಅವರಿಗೆ ಆರು ವರುಷ ಸಂಗೀತ ಕಲಿಸಿದರು. ಹಗಲಿರುಳು ಕಷ್ಟಪಟ್ಟು ಗುರುಸೇವೆ ಮಾಡಿಕೊಂಡು ಸಂಗೀತಸಾಧನೆಯನ್ನು ಮಲ್ಲಿಕಾರ್ಜುನರು ಮಾಡಿದರು. ಗ್ವಾಲಿಯರ್ ಘರಾಣಿ ಪದ್ಧತಿಯಂತೆ, ಗುರುಕುಲ ಮಾದರಿ ಅನುಸಾರ ತಾಲೀಮು ದೊರೆಯಿತು. ಬಿಹಾಗ, ಮಾಲಕಂಸ, ಭೂಪ, ಕಾಮೋದ, ತೋಡಿ, ಹಮೀರ, ದರಬಾರಿ, ಯಮನ್, ಕೇದಾರ, ಪೂರಿಯಾ, ಮಾರವಾ, ಅಲ್ಹೈಯ ಬಿಲಾವಲ, ಲಲಿತ, ಮುಂತಾದ ರಾಗಗಳನ್ನು ಶಾಸ್ತ್ರಬದ್ಧವಾಗಿ ಹಾಡಲು ಸಮರ್ಥರಾದರು.

ಜೀವನದಲ್ಲಿನ ತೊಂದರೆಗಳಿಂದ ಬಳಲಿದ ಮನಸೂರರು ೧೯೩೯ ರಲ್ಲಿ ಮತ್ತೆ ನಾಟಕ ಕಂಪನಿ ಸೇರಿದರು. "ವೀರ ಅಭಿಮನ್ಯು" ನಾಟಕದಲ್ಲಿ ಇವರು ತಮ್ಮ ಗಾಯನದ ಮೂಲಕ ಶ್ರೋತೃಗಳನ್ನು ತಣಿಸಿದರು. ಶಕುನಿಯ ಪಾತ್ರ ವಹಿಸಿ ದೇಸಕಾರ ರಾಗದಲ್ಲಿನ "ರಣರಂಗದಿ ವೀರನಾಗಿ ಅರಿಯು ಪ್ರಬಲನಾಗಿ ದ್ವಾರದಿ ಬಂದು ನಿಂತಿರುವ" ಮುಂತಾದ ಹಾಡುಗಳು ಜನಪ್ರಿಯವಾದವು. ಈ ಕಷ್ಟಕಾಲದಲ್ಲಿ ಆಲದಕಟ್ಟಿ ಶಿವನಗೌಡರು ಅವರಿಗೆ ಆಸರೆಯಾಗಿ ನಿಂತರು.

೧೯೩೩ ರಲ್ಲಿ ಈಶ್ವರಪ್ಪ ಬೆಂಡಿಗೇರಿಯವರು ಎಚ್.ಎಂ.ವಿ. ಕಂಪನಿಯಿಂದ ಅಢಾಣ ರಾಗದಲ್ಲಿ "ಕಂಗನವಾ ಮೋರಾ ಹಾಥ" ಗೌಡಮಲ್ಹಾರ ರಾಗದಲ್ಲಿ "ಸಂಯ್ಯಾ ಮೋರಾರೆ ಮೈತೋ" ಧ್ವನಿಮುದ್ರಿಕೆಗಳನ್ನು ಮನಸೂರರಿಂದ ಮಾಡಿಸಿದರು. ಮಹಾರಾಷ್ಟ್ರದಲ್ಲಿ ಮನಸೂರರಿಗೆ ಪ್ರಶಂಸೆಯ ಸುರಿಮಳೆಯಾಯಿತು. ಮುಂದೆ ಎಚ್.ಎಂ.ವಿ. ಮತ್ತು ರೇನಬೋ ಕಂಪನಿಗಳು ಇವರಿಂದ ಶಂಕರಾ, ಮಾಲಕಂಸ, ಜೈಜೈವಂತಿ, ಕಾಲಿಂಗಡಾ, ಲಲಿತಾಗೌರಿ, ತೋಡಿ, ರಾಗಗಳು ಮತ್ತು ದೇಹಾತಾ ಯಾ ಶರಣಾಗತಾ ಮತ್ತು ಜ್ಯಾಂವು ಕುಚೆ ವನಮಾಲಿ ನಾಟ್ಯಗೀತೆಗಳು, ನನದಿಯಾ ಮಾರೆ ಕಾಹೇ ಬೋಲ ಠುಮರಿ, ಹಾಗೂ ಶ್ರೀ ಶಿಶುನಾಳರ ತೇರನೆಳೆಯುತಾರ ತಂಗಿ ಹಾಗೂ ನೀನೋಲಿದರೆ ಕೊರಡು ಕೊನರುವುದಯ್ಯಾ ಮುಂತಾದವುಗಳು ಬಹಳ ಪ್ರಸಿದ್ಧವಾದವು. ಆಗಲೇ ಮನಸೂರರು ಒಬ್ಬ ಅತ್ಯುತ್ತಮ ಗಾಯಕರೆಂದು ಹೆಸರು ಮಾಡುತ್ತಿದ್ದರು. ಅನೇಕ ಒಳ್ಳೆಯ ಕಾರ್ಯಕ್ರಮಗಳು ಜರುಗಿದವು.

೧೯೩೪-೩೫ ರಲ್ಲಿ ಮುಂಬೈಯಲ್ಲಿ ಮನಸೂರರು ಇರುತ್ತಿದ್ದರು. ೧೯೩೫ ರಲ್ಲಿ ಮುಂಬೈದವರಾದ ಶ್ರೀ ವಿಷ್ಣುಪಂತ ಪಾಗನೀಸ ಮರಾಠಿಯಲ್ಲಿ ಸಂತ ತುಕಾರಾಮ

ಸಿನೇಮಾ ನಿರ್ಮಿಸಿ ನಟಿಸಿದ್ದರು. ಅವರ ಅಂಗಡಿಗೆ ಮನಸೂರರು ಆಗಾಗ ಬರುತ್ತಿದ್ದರು. ಅಲ್ಲಿಯೇ ಸಂಗೀತದ ಸರ್ವಶ್ರೇಷ್ಠ ಕಲಾವಿದ ಉಸ್ತಾದ ಅಲ್ಲಾದಿಯಾ ಖಾನರ ಪುತ್ರ ಉಸ್ತಾದ ಮಂಜೀಖಾನರು ಬರುತ್ತಿದ್ದರು. ಪಾಗನೀಸರು ಮನಸೂರರನ್ನು ಉಸ್ತಾದ ಮಂಜೀಖಾನರಿಗೆ ಪರಿಚಯಿಸಿದರು. ಅವರ ರೆಕಾರ್ಡ್‌ಗಳನ್ನು ಕೇಳಿ ಮನಸೂರರನ್ನು ಶಿಷ್ಯರನ್ನಾಗಿ ಉ. ಮಂಜಿಖಾನರು ಸ್ವೀಕರಿಸಿದರು. ಉಸ್ತಾದ ಮಂಜೀಖಾನರು ಜೈಪುರ ಅತ್ರೌಲಿ ಘರಾಣೆಯ ಪದ್ಧತಿಯಲ್ಲಿ ಮನಸೂರರಿಗೆ ಸಂಗೀತ ಕಲಿಸಿದರು. ತರುವಾಯ ಅವರ ಸಹೋದರ ಉಸ್ತಾದ ಬುರ್ಜಿಖಾನರಲ್ಲಿ ಮನಸೂರರು ಕಲಿತರು.

ಆ ಕಾಲದಲ್ಲಿ ಸಂಗೀತಗಾರರ ಜೀವನ ಬಹಳ ಕಷ್ಟದಿಂದ ಕೂಡಿರುತ್ತಿತ್ತು. ಆರ್ಥಿಕವಾಗಿ ಮನಸೂರರು ಕೂಡ ನೊಂದರು, ಬೆಂದರು. ಸಣ್ಣ ವಯಸ್ಸಿನಲ್ಲಿ ಲಗ್ನವಾಗಿದ್ದರು. ಪತ್ನಿ ಗಂಗಮ್ಮ ಅವರೊಂದಿಗೆ ಧಾರವಾಡದಲ್ಲಿ ಸಂಸಾರ ಹೂಡಿದರು. ೮ ಮಕ್ಕಳ ದೊಡ್ಡ ಸಂಸಾರ. ಆಕಾಶವಾಣಿಯಲ್ಲಿ ಆಗಲಿ, ಹೊರಗೆ ಕಾರ್ಯಕ್ರಮಗಳಲ್ಲಿ ದೊರೆಯುವ ಸಂಭಾವನೆ ಅತೀ ಕಡಿಮೆ ಇರುತ್ತಿತ್ತು. ಆದರೆ ಈ ಎಲ್ಲ ಇಲ್ಲಗಳ ನಡುವೆ ಮನಸೂರರು ಹಗಲಿರುಳು ಸಂಗೀತವನ್ನು ತಪಸ್ಸನ್ನಾಗಿ ಆಚರಿಸಿ ಸಾಧನೆಗೈದರು. ಸ್ವರಸಾಧನೆಯನ್ನು ಎಂದೂ ಬಿಡಲಿಲ್ಲ. ತಮ್ಮ ಉಸಿರೇ ಸಂಗೀತ ಎಂದು ತಿಳಿದು ಆ ಸ್ವರಸಾಗರದಲ್ಲಿ ಮುಳುಗಿ ಹೋದರು. ಮುಂದೆ ಧಾರವಾಡದ ಬಹುಭಾಷಾತಜ್ಞ, ಸಂಶೋಧಕ, ಲಿಂ. ಪ್ರೋ ಶಿ.ಶಿ. ಬಸವನಾಳರ ಪರಿಚಯವಾಗಿ ಮನಸೂರರ ಜೀವನದ ಗತಿಯೇ ಬದಲಾಯಿತು. ಶಿ.ಶಿ. ಬಸವನಾಳರು ಅವರನ್ನು ಧಾರವಾಡ ಮುರುಘಾಮಠದ ಮೃತ್ಯುಂಜಯ ಅಪ್ಪಗಳ ಹತ್ತಿರ ಕರೆದುಕೊಂಡು ಹೋದರು. ಇದು ಮನಸೂರರ ಜೀವನದಲ್ಲಿ ಎಂದೂ ಮರೆಯದ ಘಟನೆ. ಶ್ರೀ ಶಿ.ಶಿ. ಬಸವನಾಳರು ಪ್ರಪ್ರಥಮವಾಗಿ ಮನಸೂರರಿಗೆ ಬಸವಾದಿ ಶರಣರ ವಚನಗಳ ಅರ್ಥ ತಿಳಿಸಿಕೊಟ್ಟರು, ಹಾಡಲು ಪ್ರೇರಣೆ ಮಾಡಿದರು. ಮುಂದೆ ಖ್ಯಾತ ಕಾದಂಬರಿಕಾರ ಅ.ನ.ಕೃ. ಅವರು ಕೂಡ ವಚನಗಳನ್ನು ಹಾಡಲು ಪ್ರೋತ್ಸಾಹಿಸಿದರು.

ಮನಸೂರರು ತಮ್ಮ ಕಂಠವನ್ನು ಹದಗೊಳಿಸಿ ಅತ್ಯಂತ "ಸುರೇಲಿ ಆವಾಜ" ಮಾಡಿಕೊಂಡರು. ಸ್ವರ, ಲಯ, ಆಲಾಪ, ಬಂದೀಷ, ತಾಳ, ಗಮಕ, ಬೋಲತಾನ, ತಾನ, ಫಿರತ, ರಾಗಶುದ್ಧತೆ ಎಲ್ಲವುಗಳನ್ನು ಗಂಭೀರವಾಗಿ ಚಿಂತಿಸಿ ಅಭ್ಯಾಸ ಮಾಡಿದರು. ಮುಂದೆ ಗ್ವಾಲಿಯರ್ ಘರಾಣೆ ಹಾಗೂ ಜೈಪುರ ಅತ್ರೌಲಿ ಘರಾಣೆ ಎರಡರಲ್ಲೂ ಭಗೀರಥ ಸಾಧನೆಗೈದರು. ನಿಧಾನವಾಗಿ ಜೈಪುರ ಘರಾಣೆಯ ಬಹಳ ದೊಡ್ಡ ಗಾಯಕರಾಗಿ ಹೊರ ಹೊಮ್ಮಿದರು. ಭಾರತದ ತುಂಬಾ ಅಭಿಮಾನಿಗಳನ್ನು ಸೃಷ್ಟಿಸಿಕೊಂಡರು. ಅವರ "ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ" ಅಕ್ಕನ ವಚನವಂತೂ ಬಹಳ ಪ್ರಸಿದ್ಧಿಯಾಯಿತು. ಅತ್ಯಂತ ಕಠಿಣವೆನಿಸುವ ಅಪ್ರಚಲಿತ ರಾಗಗಳನ್ನು ಬಹಳ ಶಾಸ್ತ್ರೀಯವಾಗಿ ಸುಂದರವಾಗಿ ಹಾಡಿದ ಅಪರೂಪದ ಗಾಯಕರು ಪಂ. ಡಾ|| ಮಲ್ಲಿಕಾರ್ಜುನ ಮನಸೂರರು. ಅಚಿತಹ ಕೆಲವು ರಾಗಗಳನ್ನು ಹೆಸರಿಸುವುದಾದರೆ ಖಟ್, ಬಿಹಾಗ್, ಬಿಹಾರಿ, ಖೋಖರ, ಸಾವನಿ ಬಿಹಾಗ, ಸಾವನಿ ಕಲ್ಯಾಣ, ಬಹಾದ್ದೂರಿ ತೋಡಿ, ಆಡಂಬರಿ ಕೇದಾರ, ಬಸಂತಿ ಕೇದಾರ, ಬಸಂತಿ ಕಾನ್ಹಡಾ, ಮಾಲವಿ, ಮೇಘಾವಲಿ, ಲಂಕಾದಹನ ಸಾರಂಗ, ಕುಕಬ್ ಬಿಲಾವಲ,

ಸೋರಟ, ಲಚ್ಚಾಸಾಗ, ರಾಮದಾಸಿ ತುಲ್ಹಾರ, ಮೀರಾಬಾಯಿ ಮಲ್ಹಾರ, ಗೌಡಮಲ್ಹಾರ, ನಟಕಾಮೋದ, ನಟಬಿಹಾಗ, ಷಟಬಿಹಾಗ, ಕಾಫಿ ಕಾನಡಾ, ಸುಗರಾಯಿ ಕಾನಡಾ, ರಾಯಿಸಾ ಕಾನಡಾ, ನಾಯಿಕಿ ಕಾನಡಾ, ಮುಲ್ತಾನಿ ಅಂಗದ, ಧನಾಶ್ರೀ, ಲಲಿತಾಗೌರಿ, ಜಯ ಜಯ ಬಿಲಾವಲ, ಪರಜ್, ಕಬೀರಿಭೈರವ, ಮುಂತಾದವುಗಳು. ಇಂತಹ ಅತ್ಯಂತ ಅನವಟ್ ರಾಗಗಳನ್ನು ಸರಳವಾಗಿ ಸಹಜವಾಗಿ ಹಾಡಬಲ್ಲ ಕಲಾವಿದ ಪಂ. ಡಾ॥ ಮಲ್ಲಿಕಾರ್ಜುನ ಮನಸೂರರು. ನಾದಪ್ರಪಂಚದಲ್ಲಿ ಅವರು ಲಯಬ್ರಹ್ಮ, ನಾದಬ್ರಹ್ಮ ಎಂದೇ ಗುರುತಿಸಲ್ಪಡುತ್ತಾರೆ. ಭಾರತದ ತುಂಬ ಅಸಂಖ್ಯಾತ ಕಾರ್ಯಕ್ರಮಗಳನ್ನು ನೀಡಿ ಜನಮನ ರಂಜಿಸಿದರು.

ಪಂ. ಡಾ॥ ಮಲ್ಲಿಕಾರ್ಜುನ ಮನಸೂರರಿಗೆ ಅನೇಕ ಪ್ರಶಸ್ತಿ, ಪ್ರಶಂಸೆ, ಮಾನ, ಸನ್ಮಾನ, ಬಿರುದು ಬಾವಲಿಗಳು ದೊರೆತವು.

೧) ೧೯೬೨ರಲ್ಲಿ ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ.

೨) ೧೯೬೮ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.

೩) ೧೯೭೦ ರಲ್ಲಿ ಭಾರತ ಸರ್ಕಾರದ "ಪದ್ಮಶ್ರೀ"

೪) ೧೯೭೨ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ

೫) ೧೯೭೬ ರಲ್ಲಿ "ಪದ್ಮಭೂಷಣ".

೬) ೧೯೭೫ ರಲ್ಲಿ ಕ.ವಿ.ವಿ. ಧಾರವಾಡ, ಗೌರವ ಡಾಕ್ಟರೇಟ್.

೭) ೧೯೭೬ ರಲ್ಲಿ ಕ.ವಿ.ವಿ. ಸಂಗೀತ ವಿಭಾಗದ ಪ್ರಥಮ ನಿರ್ದೇಶಕರು, ಧಾರವಾಡ.

೮) ೧೯೮೧ ರಲ್ಲಿ ಕ.ವಿ.ವಿ. ಧಾರವಾಡ ಪ್ರೋಫೆಸರ್ ಎಮೆರಿಟಿಸ್.

೯) ೧೯೮೮ ರಲ್ಲಿ ಕಲ್ಕತ್ತಾ ವಿಶ್ವಭಾರತಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತು ಮತ್ತು "ದೇಶಿಕೋತ್ತಮ" ಬಿರುದು ನೀಡಿತು.

೧೦) ೧೯೯೧ ರಲ್ಲಿ ಹಫೀಜ ಅಲಿಖಾನ ಪ್ರಶಸ್ತಿ.

೧೧) ೧೯೯೨ ಭಾರತ ಸರ್ಕಾರದ "ಪದ್ಮವಿಭೂಷಣ" .

೧೨) ೧೯೮೧ ಜುಲೈ ೨೧ ಮಧ್ಯಪ್ರದೇಶ ಸರಕಾರದಿಂದ "ಕಾಳಿದಾಸ" ಸಮ್ಮಾನವನ್ನು ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದ ಪಡೆದರು.

ಅವರ ಶಿಷ್ಯವರ್ಗದಲ್ಲಿ ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ಪ್ರೊ.ಎ.ಯು.ಪಾಟೀಲ, ಪಂ. ಸಿದ್ಧರಾಮ ಜಂಬಲದಿನ್ನಿ, ಪಂ. ಡಾ॥ ರಾಜಶೇಖರ ಮನಸೂರ, ಶ್ರೀಮತಿ. ನೀಲಾಂಬಿಕಾ ಕೊಡ್ಲಿ ಪ್ರಮುಖರು.

ವರಕವಿ ದ.ರಾ. ಬೇಂದ್ರೆಯವರು ಮನಸೂರರ ಸಂಗೀತ ಕೇಳಿ ಹೀಗೆ ಬರೆಯುತ್ತಾರೆ:

ಗಾಂಧರ್ವ ಮಾಯೆಯೇ ಕುಣಿದಿತಪ್ಸರೆಯಂತೆ

ಮಿಂಚು ಬೇಲಿಗೆ ಬೆಳೆದ ಸ್ವಾತಿಯಾ ಹನಿಯಂತೆ

ಕನ್ನಡದ ರಾಗವೇ ಕರ್ಮೋದೆಗೆದ್ದಂತೆ
ಮಲ್ಲಿಕಾರ್ಜುನ ಶಿಖರ ಮಲ್ಲಿಗೆಯೊಳಿದ್ದಂತೆ
ಶಿವನ ತಾಂಡವ ಮುಗಿಯೆ ಶಿವಲಾಸ್ಯಕೆದ್ದಂತೆ
ಬಿಸಿಲ್ ಹಣ್ಣನುಂಡು ಚಂದ್ರನ ಜೇನು ಮೆದ್ದಂತೆ.
ಮನಸೂರೆ ಹೋಯಿತೋ ಹೋ; ಇದ್ದಕಿದ್ದಂತೆ
ಈ ಗೀತ ಹಾಡಿದುದು ಹೊಸ ಸ್ವಪ್ನವಿದ್ದಂತೆ.
ಅಂತೆ, ಇಂತೆ, ಎನ್ನುತ್ತ ಮನ ಮೀರಿ ನಾ ನಿಂತೆ
ಕಳಿಚಿ ಬಿದ್ದಿತ್ತು ಗೆಳೆಯ
ಜಗದ ಸಂತೆಯ ಚಿಂತೆ.

ಪಂ. ಡಾ॥ ಮಲ್ಲಿಕಾರ್ಜುನ ಮನಸೂರರ ಗಾಯನವನ್ನು ಕೇಳಿದ ಭಾರತ ಭವನ, ಮಧ್ಯಪ್ರದೇಶದ ನಿರ್ದೇಶಕರಾಗಿದ್ದ ಸನ್ಮಾನ್ಯ ಅಶೋಕ ವಾಜಪೇಯಿ ಹೇಳುತ್ತಾರೆ: "ಮುಂದೆ ಎಂದಾದರೂ ಈ ಶತಮಾನದ ಸೃಜನಾತ್ಮಕತೆಯನ್ನು ಅಳೆಯಹೊರಟರೆ ಅಲ್ಲಿ ಮನಸೂರರು ನಗುವ ಸೂರ್ಯನಂತೆ ಮೇಲೆದ್ದು ಬರುತ್ತಾರೆ. ಭಾರತೀಯ ಪರಂಪರೆಯ ಗಟ್ಟಿತನಕ್ಕೆ ವ್ಯಕ್ತಿಗತ ದಾಖಲೆ ಬೇಕೆಂದರೆ ಮನಸೂರರನ್ನೇ ನೆನೆಯಬೇಕಾಗುತ್ತದೆ ನಾವು".

೧೯೯೨ರ ಸೆಪ್ಟೆಂಬರ್ ೧೨ ರಂದು ಈ ಸಂಗೀತ ಸಾಮ್ರಾಟರು ಸ್ವರಸಾಗರದಲ್ಲಿ ಲೀನರಾದರು.

**ಮನ್ಸೂರರ ಮನದಾಳದ ಮಾತು :**

೧) ಜೀವನದಲ್ಲಿ ಕಷ್ಟಗಳಿವೆ. ಆದರೆ ಸಂಗೀತದಲ್ಲಿ ಆನಂದವಿದೆ. ಆದಕಾರಣ ನಾನು ಸದಾ ಸಂಗೀತದಲ್ಲೇ ಬಾಳುತ್ತೇನೆ.

೨) ಸಂಗೀತಕಲೆ ಒಂದು ಸಾಗರವಿದ್ದಂತೆ, ಅದರ ಆಳ ನನಗೆ ತಿಳಿದಿಲ್ಲ, ನಾನು ಆ ಸಾಗರದ ಹನಿ ಮಾತ್ರ.

ಜೀವನದಲ್ಲಿ ಬರುವ ಕಷ್ಟ ನಷ್ಟವೆಲ್ಲ ಸಂಗೀತದ ಮುಂದೆ ಅಲ್ಪ ಎಂಬುದನ್ನು ಪಂ. ಡಾ॥ ಮಲ್ಲಿಕಾರ್ಜುನ ಮನಸೂರರು ಈ ವಿಶ್ವಕ್ಕೆ ತೋರಿಸಿಕೊಟ್ಟಿದ್ದಾರೆ.

■ ■ ■



ಡಾ. ಗಂಗೂಬಾಯಿ ಹಾನಗಲ್ಲ

# ಪದ್ಮವಿಭೂಷಣ ಗಾನಗಂಗೆ

# ಡಾ. ಗಂಗೂಬಾಯಿ ಹಾನಗಲ್

## (೧೯೧೩-೨೦೦೯)

● ಶ್ರೀಮತಿ ದಮಯಂತಿ ನರೇಗಲ್

ಭಾರತೀಯ ಸಂಗೀತ ಜಗತ್ತು, ಉತ್ತರ ಭಾರತದಲ್ಲಿ ಉತ್ತರಾದಿ ಅಥವಾ ಹಿಂದುಸ್ತಾನಿ ಸಂಗೀತ ಹಾಗೂ ದಕ್ಷಿಣ ಭಾರತದಲ್ಲಿ ದಕ್ಷಿಣಾದಿ ಅಥವಾ ಕರ್ನಾಟಕ ಸಂಗೀತ ಎಂದು ಎರಡು ಹೋಳಾಗಿ ಬೇರೆ ಬೇರೆ ದಿಸೆಯಲ್ಲಿಯೇ ಬೆಳೆಯುತ್ತಿದ್ದ ಕಾಲದಲ್ಲಿ ಎರಡನ್ನೂ ಒಂದೆಡೆಗೆ ತಂದು, ಎರಡೂ ಶೈಲಿಗಳನ್ನು ಉಳಿಸಿ-ಬೆಳೆಸಿದ, ಎರಡರಲ್ಲೂ ಒಂದು ಬಗೆಯ ಸಮನ್ವಯವನ್ನು ಸಾಧಿಸಿದ ಶ್ರೇಯ ನಮ್ಮ ಕನ್ನಡ ನಾಡಿಗೆ ಸಲ್ಲುತ್ತದೆ. ಅದರ ಒಂದು ಪ್ರತ್ಯಕ್ಷ ಉದಾಹರಣೆಯೆಂದರೆ ನಮ್ಮ ನಾಡಿನ ಶ್ರೇಷ್ಠ ಗಾನವಿದುಷಿ, ಪದ್ಮವಿಭೂಷಣೆ ಡಾ. ಗಂಗೂಬಾಯಿ ಹಾನಗಲ್ ಅವರು. ಅವರು ಹುಟ್ಟಿ ಬೆಳೆದ ಕಾಲವೇ ಸಂಗೀತಕ್ಷೇತ್ರದಲ್ಲಿ ಅಂಥದೊಂದು ಕ್ರಾಂತಿಯ ಕಾಲವಾಗಿತ್ತು. ಉತ್ತರದಲ್ಲಿ ಮೊಘಲ್ ರಾಜಾಶ್ರಯ ತಪ್ಪಿದ ನಂತರದ ಶತಕದಲ್ಲಿ ಉತ್ತರದ ಗಾಯಕರು ನಿಧಾನವಾಗಿ ಪಸರಿಸುತ್ತ ಮಧ್ಯಭಾರತ, ದಕ್ಷಿಣಭಾರತದಲ್ಲಿ ನೆಲೆಯೂರತೊಡಗಿದ್ದರು. ಇತ್ತ ವಿಜಯನಗರದ ಸಂಪೂರ್ಣ ವಿನಾಶದ ನಂತರ ಕರ್ನಾಟಕ ಸಂಗೀತಗಾರರಲ್ಲನೇಕರು ಮೈಸೂರು ಮಹಾರಾಜರ ಆಶ್ರಯದಲ್ಲಿ ಬಂದು ನೆಲೆಸಿದ್ದರು. ಸ್ವತಃ ಕಲಾಭಿಮಾನಿಗಳಾದ ಮೈಸೂರಿನ ಅಧಿಪತಿಗಳು ಅನೇಕ ಹಿಂದುಸ್ತಾನೀ ಸಂಗೀತಗಾರರನ್ನು ಕರೆದು ಸನ್ಮಾನಿಸತೊಡಗಿದ್ದರು, ಅನೇಕರಿಗೆ ತಮ್ಮ ಆಸ್ಥಾನದಲ್ಲಿ ಸ್ಥಾನವನ್ನು ಕೊಟ್ಟು ಗೌರವಿಸಿದ್ದರು. ಅದರಿಂದಾಗಿ ಕರ್ನಾಟಕದಲ್ಲಿ ಉತ್ತರದ ಗಾಯಕರು ಅವಿರತ ಬರು-ಹೋಗುವುದು ಪ್ರಾರಂಭವಾಗಿತ್ತು. ಈ ದೂರದ ಪ್ರವಾಸದಲ್ಲಿ ಸಹಜವಾಗಿಯೇ ಅವರಿಗೆ ಬೆಳಗಾವಿ-ಧಾರವಾಡ-ಹುಬ್ಬಳ್ಳಿಗಳು ಮಧ್ಯೆ ತಂಗುದಾಣಗಳಾದವು. ಅವರು ತಂದ ಹಿಂದುಸ್ತಾನೀ ಸಂಗೀತದ ಸುಗಂಧ ಎಲ್ಲೆಡೆಗು ಹರಡಲಾರಂಭಿಸಿತು.

ಗಂಗೂಬಾಯಿಯವರ ತಾಯಿ ಅಂಬಾಬಾಯಿಯವರನ್ನು ಉತ್ತರದಿಂದ ಬಂದ ಸಂಗೀತ ಬಲವಾಗಿ ಆಕರ್ಷಿಸಿತು. ಅವರು ಸ್ವತಃ ಕರ್ನಾಟಕಸಂಗೀತದ ಹೆಸರಾಂತ ಗಾಯಕಿಯಾಗಿದ್ದರು. ಮಗಳಿಗೆ ಆಗಲೇ ಕರ್ನಾಟಕ ಸಂಗೀತದಲ್ಲಿ ತರಬೇತಿಯನ್ನು ಕೊಡಲು ಪ್ರಾರಂಭಿಸಿದ್ದರು. ಆದರೂ ಅವರು ಗಂಗೂಬಾಯಿಗೆ ಹಿಂದುಸ್ತಾನೀ ಸಂಗೀತದ ಶಿಕ್ಷಣವನ್ನೇ ಕೊಡಿಸಬೇಕೆಂದು ನಿರ್ಧರಿಸಿದರು. ಆಗಿನ ಉತ್ತರ ಕರ್ನಾಟಕದ ಭೌಗೋಲಿಕ, ಸಾಂಸ್ಕೃತಿಕ ವಾತಾವರಣದಲ್ಲಿ ಮಗಳ ಭವಿಷ್ಯದ ದೃಷ್ಟಿಯಿಂದಲೂ ಅದೇ ಯೋಗ್ಯವಾಗಿ ಕಂಡಿತ್ತು ಅವರಿಗೆ. ಹೀಗೆ ಕರ್ನಾಟಕ ಸಂಗೀತದ ಭದ್ರ ತಳಹದಿಯ ಮೇಲೆ ಗಂಗೂಬಾಯಿಯವರ ಹಿಂದುಸ್ತಾನೀ ಸಂಗೀತಸಾಧನೆಯ ಭವ್ಯಸೌಧ

ನಿರ್ಮಾಣಗೊಂಡಿತ್ತು.

ಡಾ. ಗಂಗೂಬಾಯಿಯವರು ಹುಟ್ಟಿದ್ದು ಮಾರ್ಚ್ ೫, ೧೯೧೩ ರಂದು ಧಾರವಾಡದ ಶುಕ್ರವಾರ ಪೇಟೆಯ ಒಂದು ಹಳೆಯ ಮನೆಯಲ್ಲಿ. ಅವರ ಆ ಮನೆ ಈಗಲೂ 'ಗಂಗೋತ್ರಿ'ಯಾಗಿ ಧಾರವಾಡದಲ್ಲೊಂದು ಸಂಗೀತ ಪ್ರೇಮಿಗಳ ಯಾತ್ರಾ ಸ್ಥಳವೆಂದೆನಿಸಿಕೊಂಡು ತಲೆಯೆತ್ತಿ ನಿಂತಿದೆ. ಅಲ್ಲಿ ಪ್ರತಿವರ್ಷ ಮಾರ್ಚ್ ೫ ರಂದು ಗಂಗೂಬಾಯಿಯವರ ನೆನಪಿನಲ್ಲಿ ಅವರ ಶಿಷ್ಯ-ಶಿಷ್ಯೆಯರ ಗಾಯನ ಈಗಲೂ ಗುಂಜಿಸುತ್ತದೆ. ಆ ಮನೆಯಲ್ಲಿ ಹುಟ್ಟ ಗಂಗು ತನ್ನ ತಾಯಿ-ಅಜ್ಜಿಯರ ಮಮತೆಯ ಕುಡಿಯಾಗಿ ಬೆಳೆದಳು. ತಾಯಿ ಅಂಬಾಬಾಯಿಗೆ ಮಗಳು ಸಂಗೀತ ಕಲಿಯಬೇಕು, ಕಲಿತು ತನಗಿಂತಲೂ ಶ್ರೇಷ್ಠ ಕಲಾವಿದೆಯೆನ್ನಿಸಿಕೊಳ್ಳಬೇಕು ಎಂಬ ಹಂಬಲ, ಅಂತೆಯೇ ಆ ಚಿಕ್ಕ ವಯಸ್ಸಿನಲ್ಲಿಯೇ ಮಗಳಿಗೆ ಸಂಗೀತವನ್ನು ಸ್ವತಃ ಕಲಿಸಲಾರಂಭಿಸಿದರು. ಕರ್ನಾಟಕೀ ಸಂಗೀತದ ಅನೇಕ ಕೃತಿಗಳನ್ನು ಮಗಳಿಗೆ ಕಲಿಸುತ್ತಿರುವಾಗಲೇ ಉತ್ತರ ಭಾರತದಿಂದ ಹರಿದು ಬರುತ್ತಿದ್ದ ಹಿಂದುಸ್ತಾನೀ ಸಂಗೀತದ ಶ್ರೀಮಂತ ನಾದ ಅವರನ್ನು ಬಲವಾಗಿ ಆಕರ್ಷಿಸಿತು. ಮಗಳ ಭವಿತವ್ಯ ಹಿಂದುಸ್ತಾನೀ ಸಂಗೀತದಲ್ಲಿಯೇ ಇದೆ ಎಂಬುದನ್ನು ಗುರುತಿಸಿಕೊಂಡ ಅವರು ಹಾಗೂ ಅವರ ಪತಿ ಶ್ರೀ ಚಿಕ್ಕೂರಾವ್ ನಾಡಿಗೇರ ಅವರು ಗಂಗೂಬಾಯಿಗೆ ಹಿಂದುಸ್ತಾನೀ ಸಂಗೀತವನ್ನು ಕಲಿಸಬೇಕೆಂದು ನಿರ್ಧರಿಸಿದರು. ಆ ಉದ್ದೇಶದಿಂದ ಹುಬ್ಬಳ್ಳಿಯಲ್ಲಿ ಮನೆಮಾಡಿ ಮಗಳ ಸಂಗೀತ ಶಿಕ್ಷಣವನ್ನು ಹುಲಗೂರ ಕೃಷ್ಣಾಚಾರ್ಯರಲ್ಲಿ ಪ್ರಾರಂಭಿಸಿದರು. ಅಲ್ಲಿ ಗಂಗೂಬಾಯಿಯವರಿಗೆ ಶಿಕ್ಷಣವೇನೋ ಚೆನ್ನಾಗಿಯೇ ದೊರೆಯಿತಾದರೂ ಅದು ಬಹಳ ದಿನ ನಡೆಯಲಿಲ್ಲ, ಮತ್ತೆ ಗುರುಗಳಿಗಾಗಿ ಹುಡುಕಾಟ ಪ್ರಾರಂಭವಾಯಿತು.

ಅವರ ಕುಟುಂಬದ ಆತ್ಮೀಯರಾದ ಹುಬ್ಬಳ್ಳಿಯ ಶ್ರೀ ದತ್ತೋಪಂತ ದೇಸಾಯಿಯವರು ಸವಾಯಿ ಗಂಧರ್ವರಲ್ಲಿ ಗಂಗೂಬಾಯಿಯವರ ಶಿಕ್ಷಣ ಮುಂದುವರಿಯಬೇಕು ಎಂದು ಬಹಳ ಪ್ರಯತ್ನ ಮಾಡಿದರು. ಆದರೆ ಆಗ ಸವಾಯಿ ಗಂಧರ್ವರು ಸತತ ಪ್ರವಾಸದಲ್ಲಿರುತ್ತಿದ್ದುದರಿಂದ ಕೆಲಕಾಲ ಅದು ಶಕ್ಯವಾಗಲಿಲ್ಲ. ಆಗ ಗಂಗೂಬಾಯಿಯವರ ಸೋದರಮಾವ ಶ್ರೀ ರಾಮಣ್ಣ ಹಾಗೂ ಶ್ರೀ ದತ್ತೋಪಂತ ದೇಸಾಯಿಯವರೇ ಅವರ ತಾಲೀಮನ್ನು ಮುಂದುವರೆಸಿದ್ದರು. ಸವಾಯಿ ಗಂಧರ್ವರು ಕುಂದಗೋಳಕ್ಕೆ ಬಂದು ನೆಲೆಸಿದ ನಂತರ ಗಂಗೂಬಾಯಿಯವರನ್ನು ತಮ್ಮ ಶಿಷ್ಯೆಯಾಗಿ ಸ್ವೀಕರಿಸಿದರು. ಆಮೇಲೆ ಅವರ ಶಿಕ್ಷಣ ನಿಯಮಿತವಾಗಿ ನಡೆಯಿತು. ಗಂಗೂಬಾಯಿ ಹುಬ್ಬಳ್ಳಿಯಿಂದ ಪ್ರತಿದಿನ ಪ್ರವಾಸ ಮಾಡಿ, ಕುಂದಗೋಳಕ್ಕೆ ಹೋಗಿ, ಗುರುಗಳ ಮನೆಯಲ್ಲಿ ಸಂಗೀತವನ್ನು ಕಲಿಯತೊಡಗಿದರು. ಅವರಲ್ಲಿ ಹುದುಗಿದ ಪ್ರತಿಭೆಯನ್ನು ಕಂಡು ಗುರುಗಳು ಅವರಿಗೆ ಪ್ರೀತಿಯಿಂದ ತಮ್ಮ ವಿದ್ಯೆಯನ್ನೆಲ್ಲ ಧಾರೆಯೆರೆದರು.

ಈ ಮಧ್ಯೆ ೧೯೩೨ ರಲ್ಲಿ ತಾಯಿ ಅಂಬಾಬಾಯಿಯವರು ಆಕಸ್ಮಿಕವಾಗಿ ತೀರಿಹೋದದ್ದರಿಂದ ಸಂಸಾರದ ಜವಾಬ್ದಾರಿಯೆಲ್ಲ ಗಂಗೂಬಾಯಿಯವರ ಹೆಗಲ ಮೇಲೆ ಬಂದು ಬಿಟ್ಟಿತ್ತು. ಆ ಎಳೆವಯಸ್ಸಿನಲ್ಲಿ ಅವರು ಸಂಸಾರದ ಸಂಪೂರ್ಣ ಹೊಣೆಯನ್ನು ಹೊತ್ತು, ತಮ್ಮ ಚಿಕ್ಕ ಮಕ್ಕಳನ್ನು ಸಂಭಾಳಿಸಿಕೊಂಡು ಸಂಗೀತಸಾಧನೆಯನ್ನು ಮುಂದುವರಿಸಿಕೊಂಡು ಹೋಗಬೇಕಾಯಿತು. ಅಂತಹ ಕಷ್ಟ

ಕಾಲದಲ್ಲಿಯೂ ಸಾಧನೆ ಮಾಡಿ ಕೀರ್ತಿಶಿಖರಕ್ಕೇರಿದ ಗಂಗೂಬಾಯಿಯವರು ತಮಗೆ ಕೇವಲ ಗಂಡುಧ್ವನಿಯಲ್ಲ, ಅದರೊಂದಿಗೆ, ಬಂದ ಕಷ್ಟವನ್ನೆದುರಿಸಿ ನಿಲ್ಲುವ ಗಂಡೆದೆಯೂ ಇದೆ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು.

ಆಕಾಶವಾಣಿಯಲ್ಲಿಯ ಅವರ ಮೊದಲ ಕಾರ್ಯಕ್ರಮ ಮುಂಬಯಿಕೇಂದ್ರದಿಂದ ಪ್ರಸಾರವಾಯಿತು. ಆ ಕಾರ್ಯಕ್ರಮದ ನಂತರ ಅವರಿಗೆ ದೇಶದ ಮೂಲೆ-ಮೂಲೆಗಳಿಂದ ಎಡೆಬಿಡದೆ ಆಹ್ವಾನಗಳು ಬರತೊಡಗಿದವು. ಕಲಕತ್ತೆ, ಜಲಂಧರಗಳಂತಹ ಮಹತ್ವದ ಸಂಗೀತ ಮಹೋತ್ಸವಗಳಿಗೆ ಪ್ರತಿವರ್ಷ ಅವರನ್ನು ಆಹ್ವಾನಿಸತೊಡಗಿದರು. ದೇಶದಾದ್ಯಂತ ಆಕಾಶವಾಣಿಯ ಎಲ್ಲ ಕೇಂದ್ರಗಳಿಂದ ಅವರ ಗಾಯನ ನಿಯಮಿತವಾಗಿ ಪ್ರಸಾರವಾಗತೊಡಗಿತು. ಕೆಲವೇ ದಿನಗಳಲ್ಲಿ ದೇಶಕ್ಕೆ ದೇಶವೇ ಕರ್ನಾಟಕದ ಈ ಗಾನಕೋಗಿಲೆಯ ಗಾನಕ್ಕೆ ಮರುಳಾಗಿತ್ತು. ಡಾ. ಗಂಗೂಬಾಯಿಯವರು ಅಮೇರಿಕಾ, ಇಂಗ್ಲಂಡ್, ಫ್ರಾನ್ಸ, ಜರ್ಮನಿ, ಕೆನಡಾ ಇತ್ಯಾದಿ ವಿದೇಶಗಳಲ್ಲಿಯೂ ಸಂಚಾರ ಮಾಡಿ ಅಲ್ಲಿಯೂ ಎಲ್ಲೆಡೆಗೆ ತಮ್ಮ ಗಾನಸುಧೆಯನ್ನು ಹರಿಸಿದರು. ಹೀಗೆ ಶಾಸ್ತ್ರೀಯ ಸಂಗೀತದ ವೇದಿಕೆಯನ್ನೇರಿದ ಕೆಲವೇ ದಿನಗಳಲ್ಲಿ ಕೀರ್ತಿಶಿಖರವನ್ನೇರಿದ ಗಂಗೂಬಾಯಿಯವರು ತಮ್ಮ ಉಸಿರಿರುವವರೆಗೆ ಆ ಶಿಖರದೆತ್ತರದಲ್ಲಿ ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದ ಸಾಮ್ರಾಜ್ಞಿಯಾಗಿ ಮೆರೆದರು.

ಜುಲೈ ೨೧, ೨೦೦೯ ರಂದು ಗಂಗೂಬಾಯಿಯವರು ತಮ್ಮ ೯೨ ನೆಯ ವರ್ಷದ ವಯಸ್ಸಿನಲ್ಲಿ ಸಂಗೀತ ಸರಸ್ವತಿಯ ಪಾದ ಸೇರಿದರು. ತಮ್ಮ ಪ್ರೀತಿಯ ಗಂಗಜ್ಜಿಯನ್ನು ಕಳೆದುಕೊಂಡ ಹುಬ್ಬಳ್ಳಿ-ಧಾರವಾಡ ಜನತೆ, ಅಷ್ಟೇ ಏಕೆ, ಇಡಿ ದೇಶದ ಜನತೆ ಶೋಕಸಾಗರದಲ್ಲಿ ಮುಳುಗಿತು.

ಡಾ. ಗಂಗೂಬಾಯಿಯವರು ತಮ್ಮ ವೃತ್ತಿಜೀವನದಲ್ಲಿ ಒಂದಲ್ಲ-ಎರಡಲ್ಲ, ಅಸಂಖ್ಯ ಪ್ರಶಸ್ತಿಗಳನ್ನು ಪಡೆದರು, ಅಸಂಖ್ಯ ಸನ್ಮಾನ-ಪದವಿಗಳಿಂದ ಗೌರವಿಸಲ್ಪಟ್ಟರು. ಕೇಂದ್ರ ಸರಕಾರದ ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳು, ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ, ರಾಜ್ಯ ಸಂಗೀತ-ನೃತ್ಯ ಅಕಾಡೆಮಿಯ ಪ್ರಶಸ್ತಿ, ರಾಜ್ಯದ ಕನಕಪುರಂದರ ಪ್ರಶಸ್ತಿ, ಮಧ್ಯಪ್ರದೇಶದ ತಾನಸೇನ್ ಪ್ರಶಸ್ತಿ.. ಹೇಳುತ್ತ ಹೋದರೆ ಮುಗಿಯದ ಮೂಟೆ ಇದು. ಗಂಗೂಬಾಯಿಯವರನ್ನು ದೇಶದ ಆರು ವಿಶ್ವವಿದ್ಯಾಲಯಗಳು ಡಾಕ್ಟರೇಟ್ ಕೊಟ್ಟು, ಸನ್ಮಾನಿಸಿದವು. "ಕನ್ನಡ ಎರಡನೇ ಯತ್ತಾ ತನಕಾ ಕಲತಾಕಿ ನನಗೆ ಪಿಎಚ್.ಡಿ. ಡಿಗ್ರೀ ಕೊಟ್ಟಾರ ನೋಡು" ಎಂದು ವಿನೋದವಾಗಿ ಹೇಳುತ್ತಿದ್ದರು ಅವರು.

ಡಾ. ಗಂಗೂಬಾಯಿಯವರು ತಮ್ಮ ವೃತ್ತಿಜೀವನದಲ್ಲಿ ಇಷ್ಟೆಲ್ಲ ಕೀರ್ತಿ, ಸನ್ಮಾನಗಳನ್ನು ಗಳಿಸಿದರೂ ಆ ಬಗ್ಗೆ ಹೆಮ್ಮೆ, ಅಹಂಕಾರ ಅವರನ್ನು ಎಂದೂ ಸ್ಪರ್ಶಿಸಲಿಲ್ಲ. ಅದೇ ಮುಗ್ಧತೆ, ಅದೇ ನಿರ್ವ್ಯಾಜ ಅಂತಃಕರಣ, ವ್ಯವಹಾರದಲ್ಲಿ ಅದೇ ಸರಳತೆ ಅವರಲ್ಲಿ ಕೊನೆಯವರೆಗೂ ಉಳಿದಿತ್ತು. ಯಾರೇ ಅವರನ್ನು ಭೆಟ್ಟಿಯಾಗಲು ಹೋದರೂ ಅವರನ್ನು ಪ್ರೀತಿಯಿಂದ ಬರಮಾಡಿಕೊಂಡು, ಹತ್ತಿರ ಕೂಡಿಸಿಕೊಂಡು ಮನಬಿಚ್ಚಿ ಮಾತನಾಡುತ್ತಿದ್ದರು. ಅವರು ಎಷ್ಟು ಶ್ರೇಷ್ಠ ಗಾಯಕಿಯಾಗಿದ್ದರೋ ಅಷ್ಟೇ

ಮಹಾವ್ಯಕ್ತಿಯೂ ಆಗಿದ್ದರು. ಶಾಲೆ–ಕಾಲೇಜುಗಳಲ್ಲಿ ಕಲಿತು, ಗ್ರಂಥಗಳನ್ನೋದಿ ಅವರು ವಿದ್ವತ್ತು ಗಳಿಸದಿದ್ದರೂ ಜೀವನದಲ್ಲಿ ಸ್ವಂತ ಅನುಭವದಿಂದ ಕಲಿತು, ಸ್ವಂತ ವಿಚಾರದಿಂದ ಅರಗಿಸಿಕೊಂಡ ಜ್ಞಾನಸಂಪತ್ತು ಅವರಲ್ಲಿ ಅಪಾರವಾಗಿತ್ತು. ಅವರು ಕೇವಲ ತಮ್ಮ ಸುತ್ತ–ಮುತ್ತಲಿನ ಜನರ ಬಗ್ಗೆ ಅಷ್ಟೇ ಅಲ್ಲ, ನಮ್ಮ ದೇಶದ ಬಗ್ಗೆ, ಸಮಗ್ರ ಜಗತ್ತಿನ ಸಮಸ್ಯೆಗಳ ಬಗ್ಗೆ ಎಷ್ಟು ಆಳವಾಗಿ ವಿಚಾರ ಮಾಡುತ್ತಿದ್ದರು ಎಂಬುದಕ್ಕೆ ಅವರು ತಮ್ಮ ಕೊನೆಯ ಹುಟ್ಟಿದ ಹಬ್ಬದ ದಿನ ಕೊಟ್ಟ ಈ ಸಂದೇಶವೇ ಒಂದು ಉತ್ತಮ ನಿದರ್ಶನವಾಗಿದೆ:

"ಇದು ಎಂಥಾ ಜಗತ್ತು? ಧರ್ಮದ ಹೆಸರಿನಲ್ಲೇಕೆ ಜಗತ್ತು ತುಂಡು-ತುಂಡಾಗುತ್ತಲಿದೆ? ಇದು ನನ್ನ ಹೃದಯವನ್ನು ತುಂಬಾ ನೋಯಿಸುತ್ತದೆ.

ಬೇರೆಯವರ ಧರ್ಮದ ಬಗ್ಗೆ ನಮಗೇಕಿಂದು ಗೌರವವಿಲ್ಲ? ಅಬ್ದುಲ್ ಕರೀಮಖಾನ ಸಾಹೇಬರು ತಮ್ಮ ಸ್ವರ್ಗೀಯ ಸಂಗೀತವನ್ನು ಒಬ್ಬ ಬ್ರಾಹ್ಮಣಶಿಷ್ಯನಿಗೆ ಕಲಿಸಿರದಿದ್ದರೆ ನನ್ನ ಗುರು ಸವಾಯಿ ಗಂಧರ್ವರೂ ಇರ್ತಿದ್ದಿಲ್ಲ, ಅವರಿಲ್ಲದಿದ್ದರೆ ಭೀಮು ಮತ್ತು ನಾನಾದರೂ ಎಲ್ಲಿರುತ್ತಿದ್ದೆವು?"

■■■



ದೇಶಪಾಂಡೆ ಗುರುರಾಯರು

# ಗಾಯನಾಚಾರ್ಯ

# ದೇಶಪಾಂಡೆ ಗುರುರಾಯರು

## (೧೮೯-೧೯೮೨)

● ಡಾ. ಶಶಿಧರ ನರೇಂದ್ರ

ಅದು ಸ್ವಾತಂತ್ರ್ಯ ಪೂರ್ವಕಾಲ. ಆಗೆಲ್ಲ ಪ್ರಭಾತಫೇರಿಗಳು, ಚಳುವಳಿಗಳು ಸ್ವಾತಂತ್ರ್ಯ ಹೋರಾಟದ ಮುಖ್ಯ ಪ್ರಕಾರಗಳು. ಇಂಥ ಚಳುವಳಿಗಳಲ್ಲಿ ಧಾರವಾಡದ್ದೇ ಒಂದು ವಿಶೇಷ. ಆಗ ನಡೆಯುತ್ತಿದ್ದ ಪ್ರಮುಖ ಮೆರವಣಿಗೆಗಳ ಮುಂಚೂಣಿಯಲ್ಲಿದ್ದವರು ದೇಶಪಾಂಡೆ ಗುರುರಾಯರು. ಉನ್ನತ ಭವ್ಯಾಕೃತಿ, ಸದಾ ಹಸನ್ಮುಖಿ. ಶುಭ್ರವಾದ ಬಿಳಿಮಲ್ಲು ಕಚ್ಚೆ-ಪಂಚೆ, ಕರೀಕೋಟು ಕರಿಟೋಪಿ, ಕೈಯಲ್ಲಿ ಕೋಲು; ಮಳೆಗಾಲವಾಗಿದ್ದರೆ ಕೊಡೆ. ಇಂಥ ವ್ಯಕ್ತಿಯನ್ನು ಕಾಣುವುದು ಸಾಮಾನ್ಯವಾಗಿತ್ತು. ಇವರು 'ವಂದೇ ಮಾತರಂ' ಹಾಗೂ ಇನ್ನಿತರ ದೇಶಭಕ್ತಿ ಗೀತೆಗಳನ್ನು ಹಾಡುತ್ತ ನಡೆಯುತ್ತಿದ್ದರೆ ಆ ವಾತಾವರಣದಲ್ಲಿ ಒಂದು ವಿಶೇಷ ಆಕರ್ಷಣೆ. ರಸ್ತೆಯಲ್ಲಿ ಜನರೆಲ್ಲ ನೆರೆದು ವೀಕ್ಷಿಸುತ್ತಿದ್ದರು. ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಣುಮಕ್ಕಳೂ ಸಹಿತ "ಏ ಬರ್ರೇ, ದೇಶಪಾಂಡೆ ಗುರುರಾಯರು ಹಾಡ್ಕೋತ ಬಂದಾರ, ಕೇಳೋಣ ಬರ್ರೇ" ಎಂಬ ಸನ್ನಿವೇಶ ಸಾಮಾನ್ಯವಾಗಿತ್ತು. ಸಂಗೀತ ಸಾರೋದ್ಧಾರ ಪುಸ್ತಕದಲ್ಲಿ ಉಲ್ಲೇಖಿಸಿದಂತೆ-

ಸರ್ವಗಾನೋಪಯೋಗಿ ತ್ವಾಚ್ಛಾರೀರಂ ಲಕ್ಷತೇಧುನಾ ।

ರಾಗಾಭಿವ್ಯಕ್ತ ಶಕ್ತತ್ವ ಮನಭ್ಯಾಸೇಪಿಯಧ್ವನೆ: ।

ಗಿಚ್ಛಾರೀರಮಿತಿ ಪ್ರೋಕ್ತಂ ಶರೀರೇಣ ಸಹೋದ್ಭವಾತ್

ಸಹಜವಾಗಿ ಮನುಷ್ಯನ ಕಂಠದಿಂದ ಹೊರಡುವ ಗಾನಯೋಗ್ಯವಾದ ಮೃದು ಮಧುರ ಧ್ವನಿಯನ್ನೇ ಶಾರೀರವೆನ್ನುವರು. ವ್ಯಾಸಂಗವೇ ಇಲ್ಲದಿದ್ದರೂ ರಾಗಸ್ಫೂರ್ತಿಯನ್ನುಂಟು ಮಾಡಬಲ್ಲ ಶಕ್ತಿಯು ಆ ಧ್ವನಿಗೆ ಇರುತ್ತದೆ. ರಾಗಾಭಿವ್ಯಕ್ತಿತ್ವಕ್ಕೆ ಬೇಕಾದ ಗಮಕಾದಿಗಳ ಪ್ರಯೋಗವು ಸಹಜವಾಗಿಯೇ ಆ ಧ್ವನಿಯಲ್ಲಿ ಹುದುಗಿದ್ದು ಮನೋರಂಜನೆಯನ್ನುಂಟು ಮಾಡುವುದೆಂದು, ಭಾವವು ಸ್ವರವು ಶರೀರದಿಂದಲೇ ಹೊರಹೊಮ್ಮುವುದರಿಂದ ಆ ಧ್ವನಿಯನ್ನು ಶಾರೀರವೆಂದು ಕರೆದಿದ್ದಾರೆ. ಗಾಯಕನಿಗೆ ಇದೊಂದು ದೈವದತ್ತವಾದ ಸಂಪತ್ತೆನ್ನಬಹುದು. ಇಂಥ ಅದ್ಭುತ ಸಂಪತ್ತಿನ ಶಾರೀರವನ್ನು ಹೊಂದಿದ್ದವರು ದೇಶಪಾಂಡೆ ಗುರುರಾಯರು.

ಗುರುರಾವ್ ದೇಶಪಾಂಡೆ ಅವರ ವ್ಯಕ್ತಿತ್ವ ಉನ್ನತವಾದದ್ದು. ಇವರ ತಂದೆ ನಾರಾಯಣರಾವ್, ತಾಯಿ ಗಂಗಾಬಾಯಿ. ಗುರುರಾಯರ ಜನನ ಧಾರವಾಡದ

ಗೌಳಿಓಣಿಯಲ್ಲಿ ೧೯೨೯ರಲ್ಲಿ ಆಯಿತು. ತಂದೆ ನಾರಾಯಣರಾವ್ ಶಾಲೆಯಲ್ಲಿ ಗಣಿತ ಶಿಕ್ಷಕರು. ತುಂಬ ಶಿಸ್ತಿನ ವ್ಯಕ್ತಿತ್ವ ಅವರದು.

ನಾರಾಯಣರಾವ್ ಇನ್ನೊಬ್ಬ ಮಗ ದತ್ತಾತ್ರಯನನ್ನು ತಮ್ಮಂತೆ ಗಣಿತ ಶಿಕ್ಷಕನನ್ನಾಗಿ ಮಾಡಿದ್ದರು. ಗುರುರಾಯರ ತಮ್ಮ ಚಿದಂಬರ ಮುಂದೆ ಹೈದರಾಬಾದಿನಲ್ಲಿ ಕೃಷಿಗೆ ಸಂಬಂಧಿಸಿದ ವೃತ್ತಿ ಮಾಡಿದರು. ಅಂತೆಯೇ ಗುರುರಾಯನಿಗೆ ಬಿ.ಎ., ಎಲ್.ಎಲ್.ಬಿ. ಓದಿಸಬೇಕೆಂಬಾಸೆಯಿತ್ತು. ಆದರೆ ಬಾಲಕ ಗುರುರಾಯನದ್ದು ಸಂಗೀತದೆಡೆ ಒಲವು. ಇದಕ್ಕೆ ಪೂರಕವೆಂಬಂತೆ ಇಂಪಾದ ಕಂಠ ಬೇರೆ, ಹಾಗೆ ನೋಡಿದರೆ ಗುರುರಾಯರಿಗೆ ಬಾಲ್ಯದಲ್ಲಿಯೇ ಕರ್ನಾಟಕಿ ಸಂಗೀತದ ಪರಿಚಯ ತಂದೆಯಿಂದಲೇ ಆಗಿತ್ತು. ಶಂಕರಾಭರಣ, ಕಾಂಬೋದಿ, ಸಾವೇರಿ, ಸಿಂಹೇಂದ್ರ ಮಧ್ಯಮ, ಮುಂತಾದ ರಾಗಗಳ ಪರಿಚಯವಾಗಿತ್ತು. ದೇವರ ನಾಮಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಬಾಲಕನ ಸಂಗೀತದ ಪ್ರತಿಭೆಯನ್ನು ಅರಿತಿದ್ದ ತಂದೆ ಗುರುರಾಯನನ್ನು ಆಗ ಧಾರವಾಡದಲ್ಲಿ ಪ್ರಸಿದ್ಧರಿದ್ದ ಟಿ.ಕೆ. ಪಿತ್ರೆ, ಮತ್ತು ದತ್ತೋಪಂತ ಜೋಶಿ ಅವರಲ್ಲಿ ಸಂಗೀತದ ಪ್ರಾರಂಭಿಕ ಶಿಕ್ಷಣಕ್ಕಾಗಿ ಕಳಿಸಿದ್ದರು. ಹೀಗೆ ಸಂಗೀತ ಮತ್ತು ಶಾಲಾಭ್ಯಾಸ ಒಟ್ಟೊಟ್ಟಿಗೆ ನಡೆದಿದ್ದವು. ಗುರುರಾಯರು ಇಂಟರ್‌ನಲ್ಲಿ ಓದುತ್ತಿದ್ದಾಗಲೇ ತಂದೆ ನಾರಾಯಣರಾಯರು ಅಸುನೀಗಿದರು. ಹೀಗಾಗಿ ಗುರುರಾಯರ ಶಾಲಾಶಿಕ್ಷಣವೂ ನಿಂತಿತು. ೧೯೧೯ರಲ್ಲಿ ಬೆಳಗಾವಿಗೆ ತೆರಳಿ ಅಲ್ಲಿ ಗ್ವಾಲಿಯರ್ ಘರಾಣೆಯ ಮೇರು ಗಾಯಕ ಪಂ. ರಾಮಕೃಷ್ಣ ಬುವಾ ವಝೆ ಅವರಲ್ಲಿ ಸಂಗೀತದ ಶಿಕ್ಷಣ ಪಡೆಯುತೊಡಗಿದರು. ಈ ಶಿಕ್ಷಣವಾದರೂ ಸುಲಭವಾಗಿ ದಕ್ಕುವಂತಹದ್ದಾಗಿರಲಿಲ್ಲ. ಗುರುಗಳ ಸೇವೆ, ತಮ್ಮ ಉಪಜೀವನ, ಜೊತೆಗೆ ಸತತ ಪರಿಶ್ರಮಪಟ್ಟರು. ಮುಖ್ಯವಾಗಿ ಗುರುರಾಯರ ಅಚಲ ನಿಷ್ಠೆ, ಅದಮ್ಯ ಉತ್ಸಾಹ ಅವರನ್ನು ಎದೆಗುಂದಿಸದೆ ಮೂರು, ನಾಕು ವರ್ಷ ಸತತ ಸಂಗೀತ ಶಿಕ್ಷಣ ಪಡೆದರು.

ಗ್ವಾಲೀಯರ್ ಘರಾಣೆಯ ಶಿಕ್ಷಣ ಪಡೆದ ಗುರುರಾಯರಿಗೆ ಅನೇಕ ಕಡೆ ಕಾರ್ಯಕ್ರಮಗಳಿಗೆ ಆಹ್ವಾನ ಬರತೊಡಗಿದವು. ಶ್ರವಣಮಾತ್ರದಿಂದ ಉತ್ತಮ ಸಂಗೀತದ ಗುಣಗಳನ್ನೇ ತಮ್ಮಲ್ಲಿ ಅಳವಡಿಸಿಕೊಂಡು ಅದನ್ನು ತಾಲೀಮಿನ ಮೂಲಕ ರೂಢಿಸಿಕೊಂಡು ಪ್ರಚುರ ಪಡಿಸುತ್ತಿದ್ದರು. ಸೂಕ್ಷ್ಮವಾದ ನಾದವೈವಿಧ್ಯವನ್ನು ಗ್ರಹಿಸಿ, ಇಂಪಾದ ತಮ್ಮ ಶಾರೀರದಲ್ಲಿ ಹಾಡಿ ಶ್ರೋತೃಗಳನ್ನೇ ಮೆಚ್ಚಿಸುವ ಗುರುರಾಯರು ಬಹು ಬೇಗನೇ ಜನಪ್ರಿಯ ಗಾಯಕರಾದರು. ಈಗಿನ ಪಾಕಿಸ್ತಾನದ ಲಾಹೋರ, ನಮ್ಮ ಮುಂಬೈ, ಕಲ್ಕತ್ತಾ ಮುಂತಾದ ಆಕಾಶವಾಣಿ ಕೇಂದ್ರಗಳಲ್ಲಿ, ಹೀಗೆ ಅನೇಕ ಕಾರ್ಯಕ್ರಮಗಳಿಂದ ಗುರುರಾಯರು ಪಕ್ವವಾದರು. ಕಾರ್ಯಕ್ರಮಗಳನ್ನೂ ನೀಡುವುದರ ಜೊತೆಗೆ ಬೇರೆ ಬೇರೆ ಗಾಯಕರ ಕಾರ್ಯಕ್ರಮಗಳನ್ನೇ ಆಲಿಸಿ, ಅವರಲ್ಲಿಯ ಒಳ್ಳೆಯ ಅಂಶಗಳನ್ನು ಗ್ರಹಿಸಿ ತಮ್ಮೊಳಗೆ ಅಳವಡಿಸಿಕೊಳ್ಳುತ್ತಿದ್ದರು. ಜೈಪುರ ಘರಾಣೆಯ ಉಸ್ತಾದ ಅಲ್ಲಾದಿಯಾಖಾನರ ಮಗ ಉಸ್ತಾದ ಮಂಜೀಖಾನ ಅವರಲ್ಲಿ ಗುರುರಾಯರಿಗೆ ಸಂಗೀತ ಕಲಿಯುವ ಆಸೆಯಿತ್ತು. ಆದರೆ ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ. ಈಗ "ನೋಡಿ ತಿಳಿ–ಮಾಡಿ ಕಲಿ" ಎಂಬ ಮಾತಿನಂತೆ ಗುರುರಾಯರು ಉಸ್ತಾದ ಮಂಜಿಖಾನ, ಕಿರಾಣಾ ಘರಾಣೆಯ ಉಸ್ತಾದ ಅಬ್ದುಲ್

ಕರೀಂಖಾನ್ ಪಂ. ಭಾಸ್ಕರಬುವಾ ಬಖಲೆ ಮುಂತಾದ ಉತ್ತಮ ಗಾಯಕರ ಶೈಲಿಯನ್ನು ಸೂಕ್ಷ್ಮತೆಯನ್ನು ಗ್ರಹಿಸಿದರು.

ಆಗಿನ ಕಾಲದಲ್ಲಿ ಜಮಖಂಡಿಸಂಸ್ಥಾನದಲ್ಲಿ ಮೇಲಿಂದ ಮೇಲೆ ಸಂಗೀತ ಕಾರ್ಯಕ್ರಮಗಳು ನಡೆಯುತ್ತಿದ್ದವು. ಒಮ್ಮೆ ಮಹಾರಾಜರು ಏರ್ಪಡಿಸಿದ್ದ ಎರಡು ದಿನಗಳ ಅಹೋರಾತ್ರಿ ಸಂಗೀತ ಕಾರ್ಯಕ್ರಮದಲ್ಲಿ ದೇಶದ ಪ್ರಖ್ಯಾತ ಗಾಯಕರು ಪಾಲ್ಗೊಂಡಿದ್ದರು. ಉಸ್ತಾದ ಅಬ್ದುಲ್ ಕರೀಂಖಾನ್, ಪಂ. ಸವಾಯಿ ಗಂಧರ್ವರು. ಭಾಸ್ಕರಬುವಾ ಬಖಲೆ ಮುಂತಾದವರು ಕಾರ್ಯಕ್ರಮ ನೀಡಿದರು. ಆಗ ಗುರುರಾಯರದೂ ಕಾರ್ಯಕ್ರಮವಾಯಿತು. ಇವರ ಗಾಯನ ಕೇಳಿ ಸ್ವತಃ ಮಹಾರಾಜರು, ಉಸ್ತಾದ ಅಬ್ದುಲ್ ಕರೀಂಖಾನ್ ಸಾಹೇಬರು, ಪಂ. ಸವಾಯಿ ಗಂಧರ್ವರಾದಿಯಾಗಿ ಎಲ್ಲರೂ ಮುಕ್ತಕಂಠದಿಂದ ಹೊಗಳಿದರು. ೧೯೪೦ರ ಸಮಯದಲ್ಲಿ 'Odeon Gramophone Company' ಗುರುರಾಯರು ಹಾಡಿದ ಮಿಯಾಕಿತೋಡಿ, ಖಂಬಾವತಿ, ಯಮನ, ಹಾಗೂ ಬಸಂತರಾಗಗಳಲ್ಲದೇ ಕನ್ನಡ ನಾಟ್ಯಗೀತೆಗಳನ್ನು ಧ್ವನಿಮುದ್ರಿಸಿಕೊಂಡು ಮಾರುಕಟ್ಟೆಗೆ ತಂದಿತು. ಈ ಧ್ವನಿಮುದ್ರಿಕೆಗಳು ಆಗ ಸಾಕಷ್ಟು ಜನಪ್ರಿಯವಾಗಿದ್ದವು.

ಒಮ್ಮೆ ಕೊಲ್ಲಾಪುರದಲ್ಲಿ ಉಸ್ತಾದ ಹಫೀಜ ಅಲಿಖಾನ ಅವರ ಸರೋದವಾದನ ಕಾರ್ಯಕ್ರಮವಿತ್ತು. ಈ ಕಾರ್ಯಕ್ರಮವನ್ನು ಜೈಪುರ ಘರಾಣೆಯ ಖ್ಯಾತ ಗಾಯಕರಾದ ಅಲ್ಲಾದಿಯಾಖಾನ್ ಸಾಹೇಬರು ಆಯೋಜಿಸಿದ್ದರು. ಆಗ ಆ ಕಾರ್ಯಕ್ರಮಕ್ಕೆ ಅಪಾರವಾದ ಪ್ರೇಕ್ಷಕರು ಸೇರಿದ್ದರು. ಕಾರ್ಯಕ್ರಮ ಇನ್ನೇನು ಶುರುವಾಗಬೇಕು, ಆಗ ಉಸ್ತಾದ ಹಫೀಜಲಿ ಖಾನರು; ಅನಿವಾರ್ಯ ಕಾರಣಗಳಿಂದ ತಾವು ಸ್ವಲ್ಪ ತಡವಾಗಿ ಕಾರ್ಯಕ್ರಮಕ್ಕೆ ಬರುವುದಾಗಿ ಸುದ್ದಿ ತಿಳಿಸಿದರು. ಆಗ ಅಲ್ಲಾದಿಯಾ ಖಾನ್‌ರಿಗೆ ಚಿಂತೆ ಹತ್ತಿತ್ತು. ಪ್ರೇಕ್ಷಕರು ಕಾಯುತ್ತಿದ್ದರು. ಮಗ ಮುಂಜೀಖಾನರೊಂದಿಗೆ ಈ ವಿಷಯ ಚರ್ಚಿಸಿದಾಗ ಮುಂಜೀಖಾನರು ಯುವಗಾಯಕ ಗುರುರಾಯರಿಗೆ ಹಫೀಜ ಅಲಿಖಾನ್ ಬರುವವರೆಗೆ ಹಾಡಲು ಹೇಳಿದರು. ವಿದ್ವತ್‌ಪೂರ್ಣ ಕಿಕ್ಕಿರಿದ ಸಭೆಯಲ್ಲಿ ಅದೂ ಅಲ್ಲಾದಿಯಾ ಖಾನರಂತಹ ಸಂಗೀತ ದಿಗ್ಗಜರೆದುರಿಗೆ ಹಾಡುವ ಸಾಹಸ ಗುರುರಾಯರದಾಯಿತು. ಆರಂಭದಲ್ಲಿ ಸ್ವಲ್ಪ ಅಳುಕಿದ್ದರೂ, ಜೈಪುರ ಘರಾಣೆಯ ಶೈಲಿಯಲ್ಲಿ ರಾಗ ನಟಬಿಹಾಗ್‌ನ್ನು ಸುಂದರವಾಗಿ ಹಾಡಿದರು. ಸಭಿಕರು ತುಂಬ ಮೆಚ್ಚಿಕೊಂಡರು ಆಗ ಇವರೊಂದಿಗೆ ಪಂ. ಮಲ್ಲಿಕಾರ್ಜುನ ಮನ್ಸೂರ ಸಹ ಗಾಯನ ಮಾಡಿದ್ದರು. ಗುರುರಾಯರ ಗಾಯನ ಕೇಳಿ, ಉಸ್ತಾದ್ ಅಲ್ಲಾದಿಯಾ ಖಾನರು "ಬೇಟಾ ತೇರೇಕೋ ಗಾನೆಮೆಂ ಅಕಲ್ ಹೈ. ಬಹುತ್ ಅಛ್ಛಾ ಗಾರಹೆ ಹೋ ಗಾವೋ ಗಾವೋ..". ಎಂದು ಮನದುಂಬಿ ಹರಸಿ, ಬೆನ್ನು ಚಪ್ಪರಿಸಿದರು. ಈ ಘಟನೆ ಒಂದು ಇತಿಹಾಸವನ್ನೇ ಸೃಷ್ಟಿಸಿತು.

ಆಗ ಒಳ್ಳೆಯ ಹಾಡುಗಾರರು ನಾಟಕದಲ್ಲಿ ಭಾಗವಹಿಸುವುದು ಸಾಮಾನ್ಯವಾಗಿತ್ತು, ಒಂದರ್ಥದಲ್ಲಿ ಪೂರಕವಾಗಿತ್ತು. ಹಾಗಾಗಿ ಗುರುರಾಯರೂ ಕೂಡ ಅನೇಕ ನಾಟಕಕಂಪನಿಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಶ್ರೀ ಸವಣೂರು

ವಾಮನರಾವ್ ಮಾಸ್ತರರ 'ವಿಶ್ವಗುಣಾದರ್ಶ ಸಂಗೀತ ನಾಟಕ' ಮಂಡಳಿಯಲ್ಲಿ ಕೃಷ್ಣಾರ್ಜುನರ ಯುದ್ಧ ನಾಟಕದಲ್ಲಿ ಗುರುರಾಯರು ಅರ್ಜುನನಾಗಿ, ವಾಮನರಾವ್ ಮಾಸ್ತರರು ಕೃಷ್ಣನಾಗಿ ಅಭಿನಯಿಸುತ್ತಿದ್ದರು; ಆಗ ಗುರುರಾಯರ ಸಂಗೀತ ತುಂಬ ಜನಪ್ರಿಯವಾಗಿತ್ತು. 'ಒನ್ಸ ಮೋರ್' ಸಾಮಾನ್ಯವಾಗಿತ್ತು. ತಮ್ಮ ಗಾಯನ, ಪಾತ್ರದಿಂದ ಪ್ರೇಕ್ಷಕರನ್ನೇ ಎಳೆತರುವ ಶಕ್ತಿ ಗುರುರಾಯರಿಗಿತ್ತು. 'ಶಿರಸಿ ಮಾರಿಕಾಂಬಾ ಪ್ರಾಸಾದಿಕ ಮಂಡಳಿ'ಯಲ್ಲೂ ಗುರುರಾಯರು 'ವೀರರಾಣಿ ರುದ್ರಮ್ಮ' ನಾಟಕದಲ್ಲಿ 'ಮಲ್ಲಸರ್ಜನನ' ಪಾತ್ರವನ್ನು ಅದ್ಭುತವಾಗಿ ಮಾಡುತ್ತಿದ್ದರು. ರುದ್ರಮ್ಮನ ಪಾತ್ರವನ್ನು 'ಭಾಗೀರಥಿಬಾಯಿ ಧಾರವಾಡ' ಎಂಬುವವರು ಮಾಡುತ್ತಿದ್ದರು. ಒಮ್ಮೆ ಈ ನಾಟಕದಲ್ಲಿ ಕಾರಣಾಂತರಗಳಿಂದ ಗುರುರಾಯರು ಪಾತ್ರ ಮಾಡಲಿಲ್ಲ ಆಗ ಈ ಪಾತ್ರವನ್ನು ಚಿಕ್ಕೋಡಿ ಶಿವಲಿಂಗಸ್ವಾಮಿಗಳು ಮಾಡಿದರೆ; ಏಣಗಿ ಬಾಳಪ್ಪ ಅವರು ರುದ್ರಮ್ಮನ ಪಾತ್ರ ಮಾಡಿದ್ದರು. ಪ್ರೇಕ್ಷಕವರ್ಗದಲ್ಲಿ ಕುಳಿತು ನಾಟಕ ನೋಡಿದ್ದ ಗುರುರಾಯರು ನಾಟಕ ಮುಗಿದ ನಂತರ ಒಳಗೆ ಬಂದು ಏಣಗಿ ಬಾಳಪ್ಪ ಅವರ ಪಾತ್ರ ಹಾಗೂ ಹಾಡುಗಾರಿಕೆಯನ್ನು ಪ್ರಶಂಸಿಸಿದರಂತೆ; ಇಷ್ಟು ಉದಾರ ಹೃದಯಿಗಳು ಗುರುರಾಯರು. ಅಷ್ಟು ದೊಡ್ಡ ಗಾಯಕರದು ತುಂಬ ದೊಡ್ಡ ಮನಸ್ಸು ಎಂದು ಬಾಳಪ್ಪ ಸ್ಮರಿಸುತ್ತಾರೆ.

ಭಾರತರತ್ನ ಪಂ. ಭೀಮಸೇನ ಜೋಶಿ ಅವರು 'ಗುರುರಾಯರೆಂದರೆ ಗಡಿಯಾರವಿದ್ದಂತೆ' ಎಂದಿದ್ದರು. ಗುರುರಾಯರಿಗೆ ಸಂಗೀತ ಆತ್ಮಕ್ಕಾಗಿ ಪರಮಾತ್ಮನಿಗಾಗಿ, ಇದು ಪ್ರದರ್ಶನ ಅಥವಾ ಮನೋರಂಜನೆಗಾಗಿ ಅಲ್ಲ, ಜನರ ಹೊಗಳಿಕೆ, ಪ್ರಶಂಸೆ ಸಾಗರದಲ್ಲಿಯ ಅಲೆಗಳಂತೆ, ಆದರೆ ಸಾಗರವಲ್ಲ ಎನ್ನುತ್ತಿದ್ದರು. ಗುರುರಾಯರನ್ನೇ ತಮ್ಮ ಗುರುವಿನ ಸ್ಥಾನದಲ್ಲಿ ಭೀಮಸೇನ ಜೋಶಿಯವರು ಕಾಣುತ್ತಿದ್ದರು. ಅಂತೆಯೇ ಡಾ. ಗಂಗೂಬಾಯಿ ಹಾನಗಲ್‌ರು, "ನನಗಿಂತ ಹಿರಿಯರಾಗಿದ್ದ ಗುರುರಾವ್ ದೇಶಪಾಂಡೆ ಅವರು ಗ್ವಾಲಿಯರ್ ಘರಾಣೆಯ ಬಂಧು ಆಗಿರದೇ ನನ್ನ ಮನೆತನದ ಹಿರಿಯ ಸದಸ್ಯರಂತಿದ್ದರು. ಅವರ ತಂದೆ ನಾರಾಯಣರಾಯರು ದಾಸರ ಕೀರ್ತನಗಳನ್ನೇ ಕರ್ನಾಟಕಿ ಪದ್ಧತಿಯಲ್ಲಿ ಸೊಗಸಾಗಿ ಹಾಡುತ್ತಿದ್ದರು. ಗುರುರಾಯರೂ ಸಹ ದಾಸರ ಪದಗಳ ಆ ಪರಂಪರೆಯನ್ನು ತಮ್ಮ ಕ್ಲಾಸಿಕಲ್ ಸಂಗೀತದೊಡನೆ ಬೆಳೆಸಿಕೊಂಡು ಬಂದಿದ್ದರು. ಇಂದಿಗೂ ಗರಗದ ಹತ್ತಿರ 'ಮುಳಮುತ್ತಲ' ಎಂಬ ಚಿಕ್ಕಗ್ರಾಮದಲ್ಲಿ ಗುರುರಾಯರ ತಂದೆಯ ಹೆಸರಿನ 'ಹಾಡುವ ನಾನಪ್ಪನ ಮನೆ' ಇದೆ. (ನನ್ನ ಬದುಕಿನ ಹಾಡು- ಗಂಗೂಬಾಯಿ- ಎನ್ಕೆ-ಪುಟ ೩೮) ಗಂಗೂಬಾಯಿಯವರು ಗುರುರಾಯರಿಗೆ ತುಂಬ ಗೌರವ ಕೊಡುತ್ತಿದ್ದರು.

ಗುರುರಾಯರು ಅತ್ಯಂತ ಶ್ರೇಷ್ಠ ಗಮಕಿಗಳಾಗಿದ್ದರು. ನೂರಾರು ಗಮಕವಾಚನ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. 'ಕುಮಾರವ್ಯಾಸ ಭಾರತದ' ವಾಚನ, ಇದಕ್ಕೆ ಆನಂದಕಂದ ಕಾವ್ಯನಾಮದ ಬೆಟಗೇರಿ ಕೃಷ್ಣಶರ್ಮರ ವ್ಯಾಖ್ಯಾನ ಕೂಡಿದರಂತೂ ಹಾಲು-ಜೇನು ಸೇರಿದಂತೆ. ಇವರಿಬ್ಬರ ವಾಚನ, ವ್ಯಾಖಾನ ಕಾರ್ಯಕ್ರಮ ತುಂಬ ಹೆಸರಾಗಿತ್ತು. ಅದರಲ್ಲೂ ಗಮಕಕ್ಕೆ ಹಿಂದುಸ್ತಾನಿ ಶೈಲಿಯ ರಾಗಗಳನ್ನು ಜೋಡಿಸಿ ಹಾಡುವಲ್ಲಿ ಗುರುರಾಯರದು ಎತ್ತಿದ ಕೈ. ಗುರುರಾಯರ ಆತ್ಮೀಯರೂ ಖ್ಯಾತ ನಾಟಕಕಾರರೂ ಸಾಹಿತಿಗಳೂ ಆದ ಎನ್ಕೆ ಕುಲಕರ್ಣಿಯವರೂ ಇವರೂ ಕೂಡಿಮಾಡಿದ

'ಕುಮಾರವ್ಯಾಸ ಭಾರತದ' ಹತ್ತೂ ಪರ್ವಗಳಿಂದ ಆಯ್ದ ಭಾಗಗಳ ವಾಚನ, ವಿವರಣೆ ಆಕಾಶವಾಣಿಯಲ್ಲಿ ಬಿತ್ತರಗೊಂಡು, ದಾಖಲೆಯ ಶ್ರೋತೃಗಳನ್ನೂ ಮುಟ್ಟಿದ್ದು ಇತಿಹಾಸ. ಗುರುರಾಯರ ಸಂಗೀತ ವಿದ್ವತ್ತು, ಜ್ಞಾನ, ಗಮಕಿ, ವಿಶಿಷ್ಟ ಶೈಲಿಯನ್ನು ನೋಡಿ ಇವರಿಗೆ 'ಗಮಕ ಗೌರೀಶಂಕರ' ಎಂಬ ಬಿರುದು ಪ್ರಾಪ್ತವಾಯಿತು.

ದೇಶಪಾಂಡೆ ಗುರುರಾಯರು ರಾಷ್ಟ್ರದಾದ್ಯಂತ ಅನೇಕ ಸಂಗೀತ ಸಮಾರೋಹಗಳಲ್ಲಿ ಭಾಗವಹಿಸಿ ಜನಪ್ರಿಯರಾದರು. ಈ ಮಧ್ಯೆ ಇವರ ಪತ್ನಿ 'ಇಂದಿರಾ' ಗುರುರಾಯರಿಗೆ ಐದು ಮಕ್ಕಳನ್ನು ಕರುಣಿಸಿದರು. ಇದರಲ್ಲಿ ಒಬ್ಬ ಮಗ ೨ ವರ್ಷದವನಾಗಿದ್ದಾಗ ತೀರಿಕೊಂಡಿದ್ದ. ಇಂಥ ಇಂದಿರಾಬಾಯಿ ತನ್ನ ೨೮ರ ವಯೋಮಾನದಲ್ಲೇ ಅನಾರೋಗ್ಯದಿಂದ ತೀರಿಕೊಂಡಾಗ ನಾಲ್ಕು ಮಕ್ಕಳ ತಂದೆ ಗುರುರಾಯರಿಗೆ ದಿಕ್ಕೇ ತೋಚಲಿಲ್ಲ. ಮುಂಬೈಯಲ್ಲಿ ಲಕ್ಷ್ಮಿ ಪಾಠಕ ಅನ್ನುವವರಿಗೆ ಸಂಗೀತ ಪಾಠ ಹೇಳಿ ಎಪ್ಪತ್ತೈದು ರೂಪಾಯಿ ಗಳಿಸಿ, ತಾವು ಒಂದು ಕಾರ್‌ಶೆಡ್ಡಿನಲ್ಲಿ ವಾಸಿಸುತ್ತಾ ತಂಗಿ ಶಾರಕ್ಕಾ ಹಾಗೂ ಮಕ್ಕಳಿಗಾಗಿ ಮನೆಗೆ ಕಷ್ಟಪಟ್ಟು ೫೦ ರೂಪಾಯಿ ಕಳಿಸುತ್ತಿದ್ದರು. ೧೯೪೭ರಲ್ಲಿ ಮುಂಬೈ ಆಕಾಶವಾಣಿಯಲ್ಲಿ ಹಾಡಲು ಪ್ರಾರಂಭಿಸಿದರು. ಇಲ್ಲಿಂದಲೇ ಎನ್ಕೆ ಅವರ, ಇವರ ಪರಿಚಯ ಗಾಢವಾಯಿತು.

೧೯೫೦ ರಿಂದ ಧಾರವಾಡ ಆಕಾಶವಾಣಿಯಲ್ಲಿ ಗುರುರಾಯರಿಗೆ ಸಂಗೀತವಿಭಾಗದ ಮುಖ್ಯಸ್ಥರೆಂದು ಹುದ್ದೆ ಲಭಿಸಿತು. ಸುಮಾರು ಎರಡು ದಶಕಗಳ ಕಾಲ ತಮ್ಮ ಅಪರೂಪದ ವೈವಿಧ್ಯಮಯ ಕಾರ್ಯಕ್ರಮಗಳಿಂದ ಶ್ರೋತೃಗಳ ಮನತಣಿಸಿದರು. ಸಂಗೀತ ಪಾಠ, ವಾದ್ಯ-ಮೇಳ, ರೂಪಕಗಳು ಹೀಗೆ ನೂರಾರು ಕಾರ್ಯಕ್ರಮಗಳನ್ನು ನೀಡಿದರು. ಚುರಮುರಿ ಶೇಷಗಿರಿರಾಯರ 'ಕನ್ನಡ ಶಾಕುಂತಲ' ನಾಟಕವನ್ನು ಗುರುರಾಯರೇ ಸಂಗೀತ ನಿರ್ದೇಶಿಸಿ ಪ್ರಸ್ತುತಪಡಿಸಿದರು. ಹಾಗೆಯೇ ಬೆಟಗೇರಿ ಕೃಷ್ಣಶರ್ಮರ 'ಭಗೀರಥ' ಸಂಗೀತರೂಪಕವನ್ನು ಗುರುರಾಯರೇ ನಿರ್ದೇಶಿಸಿದ್ದರು. ಇದರಲ್ಲಿ ಡಾ. ಗಂಗೂಬಾಯಿ ಹಾನಗಲ್‌ರು ಪಾಲ್ಗೊಂಡಿದ್ದರು. ಗುರುರಾಯರ ಅನೇಕ ಕಾರ್ಯಕ್ರಮಗಳು ಶ್ರೋತೃಗಳ ಅಪಾರ ಮೆಚ್ಚುಗೆ ಗಳಿಸಿದ್ದವು. ಅಸಂಖ್ಯಾತ ಪತ್ರಗಳು ಇವರ ಕಾರ್ಯಕ್ರಮಗಳನ್ನು ಮೆಚ್ಚಿ ಬಂದಿದ್ದವು. ಅದಕ್ಕೆ ಎನ್ಕೆ ಅವರು "ಗುರುರಾಯರು ನಿಜವಾದ ಸಂಸ್ಕಾರವಂತರು, ಸಾಹಿತ್ಯ ಗ್ರಂಥಗಳ ಯೋಗ್ಯ ಆಯ್ಕೆಯ ವಾಚನ ಅವರದು. ಇಂಗ್ಲೀಷ್‌ನಲ್ಲಿ ಕಾರ್ಲ‌ಮನ್, ಶೇಕ್ಸಪೀಯರ್ ಅಂತಹ ಶ್ರೇಷ್ಠ ಸಾಹಿತಿಗಳನ್ನು, ಕನ್ನಡದಲ್ಲಿ ಕುಮಾರವ್ಯಾಸ, ಲಕ್ಷ್ಮೀಶರನ್ನೂ, ಮರಾಠಿಯಲ್ಲಿ ಜ್ಞಾನೇಶ್ವರಿ ಗುರುಚರಿತ್ರೆಯನ್ನೂ ಓದಿಕೊಂಡ ಜ್ಞಾನಿ ಆತ್ಮಾನಂದರು" ಎಂದು ಉಲ್ಲೇಖಿಸಿದ್ದಾರೆ. ಅಲ್ಲದೇ ಎನ್ಕೆ ಅವರು ಗುರುರಾಯರೊಂದಿಗಿನ ತಮ್ಮ ಸ್ನೇಹ, ಅವರ ಹಾಸ್ಯಪ್ರಜ್ಞೆ, ವಿದ್ವತ್‌ಪೂರ್ಣ ಚಾಟೂಕ್ತಿಗಳನ್ನೆ ಸದಾ ಸ್ಮರಿಸುತ್ತಿದ್ದರು.

ಗುರುರಾಯರು ತಮ್ಮ ಜೀವನದಲ್ಲಿ ನಿಂಬಾಳ 'ಗುರುದೇವ ರಾನಡೆಯವರ' ವಿಚಾರ, ವಾಣಿಗಳನ್ನು ಅಳವಡಿಸಿಕೊಂಡಿದ್ದರು. ರಾನಡೆಯವರು ತಮಗೆ ಸಮಯಾವಕಾಶವಾದಾಗ ಗುರುರಾಯರನ್ನೇ ತಮ್ಮೆಡೆ ಕರೆಸಿಕೊಳ್ಳುತ್ತಿದ್ದರು. ತಮ್ಮ ಉಪನ್ಯಾಸಗಳ ಮಧ್ಯೆ ಗುರುರಾಯರಿಂದ ಗಾಯನ, ಹಾಡು, ಭಕ್ತಿಗೀತೆಗಳನ್ನು ಹಾಡಿಸಿ

ಆನಂದ ಪಡುತ್ತಿದ್ದರು.


ಗುರುರಾಯರದು ಸರಳ ಸಾತ್ವಿಕ ಬದುಕು. ಪ್ರಾಮಾಣಿಕರು. ಜೊತೆಗೆ ಜ್ಯೋತಿಶ್ಶಾಸ್ತ್ರದ ಅಧ್ಯಯನವನ್ನು ಮಾಡಿದ್ದರು. ಹೋಮಿಯೋಪಥಿ ಚಿಕಿತ್ಸೆಯನ್ನು ಅರಿತಿದ್ದರು. ಹೀಗೆ ಬಹುಶ್ರುತರು. ಗುರುರಾಯರು ಅತ್ಯುತ್ತಮ ಸಂಗೀತದ ಗುರು. ಕಲಿಸುವಲ್ಲಿ ತುಂಬ ಕಟ್ಟು ನಿಟ್ಟು, ಸಮಯ ಪಾಲನೆ, ಶೃತಿ–ಲಯಗಳ ಬಗ್ಗೆ ತುಂಬ ಭಕ್ತಿ ವಿಶ್ವಾಸ.. ಗುರು–ಶಿಷ್ಯ ಪರಂಪರೆಯನ್ನು ಚಾಚೂ ತಪ್ಪದೇ ಪಾಲಿಸಿದವರು. ಇವರ ಶಿಷ್ಯರಲ್ಲಿ ಶ್ರೀ ನಾರಾಯಣರಾವ್ ಮುಜುಂದಾರ, ಬಿ.ಎನ್. ಲೋನಖಡಿ, ಶ್ರೀಮತಿ ಲತಾ ನಾಡಗೇರ, ಪಂ. ವಿನಾಯಕರಾವ್ ತೊರವಿ, ಶ್ರೀಮತಿ ಲಕ್ಷ್ಮೀಬಾಯಿ ದಾತಾರ, ಡಿ.ಎಚ್. ಹಾವನೂರ ಮೊದಲಾದವರು ಪ್ರಮುಖರು.

ರಾಯರ ಮಕ್ಕಳಾದ ಶ್ರೀಮತಿ ಸುನಂದಾ ಕಡಪಾ, ಪ್ರೊ. ಮಾಲಾ ದೀಕ್ಷಿತ್, ಶ್ರೀಮತಿ ವಿಜಯಾ ಲಿಂಗಸೂರ, ಮತ್ತು ಮಗ ಶ್ರೀ ತ್ರಿಯಂಬಕ ದೇಶಪಾಂಡೆ ಎಲ್ಲರೂ ತಂದೆಯ ಸಂಗೀತದಿಂದ ಸಂಸ್ಕಾರ ಪಡೆದವರು. ಇಂಥ ಮೇರುಗಾಯಕರಿಗೆ ಕುಂದಗೋಳದಲ್ಲಿ ಸವಾಯಿ ಗಂಧರ್ವರ ೨೪ನೇ ಪುಣ್ಯತಿಥಿ ಮಹೋತ್ಸವದಲ್ಲಿ 'ಗಾಯನಾಚಾರ್ಯ' ಎಂಬ ಬಿರುದು ನೀಡಿ ಸತ್ಕರಿಸಲಾಯಿತು. ೧೯೭೧ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು. ರಾಯರು ಎಂದೂ ಪ್ರಶಸ್ತಿ, ಪುರಸ್ಕಾರಗಳಿಗೆ ಆಶಿಸಲೇ ಇಲ್ಲ. ಬೇಕಿದ್ದರೆ ಕೊಡಲಿ, ಇಲ್ಲದಿದ್ದರೆ ಇಲ್ಲ ಎಂಬ ನಿಷ್ಠುರ ಸ್ವಭಾವ ಇವರದು. ಆದರೆ ಜನರ ಪ್ರೀತಿ, ವಿಶ್ವಾಸವನ್ನು ಅಪಾರವಾಗಿ ಪಡೆದವರು. ಈ ನಾದಮಹರ್ಷಿ ೧೯೮೨ ಡಿಸೆಂಬರ್ ೩ ರಂದು ಯಾವ ಕಾಯಿಲೆ ಕಸಾಲೆಗೆ ಸಿಲುಕದೇ ಶಾಂತವಾಗಿ ನಾದಲೋಕದಲ್ಲಿ ಲೀನವಾದರು.

ಇಂಥ ಗಾಯನಾಚಾರ್ಯರ ಶಿಷ್ಯ, ಜನಪ್ರಿಯ ಗಾಯಕ ಪಂ. ವಿನಾಯಕರಾವ್ ತೊರವಿ ಅವರು ಗುರುಗಳ ಮೇಲಿನ ಭಕ್ತಿ, ವಿಶ್ವಾಸದಿಂದ ಗುರುರಾಯರ ಪುಣ್ಯತಿಥಿಯಂದು ಸಂಗೀತ ಸಮಾರಂಭವನ್ನೇ ಪ್ರತಿವರ್ಷ ಏರ್ಪಡಿಸಿ ಗುರುವಿನ ಸ್ಮರಣೆಗೈಯ್ಯುತ್ತಾರೆ. ಪಂ. ಗುರುರಾವ್ ದೇಶಪಾಂಡೆಯವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಾರೆ.

ಇಂಥ ಧೀಮಂತ ಶ್ರೇಷ್ಠ ಗಾಯಕರು, ದೇಶಪಾಂಡೆ ಗುರುರಾಯರು.

■ ■ ■



ಪಂಡಿತ ಭೀಮಸೇನ ಜೋಶಿ

# ಭಾರತರತ್ನ
# ಪಂಡಿತ ಭೀಮಸೇನ ಜೋಶಿ
# (೧೯೨೨-೨೦೧೧)

● ಡಾ. ಮಲ್ಲಿಕಾರ್ಜುನ ಎಸ್.ತರ್ಲಗಟ್ಟಿ

ಭೀಮಸೇನ ಜೋಶಿಯವರು ಜನಿಸಿದ್ದು ಧಾರವಾಡ ಜಿಲ್ಲೆಯ ಗದಗ ತಾಲೂಕಿನ (ಇಂದು ಗದಗ ಜಿಲ್ಲೆ) ರೋಣದಲ್ಲಿದ್ದ ತಾಯಿಯ ಅಕ್ಕನ ಮನೆಯಲ್ಲಿ ಫೆಬ್ರುವರಿ ೧೪, ೧೯೨೨ ರಥಸಪ್ತಮಿಯಂದು. ತಂದೆ ಗುರುರಾಜಾಚಾರ್ಯ, ತಾಯಿ ಗೋದಾವರಿಬಾಯಿ, ಗದಗ ಸಮೀಪದ ಹೊಂಬಳದ ಜೋಶಿಮನೆತನವು ವೈದಿಕ ಸಂಪ್ರದಾಯದ ವೈಷ್ಣವ ಕುಟುಂಬ. ಇವರ ಅಜ್ಜ ಭೀಮಸೇನಾಚಾರ್ಯರು ವಿದ್ವತ್‌ಪೂರ್ಣವಾಗಿ ಗೀತೆ, ಭಾಗವತ, ಮಹಾಭಾರತಗಳನ್ನು ಸುಮಧುರ ಧ್ವನಿಯಲ್ಲಿ ಹಾಡುತ್ತಿದ್ದರು. ತನ್ಮೂಲಕ ಬುದ್ಧಿ, ಅಂತಃಕರಣಗಳೆರಡನ್ನು ತಣಿಸಿದ ಪುರಾಣಿಕರು. ಇವರ ನಂತರ ಮನೆಯಲ್ಲಿದ್ದ ತಂಬೂರಿಯನ್ನು ಭೀಮಸೇನರು ಏಳುವರ್ಷದವರಿದ್ದಾಗ ಕೈಗೆತ್ತಿಕೊಂಡಾಗ ಆ ತಂಬೂರಿಯ ನಾದ ಮತ್ತೆ ಪ್ರಾರಂಭವಾಯಿತು. ಭೀಮಸೇನರ ತಾಯಿ ಗೋದಾವರಿಬಾಯಿಯವರು ಒಳ್ಳೆ ಹಾಡುಗಾರ್ತಿಯಾಗಿದ್ದು, ಧಾರ್ಮಿಕ ಹಿನ್ನೆಲೆಯ ಕುಟುಂಬದವರಾಗಿದ್ದರು. ಸ್ವಾಭಾವಿಕವಾಗಿ ದೇವರ ನಾಮ, ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಹೀಗೆ ಅಜ್ಜ, ತಾಯಿಯ ಗಾನಮಾಧುರ್ಯದ ಪ್ರಭಾವಳಿಯ ಹಿನ್ನೆಲೆಯಲ್ಲಿ ಭೀಮಸೇನರು ಬಾಲ್ಯದಿಂದಲೇ ಸಹಜವಾಗಿ ಸಂಗೀತದ ಸಪ್ತಸ್ವರಗಳ ಮೋಡಿಗೆ ಒಳಗಾದರು. ಇಂತಹ ಚೈತನ್ಯರವಿಯು ಸಪ್ತಾಶ್ವಗಳನ್ನೇರಿ ಪ್ರಖರತೆಯ ಪರ್ವವಾದ ರಥಸಪ್ತಮಿಯಂದು ಜನಿಸಿದ್ದು ಒಂದು ಕಾಕತಾಳೀಯವೆ.

ಹೀಗೆ ಸಂಗೀತದ ಬಳುವಳಿಯನ್ನು ಮನೆಯಿಂದಲೇ ಪಡೆದುಕೊಂಡ ಭೀಮಸೇನರಿಗೆ ತಂದೆ ಗುರುರಾಜಾಚಾರ್ಯರು ತಮ್ಮ ತಂದೆಯವರ ಹಳೇ ತಂಬೂರಿಯೊಂದಿಗೆ ನಾದ-ನಿನಾದಗಳ ಪುನರುತ್ಪತ್ತಿಗೆ ಮಗನ ಜೊತೆಗೆ ಹೆಜ್ಜೆ ಇಟ್ಟರು. ಪ್ರಾರಂಭದಲ್ಲಿ ಕುರ್ತಕೋಟಿ ಅಗಸರ ಚೆನ್ನಪ್ಪನ ಹತ್ತಿರ ಸಂಗೀತ ಕಲಿಯಲು ಏರ್ಪಾಡು ಮಾಡಿದರು. ಅಲ್ಲಿ ಭೀಮಪಲಾಸಿ ರಾಗದಿಂದ ಅಭ್ಯಾಸ ಪ್ರಾರಂಭವಾಯಿತು, ಜೊತೆಗೆ ಬಾದಾಮಿಯ ಶ್ಯಾಮಾಚಾರ್ಯರಲ್ಲೂ ಸಂಗೀತ ಪಾಠ ನಡೆದಿತ್ತು.

ಒಮ್ಮೆ ಚೆನ್ನಪ್ಪ ತನ್ನ ಗುರುಗಳಾದ ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿಗಳ ಸಂಗೀತ ಕೇಳಲು ಭೀಮಸೇನರನ್ನು ಜೊತೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಪಂಚಾಕ್ಷರಿ ಗವಾಯಿಗಳೆದುರು ಭೀಮಸೇನರಿಗೆ ಹಾಡಲು ಹೇಳಿ ಅವರ ಗಾಯನವನ್ನು ಕೇಳಿಸಿದರು. ಭೀಮಸೇನರ ಗಾಯನ ಕೇಳಿದ ಪಂಚಾಕ್ಷರಿ

ಗವಾಯಿಗಳು ಚೆನ್ನಪ್ಪ, ಇವನಿಗೆ ಕಲಿಸುವ ಯೋಗ್ಯತೆ ನಿನ್ನಲಿಲ್ಲ, ಇವನು ನನ್ನ ಹತ್ತಿರವಿರಲಿ, ಇಲ್ಲದಿದ್ದಲ್ಲಿ ಪುಣೆ–ಮುಂಬೈಯಲ್ಲಿರುವ ದೊಡ್ಡ ಗವಾಯಿಗಳ ಹತ್ತಿರ ಕಳಿಸಿದರೆ ಇವನು ಸಂಗೀತದಲ್ಲಿ ಹೆಸರು ಗಳಿಸುವನು ಎಂದದ್ದು ಭೀಮಸೇನರಿಗೆ ನಾನು ಹೆಚ್ಚಿನ ವಿದ್ಯೆ ಕಲಿಯಬೇಕು ಎಂಬ ಮಹತ್ವಾಕಾಂಕ್ಷೆ ಹೆಚ್ಚಾಗುವಂತೆ ಮಾಡಿತು. ಮುಂದೆ ಭೀಮಸೇನರು ಅದೇ ಮಾರ್ಗದಲ್ಲಿ ಸಾಗಿ ಪಂಚಾಕ್ಷರಿ ಗವಾಯಿಗಳು ನುಡಿದಂತೆ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದ್ದು ಇತಿಹಾಸ.

ಉಸ್ತಾದ ಅಬ್ದುಲ್ ಕರಿಂಖಾನ್ ಸಾಹೇಬರ ಗಾಯನ ಆಲಿಸುತ್ತಿದ್ದ ಮಗನ ಸಂಗೀತವ್ಯಾಮೋಹವನ್ನು ಮನಗಂಡ ಇವರ ತಂದೆ ಭೀಮಸೇನರನ್ನು ಅಬ್ದುಲ್ ಕರಿಂಖಾನ್‌ರ ಶಿಷ್ಯರಾದ ಸವಾಯಿ ಗಂಧರ್ವ (ರಾಮಭಾವು ಕುಂದಗೋಳಕರ)ರ ಹತ್ತಿರ ಕರೆದೊಯ್ದರು. ಆದರೆ ಅನಿವಾರ್ಯ ಕಾರಣಗಳಿಂದ ಶಿಷ್ಯತ್ವ ದೊರೆಯದಿದ್ದಾಗ ಭೀಮಸೇನರ ಸಂಗೀತಾಸಕ್ತಿ ಹೆಚ್ಚಾಗಿ ಸಂಗೀತದ ಗುರುವನ್ನರಸುವ ಬಯಕೆಯಿಂದ ಕೇವಲ ನೆಪ ಎಂಬಂತೆ ತನ್ನ ತಾಯಿ ಒಂದು ಚಮಚ ತುಪ್ಪ ಹಾಕಲಿಲ್ಲ ಎಂಬ ನೆಪಮಾಡಿಕೊಂಡು ಮನೆ ಬಿಟ್ಟು ಹೊದರು. ಮನೆಬಿಟ್ಟು ಹೊರಟ ಭೀಮಸೇನರು ಟಿಕೇಟ್ ಇಲ್ಲದೆ ರೇಲ್ವೆಯಲ್ಲಿ ಬಿಜಾಪುರ, ಪುಣೆ, ಮುಂಬೈ, ದೆಹಲಿ, ಗ್ವಾಲಿಯರ್ ಮುಂತಾದ ಊರೂರು ಅಲೆದು ಪಡಬಾರದ ಕಷ್ಟ ಪಟ್ಟರು. ಗ್ವಾಲಿಯರ್‌ದ ಮಾಧವ ಸಂಗೀತ ವಿದ್ಯಾಲಯದಲ್ಲಿ ಹಾಫೀಜ ಅಲಿಯವರ ಪರಿಚಯವೂ ಆಗಿ, ಆ ವಿದ್ಯಾಲಯದಲ್ಲಿ ಒಂದು ಹೊತ್ತು ಊಟ ಹಾಗೂ ಸಂಗೀತ ಪಾಠವು ದೊರಕಿತು; ಅಲ್ಲದೇ ರಾಜಭೈಯ್ಯಾ, ಭಾತಖಂಡೆ, ಕೃಷ್ಣರಾವ್‌ರಂತಹ ಸಂಗೀತವಿದ್ವಾಂಸರ ಪರಿಚಯವು ಆಯಿತು. ಕೆಲ ಸಮಯ ಕಳೆದ ಭೀಮಸೇನರಿಗೆ ಆ ವಿದ್ಯಾಲಯ ಹಿಡಿಸದೆ ಮುಂದೆ ಕಲ್ಕತ್ತಾ, ನಂತರ ಜಲಂಧರ್‌ಗೆ ಬಂದರು.

ಜಲಂಧರ್‌ದಲ್ಲಿ ಹರಿವಲ್ಲಭ ಸ್ಮರಣಾರ್ಥ ಮೂರು ದಿನಗಳ ಕಾಲ ಆಯೋಜಿಸಿದ ಸಂಗೀತ ಸಮಾರೋಹದಲ್ಲಿ ಅನೇಕ ದಿಗ್ಗಜ ಕಲಾವಿದರಾದ ರಾಮಕೃಷ್ಣಬುವಾ, ವಿಷ್ಣು ದಿಗಂಬರ ಪಲೂಸ್ಕರ ಮುಂತಾದವರ ಸಂಗೀತ ಕೇಳುವ ಅವಕಾಶ ದೊರೆಯಿತು. ನಂತರ ೧೯೩೩ರಲ್ಲಿ ಜಲಂಧರ್‌ದ ಪಂಡಿತ ಮಂಗತರಾಮರ ಶಿಷ್ಯರಾಗುವ ಅವಕಾಶ ದೊರಕಿ ಅವರಲ್ಲಿ ದ್ರುಪದ, ಧಮಾರ ಶೈಲಿಯಲ್ಲಿ ವಿಶೇಷ ತರಬೇತಿ ಪಡೆದುಕೊಂಡರು. ಜಲಂಧರ್‌ನಲ್ಲಿ ಮುಂದೊಂದು ದಿನ ಪಂ. ವಿನಾಯಕರಾವ್ ಪಟವರ್ಧನರ ಪರಿಚಯ ಹಾಗೂ ಮಾರ್ಗದರ್ಶನವಾಯಿತು. ಪಂಡಿತ ಪಟವರ್ಧನರು "ನೀನು ಖಯಾಲ್ ಗಾಯನ ಕಲಿಯುವುದಕ್ಕೆ ಇಷ್ಟು ದೂರ ಏಕೆ ಬಂದೆ? ನಿಮ್ಮೂರ ಹತ್ತಿರದಲ್ಲಿಯೇ ಸವಾಯಿ ಗಂಧರ್ವರು ಇರುವಾಗ ಯಾಕೆ ಈ ಅಲೆದಾಟ?" ಎಂದಾಗ ಭೀಮಸೇನರಿಗೆ ಜ್ಞಾನೋದಯವಾದಂತಾಗಿ ತಮ್ಮ ತಂದೆಯವರಿಗೆ ಪತ್ರಮುಖೇನ ವಿಷಯ ತಿಳಿಸಿ, ಊರಿಗೆ ಬಂದು ತಂದೆಯವರೊಂದಿಗೆ ಕುಂದಗೋಳಕ್ಕೆ ಹೋಗಿ ಸವಾಯಿ ಗಂಧರ್ವರ ಹತ್ತಿರ ಶಿಷ್ಯತ್ವವನ್ನು ಪಡೆದುಕೊಂಡರು. ಸವಾಯಿ ಗಂಧರ್ವರ ಹತ್ತಿರ ಗುರುಕುಲಪದ್ಧತಿಯಂತೆ ಬಹಳ ಕಷ್ಟಪಟ್ಟು ಸಂಗೀತಾಭ್ಯಾಸ ಮಾಡುತ್ತಿದ್ದರು. ಆದರೆ ಅನಿವಾರ್ಯ ಕಾರಣಗಳಿಂದ ಗುರುಗಳ ಆಜ್ಞೆಯಂತೆ ಅಲ್ಲಿಂದ ಮತ್ತೆ ಮನೆಗೆ ಬಂದರು. ಆದರೆ ಇವರ ತಂದೆಯವರು ಸುಮ್ಮನಿರದೆ ಮನೆಯಲ್ಲಿ ಸಂಗೀತ ಅಭ್ಯಾಸಕ್ಕೆ ಎಲ್ಲ ವ್ಯವಸ್ಥೆ

ಮಾಡಿ, ಅನೇಕ ಸಂಗೀತ ಕಚೇರಿಗಳ ವ್ಯವಸ್ಥೆಯನ್ನು ಸಹ ಮಾಡುತ್ತಿದ್ದರು. ಅವರ ಅಭಿಲಾಷೆಯಂತೆ ಭೀಮಸೇನರು ಮಂತ್ರಾಲಯದ ಗುರುರಾಘವೇಂದ್ರ ಸ್ವಾಮಿಗಳ ಸನ್ನಿಧಿಯಲ್ಲಿ ಎರಡು ತಿಂಗಳು ಸಂಗೀತಸೇವೆಯನ್ನು ಮಾಡಿ ಅವರ ಅನುಗ್ರಹ, ಆಶೀರ್ವಾದಗಳೊಂದಿಗೆ ಹಂತಹಂತವಾಗಿ ಅನೇಕ ಕಾರ್ಯಕ್ರಮಗಳನ್ನು ಕೊಡುತ್ತಾ ಸಾಗಿದರು. ಆಕಾಶವಾಣಿ ಮನ್ನಣೆ ನಂತರ ಪುನಃ ಸವಾಯಿ ಗಂಧರ್ವರ ಅರವತ್ತು ವರ್ಷದ ಹುಟ್ಟುಹಬ್ಬದಲ್ಲಿ ಗುರುಗಳ ಸಮ್ಮುಖ ಹಾಡುವ ಅವಕಾಶ ದೊರಕಿತು. ನಂತರ ಸವಾಯಿ ಗಂಧರ್ವರಿಗೆ ಶಿಷ್ಯನಲ್ಲಿನ ದೂಷಿತಭಾವವು ದೂರವಾಗಿ ಮತ್ತೆ ಅವರನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಅನೇಕ ರಾಗಗಳನ್ನು ಹೇಳಿಕೊಟ್ಟರು.

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಪುರಂದರದಾಸರ ವಾಣಿಯಂತೆ ಭೀಮಸೇನರು ಸವಾಯಿ ಗಂಧರ್ವರ ಕಟ್ಟು ನಿಟ್ಟಾದ ನಿಯಮಗಳನ್ನು ಪಾಲಿಸಿ, ಸರ್ವಸ್ವವನ್ನೂ ಗುರುವಿಗೆ ಅರ್ಪಿಸಿ, ಕಠಿಣ ಪರಿಶ್ರಮದಿಂದ ಸಂಗೀತ ವಿದ್ಯೆಯನ್ನು ಪಡೆದುಕೊಂಡರು.

ಕಾಲಾಂತರದಲ್ಲಿ ಪುಣೆಯಲ್ಲಿ ನೆಲೆಸಿದ ಭೀಮಸೇನರು ಹಿಂದುಸ್ತಾನಿ ಸಂಗೀತಕ್ಷೇತ್ರದಲ್ಲಿ ಜನಪ್ರಿಯ ಮೆಟ್ಟಿಲುಗಳನ್ನೆರುತ್ತಲೇ ಸಾಗಿದರು. ನಡುವೆ ಮೊದಲ ಪತ್ನಿ ಸುನಂದಾ ಇವರಿಂದ ನಾಲ್ಕು ಮಕ್ಕಳು ರಾಘವೇಂದ್ರ, ಉಷಾ, ಸುಮಂಗಲಾ, ಆನಂದ. ನಂತರ ಎರಡನೆಯ ಮದುವೆ ಶ್ರೀಮತಿ ವತ್ಸಲಾ ಅವರೊಂದಿಗೆ. ಇವರಿಗೆ ಮೂರು ಮಕ್ಕಳು ಜಯಂತಿ, ಶುಭದಾ ಮತ್ತು ಶ್ರೀನಿವಾಸ. ಹೀಗೆ ತುಂಬಿದ ಕೌಟುಂಬಿಕ ಜೀವನದ ಜೊತೆಗೆ ಇವರ ಗಾಯನವು ದಿನದಿಂದ ದಿನಕ್ಕೆ ಪರಿಪಕ್ವತೆಯೊಂದಿಗೆ ಭಾರತಾದ್ಯಂತ ಅಷ್ಟೇ ಅಲ್ಲದೇ ವಿದೇಶಗಳಲ್ಲಿಯೂ ಸಹ ಪ್ರಖ್ಯಾತಿಯನ್ನು ಪಡೆಯಿತು.

ಕಿರಾಣಾ ಶೈಲಿಯ ಭದ್ರ ಅಡಿಪಾಯದೊಂದಿಗೆ ಸ್ವರಮಾಧುರ್ಯದ ಆಲಾಪದೊಂದಿಗೆ ಗ್ವಾಲಿಯರ್, ಜೈಪುರ, ಪಾಟಿಯಾಲಾ ಘರಾಣೆಗಳ ಸಮನ್ವಯದ ಮೆರಗು, ಇವುಗಳಿಗೆ ಪೂರಕವಾಗಿ ಗಂಭೀರವಾದ ಧ್ವನಿ, ಶೃತಿ, ಸ್ವರ, ಭಾವಕ್ಕನುಗುಣವಾಗಿರುವ ಗಾಯನಕ್ಕೆ ತಡೆರಹಿತ ಶಕ್ತಿಯನ್ನು ಪೂರೈಸುವ ದಣಿವರಿಯದ ಶರೀರ ಹಾಗೂ ಶಾರೀರ ಇವರ ವೈಶಿಷ್ಟ್ಯ.

ಪಂಢರಪುರದ ಶ್ರೀ ವಿಠ್ಠಲನ ಭಕ್ತಿಗೀತೆಗಳಾದ ಪಂಢರಿನಿವಾಸ ಸಖಾಪಾಂಡುರಂಗ, ಮಾಝೆ ಮಾಹೇರ ಪಂಢರಿ, ತೀರ್ಥವಿಠ್ಠಲ ಕ್ಷೇತ್ರ ವಿಠ್ಠಲ ಹಾಡುಗಳು, ಕನ್ನಡದ ದೇವರ ನಾಮಗಳು, ಹಿಂದಿ ಭಜನೆಗಳು, ಸಂತವಾಣಿ ಮುಂತಾದವುಗಳು ಇವರಿಗೆ ಪ್ರಸಿದ್ಧಿ ತಂದವು. ಶಾಸ್ತ್ರೀಯ ಸಂಗೀತದಲ್ಲಿ ರಾಗ ಮಿಯಾಮಲ್ಹಾರ, ಪೂರಿಯಾ, ಮಾರವಾ, ಪೂರಿಯಾಧನಶ್ರೀ, ಶುದ್ಧಕಲ್ಯಾಣ, ದರ್ಬಾರಿಕಾನಡಾ, ಭೀಮಪಲಾಸ, ಯಮನ, ಭೈರವಿ ಮುಂತಾದ ಹತ್ತೂ ಥಾಟಗಳ ಎಲ್ಲ ಜನಪ್ರಿಯ ರಾಗಗಳು ಅಲ್ಲದೇ ಸ್ವರಚಿತ ಕಲಾಶ್ರೀ ರಾಗಗಳು ಮತ್ತು ಅಪ್ರಚಲಿತ ಲಲಿತಭಟಿಯಾರ, ಛಾಯಾಮಲ್ಹಾರ ಮುಂತಾದ ರಾಗಗಳು ಭೀಮಸೇನರ ಕಂಠದಲ್ಲಿ ಜೀವ ಪಡೆಯುತ್ತಿದ್ದವು. ನಾನು ಕೇಳಿದ ಧಾರವಾಡದ ಕಲಾಭವನದ ಕಾರ್ಯಕ್ರಮದ ದರ್ಬಾರಿಕಾನಡಾ ರಾಗದ ಮಂದ್ರಸಪ್ತಕದ ಸ್ವರಗಳ ಬೆಳವಣಿಗೆ, ನಂತರ

ಸಮಯಕ್ಕನುಗುಣವಾಗಿ ಅವರು ತಕ್ಷಣ ತಾರಸಪ್ತಕ ಪ್ರಧಾನವಾದ ಚೊಗಿಯಾ ರಾಗದ ಠುಮರಿಯು ಅವರ ಗಾಯನದ ಶ್ರೇಷ್ಠತೆಯ ಉದಾಹರಣೆಯಾಗಿದೆ. ಇದು ಎಂದೂ ಮರೆಯಲಾರದ ಕಾರ್ಯಕ್ರಮ. ಅವರ ಎಲ್ಲ ರಾಗಗಳ ಧ್ವನಿಮುದ್ರಿಕೆಗಳು ಲಭ್ಯವಿದ್ದು ನಿರಂತರ ಬೇಡಿಕೆಯಲ್ಲಿರುವವು.

ಅಭಂಗ, ಸಂತವಾಣಿಗಳಿಂದ ಶ್ರೀ ಸಾಮಾನ್ಯ ಹಾಗೂ ಶಾಸ್ತ್ರೀಯ ಸಂಗೀತದಿಂದ ಹಿಂದುಸ್ತಾನಿ ಸಂಗೀತ ಕ್ಷೇತ್ರಕ್ಕೆ ಮಹಾ ಕೊಡುಗೆಯನ್ನು ನೀಡಿರುವ ಇವರು ಆರರಿಂದ ಆರವತ್ತರವರೆಗೆ ಎಲ್ಲರಿಗೂ ಪ್ರಿಯಗಾಯಕರು. ಇಷ್ಟು ಪ್ರಸಿದ್ಧಿ ಪಡೆದ ಭಾರತದ ಏಕೈಕ ಶಾಸ್ತ್ರೀಯ ಸಂಗೀತಗಾರರೆಂದರೆ ಪಂಡಿತ ಭೀಮಸೇನ ಜೋಶಿಯವರು ಒಬ್ಬರೆ.

ಹಲವಾರು ಚಲನಚಿತ್ರಗಳಲ್ಲಿ ಕಂಠದಾನ ಮಾಡಿದ ಇವರು ಅನೇಕ ಸಂಘ, ಶಾಲೆಗಳಿಗೆ ನಿಧಿಸಂಗ್ರಹನಿಮಿತ್ತ ಸಹಾಯಕ ಕಾರ್ಯಕ್ರಮಗಳನ್ನು ನಡೆಯಿಸಿಕೊಟ್ಟಿದ್ದಾರೆ.

ಇವರ ಅಗಾಧ ಸೇವೆಯನ್ನು ಗುರುತಿಸಿ ಸಂದ ಪ್ರಶಸ್ತಿ ಫಲಕಗಳು ಅಸಂಖ್ಯವಾಗಿದ್ದು, ಪ್ರಮುಖವಾಗಿ ಅನೇಕ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಹಾಗೂ ಭಾರತದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ಪ್ರಶಸ್ತಿ.

ಇವರ ಶಿಷ್ಯರಲ್ಲಿ ಪ್ರಮುಖರು, ಮಾಧವ ಗುಡಿ, ಶ್ರೀಕಾಂತ ದೇಶಪಾಂಡೆ ನಾರಾಯಣ ದೇಶಪಾಂಡೆ, ರಾಮಕೃಷ್ಣ ಪಟವರ್ಧನ, ಶ್ರೀಪತಿ ಪಾಡಿಗಾರ, ಉಪೇಂದ್ರ ಭಟ್, ವಿನಾಯಕ ತೊರವಿ ಮತ್ತು ಅವರ ಪುತ್ರ ಶ್ರೀನಿವಾಸ.

ಪಂಡಿತ ಭೀಮಸೇನ ಜೋಶಿಯವರ ಪರಿಚಯಾತ್ಮಕ ಲೇಖನವನ್ನು ಚಿಕ್ಕರೂಪದಲ್ಲಿ ಬರೆಯುವ ಪ್ರಯತ್ನದಲ್ಲಿ ವಿವರವಾಗಿ ಏನನ್ನೂ ವಿಶ್ಲೇಷಣೆ ಮಾಡಲು ಆಗಿಲ್ಲ. ಇದೊಂದು ಪಕ್ಷಿನೋಟವಷ್ಟೆ.

■ ■ ■



ಪಂ. ಡಾ. ಬಸವರಾಜ ರಾಜಗುರು

# ಸೂರ್ ಕಾ ಬಾದಶಹ
# ಪಂ. ಡಾ. ಬಸವರಾಜ ರಾಜಗುರು
# (೧೯೨೦-೧೯೯೧)

● ಡಾ. ಶಾಂತಾರಾಂ ಹೆಗಡೆ

ಕಳೆದ ಶತಮಾನದ ಪ್ರಾರಂಭದಲ್ಲಿ ಕರ್ನಾಟಕದಲ್ಲಿ ಹಿಂದುಸ್ತಾನಿ ಸಂಗೀತ ಪ್ರಚಾರವಾಗತೊಡಗಿದ್ದ ಕಾಲದಲ್ಲಿಯೇ ಅದು ಧಾರವಾಡಜಿಲ್ಲೆಯಲ್ಲಿ ಒಂದು ಗಟ್ಟಿನೆಲೆಯನ್ನು ಕಂಡುಕೊಳ್ಳತೊಡಗಿತ್ತು. ರಾಗಸಾಗರ ಪಂ. ನೀಲಕಂಠಬುವಾ ಮಿರಜಕರ, ಉಭಯಗಾಯನಾಚಾರ್ಯ ಪಂ. ಪಂಚಾಕ್ಷರಿ ಗವಾಯಿಗಳು ಹಾಗೂ ಪಂ. ಸವಾಯಿಗಂಧರ್ವರಂಥ ಶ್ರೇಷ್ಠ ಸಂಗೀತ ಗುರುಗಳ ಗರಡಿಯಲ್ಲಿ ಪಳಗಿದ ಅನೇಕ ಸಂಗೀತರತ್ನಗಳು ತಮ್ಮ ಅಪೂರ್ವ ಸಾಧನೆ ಹಾಗೂ ಸಿದ್ಧಿಯಿಂದ ಧಾರವಾಡಕ್ಕೆ ಅಖಿಲ ಭಾರತ ಮಟ್ಟದಲ್ಲಿ ಅತ್ಯಂತ ಗೌರವದ ಸ್ಥಾನವನ್ನು ತಂದುಕೊಟ್ಟವು. ಇಂಥ ಮಹಾಮಹಿಮರಲ್ಲಿ ಪದ್ಮಭೂಷಣ ಪಂ. ಬಸವರಾಜ ರಾಜಗುರು ಅವರು ಒಬ್ಬರು. ದೈವದತ್ತ ಸುಮಧುರ ಕಂಠದ ಬಸವರಾಜರು ಬಾಲಪ್ರತಿಭೆಯಾಗಿ ಸಂಗೀತಕ್ಷೇತ್ರಕ್ಕೆ ಬಂದರು. ಮುಂದೆ ಆರು ದಶಕಗಳಿಗೂ ಹೆಚ್ಚು ಕಾಲ ಶ್ರೇಷ್ಠ ಗಾಯಕರಾಗಿ ಹಾಗೂ ತುಂಬಾ ಅಪರೂಪದ ಗುರುಗಳಾಗಿ ಸಂಗೀತ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಅನನ್ಯ ಹಾಗೂ ವಿಶಿಷ್ಟವಾದದ್ದು.

ಡಾ. ಬಸವರಾಜ ರಾಜಗುರು ಅವರು ಜನಿಸಿದ್ದು ೨೪ ಅಗಸ್ಟ್ ೧೯೨೦ ರಂದು, ಧಾರವಾಡ ಜಿಲ್ಲೆಯ ಕುಂದಗೋಳತಾಲೂಕಿನ ಯಲಿವಾಳಗ್ರಾಮದಲ್ಲಿ. ಇವರ ಪೂರ್ವಜರು ಕೆಳದಿಸಂಸ್ಥಾನದ ರಾಜಗುರುಗಳಾಗಿದ್ದರಿಂದ ರಾಜಗುರು ಎಂಬ ಅಡ್ಡಹೆಸರು. ತಂದೆ ಮಹಾಂತಸ್ವಾಮಿ, ತಾಯಿ ರಾಚವ್ವ. ಸಂಗೀತ ಅವರಿಗೆ ಮನೆತನದ ಬಳುವಳಿ. ದೊಡ್ಡಪ್ಪ ಸಂಸ್ಕೃತ ವಿದ್ವಾಂಸರು, ಜ್ಯೋತಿಷಿಗಳು, ಚಿಕ್ಕಪ್ಪ ಚೆನ್ನಬಸವಸ್ವಾಮಿ ಬಯಲಾಟದ ಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು ಹಾಗೂ ಹಾರ್ಮೋನಿಯಂ ನುಡಿಸುತ್ತಿದ್ದರು. ತಂದೆ ಸಂಗೀತದ ಆರಾಧಕರು, ತಂಜಾವೂರಿಗೆ ಹೋಗಿ ಸಂಗೀತ ಕಲಿತು ಬಂದಿದ್ದರು. ಚೆನ್ನಾಗಿ ಪಿಟೀಲು ನುಡಿಸುತ್ತಿದ್ದರು.

ಬಸವರಾಜರು ೬ ವರ್ಷದವರಿದ್ದಾಗ ತಾಯಿಯನ್ನು ಕಳೆದುಕೊಂಡರು. ತಂದೆಯೇ ತಾಯಿಯೂ ಆಗಿ ಜೋಪಾನ ಮಾಡಿದರು. ೭ನೇ ವರ್ಷಕ್ಕೆ ತಂದೆಯಿಂದ ಸಂಗೀತಪಾಠ ಪ್ರಾರಂಭವಾಯಿತು. ಸುಮಾರು ಎರಡು ವರ್ಷಗಳ ಅವಧಿಯಲ್ಲಿ ಸರಳಿ, ಜಂಟಿ, ವರ್ಣ, ಕೀರ್ತನೆಗಳ ಅಭ್ಯಾಸವಾಯಿತು.

ಬಸವರಾಜರಿಗೆ ಬುದ್ಧಿ ತಿಳಿದಾಗಿನಿಂದ ಸಂಗೀತದ್ದೇ ಹುಚ್ಚು. ಎಲ್ಲಿಯೇ ಗಾಯನ ವಾದನವಿರಲಿ ಕೇಳುತ್ತ ಮೈಮರೆಯುತ್ತಿದ್ದರು. ಊರಲ್ಲಿ ಆಡುತ್ತಿದ್ದ ನಾಟಕಗಳನ್ನು

ತದೇಕಚಿತ್ತದಿಂದ ನೋಡಿ ನಾಟಕಪದಗಳನ್ನು ಕಂಠಪಾಠ ಮಾಡಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಮಗನ ಪ್ರತಿಭೆ ಹಾಗೂ ಒಲವನ್ನು ಕಂಡ ಮಹಾಂತಸ್ವಾಮಿಗಳು ಹುಬ್ಬಳ್ಳಿಯಲ್ಲಿ ಕ್ಯಾಂಪ್ ಮಾಡಿದ್ದ ವಾಮನರಾವ್ ಮಾಸ್ತರರ ಪ್ರಸಿದ್ಧ ವಿಶ್ವ ಗುಣಾದರ್ಶ ನಾಟಕ ಮಂಡಳಿಗೆ ಸೇರಿಸಿದರು.

ಆಗೆಲ್ಲ ಸಂಗೀತವೇ ಪ್ರಧಾನವಾಗಿದ್ದ ನಾಟಕಗಳ ಕಾಲ. ಬಸವರಾಜರು ಬಾಲನಟರಾಗಿ ಬಾಲಕೃಷ್ಣ, ದಾಸಿ ಮುಂತಾದ ಪಾತ್ರಗಳಲ್ಲಿ ನಟನೆ ಮತ್ತು ಮಧುರ ಕಂಠದ ಗಾಯನದಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಸ್ವತಃ ವಾಮನರಾವ್ ಅವರೇ ನಾಟಕಪದಗಳನ್ನು ಕಲಿಸುತ್ತಿದ್ದರು. ಕಂಪನಿ ಸೇರಿದ ಒಂದು ವರ್ಷದಲ್ಲಿ ತಂದೆ ಮಹಾಂತಸ್ವಾಮಿಯವರು ಪ್ಲೇಗಿಗೆ ಬಲಿಯಾದರು. ಅನಾಥಪ್ರಜ್ಞೆ ಕಾಡಿದ ಆ ಸಮಯದಲ್ಲಿ ಅವರ ದೊಡ್ಡಪ್ಪನ ಮಗನಾದ, ಕೆಳದಿಸಂಸ್ಥಾನದ ಮಠಾಧಿಪತಿಗಳಾಗಿದ್ದ ಶ್ರೀ ರೇವಣಸಿದ್ಧ ಶಿವಾಚಾರ್ಯರು ಸಹಾಯಕ್ಕೆ ಬಂದರು. ಬಹುಶಃ ಮುಂದೆ ತಮ್ಮ ಮಠಕ್ಕೆ ಮರಿ ಮಾಡಿಕೊಳ್ಳುವ ಆಸೆಯಿಂದ ಸಂಸ್ಕೃತ ಅಭ್ಯಾಸ ಮಾಡಿಸಲು ಹುಬ್ಬಳ್ಳಿಯ ಮೂರುಸಾವಿರಮಠದ ಸಂಸ್ಕೃತ ಪಾಠಶಾಲೆಗೆ ಸೇರಿಸಿದರು.

ಆಕಸ್ಮಿಕವಾಗಿ ಗಾನಯೋಗಿ ಪಂಚಾಕ್ಷರಿಗವಾಯಿಗಳು ಮೂರುಸಾವಿರಮಠಕ್ಕೆ ಬಂದಿದ್ದರು. ಆಗ ಮಠಾಧಿಪತಿಗಳಾಗಿದ್ದ ಶ್ರೀಗುರುಸಿದ್ಧ ಸ್ವಾಮಿಗಳು ವಟುವಾಗಿದ್ದ ಬಸವರಾಜರ ಪ್ರತಿಭೆ ಹಾಗೂ ಬುದ್ಧಿಮತ್ತೆಯ ಬಗ್ಗೆ ಗವಾಯಿಗಳಿಗೆ ವಿವರಿಸಿ, ಶಿಷ್ಯನನ್ನಾಗಿ ಸ್ವೀಕರಿಸುವಂತೆ ಶಿಫಾರಸು ಮಾಡಿದರು. ಗವಾಯಿಗಳು ಬಸವರಾಜರ ಮೈದಡವಿ "ಮಗು, ಒಂದು ಹಾಡು ಹೇಳಪ್ಪ" ಎಂದಾಗ ಅವರು ನಿರ್ಭಯವಾಗಿ 'ವೀರ ಅಭಿಮನ್ಯು' ನಾಟಕದ, 'ಭಕ್ತ ಜೀವನ ರಾಮಾ ಸುಜನ ಜೀವನ' ಎಂಬ ಪದವನ್ನು ಹಾಡಿದರು, ಗವಾಯಿಗಳು ತಲೆದೂಗುತ್ತಾ ಕೇಳಿ ಮತ್ತೊಂದು ಹಾಡನ್ನು ಹಾಡಲು ತಿಳಿಸಿದರು. ಬಸವರಾಜರು ಅದೇ ನಾಟಕದ 'ಕರುಣಾ' ಸಾಗರ ಪ್ರಭು ಪರಮಾತ್ಮ' ಎಂಬ ಹಾಡನ್ನು ಹಾಡಿದರು. ಗವಾಯಿಗಳು ಮೆಚ್ಚಿ ಶಿಷ್ಯನನ್ನಾಗಿ ಸ್ವೀಕರಿಸಿ, ಸ್ವಾಮಿಗಳಿಗೆ ತಿಳಿಸಿ ತಮ್ಮೊಂದಿಗೆ ಶಿವಯೋಗಮಂದಿರಕ್ಕೆ ಕರೆದೊಯ್ದರು. ಬಸವರಾಜರ ಭಾಗ್ಯದ ಬಾಗಿಲು ತೆರೆದಂತಾಯಿತು. ಇದು ನಡೆದಿದ್ದು ೧೯೩೦ರ ಜೂನ್ ತಿಂಗಳಲ್ಲಿ.

ಗುರುಸನ್ನಿಧಿಯಲ್ಲಿ ಬಸವರಾಜರ ಪಾಠ ಪ್ರಾರಂಭವಾಯಿತು. ಪ್ರತಿದಿನ ಬೆಳಿಗ್ಗೆ ೪ ರಿಂದ ೮ರವರೆಗೆ ಸಂಗೀತಾಭ್ಯಾಸ, ಸ್ನಾನ, ಪೂಜೆ, ಊಟ, ವಿಶ್ರಾಂತಿ, ಮಧ್ಯಾಹ್ನ ಪುನಃ ೪ ರಿಂದ ೭ರವರೆಗೆ ಸಂಗೀತಾಭ್ಯಾಸ. ಉಳಿದ ಸಮಯದಲ್ಲಿ ಕನ್ನಡ, ಸಂಸ್ಕೃತ, ಕಾವ್ಯ, ಪುರಾಣಗಳ ಅಭ್ಯಾಸ. ದಣಿವೆಂಬುದೇ ಇರದ ಪಂಚಾಕ್ಷರಿ ಗವಾಯಿಗಳು ಶಿಷ್ಯನ ಭವ್ಯ ಭವಿಷ್ಯವನ್ನು ಅರಿತವರಾಗಿ ವಿಶೇಷ ಪ್ರೀತಿಯಿಂದ ತಮ್ಮ ಜ್ಞಾನಸಂಪತ್ತನ್ನೆಲ್ಲ ಧಾರೆ ಎರೆದರು. ಹನ್ನೊಂದು ವರ್ಷಗಳ ಕಾಲ ಕರ್ನಾಟಕಿ, ಹಿಂದುಸ್ತಾನಿ ಎರಡೂ ಪದ್ಧತಿಗಳ ಅಧ್ಯಯನ ಮಾಡಿದರು. ಸ್ವತಃ ತಬಲಾವಾದಕರಾಗಿದ್ದ ಗವಾಯಿಗಳು ಬಸವರಾಜರಿಗೆ ಬೇರೆ ಬೇರೆ ತಾಳಗಳ ನೂರಾರು ಬಂದಿಶ್‌ಗಳನ್ನು ಅಭ್ಯಾಸ ಮಾಡಿಸಿದರು.

ಪಂಚಾಕ್ಷರಿ ಗವಾಯಿಗಳದ್ದು ಸಂಚಾರಿ ಪಾಠಶಾಲೆ. ೬೦-೭೦ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಕರ್ನಾಟಕದಾದ್ಯಂತ ಸಂಚರಿಸುತ್ತ, ಸಂಗೀತ ಹಾಗೂ

ಪುರಾಣಕಾರ್ಯಕ್ರಮ ನೀಡುತ್ತ ಸಾಗುತ್ತಿದ್ದರು. ಇದಕ್ಕೆ ಊರಿನ ಸಹೃದಯ ಸಂಗೀತಾಭಿಮಾನಿ ಶ್ರೀಮಂತರ ಸಹಾಯವು ಸಿಗುತ್ತಿತ್ತು. ಇಂತಹ ಅನೇಕ ಸಂದರ್ಭಗಳಲ್ಲಿ ಅವರು ಮೊದಲು ಬಸವರಾಜರಿಂದ ಹಾಡಿಸುತ್ತಿದ್ದರು. ೧೯೩೧ರಲ್ಲಿ ಕೊಪ್ಪಳ ಕ್ಯಾಂಪ್‌ನಲ್ಲಿದ್ದಾಗ ಅಲ್ಲಿಗೆ ಭೇಟಿ ನೀಡಿದ್ದ ಸಂಗೀತಪ್ರೇಮಿಯಾಗಿದ್ದ ಹೈದ್ರಾಬಾದ್ ನಿಜಾಮ ಸಾಲಾರ್‌ಜಂಗ್ ಬಸವರಾಜರ ಹಾಡನ್ನು ಕೇಳಿ ಒಂದು ಚಿನ್ನದ ಅರ್ಶಫಿ (ವರಹ)ಯನ್ನು ಬಹುಮಾನವಾಗಿ ಕೊಟ್ಟಿದ್ದರು. ೧೯೩೩ರಲ್ಲಿ ಪಂಚಾಕ್ಷರಿ ಗವಾಯಿಗಳಿಗೆ ಮುಂಬೈನ ಎಚ್.ಎಂ.ವಿ. ಕಂಪನಿಯಿಂದ ಧ್ವನಿಮುದ್ರಣಕ್ಕಾಗಿ ಆಹ್ವಾನ ಬಂದಾಗ ಬಸವರಾಜರೂ ಗುರುಗಳ ಜೊತೆ ಮುಂಬೈಗೆ ಹೋಗಿ ಇದ್ದು, ತಾವೂ ಸಹ ಹಾನಗಲ್ ಕುಮಾರಸ್ವಾಮಿಗಳ ಮೇಲೆ ಎರಡು ಭಕ್ತಿಗೀತೆಗಳನ್ನು ಹಾಡಿದರು. ಆಗ ಅವರ ವಯಸ್ಸು ಕೇವಲ ಹದಿಮೂರು ವರ್ಷ.

ಶಿಷ್ಯನ ಸಾಧನೆಯ ಪ್ರದರ್ಶನಕ್ಕಾಗಿ ಒಂದು ಒಳ್ಳೆಯ ಅವಕಾಶಕ್ಕಾಗಿ ಪಂಚಾಕ್ಷರಿ ಗವಾಯಿಗಳು ಕಾದಿದ್ದರು. ೧೯೩೬ರಲ್ಲಿ ವಿಜಯನಗರ ಉತ್ಸವದಲ್ಲಿ ಸುಮಾರು ಹದಿನೈದು ಸಾವಿರ ಶ್ರೋತೃಗಳ ಎದುರು ಪ್ರಥಮ ಬಾರಿಗೆ ಹಾಡುವ ಅವಕಾಶವನ್ನು ಅವರು ಕಲ್ಪಿಸಿದರು. ತಬಲಾಸಾಥಿಗೆ ಸ್ವತಃ ಪಂಚಾಕ್ಷರಿ ಗವಾಯಿಗಳು, ಹಾರ್ಮೋನಿಯಂ ಸಾಥಿಗೆ ಪುಟ್ಟರಾಜ ಗವಾಯಿಗಳು. ಅದೊಂದು ಅದ್ಭುತ ಕಾರ್ಯಕ್ರಮ. ಬಸವರಾಜರು ಹಾಡಿದ ರಾಗ 'ಬಾಗೇಶ್ರೀ' ಹಾಗೂ ನಿಜಗುಣರ 'ನೋಡಲಾಗದೆ' ಪದ ಸಂಗೀತ ರಸಿಕರ ಮನ ಸೂರೆಗೊಂಡಿತ್ತು. ಗಾಯನ ಕೇಳಿ ಮೈಸೂರು ಆಸ್ಥಾನ ವಿದ್ವಾಂಸರಾಗಿದ್ದ ಚಿಕ್ಕರಾಮರಾಯರು ವೇದಿಕೆಗೆ ಬಂದು, ಬಸವರಾಜರ ಬೆನ್ನು ಚಪ್ಪರಿಸಿದರು. ಇಂಥ ಶಿಷ್ಯರತ್ನವನ್ನು ಪಡೆದಿದ್ದಕ್ಕಾಗಿ ಗವಾಯಿಗಳನ್ನು ಅಭಿನಂದಿಸಿದರು. ಸಂಘಟಕರಿಂದ ಬಸವರಾಜರಿಗೆ ಒಂದು ಬಂಗಾರದ ಮೆಡಲು ಮತ್ತು ಐದು ರೂಪಾಯಿಗಳು (ಆ ಕಾಲಕ್ಕೆ ಅದು ದೊಡ್ಡ ಮೊತ್ತವೆ) ದೊರಕಿತು.

೧೯೩೮ರ ಸಪ್ಟೆಂಬರ್‌ನಲ್ಲಿ ಬಸವರಾಜರ ಪ್ರಥಮ ರೇಡಿಯೋ ಕಾರ್ಯಕ್ರಮ ಮುಂಬೈ ಆಕಾಶವಾಣಿಯಿಂದ ಪ್ರಸಾರವಾಯಿತು. ಹದಿನೈದು ನಿಮಿಷಗಳ ಎರಡು ಕಾರ್ಯಕ್ರಮ, ಬೆಳಿಗ್ಗೆ ಬಿಲಾವಲ್, ರಾತ್ರಿ ಗೌಡಮಲ್ಹಾರ ರಾಗ. ಇದಕ್ಕೆ ಎಲ್ಲೆಡೆಯಿಂದ ಬಂದ ಪ್ರಶಂಸೆ ಅವರ ಖ್ಯಾತಿಯನ್ನು ಹೆಚ್ಚಿಸಿತು. ೧೯೩೮–೧೯೪೧ರ ನಡುವೆ ಅವರ ಅನೇಕ ಧ್ವನಿಮುದ್ರಿಕೆಗಳು ಹೊರಬಂದವು. ಶ್ಯಾಮಕಲ್ಯಾಣ, ಮಾರುಬಿಹಾಗ, ಮೇಘ, ದೇಸ, ಕೇದಾರ ರಾಗಗಳು ಹಾಗೂ ವಚನಗಳು, ಮಡಕೆಯ ಮಾಡುವರೆ ಮಣ್ಣೆ ಮೊದಲು, ಪರಚಿಂತೆ ಎಮಗೆ ಏಕೆ ಅಯ್ಯ, ಕಾಯದ ಕತ್ತಲೆಯ ಕಳೆಯಯ್ಯ ಇತ್ಯಾದಿ, ಈ ಧ್ವನಿಮುದ್ರಿಕೆಗಳು ನಾಡಿನ ಮೂಲೆಮೂಲೆಯಲ್ಲಿ ಅವರ ಜನಪ್ರಿಯತೆಯನ್ನು ಹೆಚ್ಚಿಸಿದವು.

ಪಂ. ಪಂಚಾಕ್ಷರಿ ಗವಾಯಿಗಳು ಕಟ್ಟಿದ್ದ ನಾಟಕ ಕಂಪನಿ ಆಡುತ್ತಿದ್ದ ನಾಟಕಗಳಲ್ಲಿ ಹಿರಿಯ ಭೂಮಿಕೆಗಳಲ್ಲಿ ಬಸವರಾಜ ರಾಜಗುರು ಅವರು ಪಾತ್ರ ನಿರ್ವಹಿಸುತ್ತಿದ್ದರು. ನಿದ್ದೆಗೆಟ್ಟು ಪ್ರದರ್ಶನ ನೀಡುತ್ತಿದ್ದ ಪರಿಣಾಮ ಅವರ ಧ್ವನಿ ಜಡವಾಗತೊಡಗಿತು. ನಾಟಕದಿಂದಾಗಿ ಧ್ವನಿ ಕಳೆದುಕೊಳ್ಳಬಾರದೆಂಬುದು ಅವರ ಹಿತೈಷಿಗಳ ಆಶಯವಾಗಿತ್ತು. ಬಸವರಾಜರ ಇಚ್ಛೆಯೂ ಕೂಡಾ ದೇಶಾದ್ಯಂತ ಸಂಚರಿಸಿ ಸಂಗೀತಗಾರನಾಗಿ ಹೆಸರು

ಗಳಿಸುವುದಾಗಿತ್ತು. ಇದನ್ನರಿತ ಪಂಚಾಕ್ಷರಿ ಗವಾಯಿಗಳು ೧೯೪೧ ರಲ್ಲಿ ಕೂಡಲ ಸಂಗಮದಲ್ಲಿ ಬಸವಜಯಂತಿಯ ಶುಭದಿನದಂದು ಬಸವರಾಜರ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿ "ನಾನು ಕಲಿಸಿದ ವಿದ್ಯೆಯನ್ನು ಕಾಪಾಡಿಕೊ, ದುಶ್ಚಟಗಳಿಗೆ ಬಲಿಯಾಗಬೇಡ, ನಿನಗೆ ಒಳ್ಳೆ ಭವಿಷ್ಯವಿದೆ" ಎಂದು ಹರಸಿ ಬೀಳ್ಕೊಟ್ಟರು.

ಬಸವರಾಜ ರಾಜಗುರು ಅವರು ಗುರುಗಳ ಪ್ರೀತಿ, ಆಶೀರ್ವಾದದ ಶ್ರೀರಕ್ಷೆ ಪಡೆದುಕೊಂಡು ಸಂಗೀತದ ವಿಜಯಯಾತ್ರೆಗೆ ಹೊರಟರು. ಆಗಲೇ ಪರಿಚಿತವಾಗಿದ್ದ ಮುಂಬೈನಗರಕ್ಕೆ ಬಂದರು. ಅಲ್ಲಿ ಕಾರ್ಯಕ್ರಮ ನೀಡುತ್ತಲೇ ಕುಂದಗೋಳದ ಪಂ. ಸವಾಯಿಗಂಧರ್ವರ ಜೊತೆ ಅನೇಕ ದಿನ ಇದ್ದು ಪಾಠ ಹೇಳಿಸಿಕೊಂಡರು. ಕಿರಾಣಾ ಘರಾಣೆಯ ಉಸ್ತಾದ ಅಬ್ದುಲ್ ಕರೀಂಖಾನರ ಪುತ್ರರಾದ ಸುರೇಶಬಾಬು ಮಾನೆ ಹಾಗೂ ಜೈಪುರ ಘರಾಣೆಯ ಶ್ರೀ ದಿನಕರ ಪಾಠಕ ಅವರಿಂದ ಹೊಸ ಹೊಸ ವಿಷಯಗಳನ್ನು ತಿಳಿದುಕೊಂಡರು. ಶ್ರೀ ಗೋವಿಂದರಾವ್ ಟೇಂಬೆಯವರಿಂದ ರಂಗಗೀತೆಗಳನ್ನು ಕಲಿತರು. ಗ್ವಾಲಿಯರ್ ಘರಾಣೆಯ ಪಂ. ನೀಲಕಂಠಬುವಾ ಅವರಿಂದ ಅಪರೂಪದ ಚೀಜುಗಳು ಅವರಿಗೆ ಲಭ್ಯವಾದವು. ೧೯೪೩ರಲ್ಲಿ ನಾಗ್ಪುರದಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ರಾಜಗುರು ಅವರ ಕಾರ್ಯಕ್ರಮ ಅಸಂಖ್ಯಾತ ಸಂಗೀತಪ್ರೇಮಿಗಳ ಮನ ಗೆದ್ದಿತು. ಅವರ ಜನಪ್ರಿಯತೆ ದೇಶಾದ್ಯಂತ ಹಬ್ಬಿತು. ಪ್ರತಿಷ್ಠಿತ ಸಂಗೀತ ಸಮ್ಮೇಳನಗಳಿಗೆ ಆಮಂತ್ರಣ ಬರತೊಡಗಿತು.

ಅವರ ಸಂಗೀತದ ಹಸಿವು, ಮಹತ್ವಾಕಾಂಕ್ಷೆ ಅವರನ್ನು ಲಾಹೋರ, ಕರಾಚಿಗೆ ಕರೆದೊಯ್ದಿತು. ಅಲ್ಲಿ ಅಬ್ದುಲ್ ವಹೀದ್ ಖಾನ್‌ಸಾಹೇಬ, ಮುಬಾರಕ ಅಲಿ, ಲತೀಫ್‌ಖಾನ್‌ರಲ್ಲಿ ಸಂಗೀತ ಹೇಳಿಸಿಕೊಂಡರು. ಪಾಟಿಯಾಲಾ ಘರಾಣೆಯ ಬಸೀರ್‌ಖಾನ್ ಅಲ್ಲದೆ ಇನಾಯುತುಲ್ಲಾ ಖಾನ್, ರೋಷನ್ ಅಲಿ ಇವರಿಂದ ರಾಜಗುರುಗಳಿಗೆ ವಿದ್ಯೆ ಪ್ರಾಪ್ತವಾಯಿತು. ಶಿಕಾರಪುರದಲ್ಲಿ ಜಾನಕೀರಾಮ್ ಕ್ಷತ್ರೆ ಎಂಬ ಆಗರ್ಭ ಶ್ರೀಮಂತರು ಅವರ ಅಭಿಮಾನಿಗಳಾದರು. ಖಾಯಂ ಆಗಿ ಅಲ್ಲಿಯೇ ಇರುವಂತೆ ಒತ್ತಾಯಿಸಿದರು. ಆದರೆ ೧೯೪೭ ತನ್ನೊಂದಿಗೆ ಭಯಮಿಶ್ರಿತ ವಾತಾವರಣ ತಂದಿತು. ಭಾರತದ ವಿಭಜನೆಯ ವದಂತಿ ಕೇಳಿ ಬರತೊಡಗಿತು. ಹಿಂದೂ-ಮುಸ್ಲಿಂ ವೈಷಮ್ಯ ಭುಗಿಲೇಳುವ ವಾತಾವರಣ ಬಂದೊದಗಿತು. ಕ್ಷತ್ರೆಯವರು ಆದಷ್ಟು ಶೀಘ್ರ ಅಲ್ಲಿಂದ ಹೊರಡುವಂತೆ ರಾಜಗುರುಗಳಿಗೆ ಆಗ್ರಹಿಸಿ ತಾವೂ ಆಸ್ತಿಯನ್ನೆಲ್ಲ ಅಲ್ಲೇ ಬಿಟ್ಟು ಲಖನೌ ಸೇರಿದರು. ರಾಜಗುರು ಹುಬ್ಬಳ್ಳಿಗೆ ಬಂದರು.

ಹುಬ್ಬಳ್ಳಿಯಲ್ಲಿ ಅವರ ಗಾಯನ ಕೇಳಿ ತುಂಬಾ ಮೆಚ್ಚಿದ ಕುಂದಗೋಳದ ಶ್ರೀಮಂತ ಸಂಗೀತಪ್ರೇಮಿ ಶ್ರೀ ನಾನಾಸಾಹೇಬ ದೇಸಾಯಿಯವರು ಅವರನ್ನು ತಮ್ಮೂರಿಗೆ ಕರೆದುಕೊಂಡು ಹೋದರು. ಅಲ್ಲಿಯೇ ವಾಸ್ತವ್ಯ ಹೊಂದಿದ್ದ ರಾಜಗುರುಗಳು ೧೯೫೦ರಲ್ಲಿ ಧಾರವಾಡದಲ್ಲಿ ಆಕಾಶವಾಣಿ ಪ್ರಾರಂಭವಾದ ನಂತರ, ಕಾರ್ಯಕ್ರಮ ಕೊಡಲು ಪದೇ ಪದೇ ಧಾರವಾಡಕ್ಕೆ ಬರಬೇಕಾದ್ದರಿಂದ ಶ್ರೀ ದೇಸಾಯಿಯವರ ಒಪ್ಪಿಗೆ ಪಡೆದು, ಧಾರವಾಡದಲ್ಲಿಯೇ ನೆಲೆಸಿದರು. ಅಂದಿನಿಂದ ಕಾರ್ಯಕ್ರಮಗಳಿಗಾಗಿ ದೇಶಾದ್ಯಂತ ಸಂಚರಿಸುವದು, ಉಳಿದಂತೆ ಶಿಷ್ಯರಿಗೆ ಪ್ರೀತಿಯಿಂದ ಪಾಠ ಹೇಳುವದು ಅವರ ಕಾಯಕವಾಯಿತು.

ಪಂ. ರಾಜಗುರು ಅವರ ಗಾಯನದ ಪ್ರಥಮ ಆಕರ್ಷಣೆಯೆಂದರೆ ಮೋಡಿಗೊಳಿಸುವ ಅವರ ಕಂಠಮಾಧುರ್ಯ, ಮೂರೂ ಸಪ್ತಕಗಳಲ್ಲಿ ಲೀಲಾಜಾಲವಾಗಿ ಸಂಚರಿಸುವ ಧ್ವನಿಸಾಮರ್ಥ್ಯ, ಅದರಲ್ಲೂ ಮಧ್ಯ ಹಾಗೂ ತಾರಸಪ್ತಕಗಳಲ್ಲಿ ಅದು ವಿಜೃಂಭಿಸುವುದು ಹೆಚ್ಚು. ಅವರು ಕಿರಾಣಾ, ಗ್ವಾಲಿಯರ್ ಹಾಗೂ ಪತಿಯಾಲಾ ಘರಾಣೆಗಳ ಅನೇಕ ಶ್ರೇಷ್ಠ ಗುರುಗಳ ಗಾಯನದ ಸತ್ವವನ್ನು ಹೀರಿಕೊಂಡು, ವೈಯಕ್ತಿಕ ಪ್ರತಿಭೆಯ ಮೆರಗನ್ನಿಟ್ಟು ತಮ್ಮದೇ ಆದ 'ರಾಜಗುರು ಶೈಲಿ'ಯನ್ನು ಪ್ರಚುರಪಡಿಸಿದರು. ಅವರ ಗಾಯನ ಮೀಂಡ್, ಗಮಕ, ಖಟಕಾ, ಮುರ್ಕಿ, ಚಮತ್ಕಾರಿಕ ಸ್ವರಪ್ರಸ್ತಾರ, ಚೀಜ್‌ಗಳ ಸ್ಪಷ್ಟತೆ, ಲಯಕಾರಿ ಇವೆಲ್ಲವೂ ಸೇರಿ ಸರ್ವಾಂಗಸುಂದರ ಬೋಲ್‌ತಾನ್‌ಗಳನ್ನು ಆಕರ್ಷಕ ತಿಹಾಯಿಗಳೊಂದಿಗೆ ಮುಕ್ತಾಯ ಮಾಡಿ, ಸಮ್‌ಗೆ ಬರುವ ಲಯದ ಹಿಡಿತ ಸಾಟಿಯಿಲ್ಲದ್ದು. ಗಾಯನದಲ್ಲಿ ತಿರೋಭಾವ, ಆವಿರ್ಭಾವಗಳ ಹಾಗೂ ಮೂರ್ಛನೆಗಳ ಚಮತ್ಕಾರಿಕ ಬಳಕೆ ಮಾಡಿ ಅಥವಾ ಒಮ್ಮೊಮ್ಮೆ ಆಪ್ಯಾಯಮಾನವಾಗಿ ಕರ್ನಾಟಕಿ ಸಂಗೀತದ ಪ್ರೌಢಪ್ರಯೋಗ ಮಾಡಿ ಶ್ರೋತೃಗಳನ್ನು ಬೆರಗುಗೊಳಿಸಿದ್ದಾರೆ. ಧ್ರುಪದ್-ಧಮಾರ್, ಖ್ಯಾಲ್, ಠುಮರಿ, ಭಜನ್, ಕನ್ನಡ ಮರಾಠಿ ನಾಟ್ಯಗೀತ, ವಚನ, ದಾಸರ ಪದ ಹೀಗೆ ಗಾಯನದ ಎಲ್ಲ ಪ್ರಕಾರಗಳನ್ನು ಅತ್ಯಂತ ಪ್ರೌಢಿಮೆಯಿಂದ ಹಾಡಿದ್ದಾರೆ. ವಚನಗಾಯನವನ್ನು ಜನಪ್ರಿಯಗೊಳಿಸುವಲ್ಲಿ ಅವರ ಪಾತ್ರ ಮಹತ್ವದ್ದು. ಅಂತೆಯೇ ಸಂಗೀತಶ್ರೇಷ್ಠರಾದ ಉಸ್ತಾದ ಅಬ್ದುಲ್ ಕರೀಂಖಾನ್, ಪಂ. ವಿನಾಯಕರಾವ್ ಪಟವರ್ಧನ್, ಪಿಟೀಲು ಚೌಡಯ್ಯನವರು, ಹೀರಾಬಾಯಿ ಬಡೋದೆಕರ್ ಅಲ್ಲದೆ ಪಂ. ತಾರಾನಾಥರಂಥವರು ಅವರ ಗಾಯನ ಮೆಚ್ಚಿದ್ದಾರೆ. ಪ್ರಸಿದ್ಧ ಗಝಲ್ ಗಾಯಕಿ ಬೇಗಂ ಅಖ್ತರ್ "ರಾಜಗುರು ಯಾನೆ ಸೂರ್ ಕಾ ಬಾದಶಾಹ" ಎಂದು ವರ್ಣಿಸಿದ್ದಾರೆ. ಬೇಂದ್ರೆಯವರು, ಕುವೆಂಪುರವರು ತಮ್ಮ ಭಾವಗೀತೆಗಳನ್ನು ಅವರಿಂದ ಹಾಡಿಸಿ ಖುಷಿ ಪಟ್ಟಿದ್ದಾರೆ.

ಡಾ. ಬಸವರಾಜ ರಾಜಗುರುಗಳದ್ದು ದಣಿವರಿಯದ ಗಾಯನ. ೧೯೫೬ರಲ್ಲಿ ನಾಂದೇಡದಲ್ಲಿ ನಡೆದ ಸಂಗೀತ ಸಮ್ಮೇಳನಕ್ಕೆ ಅವರು ಆಮಂತ್ರಿತರಾಗಿದ್ದರು. ರಾತ್ರಿಯೆಲ್ಲ ಪ್ರವಾಸ ಮಾಡಿ ಮುಂಜಾನೆ ನಾಂದೇಡ್ ತಲುಪಿದ ರಾಜಗುರುಗಳನ್ನು ಸಂಘಟಕರು ಅನಿವಾರ್ಯ ಕಾರಣದಿಂದ ಬೆಳಗಿನ ಸಭೆಯಲ್ಲಿಯೇ ಹಾಡುವಂತೆ ಕೋರಿದರು. ತಮ್ಮ ದಣಿವನ್ನು ತೋರಿಸಿಕೊಳ್ಳದೇ ಅವರು ಉಲ್ಲಾಸದಿಂದ ಹಾಡಿದರು. ಬೆಳಗಿನ ೯ ರಿಂದ ೧ ಗಂಟೆಯವರೆಗೆ ಕಾರ್ಯಕ್ರಮ ನಡೆಯಿತಾದರೂ ಕೇಳುಗರಿಗೆ ಇನ್ನೂ ಕೇಳುವ ಉತ್ಸಾಹ. ಆಗ ಅಲ್ಲಿ ಉಪಸ್ಥಿತರಿದ್ದ ಆಗಿನ ಆಕಾಶವಾಣಿ ಮಂತ್ರಿಗಳಾಗಿದ್ದ ಶ್ರೀ ಬಿ.ವಿ. ಕೇಸಕರ್ ಅವರು ಒಂದು ಪುಟ್ಟ ಭಾಷಣ ಮಾಡಿ "ರಾಜಗುರು ಎಂದರೆ ಹುಕುಮಿ ಎಕ್ಕಾ ಇದ್ದ ಹಾಗೆ, ಹುಸಿ ಎಂಬುದೇ ಇಲ್ಲ" ಎಂದು ಗುಣಗಾನ ಮಾಡಿದರು.

ಗುರುಗಳ ಆಶೀರ್ವಾದದಿಂದ ಸಿದ್ಧಿಸಿದ ತಮ್ಮ ವಿದ್ಯೆಯ ಮೇಲೆ ಅವರಿಗೆ ಸ್ವಾಭಾವಿಕ ಹೆಮ್ಮೆ ಇತ್ತು. ಅಂತೆಯೇ ಸವಾಲುಗಳನ್ನು ಧೈರ್ಯದಿಂದ ಸ್ವೀಕರಿಸಿ ಗೆಲ್ಲುತ್ತಿದ್ದರು. ದೆಹಲಿಯಲ್ಲಿ ನಡೆದ ಸಂಗೀತ ಸಮ್ಮೇಳನವೊಂದರಲ್ಲಿ ಪ್ರಸಿದ್ಧ ಗಾಯಕ ಓಂಕಾರನಾಥ ಠಾಕೂರರ ಗಾಯನದ ನಂತರ ಹಾಡಲು ಯಾರೂ ತಯಾರಿರಲಿಲ್ಲ. ಅಂಥ ಸಂದರ್ಭದಲ್ಲಿ ಹಾಡುವ ಕಠಿಣ ಸವಾಲು ಸ್ವೀಕರಿಸಿದ ರಾಜಗುರುಗಳು ತಮ್ಮ

ಅಮೋಘ ನಾಯಕಿ ಕಾನಡಾ ರಾಗದಿಂದ ಜನರನ್ನು ರಸಲೋಕಕ್ಕೆ ಕರೆದೊಯ್ದರು.

ಲಾಹೋರ್‌ನಲ್ಲಿ ನಡೆದ ಏಳು ತಬಲಾಜಿಗಳ ಜೊತೆ ಒಬ್ಬರೇ ಹಾಡುವಂಥ ಒಂದು ವಿಶಿಷ್ಟ ಸಂಗೀತ ಸಮ್ಮೇಳನದಲ್ಲಿ ಏಳು ಜನ ತಬಲಾಜಿಗಳನ್ನು ತಮ್ಮ ವಿದ್ವತ್ತಿನಿಂದ ಕಕ್ಕಾಬಿಕ್ಕಿಯಾಗಿಸಿದ ಸಂದರ್ಭ ಒಂದೆಡೆಯಾದರೆ, ಜಬಲ್‌ಪುರದಲ್ಲಿ ತಮ್ಮನ್ನು ಉತ್ಪ್ರೇಕ್ಷೆ ಮಾಡಿದ ಟೀಕಾರಾಮ್ ಎಂಬ ಅಹಂಕಾರಿ ತಬಲಾಜಿಗೆ ಕಠಿಣ ತಾಳ ಹಿಡಿಯಲು ಹೇಳಿ, ಸುಸ್ತು ಮಾಡಿ, ಅಹಂಕಾರ ಮುರಿದ ಸಂದರ್ಭ ಇನ್ನೊಂದೆಡೆ. ಎಂಥ ಸಂದರ್ಭಗಳಲ್ಲಿಯೂ ಗೆಲುವು ರಾಜಗುರು ಅವರದ್ದೇ. ಬಂದಿಶ್‌ಗಳ ಭಂಡಾರವೇ ಆಗಿದ್ದ ಅವರು ತಮ್ಮ ಅದ್ಭುತ ನೆನಪಿನ ಶಕ್ತಿಯಿಂದ ಒಂದೊಂದು ರಾಗದಲ್ಲಿಯೂ ಹಲವಾರು ಬಂದಿಶ್‌ಗಳನ್ನು ಬೇರೆ ಬೇರೆ ತಾಳಗಳಲ್ಲಿ ಹಾಡಿ ತೋರಿಸಬಲ್ಲವರಾಗಿದ್ದರು.

೧೯೩೨ರಲ್ಲಿ ಪಂ. ರಾಜಗುರು ಅವರ ವಿವಾಹವು ಬಿಜಾಪುರಜಿಲ್ಲೆಯ ಬೋಳೆಗಾಂವ್‌ನ ಆನಂದಯ್ಯ ಬೊಳೆಗಾಂವ್‌ಮಠ ಅವರ ಮಗಳು ಮಹಾದೇವಿ ಅವರೊಂದಿಗೆ ಆಗಿತ್ತು. ಅವರಿಂದ ರಾಜಶೇಖರ, ಹೇಮಾ ಮತ್ತು ಸರ್ವಮಂಗಳಾ ಎಂಬ ಮಕ್ಕಳು. ಮಹಾದೇವಿಯವರು ಚಿಕ್ಕಮಕ್ಕಳನ್ನು ಬಿಟ್ಟು ೧೯೬೨ರಲ್ಲಿ ಸ್ವರ್ಗಸ್ಥರಾದಾಗ ಹಿರಿಯರು ಅವರ ತಂಗಿ ಭಾರತೀದೇವಿಯವರ ಜೊತೆ ಮರುಮದುವೆ ಮಾಡಿಸಿದರು. ಶ್ರೀಮತಿ ಭಾರತೀದೇವಿಯವರಿಂದ ನಿಜಗುಣಿ, ಜಯಾ ಮತ್ತು ಶಿವಾನಂದ ಎಂಬ ಮಕ್ಕಳಿದ್ದಾರೆ.

ಧಾರವಾಡದ ಮಾಳಮಡ್ಡಿಯ ಅವರ ನಿವಾಸ ರಾಜಗುರುಚಾಳ ಎಂದೇ ಪ್ರಸಿದ್ಧ. ಅಲ್ಲಿ ಅಟ್ಟದ ಮೇಲಿದ್ದ ಕೋಣೆ ಶಿಷ್ಯರ ಪಾಲಿಗೆ ಸಂಗೀತದ ಗರಡಿಮನೆ. ಅಪರಿಚಿತರಿಗೆ ಬಜಾರದಂತೆ ಕಂಡರೆ ಆಶ್ಚರ್ಯವಿಲ್ಲ. ಕೋಣೆಯ ತುಂಬಾ ಸಾಮಾನುಗಳೇ. ಆಮಂತ್ರಣ ಪತ್ರಿಕೆಗಳು, ಪುಸ್ತಕ, ಸ್ಮರಣಸಂಚಿಕೆಗಳು, ಫೋಟೋಗಳು, ಗಂಧದ ಮಾಲೆಗಳು, ಶಾಲುಗಳು, ಡೈರಿಗಳು, ಪೆಟ್ಟಿಗೆಗಳು, ತಬಲಾ, ತಂಬೂರಿ, ಹಾರ್ಮೋನಿಯಂ ಎಲ್ಲಾ ಚೆಲ್ಲಾಪಿಲ್ಲಿ... ಆದರೂ ತಮಗೆ ಬೇಕಾದ ಸಾಮಾನನ್ನು ಅವರು ಕ್ಷಣದಲ್ಲಿ ಎತ್ತಿ ತೆಗೆದುಕೊಳ್ಳುತ್ತಿದ್ದರು.

ಪಂಡಿತ ರಾಜಗುರುಗಳು ತಮ್ಮ ಕಲಾಶ್ರೀಮಂತಿಕೆಗೆ ತಕ್ಕಹಾಗೆ ರಾಜಠೀವಿಯಿಂದ ಬದುಕಿದವರು. ಅವರದು ಸಭಾಭೂಷಣ ವ್ಯಕ್ತಿತ್ವ, ಹಾಡುವಾಗ ಹಾವಭಾವ ವಿಕಾರಗಳಿಲ್ಲದ ಹಸನ್ಮುಖಮುದ್ರೆಯಿಂದ ಕೂಡಿದ ಅವರ ಲವಲವಿಕೆಯ ಭಾವ ಶ್ರೋತೃಗಳಿಗೆ ಅಚ್ಚುಮೆಚ್ಚು. ರಾಜಗುರುಗಳು ದಿಟ್ಟ, ನೇರ, ಬಿಚ್ಚು ನುಡಿಗೆ ಹೆಸರಾದವರು. ಆಡಂಬರ, ಕಪಟವಿಲ್ಲದ ನಿಗರ್ವಿ. ಸಹಕಲಾವಿದರಿಗೆ, ಸಾಥಿದಾರರಿಗೆ ರುಚಿರುಚಿಯಾದ ಊಟ, ತಿನಿಸು ನೀಡಿ, ಕೈತುಂಬ ಹಣ ಕೊಟ್ಟು ಕಳಿಸುವ ಅಪರೂಪದ ಕಲಾವಿದರಿವರು. ಮಾನವೀಯತೆ ಅವರ ವಿಶೇಷ ಗುಣ. ಸರಳ ಮತ್ತು ವಿನೋದ ಸ್ವಭಾವದ ಅವರ ಜೊತೆಯಲ್ಲಿ ಪ್ರವಾಸ ಒಂದು ವಿಶಿಷ್ಟ ಅನುಭವ.

ಅವರು ದೂರದ ಕಾರ್ಯಕ್ರಮಗಳಿಗೆ ಹೋಗುವಾಗ ಬಂಡಿಗಟ್ಟಲೆ (ಕನಿಷ್ಠ ೨೦) ಸಾಮಾನುಗಳನ್ನು ಒಯ್ಯುತ್ತಿದ್ದರು. ವಿವಿಧ ಅಳತೆಯ ಮರದ ಪೆಟ್ಟಿಗೆಗಳು, ಡಬ್ಬಿಗಳು, ಅವುಗಳೊಳಗೆ ಅಕ್ಕಿ, ಬೇಳೆ, ಅಡಿಗೆ ಮಸಾಲೆಗಳು, ನೀರು ತುಂಬಿದ ಬಿಂದಿಗೆಗಳು, ಸ್ಟೋವ್, ಬಟ್ಟೆ ಮುಂತಾದವು. ಜೊತೆಗೆ ತಂಬೂರಿ, ಹಾರ್ಮೋನಿಯಂ. ಹೀಗಾಗಿ

ಯಾವಾಗಲೂ ರೈಲಿನಲ್ಲಿ ಪ್ರಯಾಣ, ಪ್ರವಾಸದಲ್ಲಿ ಈ ಎಲ್ಲ ಸಾಮಾನುಗಳನ್ನು ಸಂಭಾಳಿಸುವುದು ಶಿಷ್ಯರಿಗೆ ಒಂದು ಸವಾಲಾಗಿತ್ತು. ರೈಲಿನ ಕಂಪಾರ್ಟ್‌ಮೆಂಟ್‌ನಲ್ಲಿ ಅವುಗಳನ್ನು ಜೋಡಿಸಿ ಲೆಕ್ಕಕೊಟ್ಟ ಮೇಲೆ ತೃಪ್ತಿಯಿಂದ ಕೂಡುತ್ತಿದ್ದರು. ಶುಭ್ರವಾದ ಬಿಳಿಧೋತಿ, ಅಂಗಿ, ಮೇಲೆ ಕರಿಕೋಟು, ತಲೆಯ ಮೇಲೆ ಕುಸುರಿ ಕೆಲಸದ ಟೋಪಿ, ಜೊತೆಯಲ್ಲಿ ಒಂದು ಛತ್ರಿ, ಚೀಲದೊಂದಿಗೆ ಠೀವಿಯಿಂದ ಕೂಡುತ್ತಿದ್ದ ಅವರು ಸಹಪ್ರಯಾಣಿಕರಿಗೆ ದೊಡ್ಡ ವ್ಯಾಪಾರಸ್ಥರಂತೆ ಕಾಣುತ್ತಿದ್ದರು. ಎಲ್ಲ ಟಿ.ಸಿ.ಗಳೂ ಪರಿಚಿತರೇ. ರಾಜಗುರುಗಳು ವಿಶೇಷವಾಗಿ ತಯಾರಿಸುತ್ತಿದ್ದ ಬೇಸನ್‌ಉಂಡಿ ಹಾಗೂ ಚಕ್ಕುಲಿಯ ಸವಿ ಅವರಿಗೆಲ್ಲ ಅಚ್ಚುಮೆಚ್ಚು. ಅವರ ಕೈ ಅಡುಗೆ ಬಲುರುಚಿ. ಕೆಲವೊಮ್ಮೆ ಬಾಸುಮತಿ ಅಕ್ಕಿಯ ಅನ್ನ, ಸಾಂಬಾರಿನ ಘಮಘಮ ಪರಿಮಳಕ್ಕೆ ಸೋತ ಅನೇಕ ಸಹಪ್ರಯಾಣಿಕ ಹೆಂಗಸರು ಸಾಂಬಾರಿಗೆ ಹಾಕುವ ಮಸಾಲೆಗಳನ್ನು ಅವರಿಂದ ಕೇಳಿ ಬರೆದುಕೊಳ್ಳುತ್ತಿದ್ದರು.

ತಮ್ಮ ಯಶಸ್ಸಿಗೆಲ್ಲ ಪಂ. ಪಂಚಾಕ್ಷರಿ ಗವಾಯಿಗಳ ಆಶೀರ್ವಾದವೇ ಕಾರಣವೆಂದು ಸದಾ ಭಾವುಕತೆಯಿಂದ ನೆನೆಯುತ್ತಿದ್ದ ರಾಜಗುರುಗಳು ಕೊಟ್ಟ ವಿದ್ಯೆಯನ್ನು ಸರಿಯಾಗಿ ಕಾಪಾಡಿಕೋ ಎಂಬ ಗುರುಗಳ ವಾಕ್ಯ ಪಾಲಿಸುವ ಸಲುವಾಗಿ ಜೀವನದುದ್ದಕ್ಕೂ ಕಟ್ಟುನಿಟ್ಟಿನ ಆಹಾರ, ಜೀವನಕ್ರಮ ಪಾಲಿಸಿದರು. ಕಂಠಮಾಧುರ್ಯ ಕಾಪಾಡಿಕೊಳ್ಳುವ ಸಲುವಾಗಿ ದೇಶದಲ್ಲಿ ಎಲ್ಲೇ ಕಾರ್ಯಕ್ರಮಕ್ಕೆ ಹೋದರೂ ಧಾರವಾಡದಿಂದ ಕುಡಿಯುವ ನೀರನ್ನು ಒಯ್ಯುವ ಪರಿಪಾಠ ಹಾಕಿಕೊಂಡರು.

ಪಂಡಿತ ರಾಜಗುರುಗಳು ಕಂಠತ್ರಾಣ, ಸ್ವಪ್ರಯತ್ನದಿಂದ ಬೆಳೆದು ದೊಡ್ಡವರಾಗಿದ್ದಾರೆ. ಸಂಗೀತಕ್ಕೆ, ವಿದ್ಯೆಗೆ ಗೌರವ ಸಿಗುವಲ್ಲಿ ಸಂಭಾವನೆ ಕಡೆ ನೋಡದೇ ರಸಿಕರನ್ನು ತೃಪ್ತಿಗೊಳಿಸಿದ್ದಾರೆ. ಅನೇಕ ಬಿರುದು, ಪ್ರಶಸ್ತಿಗಳು, ಅವರನ್ನು ಹುಡುಕಿಕೊಂಡು ಬಂದಿವೆ. ಸಂಗೀತದ ಅಭಿಮಾನಿಗಳು ಅವರನ್ನು ಸಂಗೀತರತ್ನ, ಸಂಗೀತ ಸುಧಾಕರ ಮುಂತಾಗಿ ಕರೆದಿದ್ದಾರೆ. ರಾಜ್ಯ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ (೧೯೬೯), ಮುಂಬೈನ ಸೂರಸಿಂಗಾರ ಸಂಸದ್‌ನ ಸ್ವರವಿಲಾಸ ಪ್ರಶಸ್ತಿ ಅವರಿಗೆ ಲಭಿಸಿವೆ. ಪದ್ಮಶ್ರೀ (೧೯೭೫) ಹಾಗೂ ಪದ್ಮಭೂಷಣ (೧೯೯೧) ಪ್ರಶಸ್ತಿಗಳು ಅವರನ್ನರಸಿ ಬಂದಿವೆ. ಅವರ ಸುದೀರ್ಘ ಕಲಾಸೇವೆಗೆ ಅವರಿಗೆ ದೊರೆತ ಮಾನ-ಸಮ್ಮಾನಗಳು ಹೆಚ್ಚಿನವೆಂದು ಅನಿಸುವುದಿಲ್ಲ.

ಪಂ. ಬಸವರಾಜ ರಾಜಗುರು ಅವರ ನಿಜವಾದ ಆಸ್ತಿಯೆಂದರೆ ಅವರ ಶಿಷ್ಯಬಳಗ. ಅವರು ತಮ್ಮ ಗುರುಗಳಿಂದ ಪಡೆದ ಪ್ರೀತಿ-ವಾತ್ಸಲ್ಯವನ್ನೇ ಶಿಷ್ಯರಿಗೆ ಧಾರೆ ಎರೆದು ವಿದ್ಯಾದಾನ ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೌರವ ಸಂಗೀತ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರ ಪ್ರಮುಖ ಶಿಷ್ಯರಾದ ಸರ್ವಶ್ರೀ ಸೋಮನಾಥ ಮರಡೂರ, ಗಣಪತಿ ಭಟ್ (ಹಾಸಣಗಿ), ಹನುಮಂತಸಿಂಗ್ ಹಾನಗಲ್, ಎಸ್.ಎಫ್. ಗೋಜನೂರ, ಹನುಮಣ್ಣನಾಯಕ ದೊರೆ, ಪರಮೇಶ್ವರ ಹೆಗಡೆ, ಶ್ರೀಪಾದ ಹೆಗಡೆ, ಶಾಂತಾರಾಮ ಹೆಗಡೆ, ಮಹೇಶಕುಮಾರ ಚಿಂಚಖಂಡಿಮಠ, ಶ್ರೀಮತಿ ಪೂರ್ಣಿಮಾ ಭಟ್ ಕುಲಕರ್ಣಿ, ಸಂಗೀತಾ ಕಟ್ಟಿ, ರೋಹಿಣಿ ದೇಶಪಾಂಡೆ, ನಚಿಕೇತ

ಶರ್ಮಾ ಇವರೆಲ್ಲರೂ ಉತ್ತಮ ಗಾಯಕರಾಗಿದ್ದು, ಅನೇಕರು ರಾಷ್ಟ್ರೀಯ ಅಂತಾರಾಷ್ಟ್ರೀಯ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ, ಹಾಗೂ ಗುರುಪರಂಪರೆಯನ್ನು ಮುಂದುವರೆಸಿದ್ದಾರೆ.

ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಸಾರ್ಥಕ ಕಲಾಜೀವಿ, ಸಂಗೀತ ನಕ್ಷತ್ರ ಡಾ. ಬಸವರಾಜ ರಾಜಗುರು ಅವರು ೨೧ ಜುಲೈ ೧೯೯೧ರಲ್ಲಿ ಸ್ವರ್ಗಸ್ಥರಾದರು. ಇವರ ಸಮಾಧಿಯನ್ನು ಧಾರವಾಡದಲ್ಲಿ ನಿರ್ಮಿಸಲಾಗಿದೆ. ಅವರ ನೆನಪು ಶಾಶ್ವತವಾಗಿರುವಂತೆ ಸರಕಾರ ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಸ್ಥಾಪಿಸಿದ್ದು, ಸಂಗೀತ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದೆ. ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಪ್ರಶಸ್ತಿ ಹಾಗೂ ಯುವ ಪುರಸ್ಕಾರ ನೀಡಿ ಕಲಾವಿದರನ್ನು ಗೌರವಿಸಲಾಗುತ್ತಿದೆ.

■ ■ ■



ಪಂಡಿತ ಪುಟ್ಟರಾಜಗವಾಯಿಗಳು

# ಉಭಯಗಾನ ವಿಶಾರದ
# ಪಂಡಿತ ಪುಟ್ಟರಾಜ ಗವಾಯಿಗಳು
# (೧೯೧೪-೨೦೧೦)

● ಡಾ|| ಮೃತ್ಯುಂಜಯ ಶೆಟ್ಟರ

ಅತ್ಯಂತ ವಿಶೇಷ ವ್ಯಕ್ತಿತ್ವ ಹೊಂದಿರುವ ಬಹುಮುಖ ಪ್ರತಿಭೆಯ ಪೂಜ್ಯ ಪಂಡಿತ ಡಾ|| ಪುಟ್ಟರಾಜ ಕವಿ ಗವಾಯಿಗಳು ತಮ್ಮ ಕಣ್ಣುಗಳು ಇಲ್ಲದಿದ್ದರೂ ಹಲವು ಹತ್ತಾರು ಕ್ಷೇತ್ರಗಳಲ್ಲಿ ಅಪಾರ ಸಾಧನೆಯನ್ನು ಮಾಡಿದರು. ಅವರ ಈ ಅಪ್ರತಿಮ ಸಾಧನೆಗಳನ್ನು ನೋಡಿದರೆ ಕಣ್ಣಿದ್ದವರೂ ಕೂಡಾ ಬೆರಗಾಗುತ್ತಾರೆ. ಲಿಂಗಪೂಜಾನಿಷ್ಠರಾಗಿ, ಶರಣರಾಗಿ, ನಾಟಕಕಾರರಾಗಿ, ಪ್ರವಚನಕಾರರಾಗಿ, ಸಾಹಿತಿಗಳಾಗಿ, ಪುರಾಣಿಕರಾಗಿ, ವಾಗ್ಗೇಯಕಾರರಾಗಿ, ವಿದ್ವಾಂಸರಾಗಿ, ಉಭಯಗಾನವಿಶಾರದರಾಗಿ, ಅನೇಕ ವಾದ್ಯಪ್ರವೀಣರಾಗಿ, ಯುಗದ ಮಹಾ ತಪಸ್ವಿಗಳಾಗಿ ಈ ನಾಡು – ನುಡಿಯನ್ನು ಬೆಳಗಿದ್ದಾರೆ.

ಪೂಜ್ಯ ಪಂ. ಡಾ|| ಪುಟ್ಟರಾಜ ಗವಾಯಿಗಳು ೧೯೧೪ ಮಾರ್ಚ್ ೩ ರಂದು ಅಂದಿನ ಅವಿಭಜಿತ ಧಾರವಾಡ ಜಿಲ್ಲೆಯ ಹಾನಗಲ್ ತಾಲೂಕಿನಲ್ಲಿ ಶ್ರೀ ರೇವಯ್ಯ ಮತ್ತು ಶ್ರೀಮತಿ ಸಿದ್ದಮ್ಮ ಎಂಬ ಸದ್‌ಗೃಹಸ್ಥದಂಪತಿಗಳ ಪುಣ್ಯ ಉದರದಲ್ಲಿ ಜನ್ಮವೆತ್ತಿದರು. ೬ ತಿಂಗಳದವರಿದ್ದಾಗಲೆ ಮೈಲಿಬೇನೆ ತಗುಲಿ ಗಾಂವಠಿ ಔಷಧಿಗಳು ಪರಿಣಾಮ ಬೀರದೆ ಕಣ್ಣು ಕಳೆದುಕೊಂಡರು. ಅತೀ ಚಿಕ್ಕವಯಸ್ಸಿನಲ್ಲಿ ಅವರ ತಂದೆ ಶ್ರೀ ರೇವಯ್ಯನವರು ತೀರಿಕೊಂಡರು.

ದೇವಗಿರಿಯ ಸೋದರಮಾವ ಚಂದ್ರಶೇಖರ ಅವರ ಆಶ್ರಯದಲ್ಲಿ ಬೆಳೆದು ಪ್ರಾಥಮಿಕ ಹಂತದ, ಪೂರ್ವಭಾವಿ ಪ್ರಾರಂಭಿಕ ಸ್ವರೂಪದ ಸಂಗೀತವನ್ನು ಅವರಿಂದ ಕಲಿತರು. ಮುಂದೆ ಹೆಚ್ಚಿನ ಸಂಗೀತ ವಿದ್ಯಾಭ್ಯಾಸ ಮಾಡಿಸಲು ಚಂದ್ರಶೇಖರ ಅವರು ಶ್ರೀ ಪುಟ್ಟರಾಜರನ್ನು ಆಗಿನ ಖ್ಯಾತನಾಮ ಗಾನಯೋಗಿ ಶಿವಯೋಗಿ ಪಂ. ಪಂಚಾಕ್ಷರಿ ಗವಾಯಿಗಳ ಬಳಿ ಸೇರಿಸಿದರು. ಪೂಜ್ಯ ಪಂಚಾಕ್ಷರಿ ಗವಾಯಿಗಳೂ ಅಂಧರು. ಆದರೆ ದಕ್ಷಿಣ ಭಾರತದಲ್ಲಿ ಸಂಗೀತ ಬೆಳೆಯಲು ಅವರು ಅಹೋರಾತ್ರಿ ಶ್ರಮಿಸಿದ್ದಾರೆ. ಸಾಕಷ್ಟು ಕಷ್ಟ ನಷ್ಟಗಳನ್ನು, ನೋವು, ದುಃಖಗಳನ್ನು ಎದುರಿಸಿ ತಮ್ಮ ಜೀವನವನ್ನೆ ಅಂಧ, ಅನಾಥ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಮುಡುಪಿಟ್ಟ ಸಂತ ಗಾಯಕರು, ಪೂಜ್ಯ ಪಂಡಿತ ಪಂಚಾಕ್ಷರಿಗವಾಯಿಗಳು. ಅಂಥವರ ಅಧ್ಯಾತ್ಮಿಕ, ಸ್ವರಗರಡಿಯಲ್ಲಿ ಅನೇಕ ವಿದ್ಯೆಗಳಲ್ಲಿ ಪೂಜ್ಯ ಪಂಡಿತ ಪುಟ್ಟರಾಜರು ಪರಿಣತಿ ಪಡೆದರು. ಉತ್ತರಾದಿ ಹಾಗೂ ದಕ್ಷಿಣಾದಿ ಎರಡೂ ಸಂಗೀತ ಪ್ರಭೇದಗಳಲ್ಲಿ ಸಾಧನೆ ಗೈದರು.

ತಮ್ಮ ಚುರುಕುಬುದ್ಧಿಯ ಹಾಗೂ ಸೂಕ್ಷ್ಮಮತಿಯ ಸಹಾಯದಿಂದ ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ಮತ್ತು ಚೀಜಗಳನ್ನು ರಚಿಸಿದರು. ಸಮರ್ಥ ವಾಗ್ಗೇಯಕಾರರಾಗಿ, ಗಾಯಕರಾಗಿ, ಅನೇಕ ಶಿಷ್ಯರಿಗೆ ಅತ್ಯಂತ ಯೋಗ್ಯಗುರುಗಳಾಗಿ ಸಂಗೀತ–ಸಾಹಿತ್ಯ ಧಾರೆಯರೆದರು. ತಮ್ಮ ನೆಚ್ಚಿನ ಶಿಷ್ಯ ಶ್ರೀ ಪುಟ್ಟರಾಜರ ಸಂಗೀತಪ್ರತಿಭೆ, ಪಾಂಡಿತ್ಯ ಕೇಳಿ, ಆನಂದಿಸಿ, ಅನುಭವಿಸಿ, ಮುಂದೆ ತಮ್ಮ ಆಶ್ರಮದ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ಪುಟ್ಟರಾಜರ ಕೈಗೆ ಕೊಟ್ಟು ಪೂಜ್ಯ ಪಂ. ಪಂಚಾಕ್ಷರಗವಾಯಿಗಳು ಲಿಂಗದಲ್ಲಿ ಲೀನವಾದರು.

ಪೂಜ್ಯ ಲಿಂ. ಹಾನಗಲ್ ಕುಮಾರ ಸ್ವಾಮಿಗಳ ಆಶೀರ್ವಾದ ಹಾಗೂ ಪೂಜ್ಯ ಪಂಡಿತ ಪಂಚಾಕ್ಷರಿ ಗವಾಯಿಗಳ ಶ್ರಮ–ತ್ಯಾಗಗಳ ಆಧಾರದ ಮೇಲೆ ಅಂಧ, ಅನಾಥ, ಅಂಗಹೀನ, ಬಡ ಮಕ್ಕಳ ಉದ್ಧಾರಕ್ಕಾಗಿ ಗದುಗಿನಲ್ಲಿ ನಡೆಯುತ್ತಿರುವ ಆಶ್ರಮವೇ ಶ್ರೀ ವೀರೇಶ್ವರ ಪುಣ್ಯಾಶ್ರಮ. ಶ್ರೀ ಬಸರೀಗಿಡದ ವೀರಪ್ಪನವರು ದಾನರೂಪದಲ್ಲಿ ಈ ಸ್ಥಳವನ್ನು ಕೊಡಮಾಡಿದರು.

ಪೂಜ್ಯ ಪಂ. ಡಾ॥ ಪುಟ್ಟರಾಜ ಗವಾಯಿಗಳು ಇಂದು ಗದುಗಿಗೆ, ವೀರೇಶ್ವರ ಪುಣ್ಯಾಶ್ರಮಕ್ಕೆ ವಿಶ್ವಮಾನ್ಯತೆ ತಂದುಕೊಟ್ಟಿದ್ದಾರೆ. ಸಮಾಜದಿಂದ ನಿರ್ಲಕ್ಷಿಸಲ್ಪಟ್ಟ ಅಸಂಖ್ಯಾತ ಅಂಧರನ್ನು, ಅಂಗವಿಕಲರನ್ನು, ಬಡವರನ್ನು, ಆಶ್ರಮಕ್ಕೆ ಕರೆತಂದು ಅವರಿಗೆ ಉಚಿತ ಪ್ರಸಾದ ನೀಡಿ, ತಮ್ಮ ಕಾಲ ಮೇಲೆ ತಾವೇ ನಿಂತು ಬದುಕು ನಡೆಸಲು ಕಲಿಸಿ, ಸ್ವತಂತ್ರ ಮಾಡಿದ್ದಾರೆ. ಅವರ ಸಾವಿರಾರು ಶಿಷ್ಯರು ಇಂದು ಸ್ವಾವಲಂಬಿಗಳಾಗಿ ಬದುಕನ್ನು ಕಟ್ಟಿಕೊಂಡಿದ್ದಾರೆ.

೧೯೬೪ ರಲ್ಲಿ ಶ್ರೀ ಬಸವ ಪುರಾಣವನ್ನು ಇವರು ಹಿಂದಿಯಲ್ಲಿ ಬರೆದಿದ್ದನ್ನು ನೋಡಿ ಓದಿ ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ॥ ಬಾಬು ರಾಜೇಂದ್ರಪ್ರಸಾದ ಅವರು ಮೆಚ್ಚಿಕೊಂಡರು. ಮುಂದೆ ಡಾಕ್ಟರೇಟ್ ಪದವಿ ಪಂ. ಡಾ॥ ಪುಟ್ಟರಾಜ ಗವಾಯಿಗಳಿಗೆ ದೊರಕಿತು. ಡಾ॥ ಪುಟ್ಟರಾಜ ಗವಾಯಿಗಳು ಈವರೆಗೆ ಕನ್ನಡದಲ್ಲಿ ಸುಮಾರು ೨೦ ಷಟ್ಪದಿ ಪುರಾಣಗಳನ್ನು, ೨೦ ನಾಟಕಗಳನ್ನು ಸಂಸ್ಕೃತದಲ್ಲಿ, ಹತ್ತಾರು ಕೃತಿಗಳನ್ನು ಹಿಂದಿಯಲ್ಲಿ ರಚಿಸಿ, ತ್ರಿಭಾಷಾ ಕವಿರತ್ನರಾಗಿದ್ದಾರೆ. ಸಂಸ್ಕೃತದಲ್ಲಿ ಶ್ರೀ ಯಡಿಯೂರು ಸಿದ್ಧಲಿಂಗೇಶ್ವರ ಪುರಾಣ, ಶ್ರೀಮದ್ ಕುಮಾರ ಗೀತ, ಶ್ರೀ ರುದ್ರಗಳಂತಹ ಉದ್ಗ್ರಂಥಗಳೇ ಅಲ್ಲದೇ ಇನ್ನೂ ಕೆಲವು ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಒಟ್ಟು ೧೪೦ ಕ್ಕಿಂತ ಹೆಚ್ಚು ಮೌಲಿಕ ಗ್ರಂಥಗಳನ್ನು ರಚಿಸಿದ್ದಾರೆ.

ಪಂ. ಡಾ॥ ಪುಟ್ಟರಾಜ ಗವಾಯಿಗಳಿಗೆ ಸಿತಾರ, ತಬಲಾ, ಹಾರ್ಮೋನಿಯಂ, ಸಾರಂಗಿ, ಪಿಟೀಲು, ವೀಣಾ, ದಿಲ್‌ರುಬಾ, ಮೃದಂಗ, ಪಖವಾಜ, ಸರೋದ್, ಇನ್ನೂ ಅನೇಕ ವಾದ್ಯಗಳಲ್ಲಿ ಪ್ರಾವೀಣ್ಯ ಇದ್ದದ್ದನ್ನು ನೋಡಿದಾಗ ಆಶ್ಚರ್ಯವೆನಿಸುತ್ತದೆ.

ಶರಣ ಉರಿಲಿಂಗ ಪೆದ್ದಿಗಳು ಹೇಳುವಂತೆ :– "ಲೋಕದಂತೆ ಬಾರರು

ಲೋಕದಂತೆ ಇಹರು, ಲೋಕದಂತೆ ಹೋಹರು

ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು ಮುಕ್ತಿಯಂತೆ ಹೋಪರು".

ಈ ರೀತಿ ಬದುಕಿದರು ಪೂಜ್ಯ ಪಂ. ಡಾ॥ ಪುಟ್ಟರಾಜ ಗವಾಯಿಗಳು.

ಪೂಜ್ಯ ಪಂ. ಡಾ॥ ಪುಟ್ಟರಾಜ ಗವಾಯಿಗಳು ಗೈದ ಈ ನಿಃಸ್ವಾರ್ಥಸೇವೆಯನ್ನು ಸರಕಾರ ಹಾಗೂ ಅಸಂಖ್ಯಾತ ಸಂಘ ಸಂಸ್ಥೆಗಳು ಗುರುತಿಸಿ ಅವರನ್ನು ಗೌರವಿಸಿ, ಸತ್ಕರಿಸಿ, ತುಲಾಭಾರಮಾಡಿ, ತಮ್ಮ ತಮ್ಮ ಪ್ರೀತಿ, ಭಕ್ತಿ, ಗೌರವ, ಅಭಿಮಾನ, ಆದರ ತೋರಿಸಿ, ಧನ್ಯತೆಯನ್ನು ಪಡೆದಿವೆ.

೧) ಬಸವಪುರಾಣ ಹಿಂದಿಯಲ್ಲಿ ರಚಿಸಿದ್ದಕ್ಕಾಗಿ ರಾಷ್ಟ್ರಪತಿಗಳಿಂದ ಗೌರವ – ೧೯೬೧.

೨) ಸಾಕ್ಷರತಾ ಪ್ರಶಸ್ತಿ ೧೯೭೦.

೩) ಕ.ವಿ.ವಿ. ಧಾರವಾಡದಿಂದ ಗೌರವ ಡಾಕ್ಟರೇಟ್ ೧೯೭೫.

೪) ಸಂಗೀತನಾಟಕ ಅಕಾಡೆಮಿ ಪ್ರಶಸ್ತಿ ೧೯೯೦.

೫) ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೧೯೯೧.

೬) ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ೧೯೯೩.

೭) ಕನಕಪುರಂದರ ಪ್ರಶಸ್ತಿ ೧೯೯೮.

೮) "ನಾಡೋಜ" ಹಂಪಿ ವಿಶ್ವವಿದ್ಯಾಲಯ ೧೯೯೮.

೯) ಎಮಿರೇಟ್ಸ ಫೆಲೋಶಿಪ್ ೧೯೯೭.

೧೦) ಶ್ರೇಷ್ಠಸಾಧಕ ಪ್ರಶಸ್ತಿ (ಕೆಂಬ್ರೀಜ್. ವಿ.ವಿ.).

೧೧) ಬಸವಶ್ರೀ ಪ್ರಶಸ್ತಿ ೨೦೦೦.

೧೨) ಉತ್ಕೃಷ್ಟ ಸೇವಾ ಪ್ರಶಸ್ತಿ ೨೦೦೦.

೧೩) ಕಾಳಿದಾಸ ಸಮ್ಮಾನ ಪ್ರಶಸ್ತಿ ೨೦೦೭.

೧೪) ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ೧೯೯೯.

೧೫) ಟಿ. ಚೌಡಯ್ಯ ಪ್ರಶಸ್ತಿ ೨೦೦೯.

೧೬) ಪದ್ಮ ಭೂಷಣ ಪ್ರಶಸ್ತಿ ೨೦೧೦.

ಅಲ್ಲದೆ ೨೨೭೧ ತುಲಾಭಾರ ಅವರಿಗೆ ಸಂದಿವೆ,

" ನಿಃಸ್ವಾರ್ಥದಿಂದ ಮಾಡಿರುವ ಪ್ರತಿಯೊಂದು ಸೇವೆ ದೇವರನ್ನೇ ಋಣದೊಳಗೆ ಇಡುತ್ತದೆ." ಅಂತಹ ಮನುಕುಲ ಸದಾ ಸ್ಮರಿಸುವ ಸೇವೆಯನ್ನು ಡಾ॥ ಪುಟ್ಟರಾಜಗವಾಯಿಗಳು ಮಾಡಿದ್ದಾರೆ.

ಧರ್ಮ, ಜಾತಿ ಮತ ಪಂಥ, ವರ್ಣ, ವರ್ಗ, ಏನನ್ನೂ ನೋಡದೇ, ಭೇದ ಎಣಿಸದೆ, ಎಲ್ಲರಿಗೂ ವಿದ್ಯೆ ಕಲಿಸಿದರು.

ಶರಣ ಆದಯ್ಯಗಳು ಹೇಳುವಂತೆ:– "ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಚಿತ್ತದಲ್ಲಿ ನಿರಪೇಕ್ಷೆ, ಪ್ರಾಣದಲ್ಲಿ ನಿರ್ಭಯ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ ಸೌರಾಷ್ಟ್ರ

ಸೋಮೇಶ್ವರ ಲಿಂಗವು ಬೇರಿಲ್ಲ ಕಾಣಿಬೋ" ಎಂಬಂತೆ ಡಾ॥ ಪುಟ್ಟರಾಜ ಗವಾಯಿಗಳು ಬದುಕಿದರು.

ಕೇಂದ್ರ ಸಂಗೀತ ನಾಟಕ ಅಕಾಡೆಮಿ, ನವದೆಹಲಿಯಿಂದ ಅವರ ಬಗೆಗೆ ಸಾಕ್ಷ್ಯಚಿತ್ರ ಮಾಡುವಂತಹ ಪುಣ್ಯ ವಿಶೇಷ, ಸೌಭಾಗ್ಯ ನನಗೆ ಒದಗಿ ಬಂದಿತ್ತು. ಕೊನೆಯ ದೃಶ್ಯದಲ್ಲಿ ಮನುಕುಲಕ್ಕೆ ಒಂದು ಸಂದೇಶ ನೀಡಿದರು. ಯಾರೂ ಅರ್ಧಹೊಟ್ಟೆ ಊಟ ಮಾಡುವುದು ಬೇಡ. ಎಲ್ಲರಿಗೂ ಪೂರ್ಣಹೊಟ್ಟೆ ಊಟ ಸಿಗಲಿ. ಯಾರ ಕಣ್ಣಲ್ಲೂ ನೀರು ಬರುವುದು ಬೇಡ, ಅಸೂಯೆ ಮರೆತು ಎಲ್ಲರು ನಗುನಗುತಾ ಶಾಂತಿಯಿಂದ ಬಾಳಲಿ, ಬಡತನ, ಕಷ್ಟನಷ್ಟ, ದುಃಖ, ದಾರಿದ್ರ್ಯ ಯಾರಿಗೂ ಬಾರದಿರಲಿ. ಎಲ್ಲರೂ ಪ್ರೀತಿಯಿಂದ, ಸದ್ಬುದ್ಧಿಯಿಂದ ವಿನಯವಂತರಾಗಿ ಬಾಳಲಿ ಎಂದು ದಿವ್ಯ ಸಂದೇಶವನ್ನು ನೀಡಿದರು. ಸದಾ ಸರ್ವರಿಗೂ ಒಳ್ಳೆಯದನ್ನೇ ಬಯಸಿದರು. ಜೀವನತುಂಬ ಒಳ್ಳೆಯದನ್ನೇ ಮಾಡಿದರು. ಈ ರೀತಿ ಬದುಕಿದವರು ಅತೀ ವಿರಳ. "ಅವರ ಸಾನ್ನಿಧ್ಯವದು ಅಮೃತದ ಮಡು, ಮಿಂದವರು ಪುನೀತರಾಗುತ್ತಾರೆ, ಧನ್ಯರಾಗುತ್ತಾರೆ. ಅದೊಂದು ಜ್ಯೋತಿಯ ಖಣಿ, ಹೊಕ್ಕವರು ಪ್ರಬುದ್ಧರಾಗುತ್ತಾರೆ. ಪೂಜ್ಯರ ಶಿಷ್ಯರು ಅಸಂಖ್ಯಾತರು. ಸಾವಿರಾರು ಶಿಷ್ಯರು ಉತ್ತಮ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ". ಅದರಲ್ಲಿ ಕೆಲವರ ಹೆಸರುಗಳನ್ನು ಹೇಳುವುದಾದರೆ ಪಂ. ಸೋಮನಾಥ ಮರಡೂರ, ಪಂ. ವೆಂಕಟೇಶಕುಮಾರ, ಪಂ. ಕುಮಾರದಾಸ, ಪಂ. ಫಕ್ಕಿರೇಶ ಅಗಡಿ, ಪಂ. ಶಿವರಾಜ ಗವಾಯಿ, ಪಂ. ಹನುಮಂತಸಿಂಗ್ ಹಾನಗಲ್, ಪಂ. ಬಿ.ಎಸ್. ಮಠ, ಪಂ. ಶ್ರೀ ವೀರೇಶ್ವರ ಮದರಿ, ಪಂ. ಈಶ್ವರ ಮೋರಗೇರಿ, ಪಂ. ಹನಮಂತಪ್ಪ ಕಾಮನಹಳ್ಳಿ... ಇನ್ನೂ ಅನೇಕರಿದ್ದಾರೆ.

ಪೂಜ್ಯ ಪಂ. ಡಾ॥ ಪುಟ್ಟರಾಜ ಗವಾಯಿಗಳು ೧೭/೦೯/೨೦೧೦ ರಂದು ಸಂಗೀತದಲ್ಲಿ ಲೀನವಾದರು. ಈ ವಿಶ್ವವಂದ್ಯರು ಗೈದ ಸೇವೆ ನಿಜವಾಗಿಯೂ ಅನುಪಮ, ಅವಿಸ್ಮರಣೀಯ. ಅವರ ನಿರ್ಗಮನ ಅದು ಮಹಾನಿರ್ಗಮನ. ಹಣ, ಅಧಿಕಾರದ ಹಿಂದೆ ಸಾಗುತ್ತಿರುವ ಈ ವಿಶ್ವದಲ್ಲಿ, ಎತ್ತರದ ನಿರಂಜನ ಸ್ಥಿತಿಗೆ ತಲುಪಿ, ಸರಳವಾಗಿ, ಸಹಜವಾಗಿ, ಭಕ್ತಾಭಿಮಾನಿಗಳಿಂದ ನಡೆದಾಡುವ ದೇವರೆನಿಸಿಕೊಂಡು ಬಹಳ ಅರ್ಥಪೂರ್ಣವಾಗಿ ಬಾಳಿ ಬದುಕಿದರು ಪಂ. ಡಾ॥ ಪುಟ್ಟರಾಜ ಕವಿ ಗವಾಯಿಗಳು.

■ ■ ■



ಪಂ. ಸಿದ್ಧರಾಮ ಜಂಬಲದಿನ್ನಿ

# ಸಂಗೀತಸಾಧಕ

# ಪಂ. ಸಿದ್ಧರಾಮ ಜಂಬಲದಿನ್ನಿ

## (೧೯೧೮-೧೯೮೮)

● ಶ್ರೀಮತಿ ಜಯದೇವಿ ಜಂಗಮಶೆಟ್ಟಿ

ಹುಣ್ಣಿಮೆಯ ದಿನ ಹುಟ್ಟಿ ಪೂರ್ಣಚಂದ್ರನಂತೆ ವಚನಗಾಯನಕ್ಕೆ ಬೆಳದಿಂಗಳನ್ನು ಚೆಲ್ಲಿದ ಸಿದ್ಧರಾಮ ಜಂಬಲದಿನ್ನಿಯವರಿಗೆ ಹೈದರಾಬಾದ್ ವೀರಶೈವ ಮಹಾಸಭೆ ನೀಡಿದ "ಸಂಗೀತಸುಧಾಕರ" ಬಿರುದು ಸಮಂಜಸವಾದುದು.

ಪೂಜ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯರಾಗಿ, ನಂತರ ಪಂ. ಮಲ್ಲಿಕಾರ್ಜುನ ಮನಸೂರರ ಶಿಷ್ಯರಾಗಿ ಗ್ವಾಲಿಯರ್ ಮತ್ತು ಜೈಪುರ ಘರಾಣೆಗಳ ವೈಶಿಷ್ಟ್ಯಗಳನ್ನು ಸಮ್ಮಿಲನಗೊಳಿಸಿ, ಬದುಕಿನುದ್ದಕ್ಕೂ ವಚನಗಾಯನವನ್ನು ಹಾಡಿ, ಅದಕ್ಕೆ ಒಂದು ಹೊಸ ಬಗೆಯ ಚೌಕಟ್ಟು ನೀಡಿ, ರವೀಂದ್ರನಾಥ ಟ್ಯಾಗೋರರ ರವೀಂದ್ರಸಂಗೀತದಂತೆ ವಚನಗಾಯನಕ್ಕೆ ಸಂಗೀತಲೋಕದಲ್ಲಿ ಒಂದು ಅಸ್ತಿತ್ವವನ್ನು ನೀಡಿದ ಸಿದ್ಧರಾಮರ ವಚನಗಾಯನ ಮಿನುಗುವ ನಕ್ಷತ್ರದಂತೆ.

ರಾಯಚೂರುಜಿಲ್ಲೆಯ ಮಾನವಿತಾಲೂಕಿನ ಶಿರವಾರ ಗ್ರಾಮದ ಹತ್ತಿರ ಇರುವ ಜಂಬಲದಿನ್ನಿ ಎಂಬ ಗ್ರಾಮದಲ್ಲಿ ಬಯಲಾಟ ಕಲಿಸುವ ಮಾಸ್ತರರಾದ ಚೆನ್ನಬಸಪ್ಪ ಹೂಗಾರ ತಾಯಿ ಅವ್ವಮ್ಮ, ಇವರ ಪುತ್ರರಾಗಿ (೨೦ ಎಪ್ರಿಲ್, ೧೯೧೮) ಜನಿಸಿ, ನಿಜಗುಣಪ್ಪ ಎಂಬುವರಲ್ಲಿ ಸಂಗೀತಕಲಿಕೆಯನ್ನು ಪ್ರಾರಂಭಿಸಿ, ೧೪ನೇ ವಯಸ್ಸಿನಲ್ಲಿಯೇ ಗಾಯನ ಕಾರ್ಯಕ್ರಮ ನೀಡಿ, ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳ ಪ್ರಶಂಸೆಗೆ ಪಾತ್ರರಾದರು. ಮುಂದೆ ಶಿವಯೋಗಮಂದಿರದಲ್ಲಿ ಪೂಜ್ಯ ಪಂಚಾಕ್ಷರಿ ಗವಾಯಿಗಳ ನೆರಳಲ್ಲಿ ಸಂಗೀತಾಭ್ಯಾಸ ಮುಂದುವರೆಸಿದರು. ನಂತರ ಮಲ್ಲಿಕಾರ್ಜುನ ಮನಸೂರವರಲ್ಲಿ ಶಿಷ್ಯತ್ವ ಪಡೆದುಕೊಂಡರು. ಸ್ನೇಹಿತ ಶಾಂತರಸರ ಪ್ರೇರಣೆಯಿಂದ ಜೀವನವನ್ನು ವಚನಸಂಗೀತಕ್ಕೆ ಮುಡುಪಾಗಿಸಿ ವಚನಗಾಯನದಿಂದಲೇ ತಮ್ಮನ್ನು ಸಂಗೀತ ಲೋಕಕ್ಕೆ ಗುರುತಿಸಿಕೊಂಡರು.

ಅವರ ವಚನಗಾಯನದಲ್ಲಿ ತತ್ತ್ವಚಿಂತನೆ ಇರುತ್ತಿತ್ತು. ವಚನಗಳನ್ನು ಸಂಗೀತದಿಂದ ನಿರೂಪಣೆ ಮಾಡುವಲ್ಲಿ ಒಂದು ಬಗೆಯ ಆವಾಹನೆ ಇರುತ್ತಿತ್ತು. ಇದು ಕೇಳುಗರನ್ನು ಅಂತರ್ಮುಖಿಯಾಗಿಸುತ್ತಿತ್ತು. ಅವರ ವಚನಗಾಯನವೇ ಅಷ್ಟು ವಿಶಿಷ್ಟವಾಗಿತ್ತು ಎಂತಹ ಕ್ಲಿಷ್ಟ ಸಾಹಿತ್ಯದ ವಚನವೇ ಆಗಿದ್ದರೂ ಸಂಗೀತದೊಂದಿಗೆ ಸಂಯೋಜಿಸುವ ಕಲೆ, ನಿರೂಪಿಸುವ ಬಗೆ ಸಹಜತೆಯಿಂದ ಕೂಡಿರುತ್ತಿತ್ತು. ಶಬ್ದಗಳ ಸ್ಪಷ್ಟ ಉಚ್ಚಾರಣೆಯಿಂದ ಮತ್ತು ಸಂಯೋಜಿಸುವ ಕಲೆಯಿಂದ ವಚನಗಳಿಗೆ ಕಾವ್ಯಗುಣವನ್ನು ಕೊಡುವ ಅಪ್ರತಿಮ ಸಂಗೀತ ಅವರದಾಗಿತ್ತು.

ವಚನಗಳನ್ನು ಸ್ವರಗಳಿಂದ ಸಮ್ಮಿಳಿಸಿ ಶರಣರ ಅನುಭಾವವನ್ನು ಸಂಗೀತದೊಂದಿಗೆ ತಿಳಿಯಪಡಿಸುವ ಗಾನಧರ್ಮ ಅವರಲ್ಲಿತ್ತು. ಸಂಗೀತ ಗಿಳಿಯ ಪಾಠವಲ್ಲ. ಅಕ್ಷರರಮ್ಯತೆ, ಭಾವ ಮತ್ತು ರಸಪೋಷಣೆ ಜೀವನಾಡಿಗಳೆಂಬುದು ಅವರ ವಚನಗಾಯನದಲ್ಲಿ ಎದ್ದು ಕಾಣುತ್ತದೆ. ಭಾವವಿಲ್ಲದ, ಭಾವನಾಪ್ರಚೋದಕವಿಲ್ಲದ ಸಂಗೀತವು ಬರಡು ಎನ್ನುವದನ್ನು ತಿಳಿದ, ವಚನಗಳ ಭಾವಕ್ಕೆ ತಕ್ಕ ರಾಗಸಂಯೋಜನೆ ಮಾಡಿದ ವಚನಗಳನ್ನು ಜಂಬಲದಿನ್ನಿಯವರ ಬಾಯಿಂದಲೇ ಕೇಳಬೇಕು ಎನ್ನುವಷ್ಟರ ಮಟ್ಟದಲ್ಲಿ ಕೇಳುಗರ ಮನದಾಳದಲ್ಲಿ ವಚನಗಳನ್ನು ಅರ್ಥೈಸುತ್ತಿದ್ದರು. ಅವರು ವಚನಗಳ ಅರ್ಥವಿಕಾಸಕ್ಕೆ ಗಮನಕೊಟ್ಟು ಅವುಗಳಿಗೆ ನಿಜವಾದ ಸ್ವರೂಪ ಕೊಟ್ಟರು. ತಮ್ಮ ಗುರುಗಳು ಹಾಕಿಕೊಟ್ಟ ಹಾದಿಯಲ್ಲಿಯೇ ನಡೆದು, ವಚನಗಾಯನಕ್ಕೆ ನೂತನ ದೃಷ್ಟಿ ನೀಡಿ, ಒಂದು ಹೊಸ ಪ್ರಯೋಗವನ್ನು ಮಾಡಿ, ಅನೇಕ ವಚನಗಳನ್ನು ಸಂಯೋಜಿಸಿ ಹಾಡಿ, ಒಂದು ಹೊಸ ಪ್ರಕಾರವಾಗಿಸಿದ್ದು, ಕೇಳಿದಾಗ ಇದು ನಾಡಿನ ಒಂದು ನವ್ಯ ಪ್ರಕಾರ ಅನ್ನುವಷ್ಟರ ಮಟ್ಟಿಗೆ ಈ ಗಾಯನವನ್ನು ಬಿಂಬಿಸಿದ್ದಾರೆ. ವಚನ ಗಾಯನವನ್ನು ಜೀವನದುದ್ದಕ್ಕೂ ಹಾಡಿ, ಇದು ಹೊಸದಿಕ್ಕಿನಲ್ಲಿ ಚಲಿಸಲು ಚಾಲನೆ ನೀಡಿ, ಈ ಗಾಯನಕ್ಕೆ ವಿಶಿಷ್ಟ ಕಳೆಯನ್ನು ತಂದಿದ್ದಾರೆ ಪಂ. ಸಿದ್ಧರಾಮ ಜಂಬಲದಿನ್ನಿಯವರು.

ಸುಂದರವಾದ ಗಾಯನಶೈಲಿ, ಮಧುರವಾದ ಕಂಠ, ಉತ್ತಮವಾದ ಕಲ್ಪನೆ, ಉತ್ತುಂಗದ ಸಾಹಿತ್ಯ ಮತ್ತು ವಚನಗಳ ಬಗ್ಗೆ ಇರುವ ಆಸಕ್ತಿ, ಜೊತೆಗೆ ಶ್ರೇಷ್ಠತಮ ಸಂಯೋಜನೆಯಿಂದ ವಚನಗಾಯನದ ಪಿತಾಮಹರೆನಿಸಿದ್ದಾರೆ.

ಸಿದ್ಧರಾಮ ಜಂಬಲದಿನ್ನಿಯವರ ರಾಗಸಂಯೋಜನೆಯಲ್ಲಿ ಸ್ವರದಷ್ಟೆ ಲಯಕ್ಕೂ ಮಹತ್ವ, ರಾಗಗಳ ಶುದ್ಧತೆ, ಸ್ವರಶುದ್ಧತೆ, ಲಯಕಾರಿ, ರಾಗಾಲಾಪನೆಯಲ್ಲಿ ವೈವಿಧ್ಯ, ಗಮಕ, ಮೀಂಡು, ಖಡಕಾಮುರ್ಕಿಗಳ ಪ್ರಯೋಗ ಮತ್ತು ಆ ಕಾರ ಈ ಕಾರಗಳಲ್ಲಿ ತಂಬೂರಿನಾದದಲ್ಲಿ ಏಕಜೀವವಾಗಿ ಸ್ವರಗಳನ್ನು ಹಚ್ಚುವ ಪದ್ಧತಿ ಕೇಳಿದಾಗ ವಚನ ಸಂಗೀತದಲ್ಲಿ ಅವರದು ಪರಿಪೂರ್ಣತೆಯ ವ್ಯಕ್ತಿತ್ವ ಎನಿಸುವುದು ಸಹಜ. ಕೇಳುಗರನ್ನು ೧೨ನೇ ಶತಮಾನಕ್ಕೆ ಕರೆದೊಯ್ಯುವ ಸಾಮರ್ಥ್ಯ ಅವರಲ್ಲಿತ್ತು.

ಕ್ರಾಂತಿಕಾರಿಗಳಾದ ಶರಣರಿಗೆ ತಮ್ಮ ಅಭೂತಪೂರ್ವ ವಚನಗಾಯನ ಸಿರಿಯಿಂದ ಶರಣರ ದರ್ಶನ ಮಾಡಿಸುವ ಸಿದ್ಧಿಯನ್ನು ಮಾಡಿಕೊಂಡ ಸಾಧಕರಾಗಿದ್ದಾರೆ. ಜಂಬಲದಿನ್ನಿಯವರ ವಚನಗಳನ್ನು ಕೇಳುವಾಗ ನಮಗೆ ಆತ್ಮಾನಂದವಾಗುವುದು ಹಾಗೂ ಅವರ ಗಾಯನಶಕ್ತಿಯಿಂದ ಶರಣರ ಲೋಕಕ್ಕೆ ಹೋದ ಅನುಭವವಾಗುತ್ತದೆ.

"ಒಳಗುಮ್ಮಿದಾನಂದರಸ ತನ್ನ ತನು ತುಂಬಿ
ತುಳುಕಿ ಹೊರಗೆ ಸೂಸುವಂತೆ
ತೆಳುವುಸಿರಿಂದ ಬಾಯ್ತೆರೆಯೊಳು ಸುಸ್ವರ
ಹೊಳೆದು ಮೋಹಿಸದೇನು ಆಗ"

ಸಂಗೀತಕಲೆ ಬರೀ ಹೊರಗಣ ಅಭ್ಯಾಸದಿಂದ ಅಳವಡದು. ಒಳಗಣ ಗತಿ, ಮತಿ,

ರುಚಿ, ಅಭಿರುಚಿಗಳ ಕಲಾಪ್ರತಿಭೆಗೆ ಮೂಲ ಆನಂದದಿಂದ ಸಾಗುವ ಸಾಧನೆಯಿಂದ ಮೂಲ ಪ್ರತಿಭೆಗಳು ಅರಳುತ್ತವೆ. ಕವಿ ರತ್ನಾಕರನು ತನ್ನ ಸಾಂಗತ್ಯ ಕಾವ್ಯದಲ್ಲಿ ಮನದುಂಬುವಂತೆ ಚಿತ್ರಿಸಿದ್ದಾನೆ. (ಡಿ.ಎಸ್. ಕರ್ಕಿ, ಮನಸೂರ ಅಭಿನಂದನ ನೆನಹಿನ ಸಂಚಿಕೆ ಪುಟ ೧೩)

ಜಂಬಲದಿನ್ನಿಯವರ ಗಾಯನ ಒಳಗಣ ಗತಿ, ಮತಿಗಳಿಂದ ಹೊರಸೂಸುತ್ತಿದ್ದವು. ಅವರದು ಅಂತರಂಗದ ದನಿ. ಸಂಗೀತದ ರಸತಜ್ಞತೆಯನ್ನು ತಿಳಿದು ಹಾಡಿದ ಗಾಯಕರು. ಅದಕ್ಕಾಗಿಯೇ ಇವರ ವಚನಗಾಯನ ಎಲ್ಲರ ಮನಸ್ಸಿನಲ್ಲಿ ಉಳಿದಿದೆ. ಅವರ ವಚನಗಾಯನ ಸಂಗೀತ ಬಲ್ಲವರನ್ನು, ಬಾರದವರನ್ನು ಖುಷಿಪಡಿಸುತ್ತಿತ್ತು. ಅವರ ಗಾಯನದ ಸೃಜನಶೀಲ ಚಲನಕ್ಕೆ ಸಂಗೀತವೇ ಧನ್ಯವಾದಂತೆ ಭಾಸವಾಗುತ್ತಿತ್ತು.

೧೯೮೨ರಲ್ಲಿ ಯಲಬುರ್ಗಿಯ ಮಗ್ಗಿಬಸವೇಶ್ವರ ಜಾತ್ರೆಯಲ್ಲಿ ಅವರ ವಚನಗಾಯನ ಇತ್ತು. ಸುತ್ತಮುತ್ತಲಿನ ಹಳ್ಳಿಯ ಜನಸಾಮಾನ್ಯರು, ರೈತರು ಅಲ್ಲಿಯ ಶ್ರೋತೃಗಳು. ಭೂಪರಾಗದಲ್ಲಿ "ಆರಂಭ ಮಾಡುವೆ ಗುರುಪೂಜೆಗೆಂದು" ವಚನದೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿದಾಗ ಸಾವಿರಾರು ಜನರು ನಿಂತುಕೊಂಡೇ ಅವರ ಗಾಯನ ಕೇಳುತ್ತಿದ್ದರು. ಯಾವಾಗ ಮಾರವಾ ರಾಗದ ಆಲಾಪ ಮಾಡಿ "ಹಬ್ಬಕೆ ತಂದ ಹರಕೆಯ ಕುರಿ" ವಚನ ಶುರುಮಾಡುತ್ತಿದ್ದಂತೆ ಜನರೆಲ್ಲರೂ ನಿಂತು ನಿಂತಲ್ಲೇ ಕುಳಿತು ತಮ್ಮ ಕಣ್ಣುಗಳಿಂದ ಕಣ್ಣೀರು ಹರಿಸಿ ಕೇಳಿದ್ದು ನಾನು ನೋಡಿದ್ದೇನೆ. ಆ ಹರಕೆಯ ಕುರಿಯ ಪರಿಸ್ಥಿತಿಯನ್ನು ಶೋಕಪ್ರಧಾನ ರಾಗವಾದ ಮಾರವಾರಾಗದಲ್ಲಿ ಸಂಯೋಜಿಸಿದ್ದು ಆ ಸಂದರ್ಭದ ಹೃದಯವಿದ್ರಾವಕ ದೃಶ್ಯವನ್ನು ಅವರ ಗಾಯನದಲ್ಲಿ ಕೇಳುಗರನ್ನು ಕಲ್ಪನಾಲೋಕದಲ್ಲಿ ಒಯ್ದದ್ದು ನಾನು ಕಂಡಿದ್ದೇನೆ. ಜಂಬಲದಿನ್ನಿಯವರೇ ಆ ಹರಕೆಯ ಕುರಿಯಾಗಿ ಹಾಡುತ್ತಿರುವರೇನೋ ಅನ್ನುವಷ್ಟು ಕರುಣಾಭಾವದಿಂದ ಶೋಕವನ್ನು ವ್ಯಕ್ತಮಾಡುವುದರ ಜೊತೆಗೆ ಜನರಲ್ಲಿ ಚಿಂತನೆಗೈಯುವಂತೆ ಸಂಗೀತದ ಮುಖಾಂತರ ಒಳಪಡಿಸುತ್ತಿದ್ದರು. ವಚನಗಾಯನದಿಂದ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುವದಷ್ಟೇ ಅಲ್ಲ ಅವರಲ್ಲಿ ೧೨ನೇ ಶತಮಾನದ ಶರಣರ ಸಾಮಾಜಿಕ ಚಿಂತನೆ ಈಗಲೂ ಪ್ರಸ್ತುತವಾಗಿದೆಯಲ್ಲ ಮತ್ತು ಈಗಿನ ಸಂದರ್ಭಗಳಲ್ಲೂ ಸಮಾಜದಲ್ಲಿ ಅಧರ್ಮ, ಅನಾಚಾರ ಪ್ರಸ್ತುತವಾಗಿವೆಯಲ್ಲ ಎನ್ನುವತ್ತ ಕೇಳುಗರನ್ನು ಚಿಂತಿಸುವತ್ತ ತೊಡಗಿಸುತ್ತಿದ್ದರು. ಅವರ ಅನೇಕ ಕಾರ್ಯಕ್ರಮಗಳನ್ನು ನೇರವಾಗಿ ಕೇಳಿರುವೆ. ಅವರು ಕಾರ್ಯಕ್ರಮದಲ್ಲಿ ಹಾಡಲು ಕುಳಿತರೆಂದರೆ ಮುಖದಲ್ಲಿ ಗಂಭೀರಭಾವ ಆವರಿಸುತ್ತಿತ್ತು. ಶರಣರ ದರ್ಶನಕ್ಕೆ ನಮ್ಮನ್ನೆಲ್ಲಾ ಕರೆದೊಯ್ಯುತ್ತಿರುವರೇನೊ ಎನಿಸುತ್ತಿತ್ತು. ಅವರೂ ಒಬ್ಬ ಶರಣರಂತೆ ಕಾಣುತ್ತಿದ್ದರು. ಓದು ಬಾರದವರಿಗೂ ವಚನ ಮತ್ತು ಗಾಯನ ಎರಡನ್ನೂ ಅರ್ಥೈಸುವ ಇವರ ಕಲೆ ನಿಜಕ್ಕೂ ಅದ್ಭುತವಾಗಿತ್ತು.

೧೯೭೩ ರಲ್ಲಿ ಬಿಜಾಪುರಜಿಲ್ಲೆಯ ತಾಳಿಕೋಟೆಯ ಖಾಸ್ಗತೇಶ್ವರ ಶಿಕ್ಷಣ ಸಂಸ್ಥೆಯವರು ತಮ್ಮ ಶಿಕ್ಷಣ ಸಂಸ್ಥೆಯ ಚಿನ್ನದ ಹಬ್ಬ ಸಮಾರಂಭದ ಅಂಗವಾಗಿ ಶಿವಾನುಭವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಜಂಬಲದಿನ್ನಿಯವರ ವಚನಗಾಯನವನ್ನು ಕೇಳಿದ ಮುರುಗೋಡ ಅಜ್ಜನವರು ತಮ್ಮ ಕೈಗಳನ್ನು ಜಂಬಲದಿನ್ನಿಯವರ ತಲೆಯ ಮೇಲಿರಿಸಿ "ನಿಮ್ಮಂಥವರು ಸಮಾಜದಲ್ಲಿ ನೂರು ವರ್ಷ

ಬದುಕಬೇಕು" ಎಂದು ಆಶೀರ್ವದಿಸಿದ್ದು ಸ್ಮರಣೀಯ. ವಿನೂತನ ಶೈಲಿಯ ವಚನಗಾಯನದ ಸಿದ್ಧಿಪುರುಷರಾಗಿ ಅವರು ಈ ನಾಡಿನಲ್ಲಿ ಸಂಗೀತ ಪ್ರಪಂಚದಲ್ಲಿ ಚಿರಕಾಲ ಇರುತ್ತಾರೆ.

೧೯೬೦ ರಲ್ಲಿ ಶಿವಯೋಗ ಮಂದಿರದವರು ಪ್ರಕಟಿಸಿದ 'ಬೆಳಗು' ಪುಸ್ತಕದಲ್ಲಿ ಸಂಗೀತಸುಧಾಕರ, ಮಧುರಕಂಠದ ಗಾಯಕರು ಎಂದು ಜಂಬಲದಿನ್ನಿಯವರ ಬಗ್ಗೆ ಬರೆದಿದ್ದಾರೆ.

ವಚನಗಳನ್ನಲ್ಲದೇ ಅನೇಕ ತತ್ತ್ವಪದಗಳನ್ನು, ರಗಳೆ, ಸುಪ್ರಭಾತಗಳನ್ನು, ದಾಸರ ಪದಗಳನ್ನು, ರಂಗಗೀತೆ, ಭಾವಗೀತೆಗಳನ್ನು ಹಾಡಿ ಅದರಲ್ಲಿಯೂ ಅವರು ಛಾಪು ಮೂಡಿಸಿದ್ದಾರೆ.

೧೯೫೬ರಲ್ಲಿ ಕೊಪ್ಪಳದಲ್ಲಿ ರೈಲ್ವೆ ಗೇಟಿನ ಹತ್ತಿರ ಇರುವ ಆಫೀಸ್ಸರ್ ಕ್ಲಬ್ಬಿನಲ್ಲಿ ವಚನಗಾಯನದ ಸುದೀರ್ಘವಾದ ಕಾರ್ಯಕ್ರಮ ನಡೆಯಿತು.

ರಾಯಚೂರಿನ ಕಿಲ್ಲೇದಮಠದಲ್ಲಿ ಪ್ರತಿ ಬಸವಜಯಂತಿಯಂದು ಇವರ ವಚನಗಾಯನ ಕಾರ್ಯಕ್ರಮ ಇರಲೇಬೇಕು. ಯಲಬುರ್ಗಾದ ಹಿರೇಮಠದಲ್ಲಂತೂ ಅವರ ಅನೇಕ ಕಾರ್ಯಕ್ರಮಗಳನ್ನು ಇಡುತ್ತಿದ್ದರು. ಪೂಜ್ಯ ಲಿ॥ ಸಿದ್ಧರಾಮಶಿವಾಚಾರ್ಯ ಮಹಾಸ್ವಾಮಿಗಳಿಗೆ ಜಂಬಲದಿನ್ನಿಯವರ ವಚನಗಾಯನವೆಂದರೆ ಬಹಳ ಪ್ರೀತಿ. ಜೊತೆಗೆ ಶರಣರ ಬಗ್ಗೆಯೂ ಬಹಳ ಗೌರವ. ಬಂದ ಭಕ್ತಾದಿಗಳಿಗೆ ಶರಣರ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಲು ಹೇಳುತ್ತಿದ್ದರು. ಇದು ಜಂಬಲದಿನ್ನಿಯವರ ಮೇಲೆ ಪ್ರಭಾವ ಬೀರುತ್ತಿತ್ತು. ಯಾವುದೇ ಕಾರ್ಯಕ್ರಮವಿದ್ದರೂ ಪೂಜ್ಯರು ಕರೆದರೆ ಸಂತೋಷದಿಂದ ಬಂದು ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ಇವರ ಅನೇಕ ಕಾರ್ಯಕ್ರಮಗಳನ್ನು ಶ್ರೀ ಮಠದಲ್ಲಿ ನೇರವಾಗಿ ನಾನು ಕೇಳಿದ್ದೇನೆ. ಯಲಬುರ್ಗಿಯ ಸಮಸ್ತ ಜನತೆ ಇವರ ಅನೇಕ ಕಾರ್ಯಕ್ರಮಗಳನ್ನು ಕೇಳಿ ಪುಣ್ಯವಂತವಾಗಿದೆ. ಜಂಬಲದಿನ್ನಿಯವರಿಗೆ ಶ್ರೀಮಠದಲ್ಲಿ "ವಚನಸಂಗೀತರತ್ನ" ಅಭಿಧಾನದೊಂದಿಗೆ ಸತ್ಕರಿಸಿದ್ದು ಹೆಮ್ಮೆಪಡುವ ವಿಷಯವಾಗಿದೆ. ಆಶ್ಚರ್ಯದ ವಿಷಯವೆಂದರೆ, ಇದನ್ನೊಂದೇ ತಮ್ಮ ಮನೆಯಲ್ಲಿ ಹಾಕಿಕೊಂಡಿದ್ದನ್ನು ಜಂಬಲದಿನ್ನಿಯವರು ಬಹಳ ಪ್ರೀತಿಯಿಂದ ಹೇಳಿಕೊಳ್ಳುತ್ತಿದ್ದರು. ಶ್ರೀ ಮುನಿಯಪ್ಪ ಹುಬ್ಬಳ್ಳಿಯವರು ಜಂಬಲದಿನ್ನಿಯವರ ಅಭಿಮಾನಿಗಳು, ಅವರು ಇವರ ವಚನಗಾಯನದ ಬಗ್ಗೆ ಭಾವಪರವಶರಾಗಿ ಬರೆದುದನ್ನು ಇಲ್ಲಿ ಸ್ಮರಿಸುವದು ಅವಶ್ಯ. ಏಕೆಂದರೆ ಜಂಬಲದಿನ್ನಿಯವರನ್ನು ನಮ್ಮ ಜನರು ಹಾಡಿ ಹೊಗಳಿದ್ದು ಬಹಳ ಕಡಿಮೆ.

**ಸಮ್ಮಾನಪತ್ರ**

ಶರಣ ಶ್ರೀ ಸಿದ್ಧರಾಮ ಜಂಬಲದಿನ್ನಿಯವರೇ....

ಗಾನಯೋಗಿ ಶ್ರೀ ಪಂಚಾಕ್ಷರಿಗವಾಯಿಯವರ ಪೂರ್ಣ ಕೃಪೆಗೆ ಪಾತ್ರರಾಗಿ; ರಕ್ತಗತವಾಗಿ ಹರಿದು ಬಂದ ಕಲೆಯ ಹಲವು ಝುರಿಗಳಲ್ಲಿ ಸಂಗೀತಸುಧೆಯಾಗಿ; ನಾಡಿನುದ್ದಕ್ಕೂ ಹರಿದು, ನಿಮ್ಮ ಬದುಕು ವಚನಸಂಗೀತದ ಮೂಲಕ ಪಾಮರರನ್ನು ಪುನೀತಗೊಳಿಸುತ್ತಿರುವುದು ಈ ನಾಡಿನ ಪುಣ್ಯವಿಶೇಷವೆಂದು ಬಗೆದಿರುವೆವು.

ಕಾಲಗರ್ಭದಲ್ಲಿ ಹುದುಗಿಹೋದ ಶಿವಶರಣರ ವಚನಗಳನ್ನು ತಮ್ಮ

ಜೀವಿತದವರೆಗೂ ಸಂಶೋಧಿಸಿ–ಸಂಗ್ರಹಿಸಿದ ಲಿಂ. ಫ. ಗು. ಹಳಕಟ್ಟಿಯವರು ವಚನಪಿತಾಮಹರೆಂದೆನಿಸಿದರೆ; ಶರಣರ ವಚನೋದ್ಯಾನದಲ್ಲಿ ಸಂಚರಿಸಿ ತತ್ತ್ವಪೂರ್ಣ ವಚನಗಳಿಗೆ ಸತ್ವಪೂರ್ಣ ಧ್ವನಿಯನ್ನಿತ್ತು, ಸಕಲರ ಹೃನ್ಮನಗಳಲ್ಲಿ ಶರಣರ ವಚನಗಳು ಧ್ವನಿತವಾಗುವಂತೆ ಮಾಡಿ, ಮಾಧುರ್ಯದಲ್ಲಿ ವಿಹರಿಸ ಹಚ್ಚಿ, ಶರಣರ ವಚನಗಳನ್ನು ಅರ್ಥಪೂರ್ಣವಾಗಿ ಹಾಡುವ ಕಲೆಯನ್ನೂ ಅರಗಿಸಿಕೊಂಡ ತಮ್ಮನ್ನು ಯಲಬುರ್ಗಿಯ ಹಿರೇಮಠದ ಶ್ರೀ ಷ.ಬ್ರ. ಸಿದ್ಧರಾಮ ಸ್ವಾಮಿಗಳವರ ಸನ್ನಿಧಿಯಲ್ಲಿ 'ವಚನ ಸಂಗೀತರತ್ನ' ಎಂಬ ಅಭಿಧಾನದೊಂದಿಗೆ ಸತ್ಕರಿಸಲು ತುಂಬಾ ಹೆಮ್ಮೆ ಪಡುವೆವು.

**'ವಚನ ಸಂಗೀತರತ್ನ' ಶ್ರೀ ಸಿದ್ಧರಾಮ ಜಂಬಲದಿನ್ನಿಯವರೇ......**

ಶರಣಸಾಹಿತ್ಯ ಓದಲು ವ್ಯವಧಾನವಿಲ್ಲದ ಇಂದಿನ ಯಾಂತ್ರಿಕಜೀವನದಲ್ಲಿ ವಚನಾಮೃತವನ್ನು ಉಣಬಡಿಸುವ ತಮ್ಮ ಕಂಠಶ್ರೀಗೆ ಶ್ರೀ ಶರಣರು ಸದಾ ಸುಖವನ್ನಿತ್ತು ಸಕಲ ಜೀವಾತ್ಮರನ್ನು ಪುನೀತಗೊಳಿಸಲೆಂದು ಹಾರೈಸುವೆವು.

ದಿನಾಂಕ: ೨೯–೦೪–೧೯೮೨ ಶ್ರೀ ಮೊಗ್ಗೆ ಬಸವೇಶ್ವರ ಸದ್ಭಕ್ತ ಮಂಡಳಿ

ಸ್ಥಳ: ಯಲಬುರ್ಗಾ,(ಜಿ. ರಾಯಚೂರು)

ಬಿಜಾಪುರದ ಬಳಿ ಒಂದು ಹಳ್ಳಿಯಲ್ಲಿ ಅಕ್ಕಮಹಾದೇವಿ ಆಶ್ರಮ ಉದ್ಘಾಟನೆ ಸಂದರ್ಭದಲ್ಲಿ ಪಂ. ಮಲ್ಲಿಕಾರ್ಜುನ ಮನಸೂರವರ ಸಂಗೀತಕಾರ್ಯಕ್ರಮದ ಜೊತೆಗೆ ಜಂಬಲದಿನ್ನಿಯವರ ಸಹಗಾಯನ. ಡಿ. ಎಸ್. ಕರ್ಕಿ ಮತ್ತು ವಿ.ಕೃ.ಗೋಕಾಕ ಅಂದಿನ ಮುಖ್ಯ ಅತಿಥಿಗಳು. ಮನಸೂರವರು ರಾಗ ಬಿಹಾಗ ಹಾಡಿ "ಕಳಬೇಡ ಕೊಲಬೇಡ" ವಚನ ಹಾಡಿದರು. ನಂತರ ನನ್ನ ಶಿಷ್ಯ ವಚನ ಚೆನ್ನಾಗಿ ಹಾಡ್ತಾನ ಅಂತ ಕರೆದು ಹಾಡಲು ಹಚ್ಚಿದರು. ಜಂಬಲದಿನ್ನಿಯವರು ಅಂದು ರಾತ್ರಿ ೧೦ ಗಂಟೆಯಿಂದ ಬೆಳಗಿನವರೆಗೂ ವಚನಗಾಯನ ಹಾಡಿದರು. ಎಲ್ಲ ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿದರು. ಕಾರಿನಲ್ಲಿ ಹಿಂತಿರುಗುವಾಗ ಮನಸೂರವರು "ಏನೋ ಸಿದ್ದಣ್ಣ ,ಇಷ್ಟೆಲ್ಲ ವಚನಗಳನ್ನು ಯಾವಾಗ ಕೂಡಿಸಿದ್ದಿ?" ಉತ್ತರವಾಗಿ ಗುರುಗಳ ಪಾದ ಮುಟ್ಟಿ ನಮಸ್ಕರಿಸಿ ಮೌನವಾಗಿ ಕುಳಿತಿದ್ದರಿಂದ ಅವರ ವಿನಯತೆ, ವಿಧೇಯತೆ ವ್ಯಕ್ತವಾಗುತ್ತದೆ.

ಮನಸೂರವರಿಗೆ ಜಂಬಲದಿನ್ನಿಯವರ ಧ್ವನಿ ಎಷ್ಟು ಹೋಲುತ್ತಿತ್ತೆಂದರೆ ೧೯೮೯ ರಲ್ಲಿ ಸಾರ್ಕ್ ಸಮ್ಮೇಳನ, ಬೆಂಗಳೂರಿನ, ರವೀಂದ್ರ ಕಲಾಕ್ಷೇತ್ರದಲ್ಲಿ ಜಂಬಲದಿನ್ನಿಯವರ ಗಾಯನ. ಅಚಾನಕ್ ಬೆಂಗಳೂರಿಗೆ ಬಂದಿದ್ದ ಮುಂಬಯಿಯ ಸಂಗೀತ ತಜ್ಞ ರಮೇಶ ನಾಡಕರ್ಣಿ ನಾಟಕ ಪ್ರವೇಶದ್ವಾರಕ್ಕೆ ಬರುತ್ತಿದ್ದಂತೆಯೇ "ಅರೆ, ನಾನು ಬಂದದ್ದು ಒಳ್ಳೇದಾಯ್ತು, ಮನಸೂರವರ ಗಾಯನ ಒಳಗೆ ನಡೆದಿದೆ, ಕೇಳಲು ಸಿಕ್ಕಿತಲ್ಲ" ಎಂದು ಸಂತಸದಿಂದ ಒಳಗೆ ಹೋಗಿ ನೋಡಿದರೆ ಅಲ್ಲಿ ಜಂಬಲದಿನ್ನಿಯವರ ಗಾಯನ ನಡೆದಿತ್ತು. ಇದನ್ನು ಕೇಳಿ ಆಶ್ಚರ್ಯಚಕಿತರಾಗಿದ್ದಲ್ಲದೆ "ಮನಸೂರರ ಗಾಯಕಿಯನ್ನು ಹೂಬೇಹುಬ ಹಾಡುವ ನೀವು ನಿಜಕ್ಕೂ ಗುರುವಿಗೆ ತಕ್ಕ ಶಿಷ್ಯ" ಎಂದು ಕೊಂಡಾಡಿದ್ದರು. ಪಂಡಿತ ವೈ. ನಾಗೇಶ ಶಾಸ್ತ್ರಿಗಳ ರಚನೆಯಾದ ಮೃತ್ಯುಂಜಯಸುಪ್ರಭಾತ ಎಚ್.ಎಮ್.ವಿ. ಕಂಪನಿಗಾಗಿ ಮನಸೂರರು 'ಜಂಬಲದಿನ್ನಿಯವರು ಕೂಡಿ ಹಾಡಿದ್ದು

ಕೇಳಿದಾಗಲೂ ಅಷ್ಟೇ, ಯಾರು ಮೊದಲು ಹಾಡಿದರು' ನಂತರ ಯಾರು ಹಾಡಿದರು ಎನ್ನುವಷ್ಟು ಧ್ವನಿಸಾಮ್ಯವಿತ್ತು. ಇದಕ್ಕೆ ಅನ್ನುವರು ಧ್ವನಿಸಂಸ್ಕಾರ ಎಂದು.

ಪೂಜ್ಯ ಪಂಚಾಕ್ಷರಿ ಗವಾಯಿಗಳು ಅಂಧ, ಅಂಗವಿಕಲ ವಿದ್ಯಾರ್ಥಿಗಳ ಬಾಳು ಹಸನುಮಾಡಿ ಕರ್ನಾಟಕದಲ್ಲಿ ಹಿಂದುಸ್ತಾನಿ ಸಂಗೀತ ಉಳಿಸಿ ಬೆಳೆಸುವದಕ್ಕಾಗಿಯೇ ಹುಟ್ಟಿ ಬಂದಿದ್ದರು. ಅದೇ ತರಹ ಜಂಬಲದಿನ್ನಿಯವರು ಶರಣರನ್ನು ಉಳಿಸಲು ಹುಟ್ಟಿ ಬಂದಿದ್ದರು. ವಚನಗಳನ್ನು ಹಾಡಿ, ಶರಣರಂತೆ ಬಾಳಿ, ಶರಣರು ಆರಿಸಿಕೊಂಡ ಬಯಲನ್ನೇ ಇವರೂ ಆರಿಸಿಕೊಂಡು, ತಮ್ಮ ಬಗ್ಗೆ ಏನನ್ನೂ ಹೇಳಿಕೊಳ್ಳದೇ ತಮ್ಮ ಶ್ರೇಷ್ಠತಮ ವಚನಗಾಯನದ ಮೂಲಕ ಅಮರರಾಗಿದ್ದಾರೆ.

## ಬಸವೇಶ್ವರ ಚಲನಚಿತ್ರಕ್ಕೆ ಸಂಗೀತ ಸಂಯೋಜನೆ

ಸುಮಾರು ೧೯೪೭ರಲ್ಲಿ ಯಾದಗಿರಿ ತಾಲೂಕಿನ ಗುರುಮಿಟಕಲ್ ಸ್ವಾಮಿಗಳು ಮತ್ತು ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಕೂಡಿ ಬಸವಣ್ಣನವರ ಸಿನೇಮಾ ಮಾಡಲು ಕೈ ಹಾಕಿದ್ದರು. ಈ ಸಿನೇಮಾದ ನಿರ್ದೇಶನಕ್ಕಾಗಿ ಶ್ರೀ ಚಾರಿಯವರನ್ನು, ಹಾಗೂ ಶ್ರೀ ಸಿದ್ಧರಾಮ ಜಂಬಲದಿನ್ನಿಯವರನ್ನು ಸಂಗೀತಸಂಯೋಜನೆಗೆ ಆಯ್ಕೆ ಮಾಡಿದ್ದರು. ಗೀತರಚನೆಗಾಗಿ ನಲವಡಿ ಶ್ರೀಕಂಠ ಶಾಸ್ತ್ರಿಗಳನ್ನು, ಹಿನ್ನೆಲೆ ಗಾಯನ ಮತ್ತು ಮಾದಲಾಂಬಿಕೆಯ ಪಾತ್ರಕ್ಕೆ ಅಮೀರಬಾಯಿ ಕರ್ನಾಟಕಿಯನ್ನು ಗೊತ್ತು ಪಡಿಸಿದ್ದರು. ಚಿತ್ರದ ಮೂರು ಹಾಡುಗಳಿಗೆ ಜಂಬಲದಿನ್ನಿಯವರು ಸ್ವರಸಂಯೋಜನೆ ಸಹ ಮಾಡಿದ್ದರು. ಆದರೆ ಕಾರಣಾಂತರಗಳಿಂದ ಈ ಚಲನಚಿತ್ರದ ತಯಾರಿಕೆ ನಿಂತು ಹೋಯಿತು. ಈ ಚಿತ್ರದ ಶೂಟಿಂಗ್ ಮೈಸೂರಿನಲ್ಲಿ ನಡೆದಿತ್ತೆಂದು ತಿಳಿದು ಬರುತ್ತದೆ.


ಪ್ರಶಸ್ತಿಗಾಗಿ ಪಂ. ಸಿದ್ಧರಾಮ ಜಂಬಲದಿನ್ನಿಯವರು ಯಾರ ಹಿಂದೆಯೂ ಹೋಗಲಿಲ್ಲ, ಯಾರ ವಶೀಲಿಗಾಗಿ ಹಿಂದೆ ಬೀಳಲಿಲ್ಲ. ವಾಸ್ತವಿಕವಾಗಿ ಅವರಿಗೆ ಸಿಗಬೇಕಾದ, ನ್ಯಾಯಯುತವಾಗಿ ಸಲ್ಲಬೇಕಾದ ಪ್ರಶಸ್ತಿಗಳು ದೊರಕಲಿಲ್ಲ ಎಂದು ನಾನು ಹೇಳಲು ಇಚ್ಛೆ ಪಡುತ್ತೇನೆ. ಅವರಿಗೆ ಸಿಕ್ಕ ಪ್ರಶಸ್ತಿಗಳು ಇವು:

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗಮಕ ಕಲಾನಿಧಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ,, ಕರ್ನಾಟಕ ನೃತ್ಯ ಅಕಾಡೆಮಿಯ 'ಕಲಾತಿಲಕ', 'ಸಂಗೀತಸುಧಾಕರ' ಎಂಬ ಬಿರುದಾವಳಿ, ವೀರಶೈವ ಮಹಾಸಭೆ, ಹೈದರಾಬಾದ್, 'ವಚನಸಂಗೀತರತ್ನ' ಯಲಬುರ್ಗಿ ಶ್ರೀ ಮೊಗ್ಗೆ ಬಸವೇಶ್ವರ ಸದ್ಭಕ್ತ ಮಂಡಳಿಯವರಿಂದ.

ಶ್ರೀ ಸಿದ್ಧರಾಮ ಜಂಬಲದಿನ್ನಿಯವರ ಶಿಷ್ಯಬಳಗ ಅಪಾರ. ಅವರ ಕೆಲವು ಪ್ರಮುಖ ಶಿಷ್ಯರೆಂದರೆ ಖ್ಯಾತ ಕ್ಲಾರಿಯೋನೆಟ್ ವಾದಕ ಶ್ರೀ ನರಸಿಂಹಲು ವಡವಾಟಿ, ಶ್ರೀ ವೀರೇಶ್ವರ ಹಿರೇಮಠ, ಗದಗ, ಚಂದ್ರಶೇಖರ ಪುರಾಣಿಕಮಠ, ಧಾರವಾಡ , ಸಿದ್ಧರಾಮಯ್ಯ ಕೊರವಾರ, ಭೂಪಾಲ

ಖ್ಯಾಲ್ ಗಾಯನದಲ್ಲಿಯೂ ಕೂಡ ಅಪಾರ ಪಾಂಡಿತ್ಯ ಪಡೆದಿದ್ದ ಪಂ. ಸಿದ್ಧರಾಮ ಜಂಬಲದಿನ್ನಿಯವರು ಇಂದಿಗೂ ವಚನಗಾಯನಕ್ಕೆ ಶ್ರೇಷ್ಠ ಮಾದರಿ. ಪಂ. ಸಿದ್ಧರಾಮ ಜಂಬಲದಿನ್ನಿಯವರು ಡಿಸೆಂಬರ್ ೩೧, ೧೯೯೮ ರಂದು ಸಂಗೀತಸರಸ್ವತಿಯ ಪಾದ ಸೇರಿದರು.

■■■



ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ

# ಸಂಗೀತನಿಧಿ

# ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ

## (ಜನನ-೧೨-೧೦-೧೯೨೭)

● ಶ್ರೀಮತಿ ಜಿ. ಸುರೇಖಾ ಸುರೇಶ

ಧಾರವಾಡ, ಈ ನೆಲದಲ್ಲಿ ನಿತ್ಯ ಸುಗಂಧ ಸೂಸುವ ಕುಸುಮಗಳು ಅನೇಕ. ಖ್ಯಾತ ಸಂಗೀತಗಾರರು, ಸಾಹಿತಿಗಳು, ರಂಗಕಲಾವಿದರು, ಚಿತ್ರಕಲಾವಿದರು, ಪತ್ರಕರ್ತರು, ವಿಜ್ಞಾನಿಗಳು, ಶಿಕ್ಷಣತಜ್ಞರು, ರಾಜಕಾರಣಿಗಳು, ಉದ್ಯಮಿಗಳು, ಅನುಭಾವಿಗಳು, ಸಾಧು ಸಂತರು ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ನಾಡಿಗೆ, ದೇಶಕ್ಕೆ, ವಿಶ್ವಕ್ಕೆ ಬೆಳಕು ಪಸರಿಸಿದ ಸಾವಿರಾರು ನಕ್ಷತ್ರಗಳ ಸಾಧನೆಯೇ ಇಲ್ಲಿನ ದಿವ್ಯಶಕ್ತಿ. ಭಾರತೀಯ ಸಂಗೀತಪರಂಪರೆ ಉಜ್ವಲವಾದದ್ದು, ವಿಶ್ವಮಾನ್ಯತೆಯನ್ನು ಪಡೆದಿರುವದು ನಮ್ಮ ನಾಡಿಗೆ ಗೌರವವನ್ನು ತಂದುಕೊಟ್ಟಿದೆ.

ಹಿಂದುಸ್ತಾನಿ ಸಂಗೀತದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಪಡೆದ ಡಾ. ಮಲ್ಲಿಕಾರ್ಜುನ ಮನ್ಸೂರ, ಡಾ. ಗಂಗೂಬಾಯಿ ಹಾನಗಲ್, ಪಂ. ಭೀಮಸೇನ ಜೋಶಿ, ಪಂ. ಕುಮಾರ ಗಂಧರ್ವ, ಡಾ. ಬಸವರಾಜ ರಾಜಗುರು ಮುಂತಾದವರು ತಮ್ಮ ಕಲಾನೈಪುಣ್ಯದಿಂದ ಸಂಗೀತಕಲೆಯನ್ನು ಶ್ರೀಮಂತಗೊಳಿಸಿದವರು. ಸಾಧಿಸುವ ಛಲ ಬೇಕು, ಛಲಭರಿತ ಗುರಿ ಬೇಕು, ಆ ಗುರಿಯತ್ತ ಸಾಗಲು ಭೋರ್ಗರೆವ ಶಕ್ತಿ ಬೇಕು. ಹೀಗೆ ಗುರುಗಳು ಹಾಕಿಕೊಟ್ಟ ದಾರಿಯಲ್ಲಿ ಪರಿಶ್ರಮದಿಂದ ಸತತ ಸಂಗೀತ ಅಭ್ಯಾಸ ಮಾಡಿ, ಉಜ್ವಲ ಭವಿಷ್ಯ ಕಂಡುಕೊಂಡಿರುವ ಮುಂದಿನ ಪೀಳಿಗೆಯ ಕಲಾವಿದರಲ್ಲಿ, ಈಗಿನ ಇಳಿವಯಸ್ಸಿನಲ್ಲೂ ತಾನು ಸಂಗೀತದ ವಿದ್ಯಾರ್ಥಿಯಂದೇ ಹೇಳಿಕೊಳ್ಳುವ ನಮ್ಮ ನಡುವಿನ ಕಲಾವಿದರು ಯಾರೆಂದರೆ ಅವರೆ ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿಯವರು.

ಮತಸುಧಾರಕ, ಧರ್ಮಪ್ರವರ್ತಕ, ಕವಿ, ಸಂತಶರೀಫರ ಹುಟ್ಟೂರಾದ ಶಿಶುನಾಳದಲ್ಲಿ ೧೯೨೭ ರ ಅಕ್ಟೋಬರ್ ೧೨ ರಂದು ಜನಿಸಿದರು. ಕುಂದಗೋಳ ತಾಲೂಕಿನ ಮತ್ತಿಗಟ್ಟಿ ಗ್ರಾಮದ ರೈತರಾದ ಚನ್ನಬಸಯ್ಯ ಮತ್ತು ಸಾತವ್ವ ದಂಪತಿಗಳ ತೃತೀಯ ಪುತ್ರ ಪಂಚಾಕ್ಷರಿಯವರಿಗೆ ಚಿಕ್ಕಂದಿನಿಂದಲೇ ಸಂಗೀತದ ಗೀಳು. ದೊಡ್ಡಾಟ, ಸಣ್ಣಾಟದ ಪದಗಳು, ಗೀಗೀಪದಗಳು, ತತ್ತ್ವಪದಗಳು ಹೀಗೆ ಅನೇಕ ಪ್ರಕಾರದ ಹಾಡುಗಳನ್ನು ಹಾಡುತ್ತಿದ್ದ ಮತ್ತು ನಾಟಕಗಳಲ್ಲಿ ಪಾತ್ರಮಾಡುತ್ತಿದ್ದ ತಂದೆ ಚನ್ನಬಸಯ್ಯನವರ ಮನೆಯ ಪರಿಸರವೇ ಪಂಚಾಕ್ಷರಿಯವರು ಸಂಗೀತ ಕಲಿಯಲು ಪ್ರೇರಣೆಯಾಯಿತು.

ತಂಜಾವೂರಿನಲ್ಲಿ ಕರ್ನಾಟಕೀ ಸಂಗೀತ ಕಲಿತಿದ್ದ, ಸಂತಶರೀಫರ ಮೊಮ್ಮಗ ಶರೀಫ ಮೊಯಿದ್ದೀನ್ ಬಾಬಾ ಶಿಶುನಾಳದಲ್ಲಿ ತನ್ನ ಬಾಲ್ಯದ ದಿನಗಳನ್ನು ಕಳೆಯುತ್ತಿದ್ದ ಪಂಚಾಕ್ಷರಿಯವರ ಮೇಲೆ ಪ್ರಭಾವ ಬೀರಿದರು. ಊರಿನ ಬಸವಣ್ಣ ದೇವರ

ಗುಡಿಯೊಳಗೆ ಕುಳಿತು ಹಾಡುತ್ತಿದ್ದ ಮೊಯೂದ್ದೀನ್ ಅವರ ಸಂಗೀತ, ಶಾಲೆಗೆ ಹೋಗುತ್ತಿದ್ದ ಬಾಲಕನನ್ನು ತಡೆದು ತನ್ನತ್ತ ಸೆಳೆಯುತ್ತಿತ್ತು. ಶಾಲೆ ತಪ್ಪಿಸುತ್ತಿದ್ದ ಬಾಲಕನ ಬಗ್ಗೆ, ಶಾಲೆಯ ಮುಖ್ಯೋಪಾಧ್ಯಾಯರು ಮನೆಗೆ ಬಂದು ತಕರಾರು ಮಾಡಿದರು. ಶ್ರೀ ಗೌರಿಶಂಕರ ಪಾಲಯಮಾಂ ಎನ್ನುವ ಕೀರ್ತನೆಯನ್ನು ಹೇಳಿಕೊಟ್ಟ ಮೊದಲಗುರು ಮೊಯುದ್ದೀನ್‌ಬಾಬಾ ಅವರನ್ನು, ಹುಡುಗನನ್ನು ತಪ್ಪುದಾರಿಗೆ ಎಳೆಯುತ್ತಿದ್ದಾನೆ ಎನ್ನುವ ಕಾರಣಕ್ಕಾಗಿ ಊರಿನಿಂದ ಹೊರಹಾಕಲಾಯಿತು.

ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪಂ. ಪಂಚಾಕ್ಷರಿ ಗವಾಯಿಗಳವರು ಭಿಕ್ಷೆಗಾಗಿ ಪ್ರತಿವರ್ಷ ಊರಿಗೆ ಬರುತ್ತಿದ್ದರು. ಹಾಗೆ ಬಂದಾಗ ಒಮ್ಮೆ ಚೆನ್ನಬಸಯ್ಯನವರ ಮನೆಯಲ್ಲಿ ಉಳಿದುಕೊಂಡಿದ್ದರು. "ನಿನಗೆ ಹುಟ್ಟುವ ಮೂರನೆ ಮಗನಿಗೆ ಪಂಚಾಕ್ಷರಿ ಎಂದು ಹೆಸರಿಡು ಮತ್ತು ಅವನನ್ನು ನನಗೆ ಕೊಡು, ನಾನು ಅವನನ್ನು ದೊಡ್ಡ ಕಲಾವಿದನನ್ನಾಗಿ ಮಾಡುತ್ತೇನೆ" ಎಂದ ಅವರ ಮಾತು ಹುಸಿಯಾಗಲಿಲ್ಲ. ಶಾಲೆಗೆ ಶರಣು ಹೊಡೆದು ಸಂಗೀತದಲ್ಲಿ ಆಸಕ್ತಿ ತೋರುತ್ತಿದ್ದ ಮಗನ ಬಗ್ಗೆ ಚಿಂತಿತರಾದ ತಂದೆ ಚೆನ್ನಬಸಯ್ಯನವರು ಮಗನಿಗೆ ಪ್ರೋತ್ಸಾಹಿಸಲು ಮುಂದಾದರು.

೧೯೩೭ ರಲ್ಲಿ ಹೊಂಬಳದ ಕ್ಯಾಂಪಿನಲ್ಲಿದ್ದ ಉಭಯ ಗಾಯನವಿಶಾರದ ಪಂಡಿತ ಪಂಚಾಕ್ಷರಿ ಗವಾಯಿಗಳವರ ಹತ್ತಿರ ಚಿಕ್ಕಪ್ಪ ಶೇಖರಯ್ಯನವರು ಕರೆದುಕೊಂಡು ಬಂದರು. ಒಂದು ಪದ್ಯ ಹಾಡು ಅಂದಾಗ, 'ಗಿರಿಜಾರಮಣ' ಎಂಬ ಪದ್ಯವನ್ನು ಹಾಡಿದ ಏಳುವರ್ಷದ ಬಾಲಕನ ಪ್ರತಿಭೆ ಮತ್ತು ಸುಮಧುರ ಕಂಠಸಿರಿಗೆ ಮನಸೋತ ಗವಾಯಿಗಳವರು ಪಂಚಾಕ್ಷರಿ ಮತ್ತಿಗಟ್ಟಿಯವರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು.

ಗ್ವಾಲಿಯರ್ ಘರಾಣೆಯ ಮೇರು ಗಾಯಕ ನೀಲಕಂಠಬುವಾ ಅವರಲ್ಲಿ ಅಭ್ಯಾಸ ಮಾಡಿ, ನಿರಂತರ ಸಾಧನೆ ಮಾಡಿ, ಆ ಘರಾಣೆಯ ಪ್ರಚಾರವನ್ನು ಮಾಡಿದ ಪಂ. ಪಂಚಾಕ್ಷರಿ ಗವಾಯಿಗಳವರು ಕರ್ನಾಟಕದಲ್ಲಿ ಸಂಗೀತದ ಕ್ರಾಂತಿಯನ್ನೇ ಮಾಡಿದವರು. ದ್ರುಪದ, ಖಯಾಲ್, ಠುಮ್ರಿ, ಟಪ್ಪಾ, ಗಜಲ್, ಭಜನ್, ವಚನ ಹಾಡುಗಾರಿಕೆ ಮತ್ತು ಕರ್ನಾಟಕೀ ಕೀರ್ತನೆಗಳ ಹಾಡುಗಾರಿಕೆಯಲ್ಲಿ ಪ್ರಬುದ್ಧರಾಗಿದ್ದ ಪೂಜ್ಯರು, ಸಮಾಜಕ್ಕಾಗಿ, ಸಂಗೀತಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ತ್ರಿಕಾಲ ಪೂಜಾನಿರತರು, ನಿಃಸ್ವಾರ್ಥತೆ, ನಿಷ್ಠೆ, ಆಚಾರ ವಿಚಾರಗಳಲ್ಲಿ ಪಾರಮಾರ್ಥಿಕ ಚಿಂತನೆಯೊಂದಿಗೆ ಮನಸ್ಸನ್ನೇ ನಾದಮಯವಾಗಿಮಾಡಿಕೊಂಡು ನಾದಯೋಗಿಯಾದವರು.ವಿದ್ಯೆಯನ್ನರಸಿ ಬಂದ ಅನೇಕ ಬಡ, ಅಂಧ, ಅನಾಥ, ಅಂಗವಿಕಲ, ಮಕ್ಕಳಿಗೆ ಜಾತಿ-ಮತ-ಭೇದ ಮಾಡದೆ, ಅನ್ನ, ನೀರು, ಬಟ್ಟೆ ನೀಡಿ ತಂದೆ-ತಾಯಿಯರ ಪ್ರೀತಿಯನ್ನು ಧಾರೆಯರೆದು ಪೋಷಿಸುತ್ತಿದ್ದರು. ಹೀಗೆ ಸತತ ಹನ್ನೆರಡು ವರ್ಷಗಳ ಕಾಲ ಪಂ. ಪಂಚಾಕ್ಷರಿ ಗವಾಯಿಗಳವರ ಆಶ್ರಮದ ಆಶ್ರಯದಲ್ಲಿ, ಅತ್ಯಂತ ಭಕ್ತಿಯಿಂದ, ಸತತ ಅಭ್ಯಾಸ ಮಾಡಿದ ಮತ್ತಿಗಟ್ಟಿಯವರು ಗುರುಗಳ ಅಚ್ಚುಮೆಚ್ಚಿನ ಶಿಷ್ಯರಾದರು.

ಗವಾಯಿಗಳವರ ಆಶ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಂಗೀತದ ಜೊತೆಗೆ ಕೀರ್ತನ, ಪ್ರವಚನ, ನಾಟಕಾಭಿನಯ, ಸಾಹಿತ್ಯ ಅಧ್ಯಯನಗಳನ್ನು ಹೇಳಿಕೊಡಲಾಗುತ್ತಿತ್ತು. ದಿನಗಳೆದಂತೆ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಲೇ ಇತ್ತು. ಹಣದ ಅಡಚಣೆಯು ಆಗಾಗ ತಲೆದೋರುತ್ತಿತ್ತು. ಹಾಗಾಗಿ ಶ್ರೀ ಕುಮಾರೇಶ್ವರ ಕೃಪಾಪೋಷಿತ ಸಂಗೀತ ನಾಟಕ

ಮಂಡಳಿಯನ್ನು ಸ್ಥಾಪಿಸಿ, ಆ ಮೂಲಕ ನಾಟಕ ಪ್ರದರ್ಶನವನ್ನು ಆರಂಭಿಸಲಾಯಿತು. ಸಂಗೀತದಲ್ಲಿ ಉಜ್ವಲ ಭವಿಷ್ಯವನ್ನು ಹೊಂದಿದ ಗದಿಗೆಯ್ಯ ಬೀಳಗಿ, ಪಂ. ಬಸವರಾಜ ರಾಜಗುರು, ದೊಡ್ಡ ಬಸವಾಚಾರ್ಯ ಜಾಲಿಬೆಂಚಿ, ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ ಮುಂತಾದವರ ಸಂಗೀತ ಮತ್ತು ಅಭಿನಯಸಾಮರ್ಥ್ಯದಿಂದ ಮತ್ತು ಪಂ. ಪುಟ್ಟಯ್ಯನವರ ಹಾರ್ಮೋನಿಯಂ ಹಾಗೂ ಪಂಚಾಕ್ಷರಿ ಗವಾಯಿಗಳವರ ತಬಲಾವಾದನ ವೈಖರಿಯಿಂದ ನೋಡುಗರ ಮನದುಂಬಿದವು. ಸಂಪೂರ್ಣ ಹೇಮರಡ್ಡಿ ಮಲ್ಲಮ್ಮ ನಾಟಕವನ್ನು ರಂಗಮಂಚಕ್ಕೆ ತರಲಾಯಿತು. ನಲವಡಿ ಶ್ರೀಕಂಠಶಾಸ್ತ್ರಿಗಳು, ಡಾ. ಮಲ್ಲಿಕಾರ್ಜುನ ಮನ್ಸೂರ ಅವರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಲ್ಲಯ್ಯನ ಪಾತ್ರವನ್ನು ರಚಿಸಿದ್ದರು. ಅವರ ನಂತರ ಮಲ್ಲಯ್ಯನ ಪಾತ್ರವನ್ನು ಅತ್ಯಂತ ಯಶಸ್ವಿಯಾಗಿ ಪಂ. ಪಂಚಾಕ್ಷರಿ ಮತ್ತಿಗಟ್ಟಿಯವರು ನಿರ್ವಹಿಸಿದರು. ಬೆಳಗಿನ ನಾಲ್ಕು ಗಂಟೆಯವರೆಗೂ ನಡೆಯುತ್ತಿದ್ದ ನಾಟಕವನ್ನು ನೋಡಲು ಜನಜಾತ್ರೆಯೇ ನೆರೆಯುತ್ತಿತ್ತು. ಸುಮಾರು ೩೮೦ ಪ್ರದರ್ಶನ ಕಂಡ ನಾಟಕದ ಯಶಸ್ಸಿಗೆ ಪಂ. ಪಂಚಾಕ್ಷರಿ ಮತ್ತಿಗಟ್ಟಿಯವರ ಕೊಡುಗೆ ಅಪಾರ. ಆಗಿನ ನಾಟಕಗಳಲ್ಲಿ ಶಾಸ್ತ್ರೀಯ ಸಂಗೀತವೇ ಪ್ರಧಾನವಾಗಿತ್ತು. ಸೂಕ್ತ ವೇದಿಕೆಯಲ್ಲಿ ನಟರಾಗಿ. ಗಾಯಕರಾಗಿ ತಮ್ಮ ಪ್ರತಿಭೆಯನ್ನು ಮೆರೆಯುತ್ತಿದ್ದ ಕಾಲವದು. ನೆರೆದ ರಸಿಕರು ಶಿವನ ಪಾತ್ರಧಾರಿಯಾಗಿದ್ದ ಮತ್ತಿಗಟ್ಟಿಯವರ ಹಾಡುಗಳನ್ನು ಕೇಳಿ, ಮತ್ತೊಮ್ಮೆ ಹಾಡುವಂತೆ ಒತ್ತಾಯಿಸಿ ಮತ್ತೆ-ಮತ್ತೆ ಸಂಗೀತವನ್ನು ಆಲಿಸುತ್ತಿದ್ದರು. ಅಪಾರ ಅಭಿಮಾನಿಗಳನ್ನು ಹೊಂದಿದ ಮಲ್ಲಿಕಾರ್ಜುನ ಪಾತ್ರಧಾರಿಯ ಹಾಡುಗಳನ್ನು ಕೇಳಿದ ಕೆಂಪಣ್ಣ ಎನ್ನುವವರು ಪಂ. ಮಲ್ಲಿಕಾರ್ಜುನ ಮನ್ಸೂರವರನ್ನು ನಾಟಕ ನೋಡಲು ಕರೆತಂದರು.

ಪಟದೀಪ ರಾಗದ– "ಆಹಾ ಮಮತೆ", ಬಿಭಾಸ ರಾಗದ– "ಶಾಂತಿ ಭಕ್ತಿ ಸುಗುಣರಾಶಿ", ಸಾರಂಗ ರಾಗದ– "ಪಕ್ಷಿ ಬಂದಿತು ಅಂಗಳದೊಳಗೆ" ಈ ಪದ್ಯಗಳು ನಾಟಕ ನೋಡಲು ಬಂದು ಕುಳಿತಿದ್ದ ಪಂ. ಮನ್ಸೂರ ಅವರ ಮನಸೂರೆಗೊಂಡವು. ಮುಂದಿನ ಅವರ ಸಂಗೀತ ಯಾತ್ರೆಗೆ ಅದುವೆ ಚೈತ್ರಕಾಲವಾಯಿತು, ಸುಪ್ರಸಿದ್ಧ ಸಂಗೀತ ಕಲಾವಿದರ ದೃಷ್ಟಿಯಲ್ಲಿ ಒಬ್ಬ ಶಿಷ್ಯನ ಸೃಷ್ಟಿಯಾಗಿತ್ತು, ಆ ಕಲ್ಪನೆಯ ಸಾಕಾರಕ್ಕಾಗಿ "ಶಿವನ ಪಾತ್ರಧಾರಿಯಾಗಿ ಎಷ್ಟು ದಿನ ಬಣ್ಣ ಹಚ್ಕೊತಿ, ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡು" ಅಂದಾಗ ಆಕಾಶವೇ ಕೈಗೆ ನಿಲುಕಿದ ಅನುಭವದೊಂದಿಗೆ ತಕ್ಷಣವೇ ಸಾಷ್ಟಾಂಗ ಹಾಕಿ, ತಾವೇ ನನ್ನ ಗುರುಗಳು ಆಗಬೇಕು ಎಂದು ಪ್ರಾರ್ಥಿಸಿದರು. ಆರಂಭದಲ್ಲಿದ್ದ ಕೆಲವು ಎಡರುತೊಡರುಗಳನ್ನು ದಾಟಿ ಸಂಪೂರ್ಣವಾಗಿ ಗುರುಗಳಿಗೆ ಶರಣಾದರು.

ಸುಮಾರು ೬೦ ವರ್ಷಗಳ ಕಾಲ ಸಂಗೀತಪ್ರಪಂಚದಲ್ಲಿ ಮೇರು ಶಿಖರವಾಗಿ ಮೆರೆದ ಡಾ. ಮಲ್ಲಿಕಾರ್ಜುನ ಮನ್ಸೂರ ಅವರು ಸಾಧನೆಯಿಂದ ಸ್ವರಲೋಕವನ್ನು ಬೆಳಗಿದವರು, ಗ್ವಾಲಿಯರ್, ಘರಾಣೆಯ ಸುಪ್ರಸಿದ್ಧ ಗಾಯಕ ಪಂ. ನೀಲಕಂಠಬುವಾ ಮಿರಜಕರ ಅವರಲ್ಲಿ ಆರು ವರ್ಷಗಳ ಕಾಲ ಶಾಸ್ತ್ರಬದ್ಧ ಅಭ್ಯಾಸ ಮಾಡಿದರು. ಗುರುಗಳ ಮಾರ್ಗದರ್ಶನದಲ್ಲಿ ಸಾಕಷ್ಟು ಪಳಗಿದ ಮನ್ಸೂರ ಅವರಿಗೆ ಜೈಪುರ ಘರಾಣೆಯ ಅದ್ವಿತೀಯ ಗಾಯಕ ಮಂಜೀಖಾನ್ ಸಾಹೇಬರಲ್ಲಿ ಸಂಗೀತ ತಾಲೀಮು ನಡೆಸಿದರು, ನಂತರ ಬುರ್ಜೀ ಖಾನರಲ್ಲಿ ಮುಂದುವರೆದ ಅಭ್ಯಾಸ ದಿನಕ್ಕೆ ೧೦ ರಿಂದ ೧೫ ತಾಸು ಅವಿರತವಾಗಿ ನಡೆಯುತ್ತಿತ್ತು, ಹೀಗೆ ಸತತ ಪರಿಶ್ರಮದಿಂದ ಸಂಗೀತವನ್ನು ಕರಗತ ಮಾಡಿಕೊಂಡಿದ್ದ ಗುರುವಿನ ಶಿಷ್ಯತ್ವ ಮತ್ತಿಗಟ್ಟಿಯವರಿಗೆ ದೊರಕಿತು. ೧೯೬೦ರ ಜುಲೈ

೨೯ ರಂದು ಶ್ರೀ ಗುದ್ಲೆಪ್ಪಜ್ಜನವರ ದಿವ್ಯ ಸಾನ್ನಿಧ್ಯದಲ್ಲಿ ಗಂಡಾ ಸಮಾರಂಭ ನಡೆಯಿತು. ಪಂಚಾಕ್ಷರಿ ಸ್ವಾಮಿಯವರ ಕೈಗೆ ಕಂಕಣವನ್ನು ಕಟ್ಟಿ ಮನ್ಸೂರವರು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು.

"ಪ್ರಥಮ ಅಲ್ಲಾ" ಶಿವಮತ್ ಭೈರವ್ ರಾಗದ ಬಂದಿಶ್‌ದೊಂದಿಗೆ ಸಂಗೀತಪಾಠ ಶುರುವಾಯಿತು, ದಿನಕ್ಕೆ ಮೂರು ವೇಳೆ, ಅಂದರೆ ಬೆಳಗಿನ ರಾಗಗಳನ್ನು, ಮಧ್ಯಾಹ್ನದ ರಾಗಗಳನ್ನು, ಸಂಜೆಯ ರಾಗಗಳನ್ನು ಹೀಗೆ ತಾಲೀಮು. ನಂತರ ಸುಮಾರು ರಾತ್ರಿ ೨ ಗಂಟೆಯವರೆಗೂ ಅಭ್ಯಾಸ. ರಿಯಾಜ್ ಮಾಡುವ ವೇಳೆ ಒಂದೊಂದು ಸಲ ಪರೀಕ್ಷೆ ಮಾಡಲು ಗುರುಗಳು ಆಗಮಿಸುತ್ತಿದ್ದರು. ಸ್ವಲ್ಪ ವ್ಯತ್ಯಾಸ ಕಂಡರೂ ಗುರುಗಳು ಮತ್ತೆ ತಿದ್ದಿ ಇವರ ಸಾಧನೆಗೆ ನೆರವಾಗುತ್ತಿದ್ದರು.

ಪಂಚಾಕ್ಷರಿ ಅವರದು ಸುರೇಲಿ ಧ್ವನಿ, ದೈವದತ್ತವಾಗಿ ಒಲಿದು ಬಂದ ಕಂಠಸಿರಿಗೆ ಸಾಧನೆಯಿಂದ ಅಳವಡಿಸಿದ ಸ್ಪಷ್ಟತೆ ಮತ್ತು ಗಾಂಭೀರ್ಯ ಅಲ್ಪ ವೇಳೆಯಲ್ಲಿ ಶ್ರೋತೃಗಳನ್ನು ತನ್ನಲ್ಲಿ ಹಿಡಿದಿಟ್ಟುಕೊಳ್ಳುತ್ತದೆ. ತಂಬೂರಿಯೊಂದಿಗೆ ಸ್ವರಗಳಲ್ಲಿ ಲೀನವಾಗುವ ಪದ್ಧತಿ, ವಿವಿಧ ತಾನುಗಳು, ಗಮಕ, ಮೀಂಡ್, ಖಟ್ಕಾಮುರ್ಕಿ ರಾಗಗಳ ಸಂಪೂರ್ಣ ಛಾಯೆಯೊಂದಿಗೆ ವಿವಿಧ ತಾಳಗಳಲ್ಲಿ ಬಂದೀಷ್‌ಗಳನ್ನು ಅರ್ಥ ಕೆಡದಂತೆ ಹಾಡುವ ಪದ್ಧತಿ ಕರಗತವಾಗಿತ್ತು.

ಜೈಪುರ ಅತ್ರೌಲಿ ಘರಾಣೆಯ ಗಾಯಕಿ ಅತ್ಯಂತ ಕಠಿಣ ಮತ್ತು ಸ್ವರಶುದ್ಧತೆಗೆ ಪ್ರಾಧಾನ್ಯ ನೀಡುತ್ತದೆ. ಶ್ರೇಷ್ಠಮಟ್ಟದ ಕಲಾವಿದರಾಗಬೇಕಾದರೆ ಕಠಿಣ ಪರಿಶ್ರಮ ಅಗತ್ಯ. ಸ್ವರಕಂಪನ, ಮೀಂಡ್, ಖಟ್ಕಾಮುರ್ಕಿ, ಗಮಕ, ಹರಕತ್‌ಗಳ ವೈಶಿಷ್ಟ್ಯಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ದೃಪದ್, ಧಮಾರ್ ಅಂಗದೊಂದಿಗೆ ಮೂರು ಸಪ್ತಕಗಳಲ್ಲಿ ಸಂಚರಿಸುವುದು, ಕೆಲವು ವೇಳೆ ತಂತುವಾದ್ಯಗಳ ಅಂಗದಿಂದ ಹಾಡುಗಾರಿಕೆ ಇರುತ್ತದೆ. ಗಾಯನದಲ್ಲಿ ಸ್ವರ ಮತ್ತು ಲಯಗಳಿಗೆ ಸಮಾನ ಮಹತ್ವ ನೀಡುತ್ತ ಖಯಾಲ್, ತರಾನಾ, ಟಪ್ಪಾ, ಸರಿಗಮಗಳನ್ನು ಗಾಯಕಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ.

ಈ ಘರಾಣೆಯ ಮತ್ತೊಂದು ವಿಶೇಷತೆಯೆಂದರೆ ಜೋಡುರಾಗ, ವಕ್ರರಾಗ, ಕ್ಲಿಷ್ಟರಾಗಗಳನ್ನು ಹಾಡುವುದು. ಹೆಚ್ಚಾಗಿ ವಿಲಂಬಿತ್ ತಿನ್‌ತಾಲ್, ಅಡಾಚೌತಾಲ್, ರೂಪಕ, ಝುಪ್‌ತಾಲಗಳಲ್ಲಿ ಚೀಜ್‌ಗಳನ್ನು ಹಾಡುತ್ತಾರೆ. ಬೇರೆ ಬೇರೆ ರಾಗಗಳನ್ನು ಸೇರಿಸಿ, ಒಂದು ಹೊಸ ರಾಗ ಸೃಷ್ಟಿಮಾಡಿ ವೈಚಾರಿಕತೆಗೆ ಒತ್ತು ನೀಡುತ್ತಾ, ಆ ರಾಗಗಳ ಮುಖ್ಯಾಂಗಗಳನ್ನು ಸ್ಪಷ್ಟಪಡಿಸುವ ಶೈಲಿಯಲ್ಲಿ ಟಪ್ಪಾ ಅಂಗದಂತೆ ತಾನ್‌ಬಾಜ್ ಮಾಡುತ್ತಾರೆ. ಹೀಗೆ ಸ್ವರಶುದ್ಧತೆ, ಸಂಪ್ರದಾಯತೆ, ಮಾಧುರ್ಯ ಮತ್ತು ಲಯದೊಂದಿಗೆ ಕ್ರಿಯಾಶೀಲರಾಗಿ ಮೂರು ಸಪ್ತಕಗಳಲ್ಲಿ ಲೀಲಾಜಾಲವಾಗಿ ಕಠಿಣತಾನುಗಳನ್ನು ಮಾಡುತ್ತಾ ಸೂಕ್ಷ್ಮ ವೈಶಿಷ್ಟ್ಯಗಳನ್ನು ಸೃಜನಾತ್ಮಕತೆಯೊಂದಿಗೆ ಶ್ರೋತೃಗಳಿಗೆ ಮನ ತಣಿಸುವ ಪಂ. ಪಂಚಾಕ್ಷರಿಯವರ ಹಾಡುಗಾರಿಕೆಯಲ್ಲಿ ಗ್ವಾಲಿಯರ್ ಘರಾಣೆಯ ದೃಢತೆ, ಜೈಪುರ ಅತ್ರೌಲಿ ಘರಾಣೆಯ ಸೂಕ್ಷ್ಮ ಲಯಗತಿಗಳ ಸಂಕೀರ್ಣತೆ ಎದ್ದು ಕಂಡುಬರುತ್ತದೆ. ಬಹದ್ದೂರಿ ತೋಡಿ, ಖಟ್ ಶಹನಾಕಾನಡಾ, ಗೌಡಸಾರಂಗ, ದೇವಗಿರಿಬಿಲಾವಲ್, ಗೌಡ ಮಲ್ಹಾರ, ಭೂಪನಟ್, ನಟ್ ಭೈರವ, ಜಯಂತ ಮಲ್ಹಾರ ಮುಂತಾದ ರಾಗಗಳು ಇವರ ಗಾಯನದಲ್ಲಿ ಪ್ರಚಲಿತದಲ್ಲಿವೆ.

೧೯೬೭ ರಿಂದ ೬೯ರ ಅವಧಿಯಲ್ಲಿ ಡಾ. ಮಲ್ಲಿಕಾರ್ಜುನ ಮನ್ಸೂರ ಅವರ ಅನಾರೋಗ್ಯದ ಕಾರಣದಿಂದ ಡಾಕ್ಟರ್ ಸಲಹೆಯಂತೆ ಹಾಡುವುದು ನಿರ್ಬಂಧವಾಗಿದ್ದರಿಂದ ಪಂಚಾಕ್ಷರಿ ಮತ್ತಿಗಟ್ಟಿಯವರು ಜೈಪುರ ಅತ್ರೌಲಿ ಘರಾಣೆಯ ಸುಪ್ರಸಿದ್ಧ ಕಲಾವಿದ, ಕೊಲ್ಲಾಪುರದ ಪಂ. ನಿವೃತ್ತಿ ಬುವಾ ಸರ್‌ನಾಯಕ್ ಅವರಲ್ಲಿ ಅಭ್ಯಾಸನಿರತರಾದರು. ಘರಾಣೆಯ ಕಠಿಣತರವಾದ ಹರಕತ್‌ಗಳನ್ನು, ವೈಶಿಷ್ಟ್ಯಗಳನ್ನು ಸತತ ಮೂರು ವರ್ಷಗಳ ಕಾಲ ಅಭ್ಯಾಸ ಮಾಡಿ ರೂಢಿಸಿಕೊಂಡು ಮತ್ತೆ ಯಥಾಪ್ರಕಾರ ಮನ್ಸೂರ್ ಗುರುಗಳ ಮಾರ್ಗದರ್ಶನದಲ್ಲಿ ತೊಡಗಿದರು. ಬಹುಪ್ರಕಾರದ ಸಮ್ಮಿಳಿತವಾದ ಧೃಪದ್ ಆಧಾರಿತ ಜೈಪುರ ಘರಾಣೆಯ ಅತ್ಯುತ್ತಮ ತಳಹದಿಯೊಂದಿಗೆ ನಿಂತ ಮತ್ತಿಗಟ್ಟಿಯವರು ಗುರುಗಳ ಜೀವಿತಾವಧಿಯವರೆಗೂ ಅವರ ಜೊತೆಗಿದ್ದು ಮುಂಬೈ, ಕಲ್ಕತ್ತಾ, ಹೈದರಾಬಾದ್, ಮದ್ರಾಸ್, ಬೆಂಗಳೂರು ಮುಂತಾದ ಕಡೆ ನಡೆದ ಸಂಗೀತ ಕಛೇರಿಗಳಲ್ಲಿ ಸಹಕಲಾವಿದರಾಗಿ ಭಾಗಿಯಾದರು.

ಸುಮಾರು ೬೦೦ ಅಪ್ರಚಲಿತ ರಾಗಗಳನ್ನು ಹಾಡುವ ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿಯವರ ೩೦೦ ರಾಗಗಳನ್ನು ಮದ್ರಾಸಿನ "ಶೃತಿ ಫೌಂಡೇಶನ್" ಧ್ವನಿ ಮುದ್ರಿಸಿಕೊಂಡಿದೆ. ನಾಟ್ಯಗೀತೆ, ದಾಸರ ಪದಗಳು, ತತ್ತ್ವಪದಗಳು, ಭಜನ್‌ಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡುವ ಇವರು ವಚನಗಾಯನದಲ್ಲಿ ವಿಶೇಷ ಛಾಪನ್ನು ಮೂಡಿಸಿದ್ದಾರೆ. 'ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ' ಮನ್ಸೂರವರನ್ನು ನೆನಪಿಗೆ ತರುವ ಅಕ್ಕಮಹಾದೇವಿಯ ಈ ವಚನದೊಂದಿಗೆ ಇನ್ನೂ ಅನೇಕ ವಚನಗಳನ್ನೊಳಗೊಂಡ "ಅಕ್ಕ ಕೇಳವ್ವ" ಕ್ಯಾಸೆಟ್ ಬಹಳ ಪ್ರಸಿದ್ಧವಾಗಿದೆ.

ಆಲಾಪ, ತಾನ್, ಲಯಗಳಲ್ಲಿ ಮಾಧುರ್ಯದ ಜೊತೆಗೆ ಗಾಂಭೀರ್ಯವನ್ನು ಬೆರೆಸಿ ಹಾಡಿ, ಜನರನ್ನು ಮಂತ್ರಮುಗ್ಧರನ್ನಾಗಿಸುವ ಮತ್ತಿಗಟ್ಟಿಯವರ ಗಾಯನ ೧೯೫೩ ರಿಂದ ಆಕಾಶವಾಣಿ ಮತ್ತು ದೂರದರ್ಶನಗಳಲ್ಲೂ ಪ್ರಸಾರವಾಗಿದೆ. "ಎ" ಶ್ರೇಣಿಯ ಕಲಾವಿದರಾದ ಇವರು ಮುಂಬೈ, ದೆಹಲಿ, ಕಲ್ಕತ್ತಾ, ಹೈದರಾಬಾದ್, ಚೆನ್ನೈ, ಬೆಂಗಳೂರು ಮುಂತಾದ ಕಡೆ ಕಾರ್ಯಕ್ರಮ ನೀಡಿದ್ದಾರೆ. ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ಮತ್ತು ಆಕಾಶವಾಣಿಯ ಸಂಗೀತ ಸಮ್ಮೇಳನಗಳಲ್ಲಿ ಹಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಭಾರತದ ಬಹುತೇಕ ನಗರಗಳಲ್ಲಿ, ಅಮೇರಿಕ ಮತ್ತು ಲಂಡನ್‌ಗಳಲ್ಲಿಯೂ ತಮ್ಮ ಕಾರ್ಯಕ್ರಮ ನೀಡಿ ಖ್ಯಾತಿ ಪಡೆದ ಇವರ ಗಾಯನವನ್ನು ಅನೇಕ ಸಂಘ ಸಂಸ್ಥೆಗಳು ಧ್ವನಿ ಮುದ್ರಿಸಿಕೊಂಡಿವೆ. ಕಲ್ಕತ್ತೆಯ "ಸಂಗೀತ ಸಂಶೋಧನ ಅಕಾಡೆಮಿ" ಯವರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಇವರು ಹಾಡುತ್ತಿರುವಾಗ ವಿಖ್ಯಾತ ಸಂಗೀತ ಕಲಾವಿದರಾದ ಉಸ್ತಾದ್ ನಿಸ್ಸಾರ್ ಹುಸೇನ್‌ಖಾನ್, ಪಂ.ವಿ.ಜಿ. ಜೋಗ್, ಶ್ರೀಮತಿ ಗಿರಿಜಾದೇವಿ, ಪಂ. ನಿವೃತ್ತಿ ಬುವಾ ಮುಂತಾದವರು "ಇಂದು ನಾವು ಕೇಸರಿಬಾಯಿಯವರ ಸಂಗೀತವನ್ನು ಮತ್ತೆ ಆಲಿಸಿದೆವು" ಎಂದು ಉದ್ಗರಿಸಿದರಂತೆ. ಹೀಗೆ ಅನೇಕ ಕಲಾವಿದರಿಂದ ಪ್ರಶಂಸನೀಯರಾದ ಮತ್ತಿಗಟ್ಟಿ ಅವರ ಸಂಗೀತ ಅಪೂರ್ವವಾದದ್ದು, ಅಮೋಘವಾದದ್ದು.

ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿಯವರ ಸಾಧನೆಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಅರಸಿಕೊಂಡು ಬಂದಿವೆ. ದಾವಣಗೆರೆಯ ಸವಿತಾ ಸಮಾಜ ಹಾಗೂ ಸಂಗೀತ ಬಳಗದ "ಸಂಗೀತ ಗಾನಪ್ರವೀಣ" (೧೯೮೮), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ

"ಕರ್ನಾಟಕ ತಿಲಕ" (೧೯೮೮), ಗದಗ ಬೆಟಗೇರಿ ರೋಟರಿ ಕ್ಲಬ್‌ನ- "ಗಾನ ರತ್ನಾಕರ" (೧೯೯೧), ಹೊಸರಿತ್ತಿಯ ಶ್ರೀ ಗುದ್ದಲೀಶ್ವರ ಸ್ವಾಮಿ ಮಠದ "ಗಾನಗಂಧರ್ವ" (೧೯೯೩), "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ" (೧೯೯೪), ರಾಯಚೂರು ಇಂಚರ ಸಂಗೀತ ಸಮಿತಿಯ "ಸಂಗೀತ ಕಲಾನಿಧಿ" (೧೯೯೯), "ಪಂ. ಪುಟ್ಟರಾಜ ಸಮ್ಮಾನ" (೨೦೦೨), ಕರ್ನಾಟಕ ಸರಕಾರದಿಂದ "ಕನಕ ಪುರಂದರ ಪ್ರಶಸ್ತಿ" (೨೦೦೩), ಬೆಂಗಳೂರು ದೂರದರ್ಶನದಿಂದ "ಚಂದನಶ್ರೀ ಪ್ರಶಸ್ತಿ" (೨೦೧೨), ವಚನಸಂಗೀತಕ್ಕೆ ಕೊಡಮಾಡುವ "ರಮಣಶ್ರೀ", "ಲಯಬ್ರಹ್ಮ", "ನಾದಗಂಧರ್ವ", "ಗಾನಸುಧಾಕರ" ಹೀಗೆ ಇನ್ನೂ ಹಲವಾರು ಪ್ರಶಸ್ತಿ, ಪುರಸ್ಕಾರಗಳು, ಸನ್ಮಾನಗಳು ಅವರ ಸಾಧನೆಗೆ ಸಂದಿವೆ.

೧೯೭೫-೭೬ ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಸಂಗೀತ ವಿಭಾಗವು ಪಂ. ಮಲ್ಲಿಕಾರ್ಜುನ ಮನ್ಸೂರ ಅವರ ನಿರ್ದೇಶನದಲ್ಲಿ ಆರಂಭವಾಯಿತು. ಮತ್ತಿಗಟ್ಟಿಯವರು ಗುರುಗಳ ಇಚ್ಛೆಯಂತೆ ಸೇವೆ ಸಲ್ಲಿಸಿ, ೧೯೮೮ ರವರೆಗೂ ತಮ್ಮ ಸಂಗೀತವನ್ನು ಅನೇಕ ಶಿಷ್ಯರಿಗೆ ಧಾರೆಯೆರೆದಿದ್ದಾರೆ. ಹೊರ ದೇಶಗಳಲ್ಲೂ ವರ್ಷಗಟ್ಟಲೆ ಪ್ರವಾಸ ಮಾಡಿ, ಅನೇಕ ಪ್ರತಿಭೆಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಇವರ ಶಿಷ್ಯಬಳಗ ಅಪಾರ. ಉಷಾ ಕುಲಕರ್ಣಿ, ಷಡಕ್ಷರಿಬುವಾ ಯತ್ನಳ್ಳಿ, ಬನಾರಸದ ಪ್ರೊ. ಸರಯೂ ಸೊನ್ನಿ, ಮುಂಬೈನ ಗೀತಾ ಜಾವಡೇಕರ, ಯು.ಎಸ್.ಎ. ದ ನಿರ್ಮಲಾ ಜಯಾನಂದಯ್ಯ, ವಿಜಯಾ ಹಿರೇಮಠ ಬಾರಾಮತಿ, ಬೆಂಗಳೂರಿನ ನಾಗರಾಜರಾವ್ ಹವಾಲ್ದಾರ, ಮುದ್ದುಮೋಹನ, ಧಾರವಾಡದ ಪ್ರೋ. ಎ.ಯು. ಪಾಟೀಲ, ಡಾ. ಮೀರಾ ಶಿವಶಂಕರ ಗುಂಡಿ, ಡಾ. ಮೃತ್ಯುಂಜಯ ಅಗಡಿ, ಡಾ. ವೀರಣ್ಣ ಹೂಗಾರ, ಡಾ. ಮುಕ್ತಾ ಮುಜುಮದಾರ್, ಸವಿತಾ ಮತ್ತು ಜಯದೇವಿ ಜಂಗಮಶೆಟ್ಟಿ ಸೇರಿದಂತೆ ಇನ್ನೂ ಅನೇಕರು ಸಂಗೀತ ಕ್ಷೇತ್ರದಲ್ಲಿ ತಮ್ಮದೆ ಛಾಪನ್ನು ಮೂಡಿಸಿದ್ದಾರೆ.

ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿಯವರು ಇಪ್ಪತ್ತು ವರ್ಷದವರಿದ್ದಾಗ ಅವರ ಕೈಹಿಡಿದು ಬಂದ ಶಾಂತಮ್ಮ ಸಂಸಾರದ ನೊಗಹೊತ್ತು ಪತಿಯ ಯಶಸ್ಸಿನ ಪ್ರತಿ ಹೆಜ್ಜೆಯಲ್ಲೂ ತಮ್ಮ ಸಹಕಾರ ನೀಡಿದವರು. ಮತ್ತಿಗಟ್ಟಿಯವರಿಗೆ ಇಬ್ಬರು ಪುತ್ರಿಯರು, ಒಬ್ಬನೇ ಮಗ ಬಸವರಾಜ, ಖನಿಜ ಸಂಸ್ಕರಣ ಶಾಸ್ತ್ರದಲ್ಲಿ ಸಂಶೋಧನೆ ನಡೆಸಿ ಪರದೇಶಗಳಲ್ಲಿ ಕೆಲಸ ನಿರ್ವಹಿಸಿ, ಈಗ ತಮ್ಮ ಹೆಂಡತಿ ಮತ್ತು ಮಗನೊಂದಿಗೆ ಧಾರವಾಡದ ಚೆನ್ನಬಸವೇಶ್ವರ ನಗರದಲ್ಲಿರುವ "ಗಾನಯೋಗಿ ಪಂಚಾಕ್ಷರಿ ಗವಾಯಿಗಳ ನಿಲಯ"ದಲ್ಲಿ ವಾಸವಾಗಿದ್ದಾರೆ.

ಹಿರಿಯ ಗಾಯಕ ಮತ್ತಿಗಟ್ಟಿಯವರು ತಮ್ಮ ೮೦ನೇ ವಯಸ್ಸಿನಲ್ಲಿ ಜೈಪುರ ಅತ್ರೌಲಿ ಘರಾಣೆಯ ಮೂಲಪುರುಷ ಅಲ್ಲಾದಿಯಾಖಾನರ ಮೊಮ್ಮಗ ಅಜೀಜುದ್ದೀನ್‌ಖಾನ್ (ಬಾಬಾ) ಅವರ ಹತ್ತಿರ ಗಂಡಾ ಕಟ್ಟಿಸಿಕೊಂಡು, ಸಂಗೀತ ಕಲಿಯುವದರಲ್ಲಿ ನಿರತರಾಗಿದ್ದ ಪರಿ, ಈಗಿನ ವಿದ್ಯಾರ್ಥಿಗಳಿಗೆ ಮಾದರಿ. ಹೀಗೆ ಮತ್ತಿಗಟ್ಟಿಯುವರಿಗೆ ಸಂಗೀತಸರಸ್ವತಿಯು ಸೇವೆ ನಿರಂತರವಾಗಿದ್ದು ಅನಿರ್ವಚನೀಯವಾದುದು. ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿದರೂ, ಉನ್ನತ ಮಟ್ಟದ ಕಲಾವಿದರಾಗಿದ್ದರೂ, ತಾನಿನ್ನೂ ವಿದ್ಯಾರ್ಥಿಯೆಂದು ಹೇಳಿಕೊಳ್ಳುವ ಮತ್ತಿಗಟ್ಟಿಯವರು, "ಕಂಚಿನ ಕಂಠದ ಸಂಗೀತದ ನಿಧಿ".

■■■



ಪಂ. ಸಂಗಮೇಶ್ವರ ಗುರವ

# ಮೇರು ಗಾಯಕ
# ಪಂ. ಸಂಗಮೇಶ್ವರ ಗುರವ
## (ಜನನ-೭-೧೨-೧೯೩೧)

● ಡಾ. ಮೀರಾ ಶಿವಶಂಕರ ಗುಂಡಿ

ಚಿಕ್ಕವರಿದ್ದಾಗ ಸಂಗೀತ ಕಲಿಯುವ ಆಸೆ. ಆದರೆ ತಂದೆಯವರ ವಿರೋಧ. "ಸಂಗೀತದ ಬೆನ್ನುಹತ್ತಿ ನಾನು ಉಂಡ ಕಷ್ಟವೆ ಸಾಕು, ನೀನು ಶಿಕ್ಷಣ ಪಡೆದು ಒಳ್ಳೆಯ ಉದ್ಯೋಗ ಮಾಡು" ಎಂದು ಹೇಳಿದರು. ಆದರೆ "ತಾವೊಂದು ಬಗೆದರೆ ದೈವ ಒಂದು ಬಗೆಯುತ್ತದೆ" ಎಂಬಂತೆ, ಮನಸ್ಸಿಲ್ಲದೆ ಶಾಲೆಗೆ ಹೋಗುತ್ತಿದ್ದರು. ಪರೀಕ್ಷೆಯ ದಿನ ಶಾಲೆಗೆ ಹೋಗುವಾಗ ದಾರಿಯಲ್ಲಿ ರೇಡಿಯೊದಿಂದ ಪ್ರಸಾರವಾಗುತ್ತಿದ್ದ ಅಬ್ದುಲ್ ಕರೀಮಖಾನರ ಗಾಯನ ಕೇಳಿ ಬರುತ್ತಿತ್ತು. ತಮ್ಮ ಪರೀಕ್ಷೆಯ ಕಡೆಗೆ ಲಕ್ಷ್ಯ ಕೊಡದೇ ರೇಡಿಯೋ ಕೇಳುತ್ತ ಮಗ್ನನಾಗಿ ಅಬ್ದುಲ್ ಕರೀಮಖಾನರ ಧ್ವನಿಮುದ್ರಿಕೆಗಳನ್ನು ಅನುಕರಣೆ ಮಾಡುತ್ತ ಸಂಗೀತದತ್ತ ಒಲವು ತೋರಿದ ಅಂದಿನ ಆ ಬಾಲಕನೆ ಇಂದಿನ ಹಿರಿಯ ಹಿಂದುಸ್ತಾನಿ ಗಾಯಕರಾದ ಪಂ. ಸಂಗಮೇಶ್ವರ ಗುರವ ಅವರು.

ಇವರ ಜನನವು ೭ ಡಿಸೆಂಬರ್ ೧೯೩೧ರಲ್ಲಿ ಜಮಖಂಡಿಯಲ್ಲಿ ಆಯಿತು. ತೀರಾ ಚಿಕ್ಕವಯಸ್ಸಿನಲ್ಲಿಯೇ ಇವರು ತಮ್ಮ ತಂದೆಯವರಾದ ಗಣಪತರಾವ್ ಗುರವ ಅವರಿಂದ ಸಂಗೀತಶಿಕ್ಷಣದ ಜೊತೆಗೆ ತಂದೆಯ ಸೋದರಮಾವ ಬಾಳಪ್ಪನವರಿಂದ ಸಾರಂಗಿ ವಾದನವನ್ನು ಅಭ್ಯಾಸ ಮಾಡತೊಡಗಿದರು. ಸಂಗಮೇಶ್ವರ ಗುರವ ಅವರ ತಂದೆ ಗಣಪತರಾವ್ ಗುರವ ಅವರು ಜಮಖಂಡಿ ಸಂಸ್ಥಾನದ ಆಸ್ಥಾನ ಗಾಯಕರಾಗಿದ್ದರು. ೧೯೪೮ ರಲ್ಲಿ ಜಮಖಂಡಿ ಸಂಸ್ಥಾನವು ವಿಲೀನಗೊಂಡು ರಾಜಾಶ್ರಯ ತಪ್ಪಿ ಬೆಳಗಾವಿಗೆ ಬಂದು ನೆಲೆಸಿದರು. ಗಣಪತರಾವ್ ಅವರು ಕಿರಾಣಾ ಘರಾನಾದ ಪ್ರಖ್ಯಾತಿಯ ಅಬ್ದುಲ್ ಕರೀಮಖಾನರ ಪ್ರಥಮ ಶಿಷ್ಯರಲ್ಲೊಬ್ಬರು.

ಜಮಖಂಡಿಯಲ್ಲಿದ್ದಾಗಲೇ ಸಂಗಮೇಶ್ವರ ಗುರವ ಅವರು ಏಳನೆಯ ವರ್ಗದ ಅಭ್ಯಾಸವನ್ನು ಮುಗಿಸಿದ್ದರು. ೧೯೪೮ರಲ್ಲಿ ಬೆಳಗಾವಿಗೆ ಬಂದ ನಂತರ ಸಂಗೀತಕ್ಕಾಗಿಯೇ ಮುಂದಿನ ಶಾಲಾ-ಕಾಲೇಜಿನ ಶಿಕ್ಷಣಕ್ಕೆ ತಿಲಾಂಜಲಿಯನ್ನು ಇಟ್ಟು, ಬೆಳಗಾವಿಯ ಶಹಾಪುರದಲ್ಲಿಯ ಗಂಜೀಫ್ರಾಕ್ ಫ್ಯಾಕ್ಟರಿಯಲ್ಲಿ ವಾರಕ್ಕೆ ಮೂರು ರೂಪಾಯಿ ಸಂಬಳಕ್ಕೆ ದುಡಿಯಲಾರಂಭಿಸಿದರು. ಜೊತೆಗೆ ಬೆಳಗಾವಿಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಆಗಾಗ ಜರುಗುತ್ತಿದ್ದ ನಾಟಕಪ್ರಯೋಗಗಳಿಗೆ ಸಾರಂಗಿ ನುಡಿಸಲು ಹೋಗುತ್ತಿದ್ದರು. ಹೀಗಾಗಿ ಸಂಗೀತದ ಬಗೆಗಿದ್ದ ಇವರ ಪಾಂಡಿತ್ಯವು ಬೆಳಗಾವಿಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹರಡಿ, ತೀರ ಚಿಕ್ಕ ವಯಸ್ಸಿನಲ್ಲಿಯೇ

ಎಲ್ಲರಿಗೂ ಪರಿಚಿತರಾಗತೊಡಗಿದರು.

ಗಾಯಕನಾಗಬಯಸಿದ್ದ ಸಂಗಮೇಶ್ವರ ಗುರವ ಇವರ ತಂದೆ ಹಾಡುವಾಗ ಬಾಗಿಲಮರೆಯಲ್ಲಿ ನಿಂತು, ರಾಗಗಳನ್ನು ಕದ್ದು ಕೇಳುತ್ತಿರುವಾಗ ಒಂದು ದಿನ ಸಿಕ್ಕು ಬಿದ್ದರು. "ಹಾಡು ನಿನ್ನ ಧ್ವನಿ ಹ್ಯಾಂಗೈತಿ ನೋಡೋಣ, ಎಂದರು ಮಗನಿಗೆ. ಸಂಗಮೇಶ್ವರರು ಐದು ನಿಮಿಷ ಹಾಡಿದ್ದರೋ, ಇಲ್ಲವೋ, ಮಗನ ಗಾಯನವನ್ನು ಕಂಡು ತಂದೆ ಬೆರಗಾಗಿ, "ನೀನು ಇನ್ಮೇಲೆ ಸಾರಂಗಿಯನ್ನು ಬಿಟ್ಟುಬಿಡು, ನಿನ್ನ ಧ್ವನಿ ಬಹಳ ಚೆನ್ನಾಗಿದೆ, ಅದಕ್ಕೆ ಇಂದಿನಿಂದ ನಿನಗೆ ಗಾಯನದ ಪಾಠವನ್ನು ಶುರು ಮಾಡುತ್ತೇನೆ" ಎಂದರು. ಆಗ ಸಂಗಮೇಶ್ವರ ಗುರವ ಅವರಿಗೆ ಹನ್ನೆರಡು ವರ್ಷ.

ಗಾಯನದ ಪಾಠ ರಭಸದಿಂದ ಆರಂಭಗೊಂಡಿತು. ಮುಂಜಾನೆ ತೋಡಿ, ಮಧ್ಯಾಹ್ನ ಭೀಮಪಲಾಸ ಹಾಗೂ ಸಂಜೆ ಬಿಹಾಗ ರಾಗಗಳ ಸಂಗೀತಪಾಠ ಶುರುವಾಯಿತು. ಸಂಗೀತ ಕಲಿಸುವ ಇಚ್ಛೆ ತಂದೆಗಿದ್ದರೆ, ಸಂಗೀತವನ್ನು ಕಲಿಯುವ ಆಸೆ ಮಗ ಶ್ರೀ ಸಂಗಮೇಶ್ವರನಿಗೆ ಇತ್ತು. ಹಗಲು-ರಾತ್ರಿ ಎನ್ನದೇ ಸಂಗೀತದ ಅಭ್ಯಾಸವನ್ನು ಮುಂದುವರೆಸಿದರು. ಗಣೇಶೋತ್ಸವ ಮತ್ತು ದಸರಾಹಬ್ಬದ ಸಣ್ಣ-ಪುಟ್ಟ ಸ್ಥಳೀಯ ಸಂಗೀತ ಕಛೇರಿಗಳು ಆರಂಭಗೊಂಡವು. ನಂತರದಲ್ಲಿ ಮೂರು--ನಾಲ್ಕು ತಾಸಿನ ಸಂಗೀತ ಕಛೇರಿಗಳು ಆರಂಭಗೊಂಡವು. ಅವುಗಳ ಸಂಭಾವನೆ ಐದುರೂಪಾಯಿ ಹೆಚ್ಚೆಂದರೆ, ಹತ್ತು ರೂಪಾಯಿ ಮಾತ್ರ.

೧೯೫೦ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದ ಉದ್ಘಾಟನೆಯಾಯಿತು. ಕೇಂದ್ರದ ನಿರ್ದೇಶಕರಾದ ಗುಲ್ವಾಡಿ ಪ್ರತಿಭೆಗಳನ್ನರಸಿ, ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಧ್ವನಿ ಪರೀಕ್ಷೆಗೆ ಬಂದಾಗ, ಸಂಗಮೇಶ್ವರ ಗುರವ ಅವರು ನಂದರಾಗವನ್ನು ಹಾಡಿದರು. ಇವರ ಗಾಯನವನ್ನು ಕೇಳಿದ ಅವರು, ಇವರನ್ನು ಆಕಾಶವಾಣಿ ಕಾರ್ಯಕ್ರಮಗಳಿಗೆ ಆಯ್ಕೆ ಮಾಡಿರುವುದಾಗಿ ಸ್ಥಳದಲ್ಲಿಯೇ ಘೋಷಿಸಿದರು. ೩೧ ಜನೆವರಿ ೧೯೫೦ ರಂದು ಧಾರವಾಡ ಆಕಾಶವಾಣಿಯ ಕಾಂಟ್ರ್ಯಾಕ್ಟ್ ಬಂತು. ಸಂಗಮೇಶ್ವರ ಗುರವ ಅವರು ೧೯೫೨ರಲ್ಲಿ ಮುಂಬಯಿ ಆಕಾಶವಾಣಿ ಕೇಂದ್ರಕ್ಕೆ ವರ್ಗಾಯಿಸಿಕೊಂಡರು. ೧೯೬೨ರಲ್ಲಿ ಮರಳಿ ಧಾರವಾಡಕ್ಕೆ ವರ್ಗಾಯಿಸಿಕೊಂಡರು. ದೇಶದ ಎಲ್ಲ ಆಕಾಶವಾಣಿ ಕೇಂದ್ರಗಳಿಂದಲೂ ಹಾಡಿದ ಇವರು "ಕಿರಾಣಾ ಘರಾನೆ"ಯ ಅಧಿಕೃತ ಕಲಾವಿದರೆಂದು ಹೆಸರು ಪಡೆದರು. ನಂತರದಲ್ಲಿ ಇವರ ಸಂಗೀತ ಕಲಾಪ್ರೌಢಿಮೆಯಿಂದಾಗಿ ಹೆಚ್ಚಾಗಿ ಎಡೆಬಿಡದೆ ಕಾರ್ಯಕ್ರಮಗಳು ಪ್ರಾರಂಭಗೊಂಡವು. ಮದ್ರಾಸ್, ಮುಂಬಯಿ, ನಾಗಪುರ, ಜೈಪುರ, ಬೆಂಗಳೂರು ಹೀಗೆ ಮುಂತಾದ ಕಡೆಗಳಲ್ಲಿ ಸಂಗೀತಕಾರ್ಯಕ್ರಮಗಳನ್ನು ನೀಡಲು ಆಹ್ವಾನಗಳು ಬಂದವು. ಹೀಗೆ ಸಂಗಮೇಶ್ವರ ಗುರವ ಅವರು ಉತ್ತರ ಭಾರತದಲ್ಲಷ್ಟೇ ಖ್ಯಾತಿ ಪಡೆಯದೇ, ದಕ್ಷಿಣ ಭಾರತದಲ್ಲೂ ಕೂಡ ಪ್ರಖ್ಯಾತಿಯನ್ನು ಪಡೆದ ಓರ್ವ ಹೆಸರಾಂತ ಕನ್ನಡ ಕಲಾವಿದರಾಗಿ ಬೆಳೆದುಬಂದರು.

೧೯೭೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಸ್ನಾತಕೋತ್ತರ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಡಾ. ಮಲ್ಲಿಕಾರ್ಜುನ ಮನಸೂರ ಇದ್ದರು. ಇವರು

ಸಂಗಮೇಶ್ವರ ಗುರವ ಅವರನ್ನು ತಮ್ಮ ಸಂಗೀತ ವಿಭಾಗದಲ್ಲಿ ಅಧ್ಯಾಪಕರೆಂದು ನೇಮಿಸಿದರು. ಲೆಕ್ಕವಿಲ್ಲದಷ್ಟು ವಿದ್ಯಾರ್ಥಿಗಳಿಗೆ ಸಂಗೀತವಿದ್ಯೆ ಧಾರೆ ಎರೆದು ೭ ಡಿಸೆಂಬರ್ ೧೯೯೧ ರಂದು ತಮ್ಮ ೬೧ನೆಯ ವಯಸ್ಸಿಗೆ ನಿವೃತ್ತರಾದರು.

ಸಂಗಮೇಶ್ವರ ಗುರವ ಅವರು ನಾಲ್ಕು ಭಾಷೆಗಳನ್ನು ಬಲ್ಲವರಾಗಿದ್ದಾರೆ. ಇವರು ಸಂಗೀತಕ್ಕೆ ಕೊಟ್ಟ ಪ್ರಾಧಾನ್ಯವನ್ನು ಸಾಹಿತ್ಯಕ್ಕೂ ಕೊಟ್ಟು, ಇವೆರಡನ್ನು ಕೂಡ ಅನುಭವಿಸಿ ಹಾಡುವ ಹಾಗೂ ರಂಜಿಸುವ ಕಲೆ ಇವರದ್ದಾಗಿದೆ. ಸಂಗೀತಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ ಇವರ ಸಂಗೀತದಲ್ಲಿಯ ಸ್ವರಶುದ್ಧತೆ ಮತ್ತು ಶಾಸ್ತ್ರಶುದ್ಧತೆ ಕೂಡ ಪ್ರಮುಖ ಸ್ಥಾನವನ್ನು ಪಡೆದಿವೆ. ತಮ್ಮ ಸಂಗೀತದಲ್ಲಿಯ ಗಾಯನದ ಶೈಲಿಯ ಬಗ್ಗೆ ಅಪಾರವಾದ ನಂಬಿಕೆಯುಳ್ಳವರಾದ ಇವರು, ಒಂದೊಂದಾಗಿ ಬೆಳೆಸುವ ಸ್ವರಗಳಲ್ಲಿ ಗಾಯನದ ಭಾವನಾತ್ಮಕತೆ ಎದ್ದು ಕಾಣುತ್ತದೆ. ಸಂಗೀತದ ವಿದ್ಯೆ ಬರುವುದು ಶ್ರವಣದಿಂದ. ಈ ಶ್ರವಣೀಕರಿಸಿದ ಸಂಗೀತವನ್ನು ಹಾಗೇ ಅನುಕರಣೆ ಮಾಡುವುದು ಕೂಡಾ ಅಷ್ಟೇ ಮುಖ್ಯವಾದದ್ದು. ಸಂಗೀತದಲ್ಲಿ ಘರಾಣೆ(ಶೈಲಿ)ಗಳು ಅನೇಕ. ಅವುಗಳಲ್ಲಿ ಪ್ರಮುಖವಾಗಿ ನಾಲ್ಕು. ಅವು ಯಾವುವೆಂದರೆ, ಗ್ವಾಲಿಯರ್ ಘರಾಣೆ, ಆಗ್ರಾ ಘರಾಣೆ, ಜೈಪುರ ಘರಾಣೆ ಹಾಗೂ ಕಿರಾಣಾ ಘರಾಣೆ. ಈ ನಾಲ್ಕು ಶೈಲಿಯಲ್ಲಿ ಹಾಡುವ ಗಾಯಕರು ಅತೀ ವಿರಳ. ಆದರೆ ಉತ್ತರ ಕರ್ನಾಟಕದಲ್ಲಿ ಮುಖ್ಯವಾಗಿ ಧಾರವಾಡ, ಬೆಳಗಾವಿ, ಹುಬ್ಬಳ್ಳಿ, ಗದಗ ಇಲ್ಲಿ ಪ್ರಮುಖ ಗಾಯಕರ ಹೆಸರುಗಳು ಕೇಳಿಬರುತ್ತವೆ. ಆದರೆ ಸಂಗಮೇಶ್ವರ ಗುರವ ಅವರು ಕೇವಲ ಕಿರಾಣಾ ಘರಾಣೆಯ ಸಂಗೀತಕ್ಕೆ ಮಾತ್ರ ಸೀಮಿತವಾಗದೆ, ಎಲ್ಲಾ ಗಾಯನ ಶೈಲಿಯ ಮಾಹಿತಿ ಅವರಿಗೆ ಇರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ. ಒಂದು ಘರಾಣೆಗೆ ಸೀಮೀತವಾಗಿದ್ದಂಥ ಗಾಯಕರು ಹೆಚ್ಚಾಗಿ ಬೇರೆ ಗಾಯನಶೈಲಿಯ ಬಗ್ಗೆ ಅಷ್ಟೊಂದು ವಿಚಾರಣೆಗೆ ಹೋಗಲಾರರು. ಆದರೆ ಸಂಗಮೇಶ್ವರ ಗುರವ ಅವರಿಗೆ ಜೈಪುರಶೈಲಿಯ ಪಂ. ಡಾ. ಮಲ್ಲಿಕಾರ್ಜುನ ಮನಸೂರರು ಎಂದರೆ ಅಪಾರವಾದ ಗೌರವ. ಹಾಗೆಯೇ ಗ್ವಾಲಿಯರ್ ಹಾಗೂ ಆಗ್ರಾ ಘರಾಣೆ ಹಾಡುವ ಕಲಾವಿದರ ಬಗ್ಗೆ ಅಪಾರ ನಂಬಿಕೆ, ಸಂತೋಷ, ಗೌರವ ಅವರ ಮೇಲಿದ್ದಿತು. ಸಂಗೀತದಲ್ಲಿ ಭಾವವು ರಾಗದೊಂದಿಗೆ ಬೆಸೆದು, ತಾನಗಳು ತಾವೇ ತಾವಾಗಿ ಹೊರಹೊಮ್ಮಿ, ಹಾಡುವ ರಾಗ ಪ್ರತಿಸಲ ಹೊಸತು ಎನಿಸಬೇಕು ಎಂಬುದು ಸಂಗಮೇಶ್ವರ ಗುರವ ಅವರ ವ್ಯಕ್ತಿತ್ವದ ಪ್ರಧಾನಗುಣ. ವಚನಗಳನ್ನೆ ಹಾಡಲಿ, ಅಭಂಗಗಳನ್ನೆ ಹಾಡಲಿ, ಕಬೀರರ ಭಜನೆಗಳನ್ನೆ ಹಾಡಲಿ, ಪುರಂದರದಾಸರ ಪದಗಳನ್ನೆ ಹಾಡಲಿ, ಭಕ್ತಿರಸ ಹೊರಸೂಸುತ್ತದೆ. ಅವರೇ ಸೃಷ್ಟಿಸಿದ ರಾಗಗಳೆಂದರೆ, ಸಂಗಮ, ರುದ್ರ, ಗೌರಿಧರ, ಗರಗಜಗಳೂ ಕೂಡ ಭಕ್ತಿಪ್ರಧಾನ ರಾಗಗಳಾಗಿವೆ.

ಸಂಗಮೇಶ್ವರ ಗುರವ ಅವರು ಎಂದೂ ಯಾವುದೇ ಸನ್ಮಾನ, ಪ್ರಶಸ್ತಿ, ಪುರಸ್ಕಾರಗಳ ಹಿಂದೆ ಬಿದ್ದವರಲ್ಲ. ಇವರ ಕಲಾಸೇವೆಯನ್ನು ಮೆಚ್ಚಿ ಇವರನ್ನು ಹುಡುಕಿಕೊಂಡು ಬಂದ ಪ್ರಶಸ್ತಿಗಳು ಹೀಗಿವೆ:

ಪುಣೆಯ ಪಂಥನಾಥ ಸ್ವಾಮಿಗಳಿಂದ "ಸೂರಸೇನ" ಬಿರುದು, ೧೯೮೩ ರಲ್ಲಿ "ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ", ೧೯೯೨ ರಲ್ಲಿ ಕಿರಾಣಾ ಘರಾಣೆಯ

ಪ್ರಶಸ್ತಿ" (ಉಸ್ತಾದ್ ಫಯಾಜ್ ಅಹಮ್ಮದ್‌ಖಾನ್ ಟ್ರಸ್ಟ್, ಮುಂಬಯಿ,- ಮಹಾರಾಷ್ಟ್ರ) ೧೯೯೭ ಕರ್ನಾಟಕ ರಾಜ್ಯ "ಸಂಗೀತ ವಿದ್ವಾನ್ ಪದವಿ", ೨೦೦೧ "ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ".

(ರಾಷ್ಟ್ರಮಟ್ಟದ ಗೌರವ) ೨೦೦೩ "ಮಾಣಿಕ ವರ್ಮಾ ಪುರಸ್ಕಾರ", ೨೦೦೪ "ಪಂ. ಡಾ. ಪುಟ್ಟರಾಜ ಗವಾಯಿ ಪ್ರಶಸ್ತಿ" (ಗದಗ), ೨೦೦೫ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ". (ರಾಜ್ಯ ಮಟ್ಟದ ಗೌರವ).

ಸಂಗಮೇಶ್ವರ ಗುರವ ಅವರ ಅಜ್ಜ ಸಂಗಪ್ಪ. ಜಮಖಂಡಿ ಆಸ್ಥಾನದಲ್ಲಿ ಗಾಯಕ, ತಬಲಾವಾದಕ ಹಾಗೂ ನೃತ್ಯಗುರುವಾಗಿದ್ದರು. ತಂದೆಯೂ ಕೂಡ ಜಮಖಂಡಿಯ ಆಸ್ಥಾನಗಾಯಕ. ತಂದೆಯವರಾದ ಗಣಪತರಾವ್ ಗುರವ ಅವರು ಕೂಡ ಜಮಖಂಡಿ ಆಸ್ಥಾನದ ಗಾಯಕರಾಗಿದ್ದರು.

ಸಂಗಮೇಶ್ವರ ಗುರವ ಇವರ ಇಬ್ಬರೂ ಪುತ್ರರು ತಂದೆಯ ಹೆಜ್ಜೆಯಲ್ಲಿಯೇ ಹೆಜ್ಜೆಯಿಟ್ಟವರು. ಇವರು ಮನೆತನದ ನಾಲ್ಕನೆಯ ಪೀಳಿಗೆಯ ಕಲಾವಿದರು. ಹಿರಿಯ ಮಗನಾದ ನಂದೀಕೇಶ್ವರ, ಇವರು ಪಂ. ಬಸವರಾಜ ಬೆಂಡಿಗೇರಿಯವರಲ್ಲಿ ತಬಲಾ ಕಲಿತು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಸಂಗೀತ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಿರಿಯ ಮಗನಾದ ಕೈವಲ್ಯಕುಮಾರ ಗುರವ ತಂದೆಯ ಗರಡಿಯಲ್ಲೇ ಪಳಗಿ, ಗಾಯಕನಾಗಿ ತನ್ನದೇ ಸ್ಥಾನ ನಿರ್ಮಿಸಿಕೊಂಡಿದ್ದಾರೆ. ಹಲವಾರು ಅಖಿಲ ಭಾರತ ಸ್ಪರ್ಧೆಗಳಲ್ಲಿ ವಿಜೇತರಾದ ಇವರು ಮುಂಬೈನ ಸೂರಸಿಂಗಾರ ಸಂಸತ್ತಿನ "ಸೂರಮಣಿ" ಪ್ರಶಸ್ತಿ, ಪುಣೆಯ ದತ್ತೋಪಂತ ದೇಸಾಯಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಎಮ್.ಎ. ಸಂಗೀತದಲ್ಲಿ ಸುವರ್ಣಪದಕ, ಕಿರಿಯ ಸಂಗೀತಗಾರನಿಗೆ ನೀಡಲಾಗುವ ಪ್ರಪ್ರಥಮ 'ಜಸರಾಜ ಪ್ರಶಸ್ತಿ', ನಲವತ್ತು ವಯಸ್ಸಿನ ಕೆಳಗಿನವರ ಸಾಧನೆ ಗುರುತಿಸಿ ನೀಡಲಾಗುವ "ಆದಿತ್ಯ ಬಿರ್ಲಾ ಪ್ರಶಸ್ತಿ" ಪಡೆದ ಇವರು ಆಕಾಶವಾಣಿ ದೂರದರ್ಶನದ "ಎ" ಟಾಪ್ ಗ್ರೇಡ್ ಗಾಯಕರು.

ಯಾವ ಭೇದ-ಭಾವಗಳಿಲ್ಲದೇ ಶಿಷ್ಯರಿಗೆ ಸಂಗೀತದ ವಿದ್ಯೆಯನ್ನು ಧಾರೆ ಎರೆದ ಕೀರ್ತಿ ಸಂಗಮೇಶ್ವರ ಗುರವ ಅವರಿಗೆ ಸಲ್ಲುತ್ತದೆ. ಅವರ ಶಿಷ್ಯಬಳಗದಲ್ಲಿ ಪ್ರಮುಖರೆಂದರೆ, ಶ್ರೀ ಜಿ. ಕೆ. ಉಪಾಧ್ಯೆ, ಮುಂಬೈನ ಡಾ. ಮೂರ್ತಿ ಅವರ ಮಗಳಾದ, ಕುಮಾರಿ. ಆಶಾ, ಧಾರವಾಡದ ಶ್ರೀಮತಿ. ಸಗುಣಾ ಚಂದಾವರಕರ, ಶ್ರೀ ನಾಗರಾಜ ಹವಾಲ್ದಾರ, ಡಾ. ಮೃತ್ಯುಂಜಯ ಶೆಟ್ಟರ, ಶ್ರೀ. ರಾಜಪ್ರಭು. ಧೋತ್ರೆ, ಶ್ರೀ ಅಶೋಕ ದುಗ್ಗಣ್ಣವರ ಹಾಗೂ ಗೀತಾ ಮೆಂಡಿಗೇರಿ.

■ ■ ■



ಸುರಲೋಲ್ ಪಂ. ವೆಂಕಟೇಶ ಬುರ್ಲಿ

# ಹಿಂದುಸ್ತಾನಿ ಗಾಯಕ
# ಸುರಲೋಲ್ ಪಂ. ವೆಂಕಟೇಶ ಬುರ್ಲಿ

● ಡಾ. ಹನುಮಂತ ಬುರ್ಲಿ

ಕರ್ನಾಟಕದಲ್ಲಿ ಹರಿದಾಸಪರಂಪರೆ ಬೆಳೆದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಟ್ಟವನ್ನು ಉಚ್ಚ ಸ್ಥಿತಿಯಲ್ಲಿ ತಲುಪಿದ ಕಲೆಗಳಲ್ಲಿ, ವಿಶೇಷವಾಗಿ ಸಂಗೀತ ಕಲೆ ಹಾಗೂ ಆಧ್ಯಾತ್ಮದ ಸಮ್ಮಿಲನವಾಗಿ ಸಂಗೀತ ಕಲೆಯು ಮನೆ ಮನೆಯನ್ನು ಮುಟ್ಟುವಂತಾಯಿತು. ಈ ಅಮೂಲ್ಯವಾದ ಕಾರ್ಯ ಮಾಡಿದವರು ನೂರಾರು ಹರಿದಾಸವರೇಣ್ಯರು ಹಾಗೂ ಅನೇಕ ಸಾತ್ವಿಕ ಸಂಗೀತಕಾರರು, ಗಾಯಕರು. ಕರ್ನಾಟಕದ ಧಾರವಾಡ ಜಿಲ್ಲೆ, ದಾಸಸಾಹಿತ್ಯ ಹಾಗೂ ಸಂಗೀತವನ್ನು ರಾಷ್ಟ್ರಮಟ್ಟಕ್ಕೆ ಪ್ರಚಾರಗೊಳಿಸಿದ ಸಂಸ್ಕೃತಿ ಸಂಪನ್ನ ಭೂಮಿ. ಧಾರವಾಡ ಜಿಲ್ಲೆಯ ಗುತ್ತಲದ ದಾಸವರೇಣ್ಯರಾದ ಶ್ರೀ ಹನುಮೇಶ ವಿಠಲರು ಎಂದರೆ ಶ್ರೀ ಹನುಮಂತನಾಯಕ ಬುರ್ಲಿ ಇವರು ಈ ಭಾಗದ ಪ್ರಸಿದ್ಧ ಹರಿದಾಸರು ಹಾಗೂ ದಕ್ಷಿಣಾದಿ ಕೀರ್ತನಕಾರರು ಆಗಿದ್ದರು. ಅವರು ರಚಿಸಿದ ಅನೇಕ ಕೀರ್ತನೆಗಳು ಅತ್ಯಂತ ಜನಪ್ರಿಯವಾಗಿವೆ. ಅವರ ಹರಿಭಕ್ತಿ ಮೆಚ್ಚಿ ಆ ಕಾಲದ ಉತ್ತರಾದಿಮಠಾಧೀಶರಾದ ಶ್ರೀ ಶ್ರೀ ಸತ್ಯಜ್ಞಾನತೀರ್ಥರು ಅವರಿಗೆ 'ಹನುಮೇಶ ವಿಠಲ' ಎಂಬ ಮುದ್ರಿಕೆಯನ್ನು ಕರುಣಿಸಿದರು. ಆ ಹೊತ್ತಿಗೆ ಅವರಿಗೆ ಆದ ಆನಂದ ವರ್ಣನಾತೀತ, ಆ ಆನಂದದಿಂದಲೇ ಒಂದು ಕೀರ್ತನೆ ರಚಿಸಿದರು. ಇದಲ್ಲದೆ ಅವರು ಶಿಲ್ಪಿಯೂ ಆಗಿದ್ದರು ಮತ್ತು ಕೆಲವು ಗ್ರಂಥಗಳನ್ನೂ ಅವರು ರಚಿಸಿದ್ದಾರೆ. 'ಹರಿಕಥಾಮೃತಸಾರ'ಕ್ಕೆ ಟೀಕಾಗ್ರಂಥ, ಸುಂದರಕಾಂಡ ಇವುಗಳನ್ನು ಭಕ್ತಿಯಿಂದ ಬರೆದಿದ್ದಾರೆ. ಇಂಥ ದಾಸವರೇಣ್ಯರ ಮೊಮ್ಮಗನಾಗಿ, ಸಂಗೀತದಲ್ಲಿ ಅಪಾರ ಪ್ರತಿಭೆ ಹೊತ್ತು, ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಮೇಧಾವಿ, ಆಧ್ಯಾತ್ಮಿಕ, ಸೃಜನಶೀಲ ಹಿಂದುಸ್ತಾನಿ ಗಾಯಕನೆಂದು ಹೆಸರು ಮಾಡಿದವರು ಪಂ. ವೆಂಕಟೇಶ ಬುರ್ಲಿಯವರು.

ಪಂ. ವೆಂಕಟೇಶ ಬುರ್ಲಿಯವರು ಜನಿಸಿದ್ದು ೧೯೨೯ರಲ್ಲಿ ಬಾಗಲಕೋಟೆಯಲ್ಲಿ ಬಗ್ಗಿ ಮನೆತನದಲ್ಲಿ. ದುರ್ದೈವವೆಂದರೆ ೧೦ ತಿಂಗಳ ಕೂಸು ಇದ್ದಾಗಲೇ ತಾಯಿ ತೀರಿಕೊಂಡರು. ಮುಂದೆ ಸೋದರಮಾವರಾದ ಶ್ರೀ. ಗುರುರಾವ್ ಬುರ್ಲಿ ಇವರು ದತ್ತಕ ತೆಗೆದುಕೊಂಡು, ಅವರಿಗೆ ಮಕ್ಕಳಿಲ್ಲದ ದುಃಖ ಮರೆತು ಅತ್ಯಂತ ವಾತ್ಸಲ್ಯದಿಂದ ಬೆಳೆಸಿದರು. ದತ್ತಕತಾಯಿ ಚಿತ್ರಕ್ಕ ತಮ್ಮ ಪ್ರೀತಿ ಧಾರೆಯೆರೆದರು. ಗುರುರಾವ್ ಬುರ್ಲಿ, ಹರಿದಾಸರಾದ ಶ್ರೀ ಹನುಮಂತನಾಯಕ ಬುರ್ಲಿ ಇವರ ಮಗನಾಗಿದ್ದು ಸಂಗೀತ ಹಾಗೂ ಅಧ್ಯಾತ್ಮದ ಸಂಸ್ಕಾರ ಹೊಂದಿದ್ದರಿಂದ ವೆಂಕಟೇಶ ಅವರಲ್ಲಿಯೇ ಸಂಗೀತನಾದ ಬಾಲ್ಯದಲ್ಲಿಯೆ ಮೊಳಕೆ ಒಡೆಯಿತು. ಬಾಲ್ಯದಲ್ಲಿ ಕೊಳಲು ಊದುವ ಹವ್ಯಾಸ ಇತ್ತೆಂದು

ಅವರ ಬಾಯಿಯಿಂದಲೇ ಕೇಳಿದ್ದು, ಅವರ ಸಹಪಾಠಿಗಳೂ ಹೇಳಿದರು. ಗುರುರಾವ್ ಬುರ್ಲಿಯವರು ಬ್ಯಾಡಗಿಯಲ್ಲಿ ನಗರಪಾಲಿಕೆಯಲ್ಲಿ ಅಧಿಕಾರಿಯಾಗಿದ್ದರು. ವೆಂಕಟೇಶ ಅವರ ಸಂಗೀತದ ಆಸಕ್ತಿ ಕಂಡು, ಅವರಿಗೆ ಒಳ್ಳೆ ಶಾಸ್ತ್ರೀಯ ಗಾಯನ ಶಿಕ್ಷಣ ಕೊಡಿಸಬೇಕೆಂದು ನಿರ್ಧರಿಸಿದರು. ಹಿಂದುಸ್ತಾನಿ ಶಾಸ್ತ್ರೀಯ ಗಾಯನದಲ್ಲಿ ಗ್ವಾಲಿಯರ್ ಘರಾಣಾದ ಆ ಭಾಗದ ಪ್ರಸಿದ್ಧ ಗಾಯಕರಾದ ಪಂ. ಗುರುಬಸವಾರ್ಯ ಹಿರೇಮಠ ಇವರನ್ನು ಬ್ಯಾಡಗಿಗೆ ಕರೆಸಿ, ಗಾಯನಶಿಕ್ಷಕರೆಂದು ಶಾಲೆಯಲ್ಲಿ ನೌಕರಿ ಕೊಡಿಸಿ, ವೆಂಕಟೇಶ ಬುರ್ಲಿ ಇವರಿಗೆ ವಿಧಿವತ್ ಗಾಯನಶಿಕ್ಷಣ ಪ್ರಾರಂಭಿಸಿದರು. ಪಂ. ಗುರುಬಸವಾರ್ಯ ಹಿರೇಮಠ ಇವರು ಮಹಾನ್ ಸಂಗೀತ ಸಾಧಕರಾಗಿದ್ದರು. ಆಧ್ಯಾತ್ಮ ಹಾಗೂ ಸಂಗೀತದ ಅಪೂರ್ವ ಸಂಗಮವೇ ಆಗಿದ್ದರು. ಅವರು ಗ್ವಾಲಿಯರ್ ಘರಾಣಾದ ಸುಪ್ರಸಿದ್ಧ ಗಾಯಕರಾದ ಪಂ. ನೀಲಕಂಠಬುವಾ ಇವರಲ್ಲಿ ಪಂ. ಮಲ್ಲಿಕಾರ್ಜುನ ಮನಸೂರ ಅವರ ಗುರುಬಂಧು ಆಗಿ ಗಾಯನ ಕಲಿತರು. ಮುಂದೆ ಗದಗಿನ ಪಂ. ಪಂಚಾಕ್ಷರಿ ಬುವಾ ಇವರ ಪಟ್ಟಶಿಷ್ಯರೂ ಆಗಿದ್ದರು. ಕರ್ನಾಟಕದಲ್ಲಿ ವಚನಗಳಿಗೆ ಸಂಗೀತಸಂಯೋಜನೆ ಮಾಡಿ ಪುಸ್ತಕರೂಪದಲ್ಲಿ ಬರೆದ ಮೊದಲ ಗಾಯಕರಾಗಿದ್ದರು. ಈ 'ವಚನ-ಸಂಗೀತ' ಪುಸ್ತಕಕ್ಕೆ ಬಿ.ಡಿ. ಜತ್ತಿಯವರು ಮುನ್ನುಡಿ ಬರೆದು ಬಸವ ಸಮಿತಿ, ಬೆಂಗಳೂರು ವತಿಯಿಂದ ಪ್ರಕಾಶನ ಮಾಡಿದರು. ಇಂಥ ಮಹಾ ಗಾಯಕರ ಗರಡಿಯಲ್ಲಿ ವೆಂಕಟೇಶ ಬುರ್ಲಿಯವರು ೧೫ ವರ್ಷಗಳ ಕಾಲ ಹಿಂದುಸ್ತಾನಿ ಗಾಯನವನ್ನು ಕಲಿತು ಒಂದು ಅಪೂರ್ವವಾದ, ಮಧುರವಾದ ಆತ್ಮವಿಶ್ವಾಸಯುಕ್ತ ಸುಶೀಲ ಗಾಯಕಿಯನ್ನು (ಗಾಯನಶೈಲಿಯನ್ನು) ಆವಿಷ್ಕರಿಸಿದರು. ಈ ಶಿಕ್ಷಣಕಾಲದಲ್ಲಿ ಅವರಿಗೆ ಸುಭಾಷಚಂದ್ರ ಬೋಸ ಅವರ ಮುಂದೆ ಪ್ರಾರ್ಥನೆಗೀತೆ ಹಾಡುವ ಸುವರ್ಣಾವಕಾಶ ಸಿಕ್ಕಿತು. ಸುಭಾಷಚಂದ್ರ ಅವರು ಬ್ಯಾಡಗಿಗೆ ಭೇಟಿ ಕೊಟ್ಟಿದ್ದಾಗ ಗುರುರಾವ ಬುರ್ಲಿಯವರು ತಮ್ಮ ಮಗನ ಸಂಗೀತವನ್ನು ಅಭಿಮಾನದಿಂದ ಅವರಿಗೆ ಕೇಳಿಸಿದರು. ಬಾಲ್ಯ ಹಾಗೂ ಶಾಲೆಯ ಶಿಕ್ಷಣಕಾಲದಲ್ಲಿ ಅನೇಕ ಮಹನೀಯರ ಸನ್ನಿಧಿಯಲ್ಲಿ ಅವಕಾಶ ಕಳೆಯುವ ಭಾಗ್ಯ ವೆಂಕಟೇಶ ಬುರ್ಲಿಯವರಿಗೆ ದೊರೆಯಿತು.

ಸಂಗೀತದ ಜೊತೆ ಬುರ್ಲಿ ಮನೆತನದಲ್ಲಿ ಚಿತ್ರಕಲೆಯೂ ಹಾಸು ಹೊಕ್ಕಿದೆ. 'ಶ್ರೀ ಹನುಮೇಶ ವಿಠಲ'ರು ಹೇಗೆ ಶಿಲ್ಪಿಯಾಗಿದ್ದರೊ ಹಾಗೇ ವೆಂಕಟೇಶರು ಚಿತ್ರಕಲೆಯಲ್ಲಿಯೂ ಬಹಳ ಆಸಕ್ತಿ ವಹಿಸಿದ್ದರು. ಅದರ ಫಲವಾಗಿಯೇ ಏನೊ, ಒಮ್ಮೆ ಬ್ಯಾಡಗಿಗೆ ಆ ಕಾಲದ (೧೯೪೦-೪೫) ಮುಂಬಯಿ ಪ್ರಾಂತದ ಮುಖ್ಯಮಂತ್ರಿಯಾಗಿದ್ದ ಶ್ರೀಮಾನ್ ಬಾಳಾಸಾಹೇಬ ಖೇರ ಇವರು ಆಗಮಿಸಿದರು. ಗುರುರಾವ ಬುರ್ಲಿ ಇವರು ಅವರ ಎಲ್ಲ ಉಸ್ತುವಾರಿ ನೋಡಿಕೊಳ್ಳುವವರಾಗಿದ್ದರು. ಆಗ ತಮ್ಮ ಮಗನ ಕಲೆ ತೋರಿಸುವ ಅವಕಾಶ ಮಾಡಿಕೊಟ್ಟರು. ದೊಡ್ಡ ಸಭೆಯಲ್ಲಿ ವೆಂಕಟೇಶ ಬುರ್ಲಿ ಇವರು ತಾವು ಸುಂದರವಾಗಿ ಚಿತ್ರಿಸಿದ ಶ್ರೀ ಬಾಳಾಸಾಹೇಬ ಖೇರರ ಭಾವಚಿತ್ರವನ್ನು ಅವರಿಗೆ ಕಾಣಿಕೆ ಕೊಟ್ಟರು. ಅದು ನೋಡಿ ಖೇರರು ಸಗದ್‌ಗದಿತರಾಗಿ ಶ್ರೀ ವೆಂಕಟೇಶರ ಕೊರಳಲ್ಲಿ ತಮಗೆ ಹಾಕಿದ ದೊಡ್ಡ ಹೂಮಾಲೆ ಹಾಕಿ ಸತ್ಕರಿಸಿದರು. ಬಾಲಕ ವೆಂಕಟೇಶನಿಗೆ ಇದು ಸುವರ್ಣ ದಿನ. ಈ ದಿನವನ್ನು ಅವರು ಜೀವನದಲ್ಲಿ ಯಾವಾಗಲೂ ಸ್ಮರಿಸುತ್ತಿದ್ದರು. ಶ್ರೀಮಾನ್ ಖೇರರಂಥ ಮುಖ್ಯಮಂತ್ರಿ ಮತ್ತು ಸಾತ್ವಿಕ ರಾಜಕಾರಣಿಯಿಂದ ಇಂಥ

ಸನ್ಮಾನವಾದದ್ದು ಅವರಿಗೆ ಅವಿಸ್ಮರಣೀಯವಾಗಿತ್ತು. ಮುಂದೆ ವೆಂಕಟೇಶ ಬುರ್ಲಿಯವರು ಚಿತ್ರಕಲೆಯಲ್ಲಿ ಪದವಿ ಹೊಂದುವ ವ್ಯಾಸಂಗಕ್ಕೆ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ಗೆ ಹೋದಾಗ, ಮುಖ್ಯಮಂತ್ರಿಯಾಗಿದ್ದ ಬಾಳಾಸಾಹೇಬ ಖೇರರ ಮನೆಯಲ್ಲಿ ಇದ್ದರು. ಇದು ನನ್ನ ಜೀವನದ ಅಹೋಭಾಗ್ಯವೆಂದು ಹೇಳುತ್ತಿದ್ದರು ಪಂ. ಬುರ್ಲಿಯವರು. ಅವರ ಮನೆಯಲ್ಲಿ ಗಾಯನ ಮಾಡುವ ಸೌಭಾಗ್ಯ ಒದಗಿ ಬಂದು, ಖೇರರ ಪ್ರಶಂಸೆಗೆ ಪಾತ್ರರಾದರು. ಜೆ.ಜೆ. ಸ್ಕೂಲ್ ಆಫ್ ಆರ್ಟ್‌ದ ಪದವಿ ಪಡೆದು ಅವರಿಗೆ, ಚಿತ್ರಕಲಾ ಇನ್ಸ್‌ಪೆಕ್ಟರರಾಗಿದ್ದ ಬಡಿಗೇರ ಅವರು ನೇರವಾಗಿ ಸೊಲಾಪೂರ ಜಿಲ್ಲೆಯ ಬಾರ್ಸಿ ಎಚಿಬ ಊರಿಗೆ ಚಿತ್ರಕಲಾ ಶಿಕ್ಷಕನೆಂದು ನೌಕರಿಗೆ ಕಳಿಸಿದರು. ಕರ್ನಾಟಕದ ಕೆ.ಎಲ್.ಇ. ಸಂಸ್ಥೆಯ ಸಿಲ್ವರ್ ಜ್ಯುಬಿಲಿ ಹೈಸ್ಕೂಲಿನಲ್ಲಿ ೩೫ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಉಪಜೀವನಕ್ಕಾಗಿ ಶಿಕ್ಷಕನೌಕರಿ ಇದ್ದರೂ ಸಂಗೀತವೇ ಪ್ರವೃತ್ತಿಜೀವನವಾಗಿತ್ತು. ಮುಂದೆ ಗದಗಿನ ವೀರನಾರಾಯಣನ ಪರಿಚಾರಕರಾಗಿದ್ದ ಗುಡಿಮನೆತನದ ವಾಸುದೇವಾಚಾರ್ಯ ಗುಡಿ ಇವರ ಮಗಳಾದ ಸುಧಾಬಾಯಿ ಇವಳ ಜೊತೆ ಮದುವೆಯಾಯಿತು. ಸೌ.ಸುಧಾಬಾಯಿ ಸಂಗೀತದಲ್ಲಿ ಆಸಕ್ತಿ ಇಟ್ಟುಕೊಂಡು ಪಂ. ಗುರುಬಸವಾರ್ಯರಲ್ಲಿ ಸ್ವಲ್ಪ ದಿನ ಕಲಿತಿದ್ದರು. ಹೀಗೆ ಸಂಸಾರದ ಜತೆ ಸಂಗೀತದ ವ್ಯಾಸಂಗವೂ ಆಳವಾಗಿ ನಡೆಯಿತು. ಕರ್ನಾಟಕ, ಮಹಾರಾಷ್ಟ್ರದ ಅನೇಕ ಶಹರಗಳಲ್ಲಿ ಅವರ ಅಮೋಘ ಗಾಯನ ಕಾರ್ಯಕ್ರಮಗಳು ನಡೆದವು. ಕರ್ನಾಟಕ ಮಹಾರಾಷ್ಟ್ರದ ಸಾಂಸ್ಕೃತಿಕ ಸಮ್ಮಿಲನ ಮಾಡುವ ಕಾರ್ಯವನ್ನು ಪಂ. ವೆಂಕಟೇಶ ಬುರ್ಲಿಯವರು ತಮ್ಮ ಶಕ್ತಿಮೀರಿ ಮಾಡುವ ಪ್ರಯತ್ನ ಕೈಗೊಂಡರು. ಸಂಗೀತದಲ್ಲಿ ಅಪಾರ ವಿದ್ವತ್ತು, ಕಲ್ಪನಾಶಕ್ತಿ ಹಾಗೂ ಸಂಶೋಧನೆಯ ಹವ್ಯಾಸ ಇಟ್ಟುಕೊಂಡು ಯಾವಾಗಲೂ ಹೊಸ ವಿಚಾರವನ್ನು ತಮ್ಮ ಪ್ರತಿಭೆಯಿಂದ ಪ್ರಸ್ತುತಪಡಿಸುತ್ತಿದ್ದರು. ಬಾರ್ಸಿ ಊರು ಭಗವಂತನ ದೇವಸ್ಥಾನಕ್ಕೆ ಪ್ರಸಿದ್ಧವಾಗಿದೆ. ಅಚಿಬರೀಶ ರಾಜನ ಭಕ್ತಿಯ ತೀರ್ಥಕ್ಷೇತ್ರವೂ ಆಗಿದೆ. 'ಗೀತರಾಮಾಯಣ' ನಂತರ ಅಂಬರೀಶ ರಾಜನ ಭಕ್ತಿಕಥೆಯನ್ನು ಗೀತರೂಪದಲ್ಲಿ ಕವಿ ರಾಜಾ ಯುವಲೀಕರರು ಬರೆದಿದ್ದು, ಅದಕ್ಕೆ ಅಮೋಘ ಸಂಗೀತಸಂಯೋಜನೆ ಮಾಡಿ, ಹಾಡಿ ಜನರ ಮೆಚ್ಚಿಗೆಗೆ ಪಾತ್ರರಾದವರು ಪಂ. ವೆಂಕಟೇಶ ಬುರ್ಲಿಯವರು. ಮಹಾರಾಷ್ಟ್ರದ ಮಹಾನ್ ಸಾಹಿತಿ ಶಿವಶಾಹೀರ ಬಾಬಾಸಾಹೇಬ ಪುರಂದರೆಯವರು ಈ ಗೀತಕಥೆ ಕೇಳಿ ಸಗದ್‌ಗದಿತರಾಗಿ ಎಂದರು: "ಪಂ. ಬುರ್ಲಿಯವರು ಬಾರ್ಸಿಗೆ ಕರ್ನಾಟಕದಿಂದ ಬಂದದ್ದು ಈ ಊರಿನ ಅಹೋಭಾಗ್ಯವೇ ಆಗಿದೆ. ಇಂಥ ಸಂಗೀತರತ್ನವನ್ನು ಕಂಡದ್ದು ನಮ್ಮ ಸೌಭಾಗ್ಯ". ಹೀಗೆ ಅನೇಕ ಸಂಗೀತರಚನಾ ಕಾರ್ಯದಲ್ಲಿ ಪಂ. ಬುರ್ಲಿಯವರು ಸಾಧನೆಯನ್ನು ಮುಂದುವರೆಸಿದರು. ಮುಂಬಯಿಯಲ್ಲಿ ಇದ್ದಾಗ ಜೆ.ಜೆ. ಸ್ಕೂಲಿನಲ್ಲಿ, ಒಮ್ಮೆ ಮಹಾರಾಷ್ಟ್ರದ ಖ್ಯಾತ ಗಾಯಕಿ ಸುಂದರಾಬಾಯಿ ಜಾಧವ ಇವರು ಪಂ. ಬುರ್ಲಿಯವರು ಗುಣಗುಣಿಸುವದು ಕೇಳಿ, "ನೀವು ಬಹಳ ಸುಂದರವಾಗಿ ಹಾಡುತ್ತೀರಿ, ನಾಳೆ ನಮ್ಮ ಆಕಾಶವಾಣಿಯಲ್ಲಿ ಬಂದು ಹಾಡಿರಿ" ಎಂದುಬಿಟ್ಟರು. ಯುವಕರಾದ ಬುರ್ಲಿಯವರಿಗೆ ಆಶ್ಚರ್ಯ ಹಾಗೂ ಅತ್ಯಾನಂದ. ಮರುದಿನವೇ ಮುಂಬಯಿ ಆಕಾಶವಾಣಿಯಲ್ಲಿ ಅವರು ತಮ್ಮ ಶಾಸ್ತ್ರೀಯ ಗಾಯನ ಪ್ರಸ್ತುತಪಡಿಸಿ ಅಲ್ಲಿದ್ದವರ ಪ್ರಶಂಸೆ ಪಡೆದರು. ಆ ದಿನಗಳಲ್ಲಿ ಧಾರವಾಡದ ಖ್ಯಾತ ಸಾಹಿತಿ 'ಎನ್ಕೆ' ಅವರು ಮುಂಬಯಿ ಆಕಾಶವಾಣಿಯಲ್ಲಿ ಅಧಿಕಾರಿಯಾಗಿದ್ದರು.

ಅವರು ಬುರ್ಲಿಯವರಿಗೆ ಸಂಬಂಧಿಕರೂ ಆಗಿದ್ದರು. ಅವರು ಬುರ್ಲಿಯವರ ಮಧುರ ಕಂಠ ಕೇಳಿ, ಅವರ ಭಾವಗೀತಗಳ ರೆಕಾರ್ಡಿಂಗ್ ಮಾಡಿ, ಎಚ್.ಎಮ್.ವ್ಹಿ. ಕಂಪನಿಯಿಂದ ಪ್ರಸಾರ ಮಾಡಿದರು. ಈಗಲೂ ಧಾರವಾಡ ಆಕಾಶವಾಣಿಯಲ್ಲಿ ಆ ರೆಕಾರ್ಡ್ ಪ್ರಸಾರ ಮಾಡುತ್ತಾರೆ.

ಬಾರ್ಸಿಯಲ್ಲಿ ಅವರ ಸಂಸಾರ ಬೆಳೆಯಿತು. ಹಿರಿಯ ಮಗಳು ಚಿತ್ರಾ, ಮತ್ತೆ ಪರಿಮಳಾ, ಮುಂದೆ ಇಬ್ಬರು ಗಂಡುಮಕ್ಕಳು ಹನುಮಂತ ಹಾಗೂ ರಂಗನಾಥ ಮತ್ತು ಕಡೆಯವಳು ಮೀರಾ; ಹೀಗೆ ೫ ಮಕ್ಕಳು. ಎಲ್ಲರೂ ಒಳ್ಳೆಯ ಶಿಕ್ಷಣ ಪಡೆದರು. ಚಿ. ಹನುಮಂತನಿಗೆ ತಮ್ಮ ಸಂಗೀತವಿದ್ಯೆ ಧಾರೆಯೆರೆದರು. ಅವನು ಬಿ.ಕಾಂ. ಆಗಿ ಸಂಗೀತದಲ್ಲಿ ಗಾಂಧರ್ವ ಮಹಾವಿದ್ಯಾಲಯ, ಮುಂಬಯಿ ಇದರಿಂದ ಸಂಗೀತ ಅಲಂಕಾರ (ಎಂ.ಎ.) ಹಾಗೂ ಸಂಗೀತ ಪ್ರವೀಣ (ಡಾಕ್ಟರೇಟ್) ಮಾಡಿ ಉಚ್ಚ ಮಟ್ಟದ ಗಾಯಕನಾಗಿದ್ದಾನೆ.

ಪಂ. ಬುರ್ಲಿಯವರು ಯಾವಾಗಲೂ ತಮ್ಮ ಗಾಯನದಲ್ಲಿ ಭಕ್ತಿಪ್ರಧಾನ ಗಾಯಕಿಗೆ ಪ್ರಾಧಾನ್ಯ ಕೊಟ್ಟು ಭಾವಾವಿಷ್ಕಾರ, ರಸಾವಿಷ್ಕಾರವೇ ಸಂಗೀತದ ಅಂತಿಮಸಾಧ್ಯವೆಂದು ತಿಳಿದಿದ್ದರು. ಅವರ ಗಾಯಕಿ ಅಥವಾ ಗಾಯನಶೈಲಿಯು ಅಪೂರ್ವವಾದದ್ದು. ಶಿಸ್ತುಬದ್ಧವಾದ ರಿಯಾಜ್, ಗ್ವಾಲಿಯರ್ ಘರಾಣಾದ ಕಠಿಣ ಅಭ್ಯಾಸ, ಮಧುರವಾದ ಸ್ವರಲಗಾವ, ಆತ್ಮವಿಶ್ವಾಸ ಹಾಗೂ ಶಕ್ತಿಯುತವಾದ ಗಾಯನ, ಗಂಭೀರವಾದ ಹಾಗೂ ಅಪೂರ್ವ ಕಲ್ಪನಾಶಕ್ತಿಯಿಂದ ಕೂಡಿದ ಹಾಡುಗಾರಿಕೆ, ಇವು ಅವರ ಗಾಯನದ ವೈಶಿಷ್ಟ್ಯಗಳಾಗಿದ್ದವು. ಮತ್ತು ಗಾಯನದಲ್ಲಿ ಅರ್ಥಪೂರ್ಣ ಗಾಯನಕ್ಕೆ, ಪ್ರಸ್ತುತ ಪಡಿಸುವುದಕ್ಕೆ ಬಹಳ ಮಹತ್ವ ಕೊಡುತ್ತಿದ್ದರು. ಪರಂಪರೆಯ ಗಾಯನಶೈಲಿಯಲ್ಲಿ ತಮ್ಮ ಹೊಸ ವಿಚಾರವನ್ನು ತೋರಿಸುವ ಅವರ ಪ್ರತಿಭೆ ಪ್ರಶಂಸನೀಯವಾಗಿತ್ತು. ಪಂ. ವೆಂಕಟೇಶ ಬುರ್ಲಿಯವರ ಬಗ್ಗೆ, ಶ್ರೀಮಾನ್ 'ಎನ್ಕೆ'ಯವರು ಸಂಯುಕ್ತ ಕರ್ನಾಟಕದಲ್ಲಿ ತಮ್ಮ ಸುದೀರ್ಘ ಲೇಖನವನ್ನು ಬರೆದು ಹೀಗೆ ಪ್ರಶಂಸಿಸಿದ್ದಾರೆ: "ಶಿಷ್ಯಾದಿಚ್ಛೇತ್ ಪರಾಜಯಂ" ಎಂಬಂತೆ ವೆಂಕಣ್ಣ ಗುರುಕೃಪೆಯಿಂದ ಹಿಂದುಸ್ತಾನಿಸಂಗೀತದಲ್ಲಿ ಪರಿಣಿತ ಗಾಯಕನಾದುದಲ್ಲದೆ, ಸಂಶೋಧಕ, ನಾಯಕನಾಗಿ ಹೊಸ ಹೊಸ ರಾಗಗಳನ್ನು ಸೃಷ್ಟಿಸಬಲ್ಲ ಸಂಗೀತ ಬ್ರಹ್ಮನಾದ, ಹೊಸ ಹೊಸ ಕೃತಿಗಳನ್ನು ರಚಿಸಬಲ್ಲ ವಾಗ್ಗೆಯಕಾರನಾದ."

ತಮ್ಮ ಹಾಡುಗಾರಿಕೆಯು ಗ್ವಾಲಿಯರ್ ಘರಾಣೆಯದಾಗಿದ್ದು ಅತ್ಯಂತ ಅಭಿಮಾನದಿಂದ ಅಷ್ಟೇ ವಿನಮ್ರಭಾವದಿಂದ ಆ ಪರಂಪರೆಯನ್ನು ಪೂಜಿಸುವ ಪಂ. ವೆಂಕಟೇಶ ಬುರ್ಲಿಯವರು ತಮ್ಮ ಸ್ವರಸಾಧನೆಯ ಗುರಿಯನ್ನು ಶ್ರೀ 'ಹನುಮೇಶ ವಿಠಲ'ದಾಸರ ಹರಿದಾಸ ಗಾಯನದಲ್ಲಿ ತೊಡಗಿಸಿ ಶಾಸ್ತ್ರೀಯ ಗಾಯನದಲ್ಲಿ ಹರಿದಾಸ ಭಾವತರುವ ಪ್ರಯತ್ನವನ್ನು ಜೀವನದ ಸಾಧನೆ ಮಾಡಿಕೊಂಡರು. ಅದರ ಫಲವಾಗಿಯೆ ಹೊಸ ಹೊಸ ಶಾಸ್ತ್ರೀಯ ಬಂದಿಶ್‌ಗಳು ರಚನೆಯಾದವು. ಎಲ್ಲವೂ ಆಧ್ಯಾತ್ಮಿಕ, ದೇವವಂದನೆ, ಗುರುನಮನ. ಹೀಗೆ ಸಂತರ ರಚನೆಗಳಂತೆ ಆಗಿ ಬಂದಿಶ್‌ಗಳು 'ಸುಧಾರಂಗ' ಮುದ್ರಿಕೆಯಿಂದ ಅತ್ಯಂತ ಅರ್ಥಪೂರ್ಣ ಹಾಗೂ ಸರಳ ಹಿಂದಿಭಾಷೆಯಲ್ಲಿ ರಚಿತಗೊಂಡವು. ಅವರ ಮೊದಲನೆ ರಚನೆ ಗುರುವಿಗೆ ಅರ್ಪಿಸಿದ್ದು,

ಆ ರಚನೆ ಹೀಗಿದೆ:

**ರಾಗ** – ಗುಣಕಲಿ ತೀನತಾಲ

ತುಮ್ಹಾರೆ ಗುನ ಗಾತ ಗುರುದೇವ ಜೆಯೋಮೆ
ತುಮ್ಹಾರೆ ಹಿ ಧ್ಯಾನ ಧ್ಯತ ತನಮನಮೆ ॥
ಅಂತರಾ
ಶಿವಸೆ ಮಹತ ತುಮ್ಹರಿ ಕೀರತ
ತುಮಹಿ ಪೂಜಿತ ಸುರಗಣ ಹಿ ನಿತ
'ಸುಧಾರಂಗ' ಪ್ರೀತ ತುಮ್ಹಾರೆ ಹಿ ದಿಲಮೆ ॥

ಪ್ರಚಲಿತ ಹಾಗೂ ಅಪ್ರಚಲಿತ ರಾಗಗಳಲ್ಲಿಯೂ ಅವರು ಸರಳ ಸುಂದರ, ಅರ್ಥಪೂರ್ಣ ಬಂದಿಶ್‌ಗಳನ್ನು ರಚಿಸಿದ್ದಾರೆ.

ಮಂತ್ರಾಲಯದ ಶ್ರೀ ರಾಘವೇಂದ್ರರ ಮೇಲೆ 'ಪರಿಮಳ ತೋಡಿ' ಎಂಬ ಹೊಸ ರಾಗರಚನೆ ಮಾಡಿದ್ದಾರೆ. ಮಹಾರಾಷ್ಟ್ರದ ಅಕ್ಕಲಕೋಟೆಯ ಸಂಗೀತ ಸಮ್ಮೇಳನದಲ್ಲಿ ಪಂ. ಮನಸೂರ ಅವರು ಹಾಡಿದ ಮೇಲೆ ಕಡೆಗೆ ಯಾರು ಹಾಡಬೇಕು ಎನ್ನುವ ಪ್ರಶ್ನೆ ಬಂದಾಗ ಎಲ್ಲರು ಪಂ. ಬುರ್ಲಿಯವರಿಗೆ ಹಾಡಿಸಿರಿ ಎಂದು ವಿನಂತಿಸಿದಾಗ ಪಂ. ಮನಸೂರ ಅವರ ಆಶೀರ್ವಾದ ತೆಗೆದುಕೊಂಡು ಶ್ರೀ ಶ್ರೀ ಅಕ್ಕಲಕೋಟೆ ಸ್ವಾಮಿ ಮಹಾರಾಜರ ಮೇಲೆ ಹೊಸ ಬಂದಿಶ್ ರಚಿಸಿ ಹಾಡಿದರು. ಪಂ. ಮನಸೂರರು, ಪಂ. ಸಾಮತಾಪ್ರಸಾದ ವಾರಾಣಸಿ ಮತ್ತು ಇನ್ನೂ ಅನೇಕ ಸಂಗೀತ ದಿಗ್ಗಜರು ಪಂ. ಬುರ್ಲಿಯವರ ಭಾವಪ್ರಧಾನ, ಭಕ್ತಿಪ್ರಧಾನ ಗಾಯನವನ್ನು ಕೇಳಿ ಆನಂದದಿಂದ ಕೊಂಡಾಡಿದರು. ಆ ಬಂದಿಶ್ ಮಹಾರಾಷ್ಟ್ರದಲ್ಲಿ ಅತ್ಯಂತ ಜನಪ್ರಿಯವಾಗಿದೆ. ಆ ರಚನೆ ಹೀಗಿದೆ:

**ರಾಗ** – ಭಟಿಯಾರ ತೀನತಾಲ

ಪಾರ ಕರೋ ತುಮ ಯೋಗಿರಾಜ
ವಟವೃಕ್ಷಕೆ ತುಮ ಸಿರತಾಜ ॥
ಅಂತರಾ
ತುಮ್ಹೆ ಧ್ಯಾತಾ ತುಮ್ಹೆ ಹಿ ಗಾತಾ
ತುಮ್ಹೆ ಸ್ಮರತಾ ಢಲೇ ಚಿಂತಾ
ಸುಧಾರಂಗ ಕಿ ಸುನೋ ಆವಾಜ ॥

ಹೀಗೆ ಪಂ. ಬುರ್ಲಿಯವರ ಸೃಜನಶೀಲತೆ ನೋಡಿ 'ನೌಶಾದ' ರಂಥ ಮಹಾ ಸಂಗೀತ ನಿರ್ದೇಶಕರು ಆಶ್ಚರ್ಯಪಟ್ಟು 'ಭಲೆ' ಎಂದರು. ಒಮ್ಮೆ 'ನೌಶಾದ' ಅವರ ಮನೆಯಲ್ಲಿ ಡಾ. ಹನುಮಂತನಿಗೆ ಹಾಡುವ ಅವಕಾಶ ಸಿಕ್ಕಿತು. ಆ ಸಂದರ್ಭದಲ್ಲಿ ತಮ್ಮ ತಂದೆ ಪಂ. ವೆಂಕಟೇಶ ಬುರ್ಲಿ ರಚಿಸಿದ ಹೊಸ ರಾಗ 'ಪ್ರಿಯದರ್ಶಿನಿ' ಹಾಡಿ ತೋರಿಸಿದರು. 'ನೌಶಾದ' ಅವರು ಉದ್ಗರಿಸಿದರು: ವಾಹವಾ! ಎಂಥ ರಚನೆ ನೋಡಿ, ಈ ಗಾಯಕ ಎಷ್ಟು ಅದ್ಭುತ ಕಲ್ಪನಾಶಕ್ತಿ ಹೊಂದಿದ್ದಾರೆ. ಆ ಪರಮಾತ್ಮನೇ ಅವರಿಗೆ ಅದು

ಕರುಣಿಸಿದ್ದಾನೆ. ಈ 'ಪ್ರಿಯದರ್ಶಿನಿ' ರಾಗವನ್ನು ೧೯೬೬ರಲ್ಲಿ ರಚಿಸಿ ಆಗಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಹುಟ್ಟುಹಬ್ಬದ ಕಾಣಿಕೆ ಎಂದು ಕಳುಹಿಸಿದರು. ದಿಲ್ಲಿಆಕಾಶವಾಣಿಯಿಂದ ಅವರ ವಿಶೇಷ ಧ್ವನಿಮುದ್ರಣವೂ ಆಯಿತು. ಆದರೆ ಹೆಸರುವಾಸಿಯಾಗದೆ, ಪ್ರಚಾರಕ್ಕೆ ಬೀಳದೆ, ಈಗಿನ ಅನ್ಯಾಯ ಹಾಗೂ ಅವ್ಯವಸ್ಥೆಗೆ ಬಲಿಯಾಗಿ ಅವರ ಈ ಮಹಾ ಕಾರ್ಯಕ್ಕೆ ಪ್ರಚಾರ ಸಿಗಲಿಲ್ಲ.

ಎಷ್ಟೇ ಅನ್ಯಾಯವಾದರೂ ಅದನ್ನು ಸಹಿಸಿ, ದೇವರ ಚಿಂತನೆಯಲ್ಲಿ ತಮ್ಮ ಸಾಧನೆ ಮುಂದುವರೆಸಿ, ಅದೇ ಸಂಸ್ಕಾರವನ್ನು ತಮ್ಮ ಮಕ್ಕಳಿಗೆ ಕೊಟ್ಟು, ಸಜ್ಜನ ಜೀವನ ಸಾಗಿಸಿ ತಮ್ಮ ಮಗ ಡಾ. ಹನುಮಂತನ ಸಂಗೀತ ಸಾಧನೆ ನೋಡಿ, ಕೇಳಿ ಧನ್ಯತಾಭಾವದಿಂದ ಜೀವಿಸುತ್ತಿದ್ದರು. ತಮ್ಮ ಹರಿದಾಸ ಪರಂಪರೆಯನ್ನು ಹನುಮಂತನು ತನ್ನ ಪ್ರತಿಭೆಯಿಂದ ಮುಂದುವರಿಸಿದ್ದು ಕಂಡು ಅಪಾರ ಸಂತೋಷಪಡುತ್ತಿದ್ದರು. ಡಾ. ಹನುಮಂತ ತಮ್ಮ ಭಕ್ತಿಭಾವ ಹಾಗೂ ಸೃಜನಾತ್ಮಕ ಶಕ್ತಿಯಿಂದ ತಮ್ಮ ಮೊದಲನೆ ಬಂದಿಶ್ ಶ್ರೀಮನ್ಮಧ್ವಾಚಾರ್ಯರ ಮೇಲೆ ರಚಿಸಿದ್ದಾರೆ. ಅದು ಕೇಳಿ ಪಂ. ಬುರ್ಲಿಯವರು 'ಎನ್ಕೆ' ಅವರಿಗೆ ಹೇಳಿದರು: "ನನ್ನ ಮಗ ನನಗಿಂತ ಸ್ವಲ್ಪ ಮುಂದೆ ಹೋಗಿ ನಮ್ಮ ಪರಂಪರೆ ಮುಂದುವರೆಸಿದ್ದಾನೆ. ಮಧ್ವಾಚಾರ್ಯರ ಮೇಲೆ ಅವನು ರಚಿಸಿದ ಬಂದಿಶ್ ನೋಡಿರಿ, "ಆ ಪರಮಾತ್ಮನ ಪ್ರಸಾದವೇ ನನ್ನ ಮಗ" ಎಂದು ಹೃದಯತುಂಬಿ ಹೇಳಿದರು. ಆ ಬಂದಿಶ್ ತಾವೆ ಎನ್ಕೆ ಅವರಿಗೆ ಹಾಡಿ ತೋರಿಸಿದರು. ಆ ರಚನೆ ಹೀಗಿದೆ:

**ರಾಗ –** ಆನಂದಕೇದಾರ ತೀನತಾಲ

ಆಜ ಗಾವತ ಆನಂದ ಗಾನ
ವಾಯುಸುತ ತುಮ ದೂತ ಹರಿಕೆ ॥

**ಅಂತರಾ**

ಸಿಖ ತುಮ್ಹಾರಿ ಸತ್ಯ ಜಗತ್ ಹೋ
ಉದ್ಧಾರತ ಜಗ ಪಂಚಭೇದ ಹೋ
ಜಗತಮೆ ಪರಮ ದಯಾಲು ಹರಿಹೋ
ಕೃಪಾ ಕರತ ನಿತ ಆನಂದರಂಗಪರ ॥

ತಮ್ಮ ಮಗ ಇಂಥ ಮೇಧಾವಿ ಕಲಾಕಾರ, ಗಾಯಕ, ರಚನಾಕಾರ ಆದದ್ದು ನೋಡಿ, ಅವರು ಬಹಳ ಹೆಮ್ಮೆಯಿಂದ ಹೇಳಿಕೊಂಡು ಅಷ್ಟೇ ವಿನಯ–ಭಕ್ತಿಯಿಂದ ದೇವರಿಗೆ ಅದರ ಶ್ರೇಯಸ್ಸು ಸಮರ್ಪಿಸಿದ್ದರು. ಬಹಳ ವಿಶಾಲ ಮನೋಭಾವ ಹಾಗೂ ನಿಷ್ಕಪಟ, ಪ್ರಾಮಾಣಿಕ, ಸಜ್ಜನ ಹಾಗೂ ದೈವೀ ಕಲಾಕಾರರಾಗಿದ್ದರು ಪಂ. ವೆಂಕಟೇಶ ಬುರ್ಲಿಯವರು.

ಜೀವನದುದ್ದಕ್ಕೂ ಕಷ್ಟಗಳ ಸುರಿಮಳೆಯೇ ಆಗುತ್ತಿತ್ತು. ಆದರೆ ಅಂಥದರಲ್ಲಿ ತಮ್ಮ ಕಷ್ಟವನ್ನು ಯಾರಿಗೂ ಹೇಳದೆ, ಸದಾ ಹಸನ್ಮುಖಿಯಾಗಿ ತಮ್ಮ ಸಾಧನೆಯಲ್ಲಿಯೆ ಮಗ್ನರಾಗುತ್ತಿದ್ದರು. ಹಾಗೆ ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರಗಳನ್ನು ನೀಡಿ ಅವರನ್ನು ಸಂಸ್ಕೃತಿಸಂಪನ್ನರನ್ನಾಗಿ ಮಾಡಿದರು. ದೇಶದ ದಿಲ್ಲಿ, ಮುಂಬಯಿ, ಕೊಲಕತಾ, ಚೆನ್ನೈ, ಬೆಂಗಳೂರು, ನಾಗಪುರ, ನಾಸಿಕ, ಪುಣೆ, ಸೊಲಾಪುರ, ಧಾರವಾಡ, ಹುಬ್ಬಳ್ಳಿ

ಕೊಲ್ಹಾಪುರ, ಹೈದ್ರಾಬಾದ್ ಹೀಗೆ ಅನೇಕ ಸ್ಥಾನಗಳಲ್ಲಿ ತಮ್ಮ ಗಾಯನಪ್ರತಿಭೆ ಮೆರೆದರು. ಬಾರ್ಸಿಯಿಂದ ನಿವೃತ್ತರಾಗಿ ಮತ್ತೆ ಧಾರವಾಡಕ್ಕೆ ೧೯೮೯ರಲ್ಲಿ ಬಂದು ಧಾರವಾಡದ ಮಾಳಮಡ್ಡಿಯಲ್ಲಿ ಮನೆ ಮಾಡಿದ್ದರು. ಇಲ್ಲಿಯೂ ಅನೇಕ ಶಿಷ್ಯರು ಅವರಲ್ಲಿ ಗಾಯನವಿದ್ಯೆಯನ್ನು ಕಲಿತು ಧನ್ಯರಾದರು.

ಪಂ. ಬುರ್ಲಿಯವರು ಮಾಡಿದ ಇನ್ನೊಂದು ಕಾರ್ಯವೆಂದರೆ, ಶ್ರೀಮನ್‌ಮಧ್ವಾಚಾರ್ಯರ 'ದ್ವಾದಶಸ್ತೋತ್ರ'ಕ್ಕೆ ರಾಗಸಂಯೋಜನೆ ಮಾಡಿ ಹಾಡಿದ್ದು, ಇದಕ್ಕೆ ಪ್ರೇರಣೆ ಕೊಟ್ಟವರು, ಮುಂಬಯಿಯ ಮಾಹುಲಿ ಗೋಪಾಲಾಚಾರ್ಯರು. ಪಂ. ಬುರ್ಲಿಯವರ ಸಂಗೀತ ಹಾಗೂ ಅಧ್ಯಾತ್ಮದ ಸಂಗಮ ನೋಡಿ 'ನೀವು ದ್ವಾದಶಸ್ತೋತ್ರ ರಾಗ ಸಂಯೋಜಿಸಿ ಹಾಡಿರಿ' ಎಂದರು. ಮುಂದೆ ೬ ತಿಂಗಳ ನಂತರ ಮುಂಬಯಿಯಲ್ಲಿ ಶ್ರೀ ಶ್ರೀ ಸತ್ಯಪ್ರಮೋದತೀರ್ಥರು ಬಂದಾಗ, ಪಂ. ಬುರ್ಲಿಯವರಿಂದ 'ದ್ವಾದಶಸ್ತೋತ್ರ'ದ ೧೨ ಅಧ್ಯಾಯಗಳನ್ನು ೧೨ ರಾಗಗಳಲ್ಲಿ ಹಾಡಿಸಿ ಅವರಿಗೆ 'ಗಾನರಸಾಮೃತಭಾಜನ' ಮತ್ತು 'ಸಂಗೀತ ಕಲಾಭೂಷಣ' ಬಿರುದುಗಳನ್ನು ಕೊಟ್ಟರು.

ಕರ್ನಾಟಕ ಸರಕಾರ ಇವರಿಗೆ 'ಕಲಾಶ್ರೀ' ಗೌರವವನ್ನು ಕೊಟ್ಟು ಸನ್ಮಾನಿಸಿತು. ಪುಣೆ ಆಕಾಶವಾಣಿಯಲ್ಲಿ ೪೦ ವರ್ಷ ಗಾಯನ ಪ್ರಸ್ತುತಪಡಿಸಿರುವ ಪಂ. ಬುರ್ಲಿಯವರು ಧಾರವಾಡ ಆಕಾಶವಾಣಿಯಲ್ಲಿ ಕಮಿಟಿ ಸದಸ್ಯರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅತಿಥಿಉಪನ್ಯಾಸಕರಾಗಿದ್ದರು. ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರಾಗಿ ಗಾಯನ ಕಲಿಸಿದರು. ತಮ್ಮ ಮೊಮ್ಮಗಳಾದ (ಡಾ. ಹನುಮಂತ ಹಾಗೂ ಸೌ. ಲತಾ ಇವರ ಮಗಳು) ಚಿ. ಗೌರಿ ೨ ವರ್ಷದವಳಿದ್ದಾಗ ಹಾಡುವದು ಕಂಡು ಸಂತೋಷದಿಂದ ತಮ್ಮ ತೊಡೆಯ ಮೇಲೆ ಕೂಡಿಸಿ ಹಾಡು ಕಲಿಸುತ್ತಿದ್ದರು. ಈ ವಂಶವಾಹಿನಿಯ ಹಾಡು ಕೇಳಿ ಅತ್ಯಂತ ಅಭಿಮಾನದಿಂದ ಎಲ್ಲರಿಗೂ ಆಕೆಯ ಬಗ್ಗೆ ಹೇಳುತ್ತಿದ್ದರು.

ಶಾಸ್ತ್ರೀಯ ಸಂಗೀತದ ಜೊತೆ ಅವರು ವಚನ ಗಾಯನ, ದಾಸರ ಪದ, ಹಿಂದಿ ಭಜನೆ, ಸಂಸ್ಕೃತ ಪದಗಳು, ಮರಾಠಿ ಭಜನೆ ಅತ್ಯಂತ ಭಾವಪೂರ್ಣವಾಗಿ ಹಾಡುತ್ತಿದ್ದರು. ಅವರ ರಾಗಸಂಯೋಜನೆಯೇ ಒಂದು ವಿಶಿಷ್ಟ ಮೆರಗು ಬರುವಂಥದಿತ್ತು. ಅನೇಕ ಬಂದಿಶ್‌ಗಳನ್ನು ಅವರು ರಚಿಸಿದರು 'ಸುಧಾರಂಗ' ಮುದ್ರಿಕೆಯಿಂದ. ಆದರೆ ಅವು ಪುಸ್ತಕರೂಪದಲ್ಲಿ ಕಾಣುವ ಅವರ ಕನಸು ಅವರ ಜೀವಿತಕಾಲದಲ್ಲಿ ನನಸಾಗಲಿಲ್ಲ. ಮುಂದೆ ೨೦೦೮ರಲ್ಲಿ ಅವರ ಹಾಗೂ ಡಾ. ಹನುಮಂತ 'ಆನಂದರಂಗ' ಮುದ್ರಿಕೆಯಿಂದ ರಚಿಸಿದ ೨೦೦ ಬಂದಿಶ್‌ಗಳ ಗ್ರಂಥ 'ರಸಗಾನಸುಧಾ' ಧಾರವಾಡದ ಎನ್.ಪಿ. ಭಟ್ ಹಾಗೂ ಯಶೋದಾ ಭಟ್ ಇವರ ಕೃಪೆಯಿಂದ ದಿಲ್ಲಿಯ ಬಿ.ಆರ್. ಪ್ರಕಾಶನ ಸಂಸ್ಥೆಯಿಂದ ಪ್ರಸಿದ್ಧವಾಯಿತು. ಇದಕ್ಕೆ ಪದ್ಮಭೂಷಣ ಡಾ. ಎನ್. ರಾಜಮ್ ಹಾಗೂ ಡಾ. ಗಂಗೂಬಾಯಿ ಹಾನಗಲ್ ಇವರಿಬ್ಬರೂ ಮುನ್ನುಡಿ ಬರೆದು ಕೊಂಡಾಡಿದ್ದಾರೆ.

೧೯೯೮ರಲ್ಲಿ ಅವರ ಪತ್ನಿ ಸೌ. ಸುಧಾಬಾಯಿ ವಿಧಿವಶರಾದರು. ಅವರಿಗೆ ಮನಸ್ಸಿಗೆ ಕಷ್ಟವಾಯಿತು. ಆದರೂ ಶಾಂತ ಮನಸ್ಸಿನಿಂದ ತಮ್ಮ ಜೀವನರಥವನ್ನು

ಸಂಗೀತಶಾರದೋಪಾಸನೆಯಲ್ಲಿ ನಡೆಸಿಕೊಂಡು, ತಮ್ಮ ಮಕ್ಕಳಿಗೆ ಆಧಾರವಾಗಿದ್ದರು. ಡಾ. ಹನುಮಂತ ಗೋವಾದಲ್ಲಿದ್ದು ನೌಕರಿ ಮಾಡುತ್ತಿದ್ದರು. ಗೋವಾದ ಹವಾಮಾನ ಆಗಿ ಬರಲಿಲ್ಲದ ಕಾರಣ ೨೦೦೦ ದಲ್ಲಿ ಧಾರವಾಡಕ್ಕೆ ಬಂದು ಸಂಗೀತ ಅಕಾಡೆಮಿ ಶುರು ಮಾಡಿದ್ದು ಅವರಿಗೆ ಸ್ವಲ್ಪ ನೆಮ್ಮದಿಯಾಯಿತು. ಆದರೆ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದ ಪಂ. ವೆಂಕಟೇಶ ಬುರ್ಲಿ ಎಪ್ರಿಲ್ ೨೦೦೧ ರಲ್ಲಿ ಶಾರದೋಪಾಸನೆ ಮಾಡುತ್ತ ಶ್ರೀಹರಿಚರಣ ಸೇರಿದರು. ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಶ್ರೀ 'ಎನ್ಕೆ' ಎಂದರು 'ಇಂದು ಸಂಗೀತಬ್ರಹ್ಮನಾಗಿದ್ದ ವೆಂಕಣ್ಣ, ನಾಯಕನಾಗಿ, ವಾಗ್ಗೇಯಕಾರನಾಗಿ, ಹರಿದಾಸಪರಂಪರೆಯ ಸಂಗೀತಸಾಗರದಲ್ಲಿ ಲೀನನಾಗಿದ್ದಾರೆ' ಅವರ ಶಿಷ್ಯವರ್ಗ, ಕೂಡಿ ಹಾಡಿತು–.

'ಹೇ ಗುರುದೇವ ಹಮರೊ ಪ್ರಣಾಮ, ಹಮರೋ ಪ್ರಣಾಮ'....

■ ■ ■



ಪಂ. ಅರ್ಜುನಸಾ ನಾಕೋಡ

# ಕಂಚಿನ ಕಂಠದಿ ಮಿಂಚಿದ ಗಾಯಕ

# ಪಂ. ಅರ್ಜುನಸಾ ನಾಕೋಡ

## (೦೨-೦೧-೧೯೨೬-೦೪-೧೧-೨೦೦೧)

● ಶ್ರೀ ಶಂಕರ ಹಲಗತ್ತಿ

ಕನ್ನಡನಾಡಿನ ಇತಿಹಾಸದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗದಗ ಜಿಲ್ಲೆ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಗದಗ ಜಿಲ್ಲೆ ವಿವಿಧ ಕ್ಷೇತ್ರಗಳ ಹಲವಾರು ಮಹತ್ವದ ಸಾಧಕರ ಜನ್ಮಭೂಮಿ, ಕರ್ಮಭೂಮಿಯಾಗಿದೆ. ಕುಮಾರವ್ಯಾಸ, ದಾನಚಿಂತಾಮಣಿ ಅತ್ತಿಮಬ್ಬೆ, ಹುಯಿಲಗೋಳ ನಾರಾಯಣರಾಯರು, ಕೀರ್ತಿನಾಥ ಕುರ್ತಕೋಟಿ, ಪಂ. ಪಂಚಾಕ್ಷರಿ ಗವಾಯಿಗಳು, ಪಂ. ಪುಟ್ಟರಾಜ ಗವಾಯಿಗಳು, ಭಾರತರತ್ನ ಪಂ. ಭೀಮಸೇನ ಜೋಶಿ, ಜಡಭರತ ಹೀಗೆ ಈ ಸಾಧಕರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇಂಥದೊಂದು ಸಾಂಸ್ಕೃತಿಕ ಜಿಲ್ಲೆಯಲ್ಲಿ ಪಂ. ಅರ್ಜುನಸಾ ನಾಕೋಡ ಅವರು ೦೨-೦೧-೧೯೨೬ ರಂದು ಗದಗ ತಾಲೂಕಿನ ಬೆಟಗೇರಿಯಲ್ಲಿ ಜನಿಸಿದರು. ಅವರ ತಂದೆ ವೆಂಕೂಸಾ ವೃತ್ತಿಯಿಂದ ನೇಕಾರರಾಗಿದ್ದರು. ಪ್ರವೃತ್ತಿಯಿಂದ ಸಂಗೀತಗಾರರಾಗಿದ್ದರು. ಅದರಿಂದಾಗಿ ಸದಾ ಸಪ್ತಸ್ವರಗಳು ನಿನದಿಸುವ ವಾತಾವರಣ ಅವರ ಮನೆಯಲ್ಲಿ ನಿರ್ಮಾಣವಾಗಿತ್ತು. ಇಡೀ ಗದಗ ನಗರವೇ ಸಾಹಿತ್ಯ, ಸಂಗೀತ, ವೃತ್ತಿ ರಂಗಭೂಮಿ, ದೊಡ್ಡಾಟ, ಶಿಲ್ಪಕಲೆ ಹೀಗೆ ಹಲವು ಕಲೆಗಳ ಆಗರ. ಇಂಥ ಸಂಗೀತ, ಸಾಹಿತ್ಯ ವಾತಾವರಣ ಅರ್ಜುನಸಾ ಅವರನ್ನು ಬಾಲ್ಯದಲ್ಲೇ ಪ್ರಭಾವಿಸಿದವು. ಅರ್ಜುನಸಾ ಕಡು ಬಡತನದಲ್ಲಿ ಬೆಳೆದು ಬಂದರೂ ನೊಂದುಕೊಂಡವರಲ್ಲ. ಕಲೆಯನ್ನು ಆರಾಧಿಸಿ ಬೆಳೆದು ಬಂದರು. ತಂದೆಗೆ ಸಂಗೀತದಲ್ಲಿ ಗತಿ ಇತ್ತು. ಮನೆಯಲ್ಲಿ ಹಾರ್ಮೋನಿಯಮ್ ಕೂಡಾ ಇತ್ತು. ತಂದೆ ವೆಂಕೂಸಾ ಬಾಲಕ ಅರ್ಜುನನನ್ನು ಶಾಲೆಗೆ ಕಳುಹಿಸಿದರೂ ಅರ್ಜುನಸಾ ಮಾತ್ರ ಸಂಗೀತದತ್ತಲೇ ತನ್ನ ಸ್ಪಷ್ಟ ಒಲವು ತೋರಿದ. ಬಾಲಕನಿದ್ದಾಗ ಶಾಲೆಗಳಲ್ಲಿ ಹಾಗೂ ಗದಗನಲ್ಲಿ ನಡೆಯುತ್ತಿದ್ದ ಅನೇಕ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ, ಅನೇಕ ಬಹುಮಾನಗಳನ್ನು ಪಡೆಯುತ್ತಿದ್ದ. ಅಂದು ಬಹುಮಾನ ತಂದುಕೊಟ್ಟ ಸ್ಪರ್ಧೆ ಮುಂದೆ ಅವರ ಜೀವನಕ್ಕೆ ಸಂಗೀತವನ್ನೇ ಮಾರ್ಗವನ್ನಾಗಿ ರೂಪಿಸಿತು.

ಅರ್ಜುನಸಾ ಕೇವಲ ಎಂಟು ವರ್ಷದವರಿದ್ದಾಗ ಗಾನಯೋಗಿ ಶಿವಯೋಗಿ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪಂ. ಪಂಚಾಕ್ಷರಿ ಗವಾಯಿಗಳ ಮುಂದೆ ಹಾಡಿ ಅವರಿಂದ ಶಹಬಾಷ್‌ಗಿರಿ ಪಡೆದರು. ನಂತರದಲ್ಲಿ ಅರ್ಜುನಸಾ ಅವರು ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯರಾದರು. ಕರ್ನಾಟಕಿ ಹಾಗೂ ಹಿಂದುಸ್ಥಾನಿ ಎರಡೂ ಸಂಗೀತಪ್ರಕಾರಗಳಲ್ಲಿ ಪರಿಣತಿಯನ್ನು ಪಡೆದುಕೊಂಡಿದ್ದ ಗವಾಯಿಗಳು ತಮ್ಮ ಶಿಷ್ಯರಿಗೆಲ್ಲ ನಿರ್ವ್ಯಾಜಪ್ರೀತಿಯಿಂದ ಸಂಗೀತ ಧಾರೆಯೆರೆಯುತ್ತಿದ್ದರು. ಅಂಥ ಗುರುಗಳ

ಸಂಗೀತದಲ್ಲಿ ಮಿಂದವರು ಅರ್ಜುನಸಾ ನಾಕೋಡ. ಅರ್ಜುನಸಾ ನಾಕೋಡ ವೀರೇಶ್ವರ ಪುಣ್ಯಾಶ್ರಮದಲ್ಲಿದ್ದಾಗ ಶೇಷಾದ್ರಿ ಗವಾಯಿಗಳು, ಜಾಲಿಬೆಂಚಿ ದೊಡ್ಡಬಸವಾರ್ಯ, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ ಇವರ ಗುರುಬಂಧುಗಳಾಗಿದ್ದರು. ಇವರೆಲ್ಲ ಮುಂದೆ ಹಿಂದುಸ್ಥಾನಿ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದರು.

ಅರ್ಜುನಸಾ ನಾಕೋಡ ೧೯೩೫ ರಿಂದ ೧೯೪೬ ರವರೆಗೆ ಪಂಚಾಕ್ಷರಿ ಗವಾಯಿಗಳ ಪದತಲದಲ್ಲಿ ಕುಳಿತುಕೊಂಡು, ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿ ಗ್ವಾಲಿಯರ್ ಘರಾಣಾ ಶೈಲಿಯ ಗಾಯನವನ್ನು ಕರಗತ ಮಾಡಿಕೊಂಡರು. ಅವರದು ಸುಂದರ ಶರೀರ ಹಾಗೂ ಸದೃಢವಾದ ಸುರೇಲಿ ಶಾರೀರ. ಅವರ ಖರಜ್ ಅವಾಜ್ ಬಹಳ ಆಕರ್ಷಕ. ಸ್ವರ ಲಯ ಪ್ರಧಾನವಾದ ಗ್ವಾಲಿಯರ್ ಗಾಯಕಿಯ ಎಲ್ಲ ಸೂಕ್ಷ್ಮಗಳನ್ನು ತಮ್ಮ ಗಾಯಕಿಯಲ್ಲಿ ಅಳವಡಿಸಿಕೊಂಡು ಒಬ್ಬ ಸಮರ್ಥ ಗಾಯಕರಾಗಿ ಹೊರಹೊಮ್ಮಿದರು.

ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಹಿಂದುಸ್ಥಾನಿ ಗಾಯನದ ಜೊತೆ ವಾದ್ಯ ಸಂಗೀತ, ಕೀರ್ತನೆ, ಪುರಾಣ, ಹೀಗೆ ಹಲವು ವಿಷಯಗಳ ಅಧ್ಯಯನವೂ ನಡೆಯುತ್ತಿತ್ತು. ಆದ್ದರಿಂದ ಸ್ವರ–ಲಯ, ರಾಗ–ರಾಗಿಣಿಗಳ ಅಭ್ಯಾಸದ ಜೊತೆಗೆ ಸಾಹಿತ್ಯದ ಪರಿಚಯವೂ ಅಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ದೊರೆಯುತ್ತಿತ್ತು.

೧೯೩೯ ರಲ್ಲಿ ಗುರು ಶ್ರೀ ಪಂಚಾಕ್ಷರಿ ಗವಾಯಿಗಳು "ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟ್ಯ ಸಂಘ" ಎಂಬ ನಾಟಕ ಕಂಪನಿಯನ್ನು ಆರಂಭಿಸಿದರು. ಅದು ಕನ್ನಡ ರಂಗಭೂಮಿಯ ವೈಭವದ ಕಾಲ. ಅಂದಿನ ರಂಗಭೂಮಿಯ ವಿಶೇಷತೆಯೆಂದರೆ ಬಹಳಷ್ಟು ನಾಟಕಗಳು ಸಂಗೀತ ಪ್ರಧಾನ ನಾಟಕಗಳಾಗಿರುತ್ತಿದ್ದವು. ಆದಕಾರಣ ಅಭಿನಯದೊಂದಿಗೆ ಸಂಗೀತಜ್ಞಾನವು ಅಂದಿನ ಕಲಾವಿದರಿಗೆ ಅಗತ್ಯವಾಗಿತ್ತು. ಹೀಗಾಗಿ ಗಾಯಕರೇ ಪ್ರಧಾನ ಪಾತ್ರ ವಹಿಸುತ್ತಿದ್ದರು. ಗವಾಯಿಗಳ ನಾಟಕ ಕಂಪನಿಯಲ್ಲಿ ಅರ್ಜುನಸಾ ನಾಕೋಡ ಅವರು ಸ್ತ್ರೀ ಪಾತ್ರವನ್ನು ಮಾಡುತ್ತಿದ್ದರು. ಅವರು ಸ್ಫುರದ್ರೂಪಿಗಳು ಹಾಗೂ ಇಂಪಾದ ಕಂಠಸಿರಿಯನ್ನು ಹೊಂದಿದ್ದರು. ಹೀಗಾಗಿ ಗವಾಯಿಗಳ ಕಂಪನಿಯಲ್ಲಿ ಅರ್ಜುನಸಾ ನಾಕೋಡ ಬಹಳ ಪ್ರಸಿದ್ಧಿಯನ್ನು ಪಡೆದರು. ಗವಾಯಿಗಳ ಮೆಚ್ಚುಗೆಗೆ ಪಾತ್ರವಾದರು.

ಅರ್ಜುನಸಾರ ಅಣ್ಣ ವಸಂತಸಾ ನಾಕೋಡ ಭಾರತೀಯ ವಾಯುಸೇನೆಯಲ್ಲಿ ಸೇವೆಗೈಯುತ್ತಿದ್ದರು. ಅವರಿಗೂ ನಾಟಕದಲ್ಲಿ ತುಂಬ ಆಸಕ್ತಿ. ಅವರು ಸಹೋದರ ಅರ್ಜುನಸಾ ಅವರ ಅಭಿನಯ ಗಾಯನ ಹಾಗೂ ಇನ್ನೊಬ್ಬ ಸಹೋದರ ಸುರೇಂದ್ರಸಾ ಅವರ ಸಂಗೀತವನ್ನು ಬಹಳ ಮೆಚ್ಚಿಕೊಂಡರು. ಮುಂದೆ ಮೂವರು ಸೇರಿ ಸ್ವಂತ ಕಂಪನಿ ಕಟ್ಟಿ ಅದಕ್ಕೆ "ಶ್ರೀ ಜಗದಂಬಾ ಸಂಗೀತ ನಾಟಕ ಮಂಡಳಿ" ಎಂದು ಹೆಸರಿಟ್ಟರು. ತಂದೆ ವೆಂಕೂಸಾ ಮಕ್ಕಳ ಕಲಾಸಕ್ತಿಯನ್ನು ಅಭಿನಂದಿಸಿ, ಗದುಗಿನಲ್ಲಿದ್ದ ಒಂದು ಮನೆಯನ್ನು ಮಾರಿ ಹಣ ಒದಗಿಸಿದರು. ಮುಂದೆ ಆ ಕಂಪನಿ ತನ್ನ ಹೆಸರನ್ನು "ವಸಂತ ಕಲಾ ನಾಟ್ಯಸಂಘ" ಎಂದು ಬದಲಾಯಿಸಿಕೊಂಡಿತು.

ಅರ್ಜುನಸಾ ನಾಕೋಡರು ದ್ರೌಪದಿ, ಚಿತ್ರಾಂಗದಾ, ಸಾವಿತ್ರಿ, ಹೇಮರಡ್ಡಿ ಮಲ್ಲಮ್ಮ ಮೊದಲಾದ ಸ್ತ್ರೀಪಾತ್ರಗಳಲ್ಲಿ ಅತ್ಯಂತ ಭಾವಪೂರ್ಣವಾಗಿ ಅಭಿನಯಿಸಿ ಕರ್ನಾಟಕದ ಮನೆಮಾತಾದರು. ಅಂದಾಜು ಇಪ್ಪತ್ತು ವರ್ಷಗಳ ಕಾಲ ಎಲ್ಲ ಏರಿಳಿತಗಳ ನಡುವೆ ಕಂಪನಿಯನ್ನು ನಡೆಸಿದ ಅರ್ಜುನಸಾ ನಾಕೋಡರು ಮುಂದೆ ಧಾರವಾಡ ಆಕಾಶವಾಣಿಯ ನಿಲಯಕಲಾವಿದರಾಗಿ ನೇಮಕಗೊಂಡಾಗ ಕಂಪನಿಯನ್ನು ಸಹೋದರರಿಗೆ ಬಿಟ್ಟುಕೊಟ್ಟು ಬಂದರು.

ಅರ್ಜುನಸಾ ನಾಕೋಡರು ಕನ್ನಡರಂಗಗೀತೆಗಳನ್ನು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಸಂಗೀತಮಯವಾಗಿ ಹಾಡಿ, ಆಕಾಶವಾಣಿಯ ಮೂಲಕ ಜನಪ್ರಿಯಗೊಳಿಸಿದರು. ಆಕಾಶವಾಣಿಯ 'ಎ' ಶ್ರೇಣಿಯ ಕಲಾವಿದರಾಗಿದ್ದ ಪಂ. ಅರ್ಜುನಸಾ ನಾಕೋಡರು ಮೂಲ ಗ್ವಾಲಿಯರ್ ಘರಾಣೆಯವರಾದರೂ ಬೇರೆ ಬೇರೆ ಘರಾಣೆಗಳ ಗಾಯನದ ಉತ್ತಮ ಅಂಶಗಳನ್ನು ತಮ್ಮ ಗಾಯಕಿಯಲ್ಲಿ ಸಮರ್ಥವಾಗಿ ಸಮ್ಮಿಳಿಸಿಕೊಂಡಿದ್ದರು. ವಿಶೇಷವಾಗಿ ಕಿರಾಣಾ ಘರಾಣೆಯ ರಾಗವಿಸ್ತಾರ ಶೈಲಿಯನ್ನು, ಸರಗಮ್‌ಗಳನ್ನು ಪಾಂಡಿತ್ಯಪೂರ್ಣವಾಗಿ ಪ್ರಸ್ತುತ ಪಡಿಸುತ್ತಿದ್ದರು. ದೇಶದ ಪ್ರಮುಖ ಸಂಗೀತ ಉತ್ಸವಗಳಲ್ಲಿ ಭಾಗವಹಿಸಿದ ಅವರು ಆಕಾಶವಾಣಿಯ ಪ್ರತಿಷ್ಠಿತ ರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳಲ್ಲಿ ಹಾಡಿ ರಾಷ್ಟ್ರೀಯ ಮನ್ನಣೆಗೆ ಪಾತ್ರರಾದರು.

ಪಂ. ಅರ್ಜುನಸಾ ನಾಕೋಡರದು ಸಂಗೀತಪರಂಪರೆಯ ಕುಟುಂಬ. ಅವರ ಮಕ್ಕಳು, ಮೊಮ್ಮಕ್ಕಳು, ಸೊಸೆ ಹಿಂದುಸ್ತಾನಿಸಂಗೀತಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಈ ಪರಂಪರೆಯನ್ನು ಮುಂದುವರೆಸಿದ್ದು ಕನ್ನಡಿಗರೆಲ್ಲ ಹೆಮ್ಮೆ ಪಡಬೇಕಾದ ಸಂಗತಿ. ಅರ್ಜುನಸಾ ನಾಕೋಡರ ಹಿರಿಯ ಪುತ್ರ ಪಂ. ರಘುನಾಥ ನಾಕೋಡ ನಮ್ಮ ದೇಶದ ಸುಪ್ರಸಿದ್ಧ ತಬಲಾ ವಾದಕರಲ್ಲಿ ಪ್ರಮುಖರು. ಆಕಾಶವಾಣಿ ಹಾಗೂ ದೂರದರ್ಶನದ ಅತ್ಯುನ್ನತಶ್ರೇಣಿ (Top Rank) ಕಲಾವಿದರು. ದೇಶದ ಸುಪ್ರಸಿದ್ಧ ಗಾಯಕವಾದಕರಿಗೆ ಸಾಥ್ ನೀಡಿರುವ ಅವರು ಶ್ರೇಷ್ಠ ತಬಲಾ ಸೊಲೋ ವಾದಕರೂ ಹೌದು. ದೇಶ-ವಿದೇಶಗಳಲ್ಲಿ, ರಾಷ್ಟ್ರೀಯ ಸಂಗೀತ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಪಂ. ರಘುನಾಥ ನಾಕೋಡರ ಪುತ್ರ ಡಾ. ರವಿಕಿರಣ ನಾಕೋಡ ಸಂಗೀತದಲ್ಲಿ ಪಿ.ಎಚ್‌ಡಿ. ಪಡೆದಿದ್ದಾರೆ ಹಾಗೂ 'ಎ' ಶ್ರೇಣಿ ಕಲಾವಿದರಾಗಿದ್ದಾರೆ. ಪಂ. ರಘುನಾಥ ನಾಕೋಡರ ಧರ್ಮಪತ್ನಿ ಶ್ರೀಮತಿ ರೇಣುಕಾ ನಾಕೋಡ ಶ್ರೇಷ್ಠ ಗಾಯಕಿಯಾಗಿದ್ದಾರೆ.


ಪಂ. ಅರ್ಜುನಸಾ ನಾಕೋಡರ ಸುಪುತ್ರರಾದ ಶ್ರೀ ವಿಶ್ವನಾಥ ಹಾಗೂ ಶ್ರೀ ರಾಜೇಂದ್ರ ನಾಕೋಡ ನಮ್ಮ ನಾಡಿನ ಹೆಸರಾಂತ ತಬಲಾವಾದಕರು. ಅರ್ಜುನಸಾ ಅವರ ಇನ್ನೊಬ್ಬ ಪುತ್ರ ಶ್ರೀ ಭಾಲಚಂದ್ರ ನಾಕೋಡರು ತಂದೆಯ ಹಾದಿಯಲ್ಲೇ ಮುನ್ನಡೆದು ಗಾಯಕಿಯನ್ನು ಕೈಗೆತ್ತಿಕೊಂಡರು. ಅತ್ಯಂತ ಸುಶ್ರಾವ್ಯವಾಗಿ ಹಾಗೂ ಪಾಂಡಿತ್ಯಪೂರ್ಣವಾಗಿ ಹಾಡಬಲ್ಲ ಶ್ರೀ ಭಾಲಚಂದ್ರ ನಾಕೋಡರು ದೇಶದ ಪ್ರಮುಖ ಸಂಗೀತೋತ್ಸವದಲ್ಲಿ ಭಾಗವಹಿಸಿದ್ದಾರೆ. ಅವರು ಕೂಡ ಆಕಾಶವಾಣಿಯ 'ಎ' ಶ್ರೇಣಿಯ ಕಲಾವಿದರು. ಇವರ ಪುತ್ರ ರಾಘವೇಂದ್ರ ವೃತ್ತಿಯಿಂದ ಇಂಜನೀಯರ್ ಆದರೂ

ಪ್ರವೃತ್ತಿಯಿಂದ ಉತ್ತಮ ತಬಲಾವಾದಕ. ಹೀಗೆ ಇಡೀ ನಾಕೋಡಕುಟುಂಬವೇ ಸಂಗೀತಕ್ಕೆ ತನ್ನನ್ನು ಸಮರ್ಪಿಸಿಕೊಂಡಿದೆ.

ಶ್ರೇಷ್ಠ ಗಾಯಕರಷ್ಟೇ ಅಲ್ಲದೇ ಪಂ. ಅರ್ಜುನಸಾ ನಾಕೋಡರು ಒಬ್ಬ ಶ್ರೇಷ್ಠ ಗುರುಗಳೂ ಆಗಿದ್ದರು. ಅವರ ಅನೇಕ ಶಿಷ್ಯರು ಈಗ ಪ್ರಸಿದ್ಧಿಗೆ ಬಂದಿದ್ದಾರೆ. ಸಂಗೀತದ ಪ್ರಚಾರ ಹಾಗೂ ಪ್ರಸಾರಕ್ಕಾಗಿ ಪಂ. ಅರ್ಜುನಸಾ ನಾಕೋಡರು ೧೯೬೭ ರಲ್ಲಿ ರೇಣುಕಾ ಸಂಗೀತ ವಿದ್ಯಾಲಯ ಸ್ಥಾಪಿಸಿ ಅನೇಕ ಶಿಷ್ಯರಿಗೆ ಸಂಗೀತ ವಿದ್ಯೆಯ ದಾನ ಮಾಡಿದ್ದಾರೆ. ತಮ್ಮ ಜೀವನವನ್ನೇ ಹಿಂದುಸ್ತಾನಿ ಸಂಗೀತ ಹಾಗೂ ರಂಗಭೂಮಿಗೆ ಸಮರ್ಪಿಸಿದ ಪಂ. ಅರ್ಜುನಸಾ ನಾಕೋಡರಿಗೆ ಅನೇಕ ಬಿರುದು, ಪ್ರಶಸ್ತಿಗಳು ಸಂದಿವೆ. ೧೯೬೯ ರಲ್ಲಿ ಕರ್ನಾಟಕ ಸರಕಾರದಿಂದ ದಸರಾ ಸುವರ್ಣ ಪದಕ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾತಿಲಕ ಪ್ರಶಸ್ತಿಗಳು, ಸಂಗೀತಸುಧಾಕರ, ಗಾನಭಾನು, ಮೊದಲಾದ ಬಿರುದುಗಳು ಅವರನ್ನು ಅಲಂಕರಿಸಿವೆ.

ಸಂಗೀತಕ್ಷೇತ್ರವನ್ನು ಶ್ರೀಮಂತಗೊಳಿಸಿದ ಗಾನಭಾನು ಪಂ. ಅರ್ಜುನಸಾ ನಾಕೋಡರು ೦೪-೧೧-೨೦೦೧ ರಂದು ಸಂಗೀತ ಸರಸ್ವತಿಯ ಪಾದ ಸೇರಿದರು.

■ ■ ■



ಪಂ. ಚಂದ್ರಶೇಖರ ಪುರಾಣಿಕಮಠ

# ಸಜ್ಜನಿಕೆಯ ಗಾಯಕ
# ಪಂ. ಚಂದ್ರಶೇಖರ ಪುರಾಣಿಕಮಠ
# (೧೯೨೬-೨೦೧೦)

● ಡಾ. ಶಾರದಾ ವಿ. ಭಟ್ಟ

ಪ್ರಾತಃಸ್ಮರಣೀಯರೂ. ನಿತ್ಯವಂದ್ಯರೂ ಆದ ಹಿಂದುಸ್ತಾನಿ ಸಂಗೀತಕ್ಷೇತ್ರದ ನಂದಾದೀಪವೊಂದು ೨೪ ಜುಲೈ ೨೦೧೦, ಗುರುಪೂರ್ಣಿಮೆಯಂದು ಶಿವಸಾನ್ನಿಧ್ಯ ಸೇರಿತು. ಪ್ರತಿವರ್ಷವೂ ಗುರುಪೂರ್ಣಿಮೆಗೆ ತಮ್ಮ ಸಂಗೀತ ಗುರುಗಳ ಪೂಜೆಗೆಂದು ಧಾರವಾಡದ ಪ್ರಶಾಂತ ನಗರದಲ್ಲಿಯ ಅವರ ಗುರುಕೃಪಾ ನಿವಾಸಕ್ಕೆ ಹೋಗುತ್ತಿದ್ದ ಶಿಷ್ಯರನೇಕರಿಗೆ, ಅಂದು ತಮ್ಮ ಗುರುವಿನ ಅಂತಿಮ ದರ್ಶನ ಪಡೆಯುವಂತಾಯಿತು! ಸಾತ್ವಿಕತೆಯೇ ಮೂರ್ತಿವೆತ್ತಂತಿದ್ದ ಮಹಾನ್ ಸಂಗೀತಗಾರ, ಸಂಗೀತಗುರು ಧಾರವಾಡದ ಪಂ. ಚಂದ್ರಶೇಖರ ಪುರಾಣಿಕಮಠ ಅವರು ಮಾನವತೆಯ ಆಗರವೇ ಆಗಿದ್ದರೆಂಬುದಕ್ಕೆ, ಅವರ ಅಂತಿಮಯಾತ್ರೆಗೆ ಅವರ ಗೃಹದಲ್ಲಿ ಸಾವಿರಾರು ಸಂಖ್ಯೆಯಲ್ಲಿ ನೆರೆದ ಅವರ ಶಿಷ್ಯರು, ಅಭಿಮಾನಿಗಳೇ ಸಾಕ್ಷಿ.

ಪಂ. ಚಂದ್ರಶೇಖರ ಪುರಾಣಿಕಮಠ ಇವರು ಎಂಭತ್ತು ವಸಂತಗಳನ್ನು ಕಳೆದು ಸಹಸ್ರಚಂದ್ರದರ್ಶನ ಮಾಡಿದವರು. ತಮ್ಮ ಎಂಭತ್ನಾಲ್ಕನೇ ವಯಸ್ಸಿನಲ್ಲೂ ಅತ್ಯಂತ ಲವಲವಿಕೆಯಿಂದ ಸಂಗೀತಸೇವೆ ಮಾಡುತ್ತಾ ಅನೇಕ ಸಂಗೀತ ಕಚೇರಿಗಳಲ್ಲಿ ಭಾಗವಹಿಸುತ್ತಿದ್ದರು. ತಮ್ಮ ಮನೆಯಲ್ಲೇ ಚಿಕ್ಕಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಸಂಗೀತಾಸಕ್ತರಿಗೆ ಸಂಗೀತವಿದ್ಯೆ ನೀಡುತ್ತಿದ್ದರು. ತಮ್ಮ ಆಚಾರ-ವಿಚಾರ, ನಡೆ-ನುಡಿ, ಎಲ್ಲದರಲ್ಲೂ ಸಾತ್ವಿಕತೆಯನ್ನು ಹೊಂದಿದ್ದು, ಸೌಜನ್ಯ ಮೀರಿದ ಮಾತು ಎಂದೂ ಅವರಿಂದ ಹೊರಬಂದಿದ್ದಿಲ್ಲ. ಆಹಾರ, ವ್ಯಾಯಾಮಗಳಲ್ಲಿ ಕಟ್ಟು-ನಿಟ್ಟು. ಬೆಳಿಗ್ಗೆ ಎದ್ದಕೂಡಲೇ ಸಂಗೀತಕೋಣೆಯನ್ನು ಅವರೇ ಶುಚಿಗೊಳಿಸುತ್ತಿದ್ದರು. ತನ್ನ ಜೀವನದ ಕಷ್ಟ-ಸುಖಃಗಳಲ್ಲಿ ಸಮಭಾಗಿಯಾದ ತನ್ನ ಪ್ರೀತಿಯ ಮಡದಿ ಶಾಂತಾ ಅವರಿಗೆ ದಿನದ ಮೊದಲ ಚಹಾವನ್ನು ಅವರೇ ಮಾಡಿಕೊಡುತ್ತಿದ್ದರು. ದಿನಾಲೂ ಎರಡು ಕಿಲೋಮೀಟರುಗಳಷ್ಟು ನಡೆಯುತ್ತಿದ್ದರು. ದಿನಾಲೂ ಬೆಳಿಗ್ಗೆ ಕನಿಷ್ಠ ೧-೨ ತಾಸುಗಳ ಕಾಲ ಸಂಗೀತದ ತಾಲೀಮು ಮಾಡಿ, ತಾಯಿ ಶಾರದೆಗೆ ತನ್ನ ಸ್ವರಪೂಜೆ ಸಲ್ಲಿಸುತ್ತಿದ್ದರು. ಲಿಂಗಾಯತ ಧರ್ಮದಲ್ಲೇ ಹುಟ್ಟಿ ಬೆಳೆದವರಾಗಿದ್ದರಿಂದ ಆತ್ಮಲಿಂಗದ ಪೂಜೆಯಾದ ಮೇಲೆ ಅಂದಿನ ಆಹಾರ ಸೇವಿಸುತ್ತಿದ್ದರು. ಮಾತೇ ಆಡದಿದ್ದರೂ ಅವರ ಕಣ್ಣ ನೋಟದಲ್ಲಿರುವ ತೀಕ್ಷ್ಣತೆಯನ್ನು ತಿಳಿದೇ ಮನೆಯವರೆಲ್ಲ ವ್ಯವಹರಿಸಬೇಕು.

ಆಕಾಶವಾಣಿ, ಧಾರವಾಡದಿಂದ ನಿವೃತ್ತರಾದ ಮೇಲೆ ದಿನವಿಡೀ ಸಂಗೀತಬೋಧನೆಯಲ್ಲೇ ತೊಡಗಿರುತ್ತಿದ್ದುದು ಅವರ ನಿವೃತ್ತಿಜೀವನದ ವಿಶೇಷ. ಬೆಳಿಗ್ಗೆ

ಹತ್ತುಗಂಟೆಯ ಸುಮಾರಿಗೆ ರೊಟ್ಟಿ-ಪಲ್ಯ ತಿಂದು, ಚಹಾ ಕುಡಿದು ಸಂಗೀತ ರೂಮು ಸೇರಿದರೆ ಊಟದ ಕಡೆ ಲಕ್ಷ್ಯವೆ ಇರುತ್ತಿರಲಿಲ್ಲ. ಎಂದಾದರೂ ಸಂಗೀತಪಾಠ ಮುಗಿಸಿ, ಸುಮ್ಮನೆ ಕುಳಿತಾಗ, ನಾವೇ ಕೆದಕಿದರೆ, ಕೆಲವೊಮ್ಮೆ ಹಳೆಯ ನೆನಪುಗಳಿಗೆ ಜಾರುತ್ತಿದ್ದರು. ತಮ್ಮ ಜೀವನದಲ್ಲಿ ತಮಗೆ ಬಂದ ಪ್ರತಿಯೊಂದು ಸಮಸ್ಯೆಯೂ ಕೂಡ ದೇವರು ತನಗಿತ್ತ ಪ್ರಸಾದ ಎನ್ನುತ್ತಿದ್ದರು. ಜೀವನದ ಸಂಧ್ಯಾಕಾಲದಲ್ಲಿ ನೆಮ್ಮದಿ ನೀಡಿದ ಶಿವನನ್ನು ಸ್ಮರಿಸುತ್ತಾ, ಸಂಗೀತ ಗುರುವಾಗಿ ಸಂಗೀತ ಜಗತ್ತಿಗೆ ತಾನೊಬ್ಬ ಸಂಗೀತ ಮಹಾಕುಸುಮವಾಗಿ ಸಂದಿದ್ದಲ್ಲದೆ, ಅನೇಕ ಸಂಗೀತಕುಸುಮಗಳನ್ನು ಕಾಣ್ಕೆ ನೀಡಿದರು.

ಹಾವೇರಿಯ ಕೀರ್ತನಕಾರರಾದ ಪ್ರಭಯ್ಯಶಾಸ್ತ್ರಿ ಹಾಗೂ ಗಂಗಮ್ಮ ದಂಪತಿಗಳಿಗೆ ಏಳನೆಯ ಮಗುವಾಗಿ ೨ ಡಿಸೆಂಬರ್, ೧೯೨೬ ರಂದು ಚಂದ್ರಶೇಖರರು ಜನಿಸಿದರು. ಬಾಲ್ಯದಿಂದಲೂ ಸಂಗೀತವೇ ಗೀಳಾಯಿತು. ಕನ್ನಡ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದ ಬಾಲಕ ದಾರಿಯ ಮಧ್ಯೆ ಒಂದು ಅಂಗಡಿಯಲ್ಲಿ ಅದೇ ಹೊಸದಾಗಿ ತಂದಿದ್ದ ಗ್ರಾಮಾಫೋನಿನಿಂದ ಹರಿದುಬರುತ್ತಿದ್ದ ಪಂ. ಡಿ.ವಿ. ಪಲೂಸ್ಕರ ಅವರ ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದಲೆಗಳನ್ನು ಕೇಳುತ್ತಾ ನಿಂತುಬಿಡುತ್ತಿದ್ದ, ಸಂಗೀತವನ್ನು ಕೇಳುತ್ತಿದ್ದರೆ ತನ್ನ ಅಸ್ತಿತ್ವವನ್ನೇ ಮರೆಯುತ್ತಿದ್ದ ಬಾಲಕನನ್ನು ತಂದೆಯಾದ ಪ್ರಭಯ್ಯ ಶಾಸ್ತ್ರಿಗಳು ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ತಂದು, ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಹಾಗೂ ಪದ್ಮವಿಭೂಷಣ ಪಂ. ಪುಟ್ಟರಾಜ ಗವಾಯಿಗಳ ಸಾನ್ನಿಧ್ಯಕ್ಕೆ ಬಿಟ್ಟರು. ಅಲ್ಲಿಗೆ ಚಂದ್ರಶೇಖರರು ಶಾಲೆಗೆ ತಿಲಾಂಜಲಿಯಿತ್ತು 'ಗುರುಕುಲ' ಪದ್ಧತಿಯ ಪ್ರಕಾರ ಸಂಗೀತಾರ್ಜನೆಗೆ ತೊಡಗಿದರು. ಹಗಲೂ ರಾತ್ರಿ ಸಂಗೀತವನ್ನೇ ಕಾಯಕವನ್ನಾಗಿಸಿಕೊಂಡ ಜ್ಞಾನವಂತರಾದ ಪಂ. ಪುಟ್ಟರಾಜ ಗವಾಯಿಗಳ ಮಾರ್ಗದರ್ಶನ ಚಿಕ್ಕಂದಿನಿಂದಲೇ ಪಂ. ಚಂದ್ರಶೇಖರ ಪುರಾಣಿಕಮಠರಿಗೆ ದೊರೆಯಿತು. ಸಾಕಷ್ಟು ತುಂಟಾಟಗಳನ್ನು ಮಾಡುತ್ತಿದ್ದ ಬಾಲಕನನ್ನು ತಿದ್ದಿ-ತೀಡಿ ಒಂದು ಸಂಗೀತ ಪ್ರತಿಮೆಯನ್ನಾಗಿಸಿದರು ಪುಟ್ಟರಾಜರು.

ಪಂ. ಚಂದ್ರಶೇಖರ ಪುರಾಣಿಕಮಠರ ಹಿರಿಯಣ್ಣ ಪಂ. ಮೃತ್ಯುಂಜಯ ಬುವಾ ಪುರಾಣಿಕಮಠರೂ ಕೂಡ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲೇ ಕಲಿತವರು. ಚಂದ್ರಶೇಖರರಿಗಿಂತ ಹತ್ತು ವರ್ಷಗಳ ಅಂತರದಲ್ಲಿ ಹಿರಿಯರಾಗಿದ್ದು, ದೇಶದಾದ್ಯಂತ ಹಿರಿಯ ಗಾಯಕರೆಂದೇ ಗುರುತಿಸಲ್ಪಟ್ಟ ಇವರು, ಪಂ. ಚಂದ್ರಶೇಖರರಿಗೆ ಎರಡನೆಯ ಗುರುಗಳಾಗಿ ಸಂದರು. ಇವರ ಗರಡಿಯಲ್ಲಿ ಹತ್ತು-ಹನ್ನೆರಡು ವರ್ಷಗಳ ಕಾಲ ತಾಲೀಮು ನಡೆಸಿದ ಪಂ. ಚಂದ್ರಶೇಖರ ಪುರಾಣಿಕಮಠರು ಮುಂದೆ ಒಂದೆರಡು ವರ್ಷಗಳ ಕಾಲ ಗ್ವಾಲಿಯರ್ ಘರಾಣಾದ ದಿಗ್ಗಜರಲ್ಲೊಬ್ಬರಾದ ಪಂಢರಾಪುರದ ಪಂ. ಜಗನ್ನಾಥಬುವಾ ಅವರಲ್ಲಿ ಸಂಗೀತಾಭ್ಯಾಸ ಮಾಡಿದರು. ಗ್ವಾಲಿಯರ್ ಘರಾಣಾದ ಹಿರಿಯ ಗಾಯಕರಲ್ಲೊಬ್ಬರಾಗಿ ಗುರುತಿಸಲ್ಪಟ್ಟರು.

ಸಂಗೀತಶಿಕ್ಷಣವನ್ನು ಸಂಪೂರ್ಣವಾಗಿ ಪಡೆದರೂ, ಪಂ. ಚಂದ್ರಶೇಖರ ಪುರಾಣಿಕಮಠರು ತಮ್ಮ ಹರೆಯದ ದಿನಗಳಲ್ಲಿ ಸಂಗೀತವನ್ನೇ ವೃತ್ತಿಯಾಗಿರಿಸಿಕೊಂಡಿರಲಿಲ್ಲ. ಸಂಗೀತವನ್ನು ಆರಾಧಿಸುತ್ತಿದ್ದರಷ್ಟೆ! ಹಾವೇರಿಯ ಮೂಲದವರಾದ ಇವರಿಗೆ ಹಾವೇರಿಯಲ್ಲೊಂದು ಸ್ವಂತ ಸಾಬೂನು ಕಾರ್ಖಾನೆಯಿತ್ತು.

ಇತ್ತೀಚಿನ ದಿನಗಳಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಮಾಡುವ ಕೆಲಸವನ್ನು ಆಗ ಇವರು ಮಾಡುತ್ತಿದ್ದರು. ತಮ್ಮದೇ ಕಾರ್ಖಾನೆಯಲ್ಲಿ ತಯಾರಾದ ಸಾಬೂನುಗಳನ್ನು ಕರ್ನಾಟಕದ ವಿವಿಧೆಡೆಗಳಲ್ಲಿ ವಿತರಿಸುತ್ತಿದ್ದರು. ತಮ್ಮ ವ್ಯಾಪಾರ ವಹಿವಾಟುಗಳ ನಡುವೆ ಬಿಡುವಿಲ್ಲದ ಸಮಯದಲ್ಲೂ, ಬೆಳಿಗ್ಗೆ ನಾಲ್ಕಕ್ಕೇ ಎದ್ದು ಎರಡು ತಾಸುಗಳ ಕಾಲ ಸಂಗೀತಾಭ್ಯಾಸ ಮಾಡುತ್ತಿದ್ದರು. ತಮ್ಮ ವಾಣಿಜ್ಯೋದ್ಯಮ ಮಾಡುತ್ತಿರುವಾಗಲೇ ಸಹಧರ್ಮಿಣಿ ಮನೆಗೆ ಬಂದರು. ವ್ಯಾಪಾರದಿಂದಾಗಿ ದಾವಣಗೆರೆ, ಶಿವಮೊಗ್ಗ, ಶಿರ್ಸಿ, ರಾಣೆಬೆನ್ನೂರು ಮುಂತಾದ ಕಡೆಗಳಲ್ಲಿ ಅನೇಕ ವ್ಯಕ್ತಿಗಳ ಪರಿಚಯ ಇವರಿಗಾಯಿತು ಹಾಗೂ ಇವರಲ್ಲಿರುವ ಸಂಗೀತಕಲೆಯ ಪರಿಚಯ ಅವರಿಗಾಯಿತು.

ಇದೇ ಸಂದರ್ಭದಲ್ಲಿ ಪಂ. ಪುರಾಣಿಕಮಠರಿಗೆ ಸಂಕಷ್ಟಗಳ ಸರಮಾಲೆಯೇ ಸುತ್ತಿಕೊಳ್ಳತೊಡಗಿತು. ಸಾಬೂನುಕಾರ್ಖಾನೆ ನಷ್ಟಕ್ಕೊಳಗಾಗಿ ಆರ್ಥಿಕ ಮುಗ್ಗಟ್ಟಾವರಿಸಿತು. ಮನೆಯಲ್ಲಿ ಸಂಸಾರ ಬೆಳೆಯುತ್ತಾ ಹೋದಂತೆ ಆರ್ಥಿಕವಾಗಿ ಸಂಪೂರ್ಣವಾಗಿ ಕುಸಿದರು. ಈ ಸಮಯದಲ್ಲಿ ಹತ್ತಿರದ ಸಂಬಂಧಿಗಳು ದೂರಾದರು. ಆದರೆ ಸಂಗೀತಪ್ರೇಮಿಗಳು ಹತ್ತಿರವಾದರು. ಇಲ್ಲಿಂದ ಮುಂದೆ ಸಂಗೀತವನ್ನೇ ಅವಲಂಬಿಸಿದರು. ಸಂಗೀತಪಾಠವೇ ವೃತ್ತಿಯಾಗತೊಡಗಿತು. ಶಿರ್ಸಿಯ ಮಾರಿಕಾಂಬಾ ಶಾಲೆಯಲ್ಲಿ ಎರಡು ವರ್ಷಗಳ ಕಾಲ ಸಂಗೀತ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಈ ಸಮಯದಲ್ಲಿ ಉತ್ತರ ಕನ್ನಡದ ಅನೇಕ ಸಂಗೀತಾಸಕ್ತರ ಪ್ರೀತಿಗೆ ಪಾತ್ರರಾದರು. ಶಿರ್ಸಿಯ ಶ್ರೀ ಆರ್.ಟಿ.ಹೆಗಡೆ, ಶೀಗೆಹಳ್ಳಿ, ಶ್ರೀ ತಿಮ್ಮಪ್ಪಯ್ಯ ಹೆಗಡೆ, ಶ್ರೀ ಎಸ್.ಎಂ. ಭಟ್ಟ ಕಟ್ಟಿಗೆ, ಶ್ರೀ ವಿ.ಯು. ಪಟಗಾರ ಮುಂತಾದವರಿಗೆ ಸಂಗೀತ ಬೋಧಿಸಿದರು. ಮುಂದೆ ಅನೇಕ ವರ್ಷಗಳ ಕಾಲ ಹಾವೇರಿಯಲ್ಲೇ ಸಂಗೀತದ ಮನೆಪಾಠಗಳನ್ನು ಮಾಡಿದರು. ಶ್ರೀ ಇಂದುಧರ ಪೂಜಾರ, ಶ್ರೀ ಚಲುವಾದಿ ಮುಂತಾದವರಿಗೆ ಸಂಗೀತ ಗುರುಗಳಾದರು. ಇದೇ ಸಮಯದಲ್ಲಿ ಶ್ರೀ ಎಸ್.ಎಂ. ಭಟ್ಟ, ಕಟ್ಟಿಗೆ ಇವರು ಹೊನ್ನಾವರದ ಎಸ್.ಡಿ.ಎಂ. ಕಾಲೇಜಿಗೆ ಸಂಗೀತ ಶಿಕ್ಷಕರಾಗಿ ಆಯ್ಕೆಯಾದರು. ಇವರಿಂದ ಪಂ. ಪುರಾಣಿಕಮಠರು ಹೊನ್ನಾವರದ ಸಂಗೀತಪ್ರೇಮಿ ಶ್ರೀ ಗೋವಿಂದ ಹೆಗಡೆ, ಕಲ್ಬಾಗ ಇವರಿಗೆ ಪರಿಚಿತರಾದರು. ಹೊನ್ನಾವರದ ಸಂಗೀತಬಂಧುಗಳಿಗೆ ಮನೆಮಾತಾದರು. ಹೊನ್ನಾವರದ ಪಂ. ಪರಮೇಶ್ವರ ಗೋವಿಂದ ಹೆಗಡೆ (ಪಂ. ಪಿ.ಜಿ. ಹೆಗಡೆ), ಶ್ರೀ ಶಂಭು ಭಟ್ಟ, ಕಡತೋಕಾ, ಶ್ರೀ ಎಂ.ಟಿ. ಭಾಗ್ವತ ಮುಂತಾದವರು ಇವರಿಂದ ಸಂಗೀತ ಕಲಿತರು. ಹೊನ್ನಾವರದಲ್ಲಿ ಕಲಾಸಂಗಮ ಎಂಬ ಸಂಗೀತಸಂಸ್ಥೆ ಹುಟ್ಟಿಕೊಳ್ಳಲು ಕಾರಣೀಭೂತರಾದರು ಪಂ. ಪುರಾಣಿಕಮಠರು.

ಸಂಗೀತಪ್ರೇಮಿಗಳ ಮನೆಯಲ್ಲೇ ಕೆಲವು ದಿನ ಉಳಿದು ಅವರ ಮಕ್ಕಳಿಗೆ, ಊರಿನ ಕೆಲವು ವಿದ್ಯಾರ್ಥಿಗಳಿಗೆ ಮನೆಪಾಠಗಳನ್ನು ಮಾಡಿದ್ದಲ್ಲದೆ, ಕೆಲವರನ್ನು ಹಾವೇರಿಯಲ್ಲಿ ತನ್ನ ತುಂಬು ಸಂಸಾರದ ಜೊತೆ ಇಟ್ಟುಕೊಂಡೂ ಸಂಗೀತಪಾಠಗಳನ್ನು ಹೇಳಿದರು. ದುಡ್ಡಿದ್ದಾಗ ಸಮೃದ್ಧ ಊಟ, ಇಲ್ಲದಿದ್ದರೆ ರೊಟ್ಟಿ ಖಾರ, ಪರಿಸ್ಥಿತಿ ಬಿಗಡಾಯಿಸಿದರೆ ಹಸಿವೆ ಆಗಿಲ್ಲ ಎಂಬ ಹುಸಿಮಾತು. ಹೀಗೇ ಆರ್ಥಿಕ ಸಂಕಷ್ಟಗಳನ್ನು ತಾಳ್ಮೆಯಿಂದ ಸಹಿಸುತ್ತಾ, ಎಂಟು ಮಕ್ಕಳ ತಂದೆಯಾಗಿ, ಸಂಸಾರವೆಂಬ ಬಹುದೊಡ್ಡ ನೌಕೆಯ ಮಾಲಿಕನಾಗಿ, ಅಂತೂ ಇಂತೂ ತಮ್ಮ ನಲವತ್ತೆಂಟನೆಯ ವಯಸ್ಸಿನಲ್ಲಿ ಧಾರವಾಡದ

ಆಕಾಶವಾಣಿಯಲ್ಲಿ ನಿಲಯ ಕಲಾವಿದರಾಗಿ ಗುತ್ತಿಗೆ ಆಧಾರದ ಮೇಲೆ ಸೇರಿದರು. ೧೯೭೬ ರಲ್ಲಿ ಸಂಸಾರಸಮೇತ ಧಾರವಾಡದಲ್ಲಿ ನೆಲೆಯೂರಿದರು. ಆಕಾಶವಾಣಿ ನೌಕರಿ ಖಾಯಂ ಆಗಿ ಅಲ್ಲಿ ಹತ್ತು ವರ್ಷಗಳ ಕಾಲ ತಾನಪುರಾ ಕಲಾವಿದರಾಗಿ ಸೇವೆ ಸಲ್ಲಿಸಿ ೧೯೮೬ ರಲ್ಲಿ ನಿವೃತ್ತಿ ಹೊಂದಿದರು. ಮುಂದೆ ದಿನವಿಡೀ ಸಂಗೀತ ಗುರುಗಳಾಗಿ ಸಂಗೀತಾಸಕ್ತ ಮಕ್ಕಳಿಗೆ ಮನೆಯಲ್ಲೇ ಪಾಠ ಮಾಡುತ್ತಾ, ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಾ ತನ್ನ ಕೊನೆಯುಸಿರಿನವರೆಗೂ ಸಂಗೀತವನ್ನೇ ಉಸಿರಾಗಿಸಿಕೊಂಡರು. ತನ್ನ ಇಳಿವಯಸ್ಸಿನಲ್ಲೂ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು.

ಪಂ. ಚಂದ್ರಶೇಖರ ಪುರಾಣಿಕಮಠ ಅವರು ೧೯೫೬ ರಲ್ಲಿ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ನಡೆಸುವ ಸಂಗೀತವಿಶಾರದ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೭೦ ರಲ್ಲಿ ಆಕಾಶವಾಣಿ ಧಾರವಾಡದ ಸುಗಮ ಸಂಗೀತಗಾರರಾಗಿ ಗುರುತಿಸಲ್ಪಟ್ಟರು. ೧೯೮೦ ರಲ್ಲಿ ಆಕಾಶವಾಣಿ ಧಾರವಾಡದಲ್ಲಿ ಬಿ-ಹೈ ಶ್ರೇಣಿಯ ಶಾಸ್ತ್ರೀಯ ಸಂಗೀತಗಾರರೆಂದು ಗುರುತಿಸಲ್ಪಟ್ಟರು. ನಿಲಯ ಕಲಾವಿದರಾಗಿದ್ದಾಗ ಅನೇಕ ಖ್ಯಾತನಾಮರ ಆಕಾಶವಾಣಿ ಸಂಗೀತ ಕಚೇರಿಗಳಿಗೆ ಹಾರ್ಮೋನಿಯಂ ವಾದಕರಾಗಿ ಸಾಥ ನೀಡಿದರು. ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದ ಜೊತೆಗೆ ಠುಮ್ರಿ, ಭಜನ್, ವಚನ ಸಂಗೀತಗಳನ್ನೂ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಕನ್ನಡದ ಅತಿ ಹಳೆಯ 'ಚಂದ್ರಹಾಸ' ಎಂಬ ಸಿನೆಮಾದ ಹಾಡುಗಳಿಗೆ ಧ್ವನಿ ನೀಡಿದ್ದರು. ಆಕಾಶವಾಣಿ ಧಾರವಾಡದಿಂದ ಸಂಗೀತ ಪಾಠಗಳನ್ನೂ ಬಿತ್ತರಿಸಿದ್ದರು.

ಭಾರತದ ನಾನಾ ಕಡೆಗಳಲ್ಲಿ ಇವರ ಅನೇಕ ಸಂಗೀತ ಕಚೇರಿಗಳು ನಡೆದಿವೆ. ಮದ್ರಾಸ್, ಹೈದರಾಬಾದ್, ಮುಂಬೈ, ಮಿರಜ, ಸೋಲಾಪುರ, ಗೋವಾ, ಕುಂದಗೋಳ, ಬೆಳಗಾವಿ, ಬೆಂಗಳೂರು, ಮೈಸೂರು, ಬಿಜಾಪುರ, ಶಿರ್ಸಿ, ಹೊನ್ನಾವರ ಮುಂತಾದ ಕಡೆಗಳಲ್ಲಿ ಪ್ರಸಿದ್ಧ ವೇದಿಕೆಗಳನ್ನು ಅಲಂಕರಿಸಿ, ಶ್ರೋತೃಗಳಿಗೆ ತನ್ನ ಸಾತ್ವಿಕ ಸಂಗೀತವನ್ನು ಉಣಬಡಿಸಿದ್ದಾರೆ. ಇಳಿವಯಸ್ಸಿನಲ್ಲೂ ಅದ್ಭುತ ಶಾರೀರವನ್ನು ಹೊಂದಿದ್ದರು. ರಾಗಗಳಲ್ಲಿಯ ಶುದ್ಧತೆ, ನಿಯಮಬದ್ಧ ಆಲಾಪ್, ಬೋಲ್‌ತಾನ್, ಸ್ಫುಟವಾದ ಗಮಕ ಹಾಗೂ ಸರಳ ತಾನುಗಳಿಗೆ ಹೆಸರಾಗಿದ್ದರು. ತಾರಸಪ್ತಕದಲ್ಲಿ ಸುಲಲಿತವಾಗಿ ಸಂಚರಿಸುತ್ತಿದ್ದರು. ೧೯೯೦ ರಲ್ಲಿ ಬಹುದೊಡ್ಡ ಅಪಘಾತಕ್ಕೀಡಾಗಿ ಮರುಜೀವ ಪಡೆದರೂ ಬಾಯಲ್ಲಿಯ ಕೆಲವು ಹಲ್ಲುಗಳನ್ನು ಕಳೆದುಕೊಂಡರು. ಆದರೂ ಸಂಗೀತದಲ್ಲಿಯ ಸಾಹಿತ್ಯದ ಉಚ್ಚಾರವನ್ನು ಸ್ಪಷ್ಟವಾಗಿ ಮಾಡುತ್ತಿದ್ದುದು ಸಾಧನೆಯ ಫಲವೇ ಹೌದು.

ಇವರ ಸಂಗೀತಸಾಧನೆಗೆ ನಾಡಿನ ಅನೇಕ ಕಡೆಗಳಿಂದ ಅನೇಕ ಸಮ್ಮಾನಗಳು ದೊರೆತಿವೆ. ಸಂಗೀತಕಲಾಸಾಗರ, ಚಂದ್ರಹಾಸ, ಗಾನಯೋಗಿ ಪಂಚಾಕ್ಷರಿ ಗವಾಯಿ, ಕುಮಾರಶ್ರೀ, ಕಡಕೊಳ ಪ್ರಶಸ್ತಿ, ಗಾನಸಿರಿ, ಪಂ. ಬಸವರಾಜ ರಾಜಗುರು ಪುರಸ್ಕಾರ, ಮಹಾಂತಶ್ರೀ, ಸಂಗೀತರತ್ನ, ಹಾವನೂರು ಪ್ರಶಸ್ತಿ, ಸಾಂಗೀತ್ಯ, ಕನಕಪುರಂದರ ಪ್ರಶಸ್ತಿ ಹಾಗೂ ಗುರುಕುಲಭೂಷಣ ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕದ ಕನ್ನಡ ಸಂಸ್ಕೃತಿ ಇಲಾಖೆಯು ೧೯೯೨ ರಲ್ಲಿ ಇವರಿಗೆ 'ಕರ್ನಾಟಕ ಕಲಾತಿಲಕ' ಎಂಬ ಪ್ರಶಸ್ತಿ ನೀಡಿ

ಗೌರವಿಸಿತು. ೨೦೦೪ ರಲ್ಲಿ ಕರ್ನಾಟಕ ಸರಕಾರವು ಮೈಸೂರು ದಸರಾ ದರ್ಬಾರ್‌ನಲ್ಲಿ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ನೀಡಿ ಗೌರವಿಸಿತು. ಲಹರಿಕಂಪನಿಯು ಜುಲೈ ೨೦೦೫ ರಲ್ಲಿ ಇವರ ಎರಡು ಧ್ವನಿಮುದ್ರಿಕೆಗಳನ್ನು ಸುರಗುಂಜನ-೧ ಹಾಗೂ ೨ ಎಂಬ ಹೆಸರಿನಡಿ ಮುದ್ರಿಸಿತು. ದೆಹಲಿಯ ಸಂಗೀತ-ನಾಟಕ ಅಕಾಡೆಮಿಯು ಇವರ ಜೀವನದ ಮೇಲೆ ಬೆಳಕು ಚೆಲ್ಲುವ ೧ ತಾಸಿನ ಡಾಕ್ಯುಮೆಂಟರಿಯನ್ನು ರೆಕಾರ್ಡಿಂಗ್ ಮಾಡಿತು. ಇವರ ಶಿಷ್ಯರು, ಅಭಿಮಾನಿಗಳು ೧೯೯೭ ರಲ್ಲಿ ೭೦ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿದ್ದಲ್ಲದೆ, ೨೦೦೭ರಲ್ಲಿ ೮೦ನೇ ವರ್ಷದ ಹುಟ್ಟುಹಬ್ಬವನ್ನು ಬಲುಸಂಭ್ರಮದಿಂದ ಆಚರಿಸಿದರು. ಎರಡೂ ಕಾರ್ಯಕ್ರಮಗಳು 'ನಾದಪೂರ್ಣಿಮಾ ಸಂಗೀತ ಸಭಾ, ಧಾರವಾಡ' ಎಂಬ ಪಂ. ಪುರಾಣಿಕಮಠರ ಶಿಷ್ಯ-ಅಭಿಮಾನಿ ಬಳಗದ ಸಂಘದಿಂದ ಆಯೋಜಿಸಲ್ಪಟ್ಟು ಧಾರವಾಡದ ಕಲಾಭವನದಲ್ಲೇ ಜರುಗಿದವು. ಇವರ ೮೦ನೇ ವರ್ಷದ ಹುಟ್ಟು ಹಬ್ಬವನ್ನು ಆಚರಿಸಿದ ಸಂದರ್ಭದಲ್ಲಿ ಗುರುಗಳ ಗಾಯನದ ಮೂರು ಆಡಿಯೋ-ವಿಡಿಯೋ ಧ್ವನಿಮುದ್ರಿಕೆಗಳನ್ನು ಸಂಗೀತಪ್ರಸಾರಕ್ಕಾಗಿ ಮುದ್ರಿಸಲಾಯಿತು. ಗುರುಗಳ ಮೇಲೆ ಅವರ ಶಿಷ್ಯರು, ಅಭಿಮಾನಿಗಳು ಬರೆದ ಲೇಖನಗಳನ್ನೊಳಗೊಂಡ 'ನಾದಚಂದ್ರ' ಎಂಬ ಪುಸ್ತಕವನ್ನು ಪ್ರಕಟಿಸಲಾಯಿತು.

ಪಂ. ಚಂದ್ರಶೇಖರ ಪುರಾಣಿಕಮಠರು ಪರಮಾತ್ಮನಲ್ಲಿ ಅಚಲ ವಿಶ್ವಾಸವನ್ನಿತ್ತವರಾಗಿದ್ದರು. ತಾಳ್ಮೆ, ಸಹಿಷ್ಣುತೆಗಳ ತಾಣವಾಗಿದ್ದರು. ಸಂಗೀತದಲ್ಲಿ ಅವರಿಗಿರುವ ಶ್ರದ್ಧೆ, ಜೀವನದಲ್ಲಿರುವ ಪ್ರೀತಿ ಅವರಲ್ಲಿಗೆ ಹೋದ ಎಂಥವರಿಗೂ ಸಾಂತ್ವನ ನೀಡುತ್ತಿತ್ತು. ಇನ್ನೊಬ್ಬರ ಕಷ್ಟಗಳಿಗೆ ಮರುಗುವ, ಸಹಾಯಹಸ್ತವನ್ನು ಚಾಚುವ ಸ್ನೇಹಜೀವಿಯಾಗಿದ್ದರು. ಜೀವನದಲ್ಲಿ ಯಾವುದೇ ಅತಿಯಾದ ಆಶೆ, ಆಕಾಂಕ್ಷೆಗಳನ್ನಿಟ್ಟುಕೊಳ್ಳದೆ, ಶಾಂತಚಿತ್ತದಿಂದ ಬಾಳಿ ಬದುಕಿದರು. ತನ್ನ ನಿರ್ಮಲ ಮನಸ್ಸಿನ ಸಂಕೇತವೆಂಬಂತೆ ಯಾವಾಗಲೂ ಬಿಳಿಧೋತಿ, ಬಿಳಿಜುಬ್ಬಾಗಳನ್ನೇ ಧರಿಸುತ್ತಿದ್ದರು. ಕೆಂಪುಮಿಶ್ರಿತ ಶ್ವೇತವರ್ಣ ಹೊಂದಿದ ಈ ವಾಮನಮೂರ್ತಿಗೆ ಎಂದಾದರೊಮ್ಮೆ ಸಿಟ್ಟು ಬರುತ್ತಿತ್ತೆ? ಎಂಬುದೇ ಸಂಶಯ. ಯಾವಾಗಲೂ ಮಂದಸ್ಮಿತರಾಗಿಯೇ ಇರುತ್ತಿದ್ದ ಇವರು ಸಂಗೀತ ಕಲಿಸುವಾಗಲೂ ಶಿಷ್ಯರು ಎಷ್ಟೇ ಬಾರಿ ತಪ್ಪಿದರೂ ತಾಳ್ಮೆ ವಹಿಸಿ ಹೇಳಿಕೊಡುತ್ತಿದ್ದರು. ತನ್ನ ಶಿಷ್ಯಂದಿರನ್ನು ಪ್ರೀತಿ, ವಾತ್ಸಲ್ಯಗಳನ್ನೆರೆದು ಮಕ್ಕಳಂತೆ ಕಾಣುತ್ತಿದ್ದರು.

ತಮ್ಮ ಜೀವನಕ್ಕೆ ಮಾರ್ಗದರ್ಶನ ನೀಡಿದ ಪಂ. ಪುಟ್ಟರಾಜ ಗುರುಗಳು ಹಾಗೂ ವೀರೇಶ್ವರ ಪುಣ್ಯಾಶ್ರಮದ ಬಗ್ಗೆ ಪಂ. ಪುರಾಣಿಕಮಠರಿಗೆ ಎಲ್ಲಿಲ್ಲದ ಪ್ರೀತಿ. ಪ್ರತಿವರ್ಷವೂ ಗದಗಿನಲ್ಲಿ ನಡೆಯುವ ಪಂಚಾಕ್ಷರಿ ಗವಾಯಿಗಳ ಪುಣ್ಯಸ್ಮರಣೆಯಲ್ಲಿ ತನ್ನ ಶಿಷ್ಯರೊಡನೆ ಪಾಲ್ಗೊಂಡು, ಪುಟ್ಟರಾಜ ಗುರುಗಳ ದರ್ಶನ ಪಡೆದು, ಸಂಗೀತ ಸೇವೆಯನ್ನು ಮಾಡಿಯೇ ಬರುತ್ತಿದ್ದರು. ಹಾಗೇ ಮೃತ್ಯುಂಜಯ ಬುವಾ ಬದುಕಿರುವಷ್ಟು ಕಾಲವೂ ಅವರ ಮನೆಯಲ್ಲಿ ವರ್ಷಕ್ಕೊಂದು ಕಾರ್ಯಕ್ರಮ ನೀಡುತ್ತಿದ್ದರು. ಸ್ವಂತ ತಮ್ಮನಾಗಿಯೂ ಮೃತ್ಯುಂಜಯಬುವಾರ ಮೇಲೆ ಗುರುಭಕ್ತಿ ಹೊಂದಿದ್ದರು.

ಆಕಾಶವಾಣಿ, ಧಾರವಾಡದಿಂದ ನಿವೃತ್ತರಾದ ಮೇಲೆ ದಿನವಿಡೀ ಸಂಗೀತ ಪಾಠಗಳನ್ನೇ ಮಾಡುತ್ತಿದ್ದ ಇವರು ಅನೇಕ ಶಿಷ್ಯರನ್ನು ನಾಡಿಗಿತ್ತರು. ಶ್ರೀ ರಘುಪತಿ

ಹೆಗಡೆ, ಶ್ರೀಮತಿ. ಸಂಗೀತಾ ಕಟ್ಟಿ, ಡಾ (ಶ್ರೀಮತಿ) ಶಾರದಾ. ವಿ. ಭಟ್ಟ (ಲೇಖಕಿ), ಶ್ರೀಮತಿ ಶಾರದಾ ಭಟ್ಟ, ಕಟ್ಟಿಗೆ, ಶ್ರೀಮತಿ ಚಂದ್ರಕಲಾ ಹೆಗಡೆ, ಶ್ರೀಮತಿ ರಾಧಾ ದೇಸಾಯಿ, ಶ್ರೀಮತಿ ಪ್ರತಿಭಾ ಮೇಲಿನಮನಿ, ಶ್ರೀಮತಿ ಪ್ರತಿಭಾ ಓಂಕಾರ, ಶ್ರೀಮತಿ ಶ್ರೀಮತಿದೇವಿ, ಶ್ರೀ ಶ್ರೀಪಾದ ಹೆಗಡೆ, ಸೋಮನಮನೆ, ವಿದ್ವಾನ್ ಗಣಪತಿ ಭಟ್ಟ, ಶ್ರೀಮತಿ ರಾಜೇಶ್ವರಿ ಹುಂಬಿ, ಶ್ರೀ ಅರ್ಜುನ ವಠಾರ, ಶ್ರೀ ಅಯ್ಯಪ್ಪಯ್ಯ ಹಲಗಲಿಮಠ ಮುಂತಾದವರು ಸಂಗೀತಕ್ಷೇತ್ರದಲ್ಲಿ ಸಾಧನೆ ಗೈದಿದ್ದಾರೆ–ಗೈಯುತ್ತಿದ್ದಾರೆ. ಕೆಲವು ಪುಟಾಣಿಗಳು ಕೂಡ ಪಂ. ಚಂದ್ರಶೇಖರ ಪುರಾಣಿಕಮಠರಲ್ಲಿ ಸಂಗೀತ ಕಲಿಯುತ್ತಿದ್ದರು. ಅವರಲ್ಲಿ ಮುಂಚೂಣಿಯಲ್ಲಿದ್ದವರೆಂದರೆ ಅವರ ಮೊಮ್ಮಕ್ಕಳೇ ಆದ ಕುಮಾರಿ ಪ್ರಿಯಾ ಪುರಾಣಿಕಮಠ, ಕುಮಾರಿ ಸ್ವಾತಿ ಪುರಾಣಿಕಮಠ, ಕುಮಾರಿ ನಾಗರತ್ನಾ ಪುರಾಣಿಕಮಠ ಹಾಗೂ ಕುಮಾರ ಸಚಿನ್ ಭಾಗವತ, ಕುಮಾರಿ ಶಿವಾನಿ ಮಿರಜಕರ, ಕುಮಾರಿ ರಾಜೇಶ್ವರಿ ಪಾಟೀಲ ಮುಂತಾದವರು. ಒಟ್ಟಾರೆ ಪಂ. ಚಂದ್ರಶೇಖರ ಪುರಾಣಿಕಮಠರ ಜೀವನವನ್ನು ಅವಲೋಕಿಸಿದಾಗ, ಡಿ.ವಿ.ಜಿ ಯವರ ಈ ಕೆಳಗಿನ ಮಂಕುತಿಮ್ಮನ ಕಗ್ಗ ನೆನಪಾಗುತ್ತದೆ:

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ.

ಅಂತೆಯೇ ಪುರಾಣಿಕಮಠರು ತಮ್ಮ ಗುರುಗಳಿಗೆ ಕೀರ್ತಿ ತಂದ ಹೆಮ್ಮೆಯ ಶಿಷ್ಯನಾಗಿ, ಸಂಗೀತಾಭಿಮಾನಿಗಳ ನೆಚ್ಚಿನ ಸಂಗೀತಗಾರರಾಗಿ, ತಮ್ಮ ಶಿಷ್ಯರಿಗೆ ಪ್ರೀತಿಯ ತಾಯಿಹೃದಯದ ಗುರುಗಳಾಗಿ, ಕಿರಿಯರಿಗೆ ನಲ್ಮೆಯ ಅಜ್ಜನಾಗಿ, ಧಾರವಾಡದ ಈ ನಾಡಿನ ಸಂಗೀತ ಸಾಧಕನಾಗಿ ಬಾಳಿ ಬೆಳಗಿದರು.

■ ■ ■

ಸಾಂಸ್ಕೃತಿಕ ಧೃವ ತಾರೆಗಳು



ಪಂ. ಹೂಗಾರ ಮಾಸ್ತರ

# ಸರಳ ಸಜ್ಜನಿಕೆಯ ಗಾಯಕ

# ಪಂ. ಹೂಗಾರ ಮಾಸ್ತರ

# (೧೯೨೨-೧೯೯೦)

● ಡಾ. ವೀರಣ್ಣ ರಾಚಪ್ಪ ಹೂಗಾರ,

ಸಂಗೀತಪರಂಪರೆಯ ಮನೆತನದಲ್ಲಿ ೧೯೨೨ ಮಾರ್ಚ್ ೬ರಂದು ರಾಚಪ್ಪವರು ರೋಣ ತಾಲೂಕಿನ ಇಟಗಿ ಗ್ರಾಮದಲ್ಲಿ ಜನಿಸಿದರು. ತಂದೆ ಪರಪ್ಪ, ತಾಯಿ ಗಿರಿಯಮ್ಮ. ಸಂಗೀತ ಹಾಗೂ ಸಂಸ್ಕೃತಿಗೆ ಹೆಸರಾದ ಮನೆತನ ಇವರದು. ತಂದೆ ಆ ಭಾಗಕ್ಕೆ ಹೆಸರಾಂತ ಕಲಾವಿದರಾಗಿದ್ದರು. ಗಾಯನದ ಜೊತೆಗೆ ಪಿಟೀಲು, ಸಾರಂಗಿ, ಮದ್ದಳೆ, ಸಿತಾರ ಹೀಗೆ ಅನೇಕ ವಾದ್ಯಗಳನ್ನು ಸುಶ್ರಾವ್ಯವಾಗಿ ನುಡಿಸುತ್ತಿದ್ದರು. ಕುದುರೆಯ ಮೇಲೆ ಸವಾರಿ, ಹೆಗಲಿಗೊಂದು ಪಿಟೀಲು, ಇನ್ನೊಂದೆಡೆ ಸಾರಂಗಿ, ಆ ಪೆಟ್ಟಿಗೆ ಇದ್ದುದನ್ನು ಕಂಡು ಜನ ಅವರನ್ನು ಢಕಾಯಿತರೆಂದೇ ಭಾವಿಸುತ್ತಿದ್ದರು. ನಂತರ ಇವರೊಬ್ಬ ಕಲಾವಿದರೆಂದು ತಿಳಿದು ಅಚ್ಚರಿಪಡುತ್ತಿದ್ದರು. ಪರಪ್ಪನವರ ತಂದೆ ರುದ್ರಪ್ಪನವರೂ ಸಹ ಸಂಗೀತಗಾರರೇ ಆತದ್ದು ಸಿತಾರವಾದನದಲ್ಲಿ ವಿಶೇಷ ಪಾಂಡಿತ್ಯವುಳ್ಳವರಾಗಿದ್ದರು.

ಹಾಲಕೇರಿಯ ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳ ಹುಟ್ಟೂರು ಕೂಡಾ ಇಟಗಿ ಗ್ರಾಮವೇ. ಹೀಗಾಗಿ ಪರಪ್ಪ ಹಾಗೂ ಅನ್ನದಾನೇಶ್ವರ ಸ್ವಾಮಿಗಳು ಬಾಲ್ಯದ ಗೆಳೆಯರು ಕೂಡಾ. ಹೀಗಾಗಿ ಹೂಗಾರಮನೆತನದ ಮೇಲೆ ಸ್ವಾಮಿಗಳಿಗೆ ಎಲ್ಲಿಲ್ಲದ ಗೌರವ ಹಾಗೂ ಪ್ರೀತಿ, ವಿಶ್ವಾಸವಿತ್ತು. ಇದೇ ವರದಾನವಾಗಿಯೂ ಪರಿಣಮಿಸಿತು.

ರಾಚಪ್ಪನವರಿಗೆ ತಂದೆಯಿಂದಲೇ ಸಂಗೀತಶಿಕ್ಷಣಕ್ಕೆ ಶ್ರೀಕಾರ ದೊರೆಯಿತು. ಮುಂದೆ ಇಟಗಿಯಲ್ಲಿ ಪ್ರಾಥಮಿಕ ೪ನೇ ತರಗತಿ ಮುಗಿಸಿ ನರಗುಂದದ ವಿ.ವಿ. ಸ್ಕೂಲಿಗೆ ಬಂದರು. ಅಭ್ಯಾಸದ ಜೊತೆಗೆ ಸಂಗೀತಾಸಕ್ತಿಯೂ ಹೆಚ್ಚಾಗಿ ನರಗುಂದದ ಪಂ. ನಾರಾಯಣಾಚಾರ್ಯ ದಂಡಾಪುರ (ಗ್ವಾಲಿಯರ್ ಘರಾನಾ) ಇವರಲ್ಲಿ ಸಂಗೀತ ಪ್ರಾರಂಭಿಸಿ ನೆಚ್ಚಿನ ಶಿಷ್ಯರಾದರು.

ನರಗುಂದದ ಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ನಾಟಕದಲ್ಲಿ ಅಭಿನಯ ಸಹ ಮಾಡಿದ್ದರು. ಒಮ್ಮೆ ಶಾಲೆಯ ರಜತ ಉತ್ಸವ ನಡೆದ ಸಂದರ್ಭದಲ್ಲಿ 'ಅಲೌಕಿಕ ರಾಜನಿಷ್ಠಾ' ಎಂಬ ನಾಟಕ ಅಭಿನಯಿಸಲ್ಪಟ್ಟಿತು. ಅದರಲ್ಲಿ ಬಸವಾರ್ಯನ ಪಾತ್ರದಲ್ಲಿ ರಾಚಪ್ಪನವರ ಪ್ರಬುದ್ಧ ಅಭಿನಯ ಮತ್ತು ಕಂಠಸಿರಿ ಆಲಿಸಿದ ಮುಂಬೈ ಕರ್ನಾಟಕದ ಅಂದಿನ ಶಿಕ್ಷಣ ಸಚಿವ ಸರ್. ಸಿದ್ದಪ್ಪ ಕಂಬಳಿಯವರು ರಾಚಪ್ಪನವರ ಕಲೆಗೆ ಮೆಚ್ಚಿ 'ಕರ್ನಾಟಕದ ಕಿನ್ನರರೆಂದು' ಉದ್ಗರಿಸಿ ಹರಸಿದರು.

ನಂತರ ಹೈಸ್ಕೂಲ್ ಶಿಕ್ಷಣಕ್ಕಾಗಿ ಗದಗಿಗೆ ಬಂದು ಮುಲ್ಕಿ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಸಂಗೀತದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಿ ಮುಂಬೈ, ಸರ್ಕಾರದ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದಿಂದ 'ಸಂಗೀತ ವಿಶಾರದ', ವಿಜಾಪುರದ ಕರ್ನಾಟಕ ಪ್ರದೇಶ ಸಂಗೀತ ಸೇವಾ ಸಮಿತಿ ಕೇಂದ್ರದಿಂದ 'ಸಂಗೀತ ಅಲಂಕಾರ' ಪದವಿ ಪಡೆದರು.

ಮುಂದೆ ಬಿಜಾಪುರಕ್ಕೆ ಬಂದು ಶಾಲೆಯೊಂದರಲ್ಲಿ ಸಂಗೀತಶಿಕ್ಷಕರಾಗಿ ಸೇವೆ ಸಲ್ಲಿಸಿ, ೧೯೫೩ ರಲ್ಲಿ ಧಾರವಾಡಕ್ಕೆ ಬಂದು ಅಂದು ಎ.ಕೆ.ಗರ್ಲ್ಸ್ ಸ್ಕೂಲ್ ಆಗಿದ್ದ ಇಂದಿನ ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕರಾಗಿ (೧೯೫೩-೧೯೭೫), ನಂತರ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ೧೯೮೨ ರಲ್ಲಿ ನಿವೃತ್ತಿ ಹೊಂದಿದರು. ಇವರ ಸೇವೆಯನ್ನು ಗಮನಿಸಿ ಕರ್ನಾಟಕ ವಿಶ್ವವಿದ್ಯಾಲಯವು ೧೯೮೨ ರಿಂದ ೧೯೮೫ ರವರೆಗೆ ಸ್ನಾತಕೋತ್ತರ ಸಂಗೀತ ವಿಭಾಗದಲ್ಲಿ ಗೌರವ ಪ್ರಾಧ್ಯಾಪಕರ ಹುದ್ದೆ ನೀಡಿತು.

ಖ್ಯಾತ ಗಾಯನದ ಜೊತೆಗೆ ಇತರ ಶೈಲಿಗಳಾದ ಧ್ರುಪದ, ಧಮಾರನ್ನು ಆಕಾಶವಾಣಿ ಪ್ರಾರಂಭವಾದ ದಿನಗಳಿಂದ ಹಾಡುತ್ತಿದ್ದರು. ಜೊತೆಗೆ ವಚನಗಳಿಗೆ, ಭಾವಗೀತೆಗಳಿಗೆ, ಭಕ್ತಿಗೀತಗಳಿಗೆ ರಾಗಸಂಯೋಜನೆಯನ್ನೂ ಮಾಡುತ್ತಿದ್ದರು. ಪಂ. ಹೂಗಾರವರು ಬಹಳ ಸರಳ ಸ್ವಭಾವದ ಸರಳ ಜೀವಿಯಾಗಿದ್ದರು. ಅವರು ಸದಾ ಕಾಲ್ನಡಿಗೆಯಲ್ಲಿ ಮನೆಮನೆಗೆ ಹೋಗಿ ಸಂಗೀತಪಾಠವನ್ನು ಹೇಳಿಕೊಡುತ್ತಿದ್ದರು. ಕರಿಟೋಪಿ, ಕನ್ನಡಕ, ಧೋತಿ ಧರಿಸುತ್ತಿದ್ದ ಅವರು ಯಾವಾಗಲೂ ಛತ್ರಿಯೊಂದನ್ನು ಜೊತೆಯಲ್ಲಿಟ್ಟುಕೊಂಡಿರುತ್ತಿದ್ದರು.

ಸರಳ ರೀತಿಯಲ್ಲಿ ಸಂಗೀತ ಕಲಿಸುವುದು ಇವರ ಒಂದು ವೈಶಿಷ್ಟ್ಯವಾಗಿತ್ತು. ಹೀಗಾಗಿ ಶಿಷ್ಯರಿಗೆಲ್ಲ ಇವರು ಒಬ್ಬ ಆದರ್ಶ ಹಾಗೂ ನೆಚ್ಚಿನ ಶಿಕ್ಷಕರಾಗಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಜೀವನದಲ್ಲಿ ಇವರು ಯಾವುದೇ ಹುದ್ದೆ, ಪ್ರಶಸ್ತಿ, ಹಣದ ಫಲಾಪೇಕ್ಷೆ ಪಟ್ಟವರಲ್ಲ. ಎಷ್ಟೇ ಅಡೆತಡೆಗಳು ಬಂದರೂ ಸಹ ಇವರು ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಕಷ್ಟಗಳನ್ನು ಬಹಳ ಸಂತೋಷದಿಂದ ಎದುರಿಸಿ ಅದರಲ್ಲೇ ಸುಖಪಟ್ಟವರು. ಇವರದು ಶಾಂತ ಸ್ವಭಾವ. ಇದೇ ಸ್ವಭಾವ ಅವರಿಗೆ ಒಂದು ವರದಾನವಾಗಿತ್ತು. ಯಾವುದೇ ಸಂದರ್ಭದಲ್ಲೂ ಇವರು ತಮ್ಮ ತಾಳ್ಮೆ ಹಾಗೂ ಶಾಂತತೆಯನ್ನು ಕಳೆದುಕೊಳ್ಳದೇ ಪರಿಸ್ಥಿತಿಯನ್ನು ಎದುರಿಸುತ್ತಿದ್ದರು. ಹಾಗೆಯೆ ಇವರು ಮಿತಭಾಷಿಯಾಗಿದ್ದರು. ಇವರ ಈ ಎರಡು ವಿಶೇಷವಾದ ಸ್ವಭಾವಗಳಿಗೆ ಪಂ. ಮಲ್ಲಿಕಾರ್ಜುನ ಮನಸೂರ, ಪಂ. ಬಸವರಾಜ ರಾಜಗುರು, ವಿದುಷಿ ಡಾ. ಗಂಗೂಬಾಯಿ ಹಾನಗಲ್‌ರಂತಹ ಮಹಾ ಸಂಗೀತಗಾರರ ಪ್ರೀತಿ ಹಾಗೂ ಗೌರವಕ್ಕೆ ಪಾತ್ರರಾಗಿದ್ದರು.

೧೯೫೦ ರಲ್ಲಿ ಆಕಾಶವಾಣಿ ಸ್ಥಾಪಿತ ದಿನಗಳಿಂದ ಹಿಡಿದು ಕೊನೆಯವರೆಗೂ ಆಕಾಶವಾಣಿಯಲ್ಲಿ ಕಾರ್ಯಕ್ರಮ ನೀಡಿದರು ಹಾಗೂ ಆಕಾಶವಾಣಿ, ಧಾರವಾಡ ಕೇಂದ್ರ ಇವರ ಸಂಗೀತಪಾಠದ ಕಾರ್ಯಕ್ರಮವನ್ನು ಬಿತ್ತರಿಸಿತು. ಖ್ಯಾತ ಗಾಯಕ ಪಂ.

ಗುರುರಾವ್ ದೇಶಪಾಂಡೆಯವರೊಂದಿಗೆ ಆಕಾಶವಾಣಿ ಧ್ವನಿಪರೀಕ್ಷಾ ಕಮೀಟಿ ಸದಸ್ಯರಾಗಿ ಕಾರ್ಯವನ್ನೂ ನಿರ್ವಹಿಸಿದ್ದಾರೆ. ಅನೇಕ ರೂಪಕಗಳಿಗೆ ಸಂಗೀತಸಂಯೋಜನೆ ಕೂಡಾ ಮಾಡಿದ್ದಾರೆ. ಬೆಂಗಳೂರಿನ ಸಂಗೀತ ಅಕಾಡೆಮಿಯ ಸಿಲೇಬಸ್ (ಪಠ್ಯಕ್ರಮ) ಕಮೀಟಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸಂಗೀತದಲ್ಲಿ ಲೇಖನಗಳನ್ನು ಹಾಗೂ 'ಸಂಗೀತ ಸಂಬೋಧಿನಿ' ಎಂಬ ಪುಸ್ತಕವನ್ನೂ ಬರೆದಿದ್ದಾರೆ.

ಪಂ. ಹೂಗಾರವರಿಗೆ ಅನೇಕ ಶಿಷ್ಯಂದಿರಿದ್ದು ಸಂಗೀತಕ್ಷೇತ್ರದಲ್ಲಿ ಹೆಸರು ಪಡೆದವರಾಗಿದ್ದಾರೆ. ಗೀತಾ ಜಾವಡೇಕರ (ಮುಂಬೈ), ಜಯಶ್ರೀ ರಂಗನಾಥ (ಬೆಂಗಳೂರು), ಪ್ರೊ. ಭಾರತಿ ಮೇಸ್ತಾ (ಹೊನ್ನಾವರ), ಪ್ರೊ. ಸಿದ್ಧರಾಮಯ್ಯ ಮಠಪತಿ (ಬಾಗಲಕೋಟೆ), ಸಾಧನಾ ಪಂಡಿತ ಮುಂತಾದವರು ಈ ಕ್ಷೇತ್ರದಲ್ಲಿ ಖ್ಯಾತನಾಮರಾಗಿದ್ದಾರೆ.

ಪ್ರಶಸ್ತಿಗಿಂತಲೂ ಅನೇಕ ಜನ ಶಿಷ್ಯಂದಿರಲ್ಲಿ, ಕಲಾಭಿಮಾನಿಗಳಲ್ಲಿ ಒಬ್ಬ ಸರಳ ಸಜ್ಜನ ಗಾಯಕರಾಗಿ ಇಂದಿಗೂ ಪ್ರಾತಃಸ್ಮರಣೀಯರಾಗಿ, ನವೆಂಬರ್ ೧೪, ೧೯೯೦ ರಂದು ಸ್ವರ್ಗಸ್ಥರಾದರು.

ಎಲೆಯ ಮರೆಯಲ್ಲಿರುವ ಕಾಯಿಯ ಹಾಗೆ ಇವರು ತಮ್ಮ ಜೀವನವನ್ನು ನಡೆಸಿದವರು. ಹೊರಗಿನ ಪ್ರಪಂಚದಲ್ಲಿ ಹೆಸರುವಾಸಿಯಾಗದಿದ್ದರೂ ಸಹ ಇವರು ಇಂದಿಗೂ ಅವರ ಶಿಷ್ಯಂದಿರ ನೆಚ್ಚಿನ ಗುರು. ಹೂಗಾರ ಮಾಸ್ತರ ಎಂದೇ ಖ್ಯಾತರಾದ ಈ ಮಹಾಚೇತನಕ್ಕೆ, ಶಿಷ್ಯಂದಿರು ಹಾಗೂ ಅಭಿಮಾನಿಬಳಗದಿಂದ ಪ್ರತಿವರ್ಷ ನವೆಂಬರ್ ೧೪ರಂದು ಇವರ ಪುಣ್ಯಸ್ಮರಣೆ ಕಾರ್ಯಕ್ರಮ ಜರಗುತ್ತಲಿದೆ.

■ ■ ■



ಪಂ. ಮಾಧವ ಗುಡಿ

# ಗುರುವಿನ ಧ್ವನಿಯ ನಾದಸ್ವರ
# ಪಂ. ಮಾಧವ ಗುಡಿ
# (೧೯೪೨-೨೦೧೧)

● ರವೀಂದ್ರ ಕವಶೇಕರ

೧೯೫೨ ರಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘದ ಕಟ್ಟಡದ ಮೇಲೆ ನಡೆದ ಅದೊಂದು ಸುಂದರ ಸಂಗೀತ ಸಂಜೆ. ಮೂವತ್ತರ ಹರೆಯದ ಭೀಮಕಾಯದ ತರುಣ ಭೀಮಸೇನ ಜೋಶಿ ಗಾಯಕಿಯಲ್ಲಿ ಗುಡುಗು ಸಿಡಿಲುಗಳ ಮಧ್ಯೆ ಮೇಘರಾಗದ ಗರ್ಜನೆ, ಆಲಿಕಲ್ಲಿನ ಮಳೆಯ ರೂಪದಲ್ಲಿ ಸ್ವರ-ಶಬ್ದಗಳ ಸುಸ್ವರ ನಾದದ ಝೇಂಕಾರ, ರಸ-ಭಾವ-ತರಂಗಗಳೊಂದಿಗೆ ಹೊರಸೂಸಿದ ಮೇಘನಾದದ ಅಲೆಗಳ ಅಬ್ಬರ.

ಅದೇ ಅಟ್ಟದ ಒಂದು ಮೂಲೆಯಲ್ಲಿ ಸುಮಾರು ಹತ್ತು ವರ್ಷದ ಪುಟ್ಟಪೋರನ ಮನವು ಮೇಘನಾದದ ಗರ್ಜನೆಗೆ ಬೆರಗಾದ ನವಿಲಿನ ಮರಿಯಂತೆ ನಿಬ್ಬೆರಗಾಗಿದೆ. ಝೇಂಕಾರಗೊಂಡ ಸುಸ್ವರ ನಾದದ ಅಲೆಗಳ ಆನಂದಧಾರೆಯಲ್ಲಿ ತೊಯ್ದು, ರಸ-ಭಾವ-ತರಂಗಗಳೊಂದಿಗೆ ಹರಿದು ಬಂದ ಸ್ವರಗಳ ಅಬ್ಬರಕ್ಕೆ ಮನವು ಸಮ್ಮೋಹಿತಗೊಂಡಿದೆ. ಆಗ ಸಂಗೀತಗಂಗೆಯಲ್ಲಿ ಸ್ನಾನ ಮಾಡಿ, ಅದರಲ್ಲಿ ಮಿಂದು, ಕರಗಿ ಹೋಗಬೇಕು ಎಂಬ ಭಕ್ತ ಪ್ರಹ್ಲಾದನ ಸಾತ್ವಿಕ ಛಲವೊಂದು ಮೊಳಕೆ ಒಡೆಯುತ್ತದೆ, ಆ ಮುಗ್ಧ ಬಾಲಕನಲ್ಲಿ. ನಂತರ ಗುರುಕೃಪೆ ಧಾರೆಯಾಗಿ ಪ್ರವಹಿಸಿ ಹಿಂದುಸ್ತಾನಿ ಸಂಗೀತಕ್ಷೇತ್ರದಲ್ಲಿ ಗಮನಾರ್ಹ ಹೆಸರು ಮಾಡಿದ ಆ ಮುಗ್ಧ ಬಾಲಕ ಮಾಧವ ಗುಡಿ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಲೋಕದಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಕಿರಾನಾ ಘರಾಣೆಯ ಮುಕುಟಪ್ರಾಯ ಸ್ವರಭಾಸ್ಕರ ದಿ. ಪಂ. ಭೀಮಸೇನ ಜೋಶಿ ಅವರ ಪರಮ ಶಿಷ್ಯ ಪಂ. ಮಾಧವ ಗುಡಿ ಅವರು. ಮಾಧವ ಗುಡಿ ಅವರು ಪಂ. ಭೀಮಸೇನ ಜೋಶಿ ಅವರ ಬಲಗೈ. ಸತತ ೨೬ ವರ್ಷಗಳ ಕಾಲ ಗುರುವಿನ ಧ್ವನಿಗೆ ಪ್ರತಿಧ್ವನಿಯಾಗಿ, ಕಂಚಿನ ಕಂಠದ ನಾದಸ್ವರವಾಗಿ ಹೊರಹೊಮ್ಮಿದ ಶಿಷ್ಯೋತ್ತಮ ಪಂ. ಮಾಧವ ಗುಡಿ ಅವರು.

೧೯೪೨ ರಲ್ಲಿ ಜನಿಸಿದ ಪಂ. ಮಾಧವ ಗುಡಿ ಅವರ ಹುಟ್ಟೂರು ಬಾಗಲಕೋಟೆ ಜಿಲ್ಲೆಯ ಜಾಲಿಹಾಳ ಗ್ರಾಮ. ಅವರದು ಕೀರ್ತನಕಾರರ ಮನೆತನವು. ನಂತರದ ದಿನಗಳಲ್ಲಿ ವಿದ್ಯಾನಗರಿ ಧಾರವಾಡಕ್ಕೆ ಸ್ಥಳಾಂತರಗೊಂಡಿತು. ಅಜ್ಜ ಶೇಷಾಚಾರ್ಯ

ಹಾಗೂ ತಂದೆ ಗುರಾಚಾರ್ಯ ಗುಡಿ ಖ್ಯಾತ ಕೀರ್ತನಕಾರರು. ವೇದ-ಪುರಾಣಪಾರಂಗತರು. ತಾಯಿ ಸುಭದ್ರಾಬಾಯಿ ಸಂಗೀತದ ಪರಮಭಕ್ತೆ. ಸಹಜವಾಗಿ ಮಾಧವನಿಗೆ ಬಾಲ್ಯದಿಂದಲೇ ಸಂಗೀತದತ್ತ ಒಲವು. ಮನೆಯಲ್ಲಿ ದಾಸರ ಪದಗಳ ನಿನಾದ ನಿರಂತರವಾಗಿ ಹರಿಯುತ್ತಿತ್ತು. ಪಂ. ಭೀಮಸೇನ ಜೋಶಿ ಅವರ ಕಂಠಸಿರಿಯಿಂದ ಮೊಳಗಿದ ದಾಸರ ಪದಗಳು ಮಾಧವನನ್ನು ಪ್ರಭಾವಿತಗೊಳಿಸಿದವು. ಅಲ್ಲದೆ ಅವರ ಶಾಸ್ತ್ರೀಯ ಸಂಗೀತಕ್ಕೂ ಮಾರುಹೋದ ಬಾಲಕ ಮಾಧವ, ಸಂಗೀತವಿದ್ಯೆಯನ್ನು ಕಲಿತರೆ ಅದು ಪಂ. ಭೀಮಸೇನ ಜೋಶಿ ಅವರಲ್ಲಿಯೇ ಎಂದು ದೃಢ ಸಂಕಲ್ಪ ಕೈಗೊಂಡ.

೧೯೫೨ ರಲ್ಲಿ ಪಂ. ಭೀಮಸೇನ ಜೋಶಿ ಅವರದು ಧಾರವಾಡದಲ್ಲಿ ವಾಸ್ತವ್ಯ. ಖ್ಯಾತ ನಾಟಕಕಾರ ಬೇಂದ್ರೆ ಲಕ್ಷ್ಮಣರಾವ್ ಹಾಗೂ ಜಡಭರತ (ಜಿ.ಬಿ. ಜೋಶಿ) ಅವರ ರಂಗನಾಟಕಗಳ ಪ್ರಯೋಗ ನಡೆದಿದ್ದ ದಿನಗಳವು. ಬಾಲಕ ಮಾಧವನ ದೃಢ ಸಂಕಲ್ಪವು ಸಾತ್ವಿಕ ಛಲವಾಗಿ ಹೊರಹೊಮ್ಮಿತ್ತು. ಮಗನ ಸಂಗೀತ ಕಲಿಯುವಿಕೆಯ ಛಲ ತಂದೆ ಗುರಾಚಾರ್ಯರ ಗಮನಕ್ಕೆ ಬಂದಾಗ ಮಾಧವನನ್ನು ಬೇಂದ್ರೆ ಲಕ್ಷ್ಮಣರಾವ್ ಅವರತ್ತ ಕರೆದುಕೊಂಡು ಹೋದರು. ಲಕ್ಷ್ಮಣರಾಯರು ಬಾಲಕ ಮಾಧವನ ಸುಸ್ವರ ಕಂಠವನ್ನು ಮೆಚ್ಚಿಕೊಳ್ಳುತ್ತ, ಭೀಮಸೇನ ಜೋಶಿ ಅವರಿದ್ದಲ್ಲಿಗೆ ಕರೆದೊಯ್ದು, ಬಾಲಕ ತಳೆದಿದ್ದ ಸಂಗತಿಯ ವಿವರಣೆ ನೀಡಿದರು. ಕಂಠಪರೀಕ್ಷೆ ನಡೆಯಿತು. ಹುಡುಗನ ಕಂಠ ಛಲೋ ಅದ, ಮೊದಲು ಮ್ಯಾಟ್ರಿಕ್ ಮುಗಿಸಲಿ, ಮುಂದೆ ನೋಡೋಣ ಎಂದು ಹೇಳುವ ಮೂಲಕ ಸಂಗೀತಪಾಠದ ಆಶ್ವಾಸನೆ ಭೀಮಸೇನ ಜೋಶಿ ಅವರಿಂದ ಸಿಕ್ಕಿತು.

ಲಕ್ಷ್ಮಣರಾಯರಿಗೂ ಭೀಮಸೇನ ಜೋಶಿ ಅವರ ಮಾತು ಸೂಕ್ತವೆನಿಸಿತು. ಬಾಲಕ ಮಾಧವನ ಶಾಲಾಭ್ಯಾಸದೊಂದಿಗೆ ಸಂಗೀತಾಭ್ಯಾಸವೂ ಪ್ರಾರಂಭಗೊಂಡಿತು. ಬಾಲಕ ಮಾಧವನಿಗೆ ಸಪ್ತಸ್ವರಗಳ ಶ್ರೀಕಾರ ಹಾಕಿದವರು ಶುಕ್ರವಾರಪೇಟೆಯ ಸಂಗೀತಗಾರರಾದ ಪಂ. ನಾಗೇಶರಾವ್ ದೇಶಪಾಂಡೆ ಅವರು. ಅವರಿಂದ ಹೇಳಿಸಿಕೊಂಡ ಪಾಠಗಳನ್ನು ಚಿತ್ತದಿಂದ ಆಲಿಸುತ್ತ, ಮನನ ಮಾಡಿಕೊಂಡು ಲಕ್ಷ್ಮಣರಾಯರು ಹಾಗೂ ಚಿಮ್ಮಲಗಿ ಅವರೆದುರು ಪ್ರದರ್ಶಿಸಿ, ತನ್ನ ಸಂಗೀತದ ಪ್ರಗತಿಯ ಪ್ರದರ್ಶನಗೈಯ್ಯುತ್ತಿದ್ದ. ನಂತರ ಸ್ವಲ್ಪ ದಿನಗಳವರೆಗೆ ಪಂ. ಬಸವರಾಜ ರಾಜಗುರುಗಳಲ್ಲಿ ಅಭ್ಯಾಸ ಮಾಡುತ್ತಿದ್ದ. ಮನೆಯಲ್ಲಿ ದಾಸರ ಪದಗಳ ನಿನಾದ ಸದಾ ಹರಿಯುತ್ತಿತ್ತು. ಹೀಗಾಗಿ ಮಾಧವನಿಗೆ ಸಾರ್ವಜನಿಕ ಮಂಚಪ್ರದರ್ಶನ ನೀಡಬೇಕೆಂಬ ಅತಿಯಾದ ಹಂಬಲ. ಆದರೆ ಒಂದೆರಡು ಮಂಚಪ್ರದರ್ಶನಗಳು ವಿಫಲಗೊಂಡವು.

೧೯೬೨ ರಲ್ಲಿ ಉಸ್ತಾದ್ ಅಬ್ದುಲ್‌ಕರೀಮಖಾನ್ ಸಂಸ್ಮರಣೆಯಲ್ಲಿ ಅಖಂಡ ರಾತ್ರಿ ಸಂಗೀತ ಸಮಾರೋಹವನ್ನು ಹುಬ್ಬಳ್ಳಿಯಲ್ಲಿ ಏರ್ಪಡಿಸಿದ್ದ ಸಂದರ್ಭ, ಅಂದು ಕಿರಾನಾ ಘರಾಣೆಯ ದಿಗ್ಗಜ ಸಂಗೀತಗಾರರು ತಮ್ಮ ಕಛೇರಿಯನ್ನು ಮುಗಿಸಿದರು. ಆಗ ಸಮಯ ನಸುಕಿನ ೪ ಗಂಟೆ. ತಮ್ಮ ಸಾಥಿ ಕಲಾವಿದರೊಂದಿಗೆ ವೇದಿಕೆಗೆ ಆಗಮಿಸಿದ

ಹರೆಯದ ಬಾಲಕ ಮಾಧವ ತೋಡಿರಾಗವನ್ನು ಪ್ರಸ್ತುತಪಡಿಸಿದನು. ಹಾಡುವಾಗ ಅವನ ಅಂಗ ಭಂಗಿ, ಸ್ವರಾಲಾಪನೆಯ ಪದ್ಧತಿ, ತಾನ್ ಪ್ರಕಾರ ಇತ್ಯಾದಿಗಳೆಲ್ಲ ಪಂ. ಭೀಮಸೇನ ಜೋಶಿ ಅವರ ಗಾಯಕಿಯನ್ನು ನೆನಪಿಸಿತು. ಆಗ ಪಂ. ಶಂಕರರಾವ್ ಹೊಂಬಳಕರ ಹಾಗೂ ಅವರ ಶಿಷ್ಯ ಕೃಷ್ಣಾಜಿ ಕುರ್ತಕೋಟಿ ಅವರು ವಿಚಾರಿಸಿದರು. ಆಗ "ನಾಗೇಶರಾಯರ ಶಿಷ್ಯನೂ ನಂತರ ಸ್ವಲ್ಪ ಕಾಲ ಪಂ. ರಾಜಗುರುಗಳಲ್ಲಿ ಕಲಿತು, ಅವರ ಸಲಹೆಯಂತೆ ನಿನ್ನ ಧ್ವನಿ ಹಾಗೂ ಗಾಯಕಿಯು ಭೀಮಸೇನ ಜೋಶಿ ಅವರ ಗಾಯನಕ್ಕೆ ಹೊಂದುವುದರಿಂದ ನೀನು ಪುಣೆಗೆ ಹೋಗಿ ಶಿಷ್ಯತ್ವ ಸ್ವೀಕರಿಸು ಎಂದು ಹೇಳಿದ್ದಾರೆ" ಎಂಬುದು ತಿಳಿದು ಬಂತು. ಪಂ. ರಾಜಗುರುಗಳು ನೀಡಿದ ಹಿತವಚನದಿಂದ ಮಾಧವನ ಮನದಲ್ಲಿ ಗಟ್ಟಿಯಾದ ನಿರ್ಧಾರ ಬೇರೂರಿತ್ತು. ಅದೇನೆಂದರೆ ಸಂಗೀತಾಭ್ಯಾಸ ಮಾಡಿದರೆ ಸ್ವರಭಾಸ್ಕರ ಪಂ. ಭೀಮಸೇನ ಜೋಶಿ ಅವರಲ್ಲಿಯೇ ಎಂಬುದು. ಅದರಂತೆ ತಂದೆ-ತಾಯಿಗಳಲ್ಲಿ, ಬೇಂದ್ರೆ ಲಕ್ಷ್ಮಣರಾಯರಲ್ಲಿ ಅನುಮತಿ ಕೇಳಿದ.

ಅದು ೧೯೬೨-೬೩ರ ಸಮಯ. ಮ್ಯಾಟ್ರಿಕ್ ಪರೀಕ್ಷೆಯು ಮುಗಿಯುವದನ್ನೇ ಕಾಯುತ್ತಿದ್ದ ಮಾಧವ ಪರೀಕ್ಷೆಯಲ್ಲಿ ತೇರ್ಗಡೆಯಾದ. ಸಂಗೀತ ವಿದ್ಯಾರ್ಜನೆಗಾಗಿ ಬೇಂದ್ರೆ ಲಕ್ಷ್ಮಣರಾಯರಿಂದ ಪತ್ರ ಪಡೆದುಕೊಂಡು, ತಂದೆ ತಾಯಿಗಳ ಅನುಮತಿ-ಆಶೀರ್ವಾದಗಳೊಂದಿಗೆ ಪುಣೆಯ ರೈಲನ್ನು ಏರಿಯೇ ಬಿಟ್ಟ. ನಂತರ ಗುರು ಪಂ. ಭೀಮಸೇನ ಜೋಶಿ ಅವರಲ್ಲಿ ಕಲಿಯುವ ದಿನಗಳು ಕೂಡಿ ಬಂದವು ಎಂದು ಅಂತರಂಗದಲ್ಲಿಯೇ ಆನಂದಭರಿತನಾದ. ಪುಣೆಯ ಪ್ರವೇಶವೂ ಆಯಿತು. ಗುರುಗಳ ದರ್ಶನವೂ ಆಯಿತು. ಆದರೆ ಅಂದುಕೊಂಡಷ್ಟು ಸುಲಭವಾಗಿರಲಿಲ್ಲ.

ಪುಣೆಗೆ ಹೋದ ಪ್ರಥಮ ವರ್ಷ ಮಾಧವನಿಗೆ ದೊರೆತದ್ದು ಗುರುಗಳ ಸಂಗೀತದ ಶ್ರವಣ ಮಾತ್ರ, ವಾರಾನ್ನದ ಮೇಲೆ ತನ್ನ ಉದರ ಭರಿಸಿಕೊಳ್ಳುತ್ತಿದ್ದ. ಅದೂ ಮೂರು ವರ್ಷಗಳವರೆಗೆ. ಇಷ್ಟೆಲ್ಲ ಕಷ್ಟಕರ ಪರಿಸರದಲ್ಲಿಯೂ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಸೂಕ್ತಿಯಲ್ಲಿ ಶ್ರದ್ಧೆಯನ್ನಿರಿಸಿ ಗುರುವಿನ ಅವಿರತ ಸೇವೆಗೈದ. ಅನೇಕ ವರ್ಷಗಳವರೆಗೆ ಗುರುಗಳ ಸಂಗೀತ ಶ್ರವಣ, ಗುರುಸೇವೆ, ಗುರುಪತ್ನಿ ಸೇವೆ ಮಾಡಿದ. ಶಿಷ್ಯನ ಅಪಾರ ಸೇವೆಗೆ ಮೆಚ್ಚಿ ಪಂ. ಭೀಮಸೇನ ಜೋಶಿ ಅವರು ಮಾಧವನ ಸಂಗೀತ ಕಲಿಕೆಗೆ ಶ್ರೀಕಾರ ಹಾಕಿ, ಪುಣೆಯ ತಮ್ಮ ಗೃಹದಲ್ಲಿಟ್ಟುಕೊಂಡು ಮಾಧವ ಗುಡಿ ಅವರಿಗೆ ತಮ್ಮ ಬತ್ತಳಿಕೆಯಲ್ಲಿದ್ದ ಸಂಗೀತವಿದ್ಯೆಯನ್ನು ಧಾರೆಯೆರೆದರು.

ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ನಾಲ್ಕು ಗಂಟೆಗಳ ಕಾಲ ಅವ್ಯಾಹತವಾಗಿ ಸಂಗೀತ ಪಾಠ ನಡೆಯುತ್ತಿತ್ತು. ಗುರು ಭೀಮಸೇನ ಜೋಶಿ ಅವರು ಒಂದು ರಾಗವನ್ನು ಅಭ್ಯಾಸಕ್ಕೆ ಕೈಗೆತ್ತಿಕೊಂಡರೆ ಅದು ಶಿಷ್ಯನ ಮಸ್ತಕದಲ್ಲಿ ಇಳಿಯುವವರೆಗೂ ಬಿಡುತ್ತಿರಲಿಲ್ಲ. ಅದಕ್ಕೆ ಸಮಯದ ಮಿತಿ ಇರುತ್ತಿರಲಿಲ್ಲ. ಪ್ರತಿ ರಾಗಗಳ ಕುರಿತು ಆಳವಾದ ಅವಲೋಕನ ನಡೆಯುತ್ತಿತ್ತು. ಬೆಳಗಿನ ಸಮಯದಲ್ಲಿ ಗುರುಗಳಿಂದ ತೋಡಿ ರಾಗದ ಪಾಠವಾದರೆ

ಅಪರಾಹ್ನದ ಸಮಯದಲ್ಲಿ ಮುಲ್ತಾನಿ ರಾಗದ ರಿಯಾಜ್. ಇವೆರಡು ರಾಗಗಳ ಪಾಠ ನಡೆದದ್ದು ನಿರಂತರ ಐದು ವರ್ಷಗಳವರೆಗೆ. ನಂತರದ ದಿನಗಳಲ್ಲಿ ಪೂರಿಯಾ ರಾಗದ ಅಭ್ಯಾಸ. ಅಲ್ಲದೆ ಪಂ. ಭೀಮಸೇನ ಜೋಶಿ ಅವರು ತಮ್ಮ ಪತ್ನಿ, ವತ್ಸಲಾತಾಯಿ ಜೋಶಿ ಅವರಿಗೆ ಹೇಳಿಕೊಡುವ ಪಾಠಗಳನ್ನೂ ಕೂಡ ಮಾಧವನಿಗೆ ಧಾರೆಯೆರೆದರು.

ಪಂ. ಭೀಮಸೇನ ಜೋಶಿ ಅವರಿಗೆ ಶಿಷ್ಯ ಮಾಧವನ ಮೇಲೆ ಅಪಾರ ಪ್ರೀತಿ. ತಮ್ಮ ಗಾಯಕಿಯ ಎಲ್ಲ ಲಕ್ಷಣಗಳನ್ನೂ ಮನನ ಮಾಡಿಕೊಳ್ಳಲೆಂದು ಶಿಷ್ಯನನ್ನು ತಮ್ಮ ನೂರಾರು ಸಂಗೀತ ಕಛೇರಿಗಳಿಗೆ ಕರೆದೊಯ್ಯುತ್ತಿದ್ದರು. ಹೀಗೆ ಸುಮಾರು ೨೫ ವರ್ಷಗಳ ಕಾಲ ಮಾಧವ ಗುಡಿ ಅವರು ಗುರುಗಳ ಪದತಲದಲ್ಲಿ ಕುಳಿತು ಇಂಥ ಉನ್ನತ ಮಟ್ಟದ ಪಾಠಗಳ ಸಂಗೀತಾಭ್ಯಾಸಗೈದರು.

೧೯೭೫ರ ಸಮಯವದು. ಪಂ. ಭೀಮಸೇನ ಜೋಶಿ ಅವರು ಕಾರ್ಯಕ್ರಮ ನೀಡುವದಕ್ಕಾಗಿ ಧಾರವಾಡಕ್ಕೆ ಆಗಮಿಸಿದ್ದರು. ಅದೇ ಸಮಯದಲ್ಲಿ ಗಂಡಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು ಧಾರವಾಡದ ಮಲ್ಲಸಜ್ಜನ ಹಾಲ್‌ನಲ್ಲಿ. ಸಮಾರಂಭದ ಅಧ್ಯಕ್ಷತೆ ವಹಿಸಿದವರು ವರಕವಿ ದ.ರಾ. ಬೇಂದ್ರೆ ಅವರು. ಮಾಧವ ಗುಡಿ ಅವರು ತಮ್ಮ ಗಳಿಕೆಯಿಂದ ಕೂಡಿಟ್ಟ ಹಣಸಂಗ್ರಹವನ್ನು ಗುರುದಕ್ಷಿಣೆಯ ರೂಪದಲ್ಲಿ ಕಾಣಿಕೆಯಾಗಿ ಅರ್ಪಿಸಿ ಭಕ್ತಿಭಾವ ಮೆರೆದರು.

ಒಮ್ಮೆ ಗಂಡಾ ಕಟ್ಟಿಕೊಂಡ ನಂತರ ಮಾಧವ ಗುಡಿ ಅವರು ತಾನ್‌ಪುರಾ ಸಾಥಿಯಾಗಿ, ದನಿಗೂಡಿಸುತ್ತ ಗುರುಗಳ ಪ್ರತಿಯೊಂದು ಸಂಗೀತಕಛೇರಿಯಲ್ಲೂ ತಪ್ಪದೇ ಹಾಜರ್ ಇರುವುದು ಅಭ್ಯಾಸವಾಯಿತು. ಮಾಧವ ಗುಡಿ ಅವರಿಗೆ ಇದು ಪ್ರಾಯೋಗಿಕ ಸಂಗೀತಶಿಕ್ಷಣವಾಗಿ ಪರಿಣಮಿಸಿತು. ಹೀಗೆ ಅವರ ಸಾಥಿದಾರನಾಗಿ ಫ್ರಾನ್ಸ್, ಅಮೆರಿಕಾಗಳ ಪ್ರವಾಸಗೈದರು.

ಓರ್ವ ಪ್ರಬುದ್ಧ ಕಲಾವಿದನಾಗಿ ಹೊರಹೊಮ್ಮಿದ ಮಾಧವ ಗುಡಿ ಅವರ ಗಾಯನ ಕೇಳಿದವರಿಗೆ ಅನಿಸಿದ್ದು, ನಿಜವಾಗಿಯೂ ಮಾಧವ ಗುಡಿ ಅವರ ಮೇಲೆ ಸಂಪೂರ್ಣವಾಗಿ ಗುರುಗಳ ಕೃಪೆ ಆಗಿದೆ ಎಂದು. ಏಕೆಂದರೆ ಪಂ. ಭೀಮಸೇನ ಜೋಶಿ ಅವರ ಶಾಸ್ತ್ರೀಯ ಸಂಗೀತದಲ್ಲಿ ಮೂಡಿಬಂದ ಪೂರಿಯಾ, ಮಿಯಾ ಕಿ ಮಲ್ಹಾರ, ಆಸಾವರಿ ತೋಡಿ, ದರಬಾರಿ ಕಾನ್ಹಡಾ, ಶುದ್ಧ ಕಲ್ಯಾಣಗಳಂಥ ವಿವಿಧ ರಾಗಗಳ ಗುಚ್ಛ ಪಂ. ಮಾಧವ ಗುಡಿಯವರ ಕಂಠದಿಂದ ಹರಿದುಬಂದಾಗ, ಅಷ್ಟೇ ಮಾಯಾಮೋಡಿಯ ರಾಗವೈಭವ. ಅದರಂತೆ ಸಂತವಾಣಿ ಹಾಗೂ ದಾಸವಾಣಿಯಲ್ಲೂ ಗುರು ಪಂ. ಭೀಮಸೇನ ಜೋಶಿ ಅವರ ಧ್ವನಿಯ ಪ್ರತಿಧ್ವನಿ. ಕಿರಾನಾ ಘರಾಣೆ ಪದ್ಧತಿಯ ರಾಗಾಲಾಪ, ರಾಗವಿಸ್ತಾರ, ವೈವಿಧ್ಯಮಯ ತಾನ್‌ಗಳ ಪ್ರಸ್ತುತಿ, ಭಾವಪೂರ್ಣ ಸ್ವರಗಳ ಜೋಡಣೆ, ಕಲಾತ್ಮಕ ಸರಗಮ್, ತಮ್ಮ ಉಸಿರಿನ ಮೇಲೆ ಅದ್ಭುತ ಹಿಡಿತ–ಇವು ಪಂ. ಮಾಧವ ಗುಡಿಯವರ ಗಾಯಕಿಯ ವಿಶೇಷಗಳು.

ಸುಮಾರು ೨೫ ವರ್ಷಗಳವರೆಗೆ ಗುರುಗಳ ಪ್ರತಿಯೊಂದು ಸಂಗೀತ ಕಛೇರಿಯಲ್ಲಿ ತಾನ್‌ಪುರಾ ಸಾಥಿಯಾಗಿ ಧ್ವನಿಗೂಡಿಸುತ್ತ ಹಾಜರ್ ಇರುತ್ತಿದ್ದ ಮಾಧವ ಗುಡಿಯವರಿಗೆ ದೇಶದ ಅನೇಕ ಸಂಗೀತಗಾರರು, ವಿದ್ವಾಂಸರು, ಗಾಯಕರು, ವಾದಕರು, ಕಲಾರಸಿಕರ ನಿಕಟ ಸಂಪರ್ಕ ಬೆಳೆಯಿತು. ಅವರೆಲ್ಲರೂ ಮಾಧವ ಗುಡಿ ಅವರನ್ನು ಆತ್ಮೀಯತೆಯಿಂದ ನೋಡುತ್ತಿದ್ದರು. ವ್ಯಾವಹಾರಿಕ ಗಾಯಕನಾಗಿದ್ದರೆ ಇವೆಲ್ಲವುಗಳನ್ನು ಬಳಸಿಕೊಂಡು ತಮ್ಮದೇ ಸಂಗೀತ ಕಛೇರಿಯನ್ನು ನೀಡಬಹುದಾಗಿತ್ತು. ಸಂಗೀತ ಸಿದ್ಧಿಸಿದ್ದರೂ ಪ್ರಸಿದ್ಧಿಯನ್ನು ಬಯಸದ ಮಾಧವ ಗುಡಿ ಅವರು ಓರ್ವ ವಿಧೇಯ ಶಿಷ್ಯನಾಗಿಯೇ ಉಳಿದರು.

ಅವರ ಆಂಗ್ಲ ಸಂದರ್ಶನವೊಂದರಲ್ಲಿ, ನಿಮ್ಮ ಸಂಗೀತಕೃಷಿಯು ಧಾರವಾಡದಿಂದ ಪುಣೆಗೆ ಸ್ಥಳಾಂತರಗೊಂಡಿದ್ದೇಕೆ? ಎಂಬ ಪ್ರಶ್ನೆಗೆ ಅವರು ನೀಡಿದ ಉತ್ತರ ಹೀಗಿತ್ತು : My work in Dharwad is over. I've sung all over Karnataka, Maharashtra, all over India. It's the same. I have faith in god, my guru. I haven't gone there out of any ill feeling, or because I feel our government hasn't done enough for me. In Bangalore I can give tuitions and make money. That's no use. When people all over India, even in the villages, like one's music, that certificate is enough.

ಲಂಡನ್, ಸಿಂಗಾಪುರ್, ಪುಣೆ, ಮುಂಬೈ, ಮಂಗಳೂರು, ಬೆಂಗಳೂರು, ಧಾರವಾಡ, ಕುಂದಗೋಳ, ಹುಬ್ಬಳ್ಳಿ, ಹೀಗೆ ದೇಶ-ವಿದೇಶಗಳಲ್ಲಿ ತಮ್ಮ ಸ್ವತಂತ್ರ ಗಾಯನದ ಸುಧೆಯನ್ನು ಹರಿಸಿರುವ ಕೀರ್ತಿ ಪಂ. ಮಾಧವ ಗುಡಿ ಅವರದು. ಆಕಾಶವಾಣಿ-ದೂರದರ್ಶನಗಳ 'ಎ' ಗ್ರೇಡ್ ಕಲಾವಿದರಾಗಿದ್ದ ಪಂ. ಮಾಧವ ಗುಡಿ ಅವರಿಗೆ ಅನೇಕ ಬಿರುದು-ಬಾವಲಿಗಳು ಅರಸಿಕೊಂಡು ಬಂದಿವೆ. ಅವುಗಳಲ್ಲಿ ಕರ್ನಾಟಕ ಸರ್ಕಾರದ 'ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ', 'ಸುರಶ್ರೀ', 'ಗಾನಭಾಸ್ಕರ', 'ಸಂಗೀತ ವಿದ್ವಾನ್', 'ಶ್ರೀಮತಿ ವತ್ಸಲಾತಾಯಿ ಜೋಶಿ ಪ್ರಶಸ್ತಿ', 'ಕರ್ನಾಟಕ ಕಲಾತಿಲಕ', 'ಯಶವಂತರಾವ್ ಚೌಹಾಣ ಸಮತಾ ಗೌರವಪುರಸ್ಕಾರ', 'ಕಲಾವಿಕಾಸರತ್ನ' ಪ್ರಮುಖವಾದವುಗಳು.


ಹಲವಾರು ವರ್ಷಗಳಿಂದ ಮಹಾರಾಷ್ಟ್ರದ ಅಂಬರನಾಥದಲ್ಲಿ ನೆಲೆಸಿ, ಕಿರಾನಾ ಘರಾಣಾ ಸಂಗೀತ ಅಕಾಡೆಮಿಯನ್ನು ಸ್ಥಾಪಿಸಿ, ಸಂಗೀತಾಸಕ್ತರಿಗೆ ಕಿರಾನಾ ಘರಾಣೆಯ ಪೌಷ್ಟಿಕಾಂಶಗಳನ್ನು ಧಾರೆಯೆರೆದು ಶಿಷ್ಯರನ್ನು ತಯಾರಿಸಿದ ಕೀರ್ತಿ ಮಾಧವ ಗುಡಿ ಅವರದು. ಅವರ ಸಂಸಾರವಂತೂ ಸಂಗೀತಮಯ ಸಂಸಾರ. ಮಕ್ಕಳಾದ ಗಾಯತ್ರಿ, ಅನುಪಮಾ, ಪ್ರಸನ್ನ, ಭಾರ್ಗವಿ ಎಲ್ಲರೂ ಸುಶ್ರಾವ್ಯ ಕಂಠದ ಸಂಗೀತಗಾರರಾಗಿದ್ದು, ತಂದೆಯು ಹಾಕಿಕೊಟ್ಟ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಡಾ.

ನಾಗರಾಜರಾವ್ ಹವಾಲ್ದಾರ್, ರಾಘವೇಂದ್ರ ಗುಡಿ, ಶೇಷಗಿರಿ ಗುಡಿ, ಶ್ಯಾಮ ಆಲೂರು, ವೆಂಕಟೇಶ ವರಖೇಡಿ, ಸಂಜೀವ ಚಿಮ್ಮಲಗಿ, ಗೋವಿಂದ ರೊಟ್ಟಿ, ಅನುರಾಧಾ ಭಾದ್ರಿ, ರಮೇಶ ಕುಲಕರ್ಣಿ ಮುಂತಾದವರು ಅವರ ಪ್ರಮುಖ ಶಿಷ್ಯರು.

ತಮ್ಮ ಗುರುಗಳ ಅಗಲಿಕೆಯಿಂದ ತೀವ್ರ ಜರ್ಝರಿತರಾಗಿದ್ದ ಅವರು ಆ ನೋವಿನಿಂದ ಕೊನೆಗೂ ಹೊರಬಂದಂತೆ ಕಾಣಲಿಲ್ಲ. ಪಂ. ಮಾಧವ ಗುಡಿ ಅವರು "ನನ್ನ ಗುರುಗಳು ಹೋದ್ರು, ಅವರಿಲ್ಲದೆ ನಾ ಹ್ಯಾಂಗಿರಬೇಕು, ಯಾರ ಮುಂದ ನಾ ನನ್ನ ಕಷ್ಟಗಳನ್ನು ಹೇಳಿಕೊಳ್ಳಬೇಕು" ಎನ್ನುತ್ತಿದ್ದರು. ತೀವ್ರ ಬಡತನದಲ್ಲಿಯೇ ಸಂಗೀತಶಿಖರಕ್ಕೇರಿದ ಕಿರಾನಾ ಘರಾಣೆಯ ಹಿರಿಯ ಗಾಯಕ, ಸ್ವರಭಾಸ್ಕರ ಪಂ. ಭೀಮಸೇನ ಜೋಶಿ ಅವರ ನೆಚ್ಚಿನ ಶಿಷ್ಯ ಪಂ. ಮಾಧವ ಗುಡಿ ಅವರು ಲೀವರ್ ಕ್ಯಾನ್ಸರ್‌ಗೆ ತುತ್ತಾಗಿ, ಚಿಕಿತ್ಸೆ ಫಲಿಸದೇ ಎಪ್ರಿಲ್ ೨೨, ೨೦೧೧ ರಂದು ಬೆಳಗಿನ ಜಾವ ೨ ಗಂಟೆಗೆ ಧಾರವಾಡದಲ್ಲಿ ಕೊನೆಯುಸಿರೆಳೆದರು.

ಸಪ್ತಸ್ವರಗಳನ್ನು ತಮ್ಮಲ್ಲಿ ಅಂತರ್ಗತವಾಗಿಸಿಕೊಂಡು, ಗುರುವಿನ ಸೇವೆಗೈಯ್ದು, ಅವರಲ್ಲಿದ್ದ ಗಾನಾಮೃತವನ್ನು ಹೀರುತ್ತ, ಅದನ್ನು ಇತರರಿಗೂ ಉಣಬಡಿಸಿ ಸಂಗೀತಲೋಕದ ಗುರು-ಶಿಷ್ಯ ಪರಂಪರೆಗೆ ಮಾದರಿಯಾದ ನಾದಲೋಕದ ಸಾಧಕ ಪಂ. ಮಾಧವ ಗುಡಿ ಅವರ ಕೊಡುಗೆ ಅಪಾರ, ಅವಿಸ್ಮರಣೀಯ.

■■■



ಕೇಶವ ಗುರುಂ

# ಗೀತಸಂಗೀತಗಳನ್ನು ನೇಯ್ದ
# ಕೇಶವ ಗುರುಂ
## (ಜನನ- ೧೯೩೦)

● ದಿವಾಕರ ಹೆಗಡೆ

ಧಾರವಾಡಮಣ್ಣಿಗೆ ಸಾಹಿತ್ಯ, ಸಂಗೀತಗಳ ಕಂಪು ಸಹಜವಾದದ್ದು, ಈ ಮಣ್ಣಿನ ಕಂಪನ್ನು ಹೆಚ್ಚಿಸಿದವರಲ್ಲಿ ಕೇಶವ ಗುರುಂ ಪ್ರಮುಖರು. ಹಿಂದುಸ್ತಾನಿ ಸಂಗೀತ, ಭಕ್ತಿಗಿಂತ ಹೆಚ್ಚಾಗಿ ಶೃಂಗಾರಕ್ಕೆ ಒಲಿದಿದೆ ಎಂಬುದು ಪ್ರತೀತಿ. ಈ ಸಾಮಾನ್ಯ ಅಭಿಪ್ರಾಯವನ್ನು ಮೀರಿ ಬೆಳೆದವರು, ಭಕ್ತಿ, ವೈರಾಗ್ಯದ ಶೃತಿಗೆ ಒಲಿದವರು ಕೇಶವ ಗುರುಂ. ಹಳೆ ಹುಬ್ಬಳ್ಳಿಯ ದಾಳಿಂಬರ ಪೇಟೆಯಲ್ಲಿ ೧೯೩೦ ರಲ್ಲಿ ಹುಟ್ಟಿದ ಕೇಶವನ ತಂದೆ ರಾಮಪ್ಪ, ತಾಯಿ ದೇವಮ್ಮ. ಕುಲ ಕಸುಬು ನೇಕಾರಿಕೆ. ಇವರಿಗೆ ಬಾಲ್ಯದಿಂದಲೂ ಸಂಗೀತದಲ್ಲಿ ಆಸಕ್ತಿ. ಕೇಳಿ ಕಲಿತದ್ದೆಲ್ಲ ಭಕ್ತಿಗೀತೆಗಳು. ಕೇಳಿ ಕಲಿತ ಗೀತೆಗಳಿಂದಲೇ ಬಾಲ್ಯದಲ್ಲಿ ಹತ್ತಾರು ಬಹುಮಾನಗಳು. ಶಾಲೆಯ ಓದು ಆರನೇ ಇಯತ್ತೆಗೇ ಮುಗಿದು ಮುಂದೆ ನೇಕಾರಿಕೆಯ ಸಂಗಡ ಹಾಸುಹೊಕ್ಕಾಗಿ ಬದುಕಿನ ಬಟ್ಟೆಯಾದದ್ದು ಸಂಗೀತ ಮತ್ತು ಸಾಹಿತ್ಯ. ಹವ್ಯಾಸಿ ನಾಟ್ಯಸಂಘಗಳಾದ 'ಶ್ರೀ ಸಿದ್ಧಾರೂಢನಾಟ್ಯಸಂಘ' ಹಾಗೂ 'ವಿದ್ಯಾರಣ್ಯ ಬಾಲ ಸಂಗೀತ ನಾಟ್ಯಸಂಘ'ಗಳಲ್ಲಿ ಪಾಲ್ಗೊಂಡು ನಾಟಕದಲ್ಲಿ ಪಾತ್ರವಹಿಸಿ ಹಾಡಿದರು. ಸಂಗೀತದ ಆರಂಭಿಕ ತಾಲೀಮು ನಾಟಕಸಂಘದಲ್ಲಿಯೇ. ಆಗ ನಾಟಕವೆಂದರೆ 'ಸಂಗೀತ ನಾಟಕಗಳೇ'. ಬಾಲಕ ಕೇಶವನ ಆಕರ್ಷಕ ನಿಲುವಿಗೆ ಹೊಂದಿ ಆರಂಭದಲ್ಲಿ ಸ್ತ್ರೀಪಾತ್ರ ನಂತರ ಪುರುಷಪಾತ್ರಗಳ ನಿರ್ವಹಣೆ. 'ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿ ಸ್ತ್ರೀ ಹಾಗೂ ಪುರುಷಪಾತ್ರಗಳೆರಡನ್ನೂ ನಿರ್ವಹಿಸಿದ ಅನುಭವ. ಅದು ಸ್ವಾತಂತ್ರ್ಯ ಹೋರಾಟದ ಉತ್ತುಂಗದ ಕಾಲ. ಹಾಗಾಗಿ 'ಹೇಮರೆಡ್ಡಿ ಮಲ್ಲಮ್ಮನ' ನಾಟಕ ಆಡುವುದೆಂದರೆ ಜನಜಾಗೃತಿಯ ಕಾರ್ಯವೂ ಆಗಿತ್ತು. ಬಾಲ್ಯ ಕಳೆದು ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದ ಕೇಶವನಲ್ಲಿ ದೇಶಭಕ್ತಿಯ ದೀಕ್ಷೆಯನ್ನು ನೀಡಿತು ಈ ನಾಟಕದ ಹವ್ಯಾಸ.

ಹುಬ್ಬಳ್ಳಿ, ಗದಗ ಹಾಗೂ ಕಲಘಟಗಿಶಹರಗಳಲ್ಲಿ ನಾಟಕಪ್ರದರ್ಶನಗಳಲ್ಲಿ ಪಾಲ್ಗೊಂಡರು. ಮನೆಯ ನಿರ್ವಹಣೆ ನೇಕಾರಿಕೆಯಿಂದಲೇ ಆಗಬೇಕಾದುದರಿಂದ ನಾಟಕ-ಸಂಗೀತಗಳ ಸೆಳೆತಗಳ ನಡುವೆಯೂ ಕಾಯಕ ನಡೆಯಲೇ ಬೇಕಿತ್ತು. ಹವ್ಯಾಸಿ ನಾಟಕಸಂಘಗಳಲ್ಲಿ ಸಂಗೀತದ ಕಲಿಕೆ ಇತ್ತಾದರೂ ಅದು ಶಾಸ್ತ್ರೀಯ ಅಭ್ಯಾಸದ ಎತ್ತರದ್ದಲ್ಲ. ನಾಟಕದ ಅಗತ್ಯಕ್ಕೆ ಸೀಮಿತವಾದದ್ದು. ಸದೃಢ ಶರೀರ, ಆಕರ್ಷಕ ಶಾರೀರಗಳಿದ್ದ ಕೇಶವ ಗುರುಂ ನಾಟಕದ ತಾಲೀಮಿನಲ್ಲಿ ಅದರಲ್ಲೂ ಸ್ತ್ರೀ-ಪುರುಷ ಪಾತ್ರಗಳೆರಡನ್ನೂ ನಿರ್ವಹಿಸಿದ ಅನುಭವದಲ್ಲಿ ಎಲ್ಲ ರೀತಿಯ ಹಾಡುಗಳಿಗೆ ಧ್ವನಿ ನೀಡಿದ್ದರು. ಎಲ್ಲ ಭಾವಗಳಿಗೂ ಸ್ಪಂದಿಸಿದ್ದರು. ಪಾತ್ರಕ್ಕೆ ಅಗತ್ಯವಾದ ಶ್ರುತಿಗಳಲ್ಲಿ,

ಮೂರು ಸಪ್ತಕಗಳಲ್ಲಿ ಹಾಡುತ್ತಿದ್ದರು. ಆದರೆ ಸಂಗೀತದ ಹಸಿವೆ ತೃಪ್ತವಾಗಲಿಲ್ಲ. ಶಾಸ್ತ್ರೀಯ ಅಧ್ಯಯನಕ್ಕಾಗಿ ಅವಕಾಶವನ್ನೂ ಗುರುಗಳನ್ನೂ ಹುಡುಕುತ್ತಲೇ ಇದ್ದರು.

ತಮ್ಮ ೨೨ ನೇ ವಯಸ್ಸಿನಲ್ಲಿ ಅಂದರೆ ೧೯೫೨ ರಲ್ಲಿ ಅವರಿಗೆ ಸಂಗೀತ ಗುರುಗಳ ಭೇಟಿಯಾಯಿತು. ಗ್ವಾಲಿಯರ್ ಘರಾಣೆಯ ಪ್ರಸಿದ್ಧ ಗಾಯಕ ಹುಬ್ಬಳ್ಳಿಯ ಶ್ರೀ ಶಂಕರ ದೀಕ್ಷಿತ ಜಂತ್ಲಿ ಅವರ ಶಿಷ್ಯ ಶ್ರೀ ರಾಮಚಂದ್ರ ದೇಸಾಯಿ, ಕೇಶವ ಗುರುಂ ಅವರ ಗುರುಗಳಾದರು. ಅವರಲ್ಲಿ ನಿರಂತರ ಹತ್ತು ವರ್ಷ ಸಂಗೀತದ ಅಭ್ಯಾಸ ಮಾಡಿದರು. ಆ ಅಭ್ಯಾಸ ಪ್ರತಿದಿನ ಸಂಜೆ ೭ರಿಂದ ಮಧ್ಯ ರಾತ್ರಿ ಒಂದು ಗಂಟೆವರೆಗೆ, ಮತ್ತೆ ಮುಂಜಾನೆ ಸ್ವರಾಭ್ಯಾಸ. ಅವರ ಅಭ್ಯಾಸಪರಿಯನ್ನು, ಸಂಗೀತದ ಶ್ರದ್ಧೆಯನ್ನು ಅವರೇ ಬಣ್ಣಿಸಿದ ರೀತಿ ಹೀಗಿದೆ, "ಆಗ ನಮ್ಮ ಮನೆಯ ಐದಾರು ಜನರ ಸಂಸಾರ ನನ್ನ ನೇಕಾರಿಕೆಯ ದುಡಿಮೆಯ ಮೇಲೆ ಅವಲಂಬಿಸಿತ್ತು. ಸಂಗೀತದ ಅಭ್ಯಾಸವನ್ನೂ ಬಿಡುವಂತಿಲ್ಲ, ದುಡಿಮೆಯನ್ನೂ ಬಿಡುವಂತಿಲ್ಲ. ಮುಂಜಾನೆ ಸುಮಾರು ಹತ್ತು ಹನ್ನೊಂದು ಗಂಟೆಯಿಂದ ಕಾಪ್ಸೆಯವರ ಮನೆಯ ಮಗ್ಗದಲ್ಲಿ ಸಾಯಂಕಾಲದ ಆರು ಗಂಟೆಯವರೆಗೆ ಕೆಲಸ ಮಾಡಿ, ಎಂಟು ಗಜದ ಮಸರಾಯಜ್ಡ್ ಒಂದು ಸೀರೆಯನ್ನು ನೆಯ್ದು ಕೊಡುತ್ತಿದ್ದೆ. ಸುಮಾರು ಎರಡು ಮೂರು ದಿನಗಳಲ್ಲಿ ಮಾಡುವ ಕೆಲಸವನ್ನು ಒಂದೇ ದಿನದಲ್ಲಿ ಮಾಡುವುದನ್ನು ಕಂಡು ಕಾಪ್ಸೆಯವರ ತಾಯಿ 'ಯಾತಾಳಿ ಚನ್ನಬಸಪ್ಪ' ಎಂದು ಕರೆಯುತ್ತಿದ್ದಳು. (ಗದಗ ಬೆಟಗೇರಿಯಲ್ಲಿ ಭೂತಗಳಿಂದ ಮಗ್ಗ ನೇಯಿಸುವ ಮಂತ್ರಗಾರನ ಹೆಸರು). ಆಮೇಲೆ ತುಳಸಿಮಠದಲ್ಲಿ ಬಾವಿಯಲ್ಲಿ ಸ್ನಾನ ಮಾಡಿ ಬರುವುದರೊಳಗಾಗಿ ನನ್ನ ತಾಯಿ ದೇವಮ್ಮ ಅಡಿಗೆ ಮಾಡುತ್ತಿದ್ದಳು. ಊಟ ಮಾಡಿ ಸಾಯಂಕಾಲದ ಒಳಗೆ ಗುರುಗಳ ಮನೆಗೆ ಹಾಜರಾಗುತ್ತಿದ್ದೆ. ಖೋಲಿಯಲ್ಲಿ ದೀಪ ಹಚ್ಚಿ ಕಸ ಗುಡಿಸಿ, ಹಾಸಿಗೆ ಹಾಸಿ ಒಂದು ಗಂಟೆ ಅಭ್ಯಾಸ ಮಾಡಿದ ನಂತರ ಶ್ರೀ ಗೋಡಸೆಯವರ ತಬಲಾ ಸೋಲೋಕ್ಕೆ ಲೇಹರಾ ನುಡಿಸಿ, ಗುರುಗಳು ಬಂದ ಮೇಲೆ ಅವರ ಜೊತೆಗೆ ಹಾಡಿದ ನಂತರ ಮಲಗಿಕೊಳ್ಳಲು ರಾತ್ರಿ ೧ ಅಥವಾ ೨ ಗಂಟೆ ಆಗಿರುತ್ತಿತ್ತು. ಆಮೇಲೆ ಮುಂಜಾನೆ ೫ ಗಂಟೆಗೆ ಎದ್ದು ಸ್ವರಾಭ್ಯಾಸ ಮಾಡಿ ಅನ್ಯ, ವಿದ್ಯಾರ್ಥಿಗಳಿಗೆ ಪಾಠ ಹೇಳಿ, ಗುರುಗಳಿಂದ ಪಾಠಕಲಿತು, ಸುಮಾರು ೧೧ ಗಂಟೆಗೆ ಮನೆಗೆ ಬಂದು ಉದ್ಯೋಗದಲ್ಲಿ ತೊಡಗುತ್ತಿದ್ದೆ".

ಇಂತಹ ಕಠಿಣ ಪರಿಶ್ರಮದಿಂದ ಸಂಗೀತವನ್ನು ಕಲಿತವರಿಗೆ ಕೇಳಿದ ಸಂಗೀತವೇ ಅನ್ನ ನೀಡುವ ವಿದ್ಯೆಯಾದೀತು ಎಂಬ ನಿರೀಕ್ಷೆ ಇರಲಿಲ್ಲ. ಕಲಿಕೆಯ ಆರಂಭದ ದಿನಗಳಲ್ಲೇ ೧೯೫೪ ರಲ್ಲಿ ಧಾರವಾಡ ಆಕಾಶವಾಣಿಯಲ್ಲಿ ಸುಗಮಸಂಗೀತದ ಬಿ ಹೈ ಗ್ರೇಡ್ ಕಲಾವಿದರಾಗಿದ್ದರು. ಶಾಸ್ತ್ರೀಯ ಸಂಗೀತದ ತಾಲೀಮು ಮುಂದುವರೆದಾಗ "ಕರ್ನಾಟಕ ಪ್ರದೇಶ ಸಂಗೀತ, ಸೇವಾ ಸಮಿತಿ" ವಿಜಾಪುರ ವಿದ್ಯಾಲಯದಿಂದ 'ಸಂಗೀತ ವಿಶಾರದ' ಪದವಿ ಪಡೆದರು. ಸಂಗೀತ ಕಾರ್ಯಕ್ರಮದಲ್ಲಿ ಗುರುಗಳ ಸಂಗಡ ತಂಬೂರಿ ಹಾಕುತ್ತಿದ್ದ ಇವರನ್ನು ಸಮಾಜ ಗುರುತಿಸಿ ಸ್ವತಂತ್ರ ಕಾರ್ಯಕ್ರಮಗಳಿಗೆ ಆಮಂತ್ರಿಸಿತು. ಹುಬ್ಬಳ್ಳಿ, ಜಮಖಂಡಿ, ಕುಂದಗೋಳ, ರಾಣೆಬೆನ್ನೂರು ಮುಂತಾದ ಕಡೆ ಶಾಸ್ತ್ರೀಯ ಹಾಗೂ ಸುಗಮಸಂಗೀತದ ಕಾರ್ಯಕ್ರಮ ನೀಡಿದರು. ಈ ಮಧ್ಯೆ

ಗುರುಗಳಲ್ಲಿ ಪಾಠಕ್ಕೆ ಬರುತ್ತಿದ್ದ ಕಿರಿಯರಿಗೆ ಆರಂಭಿಕ ಅಭ್ಯಾಸ ಮಾಡಿಸುತ್ತಿದ್ದರು. ಇವರ ಕಲಿಸುವ ಕ್ರಮ, ಶ್ರದ್ಧೆಗಳನ್ನು ಕಂಡು ಗುರುಗಳಾದ ರಾಮಚಂದ್ರ ದೇಸಾಯಿಯವರು ಇವರನ್ನು 'ಕೇಶವ ಮಾಸ್ತರ್' ಎಂದೇ ಕರೆಯುತ್ತಿದ್ದರು.

ಗುರುಂ ಅವರಿಗೆ ಸಂಗೀತದ ಜೊತೆಗೆ ಸಾಹಿತ್ಯದ ಪ್ರೀತಿಯೂ ಇತ್ತಾದ್ದರಿಂದ ಗೀತಕಾವ್ಯ, ಪುರಾಣದ ಅಧ್ಯಯನ ಮಾಡುತ್ತಿದ್ದರು. ಇದರಿಂದಾಗಿ ಸಾಹಿತ್ಯ-ಸಂಗೀತದ ಸಂಬಂಧಗಳ ತಾದಾತ್ಮ್ಯದ ಮರ್ಮ ತಿಳಿಯಿತು. ಭಾವಗೀತೆ, ಭಕ್ತಿಗೀತೆಗಳಿಗೆ ಸಂಗೀತ ಸಂಯೋಜನೆ ಮಾಡಿ ಹಾಡತೊಡಗಿದರು. ಉಳಿದವರಿಗೂ ತಾಲೀಮು ನೀಡಿ ಹಾಡಿಸತೊಡಗಿದರು. ಗುರುಂ ಅವರ ಸಂಗೀತಸಂಯೋಜನೆಯ ಕೌಶಲವನ್ನು ಗುರುತಿಸಿ ೧೯೫೭ರಲ್ಲಿ ಧಾರವಾಡ ಆಕಾಶವಾಣಿ ಜ್ಯೂನಿಯರ್ ಮ್ಯುಜಿಕ್ ಕಂಪೋಜರ್ ಎಂದು ಪ್ರಮಾಣಿಸಿ ಅವಕಾಶ ನೀಡಿತು. ಕೇಶವ ಗುರುಂ ಅವರ ಸಂಗೀತಸಂಯೋಜನೆಯ ಗೀತೆಗಳು ನಾಡಿನಾದ್ಯಂತ ಪ್ರಸಾರವಾಗತೊಡಗಿದವು. ಮುಂದೆ ಸಂಗೀತಸಂಯೋಜಕ ಹುದ್ದೆಗೆ ಆಯ್ಕೆಯಾಗಿ ೧೯೬೭ರಿಂದ ಆಕಾಶವಾಣಿ ಧಾರವಾಡದ ನಿಲಯ ಕಲಾವಿದರಾದರು. ೧೯೮೫ ರಲ್ಲಿ ಸಂಗೀತ ಸಂಯೋಜನೆಯಲ್ಲಿ ಪದೋನ್ನತಿಯನ್ನು ಪಡೆದರು.

ಆಕಾಶವಾಣಿ ಸಂಗೀತಗಾರರ ಕಲ್ಪವೃಕ್ಷ. ಪ್ರತಿನಿತ್ಯ ನೂರಾರು ಗೀತೆಗಳನ್ನು ಪ್ರಸಾರ ಮಾಡುತ್ತ ಕಲಿಕೆಯ ಹಂಬಲದವರಿಗೆ ನಿತ್ಯ ಗುರುವಾಗಿದೆ. ಶಾಸ್ತ್ರೀಯ ಸಂಗೀತ, ಲಘು ಶಾಸ್ತ್ರೀಯ ಸಂಗೀತ, ಸುಗಮಸಂಗೀತ ಹೀಗೆ ಸಂಗೀತದ ಎಲ್ಲ ಪ್ರಕಾರಗಳಲ್ಲೂ ಹಾಡುವ ಅವಕಾಶವನ್ನು ನೀಡುತ್ತಲೇ ಆಕಾಶವಾಣಿ ಕಲಾವಿದರನ್ನು ಬೆಳೆಸುತ್ತದೆ. ಇಂತಹ ಆಕಾಶವಾಣಿಯಲ್ಲಿ ಸಂಗೀತ ಸಂಯೋಜನೆಯ ನಿಲಯ ಕಲಾವಿದರಾಗಿ ಸೇವೆ ಸಲ್ಲಿಸುವ ಅವಕಾಶವೆಂದರೆ, ನಾಡಿನೆಲ್ಲರೊಡನೆ ಸಂಗೀತಸಂವಾದದ ಅವಕಾಶವೆ ಆಗಿತ್ತು. ಗುರುಂ ಅವರ ಸಂಗೀತಸಂಯೋಜನೆಯ ಹಾಡನ್ನು ಆಕಾಶವಾಣಿಯಲ್ಲಿ ನಾಲ್ಕು ಕಲಾವಿದರು ಹಾಡಿದರೆ ಅದರ ಪ್ರಸಾರವನ್ನು ಕೇಳಿದ ನೂರಾರು ಹಾಡುಗರು ಅದನ್ನು ಅನುಕರಿಸಿ ಹಾಡು ಕಲಿಯುತ್ತಿದ್ದರು. ಅಲ್ಲದೆ ಆಗ ಕೇಳಿದ್ದನ್ನೆಲ್ಲ ಧ್ವನಿ ಮುದ್ರಿಸಿಕೊಳ್ಳುವ ಅಫಕಾಶವಿರಲಿಲ್ಲ. ರೇಡಿಯೋ ಪ್ರಸಾರಕ್ಕಾಗಿಯೇ ಕಾಯಬೇಕಾಗಿತ್ತು. ಎಲ್ಲರ ಕೈಗೆಟುಕುವ ಸಂಗೀತಶಿಕ್ಷಕನೆಂದರೆ ರೇಡಿಯೋ ಆಗಿತ್ತು. ಆಕಾಶವಾಣಿಯ ಕಲಾವಿದರಿಗೆ ಗ್ಲಾಮರ್ ಇದ್ದ ಕಾಲವದು. ಹೀಗೆ ಗುರುಂ ಅವರ ಸಂಯೋಜನೆಯ ಹಾಡನ್ನು ಇಡೀ ನಾಡು ಅದರಲ್ಲೂ ಉತ್ತರ ಕರ್ನಾಟಕದ ತುಂಬ ಆಲಿಸಿದರು, ಗುನುಗಿದರು. ಅಕ್ಷರಶಃ ಸಾವಿರಾರು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದರು, ನೂರಾರು ಹಾಡುಗಳಿಗೆ ಧ್ವನಿ ನೀಡಿದರು. ಆಕಾಶವಾಣಿಯ ಅನುಮೋದಿತ ಕಲಾವಿದರೆಲ್ಲರ ಸಂಗಡ ಸಹೃದಯಿಯಾಗಿ ಬೆರೆತು ಸಂಗೀತಸೇವೆ ಮಾಡಿದರು.

ಕೇಶವ ಗುರುಂ ಅವರು ಸಂಗೀತ ಸಂಯೋಜಿಸಿದ ಸಂಗೀತರೂಪಕ 'ಹಳೆ ಬೇರು ಹೊಸ ಚಿಗುರು' ೧೯೮೧ ರ ಅಖಿಲಭಾರತ ಆಕಾಶವಾಣಿ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದು ಪ್ರಶಸ್ತಿಯ ಗರಿ ಮೂಡಿಸಿತು. ಗುರುಂ ಅವರು ಕನ್ನಡಗೀತೆಗಳ ಸಂಗಡ ಸಂಸ್ಕೃತ ಹಾಗೂ ಉರ್ದುಗೀತೆಗಳಿಗೂ ಸಂಗೀತ ಸಂಯೋಜಿಸಿ ಧ್ವನಿ

ನೀಡಿದ್ದಾರೆ. ವರ್ಷವಿಡೀ ಪ್ರಸಾರವಾದ ಗಾಂಧೀಗೀತ ಹಾಗೂ ಹಾಸ್ಯ ಗೀತೆಗಳಿಗೆ ಸಂಗೀತ ಸಂಯೋಜಿಸಿ ಹಾಡಿದ್ದು ಗಮನಾರ್ಹ ಸಂಗತಿ. ಆಕಾಶವಾಣಿಯ ಸಂಗೀತ ಉತ್ಸವಗಳಲ್ಲಿ, ಸರಣಿ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಾಡಿನ ಅನೇಕ ಕಡೆಗಳಲ್ಲಿ ಹಾಡಿದ್ದಾರೆ.

ಸಂಗೀತದ ಹಾಡುಗಾರಿಕೆಯಲ್ಲಿಯೂ ಕೆಲವು ಬದ್ಧತೆಗಳನ್ನು ಕಾಯ್ದುಕೊಂಡು ಬಂದವರು ಕೇಶವ ಗುರುಂ. ಸಂಗೀತ ಮಾರುಕಟ್ಟೆಯ ಸರಕಲ್ಲ, ಸಹೃದಯರನ್ನು ತಣಿಸುವ ಸುಸಂಸ್ಕೃತ ಅಭಿವ್ಯಕ್ತಿ ಎಂಬ ಶ್ರದ್ಧೆ ಅವರದು. ಅಂತಹ ಒಂದು ನಿದರ್ಶನ ಹೀಗಿದೆ: 'ಒಂದು ಸಲ ಮಹಾಲಿಂಗಪುರದಲ್ಲಿ ಸಂಗೀತಕಾರ್ಯಕ್ರಮ ಒಪ್ಪಿಕೊಂಡು ಗುರುಗಳಿಗೆ ತಿಳಿಸಿದಾಗ, ಗುರುಗಳು, ಧಾರವಾಡ ಮಾರ್ಗವಾಗಿ ಹೋಗಬೇಕಾಗುತ್ತದೆ. ಸವದತ್ತಿ ಯಲ್ಲಮ್ಮ ನಮ್ಮ ಮನೆ ದೇವರು, ಆಕೆಯ ದರ್ಶನ ಪಡೆದುಕೊಂಡು ಮುಂದೆ ಹೋಗಬೇಕು. ಆದ್ದರಿಂದ ವಿಜಾಪುರ ಜಮಖಂಡಿ ಮಾರ್ಗವಾಗಿ ಬರುತ್ತೇನೆ' ಎಂದರು. ನಾನು ಆಗಲಿ ಎಂದು ನನ್ನ ಸಹವಾದಕರನ್ನು ಕರೆದುಕೊಂಡು ಸಾಯಂಕಾಲ ೪ ಗಂಟೆಗೆ ಮಹಾಲಿಂಗಪುರ ತಲುಪಿದೆ. ರಾತ್ರಿ ೮ ಗಂಟೆಯಾದರೂ ಗುರುಗಳು ಬರಲೇ ಇಲ್ಲ. ೯ ಗಂಟೆಗೆ ಕಾರ್ಯಕ್ರಮ ಆರಂಭಿಸಬೇಕು. ಹಾರ್ಮೋನಿಯಂಗಾಗಿ ಇನ್ನೊಬ್ಬರನ್ನು ಹುಡುಕುವಷ್ಟರಲ್ಲಿ ಗುರುಗಳು ಬಂದೇ ಬಿಟ್ಟರು. ಉಪಾಹಾರವನ್ನು ತೆಗೆದುಕೊಂಡು ಮಂಚವನ್ನೇರಿದೆವು. ವಿಪರೀತ ಜನ ಸೇರಿದ್ದರು. ಮೊದಲು ಶ್ರೀ ನಿಜಗುಣರ ಗೀತೆ ಹಾಡಿ ನಿಲ್ಲಿಸಿದೆ, ಅನೇಕರು ಚಪ್ಪಾಳೆ ತಟ್ಟಿ ಸಿನೇಮಾಗೀತೆ ಹಾಡಲು ಕೂಗಿದರು, ಸಿಳ್ಳು ಹಾಕಿದರು. ನಾನು ಜನರನ್ನು ಉದ್ದೇಶಿಸಿ 'ನೀವು ಪ್ರತಿದಿನ ರೇಡಿಯೋ ಮೂಲಕ ಸಿನೇಮಾಗೀತೆಯನ್ನು ಕೇಳುತ್ತೀರಿ. ಆದ್ದರಿಂದ ಬೇರೆ ಭಕ್ತಿಗೀತೆ, ಭಾವಗೀತೆ ಮತ್ತು ತತ್ತ್ವಗೀತೆಗಳನ್ನು ಹಾಡುತ್ತೇನೆ. ಸಿನೇಮಾಸಂಗೀತ ಹಾಡುವುದಿಲ್ಲ. ನನ್ನ ಸಂಗೀತ ಬೇಡವಾದರೆ ಮಂಚದಿಂದ ಇಳಿಯುತ್ತೇನೆ' ಎಂದೆ. ಆಗ ಓರ್ವ ಮಹನೀಯರು ಮಂಚದ ಮೇಲೆ ಬಂದು ೧೦ ರೂ. ಬಹುಮಾನ ಕೊಟ್ಟು, ಜನರನ್ನು ಉದ್ದೇಶಿಸಿ, "ನಾವು ಸಿನೇಮಾಸಂಗೀತಕ್ಕಾಗಿ ಇವರನ್ನು ಕರೆಸಿಲ್ಲ, ಭಕ್ತಿಗೀತೆ, ತತ್ತ್ವಗೀತೆಗಳನ್ನು ಹಾಡಲು ಕರೆಸಿದ್ದೇವೆ. ಅರ್ಥ ವಿವರಣೆ ಸಹಿತ ಹಾಡುತ್ತಾರೆ. ಕೇಳುವ ಇಚ್ಛೆ ಇಲ್ಲದವರು ಹೊರಗೆ ಹೋಗಬಹುದು" ಎಂದು ಗರ್ಜಿಸಿದಾಗ ಗಲಾಟೆಯ ಜನ ಹೊರಟು ಹೋದರು. ಉಳಿದವರು ೩ ಗಂಟೆ ಸಂಗೀತ ಕೇಳಿ ಸಂತೋಷಪಟ್ಟರು" (ಸತ್ಸಂಗದ ಸವಿನೆನಪುಗಳು ಪುಸ್ತಕದಿಂದ)

ಹೀಗೆ ಸಂಗೀತಕ್ಕೊಂದು ಘನತೆ ಬೇಕು ಎಂಬ ಶ್ರದ್ಧೆಯಿಂದ, ನಿಷ್ಠೆಯಿಂದ ಸಂಗೀತವ್ಯವಸಾಯ ಮಾಡುತ್ತ ಬಂದ ಗುರುಂ ಅನೇಕರಿಗೆ ಸಂಗೀತ ಶಿಕ್ಷಣ ನೀಡಿದ್ದಾರೆ. ಬಾಲ್ಯದಿಂದಲೂ ರಾಷ್ಟ್ರೀಯ ಸ್ವಯಂ ಸೇವಕರಾದ ಅವರು ಸಂಘದ ಘೋಷವಾದನಕ್ಕೆ ನೀಡಿದ ಕೊಡುಗೆ ಗಮನಾರ್ಹವಾದುದು. ಬದುಕಿನಲ್ಲಿ 'ಪ್ರೇಯಸ್ಸಿಗಿಂತ ಶ್ರೇಯಸ್ಸಿಗೆ, ಪ್ರಯೋಜನಕ್ಕಿಂತಲೂ ಆನಂದಕ್ಕೆ' ಆದ್ಯತೆ ನೀಡಿದವರು.

ಕೇಶವ ಗುರುಂ ನಾದನೋಂಪಿಯೊಂದಿಗೆ ಅಕ್ಷರ ಆರಾಧನೆಯನ್ನು ಮಾಡುತ್ತಾ ಬಂದಿದ್ದಾರೆ. ಓದಿದ್ದು ಆರನೇ ಇಯತ್ತೆ ಆದರೂ ಬರೆದ ಕೃತಿಗಳು ಹದಿನೈದಕ್ಕೂ ಹೆಚ್ಚು.

ಅದರಲ್ಲಿ ಕಾವ್ಯವೇ ಅಧಿಕ ಎಂದರೆ ಅವರ ಸಾಹಿತ್ಯದ ಪರಿಶ್ರಮ ಅರ್ಥವಾಗಬೇಕು. ಬಹಿರಂಗದ ವ್ಯವಹಾರ ಏನೇ ಇದ್ದರೂ ಅಂತರಂಗದ ಚಿಂತನೆ ಆಧ್ಯಾತ್ಮದ್ದು. ಶ್ರೀ ಸಿದ್ಧಾರೂಢರಲ್ಲಿ ಅಪರಿಮಿತ ಶ್ರದ್ಧೆ ಹೊಂದಿರುವ ಗುರುಂ ಅವರು ಶ್ರೀ ಸಿದ್ಧಾರೂಢರ ಶಿಷ್ಯರಾದ ಐರಣಿ ಮುಪ್ಪಿನಾರ್ಯರು, ಶ್ರೀ ಸಿದ್ಧವೀರಪ್ಪನವರು ಮತ್ತು ನವಲಗುಂದದ ಶ್ರೀ ಹುರಕಡ್ಲಿ ಅಜ್ಜನವರ ಸತ್ಸಂಗದಿಂದ ಭಕ್ತಿ ಜ್ಞಾನ, ವೈರಾಗ್ಯಗಳತ್ತ ಮನಸ್ಸು ಎಳೆಯಿತು, ಆ ಸಂಬಂಧದಿಂದ ಗ್ರಂಥರಚನೆ ಸಾಧ್ಯವಾಯಿತು ಎಂದಿದ್ದಾರೆ. 'ಸಿದ್ಧ ಚರಣದಾಸ' ಎಂಬ ಅಂಕಿತವನ್ನು ಗುರುಂ ಅವರಿಗೆ ನೀಡಿದವರು ಹುರಕಡ್ಲಿ ಅಜ್ಜನವರು. ಆರೂಢ ಗೀತಸಂಗಮ ಎಂಬ ಗೀತಗುಚ್ಛದಲ್ಲಿ ಅವರು ಪ್ರಾರ್ಥಿಸಿದ ರೀತಿ ಹೀಗಿದೆ.

ಸಿದ್ಧನಾಮ ಸಿದ್ಧರೂಪ
ಸಿದ್ಧಜ್ಞಾನ ಚಿಂತನ
ಸಿದ್ಧಗುರುವೆ ಎನಗೆ ಇರಲಿ
ಸಿದ್ಧ ನೀನೇ ರಕ್ಷಕ
ಬದ್ಧಜೀವಿಯಾದ ಎನಗೆ
ಅದ್ವೈತದ ತತ್ತ್ವ ತಿಳಿಸಿ
ಶುದ್ಧ ಮುಕುತಿ ಕರುಣಿಸಯ್ಯ
ಸಿದ್ಧ ಚರಣದಾಸಗೆ.


'ಶ್ರೀ ಗುರು ಕರುಣಾಮೃತ', 'ಶ್ರೀ ಸಿದ್ಧ ಗೀತಾಮೃತ', 'ಸ್ವಾನುಭವ ಗೀತಾಮೃತ', ಮಹತ್ವದ ಗೀತಗುಚ್ಛಗಳು. 'ಪದ್ಮಶಾಲಿ ಚಿಂತನಮಂಥನ', 'ಸತ್ಸಂಗದ ಸವಿನೆನಪುಗಳು', 'ಗುರುನಾಥ ಆರೂಢ ಚರಿತ್ರೆ', ಇವು ಗದ್ಯಗಳು. 'ಶ್ರೀ ದುರ್ಗಾಸಪ್ತಶತಿ', 'ಶ್ರೀ ಸಿದ್ಧವೀರ ಪುರಾಣಂ', 'ಶ್ರೀ ರುದ್ರಸ್ವಾಮಿಗಳ ಪುರಾಣಂ' ಇವೆಲ್ಲ ಭಾಮಿನಿಷಟ್ಪದಿಯಲ್ಲಿ ರಚಿತವಾದ ಬೃಹತ್‌ಕಾವ್ಯಗಳು. ಎಲ್ಲ ಗ್ರಂಥಗಳು ಮುದ್ರಣಗೊಂಡು ಪ್ರಕಟಗೊಂಡಿವೆ. ಸತ್ಸಂಗದ ಸವಿನೆನಪುಗಳು ಪುಸ್ತಕದಲ್ಲಿ ಗುರುಂ ಅವರ ವೈಯಕ್ತಿಕ ಬದುಕಿನ ಪರಿಚಯ ಸ್ವಲ್ಪ ಲಭ್ಯ.

ಗುರುಂ ಅವರ ಕಾವ್ಯದ ಸುಗಮತೆಯಂತೆ ಅವರ ಗದ್ಯವು ಸುಭಗವಾದುದು. ಶ್ರದ್ಧೆಯ ನೆರಳಿನಲ್ಲಿಯೇ ಬರೆದರೂ ಸಾಮಾಜಿಕ ಸಮಾನತೆಯ ಕ್ರಾಂತಿಕಾರಿ ಸಂಗತಿಗಳು ಅವರ ಗಮನದಲ್ಲಿ ಇದ್ದೇ ಇರುತ್ತಿದ್ದವು. 'ಸಮದರ್ಶಿ ಶ್ರೀ ಸಿದ್ಧಾರೂಢರು ಹಾಗೂ ಅವರ ಪರಂಪರೆ' ಎಂಬ ಪುಸ್ತಕದಲ್ಲಿ 'ಆರೂಢರ ಮಾನಸಪುತ್ರಿಯರು' ಎಂಬ ಪ್ರತ್ಯೇಕ ಅಧ್ಯಾಯವಿದೆ. ಅದರ ಆರಂಭದ ವಾಕ್ಯಗಳಲ್ಲಿ ಗುರುಂ ಅವರ ಅಧ್ಯಯನದ ಕ್ರಮ ಹಾಗೂ ಅಭಿವ್ಯಕ್ತಿಯ ಸೂಕ್ಷ್ಮತೆ ನಮ್ಮ ಅರಿವಿಗೆ ಬರುತ್ತದೆ. ಆ ವಾಕ್ಯಗಳು ಹೀಗಿವೆ: 'ಪೂರ್ವಕಾಲದಲ್ಲಿ ಗಾರ್ಗಿ, ಮೈತ್ರಾದೇವಿ ಮುಂತಾದವರು ಬ್ರಹ್ಮಜ್ಞಾನಿಗಳಾಗಿ ಹೋಗಿದ್ದಾರೆ. ಮುಂದೆ ವೇದಾಧ್ಯಯನ, ತತ್ವಜ್ಞಾನ ಪಡೆಯಲು ಸ್ತ್ರೀಯರಿಗೆ ಅಧಿಕಾರವಿಲ್ಲ ಎಂಬ ತಪ್ಪು ಭಾವನೆ ಇತ್ತು. ಈಗ ಆ ತಪ್ಪು ಭಾವನೆ ಬದಲಾಗಿ ಜ್ಞಾನ

ಪಡೆಯಲು ಮಾನವರಿಗೆ ಅಧಿಕಾರವಿದೆಯಾದ್ದರಿಂದ ಶ್ರೀ ಸಿದ್ಧಾರೂಢರು ಅನೇಕ ಸ್ತ್ರೀಯರಿಗೆ ಆತ್ಮತತ್ತ್ವ ಬೋಧಿಸಿ ಮುಕ್ತವನ್ನು ಮಾಡಿದ ಉದಾಹರಣೆಗಳಿವೆ. ಮುಂದೆ ಗೋವಯ್ಯ, ಗೋಕುಳಾಬಾಯಿ, ಕಲಾವತಿ ಆಯಿ, ಬಳ್ಳಾರಿ ವಿಶಾಲಾಕ್ಷಿ, ಕೃಷ್ಣಾಬಾಯಿ, ಜನಾಬಾಯಿ, ಆವೂಬಾಯಿ ಮುಂತಾದವರ ವಿವರಗಳನ್ನು ನೀಡುತ್ತಾರೆ.

ಸರಸ್ವತಿಯ ಸ್ತನಗಳಾದ ಸಂಗೀತ–ಸಾಹಿತ್ಯಗಳೆರಡನ್ನೂ ಪಾನ ಮಾಡಿದ ಕೇಶವ ಗುರುಂ ಬಹಿರಂಗದ ಬದುಕನ್ನು ಕಟ್ಟಿಕೊಂಡಂತೆ ಅಂತರಂಗದ ಬದುಕನ್ನೂ ಬೆಳೆಸಿಕೊಂಡವರು. ಮನೆಯ ಕೆಳಭಾಗ ಲೌಕಿಕಕ್ಕೆ, ಮೇಲ್ಭಾಗ ಲೋಕೋತ್ತರ ಸಾಧನೆಗೆ ಎಂದೇ ವಿಭಾಗಿಸಿಕೊಂಡಿರುವ ಗುರುಂ ಮಾನವಬದುಕಿನ ತಾತ್ವಿಕಚಿಂತನೆಗೆ ಮಾರುಹೋದವರು. ಅವರ ಸಂಗೀತಸಾಧನೆಯನ್ನು ಗಮನಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 'ಕರ್ನಾಟಕ ಕಲಾಶ್ರೀ' ಎಂಬ ಬಿರುದನ್ನು ನೀಡಿ ಗೌರವಿಸಿದೆ. ೨೦೦೯ರಲ್ಲಿ ಕರ್ನಾಟಕ ಸರಕಾರ ಪ್ರತಿಷ್ಠಿತ 'ಸಂತ ಶಿಶುನಾಳ ಷರೀಫ ಪ್ರಶಸ್ತಿ' ನೀಡಿ ಅವರನ್ನು ಗೌರವಿಸಿದೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಧೀಮಂತ ಪ್ರಶಸ್ತಿ, ಹಾನಗಲ್ ಮ್ಯೂಜಿಕ್ ಫೌಂಡೇಶನ್ನಿನ 'ಗಾನಗಂಗಾ' ಪ್ರಶಸ್ತಿಗಳು, ಹೀಗೆ ಅನೇಕ ಸನ್ಮಾನಗಳು ಅವರನ್ನು ಅರಸಿ ಬಂದಿವೆ. ಸರಳವಾದ ಬದುಕು, ಶ್ರದ್ಧೆಯ ಚಿಂತನೆಗಳಿಂದ ಬೆಳೆದ ಕೇಶವ ಗುರುಂ ಅವರು ಬಾಳಿನ ಸಂಜೆಯಲ್ಲೂ ಕ್ರಿಯಾಶೀಲರು. ಸಂಗೀತ ಸೇವಕರಾಗಿ, ಕಾವ್ಯದ ಉಪಾಸಕರಾಗಿ ಬದುಕಿನ ಘನತೆಯನ್ನು ಹೆಚ್ಚಿಸಿದವರು.

■ ■ ■



ಪಂ. ವಸಂತ ಕನಕಾಪೂರ

# 'ಸಂವಾದಿನಿ ಸಾಮ್ರಾಟ್'
# ಪಂ. ವಸಂತ ಕನಕಾಪುರ
## (೧೯೩೭-೨೦೧೩)

● ರವೀಂದ್ರ ಕವತೇಕರ

ಹಿಂದುಸ್ತಾನಿ ಸಂಗೀತಕ್ಕೆ ಕರ್ನಾಟಕದ ಕೊಡುಗೆ ಅಪಾರ. ಕನ್ನಡದ ಕಲಾವಿದರೆಂದರೆ ಎಲ್ಲಿಲ್ಲದ ಗೌರವ. ಅದರಲ್ಲೂ ಧಾರವಾಡಕ್ಕೆ ವಿಶೇಷ ಸ್ಥಾನಮಾನ. ಸಂಗೀತದ ಮುಕುಟಮಣಿಗಳಿಗೆ ಜನ್ಮ ನೀಡಿ ಹಿಂದುಸ್ತಾನಿ ಸಂಗೀತದ ಕ್ಷಿತಿಜವನ್ನು ವಿಸ್ತರಿಸುವಂತೆ ಮಾಡಿದ ಕೀರ್ತಿ ಧಾರವಾಡದ್ದು. ತಮ್ಮದೇ ಆದ ಶೈಲಿಯಲ್ಲಿ ಹಾರ್ಮೋನಿಯಂ (ಸಂವಾದಿನಿ) ನಿನಾದ ಹರಿಸಿ ಸಂಗೀತಕ್ಷೇತ್ರಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದವರ ಸಾಲಿನಲ್ಲಿ ವಿರಾಜಮಾನವಾಗುವ ಇನ್ನೊಂದು ಹೆಸರು ಪಂ. ವಸಂತ ಕನಕಾಪುರ ಅವರದು.

ಕೇವಲ ಸಾಥ್ ನೀಡಲು ಮಾತ್ರ ಪ್ರಯೋಜನವೆಂದು ಭಾವಿಸಲಾಗಿದ್ದ ಹಾರ್ಮೋನಿಯಂ(ಸಂವಾದಿನಿ)ಗೆ ತಮ್ಮಲ್ಲಿದ್ದ ಕಲಾಕೌಶಲಗಳಿಂದ ಮಾಂತ್ರಿಕ ಸ್ಪರ್ಶ ನೀಡಿ, ಸ್ವಪ್ರತಿಭೆಯ ಸೌಧವನ್ನು ನಿರ್ಮಿಸಿದ ಸಂವಾದಿನಿ ಸಾಮ್ರಾಟ್ ಪಂ. ವಸಂತ ಕನಕಾಪುರ ಅವರು.

ದೇಶದುದ್ದಗಲಕ್ಕೂ ಸಂಚರಿಸಿ ಸುವಿಖ್ಯಾತ ಸಂಗೀತಗಾರರಿಗೆ ಹಾರ್ಮೋನಿಯಂ ಸಾಥ್ ಹಾಗೂ ಜನಸಾಮಾನ್ಯರ ಮನಮುಟ್ಟುವಂತೆ ಸಂಗೀತ ಸಂಯೋಜನೆ ಮಾಡಿ, ಸಂಗೀತಸೌಗಂಧದ ಪರಿಮಳವನ್ನು ಇಮ್ಮಡಿಗೊಳಿಸಿದ ಪಂ. ವಸಂತ ಕನಕಾಪುರ ಅವರು ನಾದಲೋಕದ ಶ್ರೇಷ್ಠ ಸಾಧಕ.

ಮೂಲತಃ ಹುಬ್ಬಳ್ಳಿಯವರಾದ ಪಂ. ವಸಂತ ಕನಕಾಪುರ ಅವರು ಜನಿಸಿದ್ದು ೧೯೩೭ ನವೆಂಬರ್ ೯ ರಂದು. ಕಲೋಪಾಸಕರ ಮನೆತನ. ತಂದೆ ಭೀಮರಾವ್, ತಾಯಿ ಭಾರತಿಬಾಯಿ. ತಂದೆ ಭೀಮರಾವ್ ಅಪ್ಪಟ ಸಂಗೀತಪ್ರೇಮಿ ಹಾಗೂ ಹವ್ಯಾಸಿ ಸಿತಾರವಾದಕರು. ತಾಯಿ ಭಾರತಿಬಾಯಿ ಕೂಡ ಸಂಗೀತಗಾರರ ಮನೆತನದ ಹಿನ್ನೆಲೆಯಿಂದ ಬಂದವರು. ಸಹಜವಾಗಿ ಪಂ. ಕನಕಾಪುರ ಅವರಿಗೆ ಬಾಲ್ಯದಿಂದಲೇ ಹಾರ್ಮೋನಿಯಂ ವಾದನದತ್ತ ಒಲವು.

ತಂದೆ ಭೀಮರಾವ್ ಅವರು ಶ್ರೇಷ್ಠ ಹಾರ್ಮೋನಿಯಂ ವಾದಕರಾದ ಪಂ. ಆರ್.ಜಿ. ದೇಸಾಯಿ ಅವರ ಸ್ನೇಹಿತರು. ವಸಂತನ ಅಕ್ಕ ಚಂಪಾ ಅವರನ್ನು ಹಾರ್ಮೋನಿಯಂ ಕಲಿಕೆಗಾಗಿ ಪಂ. ದೇಸಾಯಿ ಅವರಲ್ಲಿ ಕಳುಹಿಸುತ್ತಿದ್ದರು. ಅದೇ ಸಮಯದಲ್ಲಿ ಮಗ ವಸಂತನನ್ನು ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದರು.

ಪಂ. ದೇಸಾಯಿ ಅವರು ಶಿಷ್ಯರಿಗೆ ನಡೆಸುತ್ತಿದ್ದ ಹಾರ್ಮೋನಿಯಂ ವಾದನದ ವರ್ಗಗಳು ಹಾಗೂ ಅವರು ಮಾಡುವ ರಿಯಾಜ್‌ಗಳನ್ನು ವಸಂತ ಅತೀವ ಶ್ರದ್ಧೆಯಿಂದ ವೀಕ್ಷಿಸುತ್ತಿದ್ದ. ವಸಂತನಿಗೆ ಹಾರ್ಮೋನಿಯಂ ವಾದನ ಕಲಿಯಬೇಕೆಂಬ ಉತ್ಕಟ ಹಂಬಲ. ಹೀಗಾಗಿ ಅಕ್ಕನ ಹಾರ್ಮೋನಿಯಂ ಕಲಿಕೆಯ ಸಂದರ್ಭದಲ್ಲಿ ವಸಂತ ತಪ್ಪದೇ ಹಾಜರ್ ಇರುತ್ತಿದ್ದ. ಗುರುಗಳು ಬೋಧಿಸುತ್ತಿದ್ದ ಪಾಠಗಳನ್ನು ಒಪ್ಪಿಸಲು ಅಕ್ಕನಿಗೆ ಸಾಧ್ಯವಾಗಲಿಲ್ಲ. ಇದನ್ನು ಗಮನಿಸುತ್ತಿದ್ದ ವಸಂತ, 'ನಾ ನುಡಿಸ್ತೀನಿ' ಎಂದು ಪಂ. ದೇಸಾಯಿ ಅವರಿಗೆ ಕೇಳಿಕೊಳ್ಳುತ್ತಿದ್ದ. ವಸಂತ ಆಗಿನ್ನೂ ೫ ವರ್ಷದ ಪುಟ್ಟಪೋರ. ಆದರೆ ತಂದೆ ಭೀಮರಾವ್ ಹಾಗೂ ಪಂ. ದೇಸಾಯಿ ಅವರಿಗೆ ವಸಂತನ ಮಾತಿನಲ್ಲಿ ನಂಬಿಕೆಯಿರಲಿಲ್ಲ. 'ನೀ ಇನ್ನೂ ಚೋಟ್ ಇದ್ದೀ, ನೀ ಏನ್ ನುಡಿಸ್ತೀ' ಎಂದು ಹಾರಿಕೆ ಉತ್ತರ ನೀಡುತ್ತಿದ್ದರು. ಅಕ್ಕ ಚಂಪಾಗೆ ಕೊನೆಗೂ ಪಾಠ ಒಪ್ಪಿಸಲಾಗದೆ ಇದ್ದಾಗ ನಾ ನುಡಿಸ್ತೀನಿ ಎನ್ನುತ್ತಿದ್ದ ವಸಂತನ ಪರೀಕ್ಷೆ ಮಾಡಿಯೇ ಬಿಡೋಣ ಎನ್ನುತ್ತ ಪಂ. ದೇಸಾಯಿ ಅವರು ಹಾರ್ಮೋನಿಯಂ ನುಡಿಸಲು ಹೇಳಿದರು. ಅಕ್ಕ ಚಂಪಾಗೆ ಹೇಳಿಕೊಟ್ಟ ಪಾಠಗಳನ್ನು ಯಥಾವತ್ತಾಗಿ ನುಡಿಸಿದ. ಪುಟ್ಟಪೋರ ವಸಂತನಲ್ಲಿದ್ದ ಪ್ರತಿಭೆಯು ಪಂ. ದೇಸಾಯಿ ಅವರಿಗೆ ಸಖೇದಾಶ್ಚರ್ಯ ಹಾಗೂ ಅತೀವ ಸಂತೋಷಗೊಳಿಸಿತು. ತಕ್ಷಣ ವಸಂತನನ್ನು ಕರೆದುಕೊಂಡು ತಂದೆ ಭೀಮರಾವ್ ಅವರತ್ತ ತೆರಳಿ 'ಇವನಿಗೆ ಹಾರ್ಮೋನಿಯಂ ವಾದನ ಕಲಿಸಿ. ಇವನಿಗೆ ಒಳ್ಳೆಯ ಭವಿಷ್ಯವಿದೆ' ಎಂದು ಹೇಳಿ ಶಿಷ್ಯನನ್ನಾಗಿ ಸ್ವೀಕರಿಸಿದಾಗ ವಸಂತನಿಗೆ ಅತೀವ ಆನಂದ.

ಈಗ ಪಂ. ಆರ್.ಜಿ. ದೇಸಾಯಿ ಅವರಲ್ಲಿ ಪೂರ್ಣಪ್ರಮಾಣದ ಹಾರ್ಮೋನಿಯಂ ವಾದನದ ಆಳವಾದ ಅಧ್ಯಯನ ಪ್ರಾರಂಭ. ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ನಾಲ್ಕು ಗಂಟೆಗಳ ಕಾಲ ಅವ್ಯಾಹತ ಸಂಗೀತ ಪಾಠ ನಡೆಯುತ್ತಿತ್ತು. ಪ್ರತಿ ರಾಗಗಳ ಕುರಿತು ಆಳವಾದ ಅವಲೋಕನ, ರಾಗದ ಪ್ರಮುಖ ಲಕ್ಷಣಗಳು, ಅವುಗಳಲ್ಲಿ ಬಳಕೆಯಾಗುವ ಸ್ವರಗಳು, ರಾಗಾಂಗ ಪದ್ಧತಿ, ವಿಭಿನ್ನ ಅಲಂಕಾರಗಳು, ಹೇಳಿಕೊಟ್ಟ ಪಾಠಗಳನ್ನು ಶಿಷ್ಯನಿಂದ ಹಾರ್ಮೋನಿಯಂ ವಾದನದ ಪರೀಕ್ಷೆ; ರಾಗ–ರಾಗಿಣಿಯರ, ಥಾಟ್‌ಗಳ ಹಾಗೂ ಅಪ್ರಚಲಿತ ರಾಗಗಳ ಕುರಿತು ವಿಸ್ತೃತ ಮಾಹಿತಿ; ಗುರು ಪಂ. ದೇಸಾಯಿ ಅವರಿಂದ ಕಲಿತ ಪ್ರಪ್ರಥಮ ರಾಗ ಯಮನ್. ಗುರುಗಳ ಪದತಲದಲ್ಲಿ ಕುಳಿತು ಇಂಥ ಉನ್ನತ ಮಟ್ಟದ ಪಾಠಗಳ ಸಂಗೀತಾಭ್ಯಾಸಗೈದ ಪುಟ್ಟಪೋರ ವಸಂತ ಅತ್ಯಂತ ಕಡಿಮೆ ಅವಧಿಯಲ್ಲಿ ಹಾರ್ಮೋನಿಯಂ ನುಡಿಸುವಲ್ಲಿ ನಿಷ್ಣಾತನಾದ.

ಪಂ. ದೇಸಾಯಿ ಅವರು ತಾವು ನೀಡುತ್ತಿದ್ದ ಸಾರ್ವಜನಿಕ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಮಂಚಪ್ರದರ್ಶನದ ಸಮಯದಲ್ಲಿ ಸೋಲೋ ಹಾಗೂ ಗಾಯನ–ವಾದನಗಳೊಂದಿಗೆ ಸಾಥ್ ಸಂಗತ್ ನೀಡುವವರ ಲಕ್ಷಣ ಹೇಗಿರಬೇಕು; ಮೆಹಫಿಲ್‌ಗಳಲ್ಲಿ ಸೋಲೋ ಹಾಗೂ ಸಾಥ್ ನೀಡುತ್ತ ರಂಗೇರಿಸುವ ಕೌಶಲ್ಯವನ್ನು ಪ್ರದರ್ಶಿಸಿ ಶ್ರೋತೃಗಳಿಂದ ಶಹಬ್ಬಾಷಗಿರಿ ಗಿಟ್ಟಿಸುವಂಥ ಸೂಕ್ಷ್ಮ ವಿಷಯಗಳನ್ನು ಶಿಷ್ಯನಿಗೆ ಧಾರೆ ಎರೆಯುತ್ತಿದ್ದರು. ನಂತರ ಗೋಪಾಲ ದೇಸಾಯಿ ಅವರಲ್ಲಿ ಅಭ್ಯಾಸ ಮುಂದುವರಿಯಿತು.

ಗುರು ಪಂ. ದೇಸಾಯಿ ಅವರು ತಾವು ನೀಡುತ್ತಿದ್ದ ಸಾರ್ವಜನಿಕ ಕಾರ್ಯಕ್ರಮಗಳಿಗೆ ಶಿಷ್ಯನನ್ನು ಕರೆದುಕೊಂಡು ಹೋಗಿ ಅವನ ಪ್ರಾವೀಣ್ಯದ ಕುರಿತು ಇನ್ನಿತರರೊಂದಿಗೆ ಹಂಚಿಕೊಳ್ಳುತ್ತಿದ್ದರು. ಅವರು ಕೇಳಿದಂತೆ ವಸಂತ ಹಾರ್ಮೋನಿಯಂ ನುಡಿಸುತ್ತಿದ್ದ ಸುದ್ದಿಯು ಹರಡಿ ಸಾಂಗ್ಲಿ ಆಸ್ಥಾನದ ಮಹಾರಾಜನ ಕಿವಿಗೆ ಬಿತ್ತು. ೫ ವರ್ಷದ ಪುಟ್ಟಪೋರನ ಹಾರ್ಮೋನಿಯಂ ವಾದನವನ್ನು ಕೇಳಬೇಕೆಂಬ ಕೌತುಕ ಮಹಾರಾಜನ ಮನದಲ್ಲಿ ಮನೆ ಮಾಡಿತ್ತು. ತಕ್ಷಣ ಮಹಾರಾಜನಿಂದ ವಸಂತನ ಸೋಲೋ ಕಾರ್ಯಕ್ರಮಕ್ಕೆ ಬುಲಾವ್ ಬಂತು. ಅಲ್ಲಿ ಸುಮಾರು ಒಂದು ತಾಸು ರಾಗ ಯಮನ್ ಸೋಲೋ ನುಡಿಸಿದ ವಸಂತನ ಪ್ರಾವೀಣ್ಯವನ್ನು ಕಂಡು ಆನಂದತುಂದಿಲರಾದ ಮಹಾರಾಜ ಹಾಗೂ ನೆರೆದಿದ್ದ ವಿದ್ವಾಂಸರು, ಸಂಗೀತ ಪ್ರೇಮಿಗಳು ಮನಸಾರೆ ಮೆಚ್ಚಿಕೊಂಡು ಪಾರಿತೋಷಕ ನೀಡಿ ಸನ್ಮಾನಿಸಿದರು.

ಆಗ ಅವನಿಗೆ ೯ ವರ್ಷದ ಬಾಲ್ಯಾವಸ್ಥೆಯ ಸಮಯ. ತಂದೆ ಭೀಮರಾವ್ ಅವರು ನಿಧನರಾಗಿದ್ದು ವಸಂತನಿಗೆ ಅತೀವ ದುಃಖವನ್ನುಂಟು ಮಾಡಿತು. ಆಗ ಗುರುಗಳಾದ ಪಂ. ಆರ್.ಜಿ. ದೇಸಾಯಿ ಅವರು ಬಾಲಕ ವಸಂತನಿಗೆ ತಂದೆಯ ಸ್ಥಾನದಲ್ಲಿ ನಿಂತು ಹಾರ್ಮೋನಿಯಂ ತರಬೇತಿಯನ್ನು ಮುಂದುವರಿಸಿದರು. ಮುಂದೆ ಎರಡೇ ವರ್ಷಗಳಲ್ಲಿ ಮೈಸೂರು ಆಸ್ಥಾನದ ಮಹಾರಾಜರಿಂದ ಸಂಗೀತ ಕಛೇರಿಗೆ ಆಹ್ವಾನ ಬಂತು. ಬಾಲಕ ವಸಂತ ನೀಡಿದ ಸೋಲೋ ಕಾರ್ಯಕ್ರಮದಿಂದ ಅವನಲ್ಲಿದ್ದ ಪ್ರತಿಭೆಯು ನಾಡಿನಾದ್ಯಂತ ಅನಾವರಣಗೊಳ್ಳತೊಡಗಿತು. ಅವರು ಹನ್ನೆರಡನೇ ವಯಸ್ಸಿಗೇನೇ ಸೋಲೋ ಕಾರ್ಯಕ್ರಮ ನೀಡಿದರು.

ವಸಂತನಿಗೆ ಆಗ ಸುಮಾರು ೧೩ ವರ್ಷ ವಯಸ್ಸು. ಆಗ ಗದುಗಿನಲ್ಲಿ ಪಂ. ವಿಠ್ಠಲಸಾ ಕಬಾಡಿಯವರಲ್ಲಿ ಹಾರ್ಮೋನಿಯಂ ತರಬೇತಿ ಪ್ರಾರಂಭ. ಬಾಲಕ ವಸಂತ ಹಾರ್ಮೋನಿಯಂ ವಾದನದಲ್ಲಿ ಸಾಧಿಸಿದ್ದ ಪರಿಣಿತಿಯು ವಿಠ್ಠಲಸಾ ಕಬಾಡಿಯವರ ಮನದಲ್ಲಿ ಅಚ್ಚಳಿಯದಂತೆ ಬೇರೂರಿತ್ತು ಎಂಬುದಕ್ಕೆ ಗದುಗಿನಲ್ಲಿ ನಡೆದ ಈ ಘಟನೆಯೇ ಸಾಕ್ಷಿ. ಜೈಪುರ-ಅತ್ರೌಲಿ ಘರಾಣೆಯ ಸುವಿಖ್ಯಾತ ಸಂಗೀತವಿದುಷಿ ಕೇಸರಬಾಯಿ ಕೇಳಕರ ಅವರ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅವರ ಗಾಯನ ಕಛೇರಿಗೆ ಹಾರ್ಮೋನಿಯಂ ಸಾಥಿಗಾಗಿ ಕಬಾಡಿಯವರಿಗೆ ಆಮಂತ್ರಣ ಬಂದಿತ್ತು. ಶಿಷ್ಯನ ಪ್ರಾವೀಣ್ಯದ ಮೇಲೆ ಅಪಾರ ನಂಬಿಕೆಯಿರಿಸಿದ್ದ ಪಂ. ಕಬಾಡಿಯವರು, 'ವಸಂತನನ್ನು ತಮ್ಮ ಕಛೇರಿಗೆ ಹಾರ್ಮೋನಿಯಂ ಸಾಥಿಯಾಗಿಸಿಕೊಳ್ಳಿ' ಎಂದು ಕೇಸರಬಾಯಿ ಅವರನ್ನು ಕೇಳಿಕೊಂಡರು. ಆಗ ಕೇಸರಬಾಯಿ ಅವರು, 'ಅಲ್ಲೋ, ಇಂವಾ ಇನ್ನೂ ಚೋಟುದ್ದ ಇದ್ದಾನ. ನನಗ ಇಂವಾ ಏನ್ ಸಾಥ್ ಮಾಡ್ತಾನೋ' ಎಂದು ಪ್ರಶ್ನಿಸಿದರು. ಆಗ ಪಂ. ಕಬಾಡಿಯವರು 'ಇಂವಾ ನಿಮಗ ಸರಿಯಾಗಿ ಹಾರ್ಮೋನಿಯಂ ಸಾಥ್ ನೀಡ್ಲಿಲ್ಲಾಂದ್ರ ನಾನು ಸಾಥ್ ಕೊಡ್ತೇನಿ' ಎಂದು ಹೇಳಿ ವಸಂತನಿಗೆ ಸಾಥ್ ನೀಡಲು ಹೇಳಿದರು. ಗುರುಗಳ ವಿಶ್ವಾಸವನ್ನು ವಸಂತ ಹುಸಿಗೊಳಿಸಲಿಲ್ಲ. ಕಛೇರಿಯುದ್ದಕ್ಕೂ ಅತ್ಯದ್ಭುತ ಹಾರ್ಮೋನಿಯಂ ಸಾಥ್ ನೀಡಿ ವಿದುಷಿ ಕೇಸರಬಾಯಿ ಅವರಿಂದ ಶಹಬ್ಬಾಷಗಿರಿ ಪಡೆದರು. ಈ ಘಟನೆಯನ್ನು ಪಂ.

ವಸಂತ ಕನಕಾಪುರ ಅವರು ಇಂದಿಗೂ 'ಇದು ನನ್ನ ಜೀವನದ ಅವಿಸ್ಮರಣೀಯ ಕ್ಷಣ' ಎಂದು ಹೇಳುತ್ತಾರೆ.

ಈಗ ವಸಂತನಿಗೆ ೧೫ ರ ಯೌವ್ವನ. ಸಂಗೀತ ಕಲಿಯುವವರಿಗೆ ಮುಂಬೈಯಲ್ಲಿ ಪ್ರೋತ್ಸಾಹ ಸಿಗುತ್ತದೆಂಬ ಕಾರಣದಿಂದ ವಸಂತ ಮುಂಬೈಗೆ ಹೋಗಲು ನಿರ್ಧರಿಸಿದ್ದ. ಮುಂಬೈಗೆ ಹೋಗಲು ಕೈಯಲ್ಲಿ ಕಾಸು ಇರಲಿಲ್ಲ. ಮನೆಯಲ್ಲಿ ಒಪ್ಪಿಗೆಯಿರಲಿಲ್ಲ. ಆಗ ತಾಯಿಯ ಟ್ರಂಕಿನಲ್ಲಿದ್ದ ೨೦೦ ರೂಪಾಯಿಗಳನ್ನು ಕದ್ದು ಮುಂಬೈ ರೈಲನ್ನು ಹತ್ತಿ ಮುಂಬೈ ತಲುಪಿದ. ಆಗ ಅಲ್ಲಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಗಳಲ್ಲಿ ಭಾಗವಹಿಸುತ್ತಿದ್ದ. ವಸಂತ ಕನಕಾಪುರ ಅವರಲ್ಲಿದ್ದ ಚಿಕಿತ್ಸಕ ಬುದ್ಧಿ ಹಾಗೂ ಹಾರ್ಮೋನಿಯಂ ನುಡಿಸುವ ಕೌಶಲ್ಯವನ್ನು ಸೂಕ್ಷ್ಮವಾಗಿ ಗಮನಿಸಿದ ಖ್ಯಾತ ಸಂಗೀತಗಾರ ಪಂ. ಮನೋಹರ ಬರ್ವೆ ಅವರು ಕನಕಾಪುರ ಅವರಿಗೆ ಆಶ್ರಯ ನೀಡಿದರು. ತಾವು ನಡೆಸುತ್ತಿದ್ದ ಸಂಗೀತ ತರಗತಿಗಳಿಗೆ ಶಿಕ್ಷಕರಾಗಿ ನಿಯುಕ್ತಗೊಳಿಸಿದರು. ಮುಂಬೈಯಲ್ಲಿ ಎರಡು ವರ್ಷಗಳು ಕಳೆದ ನಂತರ ತಾಯಿಯಿಂದ ಬುಲಾವ್ ಬಂತು. ತಾಯಿಯ ಒತ್ತಾಸೆಯ ಮೇರೆಗೆ ಪುನಃ ಧಾರವಾಡಕ್ಕೆ ಮರಳಿದರು. ಅಲ್ಲಿ ಪಂ. ಹನುಮಂತರಾವ್ ವಾಳ್ವೇಕರ ಅವರ ಮಾರ್ಗದರ್ಶನ ದೊರೆಯಿತು.

ಎಳೆಯ ಯುವಕನ ಕೈಚಳಕ ಕಂಡುಕೊಂಡ ದಿಗ್ಗಜಕಲಾವಿದರಿಂದ ಹಾರ್ಮೋನಿಯಂ ಸಾಥ್‌ಗಾಗಿ ಆಹ್ವಾನ ಬರತೊಡಗಿದವು. ಆದರೆ ವಸಂತ ಕನಕಾಪುರ ಅವರ ಕಲಿಯುವ ದಾಹ ಎಷ್ಟರ ಮಟ್ಟಿಗೆ ಇತ್ತು ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಕನಕಾಪುರ ಅವರು ಧಾರವಾಡದಲ್ಲಿ ರೂಂ ಮಾಡಿಕೊಂಡು ಹಗಲು ರಾತ್ರಿಯೆನ್ನದೇ ಹಾರ್ಮೋನಿಯಂ ಅಭ್ಯಾಸ ಮಾಡುತ್ತಿದ್ದರು. ಅದೇ ಸಂದರ್ಭದಲ್ಲಿ ಸುತ್ತಮುತ್ತಲಿನ ಕೆಲವರು ನಮಗೆ ತೊಂದರೆಯಾಗ್ತದೆ ಎಂದು ಪೊಲೀಸರಿಗೆ ದೂರು ನೀಡಿದರು. ಪರಿಣಾಮವಾಗಿ ಅದು ಆಗಿನ ಎಸ್‌ಐ ಬಿದರಕುಂದಿ ಅವರ ಬಳಿ ತಲುಪಿತ್ತು.

ಎಸ್‌ಐ ಅವರು ಕೂಡ ಸಂಗೀತಪ್ರೇಮಿ. ಆದರೆ ಅವರಿಗೆ ಅನ್ಯ ದಾರಿ ಇರಲಿಲ್ಲ. ಕನಕಾಪುರ ಬಳಿ ಬಂದು 'ನಿನ್ನ ಹಾರ್ಮೋನಿಯಂ ಅಭ್ಯಾಸ ನಿಲ್ಲಿಸು' ಎಂದು ತಾಕೀತು ಮಾಡಿದರು. ಅದಕ್ಕೆ ಅಳುಕದ ಕನಕಾಪುರ ಅವರು 'ನನಗೆ ಸಂಗೀತ ಬಿಟ್ಟು ಇರ್ಲಿಕ್ಕೆ ಆಗೂದಿಲ್ಲ' ಎಂದರು. ಅದಕ್ಕೆ ಎಸ್‌ಐ ಅವರು 'ನೀ ಬೇಕಾದ್ರೆ ಸುಡುಗಾಡಿಗೆ ಹೋಗು, ಆದ್ರ ಇವತ್ತಿನಿಂದ ಇಲ್ಲಿ ಅಭ್ಯಾಸ ಬಂದ್' ಎಂದು ಹೇಳಿದ್ದು ವರದಾನವಾಗಿ ಪರಿಣಮಿಸಿತು. ಅದರಂತೆ ರೂಮ್‌ನಲ್ಲಿ ನಡೆಸುತ್ತಿದ್ದ ರಿಯಾಜ್ ಹೊಸಯಲ್ಲಾಪುರದ ಸ್ಮಶಾನಕ್ಕೆ ಸ್ಥಳಾಂತರಗೊಂಡಿತು. ಗೆಳೆಯ, ತಬಲಾವಾದಕ ಗುರುನಾಥ ಘಳಗಿ ಅವರೊಂದಿಗೆ ಪ್ರತಿ ರಾತ್ರಿಯಿಂದ ಬೆಳಗಿನ ಜಾವ ನಾಲ್ಕು ಗಂಟೆಯವರೆಗೂ ತಾಲೀಮು. ಇದು ಒಂದಲ್ಲ ಎರಡಲ್ಲ, ಎಂಟು ವರ್ಷಗಳವರೆಗೆ ನಿರಂತರವಾಗಿ ನಡೆಯಿತು. ಇದೇ ಸಮಯದಲ್ಲಿ ಮುಂಬೈನ ಗಂಧರ್ವ ಮಹಾವಿದ್ಯಾಲಯದಿಂದ ಸಂಗೀತ ವಿಶಾರದ ಹಾಗೂ ಅಲಂಕಾರ್ ಪದವಿಗಳನ್ನು ಪಡೆದುಕೊಂಡರು.

ಅದೇ ಸಮಯದಲ್ಲಿ ಧಾರವಾಡದಲ್ಲೊಂದು ಅವಿಸ್ಮರಣೀಯ ಘಟನೆ ನಡೆಯಿತು. ಅಂದು ಗಾನದಿಗ್ಗಜ ಉಸ್ತಾದ್ ಅಜ್ಮತ್‌ಹುಸೇನ್‌ಖಾನ್‌ರ ಸಂಗೀತ ಕಛೇರಿಯನ್ನು

ಹಮ್ಮಿಕೊಳ್ಳಲಾಗಿತ್ತು. ಅನೇಕ ಸಂಗೀತಗಾರರು ಉಪಸ್ಥಿತರಿದ್ದರು. ಅವರ ಗಾಯನ ಕೇಳಲು ವಸಂತ ಕನಕಾಪುರ ಅವರು ಆಗಮಿಸಿದ್ದರು. ಅಜ್ಮತ್‌ಹುಸೇನ್‌ಖಾನ್‌ರು ಬಹಳ ನಿಷ್ಠುರವಾದಿ. ತಮ್ಮ ಕಛೇರಿಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಾಥಿದಾರರನ್ನು ಪರೀಕ್ಷಿಸುವದು ವಾಡಿಕೆ. ಅವರಿಗೆ ಒಪ್ಪಿಗೆ ಆದ್ರೆ ಮಾತ್ರ ಸಾಥ್‌ಗೆ ಆಯ್ದುಕೊಳ್ಳುತ್ತಿದ್ದರು. ಆದರೆ ಅಂದು ಉಪಸ್ಥಿತರಿದ್ದ ಹಾರ್ಮೋನಿಯಂ ಸಾಥಿಗಳು ಖಾನ್ ಸಾಹೇಬರಿಗೆ ಒಪ್ಪಿಗೆಯಾಗಲಿಲ್ಲ. ಆಗ ಖಾನ್ ಸಾಹೇಬರು, 'ಧಾರವಾಡದಲ್ಲಿ ಚೆನ್ನಾಗಿ ಹಾರ್ಮೋನಿಯಂ ನುಡಿಸಬಲ್ಲ ಗಂಡಸರೇ ಇಲ್ಲವೇ?' ಎಂದು ಕೇಳಿದ ಪ್ರಶ್ನೆಯು ಕನಕಾಪುರ ಅವರ ಮನ ತಾಕಿತು. ಆಗ ಕನಕಾಪುರ ಅವರು ಮುಂದೆ ಬಂದು, 'ನಾನು ನುಡಿಸುತ್ತೇನೆ' ಎಂದರು. ಅದಕ್ಕೆ ಪ್ರತಿಯಾಗಿ ಖಾನ್ ಸಾಹೇಬರು, 'ಬಹಳ ಸಣ್ಣವಿದ್ದಿ. ನೀ ಏನ್ ನುಡಿಸ್ತಿಯೋ?' ಎಂದು ಕೇಳಿದರು. ಅದಕ್ಕೆ ಕನಕಾಪುರ ಅವರು 'ಇದು ಒಂದೊಂದಲ್ಲ ನೋಡ್ರಿ' ಎಂದರು. ನಂತರ ಖಾನ್ ಸಾಹೇಬರಿಂದ ಪರೀಕ್ಷೆಗೊಳಪಟ್ಟು ಸೈ ಎನಿಸಿಕೊಂಡಿದ್ದು ಕನಕಾಪುರ ಅವರ ಪಾಂಡಿತ್ಯಕ್ಕೆ ಹಿಡಿದ ಕೈಗನ್ನಡಿಯಾಗಿತ್ತು.

೧೯೬೨ ರಲ್ಲಿ ಕಿತ್ತೂರಿನ ಬನೂತಾಯಿ ಅವರೊಂದಿಗೆ ವಿವಾಹವಾಯಿತು. ಇನ್ನು ಹೊಟ್ಟೆಪಾಡಿಗಾಗಿ ಉದ್ಯೋಗವನ್ನರಸುತ್ತಿದ್ದ ಸಮಯದಲ್ಲಿ ದಾಂಡೇಲಿ ಪೇಪರ್ ಮಿಲ್‌ನಲ್ಲಿ ಕೆಲಸ ಸಿಕ್ಕಿತು. ದಾಂಡೇಲಿ ಎಜ್ಯುಕೇಶನ್ ಸೊಸೈಟಿಯ ವೀಣಾ ಸಂಗೀತ ವಿದ್ಯಾಲಯದಲ್ಲಿ ಶಿಕ್ಷಕನಾಗಿಯೂ ಸುಮಾರು ೧೨ ವರ್ಷಗಳ ಸೇವೆ ಸಲ್ಲಿಸಿದರು.

೧೯೭೫ರಲ್ಲಿ ಪಂ. ವಸಂತ ಕನಕಾಪುರ ಅವರನ್ನು ಧಾರವಾಡ ಪುನಃ ಕೈಬೀಸಿ ಕರೆಯಿತು. ಆಗ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಸಂಗೀತಸಂಯೋಜಕ ಹುದ್ದೆಯು ಸೃಷ್ಟಿಯಾಗಿತ್ತು. ಅದನ್ನು ಸಿದ್ದಾಪುರ ಎನ್ನುವವರು ಪಂ. ಕನಕಾಪುರ ಅವರಿಗೆ ತಿಳಿಸಿ ಸಂಯೋಜಕ ಹುದ್ದೆಗೆ ಅರ್ಜಿ ಹಾಕು ಎಂದು ಹೇಳಿದರು. ಅರ್ಜಿ ಹಾಕಿದ ನಂತರ ನಡೆದ ಆಡಿಷನ್ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಎ ಗ್ರೇಡ್ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಸಂಗೀತಸಂಯೋಜಕ ಹುದ್ದೆಗೆ ಆಯ್ಕೆಗೊಂಡರು.

ಅಸಂಖ್ಯಾತ ಭಕ್ತಿಗೀತೆ, ಭಾವಗೀತೆ, ಶರಣಸಾಹಿತ್ಯ, ದಾಸಸಾಹಿತ್ಯಗಳಿಗೆ ಕಲಾರಸಿಕರ ಮನಮುಟ್ಟುವಂತೆ ಸಂಗೀತ ಸಂಯೋಜನೆ ಮಾಡಿ ಧಾರವಾಡ ಆಕಾಶವಾಣಿ ನಿಲಯಕ್ಕೆ ಅಪಾರ ಕೀರ್ತಿ ತಂದ ಎ ಶ್ರೇಣಿ ಸಂಗೀತ ಸಂಯೋಜಕರಿವರು. ಭಾರತದ ಸುಪ್ರಸಿದ್ಧ ಕಲಾವಿದರಿಗೆ ಆಕಾಶವಾಣಿ ಸಂಗೀತ ಸಮ್ಮೇಳನ ಹಾಗೂ ಆಕಾಶವಾಣಿ ರಾಷ್ಟ್ರೀಯ ಸಂಗೀತ ಸಮ್ಮೇಳನಗಳಲ್ಲಿ ಅತ್ಯುತ್ತಮ ಹಾರ್ಮೋನಿಯಂ ಸಾಥ್ ನೀಡಿ, ಧಾರವಾಡ ಆಕಾಶವಾಣಿಯ ಖ್ಯಾತಿಯನ್ನು ದ್ವಿಗುಣಗೊಳಿಸಿದ್ದಾರೆ. ಖ್ಯಾತ ಚಲನಚಿತ್ರ ಸಂಗೀತನಿರ್ದೇಶಕ ರವಿ ಅವರಿಗೆ 'ಅಲಬೇಲಿ' ಚಿತ್ರಕ್ಕೆ ಸಂಗೀತ ನಿರ್ದೇಶನದಲ್ಲಿ ಸಹಾಯಕರಾಗಿ ಕೆಲಸ ಮಾಡಿದ ಹಿರಿಮೆ ಪಂ. ಕನಕಾಪುರ ಅವರದು.

ಪಂ. ವಸಂತ ಕನಕಾಪುರ ಅವರ ಹೆಸರು ಕೇಳಿದ ಕೂಡಲೇ ಎಲ್ಲರ ಸ್ಮೃತಿಪಟಲದಲ್ಲಿ ಥಟ್ ಅಂತ ಮೂಡುವ ಚಿತ್ರಣ ಬಿಳಿಯ ಪೈಜಾಮ್, ನೆಹರು ಶರ್ಟ್, ಮೇಲೊಂದು ಜುಬ್ಬಾ, ಕುಳ್ಳನೆಯ ಶರೀರ, ದುಂಡು ಮುಖ, ಮೇಲ್ನೋಟಕ್ಕೆ ಒಬ್ಬ ಶ್ರೀಸಾಮಾನ್ಯ, ಆದರೆ ಅಂತರಂಗದಲ್ಲಿ ನಾದಸ್ವರಗಳ ಸದನ. ವೇದಿಕೆ ಏರಿ

ಹಾರ್ಮೋನಿಯಂ ಮೇಲೆ ಬೆರಳಾಡಿಸಿದರೆ ವಾಗ್ದೇವಿ ಸರಸ್ವತಿಯ ದರ್ಶನ. ವಿದ್ಯೆಯ ವರ್ಚಸ್ಸಿನಿಂದ ಹೊಳೆಯುವ ಗೋಧಿಬಣ್ಣದ ಮುಖಕಾಂತಿ, ಸುಂದರವದನದ ವಾಮನ ಮೂರ್ತಿ; ಅವರ ಹಾರ್ಮೋನಿಯಂ ವಾದನವೆಂದರೆ ಕಪ್ಪುಶಿಲೆಯಲ್ಲಿ ಕೊರೆದ ಸುಂದರ–ಅಜರಾಮರ ಕಲಾಕೃತಿ.

ಭಾವನೆ ಹಾಗೂ ಸ್ವರಕಲ್ಪನೆಗಳನ್ನು ಸಂಗೀತಾತ್ಮಕವಾಗಿ ನಿರೂಪಿಸುವ ಅದ್ಭುತ ರೀತಿಯ ಸೃಜನಶೀಲತೆ ಪಂ. ಕನಕಾಪುರ ಅವರಲ್ಲಿ ಹಾಸುಹೊಕ್ಕಾಗಿದೆ. ಸಂಗೀತದ ರಹಸ್ಯವನ್ನು, ಕೃತಿಯು ಜೀವಾಳವನ್ನು ಅರಿತು, ಅನುಭವಿಸಿ ಸಂಗೀತಸಂಯೋಜನೆಗೊಳಿಸುವ ಹದಗಾರಿಕೆಯು ವೈಶಿಷ್ಟ್ಯಪೂರ್ಣವಾದದ್ದು.

ನಿರ್ಜೀವ ಕಟ್ಟಿಗೆಯ ಪೆಟ್ಟಿಗೆಯಿಂದ ಉಜ್ವಲವಾದ ಸ್ವರಸರಣಿಗಳನ್ನು ಹೊರಹೊಮ್ಮಿಸಿ ಶ್ರೋತೃಗಳನ್ನು ಗಂಧರ್ವಲೋಕಕ್ಕೆ ಕರೆದೊಯ್ಯಬಲ್ಲ ಮಾಂತ್ರಿಕ ಪಂ. ವಸಂತ ಕನಕಾಪುರ ಅವರು. ಗಾಯಕರ ಮನೋಭಾವ, ಪ್ರೌಢಿಮೆ, ಅನುಭವಗಳನ್ನು ಅನುಸರಿಸಿ, ಅವರ ಗಾಯನದೊಂದಿಗೆ ಸಾಮರಸ್ಯವನ್ನು ಸಾಧಿಸಿ ಕಾರ್ಯಕ್ರಮಕ್ಕೆ ಮೆರಗು ತರುವಂಥ ಅವರಲ್ಲಿರುವ ಕಲೆ ನಿಜಕ್ಕೂ ಸದಾ ಹಸಿರಾದದ್ದು. ಪಂ. ವಸಂತ ಕನಕಾಪುರ ಅವರ ಹಾರ್ಮೋನಿಯಂದಲ್ಲಿ ೨೦೦ಕ್ಕೂ ಹೆಚ್ಚು ರಾಗಗಳ ಭಂಡಾರವೇ ಅಡಗಿದೆ.

ಸಂಗೀತಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ಪಂ. ವಸಂತ ಕನಕಾಪುರ ಅವರದು ಸಾಧು ಸ್ವಭಾವದ ವ್ಯಕ್ತಿತ್ವ, ಸದುವಿನಯದ ಸಾಕಾರ ಮೂರ್ತಿ. ಸಂಗೀತಭಂಡಾರವೇ ತಮ್ಮಲ್ಲಿದ್ದರೂ ಅದನ್ನು ಹಾಗೆಂದು ಭಾವಿಸಿಕೊಂಡವರಲ್ಲ. ಹಾಲನ್ನರಸಿಕೊಂಡು ಬಂದವರಿಗೆ ಅವರದು ಸಕ್ಕರೆಯ ಸ್ನೇಹ. ವಿದ್ಯೆಯನ್ನು ಅರಸಿಕೊಂಡು ಬಂದವರಿಗೆ ಹಾರ್ಮೋನಿಯಂ ಜ್ಞಾನಧಾರೆಯನ್ನು ಎರೆಯುವದೇ ಸರಸ್ವತಿಯ ಆರಾಧನೆ ಎಂದು ನಂಬಿದವರು. ಇಂದು ನಾಡಿನಾದ್ಯಂತ ಸಂಗೀತ ಧಾರೆಯನ್ನು ಹರಿಸುತ್ತಿರುವ ಅನೇಕ ಖ್ಯಾತ ಹಾರ್ಮೋನಿಯಂ ಕಲಾವಿದರಿಗೆ ಸಪ್ತಸ್ವರಗಳ ಶ್ರೀಕಾರ ಹಾಕಿದ ಕೀರ್ತಿ ಪಂ. ಕನಕಾಪುರ ಅವರಿಗೆ ಸಲ್ಲುತ್ತದೆ.

ರವಿಚಂದ್ರ ಹಂದಿಗೋಳ, ಗೋಪಿನಾಥ, ಬೆಂಗಳೂರಿನ ನರಸಿಂಹ ಕುಲಕರ್ಣಿ, ನಾರಾಯಣ ಪಾಟೀಲ, ಸತೀಶ, ಉಮಾಕಾಂತ ಪುರಾಣಿಕ, ಶಿರಸಿಯ ಪ್ರಕಾಶ ಹೆಗಡೆ, ಮಂಗಳೂರಿನ ನರೇಂದ್ರ ನಾಯಕ ಹೀಗೆ ಇನ್ನೂ ಅನೇಕ ಶಿಷ್ಯರನ್ನು ಸಂಗೀತಕ್ಕೆ ಪರಿಚಯಿಸಿ ಕೊಟ್ಟ ಪಂ. ಕನಕಾಪುರ ಅವರ ಕೊಡುಗೆ ಅಪಾರವಾದದ್ದು.

ಓರ್ವ ಹಾರ್ಮೋನಿಯಂ ವಾದಕ ತಾನೆಷ್ಟು ಪರಿಪಕ್ವ ಎಂಬುದನ್ನು ಗಮನಿಸಬೇಕಾದರೆ ಅವರು ಸಾಥಿ ನೀಡಿದ ಕಲಾವಿದರ ಪಟ್ಟಿಯತ್ತ ಗಮನ ಹರಿಸುವದು ಅತ್ಯವಶ್ಯವೆನಿಸುತ್ತದೆ. ವಿದುಷಿ ಕೇಸರಬಾಯಿ ಕೇಳಕರ, ಉ.ಅಮೀರಖಾನ್, ಉ. ಅಜಮತ್‌ಹುಸೇನ್‌ಖಾನ್, ಪಂ. ಭೀಮಸೇನ ಜೋಶಿ, ಪಂ. ಎ. ಕಾನನ್, ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ಬಸವರಾಜ ರಾಜಗುರು, ಡಾ. ಗಂಗೂಬಾಯಿ ಹಾನಗಲ್, ವಿದುಷಿ ಪರವೀನ್ ಸುಲ್ತಾನಾ, ವಿದುಷಿ ಪ್ರಭಾ ಅತ್ರೆ, ರೀಟಾ ಗಂಗೂಲಿ, ಉ. ಹಫೀಜ್‌ಅಹಮದ್‌ಖಾನ್, ಪಂ. ರಾಜನ್–ಸಾಜನ್ ಮಿಶ್ರಾ, ಸಿಂಗ್‌ಬಂಧುಗಳು,

ರಸಿಕಲಾಲ್ ಅಂಧಾರಿಯಾ, ಇನ್ನೂ ಅವರಂಥ ಅನೇಕ ಉಚ್ಚ ಶ್ರೇಣಿಯ ಕಲಾವಿದರಿಗೆ ಅತ್ಯುತ್ತಮ ಸಾಥ್ ನೀಡಿ, ಪರಿಪಕ್ವತೆಯನ್ನು ಮೆರೆದಿದ್ದಾರೆ. ದೇಶದ ಅನೇಕ ಪ್ರತಿಷ್ಠಿತ ಸಂಗೀತೋತ್ಸವಗಳಲ್ಲದೇ ಅಮೆರಿಕದಲ್ಲಿ ಎರಡು ಬಾರಿ ತಮ್ಮ ಹಾರ್ಮೋನಿಯಂ ಸುಧೆಯನ್ನು ಹರಿಸಿದ್ದಾರೆ.

'ಹಾಡುಹಕ್ಕಿಗೆ ಬೇಕೆ ಬಿರುದು ಸನ್ಮಾನ?' ಎಂಬ ಪದ್ಯವು ಪಂ. ವಸಂತ ಕನಕಾಪುರರಿಗೆ ಅಕ್ಷರಶಃ ಅನ್ವಯವಾಗುತ್ತದೆ. ಅವರು ಎಂದೂ ಸನ್ಮಾನ, ಪ್ರಶಸ್ತಿಗಳ ಹಿಂದೆ ಬಿದ್ದವರಲ್ಲ. ಬಂದಾಗ ಬೀಗಿದವರಲ್ಲ. ಇಂಥ ಮನೋಭಾವದ ಹಾರ್ಮೋನಿಯಂ ಮಾಂತ್ರಿಕನಿಗೆ ಅನೇಕ ಬಿರುದು ಬಾವಲಿಗಳು ಸಂದಿವೆ. ಇಲ್ಲಿ ಸಂದಿವೆ ಎನ್ನುವುದಕ್ಕಿಂತಲೂ ಅರಸಿ ಬಂದಿವೆ ಎಂದರೆ ಹೆಚ್ಚು ಸೂಕ್ತವಾದೀತು.

ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಅವರಿಗೆ 'ಮಂಜೂಷಾರತ್ನ' ಹಾಗೂ 'ವಾದನಗಂಧರ್ವ' ಎಂಬ ಬಿರುದು ನೀಡಿ ಮಹಾರಾಷ್ಟ್ರ ಸರ್ಕಾರ ಗೌರವಿಸಿದೆ. ೧೯೮೯-೯೦ ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 'ಕರ್ನಾಟಕ ಕಲಾತಿಲಕ', ಕರ್ನಾಟಕ ಕಲಾಕಾರ ಮಂಡಳಿ ನಾದಶ್ರೀ, ಪಂಡಿತ ಬಿರುದುಗಳಿಂದ ಗೌರವಿಸಿವೆ. ೧೯೯೧ ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ಪ್ರದಾನಿಸಿ ಗೌರವಿಸಿದೆ. ಅಲ್ಲದೆ ೨೦೦೪-೦೫ನೇ ಸಾಲಿನ ಕನಕ ಪುರಂದರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮುಂಬೈಯಲ್ಲಿ ನಡೆದ ಪ್ರಪ್ರಥಮ ಅಖಿಲ ಭಾರತ ಹಾರ್ಮೋನಿಯಂ ವಾದಕರ ಪರಿಷತ್ತಿಗೆ ಸದಸ್ಯರಾಗಿ ಆಯ್ಕೆಯಾದ ಕರ್ನಾಟಕದ ಪ್ರಥಮ ರಾಯಭಾರಿ ಪಂ. ವಸಂತ ಕನಕಾಪುರ ಅವರು.

ಪಂ. ವಸಂತ ಕನಕಾಪುರ ಅವರ ಸಾಧನೆಯ ಹಿಂದೆ ಧರ್ಮಪತ್ನಿ ಬನೂತಾಯಿ ಹಾಗೂ ಮಕ್ಕಳ ಸಹಕಾರ, ಹಾರೈಕೆಗಳು ಸೇರಿಕೊಂಡಿವೆ ಎಂಬುದನ್ನು ಮರೆಯುವಂತಿಲ್ಲ.

'ಹಾರ್ಮೋನಿಯಂ ಸೋಲೋವನ್ನು ಜನಪ್ರಿಯಗೊಳಿಸುವದು ಮತ್ತು ಇದನ್ನು ಬೆಳೆಸಿಕೊಂಡು ಹೋಗುವ ಶಿಷ್ಯರನ್ನು ತಯಾರು ಮಾಡುವದು ನನ್ನ ಉದ್ದೇಶ. ಅದಕ್ಕಾಗಿ ನನ್ನ ಜೀವನವನ್ನು ಮುಡುಪಾಗಿಟ್ಟಿರುವೆ' ಎಂದು ಹೇಳುತ್ತಿದ್ದರು.

ಪಂ. ವಸಂತ ಕನಕಾಪುರ ಅವರ ಸಂಗೀತಕಲಾರಾಧನೆ ನಿಜಕ್ಕೂ ಅನನ್ಯ ಹಾಗೂ ಚಿರಸ್ಮರಣೀಯ ಎನ್ನುವದಕ್ಕೆ ಅವರಿಂದ ಸಂಯೋಜಿತಗೊಂಡ ಹಾಗೂ ಪಂ. ವೆಂಕಟೇಶಕುಮಾರ ಅವರ ಕಂಠಸಿರಿಯಿಂದ ಹರಿದು ಬಂದ 'ಒಂದು ಬಾರಿ ಸ್ಮರಣೆ ಸಾಲದೆ...' ದಾಸರ ಪದವು ಲಕ್ಷೋಪಲಕ್ಷ ಕಲಾರಸಿಕರ ಹೃನ್ಮನಗಳಲ್ಲಿ ಅಚ್ಚಳಿಯದಂತೆ ಮನೆ ಮಾಡಿದ್ದು ಒಂದು ದಾಖಲೆಯೇ ಸರಿ.


ಪಂ. ವೆಂಕಟೇಶಕುಮಾರ ಅವರು ರಾಗ ಭೈರವಿ ಪ್ರಸ್ತುತಿಗೆ ಮುನ್ನುಡಿ ಹೇಳುತ್ತಿದ್ದಂತೆ, ಶ್ರೋತೃಗಳಿಂದ ಬರುವ ಫರ್ಮಾಯಿಶ್ ಎಂದರೆ 'ಒಂದು ಬಾರಿ ಸ್ಮರಣೆ ಸಾಲದೆ...' ಹಾಡು. ಎಲ್ಲ ಹಾಡುಗಳು ಮುಗಿದ ನಂತರ ಚಪ್ಪಾಳೆ ಗಿಟ್ಟಿಸುತ್ತವೆ. ಆದರೆ 'ಒಂದು ಬಾರಿ ಸ್ಮರಣೆ ಸಾಲದೆ...' ಹಾಡನ್ನು ಪ್ರಾರಂಭಿಸುತ್ತಿದ್ದಂತೆಯೇ ಶ್ರೋತೃಗಳು

ಅಖಂಡ ಕರತಾಡನಗೈಯ್ಯುವದು ಈ ಹಾಡಿನ ವಿಶೇಷತೆ.

ಪಂ. ವೆಂಕಟೇಶಕುಮಾರ ಅವರು ಇದರ ಕುರಿತು ಮಾತನಾಡುತ್ತ, 'ಅಲ್ಲಾ, ಈ ಹಾಡು ಹೀಂಗದಲ್ಲಾ... ಕಲಕತ್ತಾದಾಗೂ ಕೇಳ್ತಾರ, ದಿಲ್ಲಿಯೊಳಗೂ ಕೇಳ್ತಾರ, ಪುಣೆದಾಗೂ ಕೇಳ್ತಾರ, ಮುಂಬೈದಾಗೂ ಕೇಳ್ತಾರ, ನಮ್ಮ ಕನಕಾಪುರ ಸರ್ ಅದ್ಹೆಂಗ ಕಂಪೋಸ್ ಮಾಡ್ಯಾರೋ, ಆ ದೇವರಿಗೆ ಗೊತ್ತು...!' ಎಂದು ಉದ್ಗರಿಸುತ್ತಾರೆ.

ತಮ್ಮ ಜೀವಮಾನದುದ್ದಕ್ಕೂ ಸಂಗೀತಲೋಕದಲ್ಲಿ ವಿಹಾರಗೈದು, ಸ್ವರಗಳ, ನಾದದ ಜೊತೆಗೆ ಸರಸವಾಡಿ, ಅದನ್ನು ಆರಾಧಿಸುತ್ತ ನಾದೋಪಾಸನೆ ಮಾಡಿದ ಪಂ. ವಸಂತ ಕನಕಾಪುರ ಅವರು ೨೦೧೩ ರಲ್ಲಿ ಸಂಗೀತ ಸರಸ್ವತಿ ಪಾದಗಳಲ್ಲಿ ಲೀನವಾದರು.

■ ■ ■



ಪಂಡಿತ ರಾಜಶೇಖರ ಮನ್ಸೂರ

# ಸೂಕ್ಷ್ಮಗ್ರಾಹಿ ಸಂಗೀತಗಾರ
# ಪಂಡಿತ ರಾಜಶೇಖರ ಮನ್ಸೂರ

● ಡಾ॥ ಶ್ರೀಮತಿ ಚಂದ್ರಿಕಾ ಕಾಮತ್
(ಅನುವಾದ : ಶ್ರೀಮತಿ ಏಟಾ ಶಾನಭಾಗ)

೧೯೭೪ರಲ್ಲಿ ಬ್ರಿಟಿಷ್ ಕೌನ್ಸಿಲಿನ ವತಿಯಿಂದ ಪ್ರಸಿದ್ಧ ವೇಲ್ಸ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಭಾಷೆ ಮತ್ತು ಭಾಷಾ ಧ್ವನಿಶಾಸ್ತ್ರದಲ್ಲಿ ಸಂಶೋಧನಾ ಕಾರ್ಯ ಮಾಡುವ ಸುವರ್ಣ ಅವಕಾಶ ರಾಜಶೇಖರ ಮನ್ಸೂರರವರಿಗೆ ದೊರಕಿತ್ತು. ಆ ಪಯಣದ ತಯಾರಿ ನಡೆದಿತ್ತು. ಅವರ ಪ್ರೀತಿಯ ತಾಯಿ ಮತ್ತು ಹೆಂಡತಿ ಅವರಿಗಾಗಿ ಬೆಚ್ಚಗಿನ ಉಡುಪು ಮತ್ತು ಚಟ್ನಿಪುಡಿ ಇತ್ಯಾದಿಗಳನ್ನು ಕಟ್ಟಿ ಕೊಡುವುದರಲ್ಲಿ ಮಗ್ನರಾಗಿದ್ದರು. ಆದರೆ ರಾಜಶೇಖರ ಮನ್ಸೂರರವರು ತಬಲಾವಾದಕರನ್ನು ಕರೆಸಿ ತಮ್ಮ ತಂಬೂರಿ ಹಿಡಿದು ಕುಳಿತುಕೊಂಡರು. ೬೦ ನಿಮಿಷಗಳ ಕಾಲ ತಮ್ಮ ತಂಬೂರಿಯನ್ನು ಮೀಟಿದರು, ಜೊತೆಗೆ ತಬಲವಾದಕರನ್ನು ೩೦ ನಿಮಿಷ ತೀನ ತಾಳ ಮತ್ತು ೩೦ ನಿಮಿಷ ಜಪತಾಳವನ್ನು ಬಾರಿಸಲು ಕೇಳಿಕೊಂಡರು. ಈ ಸಂಗೀತವನ್ನು ಧ್ವನಿಸುರುಳಿಯಲ್ಲಿ (Cassette) ಸಂಗ್ರಹಿಸಿ, ಅದನ್ನು ತಮ್ಮ ಪ್ರವಾಸಿಪೆಟ್ಟಿಗೆ (Suitcase)ಯಲ್ಲಿ ಸೇರಿಸಿದ ನಂತರವೇ ತಮ್ಮ ಕಟ್ಟುವಿಕೆಯ ಕಾರ್ಯ (Packing) ಸಂಪೂರ್ಣವಾಯಿತು ಎಂದು ಸಮಾಧಾನದಿಂದ ನಿಟ್ಟುಸಿರುಬಿಟ್ಟರು! ತಾನಪುರವನ್ನಂತೂ ಇಂಗ್ಲೆಂಡಿಗೆ ತೆಗೆದುಕೊಂಡು ಹೋಗುವಂತಿರಲಿಲ್ಲ, ಆ ದಿನಗಳಲ್ಲಿ Electronic ತಂಬೂರದ ಸಣ್ಣ ಪೆಟ್ಟಿಗೆಯ ಕಲ್ಪನೆ ಕೂಡಾ ಇರಲಿಲ್ಲ. ದೂರದ ದೇಶದಲ್ಲಿ ಅವರ ಸಾಧನೆ ನಿರಂತರವಾಗಿ ನಡೆಸಲು ಅವರ 'ಸಾ.ಪ.ಸಾ' ಧ್ವನಿಮುದ್ರಿಕೆಯೇ ಸ್ಫೂರ್ತಿದಾಯಕ ಮತ್ತು ಆಧಾರವಾಗಿತ್ತು ! ಹಗಲುಹೊತ್ತು ಸಂಶೋಧನೆಯ ಕಠಿಣ ಪರಿಶ್ರಮದ ಬಳಿಕ ಅವರು ತಮ್ಮ ಕೊಠಡಿಗೆ ಬಂದು ಹಾಡುತ್ತಿದ್ದರು, ಹೊರಗೆ ಗಡ ಗಡ ನಡುಗುವ ಚಳಿ ಇದ್ದರೂ ಕೊಠಡಿಯಲ್ಲಿ ಸಂಗೀತದ ಬಿಸಿ ಅಪ್ಪುಗೆ ಮುದ ನೀಡುತ್ತಿತ್ತು.

ಭಾಷಾಜ್ಞಾನ ಮತ್ತು ಸಾಹಿತ್ಯದ ಆಸಕ್ತಿ ಒಂದು ಕಡೆ, ಸಂಗೀತದ ದಾಹ ಇನ್ನೊಂದು ಕಡೆ, ಎರಡನ್ನೂ ಅವರು ಉತ್ಸಾಹಪೂರ್ವಕವಾಗಿ ತಣಿಸುತ್ತಿದ್ದರು. ಇಂಗ್ಲೆಂಡಿನಲ್ಲಿ ಅವರಿಗೆ ಒಂದೂವರೆ ವರ್ಷದ ವಸತಿಸೌಕರ್ಯವನ್ನು ಕಲ್ಪಿಸಲಾಗಿತ್ತು, ಆದರೆ ರಾಜಶೇಖರರವರು ಎಂಟು ತಿಂಗಳಲ್ಲಿ ತಮ್ಮ ಸಂಶೋಧನಾಕಾರ್ಯವನ್ನು ಮುಗಿಸಿ ಉನ್ನತ ಪದವಿಯನ್ನು ಪಡೆದುಕೊಂಡು, ಮನೆಗೆ, ಗುರುವಿನ ಬಳಿ ಧಾವಿಸಿ ಬಂದರು.

ಭಾಷಾಜ್ಞಾನ ಮತ್ತು ಸಾಹಿತ್ಯ ಎರಡೂ ಅಗಾಧ ಸಾಗರಗಳಂತಿದ್ದು, ಅದರ ಮೇಲೆ ಪ್ರಭುತ್ವ ಪಡೆಯಲು ಒಂದು ಜೀವಮಾನವೇ ಸಾಲದು, ಹಾಗೆಯೇ ಸಂಗೀತಸಾಗರದ ಅಮೃತ ಸುಧೆಯನ್ನು ಸವಿಯಲು, ಸಾಧಿಸಲು ಇನ್ನೊಂದು ಜನುಮವೇ ಬೇಕು. ಆದರೆ ಪ್ರೊಫೆಸರ್/ ಪಂಡಿತ್ ರಾಜಶೇಖರರವರು ಲೀಲಾಜಾಲವಾಗಿ ಎರಡೂ ಕ್ಷೇತ್ರಗಳ ಮೇಲೆ ಪ್ರಭುತ್ವ ಸಾಧಿಸಿದ್ದಾರೆ! ಪ್ರಸಿದ್ಧ ಗಾಯಕ ಮಲ್ಲಿಕಾರ್ಜುನ ಮನ್ಸೂರರ ಪುತ್ರರಾಗಿದ್ದ ಕಾರಣ ಅವರ ಮನೆ ವಾತಾವರಣವೆಲ್ಲ ಇಂಪಾದ ಸಂಗೀತದ ನಿನಾದದಿಂದ ಪ್ರತಿಧ್ವನಿಸುತಿತ್ತು. ಆದರೆ ತಂದೆಯಿಂದ ಸಾಂಪ್ರದಾಯಿಕವಾಗಿ ಕಲಿಯಲು ಆರಂಭಿಸಿದ್ದು ೧೬ನೇ ವಯಸ್ಸಿನಲ್ಲಿ ! ಇದು ಕೂಡಾ ಅನಿರೀಕ್ಷಿತವಾಗಿಯೇ ಕೂಡಿ ಬಂತು. ಕಾಲೇಜಿನ ಮೊದಲನೇ ವರ್ಷ ವ್ಯಾಸಂಗ ಮಾಡುತ್ತಿರುವ ವೇಳೆಯಲ್ಲಿ ಕಾಲೇಜಿನ ವಾರ್ಷಿಕೋತ್ಸವ ನಡೆಯುತ್ತಿತ್ತು. ರಾಜಶೇಖರರ ಗೆಳೆಯರು ಅವರನ್ನು ಅಕ್ಷರಶ: ವೇದಿಕೆಗೆ ಹಾಡಲು ತಳ್ಳಿದರು. ಇಷ್ಟು ದೊಡ್ಡ ಸಂಗೀತ ವಿದ್ವಾಂಸರ ಮಗನಾಗಿ ಹಾಡುವುದಿಲ್ಲ ಎಂದರೇನು ಎಂಬುದೇ ಅವರ ಪ್ರಶ್ನೆಯಾಗಿತ್ತು! ಮತ್ತು "ಹಾಡಲೇ ಬೇಕು" ಎಂಬ ಸವಿಯಾದ ಒತ್ತಾಯವೂ ಇತ್ತು. ಶ್ರೀ ಬೆಂಡಿಗೇರಿ ಎಂಬ ಪ್ರಸಿದ್ಧ ತಬಲಾವಾದಕರನ್ನು ಮತ್ತು ಹಾರ್ಮೋನೀಯಮ್ ನುಡಿಸುವವರನ್ನು ಕರೆಯಿಸಲಾಯಿತು. ರಾಜಶೇಖರ ಅವರ ಒತ್ತಾಯಕ್ಕೆ ಮಣಿದು 'ಮಾಲಕಂಸ' ರಾಗವನ್ನು ಸುಶ್ರಾವ್ಯವಾಗಿ ಹಾಡಿ ಸಭಿಕರ ಮನವನ್ನು ಸೂರೆಗೊಂಡರು! ಚಪ್ಪಾಳೆ ತಟ್ಟಿ ಅವರನ್ನು ಸಹಪಾಠಿಗಳು ಪ್ರಶಂಸಿಸಿದರು. ಶ್ರೀಮಾನ್ ಬೆಂಡಿಗೇರಿಯವರು ಈ ಸಿಹಿ ಸುದ್ದಿಯನ್ನು ತಿಳಿಸಲು ಪಂಡಿತ್ ಮಲ್ಲಿಕಾರ್ಜುನ ಮನ್ಸೂರರ ಹತ್ತಿರ ಧಾವಿಸಿದರು. ನಿಮ್ಮ ಮಗ ಚೆನ್ನಾಗಿ ಹಾಡಿದರು ಮತ್ತು ಶ್ರೇಷ್ಠ ಗಾಯಕನಾಗುವ ಎಲ್ಲಾ ಲಕ್ಷಣಗಳು ಅವನಲ್ಲಿ ಇವೆ ಎಂದು ಹೊಗಳಿದರು. ತಂದೆ ಆಶ್ಚರ್ಯ ಮತ್ತು ಸಂತೋಷದ ಅನುಭವವನ್ನು ಒಂದೇ ಸಲ ಪಡೆದುಕೊಂಡರು! ಸುಪುತ್ರನನ್ನು ಅಭಿಮಾನಪೂರ್ವಕ ತನ್ನ ತೆಕ್ಕೆಯಲ್ಲಿ ಸ್ವೀಕರಿಸಿದರು!

೧೯೬೩ ರಲ್ಲಿ ಗಂಧರ್ವ ಮಹಾವಿದ್ಯಾಲಯ ನಡೆಸಿದ ಪರೀಕ್ಷೆಯಲ್ಲಿ ಚಿನ್ನದ ಪದಕವನ್ನು ಗೆದ್ದು ಬಂದರು. ಅದೇ ವರ್ಷ ಆಕಾಶವಾಣಿಯವರು ನಡೆಸಿದ ಯುವ ಸಂಗೀತ ಪ್ರತಿಭಾಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ವಿಜೇತರಾಗಿ ಕಂಗೊಳಿಸಿದರು! ತಂದೆ ಮಲ್ಲಿಕಾರ್ಜುನ ಮನ್ಸೂರರು ಜೀವನಾಧಾರಕ್ಕೆ ಬೇರೊಂದು ಕಾಯಕವನ್ನು ಒಪ್ಪಿಕೊಂಡು, ಸಂಗೀತವನ್ನು ಹವ್ಯಾಸವಾಗಿ ಬೆಳೆಸಿಕೊಳ್ಳಬೇಕೆಂದು ಹೇಳುತ್ತಲೇ ಇರುತ್ತಿದ್ದರು. ತೀರ್ಥರೂಪ ತಂದೆಯವರ ಮಾತಿಗೆ ಬೆಲೆ ಕೊಟ್ಟು, ೩೫ ವರ್ಷಗಳ ಕಾಲ ರಾಜಶೇಖರ ಮನ್ಸೂರರು ಇಂಗ್ಲೀಷ್ ಪ್ರಾಧ್ಯಾಪಕರಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸಿದರು. ಕಲಿಸುವುದರಲ್ಲಿ ಅವರು ಮಹಾ ನಿಪುಣರು, ಶೇಕ್ಸಪಿಯರ್‌ನ ನಾಟಕಗಳನ್ನು ಕಲಿಸುವಾಗ ಮಕ್ಕಳು ಇಂಗ್ಲೆಂಡಿನ ನಾಟಕ ಆಡುವ ರಂಗಮಂಟಪದ ಎದುರು ಕುಳಿತಿದ್ದಾರೆ ಎಂದೇ ಭಾಸವಾಗುತ್ತಿತ್ತು! ಅವರ ಮಾರ್ಗದರ್ಶನದಲ್ಲಿ ಅನೇಕರು M.Phil ಮತ್ತು Ph.D. ಪದವಿಗಳನ್ನು

ಗಳಿಸಿದ್ದಾರೆ.

ಅವರ ಜೀವನದ ಇನ್ನೊಂದು ಮುಖ ಸಂಗೀತವಾಗಿದ್ದು ಅದು ಅವರಿಗೆ ಬಹಳ ಪವಿತ್ರವಾಗಿತ್ತು. ಅವರು ವಿಶ್ವವಿದ್ಯಾಲಯದ ಕೆಲಸವನ್ನು ಮುಗಿಸಿ ಮನೆಗೆ ಬಂದು 'ರಿಯಾಜ್' ಪ್ರಾರ್ಥನಾರೂಪದಲ್ಲಿ ಮಾಡುತ್ತಿದ್ದರು. ಕೋಣೆಯ ಒಂದು ಮೂಲೆಯಲ್ಲಿ ಗೋಡೆಗೆ ಮುಖಮಾಡಿ ಮನೆಯಲ್ಲಿ ಏನು ನಡೆಯುತ್ತದೆ ಎಂಬ ಗೊಡವೆಗೆ ಹೋಗದೆ ತನ್ನಷ್ಟಕ್ಕೆ ಗಂಟೆಗಟ್ಟಲೆ ಸಂಗೀತಾಭ್ಯಾಸ ಮಾಡುತ್ತಿದ್ದರು. ಅವರು ಈ ಸಾಧನೆ ಮಾಡುವಾಗ ಯಾವ ಪ್ರತಿಷ್ಠೆಯನ್ನಾಗಲಿ ಅಥವಾ ಸನ್ಮಾನಗಳನ್ನಾಗಲಿ ಬಯಸಲಿಲ್ಲ. 'ರಿಯಾಜಿಗಾಗಿ ರಿಯಾಜ್, ಸಂಗೀತಕ್ಕಾಗಿ ಸಂಗೀತ.' ಬೇರೇನೂ ಅವರ ಮನಸ್ಸಿನಲ್ಲಿ ಇರಲಿಲ್ಲ. ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಪ್ರತಿಯೊಂದು ಸಂಗೀತ ಕಾರ್ಯಕ್ರಮದಲ್ಲಿ ಸಹಗಾಯಕರಾಗಿ ರಾಜಶೇಖರರು ಹಾಡುತ್ತಿದ್ದರು ಮತ್ತು ತೃಪ್ತಿಯನ್ನು ಕಂಡುಕೊಂಡರು. ತಂದೆಯೊಂದಿಗೆ ಹಂಚಿಕೊಂಡ ವೇದಿಕೆಯೇ ರಾಜಶೇಖರರವರಿಗೆ ಸಂಗೀತದ ಪಾಠಶಾಲೆಯಾಯಿತು! ಎಷ್ಟೋ ಹೊಸ ರಾಗಗಳನ್ನು ಮೊದಲ ಬಾರಿಗೆ ಅವರು ವೇದಿಕೆ ಮೇಲೆ ತಂದೆ ಹಾಡುವಾಗ ಕೇಳಿ ಕಲಿತುಕೊಂಡರು! ತಂದೆಯ ಹತ್ತಿರ ತನಗೆ ಸ್ವತಂತ್ರವಾಗಿ ಹಾಡುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಅವರು ಕೇಳಲೇ ಇಲ್ಲ! ತಾನೂ ಸಂಗೀತಗಾರನೆಂಬ ಯಾವ ಪ್ರಚಾರವನ್ನೂ ಬಯಸಲಿಲ್ಲ. ಸಂಗೀತಕಚೇರಿಗೆ ಆಮಂತ್ರಣ ಬಂದಾಗ ಆಡಂಬರವಿಲ್ಲದೆ ಸ್ವೀಕರಿಸಿದ ಸಜ್ಜನರು ಇವರು. ತಂದೆಗೆ ಒಲಿದ ಸಂಗೀತದ ಸಿರಿಯನ್ನು ಆಸ್ವಾದಿಸಬೇಕೆಂಬ ಒಂದೇ ಬಯಕೆ ಅವರದ್ದಾಗಿತ್ತು. ರಾಜಶೇಖರ ಮನ್ಸೂರರು ಕೆಲವೊಮ್ಮೆ ಮನದಾಳದ ಮಾತನ್ನು ಹೊರಗೆಡವುತ್ತಾ, ತಾನು ಗುರುವಿನಿಂದ ಸಂಗೀತದ ದೃಷ್ಟಿಯನ್ನು ಪಡೆದೆನೆಂದು ಭಾವುಕರಾಗಿ ಹೇಳುತ್ತಾರೆ. ಆಧ್ಯಾತ್ಮಗುರು ಭವಸಾಗರವನ್ನು ದಾಟಿಸುವುದಾದರೆ ಸಂಗೀತ ಕಲಿಸುವ ಗುರು ನಾದಸಾಗರದಲ್ಲಿ ಕೆಲವೊಮ್ಮೆ ಮುಳುಗಿಸುತ್ತಾರೆ, ಕೆಲವೊಮ್ಮೆ ಸೌಮ್ಯವಾಗಿ ತೇಲಿಸಿ ಮುಂದೆ ಕರೆದುಕೊಂಡು ಹೋಗುತ್ತಾರೆ. ಸಂಗೀತವೆಂಬುದು ಗುರುಮುಖೀ ವಿದ್ಯೆ. ಇದನ್ನು ಗುರು-ಶಿಷ್ಯ ಪರಂಪರೆಯಲ್ಲಿ ಕಲಿಯಬೇಕು. ಬರೀ ಸಂಗೀತದ ವ್ಯಾಕರಣ ಕಲಿಯುವುದೆಂದರೆ ಸಾಗರದ ದಡದಲ್ಲಿ ಕುಳಿತು ಸಾಗರದ ಆಳವನ್ನು ಶೋಧಿಸಿದಂತೆ! ಇಂತಹ ಪರಿಶ್ರಮ ಓರ್ವನನ್ನು ಸಂಗೀತದ ತಜ್ಞನನ್ನಾಗಿ ಮಾಡಬಲ್ಲುದೇ ಹೊರತು ಸಂಗೀತಗಾರನಾಗಿ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ.

ಯಾವ ಸಂಗೀತದ ದೃಷ್ಟಿಯನ್ನು ತಂದೆ ರಾಜಶೇಖರರಿಗೆ ಕರುಣಿಸಿದರೋ ಅದರಿಂದ ವಿವಿಧ ರಾಗಗಳನ್ನು ಕರತಲಾಮಲಕ ಮಾಡಿಕೊಳ್ಳಲು ಸಾಧ್ಯವಾಯಿತು. ಸಂಗೀತರಸಧಾರೆಯ ಪಯಣದಲ್ಲಿ ತೇಲಿ ಮುಂದೆ ಸಾಗುವಂತಾಯಿತು. ತಂದೆಯವರೇ ಗುರುಗಳಾಗಿ ಬಂದು ನಿಂತು, ರಾಗದ ಚೌಕಟ್ಟಿನಲ್ಲೇ ಹೊಸ ಆಯಾಮ ವಿಸ್ತಾರವನ್ನು ಕಲ್ಪಿಸುವುದಕ್ಕೆ ಸಹಕರಿಸಿದರು.

ಇಂದು ರಾಜಶೇಖರರು ಜೈಪುರಅತ್ರೌಲಿ ಘರಾಣೆಯ ಪ್ರಮುಖ ಗಾಯಕರು ಮತ್ತು ಪ್ರತಿಪಾದಕರು ಆಗಿರುವರು. ತಂದೆ ಕಲಿಸಿದಂತೆ ತಮ್ಮ ಘರಾಣೆಯ ಶುದ್ಧತೆಯಲ್ಲಿ ಕುಂದು ಬಾರದಂತೆ ಕಲಿತುಕೊಂಡರು. ತಾವು ಪರಿಣಿತಿ ಪಡೆದದ್ದು ಮಾತ್ರವಲ್ಲದೆ, ಗುರು–ಶಿಷ್ಯ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ಈಗಲೂ ಎಷ್ಟೋ ಶಿಷ್ಯರಿಗೆ ಸಂಗೀತದ ನಿಧಿಯನ್ನು ಧಾರೆಯೆರೆದು ಕೊಡುತ್ತಲಿದ್ದಾರೆ.

ಈ ಘರಾಣೆಯ ಪತಾಕೆಯನ್ನು ಎತ್ತರಕ್ಕೆ ಏರಿಸಬೇಕು ಮತ್ತು ಎಷ್ಟೋ ಅಪ್ರಚಲಿತ ಸಂಕೀರ್ಣ ರಾಗಗಳನ್ನು ಸಂಗೀತಪ್ರೇಮಿಗಳಿಗೆ ಪರಿಚಯ ಮಾಡಿಸಿಕೊಡಬೇಕು ಎಂಬ ಗುರಿಯನ್ನು ಇಟ್ಟುಕೊಂಡು ಕಾರ್ಯೋನ್ಮುಖರಾಗಿದ್ದಾರೆ. ಸ್ವತಃ ತಾವೇ ಈ ರಾಗಗಳನ್ನು ನಿರಾಳವಾಗಿ ಹಾಡುತ್ತಾರೆ. ಈ ರಾಗಗಳು ತೆರೆಯ ಮರೆಯಲ್ಲಿ ಅಡಗದೇ ಮುಂಧಿನ ತಲೆಮಾರಿಗೆ ಪರಿಚಯಿಸಬೇಕೆಂಬ ಉದಾತ್ತ ಭಾವನೆಯಿಂದ ಸದ್ದಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಈ ಘರಾಣೆಯ ಎಷ್ಟೋ ರಾಗಗಳನ್ನು ಇಂದಿನವರು ಮರೆತಿದ್ದಾರೆ. ಆ ರಾಗಗಳನ್ನು ಸ್ವತಃ ಹಾಡಿ, ಕಲಿಸಿ, ಹಾಡಿಸುವ ಸ್ತುತ್ಯರ್ಹ ಕೆಲಸವನ್ನು ಮಾಡುತ್ತಿದ್ದಾರೆ. ಹಾಗೇ ಹಾಡುತ್ತಾ, ಜನರು ಕೇಳುತ್ತಾ ಇದ್ದರೆ ಮಾತ್ರ ಆ ರಾಗಗಳ ಸಂರಕ್ಷಣೆ ಸಾಧ್ಯ ಎಂಬುದನ್ನು ಅವರು ಚೆನ್ನಾಗಿ ಬಲ್ಲರು. ಪಂಡಿತ್ ರಾಜಶೇಖರ ಅವರು ಒಂದು ಕಾರ್ಯಕ್ರಮದಲ್ಲಿ ಒಂದೇ ರಾಗದ ಅನೇಕ ಪ್ರಕಾರಗಳನ್ನು ಹಾಡುವ ಪರಿಣಿತಿ ಪಡೆದಿದ್ದಾರೆ. ಇವುಗಳನ್ನು ಹಾಡಲು ತುಂಬಾ ಜಾಣ್ಮೆ, ನಿಪುಣತೆ ಹಾಗೂ ರಾಗಗಳ ಪರಿಪೂರ್ಣ ಪಾಂಡಿತ್ಯ ಹೊಂದಿರಬೇಕು. ಏಕೆಂದರೆ ಇವುಗಳ ಮಧ್ಯೆ ಇರುವ ಅಂತರ ಬಹಳ ಸೂಕ್ಷ್ಮವಾಗಿರುತ್ತದೆ. ಒಂದು ಮಲಹಾರ ಉತ್ಸವದಲ್ಲಿ ಮಲಹಾರರಾಗದ ೪–೫ ಪ್ರಕಾರಗಳನ್ನು ಒಂದರ ನಂತರ ಇನ್ನೊಂದನ್ನು ಹಾಡಿ ಜನರ ಮನಸ್ಸನ್ನು ಗೆದ್ದರು. ಇದೇ ರೀತಿ ಅವರು 'ಸಾಖ' ಪ್ರಕಾರದಲ್ಲಿ ಲಚ್ಛಾ ಸಾಖ, ದೇವ ಸಾಖ, ರಾಮ ಸಾಖ; ಭೈರವ ಪ್ರಕಾರದಲ್ಲಿ ಕಬೀರಿ ಭೈರವ, ಮಾರ್ಗಿ ಭೈರವ, ಶಿವಮತ್ ಭೈರವ; ತೋಡಿ ಪ್ರಕಾರದಲ್ಲಿ ಖಟ ತೋಡಿ, ಜೋನಪುರಿ ತೋಡಿ, ಲಾಚಾರಿ ತೋಡಿ; ಹಾಗೂ ಇನ್ನೂ ಅನೇಕ ರಾಗಗಳ ಪ್ರಕಾರಗಳನ್ನು ಹಾಡುತ್ತಾರೆ. ಇವರು ಹಾಡಿದ ಅನೇಕ ರಾಗಗಳನ್ನು ನವದೆಹಲಿಯ I.G.N.C.A., ಇಂದೋರಿನ ಮಧುಕಲಿ, ನವದೆಹಲಿಯ ನಾದಸಾಗರ, ಭೋಪಾಲಿನ ಭಾರತ ಭವನದ ಆರ್‌ಕೈವ್ಸ್ (Archives) ನಲ್ಲಿ ಸಂರಕ್ಷಿಸಿ ಇಡಲಾಗಿದೆ.

ಪಂಡಿತ ರಾಜಶೇಖರ ಮನ್ಸೂರರು ಶುದ್ಧ ಶಾಸ್ತ್ರೀಯ ಸಂಗೀತವನ್ನು ಮಾತ್ರ ಪ್ರಸ್ತುತಿಪಡಿಸುತ್ತಾರೆ. ಅವರು ವಚನ, ಧ್ರುತ್, ಭಜನೆ ಮತ್ತು ಇತರ ಲಘು ಸಂಗೀತದ ಪ್ರಕಾರಗಳನ್ನು ಹಾಡುವುದಿಲ್ಲ. ವಿಲಂಬಿತ ಬಡಾ ಖಯಾಲಿನಲ್ಲಿ ಸ್ವರಗಳ ಶುದ್ಧತೆ ಮತ್ತು ರಾಗದ ಪರಿಪೂರ್ಣತೆ ಕಂಡು ಬರುತ್ತದೆ ಮತ್ತು ಇದರಲ್ಲಿ ಸಂಗೀತದ ಪರಿಪೂರ್ಣ ಅನುಭವವಾಗುತ್ತದೆ. ಶಾಸ್ತ್ರೀಯ ಸಂಗೀತವನ್ನು ಅರಿತ ಶ್ರೋತೃಗಳು ಭಜನೆ, ಧ್ರುತ್ ಮತ್ತು ವಚನಗಳ ಫರಾಮಾಯಿಶ್ ಮಾಡದೆ ಅವರ ಕಾರ್ಯಕ್ರಮಗಳಲ್ಲಿ ಅಪ್ರಚಲಿತ

ಮತ್ತು ಸಂಕೀರ್ಣ ರಾಗಗಳ ಪ್ರಸ್ತುತಿಯಲ್ಲಿ ಸಂತೃಪ್ತಿಯನ್ನು ಪಡೆಯುತ್ತಾರೆ. ಜೈಪುರ ಅತ್ರೋಲಿ ಘರಾಣೆಯವರು ಹಾಡುವ ಒಂದು ವಿಶಿಷ್ಟ ಶೈಲಿ ಇದೆ. ರಾಜಶೇಖರಜೀಯವರು ಹೇಳುವಂತೆ, ಈ ಶೈಲಿಯಲ್ಲಿ ಖಯಾಲ್ ಗಾಯನದ ಅಷ್ಟ ಅಂಗಗಳ ಬೆಸುಗೆ ಕಾಣಬಹುದು. ಸ್ವರಗಳನ್ನು ಬೇರೆ ಬೇರೆಯಾಗಿ ಹಾಡಲಾಗುವುದಿಲ್ಲ. ಬದಲಿಗೆ ಒಂದು ಸ್ವರ ಯಾವಾಗಲೂ ಇನ್ನೊಂದು ಸ್ವರದೊಂದಿಗೆ ಮಿಳಿತವಾಗಿಯೇ ಸಂಗೀತ ಸಂಯೋಜಿಸಲ್ಪಡುತ್ತದೆ, ರಾಗವನ್ನು ಆಲಾಪ ವಿಸ್ತಾರದಿಂದ ಪ್ರಾರಂಭಿಸಬೇಕೆಂದಿಲ್ಲ. ಬಂದೀಷ್‌ನಿಂದಲೇ ಪ್ರಾರಂಭಿಸಬಹುದು ಅಥವಾ ೨-೩ ಸ್ವರಸಂಗತಿಗಳಿಂದ ಪ್ರಾರಂಭಿಸಬಹುದು. ಈ ಸ್ವರಸಂಗತಿಗಳು ರಾಗದ ಸಂಪೂರ್ಣ ಸ್ವರೂಪವನ್ನು ಪ್ರತ್ಯಕ್ಷ ಮಾಡುತ್ತವೆ. ರಾಜಶೇಖರಜೀಯವರ ಅಭಿಪ್ರಾಯದಂತೆ, ಜೈಪುರ್ ಅತ್ರೋಲಿ ಘರಾಣೆಯಲ್ಲಿ ಬಂದೀಷ್‌ಗೆ ಒಂದು ವಿಶಿಷ್ಟ ಸ್ಥಾನವಿದೆ. ಗುಣಿಜನರು ಇದರ ಸಂಯೋಜನೆಯಲ್ಲಿ ತಮ್ಮ ಎಲ್ಲಾ ದೂರದೃಷ್ಟಿಯನ್ನು ಇಟ್ಟು, ರಾಗದ ಎಲ್ಲಾ ಲಕ್ಷಣಗಳನ್ನು ಅದರಲ್ಲಿ ಪೋಣಿಸಿದ್ದಾರೆ. ಈ ಬಂದೀಷ್‌ನ ಚಿಂತನ, ಮನನ ಮಾಡಿದಲ್ಲಿ ಸಂಗೀತದ ಭವ್ಯ ಭವನವನ್ನು ಕಲ್ಪಿಸಬಹುದು.

ಬಂದೀಷ್ ಒಪ್ಪಿಸಿದ ನಂತರ ಖಯಾಲಿನ ಅಷ್ಟ ಅಂಗಗಳು ಜಲಪಾತದಂತೆ ಹೊರ ಚಿಮ್ಮುತ್ತವೆ. ಬೋಲ, ಬೋಲತಾನ, ತಾನ, ಮೀಂಡ ಒಂದನ್ನೊಂದು ಅನುಸರಿಸುತ್ತವೆ. ಸ್ವರಗಳು ಒಂದಕ್ಕೊಂದು ಹೊಂದಿಕೊಂಡಿರುವಂತೆ ಅನುಭವಕ್ಕೆ ಬರುತ್ತವೆ. ಸ್ವರಗಳಿಗೂ ಹಾಗೂ ಖಯಾಲಿನ ಅಂಗಗಳಿಗೂ ಸ್ವತಂತ್ರ ಇರುವಿಕೆ ಇಲ್ಲ. ಆಲಾಪ ಮೊದಲು ಮತ್ತೆ ಬೋಲ ಮತ್ತೆ ತಾನ ಈ ಪ್ರಕಾರವಾಗಿ ಸಾಗಬೇಕೆಂದಿಲ್ಲ. ಲಯಕಾರಿ ಗಾಯನ ಜೈಪುರ ಘರಾಣೆಯ ವಿಶಿಷ್ಟತೆ. ಈ ಘರಾಣೆಯಲ್ಲಿ ಲಯ ಮತ್ತು ಸ್ವರಗಳಿಗೆ ಸಮಾನವಾದ ಪ್ರಾಧಾನ್ಯ ಕೊಡಲಾಗುತ್ತದೆ. ಸ್ವರ ಮತ್ತು ಲಯ ಒಂದೇ ನಾಣ್ಯದ ಎರಡು ಮುಖ ಎಂಬ ಭೇದವನ್ನು ಸಹ ಮಾಡದೆ, "ಲಯಸ್ವರ" ಎಂಬುದು ಒಂದು ಐಕ್ಯ ವಿಷಯ ಎಂಬುದು ರಾಜಶೇಖರಜೀ ಅವರ ಅಭಿಪ್ರಾಯ.

೧೯೪೨ ಡಿಸೆಂಬರ್ ೧೬ ರಂದು ರಾಜಶೇಖರರು ಜನಿಸಿದರು. ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ಇಂಗ್ಲೀಷ್ ವಿಭಾಗದ ಚೇರ್‌ಮನ್ (Chairman) ಆಗಿ ನಿವೃತ್ತರಾದರು. ಆ ನಂತರ ಅವರು ರಾಜ್ಯದ ಸಂಗೀತ ನೃತ್ಯ ಕಲಾ ಅಕಾಡೆಮಿ (Academy)ಯ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅವರು ತಮ್ಮ ತನು-ಮನವನ್ನು ಅರ್ಪಿಸಿ ಈ ಕಾರ್ಯವನ್ನು ನಿರ್ವಹಿಸಿದರು. ಉತ್ತರಭಾರತದಲ್ಲಿ ಕರ್ನಾಟಕಶೈಲಿಯ ಸಂಗೀತಕಚೇರಿಯನ್ನು ಸಾದರಪಡಿಸಿ, ಅಲ್ಲಿಯ ಸಂಗೀತ ಕಲಾಭಿಮಾನಿಗಳಿಗೆ ಈ ಶೈಲಿಯ ಸವಿಯನ್ನು ಉಣಬಡಿಸಿದರು. ಶ್ರೀರಾಜಶೇಖರ ಮನ್ಸೂರರವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೯೭) ಹಾಗೂ ಕಲಾಶ್ರೀ ಪ್ರಶಸ್ತಿ (೨೦೦೯)ಯನ್ನು ನೀಡಿ ಗೌರವಿಸಲಾಗಿದೆ. ಮಾತ್ರವಲ್ಲ, ರಾಷ್ಟ್ರದ "ಸಂಗೀತ ನಾಟಕ

ಅಕಾಡೆಮಿ"ಯ ಪ್ರಶಸ್ತಿಯೂ (೨೦೧೩) ಕೂಡಾ ಅವರ ಮುಡಿಗೇರಿದೆ. ರಾಷ್ಟ್ರೀಯ ಅನೇಕ ಸಂಗೀತಸಭೆಗಳಲ್ಲಿ, ಶಂಕರಲಾಲ್ ಸಂಗೀತ ಉತ್ಸವ, ತಾನಸೇನ ಸಮಾರೋಹ ಇತ್ಯಾದಿಗಳಲ್ಲಿ ಭಾಗವಹಿಸಿ ಅವರು ಪ್ರಶಂಸೆಗೆ ಪಾತ್ರರಾಗಿದ್ದಾರೆ. ದೂರದರ್ಶನ ಮತ್ತು ಆಕಾಶವಾಣಿಯ Top grade ಕಲಾಕಾರ ಕೂಡಾ ಆಗಿರುವರು.

ರಾಜಶೇಖರ ಮನ್ಸೂರರು ಈ ಪ್ರಶಸ್ತಿ ಮತ್ತು ಸನ್ಮಾನಗಳಿಗೆ ಮುಗಿ ಬೀಳುವವರಲ್ಲ, ಅದಕ್ಕಾಗಿ ಅವರು ಹಾತೊರೆಯುವವರೂ ಅಲ್ಲ. ಅವರಿಗೆ ಪ್ರಶಸ್ತಿಗಿಂತ ಸಂಗೀತಸಾಧನೆಯೇ ಮುಖ್ಯ. ಅವರು ತಮಗೆ ಹೆಚ್ಚಿನ ಅಭಿಮಾನಿಗಳು ದೊರೆಯಬೇಕು, ಜನಪ್ರಿಯತೆ ಗಳಿಸಬೇಕು, ಮೆರೆಯಬೇಕು ಎಂಬ ಕನಸನ್ನು ಕಂಡವರೇ ಅಲ್ಲ. ತಮಗೆ ಗುರು ನೀಡಿದ ಸಂಗೀತದ ಶುದ್ಧತೆಯನ್ನು ಕಾಪಾಡುವುದೇ ಅವರ ಪರಮ ಉದ್ದೇಶವಾಗಿದೆ. ಅವರ ಜೀವನ ಸರಳ, ಚಿಂತನ ಉದಾತ್ತ, ಮಾತು ಹಿತ-ಮಿತ ಮತ್ತು ಶಿಸ್ತು ಪಾಲಿಸುವವರು. ಶ್ರೀಮಾನ್ ಪಂಡಿತ್ ರಾಜಶೇಖರ ಮನ್ಸೂರರಂತಹ ಸರಳ ನಡೆ-ನುಡಿ ಇರುವ ಸಹೃದಯಿಗಳು ವಿರಳ.

■ ■ ■

☆ ☆ ☆ ☆
ಸಾಂಸ್ಕೃತಿಕ ಧ್ರುವ ತಾರೆಗಳು ☆
☆ ☆



ಪಂ. ಎಂ. ವೆಂಕಟೇಶಕುಮಾರ

# ಒಂದು ಬಾರಿ ಸ್ಮರಣೆ ಸಾಲದೆ...

# ಪಂ. ಎಂ. ವೆಂಕಟೇಶಕುಮಾರ

## (ಜನನ-೧೯೫೩ ಜುಲೈ ೧)

● ರವೀಂದ್ರ ಕವಶೇಕರ

ಅಂದು ೨೦೦೭ರಲ್ಲಿ ಪುಣೆಯಲ್ಲಿ ಪ್ರತಿಷ್ಠಿತ ಸವಾಯಿ ಗಂಧರ್ವ ಸಂಗೀತ ಮಹೋತ್ಸವದ ಸಂದರ್ಭ. ಸಂಗೀತೋತ್ಸವದ ಎರಡನೇ ದಿನ. ನಿರೂಪಕ ಆನಂದ ದೇಶಮುಖ ಅವರು ಮಾತನಾಡುತ್ತ, 'ಇನ್ನು ಮುಂದೆ ಧಾರವಾಡದ ಪಂ. ವೆಂಕಟೇಶಕುಮಾರ ಅವರಿಂದ ಗಾನ ಲಹರಿ ಹರಿದು ಬರಲಿದೆ' ಎಂದು ಪ್ರಕಟಿಸಿದಾಗ ನೆರೆದಿದ್ದ ಬಹುಜನ ಶ್ರೋತೃಗಳು ಹಣೆಗಂಟಿಕ್ಕಿ 'ಕೌನ್ ಹೈ ವೆಂಕಟೇಶಕುಮಾರ್? ಹಮ್ ಪೆಹಲಿ ಬಾರ್ ಎ ನಾಮ್ ಸುನ್ ರಹೆ ಹೈ. ಕೈಸೆ ಗಾತೆ ಹೈ?' ಎಂದು ತಮ್ಮ ತಮ್ಮೊಳಗೆ ಮಾತನಾಡುತ್ತಿದ್ದರು. ಮುಂದಿನ ಕೆಲವೇ ನಿಮಿಷಗಳಲ್ಲಿ ಪ್ರಾರಂಭವಾಯಿತಲ್ಲ ಪಂ. ವೆಂಕಟೇಶಕುಮಾರ ಅವರ ಗಾನವೈಭವ. ಅವರು ಪ್ರಸ್ತುತಪಡಿಸಿದ ರಾಗ ಮಾರುಬಿಹಾಗ. ಭಾವ ಹಾಗೂ ಸ್ವರಕಲ್ಪನೆಯೊಂದಿಗೆ ಅವುಗಳಿಗೆ ಜೀವ ತುಂಬುತ್ತ ಸುಮಾರು ಎರಡು ತಾಸುಗಳ ಕಾಲ ನೆರೆದ ಶ್ರೋತೃಗಳನ್ನು ಮೂಕವಿಸ್ಮಿತಗೊಳಿಸಿದ್ದು ಈಗ ಇತಿಹಾಸ. ಮೊದಲು ಹಣೆ ಗಂಟಿಕ್ಕಿದ್ದ ಶ್ರೋತೃಗಳು ಉಲ್ಲಾಸಭರಿತರಾಗಿ, 'ಪಂ. ವೆಂಕಟೇಶಕುಮಾರಜೀ ಕೆ ಗಾಯನ್ ಕಾ ವರ್ಣನ್ ಕರನೇ ಕೆ ಲಿಯೆ ಹಮಾರೆ ಪಾಸ್ ಅಲ್ಫಾಜ್ ನಹೀಂ' ಎನ್ನುತ್ತ ಹಲವಾರು ಸಂಗೀತರಸಿಕರು ಅವರಿಗೆ ಅಭಿನಂದನೆ ಸಲ್ಲಿಸಲು ಗ್ರೀನ್‌ರೂಮ್‌ನತ್ತ ಹೆಜ್ಜೆ ಹಾಕಿದರು. ಇದು ಪಂ. ವೆಂಕಟೇಶಕುಮಾರ ಅವರ ಗಾಯನ ಮೋಡಿ.

ಹಿಂದುಸ್ತಾನಿಸಂಗೀತಕ್ಕೆ ಕರ್ನಾಟಕದ ಕೊಡುಗೆ ಅಪಾರ. ಕನ್ನಡದ ಕಲಾವಿದರೆಂದರೆ ಎಲ್ಲಿಲ್ಲದ ಗೌರವ. ಅದರಲ್ಲೂ ಧಾರವಾಡಕ್ಕೆ ವಿಶೇಷ ಸ್ಥಾನಮಾನ. ಸಂಗೀತದ ಮುಕುಟಮಣಿಗಳಿಗೆ ಜನ್ಮ ನೀಡಿ ಹಿಂದುಸ್ತಾನಿ ಸಂಗೀತದ ಕ್ಷಿತಿಜವನ್ನು ವಿಸ್ತರಿಸುವಂತೆ ಮಾಡಿದ ಕೀರ್ತಿ ಧಾರವಾಡದ್ದು. ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ಭೀಮಸೇನ ಜೋಶಿ, ಪಂ. ಬಸವರಾಜ ರಾಜಗುರು, ಡಾ. ಗಂಗೂಬಾಯಿ ಹಾನಗಲ್, ಕುಮಾರ ಗಂಧರ್ವರಂಥ ದಿಗ್ಗಜರು ತಮ್ಮ ಸಂಗೀತಸೌಗಂಧದ ಪರಿಮಳವನ್ನು ಹೊರಸೂಸಿ ದೇಶಾದ್ಯಂತ ಪಸರಿಸುವಂತೆ ಮಾಡಿ, ಅವಿಚ್ಛಿನ್ನ ಪರಂಪರೆಯನ್ನೇ ಸೃಷ್ಟಿಸಿದ ಸಂಗೀತಗಾರುಡಿಗರು. ಅವರೆಲ್ಲರೂ ಇಹಲೋಕ ತ್ಯಜಿಸಿದ ನಂತರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವವರು ಯಾರು? ಎಂಬ ಕೊರಗು ಸಂಗೀತಕ್ಷೇತ್ರದಲ್ಲಿ, ಧಾರವಾಡದ ಸಂಗೀತರಸಿಕರಲ್ಲಿ ಮನೆ ಮಾಡಿತ್ತು. ಆದರೆ 'ಕೊರಗಿನ ಮನೆ'ಗೆ ಇತಿಶ್ರೀ ಎಂಬ ಕೀಲಿ ಹಾಕಿ, 'ಅವಿಚ್ಛಿನ್ನ ಪರಂಪರೆಯ ಸಂಗೀತಸೌಧ'ವನ್ನು

ಸಿಂಗರಿಸಿದವರು ಬೇರೆ ಯಾರೂ ಅಲ್ಲ, ನಮ್ಮವರೇ ಆದ ಪಂ. ಎಂ. ವೆಂಕಟೇಶಕುಮಾರ ಅವರು.

೧೯೫೩ ಜುಲೈ ೧ ರಂದು ಕಲೋಪಾಸಕರ ಮನೆತನದಲ್ಲಿ ಜನಿಸಿದ ಪಂ. ವೆಂಕಟೇಶಕುಮಾರ ಅವರ ಹುಟ್ಟೂರು ಬಳ್ಳಾರಿ ಜಿಲ್ಲೆಯ ಪುಟ್ಟ ಗ್ರಾಮ ಲಕ್ಷ್ಮೀಪುರ. ತಂದೆ ಹೂಲೆಪ್ಪವರು ಬಯಲಾಟದ ಕಲಾವಿದರು ಹಾಗೂ ಕೊಂಚ ಮಟ್ಟಿಗೆ ಕರ್ನಾಟಕಿ ಸಂಗೀತವನ್ನು ಕಲಿತವರು. ಚಿಕ್ಕಪ್ಪ ಎರ್ರಿಸ್ವಾಮಿ ನಾಟಕ ಮಾಸ್ತರ. ಇನ್ನು ಸೋದರಮಾವ ಬೆಳಗಲ್ ವೀರಣ್ಣನವರು ನಾಡಿನ ಸುವಿಖ್ಯಾತ ರಂಗಕರ್ಮಿ, ನಶಿಸಿಹೋಗುತ್ತಿರುವ ಜಾನಪದ ಕಲೆಗಳಲ್ಲಿ ಒಂದಾದ ತೊಗಲು ಗೊಂಬೆಯಾಟವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದು ಅಪೂರ್ವ ಸಾಧನೆಗೈದವರು. ಇಂಥ ಹಿನ್ನೆಲೆಯುಳ್ಳ ವೆಂಕಟೇಶಕುಮಾರ ಅವರಿಗೆ ಸಹಜವಾಗಿ ಬಾಲ್ಯದಿಂದಲೇ ಸಂಗೀತದತ್ತ ಅಭಿರುಚಿ. ಸಂಗೀತಸಾಧಕರ ತಪೋಧಾಮ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಗಾನಯೋಗಿ ಡಾ. ಪುಟ್ಟರಾಜ ಗವಾಯಿಗಳ ಪದತಲದಲ್ಲಿ ಕುಳಿತು ಆಳವಾದ ಶಾಸ್ತ್ರೋಕ್ತ ಸಂಗೀತಾಧ್ಯಯನ. ಹೀಗಾಗಿ ಬಾಲ್ಯದಿಂದಲೇ ಅವರ ನರ–ನಾಡಿಗಳಲ್ಲಿ ಹರಿದು ಬಂದ ಸಂಗೀತಗಂಗೆಯು ಓರ್ವ ಶ್ರೇಷ್ಠ ಗಾಯಕನಲ್ಲಿ ಉಸಿರು, ಯೋಗ, ತಪಸ್ಸಾಗಿ ರಸಯಾತ್ರೆಗೈದು, ಧಾರವಾಡದ ಅವಿಚ್ಛಿನ್ನ ಪರಂಪರೆಯ ಸಂಗೀತಸೌಧವನ್ನು ಶೃಂಗರಿಸಿ ವಿರಾಜಮಾನಳಾಗಿದ್ದಾಳೆ. ವೆಂಕಟೇಶಕುಮಾರ ಈಗ ಹಿಂದುಸ್ತಾನೀ ಸಂಗೀತಕ್ಷೇತ್ರದ ಅಗ್ರಪಂಕ್ತಿಯ ಗಾಯಕ.

ಸಾಂಸ್ಕೃತಿಕ ಪರಂಪರೆಯ ಸಂಪದ್ಭರಿತ ಜಿಲ್ಲೆ ಬಳ್ಳಾರಿ. ಕನ್ನಡನಾಡಿನ ಕಲೆಗಳ ಬೀಡು. ಸಾಹಿತ್ಯ, ಸಂಗೀತ, ನಾಟಕ, ಜಾನಪದ ಕಲೆ ಹಾಗೂ ಸಂಸ್ಕೃತಿಗಳ ತವರೂರು. ಇಂಥ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಸಾಲಿಗೆ ಸೇರ್ಪಡೆಗೊಳ್ಳುವ ಹೆಸರು ಗಾನದಿಗ್ಗಜ ಪಂ. ಎಂ. ವೆಂಕಟೇಶಕುಮಾರ ಅವರದು. ಕರ್ನಾಟಕ–ಆಂಧ್ರದ ಗಡಿಭಾಗದಲ್ಲಿರುವ ಚಿಕ್ಕ ಹಳ್ಳಿ ಲಕ್ಷ್ಮೀಪುರದವರು. ಸಂಗೀತ, ರಂಗಭೂಮಿ, ಜಾನಪದ ಕಲೆಗಳ ಹಿನ್ನೆಲೆಯುಳ್ಳ ವೆಂಕಟೇಶಕುಮಾರ ಅವರದು ಮೂಲತಃ ಕಲಾವಿದರ ಮನೆತನವಾಗಿರುವದು ಭವಿಷ್ಯದ ಪುಟಗಳಿಗೆ ಪುಷ್ಟಿ ನೀಡುತ್ತದೆ.

ದಂಪತಿಗಳಾದ ಶ್ರೀ ಹೂಲೆಪ್ಪ ಹಾಗೂ ಶ್ರೀಮತಿ ಪಾರ್ವತಮ್ಮನವರ ಗರ್ಭದಲ್ಲಿ ೧೯೫೩ ಜುಲೈ ೧ ರ ಸುಮುಹೂರ್ತದಲ್ಲಿ ಸುಪುತ್ರನ ಜನನವಾಯಿತು. ಹೂಲೆಪ್ಪನವರಿಗೆ ಆರು ಮಕ್ಕಳು; ನಾಲ್ವರು ಪುತ್ರರಲ್ಲಿ ವೆಂಕಟೇಶಕುಮಾರ ಹಿರಿ ಮಗ. ಇಬ್ಬರು ಪುತ್ರಿಯರು. ಆರ್ಥಿಕವಾಗಿ ತೀರ ಬಡತನ. ಸುಮಾರು ಮೂರು ಎಕರೆ ಹೊಲವೇನೋ ಇತ್ತು, ಆದರೆ ಅದು ನೀರಾವರಿ ಅಲ್ಲ. ಮಳೆ ಬಂದರೆ ಮಾತ್ರ ಉಳುಮೆ. ಮಳೆ ಬಂದರೆ ಬೆಳೆಯಲು ಸಾಲಕ್ಕೆ ಮೊರೆ ಹೋಗುವ ಪರಿಸ್ಥಿತಿ ಇತ್ತು. ಹೀಗಾಗಿ ಹೊಲವನ್ನೇ ನಂಬಿ ಬದುಕಲು ಅಸಾಧ್ಯವಾಗಿತ್ತು. ತಂದೆಯ ಬಯಲಾಟ, ತೊಗಲುಗೊಂಬೆಯಾಟದ ಪ್ರದರ್ಶನದಿಂದ ಅಲ್ಪ ಸ್ವಲ್ಪ ದೊರಕುತ್ತಿದ್ದ ಹಣದಿಂದ ಹೊಟ್ಟೆ ತುಂಬಿಕೊಳ್ಳುವಂಥ ಪರಿಸ್ಥಿತಿ. ಇಂಥ ಕಡುಬಡತನದಲ್ಲೂ ತಮ್ಮ ಮಕ್ಕಳಿಗೆ ೪–೫ನೇ ತರಗತಿಯವರೆಗೆ ಓದಿಸಿದರು.

ಬಾಲಕ ವೆಂಕಟೇಶಕುಮಾರನಿಗೆ ಆಗಿನ್ನೂ ೧೨ರ ಪ್ರಾಯ. ಹುಟ್ಟೂರು

ಲಕ್ಷ್ಮೀಪುರದಿಂದ ೨-೩ ಕಿ.ಮೀ. ದೂರದ ಮಹಾದೇವನಹಳ್ಳಿವರೆಗೆ ನಡೆದುಕೊಂಡು ಶಾಲೆಗೆ ಹೋಗಬೇಕಿತ್ತು. ಅಲ್ಲಿ ಐದನೇ ತರಗತಿಯವರೆಗೆ ವಿದ್ಯಾಭ್ಯಾಸ ನಡೆಯಿತು. ಶಾಲೆಯ ವಿದ್ಯಾಭ್ಯಾಸಕ್ಕಿಂತ ಸಂಗೀತದಲ್ಲೇ ಅತ್ಯಂತ ಹೆಚ್ಚಿನ ಆಸಕ್ತಿ. ತಂದೆ ಹೂಲೆಪ್ಪನವರಿಗೆ ಕರ್ನಾಟಕೀ ಸಂಗೀತದ ಕುರಿತು ಅಲ್ಪ ಸ್ವಲ್ಪವಾದ ಪರಿಚಯವಿತ್ತು. ತಂದೆ ಚೆನ್ನಾಗಿ ಹಾಡುತ್ತಿದ್ದರು. ಬಯಲಾಟವನ್ನು ಕಲಿಸುತ್ತಿದ್ದರು. ತೊಗಲುಗೊಂಬೆಯಾಟವನ್ನು ಆಡಿಸುತ್ತಿದ್ದರು. ಅವರು ಪ್ರಸ್ತುತಪಡಿಸುತ್ತಿದ್ದ ರಂಗಗೀತೆ ಹಾಗೂ ಪೌರಾಣಿಕ ಗೀತೆಗಳು ಬಾಲಕ ವೆಂಕಟೇಶಕುಮಾರನಿಗೆ ಸಂಗೀತದತ್ತ ಒಲವು ಮೂಡಲು ಮೂಲ ಪ್ರೇರಣೆಯಾದವು. ಅದರಂತೆ ಅವುಗಳನ್ನು ವೆಂಕಟೇಶಕುಮಾರ ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಿದ್ದ.

ಮಗನ ಗಾಯನವನ್ನು ಆಲಿಸಿದ ತಂದೆ ಹೂಲೆಪ್ಪನವರಿಗೂ ಅತ್ಯಂತ ಸಂತೋಷ. 'ನಾಟಕ ಮಾಸ್ತರ' ಎಂದೇ ಪ್ರಸಿದ್ಧರಾದ ವೆಂಕಟೇಶಕುಮಾರನ ಚಿಕ್ಕಪ್ಪ ಎರ್ರಿಸ್ವಾಮಿ ಅವರು ಹಾಗೂ ಹೂಲೆಪ್ಪನವರ ಸ್ನೇಹಿತರು ಬಾಲಕ ಹಾಡುವದನ್ನು ಕೇಳಿ "ಹುಡುಗಂದು ಧನಿ ಬಹಳ ಛಲೋ ಅದ, ಅವನಿಗೆ ಶಾಸ್ತ್ರೀಯ ಸಂಗೀತ ಕಲ್ಸಪ್ಪಾ" ಎಂದು ಹೇಳುತ್ತಿದ್ದರು. ಜೀವನ ಸಾಗಿಸುವದೇ ಕಷ್ಟವಾಗಿದ್ದ ಪರಿಸ್ಥಿತಿಯಲ್ಲಿ ದುಡ್ಡು ಕೊಟ್ಟು ಸಂಗೀತ ಕಲಿಸುವದು ಅಸಾಧ್ಯವಾದ ಮಾತಾಗಿತ್ತು. ಆದರೂ ಮಗನಿಗೆ ಸಂಗೀತ ಕಲಿಸಲೇಬೇಕೆಂಬ ಆಸೆ ಹೂಲೆಪ್ಪನವರಲ್ಲಿ ಗರಿಗೆದರಿತ್ತು. ಒಂದು ದಿನ ಬಳ್ಳಾರಿಯ ತಬಲಾ ಪಂಡಿತರಾದ ಲೋಕಾಭಿರಾಮ ಅವರಲ್ಲಿ ಕರೆದುಕೊಂಡು ಹೋಗಿ, ತಮ್ಮ ಮಗನಿಗೆ ಸಂಗೀತ ಕಲಿಸಬೇಕೆಂದು ಅಹವಾಲುಗೈದರು. ಪಂ. ಲೋಕಾಭಿರಾಮರು ತಿರುಪತಿಯ ಅಣ್ಣಮಾಚಾರ್ಯ ಸಂಗೀತ ವಿಶ್ವವಿದ್ಯಾಲಯದಲ್ಲಿ ತಬಲಾ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಆಗ ಬಾಲಕ ವೆಂಕಟೇಶಕುಮಾರನ ಹಾಡನ್ನು ಕೇಳಿದ ಅವರು, 'ಹೌದು, ನಿಮ್ಮ ಮಗನಿಗೆ ಒಳ್ಳೆಯ ಆವಾಜ್ ಅದ. ಆದ್ರ ನನಗ ಗಾಯನ ಕಲಿಸಾಕ ಬರಂಗಿಲ್ಲ. ನಾನು ತಬಲಾ ಇಲ್ಲಾಂದ್ರ ನೃತ್ಯ ಕಲಿಸ್ತೀನಿ' ಎಂದು ಹೇಳಿದರು. ಆಗ ಬಂದ ದಾರಿಗೆ ಸುಂಕವಿಲ್ಲ ಎನ್ನುವಂತೆ ವಾಪಸ್ ಊರಿಗೆ ಮರಳಿದರು. ದಿನಗಳು ಹಾಗೆಯೆ ಉರುಳಿದವು. ಆದರೆ ಕಡುಬಡತನದ ಬೇಗೆಯಲ್ಲಿ ಬೇರೆ ಊರಿಗೆ ಹೋಗಿ ಕಲಿಯುವದು ಅಶಕ್ಯವಾಗಿತ್ತು.

೧೯೬೮ ರಲ್ಲಿ ಮುಂದೆ ಕೆಲವೇ ದಿನಗಳ ನಂತರ ವೆಂಕಟೇಶಕುಮಾರನ ಅದೃಷ್ಟ ಖುಲಾಯಿಸಿತು. ತಾಯಿ ಪಾರ್ವತಮ್ಮ ಅವರ ಸಹೋದರ ಬೆಳಗಲ್ ವೀರಣ್ಣನವರು ಸುವಿಖ್ಯಾತ ರಂಗಭೂಮಿ ಹಾಗೂ ಜಾನಪದ ಕಲಾವಿದರು. ಆಗಾಗ ಲಕ್ಷ್ಮೀಪುರಕ್ಕೆ ಬಂದು ಹೋಗುವ ರೂಢಿಯಿಟ್ಟುಕೊಂಡಿದ್ದರು. ಹೀಗೊಂದು ದಿನ ಬಾಲಕ ವೆಂಕಟೇಶಕುಮಾರನ ಗಾಯನವನ್ನು ಕೇಳುತ್ತ, 'ಹುಡುಗಂದು ಧನಿ ಛಲೋ ಐತಿ. ಇವಂಗ ಸಂಗೀತ ಕಲಿಸಬೇಕೆಂದು' ನಿಶ್ಚಯಿಸಿದರು. ಆಗ ವೀರಣ್ಣನವರ ಗೆಳೆಯ ಸಿರಿಗೆರೆ ನಾಗನಗೌಡ ಮರಿಸ್ವಾಮಿ ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದರು. ವೀರಣ್ಣನವರು ಗೆಳೆಯನನ್ನು ಭೇಟಿಯಾಗಿ, 'ನಮ್ಮ ಅಕ್ಕನ ಮಕ್ಕಳದು ಒಳ್ಳೆಯ ಕಂಠ ಐತಿ, ಭಾಳ ಛಲೋ ಹಾಡ್ತಾರ. ಅದಕ ಅವರನ್ನ ಪುಣ್ಯಾಶ್ರಮದಾಗ

ಸೇರಿಸಬೇಕಾಗೇದ 'ಮತ್ತ ಅಲ್ಲಿಯ ನಿಯಮಗಳೇನು?' ಎಂದು ವಿಚಾರಿಸಿದಾಗ, ಮರಿಸ್ವಾಮಿ ಅವರು, 'ಇಲ್ಲಪ್ಪಾ, ಅಂಥಾ ನಿಯಮಗಳೇನೂ ಇಲ್ಲ. ಅದು ಬಡಮಕ್ಕಳ ಆಶ್ರಮ, ಹುಡುಗ್ರನ್ನ ಸೇರಿಸಿದ್ರ ಮುಂದ ಅವರಿಗೆ ಒಳ್ಳೆದ ಆಗ್ತೈತಿ ನೋಡು' ಎಂದು ಹೇಳಿದರು. ಆಗ ವೆಂಕಟೇಶಕುಮಾರ ಹಾಗೂ ಚಿಕ್ಕಮ್ಮನ ಮಗ ವಿರೂಪಾಕ್ಷನನ್ನು ಆಶ್ರಮಕ್ಕೆ ಸೇರಿಸುವ ದೃಢ ನಿರ್ಧಾರ ಕೈಗೊಂಡರು.

ಶ್ರಾವಣಮಾಸದ ಶುಭದಿನದಂದು ವೀರಣ್ಣನವರು ಪುಣ್ಯಾಶ್ರಮಕ್ಕೆ ಸೇರಿಸಲು ಗದುಗಿಗೆ ಕರೆತಂದಾಗ ವೆಂಕಟೇಶಕುಮಾರನಿಗೆ ೧೪ರ ಹರೆಯ. ಆಗ ಡಾ. ಪುಟ್ಟರಾಜ ಗವಾಯಿಗಳು, ಹಾಡಲು ಹೇಳಿ ಧ್ವನಿಪರೀಕ್ಷೆ ಮಾಡಿದರು. "ಹುಡುಗಂದು ಆವಾಜ್ ಛಲೋ ಐತಿ... ಆದ್ರ ಬುದ್ಧಿ ಸ್ವಲ್ಪ ಚಂಚಲ..." ಎಂದು ಆಶ್ರಮಕ್ಕೆ ಸೇರಿಸಿಕೊಂಡರು. ಮೊದಲ ಬಾರಿ ಆಶ್ರಮ ಸೇರುವ ಮುನ್ನ ೧೦೧ ರೂ.ಗಳನ್ನು ಕಟ್ಟಬೇಕು. ಆಗದವರು ಕನಿಷ್ಠ ೬೫ ರೂ.ಗಳ ಶುಲ್ಕ ಭರಿಸಬೇಕು. ಗಾಯನ ಕಲಿಯುವವರು ಹಾರ್ಮೋನಿಯಂ, ವಸತಿಗಾಗಿ ಬಟ್ಟೆ, ಹಾಸಿಗೆಗಳನ್ನು ತರಬೇಕಿತ್ತು. ಆಶ್ರಮದಲ್ಲಿದ್ದು ಕನಿಷ್ಠ ಆರು ವರ್ಷ ಅಥವಾ ಗರಿಷ್ಠ ಹನ್ನೆರಡು ವರ್ಷಗಳವರೆಗೆ ಕಲಿಯಬೇಕೆಂಬುದು ಆಶ್ರಮದ ನಿಯಮ. ಆಗದಿದ್ದವರನ್ನು ಡಾ. ಪುಟ್ಟರಾಜ ಗವಾಯಿಗಳು ಆಶ್ರಮಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಅದರಂತೆ ಹೂಲೆಪ್ಪನವರು ಮೂರು ಎಕರೆ ಹೊಲವನ್ನು ಲಾವಣಿ ನೀಡಿ, ಬಂದ ಹಣದಿಂದ ಶುಲ್ಕ ಹಾಗೂ ಆಶ್ರಮದ ವಸತಿಗಾಗಿ ಬೇಕಾದ ಅವಶ್ಯಕ ಸಾಮಗ್ರಿ ಹಾಗೂ ಆರು ವರ್ಷಗಳವರೆಗೆ ಕಲಿಯುತ್ತಾನೆಂದು ಬಾಂಡ್ ಬರೆದು ಕೊಟ್ಟು ಮಗನನ್ನು ಆಶ್ರಮಕ್ಕೆ ಸೇರಿಸಿದರು.

ಆಶ್ರಮದಲ್ಲಿ ಕಟ್ಟುನಿಟ್ಟಿನ ನಿಯಮಗಳಿಗೆ ಹೆದರಿ ಬಾಲಕ ವೆಂಕಟೇಶಕುಮಾರ ಸುಳ್ಳು ಹೇಳಿ ಊರಿಗೆ ಹೋಗಿ ೮-೧೦ ದಿನಗಳವರೆಗೆ ಇರುತ್ತಿದ್ದ. ತಂದೆ-ಮಾವ ಬೈದಾಗ ಮತ್ತೆ ಆಶ್ರಮಕ್ಕೆ ವಾಪಸ್ ಬರುತ್ತಿದ್ದ. ಗುರುಗಳು ಬೈದರೆ 'ನಮ್ಮ ತಂದಿಗೆ ತಾಯಿಗೆ ಆರಾಮ್ ಇರಲಿಲ್ಲರಿ, ಅದಕ್ಕ ಹೋಗಿದ್ದೆ' ಎಂದು ಕುಂಟು ನೆಪ ಹೇಳಿ, 'ತಪ್ಪಾತ್ರಿ, ಕ್ಷಮಾ ಮಾಡ್ರಿ' ಎಂದು ಆಶ್ರಮ ಸೇರಿಕೊಳ್ಳುತ್ತಿದ್ದ. ಮುಂದೆ ಹತ್ತು ದಿನಗಳಾಗುವಷ್ಟರಲ್ಲೇ ಮತ್ತದೇ ರಾಗ, ಅದೇ ಹಾಡು. ಒಂದು ಬಾರಿ ಹೋದ ವೆಂಕಟೇಶಕುಮಾರ ಸುಮಾರು ಆರು ತಿಂಗಳವರೆಗೆ ಬರಲೇ ಇಲ್ಲ. ಆಗ ಗುರುಗಳು ತಮ್ಮ ಹಿರಿಯ ಶಿಷ್ಯನಿಗೆ ಟಿಕೇಟ್ ಚಾರ್ಜ್ ಕೊಟ್ಟು, 'ಅಂವ ವೆಂಕಟೇಶ ಎಲ್ಲೆದಾನ ನೋಡು. ಊರಿಗೆ ಹೋದಾಂವ ಬಂದೇ ಇಲ್ಲ. ಅವನ್ನ ಕರಕೊಂಡು ಬಾ' ಎಂದು ಹೇಳಿ ಕಳುಹಿಸಿದರು. ವಾಪಸ್ ಬಂದ ಮೇಲೆ ಗುರುಗಳು, 'ಹಂಗ ಹೋಗಬ್ಯಾಡೋ, ಛಲೋ ಹಾಡಾಕ್ಕ ಕಲಿ, ಆಗ ನಿನ್ನ ಹತ್ರ ಬಂದು ಅವರ ಕರ್‍ಕೊಂಡು ಹೋಗ್ತಾರ, ಮನಸುಗೊಟ್ಟು ಕಲಿ. ನಿಮ್ಮ ತಂದಿ ತಾಯಿಗೆ ಏನೂ ಆಗಂಗಿಲ್ಲ' ಎಂದು ಹೇಳಿದ ಮಾತು ವೆಂಕಟೇಶಕುಮಾರನ ಮನಸ್ಸಿಗೆ ತಾಕಿತು. ಇದೇ ಗುರು-ಶಿಷ್ಯರ ಬಾಂಧವ್ಯವಾಗಿ ಪರಿಣಮಿಸಿತು. ಗುರುಗಳು ಶಿಷ್ಯನ ಕಂಠಕ್ಕೆ ಮನಸೋತು, ತುಂಟತನವನ್ನು ಕ್ಷಮಿಸಿ, ಮನಃಪೂರ್ವಕವಾಗಿ ಸಂಗೀತವಿದ್ಯೆಯನ್ನು ಧಾರೆ ಎರೆದರು.

ಸುಮಾರು ಎರಡು ವರ್ಷಗಳವರೆಗೆ ಆಶ್ರಮದಲ್ಲಿ ಪ್ರಾಥಮಿಕ ಹಂತದ

ಸಂಗೀತಾಭ್ಯಾಸ ನಡೆಯಿತು. ನಂತರ ಗುರು ಪಂ. ಪುಟ್ಟರಾಜ ಗವಾಯಿಗಳಿಂದ ನೇರವಾದ ಸಂಗೀತಪಾಠ ಶುರುವಾಯ್ತು. ಕೇವಲ ಎರಡೇ ವರ್ಷಗಳಲ್ಲಿ ಗುರುಗಳು ವೆಂಕಟೇಶಕುಮಾರರನ್ನು ತಮ್ಮ ಹಿರಿಯ ಶಿಷ್ಯವೃಂದದಲ್ಲಿ ಸೇರಿಸಿಕೊಂಡರು. ಅವರದು ಸಂಚಾರಿ ಪಾಠಶಾಲೆ. ಶಿಷ್ಯರನೇಕರನ್ನು ಕರೆದುಕೊಂಡು ಊರಿಂದೂರಿಗೆ ತೆರಳಿ ಅಲ್ಲಿಯ ಗುಡಿ, ಮಠಗಳಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಬೇರೆ ಊರಿಗೆ ಹೋದಾಗಲೂ ಅವರ ಸಂಗೀತ ಪಾಠ ಮಾತ್ರ ಅಬಾಧಿತವಾಗಿರುತ್ತಿತ್ತು.

ಗಾನಯೋಗಿ ಪಂ. ಪುಟ್ಟರಾಜ ಗವಾಯಿಗಳು ಪರಮ ಜ್ಞಾನಿಗಳು, ಪವಾಡ ಪುರುಷರು. ಅವರು ಭವಿಷ್ಯದ ಆಗು-ಹೋಗುಗಳ ಕುರಿತು ತಮ್ಮ ಅಂತಃಚಕ್ಷುವಿನಲ್ಲಿ ವೀಕ್ಷಿಸುತ್ತಿದ್ದರು. ತಮ್ಮ ೧೪ನೇ ವಯಸ್ಸಿನಲ್ಲಿ ಪುಣ್ಯಾಶ್ರಮವನ್ನು ಸೇರಿದ ವೆಂಕಟೇಶಕುಮಾರರ ಭವಿಷ್ಯದ ಕುರಿತು ತಮ್ಮ ದಿವ್ಯದೃಷ್ಟಿಯಿಂದ ಮನಗಂಡಿದ್ದರು. ಗುರುಗಳಿಗೆ ಶಿಷ್ಯನ ಮೇಲೆ ಅದೆಂಥ ಕರುಣೆ-ಪ್ರೀತಿ-ವಿಶ್ವಾಸ! ನಿಜಕ್ಕೂ ವೆಂಕಟೇಶಕುಮಾರರೇ ಧನ್ಯರು.

ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ನಾಲ್ಕು ಗಂಟೆಗಳ ಕಾಲ ಅವ್ಯಾಹತ ಸಂಗೀತ ಪಾಠ ನಡೆಯುತ್ತಿತ್ತು. ಪಂ. ಪುಟ್ಟರಾಜ ಗವಾಯಿಗಳ ಪದ್ಧತಿಯೇ ವಿಶಿಷ್ಟಪೂರ್ಣವಾಗಿತ್ತು. ಒಂದು ರಾಗವನ್ನು ಅಭ್ಯಾಸಕ್ಕೆ ಕೈಗೆತ್ತಿಕೊಂಡರೆ ಅದು ಶಿಷ್ಯನ ಮಸ್ತಕದಲ್ಲಿ ಇಳಿಯುವವರೆಗೂ ಬಿಡುತ್ತಿರಲಿಲ್ಲ. ಅದಕ್ಕೆ ಸಮಯದ ಮಿತಿ ಇರುತ್ತಿರಲಿಲ್ಲ. ಪ್ರತಿ ರಾಗಗಳ ಕುರಿತು ಆಳವಾದ ಅವಲೋಕನ ನಡೆಯುತ್ತಿತ್ತು. ರಾಗದ ಪ್ರಮುಖ ಲಕ್ಷಣಗಳು, ಅವುಗಳಲ್ಲಿ ಬಳಕೆಯಾಗುವ ಸ್ವರಗಳು, ರಾಗಾಂಗ ಪದ್ಧತಿ, ವಿಭಿನ್ನ ಅಲಂಕಾರಗಳು, ಬಂದಿಶ್‌ಗಳನ್ನು ಹೇಳುವುದು; ಹೇಳಿಕೊಟ್ಟ ರಾಗಗಳನ್ನು ಶಿಷ್ಯನ ಮುಖಾಂತರ ಪ್ರಾಯೋಗಿಕವಾಗಿ ಪರೀಕ್ಷೆ; ರಾಗ-ರಾಗಿಣಿಯರ, ಥಾಟ್‌ಗಳ ಹಾಗೂ ಅಪ್ರಚಲಿತ ರಾಗಗಳ ಕುರಿತು ವಿಸ್ತೃತ ಮಾಹಿತಿ; ಒಂದೇ ರಾಗದಲ್ಲಿ ಅನೇಕ ಬಂದಿಶ್‌ಗಳನ್ನು ಹೇಳುವದು; ಆರು ವರ್ಷಗಳ ಕಾಲ ವೆಂಕಟೇಶಕುಮಾರರು ಗುರುಗಳ ಪದತಲದಲ್ಲಿ ಕುಳಿತು ಇಂಥ ಉನ್ನತ ಮಟ್ಟದ ಪಾಠಗಳ ಸಂಗೀತಾಭ್ಯಾಸಗೈದರು. ಗುರುಗಳು ವೆಂಕಟೇಶಕುಮಾರ ಅವರಿಗೆ ಕಲಿಸಿದ ಪ್ರಪ್ರಥಮ ರಾಗ ಜೀವನಪುರಿ.

ತಬಲಾ, ವಿವಿಧ ಗತ್‌ಗಳ ಆಳವಾದ ಜ್ಞಾನಧಾರೆ ಎರೆದು, ಮಂಚಪ್ರದರ್ಶನದ ಸಮಯದಲ್ಲಿ ತಬಲಾ ಹಾಗೂ ಇನ್ನಿತರ ವಾದ್ಯಗಳ ಸಾಥ್ ಸಂಗತ್ ನೀಡುವವರ ಲಕ್ಷಣ ಹೇಗಿರಬೇಕು; ಯಾವ ರೀತಿಯ ಗಾಯನ ಹಾಗೂ ಅದಕ್ಕೆ ಪೂರಕವಾಗಿ ವಾದನಗಳನ್ನು ನುಡಿಸಿ ಮೆಹಫಿಲ್‌ಗಳ ರಂಗೇರಿಸುವ ಕೌಶಲ್ಯವನ್ನು ಪ್ರದರ್ಶಿಸಿ ಶ್ರೋತೃಗಳಿಂದ ಶಹಬ್ಬಾಷಗಿರಿ ಗಿಟ್ಟಿಸುವಂಥ ಸೂಕ್ಷ್ಮ ವಿಷಯಗಳನ್ನು ತಮ್ಮ ತರಬೇತಿಯಲ್ಲಿ ವೆಂಕಟೇಶಕುಮಾರರಿಗೆ ಧಾರೆ ಎರೆಯುತ್ತಿದ್ದರು. ಸಂಗೀತಶಾಲೆಯಲ್ಲಿ ಅತ್ಯುತ್ತಮ ಸಂಗೀತಗಾರರ ಧ್ವನಿಮುದ್ರಿಕೆಗಳನ್ನು ಹಚ್ಚಿ ಹೀಗೆ ಪ್ರಸ್ತುತಪಡಿಸಬೇಕೆಂದು ಹೇಳುತ್ತಿದ್ದರು. ಇವೆಲ್ಲ ಅಂಶಗಳು ವೆಂಕಟೇಶಕುಮಾರ ಅವರ ಮಸ್ತಕದಲ್ಲಿ ಅಚ್ಚಳಿಯದಂತೆ ಮುದ್ರೆಯನ್ನೊತ್ತಿದವು.

ಸಂಗೀತಶಿಕ್ಷಣ ಮುಗಿಸಿದ ಶಿಷ್ಯರು ಗುರುಗಳ ಆಶೀರ್ವಾದ ಪಡೆದುಕೊಳ್ಳುವುದು

ಆಶ್ರಮದ ವಾಡಿಕೆಯಾಗಿತ್ತು. ಅದರಂತೆ ವೆಂಕಟೇಶಕುಮಾರ ಅವರು ಗುರುಗಳ ಚರಣಾರವಿಂದಗಳಿಗೆ ನಮಸ್ಕರಿಸಿದರು. ಆಗ ಗುರುಗಳು ಆಶೀರ್ವದಿಸುತ್ತ, 'ತಮ್ಮ, ನೀನು ಸಂಗೀತ ಕಲ್ತಿ. ಇದನ್ನ ನಿನಗ ತಿಳಿದ್ಹಾಂಗ ಉಪಯೋಗ ಮಾಡಕೋಬೇಡ. ನೀನು ಇದನ್ನ ರಕ್ಷಣೆ ಮಾಡಕೊಂಡು ಹೋಗು. ಸಂಗೀತ ಹಿಂಗದಲಾ ತಮ್ಮಾ, ಅದು ತಿಪ್ಯಾಗ ಇಟ್ರೂ ರತ್ನ, ಮನ್ಯಾಗ ಇಟ್ರೂ ರತ್ನ. ನೀ ಅದನ್ನ ಹೇಂಗ ಜೋಪಾನ ಮಾಡ್ತಿ ಅದು ನಿನ್ನ ಹಂಗ ಜೋಪಾನ ಮಾಡ್ತದ. ಹೋಗಿ ಬಾ, ನಿನಗ ಒಳ್ಳೆಯದಾಗ್ತೈತಿ' ಎಂದು ಹೇಳಿ ಕಳುಹಿಸಿ ಕೊಟ್ಟರು.

ಆಶ್ರಮದಲ್ಲಿ ಶಿಕ್ಷಣ ಪಡೆದ ನಂತರ ವೆಂಕಟೇಶಕುಮಾರ ಅವರ ವೃತ್ತಿಜೀವನದ ಆರಂಭ ಅಷ್ಟೇನು ಉತ್ತಮವಾಗಿರಲಿಲ್ಲ. ೧೯೭೬ ರಲ್ಲಿ ಸೋದರಮಾವ ಬೆಳಗಲಿ ವೀರಣ್ಣನವರ ಸುಪುತ್ರಿ ಶ್ರೀಮತಿ ಲಕ್ಷ್ಮೀದೇವಿ ಅವರೊಂದಿಗೆ ವಿವಾಹವಾಯಿತು.

ಆಗ ಸಂಗೀತಕಛೇರಿಗಳ ಆಹ್ವಾನ ಅಷ್ಟಕ್ಕಷ್ಟೆ. ಹೀಗಾಗಿ ನಾಡಿನ ವಿವಿಧ ಭಾಗಗಳಲ್ಲಿ ಅಲೆದಾಡುವ ಪರಿಸ್ಥಿತಿ. ಪ್ರಪ್ರಥಮವಾಗಿ ಗದುಗಿನ ವಿಜಯ ಕಲಾ ಮಂದಿರದಲ್ಲಿ ಸಂಗೀತಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಅದು ೧೯೭೮ ನೇ ಇಸ್ವಿ. ಅದು ವೆಂಕಟೇಶಕುಮಾರರ ಜೀವನದಲ್ಲಿ ಸ್ಮರಣೀಯ ವರ್ಷ. ಬೆಳಗಾವಿ ಆರ್ಟ್ಸ್ ಸರ್ಕಲ್‌ನವರು ಆಯೋಜಿಸಿದ್ದ ಯೂಥ್ ಫೆಸ್ಟಿವಲ್‌ನಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಒದಗಿ ಬಂದಿತ್ತು. ಇದು ವೆಂಕಟೇಶಕುಮಾರ ಅವರು ಸಾರ್ವಜನಿಕವಾಗಿ ನೀಡಿದ ಪ್ರಪ್ರಥಮ ಸಂಗೀತ ಕಛೇರಿ. ಕಾರ್ಯಕ್ರಮದಲ್ಲಿ ಪಂ. ರಾಮಭಾವು ಬಿಜಾಪುರೆ, ಪಂ. ಆರ್.ಎನ್. ಜೋಶಿ, ಪಂ. ಕಡ್ಲಾಸ್ಕರ ಬುವಾ, ಪಂ. ಧರ್ಮಾಧಿಕಾರಿ ಅವರಂಥ ದಿಗ್ಗಜಕಲಾವಿದರ ಉಪಸ್ಥಿತಿಯಲ್ಲಿ ವೆಂಕಟೇಶಕುಮಾರ ಅವರು ರಾಗ ಯಮನ್ ಪ್ರಸ್ತುತಪಡಿಸಿ ಭೇಷ್ ಎನಿಸಿಕೊಂಡರು. ನಂತರ ಹುಬ್ಬಳ್ಳಿಯ ಮರಾಠಾ ಮಂಡಳದಲ್ಲಿ ಹುಬ್ಬಳ್ಳಿ ಆರ್ಟ್ಸ್ ಸರ್ಕಲ್‌ನವರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವೆಂಕಟೇಶಕುಮಾರ ಅವಥು ತಮ್ಮ ವಿದ್ವತ್‌ಪೂರ್ಣ ಗಾಯನ ಪ್ರಸ್ತುತಪಡಿಸಿ, ಗಾನಗಂಗೆ ಡಾ. ಗಂಗೂಬಾಯಿ ಹಾನಗಲ್ ಅವರಿಂದ ಶಹಬ್ಬಾಷಗಿರಿ ಪಡೆದರು.

ನಂತರದಲ್ಲಿ ವೆಂಕಟೇಶಕುಮಾರ ಅವರು ಹರಪನಹಳ್ಳಿಯ ತೆಗ್ಗಿನಮಠ ಸ್ವಾಮಿಗಳ ಟಿ.ಎಮ್.ಎ. ಸೊಸೈಟಿಯ ಶಾಲೆಯಲ್ಲಿ ಸಂಗೀತಶಿಕ್ಷಕರಾಗಿ ಆಯ್ಕೆಗೊಂಡರು. ಅದು ೧೯೭೯ರಲ್ಲಿ. ವೆಂಕಟೇಶಕುಮಾರ ಅವರು ಆಕಾಶವಾಣಿಯಲ್ಲಿ ನೀಡಿದ ಪ್ರಪ್ರಥಮ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಅತ್ಯುತ್ತಮವಾಗಿ ಲಲತ್ ರಾಗವನ್ನು ಪ್ರಸ್ತುತಪಡಿಸಿದ ಪರಿಣಾಮವಾಗಿ ಬಿ ಶ್ರೇಣಿಯ ಕಲಾವಿದರಾಗಿ ಆಯ್ಕೆಗೊಂಡರು. ಅದೇ ವರ್ಷ ದೂರದರ್ಶನದಲ್ಲಿ ಪ್ರಥಮ ಸಂಗೀತ ಕಛೇರಿಯನ್ನು ನೀಡಿದರು. ೧೯೮೧ ರಲ್ಲಿ ಉಡುಪಿಯ ಟಿ.ಎಮ್.ಎ. ಪೈ ಅಕಾಡೆಮಿ ಸ್ಕೂಲ್ ಆಫ್ ಮ್ಯೂಸಿಕ್ ಅವರ ಮುಕುಂದ ಕೃಪಾ ಪಾಠಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಆಗಿನ ಸಂಬಳ ಕೇವಲ ೪೦೦ ರೂ. ಮಾತ್ರವಾಗಿತ್ತು. ೧೯೮೩ ರಲ್ಲಿ ಪುನಃ ಗದುಗಿನ ವಿಜಯ ಕಲಾ ಮಂದಿರದಲ್ಲಿ ಸೇವೆ ಸಲ್ಲಿಸುವ ಸಮಯದಲ್ಲಿ ಆಶ್ರಮಕ್ಕೆ ಬಂದು ಗುರುಗಳ ದರ್ಶನ

ಪಡೆದರು. ಆಗ ಗುರುಗಳು 'ಏನಪಾ ಹೆಂಗದಿ, ಆರಾಮ ಅದಿ ಏನು?' ಎಂದು ವಿಚಾರಿಸಿದಾಗ, ದುಃಖಿತರಾಗಿದ್ದ ವೆಂಕಟೇಶಕುಮಾರ ಅವರು 'ಇಲ್ಲರಿ ಗುರುಗಳ... ಸಂಗೀತ ಕಲಿತು ಜೀವನ ಮಾಡೋದು ದುಸ್ತರ ಆಗಿಬಿಟ್ಟದ್ರಿ' ಎಂದರು. ಆಗ ಗುರುಗಳು ಶಿಷ್ಯನನ್ನು ಸಮಾಧಾನಪಡಿಸುತ್ತ, 'ಯಾಕ ದುಃಖಪಡ್ತಿ ಬಿಡೋ. ನಿನಗ ನೌಕರಿ ಸಿಗತೈತಿ. ನಿನಗ ಕಾಲೇಜಿನ್ಯಾಗ ನೌಕರಿ ಸಿಗತೈತಿ' ಎಂದು ಧೈರ್ಯ ತುಂಬಿ ಕಳಿಸಿದರು.

ಗುರುಗಳ ವಾಣಿಯಂತೆ ಮುಂದಿನ ಆರೇ ತಿಂಗಳಲ್ಲಿ ವೆಂಕಟೇಶಕುಮಾರ ಅವರಿಗೆ ಸರ್ಕಾರಿ ನೌಕರಿಯ ಬುಲಾವ್ ಬಂತು. ೧೯೮೪ ರಲ್ಲಿ ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಅಧ್ಯಾಪಕ ನೌಕರಿ ಸಿಕ್ಕಿತು. ಆದರೆ ಸಂಗೀತದಲ್ಲೇ ಮುಳುಗಿದ್ದ ವೆಂಕಟೇಶಕುಮಾರರಿಗೆ ವೀರೇಶ್ವರ ಪುಣ್ಯಾಶ್ರಮ ಹಾಗೂ ಗುರುಗಳ ಸಾನ್ನಿಧ್ಯ ಬಿಡಲು ಮನಸ್ಸು ಒಪ್ಪಲಿಲ್ಲ. ಆಗ ಗುರುಗಳ ಹತ್ತಿರ ಬಂದು, 'ಗುರುಗಳ, ನನಗ ಇಲ್ಲೆ ಅಭ್ಯಾಸಕ್ಕ ಅನುಕೂಲ ಅದ. ನಿಮ್ಮ ಹತ್ತಿರ ಪಾಠ ಹೇಳಿಸ್ಕೋತೀನಿ' ಎಂದರು. ಆಗ, 'ಅಲ್ಲೋ, ಹುಚ್ಚ ಅದಿ ನೋಡು ನೀನು. ಯಾರಿಗೆ ನೌಕರಿ ಅದನೋ, ನೌಕರಿ ಸಿಕ್ಕರ ಏನು ಅಭ್ಯಾಸ ಮಾಡಾಕ ಆಗೂದಿಲ್ಲೇನು? ಮೊದಲು ಇಲ್ಲಿಂದ ಜಾಗ ಖಾಲಿ ಮಾಡಿ ನೌಕರಿಗೆ ಸೇರಕೋ' ಎಂದು ಬೈದು ಕಳುಹಿಸಿದರು. ಆಗ ವೆಂಕಟೇಶಕುಮಾರ ಅವರು ಧಾರವಾಡಕ್ಕೆ ಬಂದು ಟ್ರೇನಿಂಗ್ ಕಾಲೇಜ್‌ನಲ್ಲಿ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದರು. ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದಿಂದ ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡರು. ಮುಂದೆ ೧೯೯೩ ರಿಂದ ಪ್ರತಿಷ್ಠಿತ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಿಳಿಯ ಸಾದಾ ಪೈಜಾಮ್, ಮೇಲೊಂದು ನೆಹರು ಶರ್ಟ್, ತೊಡೆಯ ಮೇಲೆ ಕೆಂಪು ಬಣ್ಣದ ಶಾಲನ್ನು ಹೊದ್ದುಕೊಂಡು ವೇದಿಕೆ ಏರಿ, ತಂಬೂರಿಯ ಮಧ್ಯೆ ಕುಳಿತು ಗಾಯಕಿಯನ್ನು ಪ್ರಾರಂಭಿಸಿದರೆ ವಾಗ್ದೇವಿಯ ದರ್ಶನ. ಗೋಧಿಬಣ್ಣದ, ದುಂಡು ಮೊಗದ ವೆಂಕಟೇಶಕುಮಾರ ಅವರ ಗಾಯನವೆಂದರೆ ಆಲಿಸುವವನ ಅಸ್ತಿತ್ವವನ್ನೇ ಕರಗಿಸಿ ಅಮೂರ್ತ ಭಾವಪ್ರಪಂಚದಲ್ಲಿ ಲೀನಗೊಳಿಸುವಂಥದ್ದು. ಅವರ ಗಾಯನವನ್ನು ಆಲಿಸುವದೇ ಒಂದು ರಸಾನುಭವ. ವೆಂಕಟೇಶಕುಮಾರ ಅವರ ಹಾಡುಗಾರಿಕೆಯು ಸಾಗರದ ಅಲೆಗಳ ವೈವಿಧ್ಯವುಳ್ಳದ್ದು. ರಾಗಕ್ಕೆ ಸತ್ವಭಾವ ತುಂಬುವ ಸಂಗೀತ. ಶಕ್ತಿಯುತ ಕಂಠಸಿರಿ, ಮನಮೋಹಕ ಸ್ವರ ಮತ್ತು ಲಯಕಾರಿಯೊಂದಿಗೆ ಮೂರು ಸಪ್ತಕಗಳಲ್ಲಿ ಅತೀ ಸಹಜವಾಗಿ ಸಂಚರಿಸಬಲ್ಲ ಗಾಯಕಿ. ಅವರ ಕಂಚಿನ ಕಂಠದಿಂದ ಹೊರಸೂಸುವ ಸ್ವರಸರಣಿಗಳು ಕರ್ಣಮನೋಹರ. ರಾಗದ ಅಂಗ-ಪ್ರತ್ಯಂಗಗಳನ್ನು ಶೃಂಗರಿಸಿ, ಸ್ವರಗಳನ್ನು ಕಮಲದ ದಳಗಳಂತೆ ಎಳೆ ಎಳೆಯಾಗಿ ಬಿಡಿಸಿ ಪ್ರಸ್ತುತಪಡಿಸುವ ಅವರ ಗಾಯನವು ಕಲಾರಸಿಕರನ್ನು ನಾದಲೋಕದ ಬಂಧಿಗಳನ್ನಾಗಿಸುವಂಥದ್ದು.

ವೆಂಕಟೇಶಕುಮಾರ ಅವರ ಗಾಯನವೆಂದರೆ ಕಿರಾನಾ ಹಾಗೂ ಗ್ವಾಲಿಯರ್ ಘರಾಣೆಗಳ ಅಪೂರ್ವ ಸಮಾಗಮ. ಕಿರಾನಾ ಘರಾಣೆ ವಿಲಂಬಿತ ಲಯದ ನಿರಾತಂಕ ಅವಕಾಶದಲ್ಲಿ ನಡೆಯುವ ಸ್ವರಗಳ ಕ್ರಿಯಾಮಾಧುರ್ಯ, ಸ್ವರಗಳ ಬಲೆಯಲ್ಲಿ ಉತ್ಕೃಷ್ಟ

ಸ್ವರವನ್ನು ಹುಡುಕಿ ತರುವದು; ನಂತರ ಅದು ಸಿಕ್ಕ ಮೇಲೆ ಅಲಂಕೃತಗೊಂಡ ವೈವಿಧ್ಯಮಯ ತಾನ್‌ಗಳ ಮೆರವಣಿಗೆ. ಅದರೊಂದಿಗೆ ಗ್ವಾಲಿಯರ್ ಘರಾಣೆಯ ಗಂಭೀರರೂಪದ ಸ್ವರವಿನ್ಯಾಸ, ಸರಳ ತಾನುಗಳು, ಬಂದಿಶ್‌ಗಳ ಸ್ಪಷ್ಟ ಉಚ್ಚಾರಣೆ, ಮನಸೂರೆಗೊಳ್ಳುವ ವೈವಿಧ್ಯಮಯ ಲಯಕಾರಿಗಳು, ರಾಗದ ನೊಟೇಶನ್‌ಗಳ ಆರೋಹ–ಅವರೋಹ, ಸರಗಮ್‌ಗಳು ವೆಂಕಟೇಶಕುಮಾರ ಅವರ ಗಾಯಕಿಯಲ್ಲಿ ಮೇಳೈಸಿವೆ.

ವೆಂಕಟೇಶ ಕುಮಾರ ಅವರ ಗಾಯನದಲ್ಲಿ ಅನೇಕ ರಾಗಗಳ ಭಂಡಾರವೇ ಅಡಗಿದೆ. ಅವರು ಗುರುಗಳಿಂದ ಸುಮಾರು ೨೫ ರಿಂದ ೩೦ ರಾಗಗಳನ್ನು ಕಲಿತಿದ್ದಾರೆ. ಅವು ಯಾವುದೇ ಸಮಯದ, ಯಾವುದೇ ರಸವನ್ನು ಬಿಂಬಿಸುವ ರಾಗಗಳಿರಲಿ, ಎಲ್ಲದರಲ್ಲೂ ಭಾವ ಹಾಗೂ ಸ್ವರಕಲ್ಪನೆಯೊಂದಿಗೆ ಅವುಗಳಿಗೆ ಜೀವ ತುಂಬಿ ಗಾಯನಸೌಂದರ್ಯವನ್ನು ಮೆರೆಯುವದು ವೆಂಕಟೇಶಕುಮಾರ ಅವರ ಗಾಯಕಿಯ ವೈಶಿಷ್ಟ್ಯ.

ಸಂಗೀತದಲ್ಲಿರುವ ವಿವಿಧ ಘರಾಣೆಗಳ ಕುರಿತು ವೆಂಕಟೇಶಕುಮಾರ ಅವರಿಗೆ ವಿಶಾಲ ದೃಷ್ಟಿಕೋನ. ಘರಾನಾ ಒಂದು ಸೀಮಿತ. ಸಂಗೀತವು ಸೀಮಾತೀತ. ಶುದ್ಧ ಸಂಗೀತಕ್ಕೆ ಯಾವುದೇ ಚೌಕಟ್ಟುಗಳ ಕಟ್ಟಳೆಗಳಿರಬಾರದು ಎನ್ನುವದು ಅವರ ವಾದ. ಅವುಗಳು ಒಂದು ಸೀಮಿತ ಅವಧಿಯವರೆಗೆ ಇರಬೇಕು. ನಂತರ ಕಲಾವಿದನ ಪ್ರೌಢಿಮೆ ಹೆಚ್ಚಾದಂತೆ ಅವನ ಕಲ್ಪನಾಮಟ್ಟವೂ ವಿಸ್ತಾರಗೊಳ್ಳಲೇಬೇಕು. ನಿಜವಾದ ಸಂಗೀತಗಾರನು ಗುಣಗ್ರಾಹಿಯಾಗಿರಬೇಕು; ಆಗಿರುತ್ತಾನೆ ಎಂಬುದು ವೆಂಕಟೇಶಕುಮಾರರ ಭಾವನೆ. ಅದರಂತೆ ಪಂ. ಮಲ್ಲಿಕಾರ್ಜುನ ಮನಸೂರರ ತಾನ್–ಲಯಗಳ ಪರಿಪಕ್ವತೆ, ಪಂ. ಭೀಮಸೇನ ಜೋಶಿ ಅವರ ಗಾನಸಂಪೂರ್ಣತೆ, ಪಂ.ಬಸವರಾಜ ರಾಜಗುರುಗಳ ಸೌಂದರ್ಯಪ್ರಜ್ಞೆ, ಪಂ.ಡಿ.ವಿ. ಪಲುಸ್ಕರ ಅವರ ಗಾನಮಾಧುರ್ಯ, ಹಾಗೆಯೇ ಪಂ. ಕುಮಾರ ಗಂಧರ್ವರ ಅಲೌಕಿಕತೆಯ ಗಾಯಕಿಯನ್ನು ವೆಂಕಟೇಶಕುಮಾರ ಗೌರವಿಸುತ್ತಾರೆ.

ಶ್ರೋತೃಗಳ ನಾಡಿಮಿಡಿತಗಳನ್ನು ಗುರುತಿಸಿ ಹಾಡುವ ಪ್ರವೃತ್ತಿ ಅವರಲ್ಲಿ ಬೇರೂರಿದೆ. ಶುದ್ಧ ಶಾಸ್ತ್ರೀಯ ಸಂಗೀತ ರಸಿಕರಾಗಿರಲಿ, ಲಘು ಸಂಗೀತ ಪ್ರೇಮಿಗಳಿರಲಿ ಅಥವಾ ಸಂಗೀತದ ಬಗ್ಗೆ ಒಲವಿರದ ಮಹಾಶಯರನ್ನು ಸಂಗೀತ ಕೇಳುವಂತೆ ಗುಂಗು ಹಿಡಿಸುವ ಮಾಂತ್ರಿಕತೆ, ಮಾದಕತೆ ವೆಂಕಟೇಶಕುಮಾರ ಅವರ ಗಾಯನದಲ್ಲಿದೆ. ಎಲ್ಲ ಶ್ರೋತೃಗಳಿಗೂ ಎಲ್ಲ ಪ್ರಕಾರದವರಿಗೂ ಮನಮುಟ್ಟುವಂಥ ಸಂಗೀತ ಅವರದು. ಅಮೇರಿಕ, ಇಂಗ್ಲೆಂಡ್, ಗ್ವಾಲಿಯರ್, ಅಹಮದಾಬಾದ್, ಭುವನೇಶ್ವರ, ಪಣಜಿ, ಕೋಲ್ಕತಾ, ಪುಣೆ, ನವದೆಹಲಿ, ರಾಜ್ಯದ ಎಲ್ಲ ಪ್ರತಿಷ್ಠಿತ ಸಂಗೀತೋತ್ಸವಗಳು ಹೀಗೆ ದೇಶದ ನಾಲ್ಕು ದಿಕ್ಕುಗಳಲ್ಲಿರುವ ಕಲಾರಸಿಕರಿಗೆ ತಮ್ಮ ಸಂಗೀತ ರಸಮಾಧುರ್ಯದ ರಸದೌತಣವನ್ನು ನೀಡಿದ್ದಾರೆ.

ಓರ್ವ ವ್ಯಕ್ತಿಯ ಮಹತ್ವದ ಕಾರ್ಯಸಾಧನೆಗೆ ಮನುಷ್ಯನಲ್ಲಿಯ ಅಂತಃಶಕ್ತಿ, ದೃಢ ನಿರ್ಧಾರಗಳೇ ಮುಖ್ಯವಾಗುತ್ತವೆಯೇ ಹೊರತು ಭೌತಿಕ ಸಾಧನ ಸಲಕರಣೆಗಳಲ್ಲ

ಎಂಬುದಕ್ಕೆ ವೆಂಕಟೇಶಕುಮಾರ ಅವರು ಉತ್ತಮ ಉದಾಹರಣೆ. ಇಲ್ಲದಿದ್ದರೆ ಹಳ್ಳಿಗಾಡಿನಲ್ಲಿ ಹುಟ್ಟಿ, ಅನೇಕ ಅನನುಕೂಲತೆಗಳ ಮಧ್ಯೆಯೂ ಎಲ್ಲ ಅಡಚಣೆಗಳನ್ನು ಎದುರಿಸಿ ದೇಶದ ಸುವಿಖ್ಯಾತ ಗಾಯಕನಾಗಲು ಹೇಗೆ ಸಾಧ್ಯವಾಗುತ್ತಿತ್ತು? ಇದಕ್ಕೆ ಪ್ರಮುಖ ಕಾರಣವೆಂದರೆ ಅವರಲ್ಲಿರುವ ಗುರುಭಕ್ತಿ, ಸರಳತೆ ಹಾಗೂ ಶ್ರೇಷ್ಠತೆ.

ಎಲ್ಲಕ್ಕಿಂತಲೂ ಮುಖ್ಯವಾಗಿ ಸಂಗೀತೋತ್ಸವಗಳಲ್ಲಿ, ಮೆಹಫಿಲ್‌ಗಳಲ್ಲಿ ಶ್ರೋತೃಗಳ ಸಂಖ್ಯೆ ಲಕ್ಷಗಟ್ಟಲೇ ಇರಲಿ ಅಥವಾ ಬೆರಳೆಣಿಕೆಯಷ್ಟೇ ಇರಲಿ, ಯಾವುದೇ ಕಾರಣಕ್ಕೂ ವೆಂಕಟೇಶಕುಮಾರ ಅವರು ತಮ್ಮ ಹಾಡುಗಾರಿಕೆಯೊಂದಿಗೆ ರಾಜಿ ಮಾಡಿಕೊಂಡವರಲ್ಲ. ಅವರ ಸಂಗೀತಶೈಲಿಯಲ್ಲಿ ಭಿನ್ನತೆ ಕಾಣಸಿಗುವದೇ ಇಲ್ಲ.

೯೦ರ ದಶಕದಿಂದೀಚೆಗೆ ವೆಂಕಟೇಶಕುಮಾರ ಅವರ ಪ್ರತಿಭೆಯ ಅನಾವರಣ ವಿಕಸನಗೊಂಡಿತು. ಆಗ ಅನೇಕ ಧ್ವನಿಮುದ್ರಿಕೆಗಳು ಬಿಡುಗಡೆಗೊಂಡಿವೆ. ಸಾಗರ ಮ್ಯೂಸಿಕ್, ಆಲೂರಕರ ಮ್ಯೂಸಿಕ್, ಲಹರಿ ಮ್ಯೂಸಿಕ್‌ಗಳಂಥ ಪ್ರತಿಷ್ಠಿತ ಕಂಪನಿಗಳು ವೆಂಕಟೇಶಕುಮಾರ ಅವರ ಸಿ.ಡಿ. ಕ್ಯಾಸೆಟ್‌ಗಳನ್ನು ಹೊರತಂದಿವೆ. ವೆಂಕಟೇಶಕುಮಾರ ಅವರು ಈಗ ದೇಶದ ಸುಪ್ರಸಿದ್ಧ ಗಾಯಕರ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ಅವರ ಕಂಚಿನ ಕಂಠದಿಂದ ಹೊರಹೊಮ್ಮುವ ದಾಸವಾಣಿ ಹಾಗೂ ವಚನಸಾಹಿತ್ಯಗಳೂ ಪ್ರಖ್ಯಾತಿ ಹೊಂದಿವೆ. ಶ್ರೀ ವಾದಿರಾಜರ 'ಒಂದು ಬಾರಿ ಸ್ಮರಣೆ ಸಾಲದೆ..'. ಹಾಗೂ ಅಲ್ಲಮಪ್ರಭುಗಳ 'ಪ್ರಣತೆಯಿದೆ ಬತ್ತಿಯಿದೆ...' ವಚನಗಳು ಪ್ರಸ್ತುತಗೊಂಡಾಗಲೇ ವೆಂಕಟೇಶಕುಮಾರ ಅವರ ಸಂಗೀತ ಕಛೇರಿಯು ಪೂರ್ಣಗೊಳ್ಳುತ್ತದೆ.

ಸಂಗೀತದಸಾಧನೆಗಾಗಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡ ವೆಂಕಟೇಶಕುಮಾರ ಅವರ ಕೌಟುಂಬಿಕ ಜೀವನದಲ್ಲಿ ಅಲ್ಪ ಸ್ವಲ್ಪ ಏರುಪೇರುಗಳಾಗುತ್ತಿದ್ದವು. ಸಂಗೀತಕಾರ್ಯಕ್ರಮಗಳನ್ನು ನೀಡಲು ಹೋಗಬೇಕಾಗಿದ್ದರಿಂದ ಮನೆ ಹಾಗೂ ಕುಟುಂಬಗಳತ್ತ ಹೆಚ್ಚು ಕಾಳಜಿ ಮಾಡುವುದು ಆಗುತ್ತಿರಲಿಲ್ಲ. ಇದನ್ನೆಲ್ಲ ಸಮದೂಗಿಸಿಕೊಂಡು ವೆಂಕಟೇಶಕುಮಾರ ಅವರ ಸಾಧನೆಗೆ ಸಹಕಾರ ನೀಡಿದವರು ಧರ್ಮಪತ್ನಿ ಶ್ರೀಮತಿ ಲಕ್ಷ್ಮೀದೇವಿ. ವೆಂಕಟೇಶಕುಮಾರ ಅವರ ಸಂಗೀತಸಾಧನೆಯಲ್ಲಿ ಪತ್ನಿ ಲಕ್ಷ್ಮೀದೇವಿ ಅವರ ಪಾತ್ರ ದೊಡ್ಡದು.

ವೆಂಕಟೇಶಕುಮಾರ–ಲಕ್ಷ್ಮೀದೇವಿ ದಂಪತಿಗೆ ಮೂವರು ಮಕ್ಕಳು. ಇಬ್ಬರು ಪುತ್ರರು; ಒಬ್ಬ ಪುತ್ರಿ. ಹಿರಿಯ ಪುತ್ರ ಸಿದ್ಧಲಿಂಗೇಶ. ಧಾರವಾಡದ ಹತ್ತಿರದ ಹಳ್ಳಿಯಲ್ಲಿರುವ ಪ್ರಾಥಮಿಕ ಶಾಲೆಯ ಅಧ್ಯಾಪಕರಾಗಿರುವ ಅವರಿಗೆ ಒಬ್ಬ ಪುತ್ರನಿದ್ದಾನೆ, ಹೆಸರು ಓಂಕಾರ. ಕಿರಿಯ ಪುತ್ರ ಪಂಚಾಕ್ಷರಿ ಬೆಂಗಳೂರಿನ ಖಾಸಗಿ ಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ಪುತ್ರಿ ನೀರಜಾ ಅವರನ್ನು ಬಳ್ಳಾರಿಯಲ್ಲಿರುವ ಲಕ್ಷ್ಮೀದೇವಿ ಅವರ ಸಹೋದರನೊಂದಿಗೆ ವಿವಾಹ ಮಾಡಿಕೊಟ್ಟಿದ್ದಾರೆ.

ಆಕಾಶವಾಣಿ–ದೂರದರ್ಶನಗಳ ಎ ಗ್ರೇಡ್ ಕಲಾವಿದರಾಗಿರುವ ಪಂ. ವೆಂಕಟೇಶಕುಮಾರ ಅವರಿಗೆ ಅನೇಕ ಬಿರುದು ಬಾವಲಿಗಳು ಅರಸಿಕೊಂಡು ಬಂದಿವೆ. ಅವುಗಳಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, 'ಸಂಗೀತ ಸುಧಾಕರ',

☆ ☆ ☆ ☆
☆ *ಸಾಂಸ್ಕೃತಿಕ ಧೃವ ತಾರೆಗಳು*
☆ ☆

'ಸಂಗೀತ ರತ್ನ', 'ಸ್ವರಶ್ರೀ', ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರ್ಕಾರದ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ಫೈನ್ ಫೌಂಡೇಶನ್, ಇಚಲಕರಂಜಿ ಪ್ರಶಸ್ತಿ, ವತ್ಸಲಾಬಾಯಿ ಭೀಮಸೇನ್ ಜೋಶಿ ಪುರಸ್ಕಾರ, ಬಸವಶ್ರೀ ಪುರಸ್ಕಾರ, ವಚನ ಸಾಹಿತ್ಯಶ್ರೀ, ಕೃಷ್ಣಾ ಹಾನಗಲ್ ರಾಷ್ಟ್ರೀಯ ಪುರಸ್ಕಾರ, ಡಾ. ಪ್ರಭಾ ಅತ್ರೆ ಪುರಸ್ಕಾರ, ಗಾನಶ್ರೀ ಪ್ರಶಸ್ತಿ ಪ್ರಮುಖವಾದವುಗಳು.

ಪಂ. ವೆಂಕಟೇಶಕುಮಾರ ಅವರು ರಾಗಭೈರವಿ ಪ್ರಸ್ತುತಿಗೆ ಮುನ್ನುಡಿ ಹೇಳುತ್ತಿದ್ದಂತೆ, ಶ್ರೋತೃಗಳಿಂದ ಬರುವ ಫರ್ಮಾಯಿಶ್ ಎಂದರೆ 'ಒಂದು ಬಾರಿ ಸ್ಮರಣೆ ಸಾಲದೆ...' ಹಾಡು. ಎಲ್ಲ ಹಾಡುಗಳು ಮುಗಿದ ನಂತರ ಚಪ್ಪಾಳೆ ಗಿಟ್ಟಿಸುತ್ತವೆ. ಆದರೆ 'ಒಂದು ಬಾರಿ ಸ್ಮರಣೆ ಸಾಲದೆ...' ಹಾಡನ್ನು ಪ್ರಾರಂಭಿಸುತ್ತಿದ್ದಂತೆಯೇ ಶ್ರೋತೃಗಳು ಅಖಂಡ ಕರತಾಡನಗೈಯ್ಯುವದು ಈ ಹಾಡಿನ ವಿಶೇಷತೆ. ಹಾಡು ಮುಗಿದ ನಂತರ ನಿರೂಪಕರು, 'ಒಂದು ಬಾರಿ ಸ್ಮರಣೆ ಸಾಲದೆ ವೆಂಕಟೇಶಕುಮಾರ ಅವರ ಗಾಯನವನ್ನು...' ಎಂದಾಗ ಕಲಾರಸಿಕರಿಂದ ಬರುವ ಉತ್ತರ 'ಸಾಲದು' ಎಚಿದು.........

■ ■ ■

ಸಾಂಸ್ಕೃತಿಕ ಧೃವ ತಾರೆಗಳು

# ಹಿಂದುಸ್ತಾನಿ ಸಂಗೀತ ವಾದಕರು





'ಸಿತಾರ ರತ್ನ' ರಹಿಮತ್ ಖಾನ್

# ಸಂಗೀತಲೋಕದ ಮಹಾಮೇರು

# 'ಸಿತಾರರತ್ನ' ರಹಿಮತ್ ಖಾನ್

# (೧೮೬೩-೧೯೫೪)

● ರವೀಂದ್ರ ಕವಠೇಕರ

'ಸಿತಾರರತ್ನ' ರಹಿಮತ್ ಖಾನ್, ಭಾರತೀಯ ಸಂಗೀತಕ್ಷೇತ್ರದಲ್ಲಿ ಉಚ್ಚ ಶ್ರೇಣಿಯ ಹೆಸರು. ಗುಜರಾತ್‌ನ ಭಾವನಗರದಲ್ಲಿ ಅಂಕುರಿಸಿ, ದಕ್ಷಿಣ ಭಾರತಾದ್ಯಂತ ಸಿತಾರ್ ನಿನಾದಕ್ಕೆ ನಾಂದಿ ಹಾಡಿದ ಸಂಗೀತಲೋಕದ ಮಹಾಮೇರು. ಅಪಾರ ಶಿಷ್ಯವೃಂದವನ್ನು ಸೃಷ್ಟಿಸಿ ಸಂಗೀತಲೋಕದ ಕ್ಷಿತಿಜವನ್ನು ವಿಸ್ತರಿಸಿದ ಮಹಾ ಚೇತನ ಸಿತಾರ್ ರತ್ನ ರಹಿಮತ್ ಖಾನ್‌ರು.

ತಮ್ಮ ಕಾರ್ಯಕ್ಷೇತ್ರವನ್ನು ಇಂದೋರ್‌ನಿಂದ ಮುಂಬೈ-ಪುಣೆಗೆ ಬದಲಿಸಿದ ನಂತರ ಸಿತಾರ್‌ನಿನಾದವನ್ನು ಪಸರಿಸಲು ಕಾರ್ಯಚಟುವಟಿಕಾ ಕೇಂದ್ರವನ್ನಾಗಿಸಿಕೊಂಡಿದ್ದು ಸಾಂಸ್ಕೃತಿಕ ರಾಜಧಾನಿ ಧಾರವಾಡವನ್ನು. ಅಷ್ಟೇ ಅಲ್ಲ, ತಾವು ಕೈವಶ ಮಾಡಿಕೊಂಡ ಸಿತಾರ್‌ನಿನಾದದ ಸಂಪತ್ತನ್ನು ಧಾರೆ ಎರೆದು ಒಂದು ಗೌರವಾರ್ಹ ಶಿಷ್ಯಪರಂಪರೆಯನ್ನೇ ಸೃಷ್ಟಿಸಿದ್ದು ಒಂದು ಅದ್ಭುತ ಯಶೋಗಾಥೆ.

ಮೂಲತ: ಗುಜರಾತ್‌ನ ಭಾವನಗರದವರಾದ ರಹಿಮತ್ ಖಾನ್‌ರು ಜನಿಸಿದ್ದು ೧೮೬೩ ರಲ್ಲಿ. ಸಂಗೀತಗಾರರ ಮನೆತನ. ತಂದೆ ಉಸ್ತಾದ್ ಗುಲಾಮ್ ಹುಸೇನ್ ಖಾನ್‌ರು ಭಾವನಗರದ ಆಸ್ಥಾನ ಗಾಯಕರು. ಅಜ್ಜ ಉಸ್ತಾದ್ ಮದಾರ್ ಬಕ್ಷ್ ಮಧ್ಯಪ್ರದೇಶದ ರತ್ಲಮ್ ಆಸ್ಥಾನದ ಗಾಯಕ ಹಾಗೂ ಸಿತಾರ್ ವಾದಕರು. ಮುತ್ತಜ್ಜ ಉಸ್ತಾದ್ ದೌಲತ್ ಖಾನ್ ಇಂದೋರ್ ಹಾಗೂ ರತ್ಲಮ್ ಆಸ್ಥಾನಗಳ ಉಚ್ಚ ಶ್ರೇಣಿಯ ಗಾಯಕರು. ಹೀಗೆ ರಹಿಮತ್ ಖಾನ್‌ರದು ಬಹುದೊಡ್ಡ ಸಂಗೀತಪರಂಪರೆ. ಸಹಜವಾಗಿ ರಹಿಮತ್ ಖಾನರಿಗೆ ಬಾಲ್ಯದಿಂದಲೇ ಸಂಗೀತ ಓತಪ್ರೋತ.

ತಂದೆ ಉ. ಗುಲಾಮ್‌ಹುಸೇನ್‌ಖಾನ್‌ರು ಗ್ವಾಲಿಯರ್ ಘರಾಣೆಯ ಪ್ರತಿನಿಧಿ. ಶಿಷ್ಯರಿಗೆ ಮನೆಯಲ್ಲಿಯೇ ಸಂಗೀತಪಾಠಗಳನ್ನು ಹೇಳುತ್ತಿದ್ದರು. ಬಾಲಕ ರಹಿಮತ್ ಖಾನ್ ತಂದೆಯ ಪದತಲದಲ್ಲಿ ಕುಳಿತು ಸಂಗೀತಾಭ್ಯಾಸ ಮಾಡುತ್ತಿದ್ದ. ರಹಿಮತ್ ಖಾನ್ ಆಗಿನ್ನೂ ೪ ವರ್ಷದ ಪುಟ್ಟ ಪೋರ. ಅವನದು ತಣಿಯದ ಸಂಗೀತದ ತೃಷೆ. ಅವನ ಕಲಿಯುವ ದಾಹ ಕೇವಲ ಗಾಯಕಿಯ ಪಾಠಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಗಾಯಕಿಯ ಅಭ್ಯಾಸ ಮುಗಿದ ತಕ್ಷಣ ದೊಡ್ಡಪ್ಪ, ಭಾವನಗರ ಆಸ್ಥಾನದ ಹಕೀಮ್ ಹಾಗೂ ಸಿತಾರ್ ವಾದಕ ಉಸ್ತಾದ್ ಗುಲಾಮ್ ನಬೀಬ್ ಖಾನ್‌ರ ಸಿತಾರ್ ವಾದನದ ಪಾಠಗಳತ್ತ ಅವನ ಚಿತ್ತ. ಉಸ್ತಾದ್ ಗುಲಾಮ್‌ನಬೀಬ್‌ಖಾನ್‌ರ ಸಿತಾರ್ ವಾದನದ

ಪ್ರಾಯೋಗಿಕ ಪಾಠಗಳಲ್ಲಿ ತನ್ಮಯನಾಗಿರುತ್ತಿದ್ದ ರಹಿಮತ್‌ಖಾನ್‌ಗೆ ಬಾಹ್ಯ ಪ್ರಪಂಚದ ಬಗ್ಗೆ ಅನಾಸಕ್ತಿ. ಸಂಗೀತವೇ ಅವನಿಗೆ ಸರ್ವಸ್ವ. ಸಿತಾರ್ ವಾದನದ ಅವ್ಯಾಹತ ಕಠಿಣತಮ ರಿಯಾಜ್, ಗುರುಗಳಲ್ಲಿ ಉತ್ಕೃಷ್ಟ ಭಕ್ತಿ, ಅಪಾರ ಶ್ರದ್ಧೆ, ಅವಿರತ ಪರಿಶ್ರಮದಿಂದ ಸಿತಾರ ವಾದನದಲ್ಲಿ ಪ್ರಬುದ್ಧತೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾದ.

ಗಾಯಕಿ ಹಾಗೂ ಸಿತಾರ್ ವಾದನದಲ್ಲಿ ಸಮನಾದ ಪ್ರಬುದ್ಧತೆಯನ್ನು ಪಡೆದ ರಹಿಮತ್‌ಖಾನ್‌ರಿಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವದು ಗಾಯಕಿಯಲ್ಲೋ ಅಥವಾ ಸಿತಾರ್ ವಾದನದಲ್ಲೋ ಎಂಬುದರ ತೊಳಲಾಟ. ಆಗ ತಂದೆ ಉ. ಗುಲಾಮ್‌ಹುಸೇನಖಾನ್‌ರು, 'ಮಗನೇ, ಮೊದಲು ನಿನಗೆ ಯಾವುದರತ್ತ ಒಲವು ಹೆಚ್ಚಿದೆ ಎಂಬುದನ್ನು ಸ್ವತ: ನೀನೇ ನಿರ್ಧರಿಸು. ನಿನ್ನ ನಿರ್ಧಾರ ಅಚಲವಾಗಿರಲಿ. ಅದಕ್ಕೆ ಬದ್ಧನಾಗಿರು' ಎಂದು ಉಪದೇಶಿಸಿದರು. ತದನಂತರ ಬೀನ್‌ವಾದನದ ತರಬೇತಿಗಾಗಿ ರಹಿಮತ್‌ಖಾನ್‌ರನ್ನು ಭಾವನಗರ ಆಸ್ಥಾನದ ಹೆಸರಾಂತ ಬೀನ್ ಹಾಗೂ ಸಿತಾರ್ ವಾದಕ ಉಸ್ತಾದ್ ಹಬೀಬ್‌ಖಾನ್‌ರಿಗೆ ಒಪ್ಪಿಸಿದರು.

ಆಗಿನ ಗುರುಕುಲ ಪದ್ಧತಿಯಲ್ಲಿ ಶಿಷ್ಯರು ಗುರುಗಳ ಮನೆಯಲ್ಲಿದ್ದುಕೊಂಡು, ಎಲ್ಲ ತರಹದ ಕೆಲಸಗಳನ್ನು ಮಾಡಿ ಗುರುಗಳ ಕೃಪೆಗೆ ಪಾತ್ರರಾಗುತ್ತಿದ್ದರು. ರಹಿಮತ್‌ಖಾನ್‌ರ ಗುರುಭಕ್ತಿ ಎಂಥ ಉನ್ನತ ಮಟ್ಟದಲ್ಲಿತ್ತು ಎಂಬುದಕ್ಕೆ ಈ ಘಟನೆ ಸಾಕ್ಷಿ. ರಹಿಮತ್ ಖಾನ್‌ರು ಗುರು ಉಸ್ತಾದ್‌ಹಬೀಬ್‌ಖಾನ್‌ರ ಪದತಲದಲ್ಲಿ ಕುಳಿತು ಬೀನ್ ವಾದನದ ತರಬೇತಿ ಪಡೆಯುತ್ತಿದ್ದ ದಿನಗಳವು. ಉಸ್ತಾದ್‌ಹಬೀಬ್‌ಖಾನ್‌ರು ಸಾಮಾನ್ಯ ಗುರುವಾಗಿರಲಿಲ್ಲ. ಅವರದು ಮೂಡಿ ಸ್ವಭಾವದ ವ್ಯಕ್ತಿತ್ವ. ತಮ್ಮ ಮನಸ್ಸಿಗೆ ಬಂದಾಗ ಮಾತ್ರ ಶಿಷ್ಯರಿಗೆ ಪಾಠ ಹೇಳುತ್ತಿದ್ದರು. ಅವರ ಮನವೊಲಿಸಿಕೊಂಡು ಅವರ ಮನ ಒಪ್ಪುವಂತೆ ಸಾಧನೆ ಮಾಡುವದೆಂದರೆ ಕತ್ತಿಯ ಮೇಲೆ ನಡೆದಂತೆ. ಒಮ್ಮೆ ಶಿಷ್ಯನ ಗುರುಭಕ್ತಿಯನ್ನು ನೋಡಬೇಕೆಂದು ರಹಿಮತ್‌ಖಾನ್‌ರನ್ನು ಪರೀಕ್ಷೆಗೊಳಪಡಿಸಿದರು. ಉಸ್ತಾದ್‌ಹಬೀಬ್‌ಖಾನ್‌ರಿಗೆ ಹುಕ್ಕಾ ಸೇದಲು ಬೆಂಕಿಯ ಅವಶ್ಯಕತೆಯಿತ್ತು. ತಕ್ಷಣ ರಹಿಮತ್‌ಖಾನ್‌ರಿಗೆ ಬೆಂಕಿ ತರಲು ಆಜ್ಞಾಪಿಸಿದರು. ಗುರುಗಳ ಆಜ್ಞೆಯಂತೆ ಕೆಂಡದ ಇದ್ದಿಲನ್ನು ತರಲು ಚಿಮ್ಮಟಕ್ಕಾಗಿ ಮೂಲೆ ಮೂಲೆಯಲ್ಲಿ ಹುಡುಕಾಡಿದರೂ ಸಿಗಲಿಲ್ಲ. ರಹಿಮತ್‌ಖಾನ್‌ರು ತಕ್ಷಣ ಧಗ-ಧಗ ಉರಿಯುತ್ತಿದ್ದ ಬಿಸಿ ಕೆಂಡದ ಇದ್ದಿಲನ್ನು ತಮ್ಮ ಎಳೆಯ ಅಂಗೈಯಲ್ಲಿ ತಂದು ಗುರುಗಳಿಗೆ ತಂದು ಕೊಟ್ಟಾಗ, ಶಿಷ್ಯನ ಗುರುಭಕ್ತಿಗೆ ಮೆಚ್ಚಿ ಸಂತೋಷಗೊಂಡ ಹಬೀಬ್‌ಖಾನ್‌ರು 'ಬೇಟಾ, ಬೀನ್ ಲೇ ಆವೋ' ಎಂದರು. ಅದಕ್ಕೆ ಆನಂದತುಂದಿಲರಾದ ರಹಿಮತ್‌ಖಾನ್‌ರು ಕುಣಿದು ಕುಪ್ಪಳಿಸಿದರು. ರಹಿಮತ್ ಖಾನ್‌ರು ನಾಲ್ಕು ವರ್ಷಗಳವರೆಗೆ ಗುರುಗಳಲ್ಲಿ ಅಪಾರ ಶ್ರದ್ಧೆ, ಕಠಿಣತಮ ರಿಯಾಜ್‌ನಿಂದ ಬೀನ್ ವಾದನದಲ್ಲೂ ಅದ್ಭುತ ಪ್ರಭುತ್ವ ಸಾಧಿಸಿದರು. ಶಿಷ್ಯನ ಸಾಧನೆಗೆ ಮೆಚ್ಚಿ, ಉಸ್ತಾದ್ ಹಬೀಬ್‌ಖಾನ್‌ರು, 'ರಹೀಮ್, ಇನ್ನು ಮುಂದೆ ನೀನು ನನ್ನ ಬಳಿ ಬರುವ ಕೆಲವು ಶಿಷ್ಯರಿಗೆ ಬೀನ್ ಹಾಗೂ ಸಿತಾರ್ ವಾದನದ ಪಾಠಗಳನ್ನು ಹೇಳಬೇಕು' ಎಂದರು. ಗುರುಗಳು ತಮ್ಮ ಮೇಲಿಟ್ಟ ಪ್ರೀತಿ ಹಾಗೂ ವಿಶ್ವಾಸವನ್ನು ಕಂಡು ಆನಂದಭರಿತರಾದರು. ಉಸ್ತಾದ್ ಹಬೀಬ್‌ಖಾನ್‌ರು ತಾವು ನೀಡುತ್ತಿದ್ದ ಸಂಗೀತ

ಸಮಾರೋಹಗಳಿಗೆ ಶಿಷ್ಯ ರಹಿಮತ್ ಖಾನ್‌ರನ್ನು ತಪ್ಪದೇ ಕರೆದುಕೊಂಡು ಹೋಗುತ್ತಿದ್ದರು. ಅಲ್ಲದೆ ಹಲವಾರು ಸಂಗೀತಸಮಾರೋಹಗಳಲ್ಲಿ ರಹಿಮತ್ ಖಾನ್‌ರನ್ನು ಬೀನ್ ಹಾಗೂ ಸಿತಾರ್ ವಾದನದೊಂದಿಗೆ ಪರಿಚಯಿಸಿದರು.

ಲಿಂಬ್ಡಿ (ಗುಜರಾತ್ ರಾಜ್ಯ) ಸಂಸ್ಥಾನದ ಮಹಾರಾಜ್ ಜಸವಂತ್‌ಸಿಂಗ್‌ನಿಂದ ದೊರೆತ ನಿಮಂತ್ರಣ ರಹಿಮತ್‌ಖಾನ್‌ರಲ್ಲಿದ್ದ ಸಂಗೀತಪ್ರತಿಭೆಯ ಪ್ರಸಿದ್ಧಿ ದೇಶದುದ್ದಗಲಕ್ಕೂ ಹರಡಲು ನಾಂದಿಯಾಯಿತು. ಅದರಂತೆ ಸಂಗೀತಕಛೇರಿ ನೀಡಲು ಬೀನ್ ಹಾಗೂ ಸಿತಾರ್‌ನೊಂದಿಗೆ ಲಿಂಬ್ಡಿ ಆಸ್ಥಾನಕ್ಕೆ ರಹಿಮತ್‌ಖಾನ್‌ರ ಆಗಮನ. ಮಹಾರಾಜನ ಕೋರಿಕೆಯಂತೆ ರಹಿಮತ್‌ಖಾನ್‌ರ ಕಛೇರಿ ಆರಂಭ. ಆಗ ಸಮಯ ರಾತ್ರಿ ೯ ಗಂಟೆ. ರಹಿಮತ್‌ಖಾನ್‌ರು ಬೀನ್ ಹಾಗೂ ಸಿತಾರ್‌ಗಳ ತಂತುಗಳನ್ನು ಮೀಟಿದಾಗ ಹೊರಹೊಮ್ಮಿದ ಸುಶ್ರಾವ್ಯ ನಿನಾದವು ಬೆಳಗಿನ ಜಾವ ೩ ಗಂಟೆಯವರೆಗೆ ಮೊಳಗಿತು. ಆರು ಗಂಟೆಗಳ ಕಾಲ ಅವ್ಯಾಹತವಾಗಿ ಹರಿದು ಬಂದ ರಹಿಮತ್‌ಖಾನ್‌ರ ವಿದ್ವತ್‌ಪೂರ್ಣ ಸಂಗೀತಕ್ಕೆ ಆನಂದತುಂದಿಲರಾದ ಮಹಾರಾಜ್ ಹಾಗೂ ಆಸ್ಥಾನದಲ್ಲಿ ನೆರೆದಿದ್ದ ವಿದ್ವಾಂಸರು, ಸಂಗೀತಪ್ರೇಮಿಗಳು ಮನಸಾರೆ ಮೆಚ್ಚಿಕೊಂಡು ಪಾರಿತೋಷಕ ನೀಡಿ ಸನ್ಮಾನಿಸಿದರು. ಇದು ರಹಿಮತ್‌ಖಾನ್‌ರ ೧೫ ವರ್ಷಗಳ ಅವಿರತ ಪರಿಶ್ರಮದ ಪ್ರತಿಫಲವಾಗಿತ್ತು. ಆಸ್ಥಾನದಲ್ಲಿ ನಡೆದ ಪ್ರಸಂಗವನ್ನು ಗುರುಗಳಿಗೆ ತಿಳಿಸಿ, ತಮಗೆ ಸಿಕ್ಕ ಸನ್ಮಾನ, ಪಾರಿತೋಷಕಗಳನ್ನು ಗುರು ಉ. ಹಬೀಬ್‌ಖಾನ್ ಸಾಹೇಬರ ಅಡಿದಾವರೆಗಳಲ್ಲಿ ಮುಡುಪಿಟ್ಟು ವಿನಮ್ರತೆಯನ್ನು ಮೆರೆದರು. ಶಿಷ್ಯನ ವಿನಮ್ರತೆಗೆ ಹೃದ್ಗದಿತರಾದ ಉ.ಹಬೀಬ್‌ಖಾನ್ ಸಾಹೇಬರು ಶಿಷ್ಯ ರಹಿಮತ್‌ಖಾನ್‌ರನ್ನು ಆಶೀರ್ವದಿಸುತ್ತ, 'ಸಂಗೀತಲೋಕದ ಇತಿಹಾಸದಲ್ಲಿ ನಿನ್ನ ಹೆಸರು ಅಜರಾಮರವಾಗಿರಲಿ' ಎಂದು ಹರಸಿದರು.

ಲಿಂಬ್ಡಿ ಆಸ್ಥಾನದಲ್ಲಿ ನಡೆದ ರಹಿಮತ್‌ಖಾನ್‌ರ ವಿದ್ವತ್‌ಪೂರ್ಣ ಸಂಗೀತದ ರಸಮಾಧುರ್ಯವು ದೇಶದುದ್ದಗಲಕ್ಕೂ ಪಸರಿಸಿ, ಅವರಿಗೆ ನಿಮಂತ್ರಣಗಳ ಹೊಳೆಯೇ ಹರಿದು ಬಂದಿತು. ಮಂಗ್ರೋಲಾ, ಜಾಮ್‌ನಗರ, ಗುಜರಾತ್, ನಾಗಪುರ, ಇಂದೋರ್, ರಾಯಗಢ, ಕಛ್, ಓರಿಸ್ಸಾ, ಪಂಜಾಬ್ ಹಾಗೂ ಸಿಂಧ್‌ದಂಥ ನಾನಾ ಸ್ಥಳಗಳಲ್ಲಿ ಹರಿಸಿದ ಸಂಗೀತವು ಅವರನ್ನು ಉತ್ತುಂಗ ಶಿಖರಕ್ಕೇರಿಸಿತು. ಇಷ್ಟೆಲ್ಲ ಸಾಧನೆ ಮಾಡಿದ ರಹಿಮತ್‌ಖಾನ್‌ರದು ವಿನಮ್ರ ವ್ಯಕ್ತಿತ್ವ. ಖಾನ್ ಸಾಹೇಬರದು ಒಂದೇ ಒಂದು ಗುರಿ! ಅದು ಪರಿಪೂರ್ಣತೆ.

೧೮೭೮ರ ಇಸ್ವಿ ರಹಿಮತ್‌ಖಾನ್‌ರ ಜೀವನದ ಮಹತ್ವದ ವರ್ಷ. ರಹಿಮತ್ ಖಾನ್‌ರಿಗೆ ಆಗಿನ್ನೂ ೧೫ರ ಪ್ರಾಯ. ಅಪ್ರತಿಮ ಬೀನ್‌ಕಾರ್ ಎಂಬ ಗೌರವಕ್ಕೆ ಪಾತ್ರರಾದ ರಹಿಮತ್‌ಖಾನ್‌ರಿಗೆ ಇಂದೋರ್ ಮಹಾರಾಜ್‌ನಿಂದ ಆಹ್ವಾನ ಬಂದದ್ದು ಜೀವನದ ಮಹತ್ವದ ತಿರುವು. ರಹಿಮತ್‌ಖಾನ್‌ರಿಗೆ ಬೀನ್‌ವಾದನದ ಮೇಲೆ ಸಾಧಿಸಿದ್ದ ಅಸಾಮಾನ್ಯ ಹಿಡಿತ ಮುಂದೆ ಅವರನ್ನು ಇಂದೋರ್ ಸಂಸ್ಥಾನದ ಆಸ್ಥಾನ ಬೀನ್‌ಕಾರ್‌ರನ್ನಾಗಿಸಿತು. ಇದೇ ಸಂದರ್ಭದಲ್ಲಿ ರಹಿಮತ್‌ಖಾನ್‌ರಿಗೆ ಇನ್ನೊಂದು ಸುವರ್ಣಾವಕಾಶ ಒದಗಿ ಬಂತು. ಅದೆಂದರೆ ಸಂಗೀತಜಗತ್ತು ಕಂಡ ಸರ್ವಶ್ರೇಷ್ಠ

ಬೀನ್‌ಕಾರ್ ಉಸ್ತಾದ್ ಬಂದೇಅಲಿಖಾನ್‌ರ ಭೇಟಿ. ಇಂದೋರ್ ಆಸ್ಥಾನದ ಬೀನ್‌ಕಾರ್‌ರಾದ ಖಾನ್ ಸಾಹೇಬರಿಂದ ದೊರೆತ ಬೀನ್‌ವಾದನದ ವಿಶೇಷ ಮಾರ್ಗದರ್ಶನದ ಪ್ರತಿಫಲವೇ ರಹಿಮತ್ ಖಾನ್‌ರಿಗೆ ಬೀನ್ ಮೇಲೆ ಪರಿಪೂರ್ಣತೆಯ ಸಾಧನೆ. ಶಿಷ್ಯನ ಸಾಧನೆಗೆ ಮೆಚ್ಚಿಕೊಂಡು ಉ. ಬಂದೇಅಲಿಖಾನ್‌ರು, 'ರಹೀಮ್, ನೀನು ಹುಟ್ಟು ಸಂಗೀತಗಾರ. ಕಾರಣ ಶ್ರೇಷ್ಠ ಸಂಗೀತಗಾರನಾಗುವೆ. ಆದರೆ ಬೀನ್ ವಾದನವನ್ನು ಜೀವನ ನಿರ್ವಹಣೆಗಾಗಿ ಸರ್ವಥಾ ಬಳಸಿಕೊಳ್ಳಬಾರದು. ಬೀನ್ ನುಡಿಸುವದು ಭಗವಂತನ ಒಲುಮೆಗಾಗಿ ಹಾಗೂ ನಮ್ಮ ಆತ್ಮತೃಪ್ತಿಗಾಗಿ ಮಾತ್ರ. ಇಲ್ಲಿಯವರೆಗೆ ನೀನು ಕಲಿತ ಬೀನ್‌ವಾದನದ ತಂತ್ರಗಾರಿಕೆಯನ್ನು ಸಿತಾರ್‌ನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸು, ಎಂದು ಹರಸಿದರು. ಗುರುಗಳ ಮಾರ್ಗದರ್ಶನದ ಮೇರೆಗೆ ಈಗ ರಹಿಮತ್‌ಖಾನ್‌ರು ತಮ್ಮನ್ನು ಸಂಪೂರ್ಣವಾಗಿ ಸಿತಾರ್ ವಾದನದಲ್ಲಿ ತೊಡಗಿಸಿಕೊಂಡರು.

ಗುರು ಉ. ಬಂದೇಅಲಿಖಾನ್ ಸಾಹೇಬರು ನೀಡಿದ ಸಲಹೆಯಂತೆ ರಹಿಮತ್ ಖಾನ್‌ರು ಈಗ ಬೀನ್‌ನಲ್ಲಿದ್ದ ತಂತ್ರಗಾರಿಕೆಯನ್ನು ಸಿತಾರ್‌ನಲ್ಲಿ ಅಳವಡಿಸುವ ಕಾರ್ಯದಲ್ಲಿ ಪ್ರವೃತ್ತರಾದರು. ಅಂದಿನ ದಿನಗಳಲ್ಲಿ ಸಿತಾರ್‌ನ ಆಕಾರ ಬಹಳ ಚಿಕ್ಕದಾಗಿತ್ತು. ಹಾಗೂ ಅದರಿಂದ ಕೇವಲ ಮಸೀತ್‌ಖಾನಿ ಹಾಗೂ ರಜಾಖಾನಿ ಗತ್‌ಗಳ ನಿನಾದ ಹೊರಹೊಮ್ಮುತ್ತಿತ್ತು. ಬೀನ್ ವಾದನದಲ್ಲಿ ನುಡಿಸುತ್ತಿದ್ದ ಆಲಾಪ್, ಜೋಡ್, ಬಢತ್ ಹಾಗೂ ಝಾಲಾ ಗತ್‌ಗಳನ್ನು ಸಿತಾರ್‌ನಲ್ಲಿ ನುಡಿಸಲು ಸಾಧ್ಯವಿರಲಿಲ್ಲ. ಆಗಿನ ಸಿತಾರ್ ಮಂದ್ರ ಮಧ್ಯಮ, ಮಂದ್ರ ಷಡ್ಜ(ಎರಡು), ಖರಜ್ ಪಂಚಮ್, ಮಂದ್ರ ಪಂಚಮ್, ಪಪೀಹಾ ಹಾಗೂ ಚೀಕಾರಿ ಎಂಬ ಏಳು ಸ್ವರಗಳ ತಂತುಗಳಿಂದ ನಿರ್ಮಿತಗೊಂಡಿತ್ತು. ಅದು ಖರಜ್ ಪಂಚಮ್ ಸ್ವರದ ತಂತುವಿನಿಂದ ಹೊರತಾಗಿತ್ತು. ತತ್ಪರಿಣಾಮವಾಗಿ ಪ್ರಸ್ತುತ ಸಿತಾರ್‌ನಿಂದ ವಿಲಂಬಿತ್ ಲಯದಲ್ಲಿ ಸೂಕ್ಷ್ಮ ಆಲಾಪ್ ಗತ್‌ನ ನಿನಾದ ಹೊರಹೊಮ್ಮುತ್ತಿರಲಿಲ್ಲ. ಸಿತಾರ್ ವಾದನದಲ್ಲಿಯೇ ತಮ್ಮ ಭವಿಷ್ಯ ಅಡಗಿದೆ ಎಂದು ನಿರ್ಧರಿಸಿದ್ದ ರಹಿಮತ್‌ಖಾನ್‌ರು ಸಿತಾರ್‌ನಲ್ಲಿರುವ ಅಡೆತಡೆಗಳಿಗೆ ಕೊನೆ ಹಾಡಲು ಕಾರ್ಯೋನ್ಮುಖರಾದರು. ಪ್ರಸ್ತುತ ಸಿತಾರ್‌ಗೆ ಖರಜ್ ಪಂಚಮ್ ಸ್ವರದ ತಂತುವನ್ನು ಅಳವಡಿಸಿ ಅದಕ್ಕೆ ವಿನೂತನ ರೂಪು ನೀಡುವಲ್ಲಿ ಯಶಸ್ವಿಯಾದರು. ಈಗ ರಹಿಮತ್‌ಖಾನ್‌ರಿಂದ ಪುನರ್ ಜೋಡಣೆಗೊಂಡ ಸಿತಾರ್ ಮಂದ್ರ ಮಧ್ಯಮ್, ಮಂದ್ರ ಷಡ್ಜ, ಖರಜ್ ಪಂಚಮ್, ಖರಜ್ ಷಡ್ಜ, ಮಂದ್ರ ಪಂಚಮ್, ಪಪೀಹಾ (ಮಧ್ಯ ಷಡ್ಜ), ಹಾಗೂ ಚೀಕಾರಿ (ತಾರ ಷಡ್ಜ) ಎಂಬ ಏಳು ಸ್ವರಗಳ ತಂತುಗಳೊಂದಿಗೆ ಶೋಭಿಸತೊಡಗಿತು. ರಹಿಮತ್ ಖಾನ್‌ರಿಂದ ವಿನೂತನ ರೂಪು ಪಡೆದುಕೊಂಡ ಸಿತಾರ್ ವಾದನದಲ್ಲಿ ಕರ್ಣಮನೋಹರ ಸುಶ್ರಾವ್ಯತೆ, ಸುಲಭ ಹೊಂದಾಣಿಕೆ ಹಾಗೂ ವೈವಿಧ್ಯಗಳು ಹೆಚ್ಚಳಗೊಂಡವು. ಬೀನ್ ಹಾಗೂ ಸುರ್ ಬಹಾರ್‌ನಿಂದ ಹರಿದು ಬರುತ್ತಿದ್ದ ನಿನಾದ ಈಗ ಸಿತಾರ್‌ನಿಂದಲೂ ಹೊರಹೊಮ್ಮಿತು. ಹೊಸ ಮೆರಗನ್ನು ಪಡೆದುಕೊಂಡ ಸಿತಾರ್ ನಾಲ್ಕು ಸಪ್ತಕಗಳಿಂದ ಪರಿಪೂರ್ಣವಾಯಿತು. ರಹಿಮತ್‌ಖಾನ್‌ರಿಂದ ನವೀಕರಿಸಲ್ಪಟ್ಟ ಸಿತಾರ್ ಸಂಗೀತಲೋಕಕ್ಕೆ ಒಂದು ಹೊಸ ಆಯಾಮವನ್ನೇ ತಂದುಕೊಟ್ಟಿತು.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಹೊಸ ಕಾಯಕಲ್ಪ ಹಾಗೂ ವಿಶೇಷ ಸ್ಥಾನಮಾನಗಳನ್ನು ದೊರಕಿಸಿಕೊಟ್ಟವರು ಮಹಾರಾಷ್ಟ್ರದ ಚತುರ್ ಪಂಡಿತ್ ಪಂ. ವಿಷ್ಣು ನಾರಾಯಣ ಭಾತಖಂಡೆ ಹಾಗೂ ಗಾಯನಾಚಾರ್ಯ ಪಂ. ವಿಷ್ಣು ದಿಗಂಬರ್ ಪಲುಸ್ಕರ್. ಇವರಿಬ್ಬರು ಮಾಡಿದ ಮಹತ್ಕಾರ್ಯಗಳ ಫಲವಾಗಿ ಮುಂಬೈ ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದ ಕೇಂದ್ರವಾಯಿತು. ಅಂದಿನ ದಿನಗಳಲ್ಲಿ ಹಿಂದುಸ್ತಾನೀ ಸಂಗೀತದ ಕುರಿತು ಜರಗುವ ಎಲ್ಲ ಚರ್ಚಾಗೋಷ್ಠಿಗಳು ಹಾಗೂ ಸಮ್ಮೇಳನಗಳಿಗೆ ಮುಂಬೈ ಕೇಂದ್ರಬಿಂದು. ಪಂ. ಭಾತಖಂಡೆ ಹಾಗೂ ಪಂ. ಪಲುಸ್ಕರ್‌ರೊಂದಿಗಿದ್ದ ಸಂಪರ್ಕ ಸಹಜವಾಗಿ ರಹಿಮತ್‌ಖಾನ್‌ರನ್ನು ಮುಂಬೈಗೆ ಕೈಬೀಸಿ ಕರೆಯಿತು. ತತ್ಪರಿಣಾಮವಾಗಿ ನವೀಕರಣಗೊಂಡ ಸಿತಾರ್‌ನ್ನು ಮೀಟಿದ ರಹಿಮತ್‌ಖಾನ್‌ರು ಮುಂಬೈನ ಸಂಗೀತಪ್ರೇಮಿಗಳ ಹೃನ್ಮನ ಗೆಲ್ಲುವಲ್ಲಿ ಯಶಸ್ವಿಯಾದರು.

ಸಿತಾರ್‌ನ ನಿನಾದದೊಂದಿಗೆ ಮುಂಬೈಯಲ್ಲಿ ಜಯಭೇರಿ ಬಾರಿಸಿದ ರಹಿಮತ್ ಖಾನ್‌ರಿಗೆ ದು:ಖದ ಪರಿಸ್ಥಿತಿ ಎದುರಿಸಬೇಕಾಗಿ ಬಂತು. ಅದೆಂದರೆ, ತಂದೆ ಉ. ಗುಲಾಮ್‌ಹುಸೇನ್‌ಖಾನ್ ಸಾಹೇಬರು ಪೈಗಂಬರವಾಸಿಗಳಾಗಿದ್ದು. ಪಿತೃವಿಯೋಗವು ರಹಿಮತ್‌ಖಾನ್‌ರನ್ನು ತೀವ್ರ ಘಾಸಿಗೊಳಿಸಿತು. ನೋವಿನಿಂದ ಹೊರಬರಲು ರಹಿಮತ್ ಖಾನ್‌ರು ತಮ್ಮ ವಾಸ್ತವ್ಯವನ್ನು ಪುಣೆಗೆ ಸ್ಥಳಾಂತರಿಸಿ, ಅಲ್ಲಿ ಕೂಡ ತಮ್ಮ ಸಿತಾರ್‌ನ ಝೇಂಕಾರದಿಂದ ಸಂಗೀತದ ಜಯಭೇರಿಯನ್ನು ಮೊಳಗಿಸಿದರು. ಭಾತಖಂಡೆ ಹಾಗೂ ಪಲುಸ್ಕರ್‌ರ ಕಾರ್ಯಗಳಿಂದ ಉತ್ತೇಜಿತರಾಗಿದ್ದ ರಹಿಮತ್‌ಖಾನ್‌ರು ಸಂಗೀತದ ವ್ಯಾಪಕ ಪ್ರಸರಣಕ್ಕಾಗಿ ಶ್ರೀಮಂತ ಹಾಗೂ ಬಡವರೆನ್ನದೆ ಅನೇಕರನ್ನು ಶಿಷ್ಯರನ್ನಾಗಿಸಿಕೊಂಡರು. ಓರ್ವ ಸಾಮಾನ್ಯ ವ್ಯಕ್ತಿಯವರೆಗೆ ಶಾಸ್ತ್ರೀಯ ಸಂಗೀತ ಮುಟ್ಟಬೇಕು ಎಂಬ ವಾದಕ್ಕೆ ಕಟಿಬದ್ಧರಾಗಿದ್ದರು. ಅದರಂತೆ ದೊಡ್ಡ ಚಿತ್ರಮಂದಿರಗಳನ್ನು ಬಾಡಿಗೆ ಹಿಡಿದು, ತಮ್ಮ ಸಂಗೀತ ಕಛೇರಿಗಳಿಂದ ಸಾಮಾನ್ಯರಲ್ಲಿ ಸಂಗೀತದ ಅಭಿರುಚಿ ಹೆಚ್ಚಿಸುವಲ್ಲಿ ಪರಿಶ್ರಮಿಸಿದರು. ನಂತರ ರಹಿಮತ್ ಖಾನ್‌ರು ಪುಣೆಯಲ್ಲಿ ಭಾರತ ಗಾಯನ ಸಮಾಜ ಎಂಬ ಸಂಗೀತ ವಿದ್ಯಾಲಯವನ್ನು ಹುಟ್ಟು ಹಾಕಿದರು. ಅಲ್ಲಿ ಗಾಯನಾಚಾರ್ಯ ಪಂ. ಭಾಸ್ಕರಬುವಾ ಬಖಲೆ ಅವರ ಗಾಯನ ಹಾಗೂ ರಹಿಮತ್‌ಖಾನ್‌ರ ಸಿತಾರ್‌ವಾದನದ ತರಬೇತಿ ವರ್ಗಗಳು ಪ್ರಾರಂಭಗೊಂಡವು.

ನಾಲ್ವಡಿ ಕೃಷ್ಣರಾಜ್ ಒಡೆಯರ ಕಾಲದಲ್ಲಿ ಮೈಸೂರು ಆಸ್ಥಾನ ಕಲೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರಬಿಂದುವಾಗಿತ್ತು. ಸ್ವತಃ ವೀಣಾವಾದಕರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಮೈಸೂರಿನಲ್ಲಿ ಕರ್ನಾಟಕೀ ಸಂಗೀತದ ಜೊತೆಗೆ ಹಿಂದುಸ್ತಾನೀಸಂಗೀತವು ಕಾಲೂರಲು ಕಾರಣೀಭೂತರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರರಿಂದ ೧೯೧೧ ರಲ್ಲಿ ರಹಿಮತ್ ಖಾನರಿಗೆ ಸಂಗೀತಕಛೇರಿಯ ಆಹ್ವಾನ ಬಂದಿತು. ಆಸ್ಥಾನದ ಸಂಪ್ರದಾಯದಂತೆ ಸಂಗೀತಕಛೇರಿ ನೀಡುವವರು ಸಂಗೀತವಿದ್ವಾನ್ ವೀಣೆ ಶೇಷಣ್ಣನವರಲ್ಲಿ ಪೂರ್ವಭಾವಿ ಪರೀಕ್ಷೆಗೆ ಒಳಗಾಗಬೇಕಿತ್ತು. ನಂತರ ಮಹಾರಾಜರು ಹಾಗೂ ಇನ್ನುಳಿದ ವಿದ್ವಾಂಸರಿಗೆ.

ಅನಿರೀಕ್ಷಿತ ಫಲಿತಾಂಶ ಕಾದಿತ್ತು. ಅದೆಂದರೆ ರಹಿಮತ್‌ಖಾನ್‌ರ ಸಂಗೀತದ ವಿದ್ವತ್ತಿಗೆ ವೀಣೆ ಶೇಷಣ್ಣನವರು ನೀಡಿದ ಬಲವಾದ ಸಮರ್ಥನೆ. ಚಕಿತಗೊಂಡ ಸ್ವತಃ ಮಹಾರಾಜ ಹಾಗೂ ಇನ್ನಿತರರಲ್ಲಿ ಈಗ ರಹಿಮತ್‌ಖಾನ್‌ರ ಸಿತಾರ್‌ನ ನಿನಾದ ಆಲಿಸಲು ಕೌತುಕತೆ ಮನೆಮಾಡಿತ್ತು. ರಹಿಮತ್‌ಖಾನ್‌ರ ಸಿತಾರ್ ವಿದ್ವತ್ತನ್ನು ಮನ್ನಿಸಿ ಮಹಾರಾಜರು, ಸ್ವರ್ಣಪದಕದೊಂದಿಗೆ 'ಸಿತಾರ ರತ್ನ' ಬಿರುದು ಪ್ರದಾನಿಸಿ ಗೌರವಿಸಿದರು. ಆಸ್ಥಾನದಲ್ಲಿರುವ ಸಂಗೀತದ ನವರತ್ನಗಳ ಪಂಕ್ತಿಗೆ ರಹಿಮತ್‌ಖಾನ್‌ರ ಹೆಸರು ಸೇರ್ಪಡೆಗೊಂಡಿತು. ಇದೇ ಸಂದರ್ಭದಲ್ಲಿ 'ಸಿತಾರ್ ರತ್ನ' ರಹಿಮತ್‌ಖಾನ್‌ರಿಗೆ ಮೈಸೂರು ಮಹಾರಾಜರಿಂದ ಆಸ್ಥಾನ ಕಲಾವಿದರಾಗಬೇಕೆಂಬ ಆಹ್ವಾನ ಬಂದಿತು. ಆದರೆ ಸ್ವಾತಂತ್ರ್ಯ ಪ್ರಿಯರಾಗಿದ್ದ ರಹಿಮತ್‌ಖಾನ್‌ರು ಆಹ್ವಾನವನ್ನು ವಿನಯಪೂರ್ವಕವಾಗಿ ತಳ್ಳಿ ಹಾಕಿದರು.

ಗ್ವಾಲಿಯರ್ ಘರಾಣೆಯ ವೈಶಿಷ್ಟ್ಯಗಳಾದ ರಾಗದ ಶುದ್ಧತೆ, ಗಂಭೀರರೂಪದ ಸ್ವರ ವಿನ್ಯಾಸ, ವೈವಿಧ್ಯಮಯ ಲಯಕಾರಿಗಳು, ಬೀನಕಾರ್ ಘರಾಣೆಯ ಮಾಧುರ್ಯ, ಸೂಕ್ಷ್ಮ ಗಮಕ ತಾನ್‌ಗಳು, ವಿವಿಧ ತರಹದ ಸ್ವರಗುಚ್ಛಗಳ ಪ್ರಸ್ತುತಿ ಅಲ್ಲದೆ ಗಾಯಕಿ ಅಂಗದೊಂದಿಗೆ ನುಡಿಸುವದು ಸಿತಾರವಾದನಕ್ಕೆ ಹೊಸ ಆಯಾಮವನ್ನೇ ತಂದುಕೊಟ್ಟಿತು. ಮುಂದೆ ಅದು 'ರಹಿಮತ್‌ಖಾನ್ ಬಾಜ್' ಎಂದೇ ಪ್ರಸಿದ್ಧಿ ಪಡೆಯಿತು.

ಈಗಾಗಲೇ ಹೇಳಿದಂತೆ ರಹಿಮತ್‌ಖಾನರದು ಅತೀ ದೊಡ್ಡ ಸಂಗೀತ ಪರಂಪರೆ. ಅವರಿಗಿಂತ ಪೂರ್ವದಲ್ಲಿ ಮೂರು ತಲೆಮಾರಿನ ಸಂಗೀತಗಾರರಾದರೆ ಅವರ ನಂತರದಲ್ಲಿ ನಾಲ್ಕನೇ ತಲೆಮಾರಿನ ಸಂಗೀತಗಾರರಾಗಿ ಹೊರಹೊಮ್ಮಿ ಪರಂಪರೆಯನ್ನು ಜೀವಂತವಾಗಿರಿಸಿದ್ದಾರೆ.

ಪೈಗಂಬರವಾಸಿ ಉ. ಅಬ್ದುಲ್ ಕರೀಮ್ ಖಾನ್‌ರು ರಹಿಮತ ಖಾನರ ಪುತ್ರ ಅಬ್ದುಲ್ ಕರೀಮ್ ಖಾನರು ಧಾರವಾಡದ ಕರ್ನಾಟಕ ಮಹಾವಿದ್ಯಾಲಯದ ಸಿತಾರ್ ಪ್ರಾಧ್ಯಾಪಕರು. ದಿ. ಸತೀಶಕುಮಾರ ದಿಲ್ಲಿ ಆಕಾಶವಾಣಿ ಕೇಂದ್ರ ನಿಲಯ ಸಿತಾರ ವಾದಕರು, ನಂತರ ಇನ್ನೊಬ್ಬ ಮಗ ದಸ್ತಗೀರ ಖಾನ್ ಕೂಡ ಸಿತಾರ ವಾದಕರು, ಪುಣೆಯ ನಿವಾಸಿಗಳು. ಉ. ಉಸ್ಮಾನ್ ಖಾನ್, ಉ. ಬಾಲೇಖಾನ್, ಉ. ಮಹಬೂಬ ಖಾನ್, ಉ. ಹಮೀದ್ ಖಾನ್, ಉ. ಛೋಟೆ ರಹಿಮತ್ ಖಾನ್, ಉ. ರಫೀಕ ಖಾನ್ ಹಾಗೂ ಉ. ಶಫೀಕ ಖಾನ್– ಇವರೆಲ್ಲ ಸಿತಾರ ರತ್ನರಹಿಮತ್ ಖಾನ್‌ರ ಮೊಮ್ಮಕ್ಕಳು. ಎಲ್ಲರೂ ಉ. ಅಬ್ದುಲ್ ಕರೀಮ್ ಖಾನ್‌ರ ಪುತ್ರರು. ನಂತರದಲ್ಲಿ ಬಾಲೇಖಾನರ ಪುತ್ರರಾದ ರಯೀಸ್ ಖಾನ್, ಹಫೀಜ್ ಖಾನ್ ಹಾಗೂ ಹಮೀದ್ ಖಾನ್‌ರ ಪುತ್ರ ಮೊಹಸಿನ್ ಖಾನ್ ಉದಯೋನ್ಮುಖ ಸಿತಾರವಾದಕರಾಗಿ ಹೊರಹೊಮ್ಮಿ 'ಸಿತಾರ ರತ್ನ'ರ ಪರಂಪರೆಯನ್ನು ಜೀವಂತವಾಗಿರಿಸಿದ್ದಾರೆ.


ಮಹಾರಾಜನ ಆಗ್ರಹದ ಮೇರೆಗೆ ಸಂಗೀತ ಕಛೇರಿ ನೀಡಲು ರಹಿಮತ್ ಖಾನ್‌ರು ಆಗಾಗ ಪುಣೆಯಿಂದ ಮೈಸೂರಿಗೆ ಆಗಮಿಸುತ್ತಿದ್ದರು. ಮೈಸೂರಿಗೆ ತೆರಳುವಾಗ ಸ್ವಲ್ಪ ಸಮಯ ಧಾರವಾಡದಲ್ಲಿ ವ್ಯಯಿಸುತ್ತಿದ್ದುದು ಅವರ ರೂಢಿ. ಇಲ್ಲಿಯ ಪ್ರಾಕೃತಿಕ ಸೌಂದರ್ಯ ಹಾಗೂ ಪ್ರಶಾಂತ ವಾತಾವರಣಗಳಿಗೆ ಮಾರುಹೋದ

ರಹಿಮತ್‌ಖಾನ್‌ರು ತಮ್ಮ ವಾಸ್ತವ್ಯವನ್ನು ಧಾರವಾಡಕ್ಕೆ ಸ್ಥಳಾಂತರಿಸಿದರು. ೧೯೧೨ರಲ್ಲಿ ಧಾರವಾಡಕ್ಕೆ ಆಗಮಿಸಿದ ರಹಿಮತ್‌ಖಾನ್‌ರು ಖಾಯಂ ಆಗಿ ನೆಲೆ ನಿಂತರು. ಓರ್ವ ಜನಸಾಮಾನ್ಯನಿಗೂ ಕೂಡ ಶಾಸ್ತ್ರೀಯ ಸಂಗೀತವನ್ನು ಕಲಿಯುವ ಹಾಗೂ ಆಲಿಸುವ ಹಕ್ಕಿದೆ. ಅದು ಜನಸಾಮಾನ್ಯರವರೆಗೆ ತಲುಪಬೇಕು ಎಂಬ ಉದ್ದೇಶದೊಂದಿಗೆ ರಹಿಮತ್‌ಖಾನ್‌ರು ಧಾರವಾಡದಲ್ಲಿ 'ಭಾರತೀಯ ಸಂಗೀತ ವಿದ್ಯಾಲಯ'ವನ್ನು ೧೯೩೧ ರಲ್ಲಿ ಸ್ಥಾಪಿಸಿದರು. ಇಂದಿಗೂ ಭಾರತೀಯ ಸಂಗೀತ ವಿದ್ಯಾಲಯವು ರಹಿಮತ್‌ಖಾನ್‌ರು ಹಾಕಿಕೊಟ್ಟ ಮಾರ್ಗದಲ್ಲಿ ಯಶಸ್ವಿಯಾಗಿ ಮುನ್ನಡೆದಿದೆ.

'ಸುರ್ ಹೀ ಈಶ್ವರ' ಎಂಬ ಮನೋಧರ್ಮದ ಖಾನ್ ಸಾಹೇಬರು ಅರ್ಧಾಂಗವಾಯು ಪೀಡಿತರಾಗಿ ಸಿತಾರ ನುಡಿಸಲು ಸಾಧ್ಯವಿಲ್ಲವೆಂದು ಅರಿತು, 'ಸಿತಾರ್ ತಂತುಗಳನ್ನು ಮೀಟಲು ನನ್ನಿಂದ ಸಾಧ್ಯವಿಲ್ಲವೆಂದರೆ ನಾನಿದ್ದು ಪ್ರಯೋಜನವೇನು' ಎನ್ನುತ್ತ ರಹಿಮತ್‌ಖಾನ್‌ರು ೧೯೫೪ರಲ್ಲಿ ಇಹಲೋಕ ತ್ಯಜಿಸಿದರು. ಅವರು ಸ್ವರ್ಗಸ್ಥರಾದ ನಂತರ ಅವರ ಸಂಸ್ಮರಣೆಯಲ್ಲಿ ಪ್ರತಿವರ್ಷ ಪುಣ್ಯತಿಥಿಯಂದು ಸಂಗೀತೋತ್ಸವವನ್ನು ಧಾರವಾಡದಲ್ಲಿ ಆಯೋಜಿಸುತ್ತಿದೆ. ದೇಶದ ಸುವಿಖ್ಯಾತ ಹಾಗೂ ಉದಯೋನ್ಮುಖ ಸಂಗೀತಗಾರರನ್ನು ಪ್ರೋತ್ಸಾಹಿಸುತ್ತ ಕಾರ್ಯಕ್ರಮ ನಡೆಸುವ 'ಸಿತಾರ ರತ್ನ' ಸಮಿತಿಯು ರಹಿಮತ್‌ಖಾನರಿಗೆ ನಾದನಮನ ಸಲ್ಲಿಸುತ್ತದೆ.

ಭಾವನಗರದ ಆಸ್ಥಾನ ಗಾಯಕರಾಗಿದ್ದ ತಂದೆ ಉ. ಗುಲಾಮ್‌ಹುಸೇನ ಖಾನ್‌ರಿಂದ ಆರಂಭಗೊಂಡ ರಹಿಮತ್‌ಖಾನ್‌ರ ಕಲಾವಿಹಾರ, ನಾದಲೋಕದ ರಸಯಾತ್ರೆಯನ್ನು ಕೈಗೊಂಡಿತು. ಉ. ಹಬೀಬಖಾನ್‌ರಿಂದ ಪುಷ್ಟಿಗೊಂಡ ಅವರ ಸಂಗೀತ ಸತ್ವ, ಉ. ಬಂದೇಅಲಿಖಾನ್‌ರ ಬೀನ್‌ನಿಂದ ಹರಿದು ಬಂದ ಪೋಷಕಾಂಶಗಳನ್ನು ಹೀರಿ ಸಿತಾರ್‌ನಲ್ಲಿ ಮೈಗೂಡಿಸಿಕೊಂಡು ಶ್ರೀಮಂತವಾಯಿತು. ದಕ್ಷಿಣ ಭಾರತಕ್ಕೆ ಸಿತಾರ್‌ವಾದನದ ನಿನಾದವನ್ನು ಪರಿಚಯಿಸಿದ 'ಸಿತಾರರತ್ನ' ರಹಿಮತ್‌ಖಾನ್‌ರು ಸಂಗೀತ ಕ್ಷೇತ್ರಕ್ಕೆ ಅನುಪಮ, ಅವಿಸ್ಮರಣೀಯ ಕೊಡುಗೆ ನೀಡಿ, ನಾದಲೋಕದ ಧ್ರುವತಾರೆಯಾಗಿ ರಾರಾಜಿಸುತ್ತಿರುವ ರಸಋಷಿ.

■ ■ ■



ಶ್ರೀ ಜಿ.ಆರ್. ನಿಂಬರಗಿ

# ಬಹುಶ್ರುತ ವಿದ್ವಾನ್ ವ್ಹಾಯಲಿನ್ ಪ್ರವೀಣ
# ಶ್ರೀ ಜಿ.ಆರ್. ನಿಂಬರಗಿ
## (೧೯೧೯-೨೦೦೮)

● ಅನಿಲ ನಾರಾಯಣರಾವ್. ದೇಸಾಯಿ

ಹಿಂದುಸ್ತಾನೀ ಸಂಗೀತಕ್ಷೇತ್ರಕ್ಕೆ ಸಾಂಸ್ಕೃತಿಕ ನಗರಿ ಧಾರವಾಡದ ಕೊಡುಗೆ ಅಪಾರ ಹಾಗೂ ಅನನ್ಯ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸುಪ್ರಸಿದ್ಧ ಗಾಯಕರಂತೆ ಹೆಸರಾಂತ ವಾದ್ಯಪ್ರವೀಣರಿಗೂ ಧಾರವಾಡ ಜನ್ಮಭೂಮಿ ಅಥವಾ ಕರ್ಮಭೂಮಿ. ಅದಕ್ಕೆಂದೆ ಧಾರವಾಡದ ಸಂಗೀತಸರಸ್ವತಿ ಸರ್ವಾಂಗಸುಂದರಿ. ರುದ್ರವೀಣಾ, ಸಿತಾರ, ಬಾನ್ಸುರಿ, ತಬಲಾ ವಾದ್ಯ ಪ್ರವೀಣರಂತೆ ವ್ಹಾಯಲಿನ್‌ವಾದಕರೂ ಧಾರವಾಡ ನೆಲದಿಂದ ಸ್ಫೂರ್ತಿಪಡೆದು ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಗಮನ ಸೆಳೆದಿದ್ದಾರೆ. ಮನ್ನಣೆಗೆ ಪಾತ್ರರಾಗಿದ್ದಾರೆ. ಅಂತಹ ವ್ಹಾಯಲಿನ್ ವಾದಕರಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತಾರೆ, ಸುಪ್ರಸಿದ್ಧ ವ್ಹಾಯಲಿನ್ ವಾದಕ, ರಾಜ್ಯ ಸರಕಾರದ ಪ್ರತಿಷ್ಠಿತ ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾಗಿದ್ದ ದಿವಂಗತ ಪಂಡಿತ, ಜಿ.ಆರ್. ನಿಂಬರಗಿಯವರು. ಶ್ರೀ ನಿಂಬರಗಿಯವರು ಉತ್ತರ ಕರ್ನಾಟಕದಲ್ಲಿ ವ್ಹಾಯಲಿನ್ ವಾದ್ಯವನ್ನು ಜನಪ್ರೀಯಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ನಿಂಬರಗಿಯವರು ಧಾರವಾಡದ ಮಾಳಮಡ್ಡಿ ನಿವಾಸಿಯಾಗಿದ್ದರು. ಇದೇ ಮಾಳಮಡ್ಡಿಯಲ್ಲಿ ಹೆಸರಾಂತ ಗಾಯಕ ಪದ್ಮಭೂಷಣ ಡಾ॥ ಬಸವರಾಜ ರಾಜಗುರು ಅವರಂಥ ಅನೇಕ ಸಂಗೀತಸಾಧಕರು ನೆಲೆನಿಂತಿದ್ದರು.

ಮೂಲತಃ ಜಮಖಂಡಿಯವರಾದ ನಿಂಬರಗಿ ಮನೆತನದ ಶ್ರೀ ವಿಷ್ಣುಪಂತ ನಿಂಬರಗಿಯವರು ಆ ಕಾಲದ ಹೆಸರಾಂತ ರುದ್ರವೀಣಾವಾದಕರಾಗಿ ಜಮಖಂಡಿ ಸಂಸ್ಥಾನದ ಆಸ್ಥಾನ ಕಲಾವಿದರಾಗಿದ್ದರು. ಇವರು ಜಿ.ಆರ್. ನಿಂಬರಗಿಯವರ ಅಜ್ಜಂದಿರು. ಹೀಗೆ ಮೂಲತಃ ಸಂಗೀತ ಪರಂಪರೆಯ ಮನೆತನದಿಂದ ಬಂದ ಜಿ.ಆರ್. ನಿಂಬರಗಿ ಅವರಿಗೆ ತಂದೆ ಬಹಳ ಪ್ರೋತ್ಸಾಹ ನೀಡಿದ್ದರು. ಇವರದು ಗ್ವಾಲಿಯರ್ ಘರಾಣಾ ಪದ್ಧತಿ. ಶ್ರೀ ಗಜಾನನ ರಾಮಚಂದ್ರರಾವ್ ನಿಂಬರಗಿಯವರು ತಮ್ಮ ಸಂಗೀತಶಿಕ್ಷಣವನ್ನು ಸಹೋದರರಾದ ಪಂ. ಜಿ.ಆರ್. ನಿಂಬರಗಿಯವರಲ್ಲಿ ಮುಂದುವರೆಸಿದರು. ಅನಂತರ ಉಸ್ತಾದ ವಿಲಾಯತ್‌ಖಾನ್ ಪಂ. ಹನುಮಂತರಾವ್ ವಾಳ್ವೇಕರ, ನಿಸ್ಸಾರ ಹುಸೇನ, ವಿ.ಎ. ಕಾಗಲಕರ, ಅಜಮತ್ ಹುಸೇನ, ರಾಮಕೃಷ್ಣಬುವಾ ವಝೆ ಇವರಂಥ ಸಂಗೀತ ದಿಗ್ಗಜರಲ್ಲಿ ಶಿಕ್ಷಣ ಪಡೆದರು. ವಿಶ್ವ-ವಿಖ್ಯಾತ ಗಾಯಕರೂ ಹಾಗೂ ವ್ಹಾಯಲಿನ್ ವಾದಕರೂ ಆಗಿದ್ದ ಪಂಡಿತ ಗಜಾನನರಾವ್ ಜೋಶಿಯವರಲ್ಲಿ ಉನ್ನತ ಶಿಕ್ಷಣವನ್ನು ಪಡೆದ ಜಿ.ಆರ್. ನಿಂಬರಗಿ ಸಂಗೀತಕ್ಷೇತ್ರದಲ್ಲಿ ಉನ್ನತ

ಸಾಧನೆಗೈದರು. ಬಹುಶ್ರುತ ವಿದ್ವಾನ್ ಜಿ.ಆರ್. ನಿಂಬರಗಿಯವರು ೧೯೪೭ ರಲ್ಲಿ ಮುಂಬೈ ಆಕಾಶವಾಣಿ ಕೇಂದ್ರದಲ್ಲಿ ನಿಲಯ ಕಲಾವಿದರಾಗಿ ಸೇವೆ ಆರಂಭಿಸಿ, ಅನಂತರ ಧಾರವಾಡ ಆಕಾಶವಾಣಿ ಕೇಂದ್ರಕ್ಕೆ ವರ್ಗಾವಣೆಯಾಗಿ ಬಂದರು. ಅದೇ ವರ್ಷ ಅಂದರೆ ೧೯೫೦ ರಲ್ಲಿ ಆರಂಭವಾದ ಧಾರವಾಡ ಆಕಾಶವಾಣಿಯಲ್ಲಿ ೩೦ ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ೧೯೮೭ ರಲ್ಲಿ ನಿವೃತ್ತರಾದರು. ಪಂಡಿತ ಜಿ.ಆರ್. ನಿಂಬರಗಿಯವರು ಕೇವಲ ಶ್ರೇಷ್ಠ ವ್ಹಾಯಲಿನ್ ವಾದಕರಷ್ಟೇ ಅಲ್ಲದೇ, ಉತ್ತಮ ಗಾಯಕರು, ತಬಲಾವಾದಕರು, ವಾದ್ಯವೃಂದ ಸಂಯೋಜಕರು, ಅತ್ಯುತ್ತಮ ಶಿಕ್ಷಕರೂ, ಸಂಗೀತ ಶಾಸ್ತ್ರಜ್ಞರೂ ಆಗಿದ್ದರು. ಅವರು ಗಾಯಕಿ ಅಂಗ ಹಾಗೂ ತಂತ್ರಕಾರಿ ಅಂಗ್ ಎರಡೂ ಶೈಲಿಯಲ್ಲಿ ವಿದ್ವತ್‌ಪೂರ್ಣವಾಗಿ ವ್ಹಾಯಲಿನ್ ನುಡಿಸುತ್ತಿದ್ದರು. ಗ್ವಾಲಿಯರ್ ಘರಾಣೆಯಲ್ಲದೇ ಆಗ್ರಾ ಹಾಗೂ ಜೈಪುರ ಘರಾಣೆಗಳ ಬಗ್ಗೆ ಆಳವಾದ ಅಧ್ಯಯನ ಅವರಿಗಿತ್ತು. ಒಬ್ಬ ಸಮರ್ಥ ಸೋಲೋ ವ್ಹಾಯಲಿನ್ ವಾದಕರಲ್ಲದೇ ನಿಂಬರಗಿ ಒಬ್ಬ ಉತ್ತಮ ಸಾಥೀದಾರರೂ ಆಗಿದ್ದರು ಎಂಬುದು ವಿಶೇಷ.

ಶಿವರಾಮಬುವಾ, ಕಾಗಲಕರಬುವಾ, ಅಜಮತ್ ಹುಸೇನ, ಸರಸ್ವತಿ ರಾಣಿ, ಅನಂತ ಮನೋಹರ ಜೋಶಿ, ಲತಾಫಿತ್ ಹುಸೇನ, ರೋಶನ್ ಅಲಿ, ಪಂ. ಮನ್ಸೂರ, ಡಾ॥ ರಾಜಗುರು, ಡಾ॥ ಗಂಗೂಬಾಯಿ ಹಾನಗಲ್ ಅವರಂಥ ಗಾಯಕರಿಗೂ ವ್ಹಾಯಲಿನ್ ಸಾಥ ನೀಡಿದ ಅವರು ತಬಲಾಮಾಂತ್ರಿಕ ಉಸ್ತಾದ ಅಹಮದ್ ಜಾನ್‌ತಿರಕ್ವಾ ಅವರಿಗೆ ಲೆಹರಾ ನೀಡಿದ ಹೆಗ್ಗಳಿಕೆ ಪಂ. ಜಿ.ಆರ್. ನಿಂಬರಗಿಯವರದು. ಅದೂ ಅಲ್ಲದೆ ವಿದ್ವಾನ್ ಕೆ.ವಿ.ರಾಜ ಅಯ್ಯಂಗಾರ್ ಅವರಲ್ಲಿ ಕರ್ನಾಟಕೀ ಶಾಸ್ತ್ರೀಯ ಸಂಗೀತವನ್ನು ಅಧ್ಯಯನ ಮಾಡಿದ್ದರು. ಬೆಳಗಿನ ನಾಲ್ಕು ಗಂಟೆಯಿಂದ ರಾತ್ರಿ ೧೧ ಗಂಟೆಯವರೆಗೂ ಅವರ ಸಂಗೀತ ಸಾಧನೆ ನಡೆದೇ ಇರುತ್ತಿತ್ತು. ಸಂಗೀತವೇ ಅವರಿಗೆ ಜೀವನವಾಗಿತ್ತು.

ಧಾರವಾಡ ಆಕಾಶವಾಣಿಯ ಮೂಲಕ ದಿನಂಪ್ರತಿ ಬೆಳಿಗ್ಗೆ ಸಂಗೀತ ಪರಿಚಯಾತ್ಮಕ ಕಾರ್ಯಕ್ರಮ "ಬಾನುಲಿ ಸಂಗೀತ ಪಾಠ" ಪ್ರಸಾರವಾಗುತ್ತಿತ್ತು. ಈ ಕಾರ್ಯಕ್ರಮ ನಿರ್ಮಾಣದ ಹೆಚ್ಚಿನ ಜವಾಬ್ದಾರಿಯನ್ನು ಜಿ.ಆರ್. ನಿಂಬರಗಿಯವರಿಗೇ ನೀಡಲಾಗಿತ್ತು.

ಆಕಾಶವಾಣಿಯ ಇನ್ನೊಂದು ಜನಪ್ರೀಯ ಸರಣಿ ಕಾರ್ಯಕ್ರಮ "ಆರ್ಕೆಸ್ಟ್ರಾ" ಅಂದರೆ ಹಲವು ವಾದ್ಯಗಳನ್ನು ಒಳಗೊಂಡ 'ವಾದ್ಯವೃಂದ' ಕಾರ್ಯಕ್ರಮ ಸಂಯೋಜನೆಯನ್ನು ನಿಂಬರಗಿ ೧೦೦ ಕ್ಕೂ ಹೆಚ್ಚು ಕಂತುಗಳಲ್ಲಿ ಪ್ರಸಾರ ಮಾಡಿದ್ದಾರೆ.

ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಬೇಕಾಗುವ ಸ್ವರಲಿಪಿಗಳಾದ ಭಾತಖಂಡೆ ಹಾಗೂ ಪಲುಸ್ಕರ ಪದ್ಧತಿಗಳನ್ನು (Notation System) ಎಲ್ಲ ಕಲಾವಿದರಿಗೆ ಅರ್ಥವಾಗುವಂತೆ ಹೇಳಿಕೊಡುತ್ತಿದ್ದರು. ಹೆಸರಾಂತ ಸಾಹಿತಿ, ಹಿರಿಯ ಪ್ರಸಾರಕ ಎನ್.ಕೆ. ಅವರು ರಚಿಸುತ್ತಿದ್ದ ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮ "ಗಾಂಧೀಗೀತ" ಕಾರ್ಯಕ್ರಮದ ಸಂಯೋಜನೆಯನ್ನು ಬಹಳ ಯಶಸ್ವಿಯಾಗಿ

ಮಾಡುತ್ತಿದ್ದ ಪಂ. ಜಿ.ಆರ್. ನಿಂಬರಗಿಯವರು ಗೃಹಲಕ್ಷ್ಮಿ, ಮಹಿಳಾರಂಗ, ಗಿಳಿವಿಂಡು, ಕೃಷಿರಂಗ ಮೊದಲಾದ ಕಾರ್ಯಕ್ರಮಗಳ "Signiture Tune" ಗಳಲ್ಲಿಯೂ ವ್ಹಾಯಲಿನ್ ನುಡಿಸಿದ್ದಾರೆ.

ಒಮ್ಮೆ ಧಾರವಾಡ ಆಕಾಶವಾಣಿಯು ಧಾರವಾಡದ ಟ್ಯಾಗೋರ್ ಹಾಲ್‌ನಲ್ಲಿ ಪ್ರಸಿದ್ಧ ವ್ಹಾಯಲಿನ್ ವಾದಕ ಪಂ. ಗಜಾನನರಾವ್ ಜೋಶಿಯವರ ಕಾರ್ಯಕ್ರಮವನ್ನು ಆಮಂತ್ರಿತ ಶ್ರೋತೃಗಳ ಸಮ್ಮುಖದಲ್ಲಿ ಆಯೋಜಿಸಿತ್ತು. ಆದರೆ ಅನಿರೀಕ್ಷಿತವಾಗಿ ಪಂ. ಜೋಶಿಯವರು ಬರಲಿಲ್ಲ. ಆಗ ವೇದಿಕೆ ಏರಿದ ಶ್ರೀ ಜಿ.ಆರ್. ನಿಂಬರಗಿ ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮ ನೀಡಿ ಆಕಾಶವಾಣಿಯ ಆಪತ್‌ಬಾಂಧವ ಎಂದೆನಿಸಿದರು.

ಪಂಡಿತ. ಜಿ.ಆರ್. ನಿಂಬರಗಿಯವರು ನೀಡಿದ ಇನ್ನೊಂದು ಅತ್ಯಂತ ಮಹತ್ವದ ಕಾರ್ಯಕ್ರಮವೆಂದರೆ "ಸಮಾನರಾಗದರ್ಶನ" ಇಲ್ಲಿ ಹಿಂದುಸ್ತಾನಿ ಹಾಗೂ ಕರ್ನಾಟಕೀ ಪದ್ಧತಿಯ ಅಂದಾಜು ೪೩ ಸಮಾನರಾಗಗಳನ್ನು ಕುರಿತು ಮಾಹಿತಿಪೂರ್ಣ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಇದರೊಂದಿಗೆ ಆಕಾಶವಾಣಿ ಕೇಂದ್ರಕ್ಕೆ ಬರುವ ರಾಷ್ಟ್ರ ಮಟ್ಟದ ಅನೇಕ ಗಾಯಕವಾದಕರಿಗೆ ಅವರು ಸಾಥ್ ನೀಡಿದ್ದಾರೆ. ಆಕಾಶವಾಣಿಗೆ ಪಂ. ಜಿ.ಆರ್. ನಿಂಬರಗಿಯವರು ನೀಡಿದ ಕೊಡುಗೆ ಅತ್ಯಮೂಲ್ಯವಾದುದು ಎನ್ನುವುದರಲ್ಲಿ ಎರಡು ಮಾತಿಲ್ಲ. ದೇಶದ ಹಲವು ಆಕಾಶವಾಣಿ ಕೇಂದ್ರಗಳ ಮೂಲಕ ಅವರ ವ್ಹಾಯಲಿನ್ ವಾದನ ಕಾರ್ಯಕ್ರಮ ಪ್ರಸಾರವಾಗಿವೆ. ಅದೂ ಅಲ್ಲದೇ ನಾಡಿನ ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ವ್ಹಾಯಲಿನ್ ಮೋಡಿ ಮಾಡಿದ್ದಾರೆ.

ಒಂದರ್ಥದಲ್ಲಿ ಇಡೀ ನಿಂಬರಗಿಯವರ ಮನೆತನವೇ ಸಂಪೂರ್ಣವಾಗಿ ಸಂಗೀತಕ್ಕೆ ತನ್ನನ್ನು ಸಮರ್ಪಿಸಿಕೊಂಡಿದೆ. ಇದೀಗ ಆ ಪರಂಪರೆ ನಾಲ್ಕನೆಯ ತಲೆಮಾರಿಗೂ ಮುಂದುವರೆಯುತ್ತಿರುವುದು ಅಭಿನಂದನಾರ್ಹ ಪಂಡಿತ. ಜಿ.ಆರ್. ನಿಂಬರಗಿಯವರ ಹಿರಿಯ ಪುತ್ರ ಪಂ. ವಾದಿರಾಜ ನಿಂಬರಗಿ ನಮ್ಮ ನಾಡು ಕಂಡ ಶ್ರೇಷ್ಠ ವ್ಹಾಯಲಿನ್ ವಾದಕ, ಸಂಗೀತ ಸಂಯೋಜಕ ಹಾಗೂ ಪಾಶ್ಚಾತ್ಯ ಸಂಗೀತದಲ್ಲಿಯೂ ಆಳವಾದ ಪರಿಚಯ ಹೊಂದಿದ್ದಾರೆ ಚಲನಚಿತ್ರ ಸಂಗೀತದಲ್ಲಿ ಅವರು ವಿಶ್ವಪ್ರಸಿದ್ಧ ಇಳೆಯರಾಜ ಅವರಿಂದ ಶಿಕ್ಷಣ ಪಡೆದಿದ್ದಾರೆ. ಜಿ.ಆರ್. ನಿಂಬರಗಿಯವರ ಇನ್ನೊಬ್ಬ ಪುತ್ರ ದಿ. ಮಾಧವ ನಿಂಬರಗಿ ಉತ್ತಮ ಸಂಗೀತ ಸಂಯೋಜಕರಾಗಿದ್ದರು. ಶ್ರೀ ವಾದಿರಾಜರ ಪುತ್ರ ಜಯಂತ ನಿಂಬರಗಿ ವ್ಹಾಯಲಿನ್ ಪರಂಪರೆಯನ್ನು ನಾಲ್ಕನೇ ತಲೆಮಾರಿಗೆ ಮುಂದುವರೆಸಿದ್ದಾರೆ.

ಪಂ. ಜಿ.ಆರ್. ನಿಂಬರಗಿಯವರದು ಅಪಾರ ಶಿಷ್ಯಬಳಗವಿದೆ. ಅವರ ಶಿಷ್ಯರಲ್ಲಿ ಪ್ರಮುಖರು: ಬಿ.ಆರ್. ಪಾಟೀಲ, ರಾಧಾ, ಅಚ್ಯುತ, ಮಾಣಿಕ್, ಮೇಧಖೇರ್, ರಾಮಚಂದ್ರ ಮುನವಳ್ಳಿ ಮುಂತಾದವರು ವ್ಹಾಯಲಿನ್ ವಾದನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ದಿ. ಜಿ.ಆರ್. ನಿಂಬರಗಿಯವರ ಅಪಾರವಾದ ಜ್ಞಾನ, ಅನುಭವ ಹಾಗೂ

ಕೊಡುಗೆಯನ್ನು ಪರಿಗಣಿಸಿ ರಾಜ್ಯ ಸರಕಾರ ೧೯೬೨ ರಲ್ಲಿ "ಕರ್ನಾಟಕ ಕಲಾತಿಲಕ" ಪ್ರಶಸ್ತಿಯನ್ನು, ಮುಂಬೈನ ಸಂಸ್ಥೆಯೊಂದು ೧೯೬೭ ರಲ್ಲಿ "ಅಭಿಜಾತ ಕಲಾವಿದ" ಎಂಬ ಬಿರುದು, ಹೈದರಾಬಾದ್‌ನಿಂದ "ಕಲಾನಿಧಿ" ಅಹಮ್ಮದಾಬಾದನಿಂದ "ವ್ಹಾಯಲಿನ್ ಪ್ರವೀಣ" ಪ್ರಶಸ್ತಿ ಪಡೆದಿರುವ ಪಂ. ಜಿ.ಆರ್. ನಿಂಬರಗಿಯವರಿಗೆ, ಕರ್ನಾಟಕ ಸರಕಾರ ೨೦೦೩ ರಲ್ಲಿ ರಾಜ್ಯದ ಪ್ರತಿಷ್ಠಿತ ರಾಷ್ಟ್ರಮಟ್ಟದ ಪ್ರಶಸ್ತಿ "ಟಿ. ಚೌಡಯ್ಯ ಪ್ರಶಸ್ತಿ" ನೀಡಿ ಗೌರವಿಸಿದೆ. ೧೯೧೯ ರಲ್ಲಿ ಜನಿಸಿ ೯೦ ವರ್ಷಗಳ ಸಫಲ ಜೀವನ ನಡೆಸಿದ ವ್ಹಾಯಲಿನ್ ಪ್ರವೀಣ ಪಂ. ಜಿ.ಆರ್. ನಿಂಬರಗಿಯವರು ೨೦೦೮ ರಲ್ಲಿ ಸಂಗೀತ ಸರಸ್ವತಿಯ ಪಾದ ಸೇರಿದರು. ಅವರ ಕೊಡುಗೆ ಅನನ್ಯ–ಅಪಾರ–ಅವಿಸ್ಮರಣೀಯ.

■ ■ ■



ಪಂ. ಬಸವರಾಜ ಬೆಂಡಿಗೇರಿ

# ಲಯಬ್ರಹ್ಮ
# ಪಂ. ಬಸವರಾಜ ಬೆಂಡಿಗೇರಿ
# (೧೯೨೮-೧೯೯೬)

● ಡಾ. ರವಿಕಿರಣ ನಾಕೋಡ

ಕಲಾಪ್ರಪಂಚದಲ್ಲಿ ಗೀತ, ವಾದ್ಯ, ನೃತ್ಯ ಈ ಮೂರು ವಿಷಯಗಳು ಪ್ರಾಮುಖ್ಯ ಹೊಂದಿವೆ. ಈ ಮೂರು ಕಲೆಗಳಿಗೆ ಅವಶ್ಯಕವಾದದ್ದು ತಾಳ ಅಥವಾ ಲಯ. ಲಯವೆಂಬುದು ವಿಶ್ವವ್ಯಾಪಿಯಾಗಿದೆ. ಗ್ರಹ-ನಕ್ಷತ್ರಗಳ ಪರಿಭ್ರಮಣದಲ್ಲೂ ಲಯವಿದೆ. ಜೀವಿಗಳ ಹೃದಯಸ್ಪಂದನದಲ್ಲಿಯೂ ಲಯವಿದೆ. ಹಾಗೆಯೇ ಗಾಯನಕಾರರಿಗೂ ಮತ್ತು ಸಂಗೀತ ವಾದ್ಯಕಲಾವಿದರಿಗೆ ಲಯವು ಮಹತ್ವದ್ದಾಗಿದ್ದು ಇಂತಹ ಲಯದ ಸಾಥ್ ನೀಡುವ ಹಾಗೂ ಸ್ವತಂತ್ರವಾದನ ನುಡಿಸುವ ವಾದ್ಯವೆಂದರೆ ತಬಲಾ. ಹೀಗಾಗಿ ತಬಲಾವಾದ್ಯಕ್ಕೆ ಹಿಂದುಸ್ತಾನಿ ಸಂಗೀತಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವಿದೆ. ತಬಲಾವಾದನದಲ್ಲಿ ಆರು ಘರಾಣೆಗಳಿದ್ದು, ಅವು ಈ ರೀತಿಯಾಗಿವೆ: ದಿಲ್ಲಿ, ಅಜರಡಾ, ಪೂರಬ, ಫರೂಖಾಬಾದ, ಪಂಜಾಬ, ಬನಾರಸ್. ಈ ಎಲ್ಲ ಘರಾಣೆಗಳ ಶೈಲಿಯನ್ನು ಪಂಡಿತ ಬಸವರಾಜ ಬೆಂಡಿಗೇರಿಯವರು ಹಸ್ತಗತ ಮಾಡಿಕೊಂಡಿದ್ದರಲ್ಲದೇ ಪೂರಬ, ದಿಲ್ಲಿ, ಅಜರಡಾ ಘರಾಣೆಯಲ್ಲಿ ಹೆಚ್ಚಿನ ಪ್ರಾವೀಣ್ಯ ಹೊಂದಿದವರಾಗಿದ್ದರು. ಇಂತಹ ಮಹಾ ತಬಲಾ ಕಲಾವಿದರಾದ ಪಂ. ಬಸವರಾಜ ಬೆಂಡಿಗೇರಿಯವರು ಹುಟ್ಟಿದ್ದು ೨೨-೦೯-೧೯೨೮ರಂದು ಬೆಳಗಾವಿ ಸಮೀಪದ ಖಾಸಬಾಗ ಎಂಬಲ್ಲಿ. ತಂದೆ ಶ್ರೀ. ಶಂಕ್ರಪ್ಪ, ಅಲ್ಪ ಸ್ವಲ್ಪ ತಬಲಾ ಬಲ್ಲವರಾಗಿದ್ದರು. ಹೀಗಾಗಿ ಅಲ್ಲಲ್ಲಿ ಊರಲ್ಲಿ ಕೀರ್ತನೆ, ಭಜನೆಗಳಿಗೆ ತಬಲಾವನ್ನು ನುಡಿಸುತ್ತಿದ್ದರು. ತಾಯಿ ಗಂಗಮ್ಮ ಸದ್‌ಗೃಹಿಣಿಯಾಗಿದ್ದರು.

ಪಂ. ಬಸವರಾಜ ಬೆಂಡಿಗೇರಿಯವರು ಹುಟ್ಟಿದ್ದು ಅಥಣಿ ಶಿವಯೋಗಿಗಳ ಆಶೀರ್ವಾದದಿಂದ. ಹೇಗೆಂದರೆ ಬಸವರಾಜರ ತಂದೆ ಶಂಕ್ರಪ್ಪ ಹಾಗೂ ತಾಯಿ ಗಂಗಮ್ಮ ಈ ದಂಪತಿಗಳಿಗೆ ಮದುವೆಯ ನಂತರ ಬಹಳ ಕಾಲ ಸಂತಾನಫಲ ಸಿಗದಿದ್ದರಿಂದ ಮನಃಶಾಂತಿ ಕಳೆದುಕೊಂಡು ಕೊರಗುತ್ತಿದ್ದರು. ಇವರ ಈ ಗೋಳಾಟವನ್ನು ದಿನಾ ನೋಡುತ್ತಿದ್ದ ಒಬ್ಬ ಹಿರಿಯರು 'ತಾಯಿ, ನೀವು ಅಥಣಿ ಶಿವಯೋಗಿಗಳ ಹತ್ತಿರ ಹೋಗಿರಿ, ಅವರು ಮಹಾ ತಪಸ್ವಿಗಳು, ತ್ರಿಕಾಲಜ್ಞಾನವನ್ನು ಹೊಂದಿದವರು. ಅಂತಹ ಒಬ್ಬ ತಪಸ್ವಿಗಳ ಆಶೀರ್ವಾದದಿಂದ ನಿಮ್ಮ ಈ ಗೋಳು ದೂರವಾಗಬಲ್ಲದು' ಎಂದು ಗಂಗಮ್ಮನಿಗೆ ಹಾಗೂ ಶಂಕ್ರಪ್ಪರಿಗೆ ಹೇಳಿ ಸಮಾಧಾನ ಮಾಡಿದರು. ಊರ ಹಿರಿಯರ ಮಾತನ್ನು ಕೇಳಿ ಶಂಕ್ರಪ್ಪ ಹಾಗೂ ಗಂಗಮ್ಮನವರು ಅಥಣಿ ಶಿವಯೋಗಿಗಳ ದರ್ಶನಕ್ಕಾಗಿ ಹೊರಟರು. ಯೋಗಿಗಳ ದರ್ಶನವಾಯಿತು. ಆಗ ತಮ್ಮ ಅಳಲನ್ನು ಅಥಣಿ ಶಿವಯೋಗಿಗಳಲ್ಲಿ ತೊಡಿಕೊಂಡರು. ಶಿವಯೋಗಿಗಳು

"ಮಕ್ಕಳಾಗತಾವ, ತಗೋ ಈ ಉತ್ತತ್ತಿಗಳನ್ನು" ಎಂದು ಆಶೀರ್ವಾದ ಮಾಡಿದರು. ಜೋಡಿ ಉತ್ತತ್ತಿಗಳಲ್ಲಿ ಒಂದು ಕೆಟ್ಟಿತ್ತು. ಅದನ್ನು ಕಂಡು ಶಿವಯೋಗಿಗಳು "ಏನವ್ವಾ ಹೀಗಾತಲ್ಲ" ಎಂದು ಮರುಗಿದರು. ಅದಕ್ಕೆ ಗಂಗಮ್ಮ ಉತ್ತತ್ತಿ ತೆಗೆದುಕೊಂಡು "ನಮ್ಮ ನಸೀಬದಾಗ ಇದ್ದದ್ದು ಆಗತೈತಿ ಬಿಡ್ರಿ" ಎಂದು ಸುಮ್ಮನಾದಳು. ಆಗ ಶಿವಯೋಗಿಗಳು ಮತ್ತೆ ಹೀಗೆ ಹೇಳಿದರು: "ಆದರೆ ಎರಡನೆಯದು ದೇಶಾ ಮೆರಿತೈತಿ" ಎಂದು ಇಬ್ಬರೂ ದಂಪತಿಗಳನ್ನು ಸಂತೈಸಿದರು. ಕೊನೆಗೆ ಇಬ್ಬರೂ ದಂಪತಿಗಳು ಒಬ್ಬರಿಗೊಬ್ಬರು ಸಮಾಧಾನವನ್ನು ಮಾಡುತ್ತ ಮನೆಗೆ ತೆರಳಿದರು. ಕೊನೆಗೆ ಕಾಲ ಗತಿಸಿದಂತೆ ಗಂಗಮ್ಮನವರು ಗರ್ಭಿಣಿಯಾದರು.

ಅಥಣಿ ಶಿವಯೋಗಿಗಳು ಕೊಟ್ಟ ಉತ್ತತ್ತಿಗಳಲ್ಲಿ ಒಂದು ಕೆಟ್ಟಿದ್ದರಿಂದ ಮೊದಲನೆಯ ಕೂಸಿಗೆ ಕಣ್ಣು, ಕಾಲು ಇರಲಿಲ್ಲ. ಆ ಮಗುವು ಮೂರು ತಿಂಗಳು ಬದುಕಿ ತೀರಿಕೊಂಡಿತು. ಅದಾದ ನಂತರ ಬಸವರಾಜರು ಜನಿಸಿದರು. ಆದರೆ ಈ ಮಗುವಿಗೂ ಕೂಡಾ ಕಾಲುಗಳು ಅಶಕ್ತವಾಗಿದ್ದಲ್ಲದೇ ದೃಷ್ಟಿಮಾಂದ್ಯವು ಕಂಡು ಬಂದಿತು. ತಂದೆ ತಾಯಿಗಳಿಗೆ ಇದೊಂದು ದೊಡ್ಡ ಚಿಂತೆಯಾಯಿತು. ಹೀಗೆಯೆ ಮೂರು ತಿಂಗಳು ಗತಿಸಿದಂತೆ ಒಮ್ಮೆ ಗಂಗಮ್ಮನವರು ಕೂಸು ಬಸವರಾಜರೊಡನೆ ಬಾಗಿಲಲ್ಲಿ ಕುಳಿತಾಗ ಕೂಸನ್ನು ನೋಡಿ, ಒಬ್ಬ ಸಾಧು "ಅಲೆಲೆ ಕೂಸ, ಇದು ಒಳ್ಳೆಯದಾಗತೈತಿ ಹೋಗು ಎಂದು ನುಡಿದು ಹೋಗಿಬಿಟ್ಟನು. ತಂದೆ-ತಾಯಿಗಳು ಆ ಸಾಧುವಿನ ಮಾತು ಕೇಳಿ ಬಹಳ ಸಂತೋಷಗೊಂಡರು. ಬಸವರಾಜರಿಗೆ ಕಾಲ ಗತಿಸಿದಂತೆ ಅಥಣಿ ಶಿವಯೋಗಿಗಳ ಆಶೀರ್ವಾದದಿಂದ ಕಾಲು ಸರಿಹೊಂದಿದವು. ಆದರೆ ದೃಷ್ಟಿಮಾಂದ್ಯ ಹಾಗೆಯೇ ಇತ್ತು. ಈ ಕೊರತೆ ಇದ್ದರೂ ಸಹ ಇವರ ಬುದ್ಧಿಯು ಬಹಳ ಚುರುಕಾಗಿತ್ತು. ಹಾಗೂ ಇವರ ಕೈಬೆರಳುಗಳು ಗಂಟಿನಂತಿದ್ದು ತಬಲಾದ ಸಲುವಾಗಿಯೇ ಮಾಡಿಸಿದ ಹಾಗೆ ಇದ್ದವು. ಪಂಡಿತ ಬಸವರಾಜ ಬೆಂಡಿಗೇರಿಯವರ ಬಾಲ್ಯದಲ್ಲಿ ದೃಷ್ಟಿಮಾಂದ್ಯದ ಕಾರಣ ಇವರ ತಂದೆ-ತಾಯಿಗಳಿಗೆ ಶಾಲೆಗೆ ಕಳಿಸಲು ತೊಂದರೆಯಾಗತೊಡಗಿತು. ಹೀಗೆ "ಶಾಲಾಭ್ಯಾಸದಿಂದ ವಂಚಿತನಾದ ಮಗ ಸಂಗೀತವನ್ನಾದರೂ ಕಲಿಯಲಿ ಎಂಬುದು ತಾಯಿಯ ಆಸೆ. ಆದರೆ ಮಗ ಕಲಿತು ವಿದ್ಯಾವಂತನಾಗಬೇಕೆಂಬುದು ತಂದೆಯ ಇಚ್ಛೆ" ಆದರೆ ಬಯಸುವದೊಂದು ಆಗುವದೊಂದು ಎಂಬಂತೆ ತಂದೆಯವರಾದ ಶಂಕ್ರಪ್ಪನವರಿಗೆ ಬಸವರಾಜರನ್ನು ಶಾಲೆಗೆ ಕಳಿಸಲಾಗಲಿಲ್ಲ. ಆದ್ದರಿಂದ ತಮಗೆ ತಿಳಿದ ಕೆಲವು ತಬಲಾ ಠೇಕಾಗಳನ್ನು ಮಗನಾದ ಬಸವರಾಜರಿಗೆ ಹೇಳಿಕೊಟ್ಟರು. ಬಸವರಾಜರು ಒಂಬತ್ತನೆಯ ವಯಸ್ಸಿನಿಂದಲೇ ತಬಲಾ ಕಲಿಯಲಾರಂಭಿಸಿದರು. ತಂದೆಯವರು ಹೇಳಿಕೊಟ್ಟ ಠೇಕಾಗಳನ್ನು ಶ್ರದ್ಧಾ-ಭಕ್ತಿಯಿಂದ ಕಲಿತು ಕೀರ್ತನೆ, ಭಜನೆ, ಸುಗಮ ಸಂಗೀತಗಳಿಗೆ ತಬಲಾಸಾಥ್ ಮಾಡತೊಡಗಿದರು. ಹೀಗಿರುವಾಗ ಒಮ್ಮೆ ಹರಿಸರ್ವೋತ್ತಮಾಚಾರ್ಯರ ಕೀರ್ತನ ಕಾರ್ಯಕ್ರಮ ಬೆಳಗಾವಿಯಲ್ಲಿ ನಿಗದಿತವಾಗಿತ್ತು. ಆಗ ಆ ಕೀರ್ತನ ಕಾರ್ಯಕ್ರಮಕ್ಕೆ ತಂದೆ ಶಂಕ್ರಪ್ಪ ಹಾಗೂ ಬಸವರಾಜರು ಹೋಗುವ ಸುಸಂಧಿ ಒದಗಿತು. ಅಲ್ಲಿ ಹರಿಸರ್ವೋತ್ತಮಾಚಾರ್ಯರು ಬಾಲಕ ಬಸವರಾಜರ ತಬಲಾ ನುಡಿಸುವ ಶೈಲಿಯನ್ನು ನೋಡಿ ಬಹಳ ಸಂತೋಷಪಟ್ಟರು. "ಈ ಬಾಲಕನು ತಬಲಾ ನುಡಿಸಿದ ಶೈಲಿಯು ಬಹಳ

ಉತ್ತಮವಾಗಿದ್ದು ಈತನನ್ನು ದೊಡ್ಡ ತಬಲಾ ಪಂಡಿತರಲ್ಲಿ ಹೆಚ್ಚಿನ ಅಭ್ಯಾಸಕ್ಕಾಗಿ ಕಳಿಸಿ ಕೊಡ್ರಿ" ಎಂದು ಸಲಹೆ ಮಾಡಿದರು. ಹೀಗೆಯೇ ಮುಂದೆ ಒಂದು ಸಲ ನಾಗನೂರ ರುದ್ರಾಕ್ಷಿ ಮಠಕ್ಕೆ ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಬಂದಿದ್ದರು. ಅಲ್ಲಿ ಶಂಕ್ರಪ್ಪನವರು ಮಗನನ್ನು ಕರೆದುಕೊಂಡು ಹೋಗಿ ಪಂಚಾಕ್ಷರಿ ಗವಾಯಿಗಳಿಗೆ "ಮಗಾ ತಬಲಾ ಬಾರಿಸ್ತಾನ, ಆಶೀರ್ವದಿಸಬೇಕು" ಎಂದು ಬೇಡಿಕೊಂಡರು. ಪಂಡಿತ ಪಂಚಾಕ್ಷರಿ ಗವಾಯಿಗಳು ಮಹಾ ಶಿವಯೋಗಿಗಳು ಹಾಗೂ ಮಹಾ ಸಂಗೀತ ತಪಸ್ವಿಗಳು. ಎಲ್ಲ ಸಂಗೀತವಾದ್ಯಗಳನ್ನು ನುಡಿಸುವಲ್ಲಿ ಪಾಂಡಿತ್ಯವನ್ನು ಹೊಂದಿದವರಾಗಿದ್ದರು.

ಪಂಚಾಕ್ಷರಿ ಗವಾಯಿಗಳು ಬಸವರಾಜರಿಗೆ "ಮಗು, ಬಾರಿಸು, ಕೇಳೋಣ" ಅಂದರು. ಆಗ ಬಸವರಾಜರು ಸ್ವಲ್ಪ ತಬಲಾ ನುಡಿಸಿದರು. ಅದನ್ನು ಕೇಳಿ" ಕೈ ಛಲೋ ಅವ. ಒಳ್ಳೆಯ ಗುರುಗಳಲ್ಲಿ ಶಿಕ್ಷಣ ಕೊಡಿಸು, ಒಳ್ಳೆಯ ಕಲಾವಿದ ಆಗತಾನ" ಎಂದು ಗವಾಯಿಗಳು ಆಶೀರ್ವಾದ ಮಾಡಿದರು. ಇಂತಹ ಇಬ್ಬರು ತಪಸ್ವಿಗಳ ಹಾಗೂ ಕೀರ್ತನಕಾರರ ಆಶೀರ್ವಾದದ ಫಲಸ್ವರೂಪವಾಗಿ ಬಸವರಾಜರ ಸುದೈವ ಎಂಬಂತೆ ತಬಲಾ ವಿದ್ವಾಂಸರಾಗಿದ್ದ ಉಸ್ತಾದ ಮೆಹಬೂಬಖಾನ್ ಸಾಹೇಬ ಮಿರಜಕರ ಅವರು ಬೆಳಗಾವಿಯಲ್ಲಿಯೇ ಇದ್ದರು. ೧೯೩೮ರಲ್ಲಿ ಹತ್ತು ವರ್ಷದ ಬಾಲಕರಾಗಿದ್ದ ಬಸವರಾಜರನ್ನು ತಂದೆ ಶಂಕ್ರಪ್ಪನವರು ಉಸ್ತಾದ ಮೆಹಬೂಬಖಾನರ ಹತ್ತಿರ ಕರೆದುಕೊಂಡು ಹೋಗಿ, "ನನ್ನ ಮಗನಾದ ಈ ಬಾಲಕನಿಗೆ ನನಗೆ ತಿಳಿದ ಕೆಲವು ತಬಲಾ ಠೇಕಾಗಳನ್ನು ಹೇಳಿಕೊಟ್ಟಿದ್ದೇನೆ. ಹೆಚ್ಚಿನ ಶಿಕ್ಷಣ ತಮ್ಮಂತಹ ಮೇಧಾವಿಗಳಲ್ಲಿ ಆಗಲಿ ಎಂಬ ಆಶೆಯಿಂದ ಮಗನನ್ನು ತಮ್ಮಲ್ಲಿ ಕರೆದುಕೊಂಡು ಬಂದಿದ್ದೇನೆ. ಆದ್ದರಿಂದ ದಯವಿಟ್ಟು ಇವನಿಗೆ ತಾವು ತಬಲಾ ಕಲಿಸಬೇಕು" ಎಂದು ಮೆಹಬೂಬಖಾನರಲ್ಲಿ ಪ್ರಾರ್ಥಿಸಿಕೊಂಡರು. ಅತ್ಯಂತ ಸರಳ ಸ್ವಭಾವದವರಾದ ಉಸ್ತಾದ್ ಮೆಹಬೂಬ ಖಾನರು ಒಂದೇ ಮಾತಿಗೆ ಒಪ್ಪಿಕೊಂಡು ಬಸವರಾಜರನ್ನು ಶಿಷ್ಯರನ್ನಾಗಿ ಮಾಡಿಕೊಂಡರು. ಹೀಗೆ ಬಸವರಾಜ ಬೆಂಡಿಗೇರಿಯವರ ತಬಲಾಶಿಕ್ಷಣ ಪ್ರಾರಂಭವಾಯಿತು.

ಉಸ್ತಾದ ಮೆಹಬೂಬಖಾನ ಮಿರಜಕರ ಅವರು ಬಹಳ ಸರಳ ಸ್ವಭಾವದ ವ್ಯಕ್ತಿಯಾಗಿದ್ದರು. ಇವರು ಬಸವರಾಜರಿಗೆ ನಸುಕಿನ ನಾಲ್ಕು ಘಂಟೆಗೆ ಎಬ್ಬಿಸಿ ಪಾಠ ಆರಂಭಿಸುತ್ತಿದ್ದರು. ಐದು ಘಂಟೆಗೆ ಖಾನ್ ಸಾಹೇಬರು ನಮಾಜ್ ಮಾಡಲು ಹೋಗುತ್ತಿದ್ದರು. ಹೋಗುವಾಗ ಕೆಲವೊಂದು ಬೋಲುಗಳನ್ನು ಅಭ್ಯಾಸ ಮಾಡಲು ಹೇಳಿ ಹೋಗುತ್ತಿದ್ದರು. ಹಿಂತಿರುಗಿ ಬಂದ ಮೇಲೆ ಎಂಟು ಘಂಟೆಗೆ ಚಹಾ ಕೊಟ್ಟು ಮತ್ತೆ ಪಾಠ ಆರಂಭ. ಬಸವರಾಜರು ಏಕಪಾಠಿ, ಒಮ್ಮೆ ಹೇಳಿದ್ದು ಗಟ್ಟಿ, ಮತ್ತೊಮ್ಮೆ ಹೇಳಬೇಕಾಗಿರಲಿಲ್ಲ. ಅವು ಯಾವುದೇ ಕಾಯದಾ ಇರಲಿ, ರೇಲಾ ಇರಲಿ, ಬಸವರಾಜರು ಮೊದಲು ತಬಲಾಬೋಲುಗಳನ್ನು ಬಾಯಲ್ಲಿ ಅಂದು ಗಟ್ಟಿಮಾಡಿಕೊಂಡು ಕೊನೆಗೆ ತಬಲಾದ ಮೇಲೆ ನುಡಿಸುತ್ತಿದ್ದರು. ಅವರ ಜ್ಞಾಪಕಶಕ್ತಿಯು ದೈವದತ್ತವಾಗಿತ್ತು. ಗುರುಗಳು ಹೇಳಿಕೊಟ್ಟ ಎಲ್ಲಾ ಬೋಲುಗಳನ್ನು ಕಂಠಪಾಠ ಹೇಳುತ್ತಿದ್ದರು. ಹೀಗಾಗಿ ಗುರುಗಳು ಬಸವರಾಜರನ್ನು ಪ್ರೀತಿಯಿಂದ ಕಾಣುತ್ತಿದ್ದರು.

೧೯೩೯ರಲ್ಲಿ ಮೆಹಬೂಬಖಾನರು ಕೊಲ್ಹಾಪುರಕ್ಕೆ ಹೋದರು. ಆದರೆ ಬಡತನದಿಂದಾಗಿ ಬಸವರಾಜರಿಗೆ ಗುರುಗಳ ಕಡೆ ಹೋಗಲಾಗಲಿಲ್ಲ. ತಬಲಾ ಪಾಠ ನಿಂತು ಹೋಯಿತು. ಆದರೆ ವೇಳೆ ಹಾಳುಮಾಡದೆ ಬಸವರಾಜರು ಕಾಗಲಕರ ಬುವಾ ಅವರ ಹತ್ತಿರ ಗಾಯನ ಕಲಿತರು ಮತ್ತು ಪ್ರಸಿದ್ಧ ಹಾರ್ಮೋನಿಯಂ ವಾದಕರಾದ ವಿಠ್ಠಲರಾವ್ ಕೋರೆಗಾಂವಕರರ ಕಡೆ ತಬಲಾ ಸಾಥ್ ಮಾಡುತ್ತ ಸಾಥ್ ಸಂಗತ ಕಲಿತರು. ಮುಂದೆ ಗುರುಗಳಾದ ಮೆಹಬೂಬಖಾನರಿಗೆ ಶಿಷ್ಯರಾದ ಬಸವರಾಜರನ್ನು ಬಿಟ್ಟಿರಲಾಗಲಿಲ್ಲ. ಹೀಗಾಗಿ ಮೆಹಬೂಬಖಾನ ಸಾಹೇಬರು ಶಿಷ್ಯನನ್ನು ನೆನಸಿಕೊಂಡು ಬೆಳಗಾವಿಗೆ ಬಂದು ಬಿಟ್ಟರು. ಶಿಷ್ಯನನ್ನು "ಬಸವಣ್ಣಿ, ಬಸವಣ್ಣಿ" ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಮುಂದೆ ಖಾನ ಸಾಹೇಬರು ತಮ್ಮ ಮನೆಯಲ್ಲಿಯೇ ಬಸವರಾಜರನ್ನು ಇಟ್ಟುಕೊಂಡು ತಬಲಾ ವಿದ್ಯಾದಾನ ಮುಂದುವರೆಸಿದರು. ಹೀಗೆ ಅವರು ಗುರುಗಳ ಹತ್ತಿರ ಆರೇಳು ವರ್ಷ ಅಭ್ಯಾಸಮಾಡಲು, ಸತತ ಪರಿಶ್ರಮಪಟ್ಟರು. ಗುರುಗಳ ಹಾಗೆಯೇ ಬಸವರಾಜರು ತಾವು ಬೆಳೆಯಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿ ತಾವೂ ಸಹಿತ ಸಂಗೀತದ ಒಂದೊಂದೆ ತಬಲಾ ಘರಾಣೆಗಳನ್ನು ಆಳವಾಗಿ ಅಭ್ಯಸಿಸಿ, ಎಲ್ಲಾ ಘರಾಣೆಗಳ ಪರಿಚಯವನ್ನೂ ಮಾಡಿಕೊಂಡು, ಪೂರಬ, ಅಜರಡಾ, ದಿಲ್ಲಿ ಘರಾಣೆಗಳ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡಿ, ಈ ಘರಾಣೆಗಳ ನುರಿತ ತಬಲಾವಾದಕರೆನಿಸಿಕೊಂಡರು ಹಾಗೂ ಒಳ್ಳೆಯ ತಬಲಾ ಸಾಥನ್ನು ಮಾಡಲು ಕಲಿತರು.

ಒಮ್ಮೆ ಗುರುಗಳಾದ ಮೆಹಬೂಬಖಾನ ಸಾಹೇಬ್ ಮಿರಜಕರವರು ೧೯೩೯ರಲ್ಲಿ ಸ್ವರ್ಗೀಯ ಪಂ. ಸವಾಯಿ ಗಂಧರ್ವರ ಸಲಹೆಯ ಮೇರೆಗೆ ಕೇವಲ ೧೧ ವರ್ಷದ ತಮ್ಮ ಶಿಷ್ಯ ಬಸವರಾಜರನ್ನು ಸ್ವತಃ ಮುಂಬೈ ಆಕಾಶವಾಣಿ ಕೇಂದ್ರಕ್ಕೆ ಕರೆದುಕೊಂಡು ಹೋದರು. ಆಗ ಮುಂಬೈ ಆಕಾಶವಾಣಿಯಲ್ಲಿ ಬುಖಾರಿ ನಿರ್ದೇಶಕರಾಗಿದ್ದರು. ನಿಲಯದ ಕಲಾವಿದರು ಉಸ್ತಾದ ಶಮಶುದ್ದಿನ್‌ಖಾನ್ ಹಾಗೂ ಉಸ್ತಾದ ಅಲ್ಲಾರಖಾ ಇವರು ಬಸವರಾಜ ಬೆಂಡಿಗೇರಿಯವರನ್ನು ನೋಡಿ, 'ಇಂವಾ ತಬಲಾ ಸೋಲೊ ಬಾರಸ್ತಾನ' !? ಎಂದು ವ್ಯಂಗ್ಯವಾಡಿದರು. ಆಗ ಮೆಹಬೂಬಖಾನ ಸಾಹೇಬರು "ನನ್ನ ಶಿಷ್ಯ ಸೋಲೊ ಚೆನ್ನಾಗಿ ಬಾರಿಸದಿದ್ದರೆ, ನಾನು ತಬಲಾ ಬಾರಿಸುವದನ್ನೇ ಬಿಟ್ಟು ಬಿಡುವೆ" ಎಂದು ವಿಶ್ವಾಸಪೂರ್ಣವಾಗಿ ನುಡಿದರು. ಹತ್ತು ನಿಮಿಷದವರೆಗೆ ತಬಲಾ ಸೋಲೊ ನುಡಿಸಿದ ಬಸವರಾಜರು ಹೊರಗೆ ಬಂದಾಗ ಉಸ್ತಾದ ಶಮಶುದ್ದಿನ್‌ಖಾನ್ ಹಾಗೂ ಉಸ್ತಾದ ಅಲ್ಲಾರಖಾ "ವಾಹವಾ" ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

೧೯೪೫ರಲ್ಲಿ ಬಸವರಾಜ ಬೆಂಡಿಗೇರಿ ಅವರ ಸಂಗೀತಯಾತ್ರೆಗೆ ಮಹತ್ವದ ತಿರುವು ಬಂದಿತು. ಇವರು ಪಂ. ಬಿ.ಆರ್. ದೇವಧರ ಮುಂಬೈಯಲ್ಲಿ ನಡೆಸುತ್ತಿದ್ದ ಸ್ಕೂಲ್ ಆಫ್ ಇಂಡಿಯನ್ ಮ್ಯೂಜಿಕ್ ಇಲ್ಲಿ ತಬಲಾ ಶಿಕ್ಷಕರಾಗಿ ಸೇರಿದರು. ಪಂ. ಬಸವರಾಜ ಬೆಂಡಿಗೇರಿಯವರು ೧೯೫೩ರಲ್ಲಿ ಆಕಾಶವಾಣಿಯ ಎ. ಶ್ರೇಣಿಯ ಕಲಾವಿದರಾದರು. ಪಂಡಿತ ಬಸವರಾಜ ಬೆಂಡಿಗೇರಿಯವರು ತಬಲಾದಲ್ಲಿ ನುಡಿಸಿದ ಝುಪತಾಲ, ರೂಪಕ, ಏಕತಾಲ ಧಾರವಾಡ ಆಕಾಶವಾಣಿಯಲ್ಲಿ ಮುದ್ರಣಗೊಂಡಿವೆ. ಇವರು ಬೆಂಗಳೂರು, ಪುಣೆ, ಮುಂಬೈ, ನಾಗಪುರ, ದೆಹಲಿ, ಇಂದೋರ ಮುಂತಾದ

ಆಕಾಶವಾಣಿ ಕೇಂದ್ರಗಳಲ್ಲಿ ತಬಲಾ ಕಲಾಪ್ರದರ್ಶನ ನೀಡಿದ್ದಾರೆ. ಆಕಾಶವಾಣಿಯ ಸಂಗೀತ ಸಮ್ಮೇಳನಗಳಲ್ಲಿಯೂ ಕೂಡ ಭಾಗವಹಿಸಿದ್ದಾರೆ.

ಪಂಡಿತ ಬಸವರಾಜ ಬೆಂಡಿಗೇರಿಯವರು ಲಯದ ಬಗ್ಗೆ ಸೂಕ್ಷ್ಮ ಪ್ರಜ್ಞೆಯುಳ್ಳವರಾಗಿದ್ದರು. ಸಂಗೀತಗಾರರ ಆಯಾ ಘರಾಣೆಗಳ ಪ್ರಕಾರ ಬೆಂಡಿಗೇರಿಯವರು ಸಾಥನ್ನೂ ಕೊಡುತ್ತಿದ್ದರು. ಅಂದರೆ ಸಂಗೀತಗಾರರ ಅವಶ್ಯಕತೆಗನುಸಾರವಾಗಿ ಠೇಕಾ, ಇದಲ್ಲದೇ ಠುಮ್ರಿ, ಗಜಲ್, ಸುಗಮಸಂಗೀತ, ಭಕ್ತಿಸಂಗೀತ ಬೇಕಾದದ್ದಿರಲಿ, ಪಂಡಿತ ಬಸವರಾಜರು ಜನರ ಪ್ರಶಂಸೆಗೆ ಪಾತ್ರರಾಗುವಂತೆ ತಬಲಾ ಸಾಥ್ ನೀಡುತ್ತಿದ್ದರು. ಪಂಡಿತ ಬಸವರಾಜರ ಇನ್ನೊಂದು ಸಾಥ್ ಮಾಡುವ ವಿಶೇಷತೆ ಎಂದರೆ ಸಂಗೀತಗಾರರಿಗೆ ತಿಳಿಯುವ ಹಾಗೆ ಬೋಲುಗಳನ್ನು ನುಡಿಸಿ ಸಮ್ಮಿಗೆ ಬರುವ ಮುನ್ಸೂಚನೆಯ ಬಗೆಗೆ ಸಂಕೇತ ಕೊಡುತ್ತಿದ್ದರು. ಹಾಗೂ ಇವರಿಗೆ ಎಲ್ಲಾ ಸಂಗೀತದ ರಾಗ-ರಾಗಿಣಿಗಳ ಬಗೆಗೆ ಮತ್ತು ಚೀಜುಗಳ ಬಗೆಗೆ ಪೂರ್ಣಜ್ಞಾನವಿತ್ತು, ಇವರ ತಬಲಾ ಸಾಥ್ ಕೇಳಿದವರಿಗೆ ತಬಲಾ ಸಹಿತ ಹಾಡುತ್ತಿದೆಯೋ ಏನೋ ಎಂಬಂತೆ ಭಾಸವಾಗುತ್ತಿತ್ತು. ಒಂದು ಲಯವನ್ನು ಹಿಡಿದು ಸಂಗೀತ ಸಾಗಿದಾಗ ಅದರಲ್ಲಿಯ ಪ್ರತಿ ಮಾತ್ರೆಗೂ ಎಷ್ಟೊಂದು ಮಹತ್ವ ಮತ್ತು ಕಾಲ ನಿಯಮಿತತೆ ಇರುತ್ತದೆ ಎಂಬುದರ ಬಗೆಗೆ ಪಂಡಿತ ಬಸವರಾಜ ಬೆಂಡಿಗೇರಿಯವರ ತಬಲಾ ಬಾರಿಸುವ ಪದ್ಧತಿ ಸಾಕ್ಷ್ಯಾಧಾರವಾಗಿತ್ತು. ಇವರ ತಬಲಾವಾದನದಲ್ಲಿ ಲಯದ ಮೇಲೆ ಸಾಧಿಸಿದ ಹಿಡಿತ ಎಷ್ಟೊಂದು ಹಿರಿಮೆಯದಾಗಿತ್ತೆಂದರೆ "ಕರ್ನಾಟಕದ ತಿರಖ್ವಾ" ಎಂದೇ ಇವರನ್ನು ಸಂಬೋಧಿಸುತ್ತಿದ್ದರು. ಪಂಡಿತ ಬಸವರಾಜ ಬೆಂಡಿಗೇರಿಯವರು ಪಂ. ಓಂಕಾರನಾಥ ಠಾಕೂರ, ಕೇಸರಬಾಯಿ ಕೇಳಕರ, ಮೋಘುಬಾಯಿ ಕುರ್ಡಿಕರ, ಬಾಲಗಂಧರ್ವ, ಹೀರಾಬಾಯಿ ಬಡೋದೇಕರ, ಉಸ್ತಾದ ಫೈಯಾಜಖಾನ್, ಉಸ್ತಾದ ವಿಲಾಯತ ಹುಸೇನಖಾನ್, ಮಲ್ಲಿಕಾರ್ಜುನ ಮನ್ಸೂರ, ಉಸ್ತಾದ ಬಡೇ ಗುಲಾಮಲಿಖಾನ್, ಪಂ. ಭೀಮಸೇನ ಜೋಶಿ, ಪಂ. ಗಜಾನನರಾವ ಜೋಶಿ, ಪಂ. ಕುಮಾರ ಗಂಧರ್ವ, ಪಂ. ರವಿಶಂಕರ, ವಿದುಷಿ ಕಿಶೋರಿ ಅಮೋಣಕರ, ಉಸ್ತಾದ ಅಲಿ ಅಕಬರಖಾನ್, ಹೀಗೆ ಮುಂತಾದ ಪ್ರಖ್ಯಾತ ಸಂಗೀತಗಾರರಿಗೆ ತಬಲಾ ಸಾಥ್ ನೀಡಿದ್ದಾರೆ. ಇಂತಹ ಮಹಾ ಕಲಾವಿದರಾದ ಪಂ. ಬಸವರಾಜ ಬೆಂಡಿಗೇರಿಯವರ ಸಾಧನೆಯನ್ನು ಗಮನಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ೧೯೮೩ರಲ್ಲಿ "ಕರ್ನಾಟಕ ಕಲಾ ತಿಲಕ" ಬಿರುದು ನೀಡಿ ಸನ್ಮಾನಿಸಿತು.

ಪಂ. ಬಸವರಾಜ ಬೆಂಡಿಗೇರಿಯವರು ತಬಲಾವಾದನದಲ್ಲಿ ಹೆಚ್ಚು ಹೆಸರುವಾಸಿಯಾದರಲ್ಲದೇ ಸಾಕಷ್ಟು ಶಿಷ್ಯರನ್ನು ಹೊಂದಿದ್ದಾರೆ. ಅದರಲ್ಲಿ ಮುಖ್ಯರಾದವರೆಂದರೆ ಪಂ. ವೀರಣ್ಣ ಕಾಮಕರ, ಪಂ. ರಘುನಾಥ ನಾಕೋಡ, ಡಾ. ರಾಚಯ್ಯ ಹಿರೇಮಠ, ಶ್ರೀ ಫಯಾಜಖಾನ್, ಶ್ರೀ ನಿಸ್ಸಾರ ಅಹಮದ್, ಶ್ರೀ ಶ್ರೀಶೈಲ ಬಳ್ಳೂರ, ಶ್ರೀ. ನಂದಿಕೇಶ್ವರ ಗುರವ, ಶ್ರೀ ಸುಧೀಂದ್ರ ಮುಜುಂದಾರ, ಶ್ರೀ ಸಂತೋಷ ಕುಲಕರ್ಣಿ ಮುಂತಾದವರಾಗಿದ್ದಾರೆ. ಹೀಗೆ ಅನೇಕ ಶಿಷ್ಯರನ್ನು ತಬಲಾವಾದನ ಕಲಾವಿದರನ್ನಾಗಿ ಮಾಡಿ ತಬಲಾಪರಂಪರೆಯನ್ನು ಉಳಿಸಿದ ಶ್ರೇಯಸ್ಸು ಪಂಡಿತ

ಬಸವರಾಜ ಬೆಂಡಿಗೇರಿಯವರಿಗೆ ಸಲ್ಲುತ್ತದೆ. ಇವರ ಶಿಷ್ಯಂದಿರಲ್ಲಿ ಸಾಕಷ್ಟು ಜನರು ಆಕಾಶವಾಣಿಯ ಕಲಾಕಾರರೆಂದು ಮನ್ನಣೆ ಹೊಂದಿದ್ದಾರೆ. ಕೆಲವರಂತೂ ತಬಲಾವಾದನ ಕಲಾನಿಪುಣತೆಯನ್ನು ತಮ್ಮ ಕಾರ್ಯಕ್ರಮಗಳ ಮೂಲಕ ದೇಶಾದ್ಯಂತ ಪರಿಚಯಗೊಳಿಸಿದ್ದಾರೆ. ಇಂತಹ ಮಹಾಸಾಧನೆಗೆ ಪ್ರತೀಕರಾದ ಇವರು ಸರಳ ಹಾಗೂ ಸಾದಾ ಜೀವನ ನಡೆಸಿ, ಯಾವ ಫಲಾಪೇಕ್ಷೆ ಇಲ್ಲದೆ ಕಲಾ ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಂಡು ಕೀರ್ತಿಶ್ರೇಷ್ಠರಾದ ಪಂ. ಬಸವರಾಜ ಬೆಂಡಿಗೇರಿಯವರು ಸಂತೃಪ್ತ ಜೀವನ ನಡೆಸಿ ೧೨-೦೮-೧೯೯೯ ರಂದು ಇಹಲೋಕ ಯಾತ್ರೆ ಮುಗಿಸಿದರು.

■ ■ ■



ದತ್ತಾತ್ರೇಯ ರಾಮರಾವ್ ಪರ್ವತೀಕರ

# ನಾದಬ್ರಹ್ಮೋಪಾಸಕ: ಗುಳೇದಗುಡ್ಡದ ದತ್ತಾತ್ರೇಯ ರಾಮರಾವ್ ಪರ್ವತೀಕರ (೧೯೧೬-೧೯೯೧)

● ಸತೀಶ. ಬಿ. ಪರ್ವತೀಕರ

ಒಮ್ಮೆ ಗುಳೇದಗುಡ್ಡಕ್ಕೆ ದತ್ತಣ್ಣವರು ಬಂದಾಗ ಕೇಳಿದ ಮಾತು "ಈ ದಾಸ ಏನ ರಿಸರ್ಚ್ ಮಾಡ್ತಾ ಇಲ್ಲ, ಇದ್ದವುಗಳನ್ನ ಹುಡುಕಿ ತೋರಸ್ತಾನ ಅಷ್ಟ". ನಾವು ಅವಾಗ ಇನ್ನೂ ಸಣ್ಣವರು, ರಿಸರ್ಚ್, ಪ್ರಯೋಗ, ಹುಡುಕಿ ತೋರಸ್ತಾನ, ಇವೆಲ್ಲವುಗಳು ನಮ್ಮ ತಲೀಗೆ ಹೋಳಿಲೇ ಇಲ್ಲ. ಅವರು ಗುಳೇದಗುಡ್ಡಕ್ಕ ನಮ್ಮ ಮನೀಗೆ ಬಂದಾರ ಅಂದ್ರ ನಮಗ, ನಮ್ಮ ತಂದೆ-ತಾಯಿಗೆ, ಎಲ್ಲರಿಗೂ ಏನೋ ಭಯ, ಭಕ್ತಿ. ಆಮ್ಯಾಲೆ 'ದಾಸ' ಅಂದ್ರ ಯಾರೂ ಅಲ್ಲ, ಇವರೇ ಅಂತ ತಿಳಿದದ್ದು, ಅದರ ಅರ್ಥದೊಳಗ ಈ 'ದಾಸ' ಅಂದ್ರ 'ದೇವರ ಸೇವಕ' ಅಂತ ಹೌದು, ಇವತ್ತು ಅವರು ಬರೆದಿರುವ, ಅವರ ಬಗ್ಗೆ ಬರೆದಿರುವ ನೂರಾರು ಲೇಖನಗಳನ್ನೂ, ಅವರ ಸಂಪರ್ಕದಲ್ಲಿದ್ದ ಒಡನಾಡಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದಾಗ ನಿಜವಾಗಿಯೂ ಈ ವೀಣಾಮಹಾರಾಜರ ಸಾಧನೆ ಅದ್ಭುತ, ಭಾರತೀಯ ಸಂಗೀತದೊಳಗ ವಿಶೇಷವಾಗಿ ಹಿಂದುಸ್ತಾನೀ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಪದ್ಧತಿಯನ್ನು ಮೇಳೈಸಿ, ಹೊಸ ರಾಗ, ಅವುಗಳ ನೂರಾರು ವರ್ಗೀಕರಣ ಮಾಡಿದ್ದು ಒಂದು ದೊಡ್ಡ ಸಂಶೋಧನೆ. ದೊಡ್ಡದಾದ ಗಂಧನಾಮಗಳಿಂದ ಅಲಂಕೃತವಾದ ಮುಖ, ನೀಳವಾದ ಮೂಗು, ತೇಜಃಪುಂಜ ಕಣ್ಣುಗಳು, ಉದ್ದ ಜಟಾಯಿ, ಕಪ್ಪುಗಡ್ಡ, ಕೌಪೀನ, ಸ್ವಲ್ಪ ಸಿಡುಕಿನ ಸ್ವಭಾವ, ಯಾವಾಗಲೂ ಸಂಗೀತದ ಉಸಿರು. ಮಂತ್ರಾಲಯದ ರಾಘವೇಂದ್ರರಾಯರ ಪರಮ ಭಕ್ತರು, ಒಮ್ಮೆ ಗುಳೇದಗುಡ್ಡದೊಳಗ ರಾಘವೇಂದ್ರ ಮಠ ಕಟ್ಟಿಸೋ ಸಂದರ್ಭ, ಮಾತ ಮಾತಾಡ್ತಾ ಇದ್ದಂಗ 'ಆ ಕೆಲಸಾ ಆಗಿಲ್ಲಾಂದ್ರ ಯಾಕರೀ ಇಲ್ಲಿ ಕೂತೀರಿ ಅಂದಾಕ್ಷಣ ನಮ್ಮ ತಂದೆ ತಕ್ಷಣ ಎದ್ದು ಹೊರಟೇಬಿಟ್ಟರು, ಅದೇ ಸ್ವಭಾವದಿಂದ ಮರುಕ್ಷಣಾನ "ಈ ದಾಸ ಹೋಗು ಅಂದ್ರ ಹೊಂಟ ಬಿಡೂದ," ಅಂದಾಕ್ಷಣ ಅವರಲ್ಲಿರೊ ಪ್ರೀತಿ ವಾತ್ಸಲ್ಯಗಳು ಮರುಕ್ಷಣ ಎಲ್ಲಾರನ್ನ ಕಟ್ಟಿಹಾಕಿ ಬಿಡ್ತಿದ್ವು, ಇದು ಕಣ್ಣಾರೆ ಕಂಡ ದೃಶ್ಯ ಬರಬರ್ತ ಅವರ ಬಗ್ಗೆ ತಿಳಿದುಕೊಳ್ಳೋ ಹಂಬಲ ನಮಗೆಲ್ಲ ಹೆಚ್ಚಾಯಿತು.

ನಾದಯೋಗಿ, ವೀಣಾಮಹಾರಾಜ, ಸ್ವಾಮಿ, ದಾಸ, ವೀಣಾಬಾಬಾ ಎಂಬ ನಾಮಾಂಕಿತಗಳೊಂದಿಗೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮದೇ ಆದ ಸಂಗೀತಕ್ಷೇತ್ರದೊಳಗೆ ವಿಶೇಷ ಛಾಪು ಮೂಡಿಸಿದ, ಸಂಶೋಧನೆಗಳಿಗೆ, ಪ್ರಯೋಗಗಳಿಗೆ ಸಾಕಷ್ಟು ಸಂಗೀತದ ಸಮುದ್ರವನ್ನೇ ತೆರೆದಿಟ್ಟ ಶ್ರೀ ದತ್ತಾತ್ರೇಯ ರಾಮರಾವ್ ಪರ್ವತೀಕರ ಅವರು ಹೈದರಾಬಾದಿನಲ್ಲಿ ಜನಿಸಿದ್ದು ೧೬ನೇ ಜನವರಿ ೧೯೧೬ ರಂದು.

ತಂದೆ ರಾಮರಾವ್ ಪರ್ವತೀಕರ ಅವರು ಈಗಿನ ಬಾಗಲಕೋಟೆಜಿಲ್ಲೆಯ ಬದಾಮಿತಾಲೂಕಿನ ಗುಳೆದಗುಡ್ಡದವರು. ನಂತರ ಹೈದರಾಬಾದಿನಲ್ಲಿ ನೆಲೆಸಿದರು, ಅಲ್ಲಿಯ ನಿಜಾಮ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರು. ನಾದಯೋಗಿ ದತ್ತಾತ್ರೇಯ ಪರ್ವತೀಕರ ಅವರು ವಿಜ್ಞಾನ ಪದವೀಧರರು. ಗಣಿತ ಇವರ ಅಚ್ಚುಮೆಚ್ಚಿನ ವಿಷಯವಾಗಿತ್ತು. ಪಿ.ಸಿ.ಎಂ ದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದವರು. ವಿದ್ಯಾರ್ಥಿಜೀವನದಲ್ಲಿ ವಿಲಾಸಿಪ್ರೀಯರಾಗಿದ್ದ ಸ್ವಾಮೀಜಿ, ಆವಾಗಿನಿಂದಲೇ ಅವರಿಗೆ ಸಂಗೀತದ ಗೀಳು ಆವರಿಸಿತ್ತು, ಪ್ರಾರಂಭದಲ್ಲಿ ಹೈದರಾಬಾದದ ಶ್ರೀ ಪ್ರಹ್ಲಾದರಾವ್ ಮತ್ತು ನಾದಾನಂದ ಬಾಪೂಜಿ ಅವರ ಹತ್ತಿರ ಸಿತಾರ ಸಂಗೀತದ ಸಾಧನೆ.

ಸಂಗೀತದಲ್ಲಿ ಯಾವುದೇ ಪದವಿ, ಪಿ.ಹೆಚ್‌ಡಿ ಗಳಿಗೆ ಆಸೆ ಪಡೆಯದ ಈ ನಾದಯೋಗಿಯ ಮೂಲಮಂತ್ರ "ಸಂಗೀತದಿಂದ ಭಕ್ತಿ ಸಾಧನೆ" "ಸಂಗೀತವೆ ನನ್ನ ಮುಂದಿನ ಶಿಕ್ಷಣ" ಎಂದು ತೀರ್ಮಾನಿಸಿದ ವೀಣಾಮಹಾರಾಜರು ತಮ್ಮ ೧೬ನೇ ವಯಸ್ಸಿನಲ್ಲಿಯೇ ದೆಹಲಿ, ಕಲ್ಕತ್ತಾ, ಹೈದರಾಬಾದಗಳಲ್ಲಿ ಸಂಗೀತದ ಕಛೇರಿ ನಡೆಸಿ ಕೊಟ್ಟರು. ತಮ್ಮ ನಿರಂತರ ಸಾಧನೆಯಿಂದ ಸಂಗೀತದ ಸಪ್ತ ಸಮುದ್ರವನ್ನು ಕಂಡರು. ರಾತ್ರಿ ಮಲಗಿದ್ದಾಗ ಆಕಸ್ಮಿಕವಾಗಿ ಎಚ್ಚರಾದಲ್ಲಿ ಆ ನಿದ್ದೆಯಲ್ಲಿಯೂ ಸಹ ಅವರ ಕೈಗಳು ಸ್ವರಮಂಡಲವನ್ನು ಮೀಟುತ್ತಿದ್ದದ್ದನ್ನು ಸ್ವತಃ ನಾವು ಕಂಡದ್ದು ಆಶ್ಚರ್ಯವೇನಲ್ಲ. ೧೯೫೦ ರಲ್ಲಿಯೇ ಆಕಾಶವಾಣಿ ಹಾಗೂ ದೂರದರ್ಶನದ "ಎ ಟಾಪ್ " ಕಲಾವಿದರಾಗಿ ಆಯ್ಕೆಯಾದರು. ೧೯೫೨ರಲ್ಲಿ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಧ್ವನಿಮುದ್ರಣಗೊಂಡ ಸಿತಾರವಾದನ ಇನ್ನೂ ಲಭ್ಯ. ೨೦೧೨ರ ಫೆಬ್ರುವರಿಯಲ್ಲಿ ನಡೆದ "ಆಕಾಶವಾಣಿ ಹಬ್ಬ"ದ ಪ್ರಯುಕ್ತ ನಿಲಯದ ಮಹಾ ಕಲಾಕಾರರ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅಂದು ೧೯೫೨ರಲ್ಲಿ ಧ್ವನಿಮುದ್ರಣ ಅವಧಿಯಲ್ಲಿ ತೆಗೆದ ಫೋಟೊ ಪ್ರದರ್ಶಿಸಲಾಗಿತ್ತು.

೧೯೩೭ರಲ್ಲಿ ಹೈದರಾಬಾದಿನ ಕಮಲಾಬಾಯಿ ಪೈಠಣಕರ ಅವರೊಂದಿಗೆ ಮದುವೆ, ಸದಾಶಿವ ಎಂಬ ಪುತ್ರನ ಜನನದ ನಂತರ ಕಮಲಾಬಾಯಿ ಇಹಲೋಕ ತ್ಯಜಿಸಿದ್ದರು. ಮುಂದೆ ೧೯೪೨ರಲ್ಲಿ ಹಠಯೋಗಕ್ಕೆ ಮಾರು ಹೋದ ನಾದಯೋಗಿ ತಮ್ಮದೇ ಆದ ಮನಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡರು. ಒತ್ತಾಯದ ಎರಡನೆ ಮದುವೆ ಬಳಗದ ಬುಯ್ಯಾರ ಗ್ರಾಮದ ಜಹಾಗಿರದಾರ ಕುಟುಂಬದ ಇಂದಿರಾಬಾಯಿ ಅವರೊಂದಿಗೆ, ಎರಡು ಮಕ್ಕಳ ನಂತರ ಸಂಸಾರದಿಂದ ದೂರ ಉಳಿದೇ ಬಿಟ್ಟರು.

ತಮ್ಮ ೩೦ನೇ ವರ್ಷದಿಂದ ಬದರಿ ಕ್ಷೇತ್ರಕ್ಕೆ ಹೋಗಲು ನಿರ್ಧರಿಸಿದ ದಾಸರು ೨೫ ವರ್ಷಗಳವರೆಗೆ ಪ್ರತಿ ವರ್ಷ ಆರುತಿಂಗಳು ಬದರಿಯಲ್ಲಿಯೇ ವಾಸ. ಅಲ್ಲಿಯೇ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸ್ಥಾಪನೆ ಮಾಡಿದರು. ಬೆಳಿಗ್ಗೆ ನಾಲ್ಕು ಗಂಟೆಗೆ ಕೊರೆಯುವ ಚಳಿಯಲ್ಲಿ ಗಂಗಾನದಿ ತೀರದಲ್ಲಿ, ಪ್ರತಿದಿನ ಸ್ನಾನ, ಸಂಧ್ಯಾವಂದನೆ ಮುಗಿಸಿ ರಾಯರ ಪೂಜೆಯ ನಂತರ ಶ್ರೀ ಬದರಿನಾರಾಯಣ ಸಮ್ಮುಖದಲ್ಲಿ ನಿರಂತರ ಭಜನೆ. ಒಮ್ಮೆ ಅಲ್ಲಿಯ 'ಪಂಡಾ'ಗಳು ರಾಯರ ಮಠವನ್ನು ಬೇರೆ ಕಡೆ ವರ್ಗಾಯಿಸಲು ಬೆನ್ನತ್ತಿದಾಗ, ಬದರಿಯಲ್ಲಿ ಉಪವಾಸ ಸತ್ಯಾಗ್ರಹ

ಕೈಗೊಂಡರು. ಈ ಸುದ್ದಿ ಅಂದಿನ ಪ್ರಧಾನಮಂತ್ರಿ ಇಂದಿರಾಗಾಂಧಿ ವರೆಗೂ ತಲುಪಿ, ಅವರ ಆದೇಶದಂತೆ ಮಠದ ಸ್ಥಳಾಂತರ ಸ್ಥಗಿತಗೊಂಡಿದ್ದು, ಈ ವಿಷಯ ಅಂದಿನ ಪತ್ರಿಕೆಗಳಲ್ಲಿ ಬಂದದ್ದು ನೆನಪಿಸಲೇಬೇಕಾದದ್ದು.

'ಬದರಿ'ಯ ಈ ಅವಧಿಯಲ್ಲಿಯೇ ನಾದಯೋಗಿಗಳು ಸಂಗೀತದ ಪರಾಕಾಷ್ಠೆ ತಲುಪಿದ್ದು. ಆಧ್ಯಾತ್ಮಿಕ ಗ್ರಂಥಗಳ, ನೂರಾರು ತಾಳಗಳ, ಸಂಗೀತದ ವರ್ಗೀಕರಣಗಳ ಬಗ್ಗೆ ಗ್ರಂಥಗಳನ್ನು ಬರೆಯತೊಡಗಿದರು. ಇಂದಿಗೂ ಸಹ ಅವುಗಳಲ್ಲಿ ಕೆಲವು ಬೆಂಗಳೂರಿನ ಇಂದಿರಾನಗರದ ಶ್ರೀ ರಾಘವೇಂದ್ರ ಮಠದಲ್ಲಿ ಲಭ್ಯ. "ಶ್ರೀರಾಮ ವಿಠಲದಾಸ" ಅಂಕಿತನಾಮ ಹೊಂದಿರುವ ದತ್ತಾತ್ರೇಯ ರಾಮರಾವ್ ಪರ್ವತೀಕರ ಅವರದ್ದು ಸಂಗೀತಲೋಕಕ್ಕೆ ಮರೆಯಲಾಗದ ಅದ್ಭುತ ಕೊಡುಗೆ. ಸಂಗೀತದಿಂದ ಆಧ್ಯಾತ್ಮ ಸಾಧನೆಯಲ್ಲಿ ಅವರ ಮೂಲ ಮಂತ್ರ ಒಂದೆ: "ಸಂಗೀತವೆಂದರೆ ಪರಬ್ರಹ್ಮ, ಪರಮಾತ್ಮನ ಉಪಾಸನೆ, ಸಂಗೀತದ ಆಸ್ವಾದನೆಯಿಂದ ಪಶು, ಪಕ್ಷಿ, ನಿರ್ಜೀವ ವಸ್ತು, ಮನುಷ್ಯ, ದೇವ-ಗಂಧರ್ವರು ತಲೆದೂಗುವಂತಾಗಬೇಕು" ಇದೇ ಮಂತ್ರವನ್ನು ಕಠಿಣವಾಗಿ ಅಳವಡಿಸಿಕೊಂಡ ವೀಣಾ ಮಹಾರಾಜರು ಸಂಗೀತ ಹಾಗೂ ವಿಜ್ಞಾನವನ್ನು ಮೇಳೈಸಿದವರು. ವೈಜ್ಞಾನಿಕವಾಗಿ ಸಂಗೀತದ ಪವಾಡಗಳನ್ನು ಮಾಡಿದ್ದಕ್ಕೆ ಸಾಕಷ್ಟು ಪುರಾವೆಗಳಿವೆ. ಈ ಪವಾಡಗಳನ್ನು ಸಿದ್ಧಿಸಿ ತೋರಿಸಿದ್ದು, ಉಪಯೋಗಿಸಿದ್ದು ಸಂಗೀತವನ್ನು ನಂಬಿಸಲು ಅಷ್ಟೆ, ಎಂದು ಸರಳವಾಗಿ ಹೇಳಿ ಬಿಡುತ್ತಿದ್ದರಂತೆ. ಇವರ ಸಂಗೀತ ಅಂದಿನ ರಾಷ್ಟ್ರಪತಿ ಡಾ॥ ಬಾಬುರಾಜೇಂದ್ರ ಪ್ರಸಾದ ಅವರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಸಂಸತ್ತಿನ ಹೊರಾಂಗಣದಲ್ಲಿ ನಾದಯೋಗಿಯ ಸಂಗೀತ ಕಛೇರಿ ಏರ್ಪಡಿಸಿ ಇವರಿಗೆ ಸನ್ಮಾನ ಮಾಡಿದ್ದು ದಾಖಲೆಯಲ್ಲಿದೆ. ಆಧ್ಯಾತ್ಮಿಕ ಒಲವಿನ ಸಂಗೀತ ಸಾಧನೆ, ಆತ್ಮವಿಶ್ವಾಸ ಬೀರುವ ಮುಖಮುದ್ರೆ, ಎಂಥವರನ್ನೂ ಆಕರ್ಷಿಸುವ ವ್ಯಕ್ತಿತ್ವ ಹೊಂದಿದ ಇವರು ಸ್ವಾಮಿಯಾಗಿ, ನಾದಯೋಗಿಯಾಗಿ, ತಪಸ್ವಿಯಾಗಿ, ಸಂಗೀತಸಾಧಕರಾಗಿ, ಬೋಧಕರಾಗಿ, ದೇವರ ದಾಸನೆಂದು ಖ್ಯಾತರಾಗಿ ಸಂಗೀತದ ಜಗತ್ತಿಗೆ ಅಪೂರ್ವ ಕಾಣಿಕೆಯನ್ನು ನೀಡಿ ಪ್ರಾತಃಸ್ಮರಣೀಯರಾಗಿದ್ದಾರೆ.

ಸಂಗೀತಕ್ಷೇತ್ರದಲ್ಲಿ ತಾವು ಮಾಡಿದ ಸಾಧನೆಯನ್ನು ಪುಸ್ತಕರೂಪವಾಗಿ ಹೊರತಂದದ್ದು ಇಂದಿನ ಯುವಪೀಳಿಗೆಗೆ ಮಾರ್ಗದರ್ಶಕವಾಗಿದೆ. 'ನಾದ-ಆನಂದ', 'ನಾದಪ್ರಭಾ', 'ನಾದಸುಧಾ', 'ರಾಗಸುಧಾ' ಮುಂತಾದ ೬೨ ರಾಗಗಳಲ್ಲಿ ವಿವಿಧ ರೀತಿಯ ೪೧೧೬ ಆರೋಹ-ಅವರೋಹಗಳಲ್ಲಿ ಹಾಡಬಹುದೆಂದು ತೋರಿಸಿದವರು ಈ ನಾದಯೋಗಿ. ೬೧/೪ ಹಾಗೂ ೬೧/೨ ಹಳೆಯ ಮಾತ್ರಾಗಳಲ್ಲಿ ಸುಮಧುರ ರಾಗಗಳನ್ನು ಸಂಯೋಜಿಸಿದ್ದು ಇಡೀ ಶಾಸ್ತ್ರೀಯ ಸಂಗೀತಕ್ಕೆ ಬೃಹತ್ ಕೊಡುಗೆಯಾಗಿದೆ. ಹಲವಾರು ಭಜನೆಗಳನ್ನು ಹಿಂದಿ, ಮರಾಠಿ, ಕನ್ನಡಕ್ಕೆ ಸಂಸ್ಕೃತದಿಂದ ಭಾಷಾಂತರಿಸಿದ್ದು ಅಪೂರ್ವ ಸಾಧನೆ. ಸುಮಾರು ೫೦೦೦ ವರೆಗೆ ರಾಗಗಳನ್ನು ಸಂಯೋಜನೆ ಮಾಡಿದ್ದು ಅಪ್ರತಿಮವಾಗಿವೆ. ೧೯೮೭ರಲ್ಲಿ ಬಿಜಾಪುರದ ನವರಸಪುರದ ಸಂಗೀತ ಉತ್ಸವದಲ್ಲಿ ಕಛೇರಿ ನೀಡಿ, ನೆರೆದ ಎಲ್ಲ ಸಂಗೀತಪ್ರಿಯರನ್ನು ಅಚ್ಚರಿಗೊಳಿಸುವಂತೆ ಮಾಡಿದ್ದು, ನಿಜವಾಗಿಯೂ ದಾಖಲೆಯನ್ನಬಹುದು. ಮುಂದೆ ಅವರ ನಿಧನದ ನಂತರ ನವರಸಪುರ ಉತ್ಸವದಲ್ಲಿ ಇವರ ಹೆಸರಿನಲ್ಲಿ ಮಹಾದ್ವಾರ

ಮಾಡಿದ್ದನ್ನು ಸ್ಮರಿಸಲೇಬೇಕು.

ನಾದಯೋಗಿ ದತ್ತಾತ್ರೇಯರು ತುಳಸೀದಾಸರ "ಶ್ರೀ ರಾಮಚರಿತ ಮಾನಸ"ಕ್ಕೆ ರಾಗಗಳನ್ನು ಸಂಯೋಜಿಸಿದ್ದು, ಈ ಕೃತಿಗೆ 'ಶ್ರೀರಾಮಾಯಣ ಗಾನ' ಎಂದು ಹೆಸರಿಸಿದ್ದಾರೆ. ಇದನ್ನು ಇಂಗ್ಲೀಷ್ ಭಾಷೆಗೂ ಸಹ ಭಾಷಾಂತರಿಸಲಾಗಿದೆ. ಈ ಪುಸ್ತಕಗಳನ್ನು ಗೋರಖಪುರದ ಗೀತಾ ಪ್ರೆಸ್‌ನವರು ಮುದ್ರಿಸಿದ್ದಾರೆ, ಇವುಗಳಲ್ಲದೆ ಆನಂದ ಮಂದಿರದಿಂದ ಪ್ರಕಟಿತ ಹಿಂದಿ ಹಾಗೂ ಮರಾಠಿಯಲ್ಲಿರುವ 'ಶುಕ ವಿರಕ್ತಿ' ಕನ್ನಡ ಹಾಗೂ ಹಿಂದಿಯಲ್ಲಿ ರಚಿಸಿರುವ 'ಮೂಲಾಧಾರ ಸಂಗೀತ ಶಿಕ್ಷಾ', ಇಂಗ್ಲೀಷ್ ಭಾಷೆಯಲ್ಲಿ 'ನೆಕ್ಟರ್ ಆಫ್ ಗ್ರೇಸ್', 'ಶ್ರೀಕೃಷ್ಣ ಕಥಾಮೃತ' (ಹಿಂದಿ), 'ಶ್ರೀಬದರೀನಾಥ ನಿತ್ಯ ಕೀರ್ತನಂ' ಹೀಗೆ ಇನ್ನೂ ಅನೇಕ ಗ್ರಂಥಗಳನ್ನು ರಚಿಸಿದ್ದು, ಕೆಲವು ಇನ್ನೂ ಬೆಳಕಿಗೆ ಬರಬೇಕಿದೆ. ಬ್ರಹ್ಮಸೂತ್ರ ಭಾಷ್ಯ, ಗೀತಾ, ಹಾಗೂ ಸಂಗೀತದ ಹೊಸ ಕೃತಿಗಳ ಬಗ್ಗೆ ವಿಶೇಷವಾಗಿ ಕನ್ನಡದಲ್ಲಿ ಹಾಗೂ ಹಿಂದಿಯಲ್ಲಿ ಕೃತಿ ರಚಿಸಿ, ತತ್ವಜ್ಞಾನಕ್ಕೆ, ಹರಿದಾಸಸಾಹಿತ್ಯಕ್ಕೆ ಕೊಡುಗೆ ನೀಡಿದ ನಾದಯೋಗಿ ಪಂ.ಡಿ.ಆರ್.ಪರ್ವತಿಕರವರು ಸರ್ವಮಾನ್ಯರಾಗಿದ್ದಾರೆ.

ನಾದಯೋಗಿ ದತ್ತಾತ್ರೇಯ ರಾಮರಾವ್ ಪರ್ವತೀಕರ ಅವರು ಪ್ರಾರಂಭದಲ್ಲಿ ಕೊಳಲು, ಜಲತರಂಗ, ತಬಲಾ, ಹಾರ್ಮೋನಿಯಂ ನುಡಿಸುತ್ತಿದ್ದರು. ಬರುಬರುತ್ತ ತಂತಿವಾದ್ಯಕ್ಕೆ ಮನಸೋತು, ಅದರಲ್ಲಿಯೇ ಪರಿಣಿತಿ ಪಡೆದು ೧೯೬೧ರಲ್ಲಿ ರುದ್ರವೀಣಾ, ಸಿತಾರ, ಸ್ವರಮಂಡಲಗಳನ್ನು ಒಂದೆಡೆ ಸಂಯೋಜಿಸಿ, ಅದಕ್ಕೆ 'ದತ್ತಾತ್ರೇಯ ವೀಣಾ' ಎಂದು ಹೆಸರಿಸಿ ಇಡೀ ಸಂಗೀತಲೋಕಕ್ಕೆ ಅನನ್ಯ ಕೊಡುಗೆ ನೀಡಿದ್ದು ಇಂದಿನ ಯುವಪೀಳಿಗೆ ಸ್ಮರಿಸಲೇಬೇಕಾದದ್ದು. ಭಾರತೀಯ ಸಂಗೀತದ ಪ್ರಾಚೀನ ಮೂಲವನ್ನು ಅಭ್ಯಸಿಸಿದ ನಾದಯೋಗಿಗೆ ಸದಾ ಸಂಗೀತದಲ್ಲಿ ವೈಜ್ಞಾನಿಕತೆ ಬೆಳೆಸುವ ಉತ್ಕಟ ಇಚ್ಛೆ. ಸಂಗೀತದಲ್ಲಿಯ ಈ ಆವಿಷ್ಕಾರಗಳಿಂದ ಭಗವಂತನ ಸಾಕ್ಷಾತ್ಕಾರ ಪಡೆದ ಅದ್ಭುತ ಆಧ್ಯಾತ್ಮಿಕ ವ್ಯಕ್ತಿ ನಿರ್ಮಾಣಮಾಡಿದ ಈ ದತ್ತಾತ್ರೇಯ ವೀಣಾ ಇಂದಿಗೂ ನವದೆಹಲಿಯ ಸಂಗೀತ ನೃತ್ಯ ಅಕಾಡೆಮಿಯ ಗ್ಯಾಲರಿಯಲ್ಲಿದೆ. ದತ್ತಾತ್ರೇಯ ವೀಣಾ ಇದೊಂದು ಕಷ್ಟವಾದ ಗಣಿತಸಮೀಕರಣದಿಂದ ತಯಾರಿಸಿದ್ದು ಎಂದು ಹೇಳಬೇಕಾಗಿಲ್ಲ. ಇದೊಂದು ವಿವಿಧ ಗೇಜಗಳ ೪೮ ತಂತಿಗಳ ವಿಶೇಷ ವಾದ್ಯ, ಸಿತಾರವಾದ್ಯದಲ್ಲಿ ಅವರ ವೈಜ್ಞಾನಿಕ ಬುದ್ಧಿ, ಏನಾದರೂ ಶೋಧಿಸಲೇಬೇಕೆಂಬ ಆಸೆಯಿಂದ, ಸಿತಾರದ ಒಂದೇ ತಂತಿ ಬಳಸಿ ಒಂದು ರಾಗವನ್ನು ನುಡಿಸಲು ಸಾಧಿಸಿ, ಗೋಷ್ಠಿಯಲ್ಲಿ ಅದನ್ನು ಸಹ ಪ್ರದರ್ಶಿಸಿದ್ದು ಅಪ್ರತಿಮ ಸಾಧನೆ. ಸಿತಾರ, ರುದ್ರವೀಣೆ, ಹಾಗೂ ಸ್ವರಮಂಡಲದಲ್ಲಿಯ ಕೊರತೆಗಳನ್ನು ಕಂಡು ವೈಜ್ಞಾನಿಕವಾಗಿ ಗಣಿತದ ಆಧಾರದ ಮೇಲೆ ನಿರ್ಮಿಸಲಾಗಿದೆ. ಒಂದೇ ನಿಮಿಷದಲ್ಲಿ ೧೫೦೦ ಸ್ಟ್ರೋಕಗಳನ್ನು ಅಷ್ಟೊಂದು ವೇಗದಲ್ಲಿ ನುಡಿಸಬಹುದಾಗಿದೆ. ಚಕ್ರಧಾರ ಹಾಗೂ ಕಮಾಲಿಚಕ್ರಧಾರ ರಾಗಗಳನ್ನು ಯಾವುದೇ ಮಾತ್ರಾ, ತಾಳ ಹಾಗೂ ಲಯಕಾರಿಯೊಂದಿಗೆ, ಗಣಿತದ ಲೆಕ್ಕಾಚಾರದೊಂದಿಗೆ ಸಂಯೋಜಿಸಿದ್ದು ವಿಶಿಷ್ಟವಾಗಿದೆ. ಈ ವಾದ್ಯದ ಬಗ್ಗೆ ಗ್ರಾಮೋಫೋನ್ ಕಂಪನಿ ಆಫ್ ಇಂಡಿಯಾ ತನ್ನ ಡಿಸ್ಕ್ ರಿಕಾರ್ಡ್‌ದ ಮೇಲೆ ಸಂಪೂರ್ಣವಾಗಿ ವಿವರಿಸಿದೆ. ನುಡಿಸಲು ಸೂಕ್ತವಾಗಲು ಅದಕ್ಕನುಗುಣವಾಗಿ ವಿಶೇಷ ಸ್ಟ್ಯಾಂಡ್ ಸಹ ನಿರ್ಮಾಣಮಾಡಿದ್ದು

ಕಲಾವಿದನಿಗೆ ಅನುಕೂಲವಾಗುವಂತಿದೆ. ಅಮೇರಿಕಾ ಹಾಗೂ ಫ್ರಾನ್ಸಗಳಲ್ಲಿ ಇವರ ಅಂದಿನ ಕ್ಯಾಸೆಟ್‌ಗಳನ್ನೇ ಕೇಳಿ ಅಲ್ಲಿಯ ದಿನಪತ್ರಿಕೆಗಳು ಅವರ ಸಂಗೀತ 'ಡಿವಾಯಿನ್ ಮ್ಯೂಜಿಕ್' ಎಂದು ವರ್ಣಿಸಿದ್ದನ್ನು ನಾವು ಸ್ಮರಿಸಲೇಬೇಕು. ಬೋಲಗಳ ಸೌಂದರ್ಯಗಳಿಗಿಂತ ಅವರ ಗಮನ ತೀವ್ರವಾದದ್ದು ತಾಳಗಳ ಗಣಿತದ ಭಾಗ. ಹಿಂದುಸ್ತಾನಿ ಹಾಗೂ ಕರ್ನಾಟಕಶೈಲಿ ರಾಗಗಳ ಪ್ರಮುಖ ಅಂಶಗಳನ್ನು ಒಂದಾಗಿಸಿ, ಪರಿಣಾಮಕಾರಿಯಾಗಿ ನುಡಿಸುವ ಚಾಣಕ್ಯವನ್ನು ಹೊಂದಿದ್ದರು. ಮೈಸೂರಿನ ಬೀಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣ, ಬರೋಡಾದ ಉಸ್ತಾದ ಮೌಲಾಬಕ್ಷ ಇವರ ಗುರುಗಳಾಗಿದ್ದರು. ವಾದ್ಯದಲ್ಲಿ ೯೧/೨ ತಾಳಗಳಲ್ಲಿ ನುಡಿಸೋದು ಗಾಯನದಲ್ಲಿ ಮಾತ್ರ ಎಂದವರಿಗೆ ಉತ್ತರ ನೀಡಿದವರು. ಇವರ ಸಾರ್ವಜನಿಕ ಕಾರ್ಯಕ್ರಮಗಳು ವಿರಳ.

ನಾದಯೋಗಿ ದತ್ತಾತ್ರೇಯ ರಾಮರಾವ್ ಪರ್ವತೀಕರ ಅವರ ಜೀವನದಲ್ಲಿನ ಆಶ್ಚರ್ಯದ ಹಾಗೂ ಕುತೂಹಲದ ಕೆಲವು ಘಟನೆಗಳು;

ಸಂದರ್ಭ ಸಿಕ್ಕಾಗ ಸಮುದ್ರದ ದಂಡೆಗೆ ಕುಳಿತು ತೆರೆಗಳ ರಭಸ, ಶಾಂತತೆ, ರೌದ್ರತೆಗಳನ್ನು ಗಮನಿಸಿ, ಅವುಗಳನ್ನು ಸಂಗೀತದಲ್ಲಿ ಅಳವಡಿಸಿದ್ದು, ಅಲ್ಲದೆ ನಿಸರ್ಗದ ಪ್ರಾಣಿ, ಪಕ್ಷಿ, ನೀರು ಇವುಗಳ ಕಲರವವನ್ನು ಸಂಗೀತಕ್ಕೆ ಅಳವಡಿಸಿದ್ದು. ರಾಷ್ಟ್ರಪತಿ ಡಾ॥ ಬಾಬು ರಾಜೇಂದ್ರ ಪ್ರಸಾದರ ಅವಧಿಯಲ್ಲಿ ಸಂಸತ್ತಿನಲ್ಲಿ ನುಡಿಸಿದಾಗ ಪಕ್ಷಿಗಳ ಕಲರವ ಕಂಡದ್ದು, ಎಲ್ಲರಿಗೂ ಆಶ್ಚರ್ಯ. ಅಮೇರಿಕೆಯ ಹೊನಲೂಲುವಿನ ಅಟ್ಕೆನ್ ಡಿನಿಯಲ್ ಇವರ ಸಂಗೀತಕ್ಕೆ ಪ್ರಭಾವಿತನಾಗಿಅಮೇರಿಕೆಯಶಾಲೆಗಳಲ್ಲಿಪ್ರಾರ್ಥನೆಯಾಗಿ ಪ್ರಾರಂಭಿಸಿದ್ದು.ನಾದಯೋಗಿಯವರನ್ನು ಅಂದಿನ ಕೇಂದ್ರಮಂತ್ರಿಗಳಾದ ಆರ್.ಆರ್. ದಿವಾಕರ ಹಾಗೂ ಬಿ.ವಿ. ಕೇಸ್ಕರ ಅವರು ಭಾರತದ ಆಧ್ಯಾತ್ಮ ಹಾಗೂ

ಸಂಗೀತದ ರಾಯಭಾರಿಯಾಗಿ ನೇಮಿಸಲು ಇಚ್ಛಿಸಿದ್ದು, ಇವರು ಅದನ್ನು ತ್ಯಜಿಸಿದ್ದು. ೧೫ ವರ್ಷಗಳ ವರೆಗೆ ನಿರಂತರ ಮೌನ ಆಚರಿಸಿದ್ದು ಆಶ್ಚರ್ಯದ ಸಂಗತಿ.

ಅಮೇರಿಕೆಯ ಲೀಲಾ ಚೋಕ ಇವರ ಸಂಗೀತಕ್ಕೆ ಮಾರು ಹೋಗಿ ಶಿಷ್ಯಳಾಗಿದ್ದು ಆಶ್ಚರ್ಯವೇ ಸರಿ.


ಸಂಗೀತಕ್ಷೇತ್ರಕ್ಕೆ ಇಷ್ಟೊಂದು ಕೊಡುಗೆಯನ್ನು ಸಲ್ಲಿಸಿದ ನಾದಯೋಗಿಗಳು ಎಂದೂ ಪ್ರಚಾರ ಬಯಸಿದವರಲ್ಲ. ೧೯೯೧ರ ನವೆಂಬರ್ ತಿಂಗಳಲ್ಲಿ ಒಂದು ದಿನ ನಸುಕಿನಲ್ಲಿ ಎಂದಿನಂತೆ ಪದ್ಮಾಸನಸ್ಥರಾಗಿ ಜಪವಾಡುತ್ತ ಕುಳಿತ ಯೋಗಾಸನಾವಸ್ಥೆಯಲ್ಲಿಯೇ ಕೊನೆ ಉಸಿರೆಳೆದರು. ನಿರಂತರ ಕಲಿಕೆ, ಸಂಶೋಧನೆ, ಹೊಸತು ಇವುಗಳಲ್ಲಿಯೇ ಹೆಚ್ಚು ಗಮನ ಹರಿಸಿದ ನಾದಯೋಗಿಗಳು ಹೆಚ್ಚು ಶಿಷ್ಯರನ್ನು ತಯಾರಿಸುವಲ್ಲಿ ಗಮನ ನೀಡಿರಲಿಲ್ಲ ಎಂದು ಒಂದು ಕಡೆಯಾದರೆ, ಅವರಲ್ಲಿ ವಿದ್ಯೆಯನ್ನು ಕಲಿಯಲು ಶಕ್ತರಾರೂ ಇಲ್ಲವೆಂತಲೂ ಇನ್ನೊಂದು ಕಡೆ.

ಗುಳೇದಗುಡ್ಡದಲ್ಲಿ ನಾದಯೋಗಿ ದತ್ತಾತ್ರೇಯ ರಾಮರಾವ್ ಸಂಗೀತ ಸ್ಮಾರಕ ಟ್ರಸ್ಟನ್ನು ಸ್ಥಾಪಿಸಿದ್ದು, ಇಂದಿಗೂ ಸಹ ಅವರ ಸ್ಮರಣಾರ್ಥ ಪ್ರತಿವರ್ಷ ಅದರಡಿಯಲ್ಲಿ ಸಂಗೀತ ಕಾರ್ಯಕ್ರಮವನ್ನು, ಅವರ ಕನಸಿನ ರಾಯರ ಮಠದಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಗುಳೇದಗುಡ್ಡದಲ್ಲಿ ನಾದಯೋಗಿಗಳ ಮೂಲಸಂಸ್ಥೆಯಾದ

☆ ☆ ☆ ☆
☆ *ಸಾಂಸ್ಕೃತಿಕ ಧೃವ ತಾರೆಗಳು*
☆ ☆

ಬೆಂಗಳೂರಿನ ಶ್ರೀ ರಾಘವೇಂದ್ರ ಸ್ವಾಮಿ ಮಿಷನ್ ಶಾಖೆಯನ್ನು ಸ್ಥಾಪಿಸಿದೆ. ದಿ। ಡಾ. ಬಂಡೇರಾವ ಪರ್ವತೀಕರ ಹಾಗೂ ಪರ್ವತೀಕರ ಬಳಗದ ಕೌಟುಂಬಿಕ "ಸಂಪದ" ಪತ್ರಿಕೆಯ ಸಂಪಾದಕರಾದ ಶ್ರೀ ರಾಘವೇಂದ್ರ ಪರ್ವತೀಕರ ಇಬ್ಬರೂ ಸಹೋದರರು ಹುಟ್ಟು ಹಾಕಿದ ಈ ಸಂಸ್ಥೆಯನ್ನು ಡಾ॥ ಸುರೇಶ ಪರ್ವತೀಕರ, ರಮೇಶ ಪರ್ವತೀಕರ ಹಾಗೂ ಸಮಸ್ತ ಪರ್ವತೀಕರ ಬಂಧುಗಳು, ಸಂಗೀತ ಆಸಕ್ತರು ಇಂದಿಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ ಈ ನಾದಯೋಗಿಗಳ ಹೆಸರಿನಲ್ಲಿ ಪೀಠ ಸ್ಥಾಪಿಸಿದೆ.

■ ■ ■



ಉಸ್ತಾದ ಬಾಲೆಖಾನ

## ಸಿತಾರ ನವಾಜ

# ಉಸ್ತಾದ ಬಾಲೆಖಾನ್

## (೧೯೪೨-೨೦೦೭)

● ರಾಘವೇಂದ್ರ ಆಯಿ

ಸಾಂಸ್ಕೃತಿಕ ನಗರಿ ಧಾರವಾಡ ಹಿಂದುಸ್ತಾನಿ ಸಂಗೀತದ ಕಾಶಿ ಎಂದೇ ಪ್ರಸಿದ್ಧಿ ಪಡೆದಿದೆ. ಇಂದಿಗೂ ಉತ್ತರಭಾರತದ ಸಂಗೀತಗಾರರು ಧಾರವಾಡದಲ್ಲಿ ಕಾರ್ಯಕ್ರಮ ನೀಡಿ, ಇಲ್ಲಿಯ ಶ್ರೋತೃಗಳ 'ವ್ಹಾ-ವ್ಹಾ' ಪಡೆಯಲು ಹಾತೊರೆಯುತ್ತಾರೆ. ಧಾರವಾಡದ ಈ ಖ್ಯಾತಿಯನ್ನು ಪಸರಿಸುವಲ್ಲಿ ದಿಗ್ಗಜರಾದ ಪಂ. ಮಲ್ಲಿಕಾರ್ಜುನ ಮನಸೂರ, ವಿದುಷಿ ಗಂಗೂಬಾಯಿ ಹಾನಗಲ್, ಪಂ. ಬಸವರಾಜ ರಾಜಗುರು, ಪಂ. ಭೀಮಸೇನ ಜೋಶಿ ಮುಂತಾದವರ ಅಮೂಲ್ಯ ಕೊಡುಗೆ ಇದೆ. ಹಾಗೆಯೇ ದೂರದ ಇಂದೋರಿನಿಂದ ಬಂದು ೧೯೧೨ ರಷ್ಟು ಹಿಂದೆಯೇ ಧಾರವಾಡವನ್ನು ತಮ್ಮ ಸಂಗೀತಸಾಧನೆಯ ತಪೋಭೂಮಿಯನ್ನಾಗಿಸಿಕೊಂಡು ಕರ್ನಾಟಕದಲ್ಲಷ್ಟೇಯಲ್ಲ, ಇಡೀ ದಕ್ಷಿಣಭಾರತಕ್ಕೆ ಸಿತಾರವನ್ನು ಪರಿಚಯಿಸಿ, ಅದನ್ನು ಜನಪ್ರಿಯಗೊಳಿಸುವಲ್ಲಿ ಅಗ್ರಗಣ್ಯರಾದ 'ಸಿತಾರರತ್ನ' ರಹಿಮತಖಾನರನ್ನು ಇತಿಹಾಸ ಮರೆಯುವಂತಿಲ್ಲ.

ಇಂತಹ ಉನ್ನತ ಸಂಗೀತಪರಂಪರೆಗೆ ಸೇರಿದ ಆರನೇ ತಲೆಮಾರಿನ ಸಿತಾರವಾದಕರು ಉಸ್ತಾದ ಬಾಲೆಖಾನ್. ೨೯-೦೮-೧೯೪೨ ರಂದು ಧಾರವಾಡದಲ್ಲಿ ಪ್ರೊ. ಅಬ್ದುಲ್ ಕರೀಮಖಾನರ ದ್ವಿತೀಯ ಪುತ್ರನಾಗಿ ಜನಿಸಿದ ಬಾಲೆಖಾನ್ ಮೀನು ನೀರಿನಲ್ಲಿ ಈಜುವಷ್ಟು ಸಹಜವಾಗಿಯೇ ಸಂಗೀತಸಾಧನೆಗೆ ತೊಡಗಿಕೊಂಡರು. ಶಾಲೆ ಸೇರುವದಕ್ಕೆ ಮೊದಲೇ ಅಜ್ಜ ರಹಿಮತ್‌ಖಾನ್ ಮತ್ತು ತಂದೆ ಪ್ರೊ. ಅಬ್ದುಲ್ ಕರೀಮಖಾನ್‌ರಿಂದ ಸಂಗೀತದೀಕ್ಷೆ ಪಡೆದರು. ಮನೆತನದಲ್ಲಿ ಒಬ್ಬರಾದರೂ ಗಾಯಕರಾಗಲಿ ಎಂದು ಬಯಸಿದ್ದ ಕರೀಮಖಾನರು ಬಾಲೆಖಾನರಿಗೆ ಹಲವು ವರ್ಷ ಗಾಯನ ಕಲಿಸಿದರು. ಬಾಲಕ ಬಾಬುಖಾನ್ (ಬಾಲೆಖಾನರ ನಿಜನಾಮ) ಅಜ್ಜ ರಹಿಮತ್‌ಖಾನರಿಂದಲೂ ಎರಡು ಚೀಜಗಳನ್ನು ಕಲಿತಿದ್ದ : ಪೂರಿಯಾ ರಾಗದಲ್ಲಿ 'ಅರಜ ಸುನೋ ದಸ್ತಗೀರ ಪೀರ ಮೊರಿ, ಸಬಪೀರನಕಿ ಪೀರ ತುಮ್ಹಿ ಹೋ...' ಮತ್ತು ಪೀಲೂ ರಾಗದಲ್ಲಿ 'ಪೀಕಿ ಬೊಲಿನಾ ಬೋಲ ಪಪೀಹಾ ಪ್ಯಾರೆ'. ಇವೆರಡೂ ಅವರ ಪ್ರಿಯರಾಗಗಳಾಗಿದ್ದವು. ಬಾಲೆ (ಅಂದರೆ ಪುಟ್ಟ) ಎಂದು ಪ್ರೀತಿಯಿಂದ ಅಜ್ಜ ಕರೆಯುತ್ತಿದ್ದ ಹೆಸರೇ ಬಾಲೆಖಾನ್ ಎಂದು ಖಾಯಂ ಆಯಿತು.

ಹನ್ನೊಂದು ವರ್ಷದವರಿದ್ದಾಗಲೇ ಮಿರಜದಲ್ಲಿ ಕಿರಾಣಾ ಘರಾಣೆಯ ಸಂಸ್ಥಾಪಕ ಉಸ್ತಾದ ಅಬ್ದುಲ್ ಕರೀಮಖಾನರ ಸ್ಮರಣಾರ್ಥ ಸಂಗೀತಾರಾಧನೆಯಲ್ಲಿ ಅವರಿಗೆ ಅತ್ಯಂತ ಪ್ರೀಯವಾಗಿದ್ದ 'ಮಿಯಾಕಿ ತೋಡಿ'ಯನ್ನು ಸುಶ್ರಾವ್ಯವಾಗಿ ಹಾಡಿ

ಶ್ರೋತೃಗಳನ್ನು ರಂಜಿಸಿದವರು ಬಾಲೆಖಾನ್..

ತಾರುಣ್ಯಕ್ಕೆ ಕಾಲಿಡುತ್ತಿದ್ದಂತೆಯೇ ಬಾಲೆಖಾನ್ ಸಿತಾರದತ್ತ ಹೆಚ್ಚು ಹೆಚ್ಚು ಆಕರ್ಷಿತರಾದರು. ಇದರಿಂದ ಕೋಪಗೊಂಡ ತಂದೆ ಸುಮಾರು ಒಂದುವರ್ಷ ಸಂಗೀತಪಾಠವನ್ನೇ ನಿಲ್ಲಿಸಿದರು. ಆದರೆ ಕೊನೆಗೆ ಗೆದ್ದುದು ಬಾಲೆಖಾನರ ಛಲ, ಸಿತಾರವಾದಕನಾಗಬೇಕೆಂಬ ಅದಮ್ಯ ಇಚ್ಛಾಶಕ್ತಿ, ಮನ ಕರಗಿ ತಂದೆ ಸಾಂಪ್ರದಾಯಿಕ, ಶಿಸ್ತಿನ, ಪೂರ್ಣಾವಧಿಯ ಸಿತಾರ ಪಾಠ ಆರಂಭಿಸಿದರು. ಗಾಯಕನಾಗಬೇಕೋ ಅಥವಾ ಬೀನ-ಸಿತಾರವಾದಕನಾಗಬೇಕೋ ಎಂಬ ತುಮುಲ ಅಜ್ಜ ರಹಿಮತ್‌ಖಾನರ ಜೀವನದಲ್ಲೂ ತಲೆದೋರಿತ್ತೆಂಬುದು ಕುತೂಹಲಕರ. ಅವರ ಕಲಿಕೆ, ರಿಯಾಜ ಗಂಭೀರವಾಗಿಯೇ ಪ್ರಾರಂಭವಾಯಿತು. ಅಣ್ಣ ಉಸ್ಮಾನಖಾನ್ ಜೊತೆಗಿರುತ್ತಿದುದು ಅನುಕೂಲವೇ ಆಯಿತು. ಸೂಕ್ಷ್ಮಗ್ರಾಹಿಯಾಗಿದ್ದ ಬಾಲೆಖಾನ್ ತಂದೆ ಬೇರೆ ಶಿಷ್ಯರಿಗೆ ಕಲಿಸುವಾಗಲೂ ಲಕ್ಷ್ಯವಿಟ್ಟು ಆಲಿಸುತ್ತಿದ್ದರು. ತಂದೆಯವರ ಅನುಪಸ್ಥಿತಿಯಲ್ಲಿ ಮತ್ತು ತಂದೆಯವರು ಆದೇಶಿಸಿದಾಗ ಅವರ ಶಿಷ್ಯರಿಗೂ ಬಾಲೆಖಾನ್ ಪಾಠ ಹೇಳಿದ್ದಿದೆ. ನಿರಂತರ ಪಾಠ, ಪರಿಶ್ರಮದ ರಿಯಾಜಗಳಿಂದ ಅವರೊಬ್ಬ ಪ್ರತಿಭಾನ್ವಿತ ಸಿತಾರವಾದಕರಾಗಿ ರೂಪುಗೊಳ್ಳಲು ಸಾಧ್ಯವಾಯಿತು. ಅವರೊಬ್ಬ ಬಾಲಪ್ರತಿಭೆಯೆಂದರೆ ಅತಿಶಯೋಕ್ತಿಯಲ್ಲ. ೧೩ ವರ್ಷದವರಿರುವಾಗಲೇ ಬೆಳಗಾವಿಯ ಆರ್ಟ್‌ಸರ್ಕಲ್ ಏರ್ಪಡಿಸಿದ್ದ ಸಂಗೀತ ಸ್ಪರ್ಧೆಯಲ್ಲಿ ಸಿತಾರವಾದನದಲ್ಲಿ ಪ್ರಥಮ ಸ್ಥಾನ ಗಳಿಸಿದವರು ಬಾಲೆಖಾನ್. ನಂತರ ಅವರು ಹಿಂತಿರುಗಿ ನೋಡಿದ್ದಿಲ್ಲ.

ಸಂಗೀತ ಸಾಧನೆಯಲ್ಲಿ ಪೂರ್ತಿಯಾಗಿ ಮುಳುಗಿದ್ದ ಬಾಲೆಖಾನರ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳಲು ಶಾಲಾ ಶಿಕ್ಷಣಕ್ಕೆ ಸಾಧ್ಯವಾಗಲಿಲ್ಲ. ಅವರ ಕುಟುಂಬ ಧಾರವಾಡ-ಪುಣೆಗಳ ಮಧ್ಯೆ ಸ್ಥಳಾಂತರಗೊಳ್ಳುತ್ತಿದ್ದ ಕಾರಣ ಅವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾಶಿಕ್ಷಣ ನಡೆದದ್ದು ಪುಣೆಯ ವೇಲನಕರ ಮತ್ತು ಧಾರವಾಡದ ಬಾಸೆಲ್ ಮಿಶನ್ ಶಾಲೆಗಳಲ್ಲಿ. ಬಾಲೆಖಾನರ ಶಾಲಾಶಿಕ್ಷಣದ ಚಿತ್ರಗಳು ಉರುಳಿದ್ದು ಎಸ್.ಎಸ್.ಎಲ್.ಸಿ. ವರೆಗೆ ಮಾತ್ರ. ಆದರೆ ಅವರ ಸಂಗೀತ ಶಿಕ್ಷಣ, ಸಾಧನೆ ಅವ್ಯಾಹತವಾಗಿತ್ತು.

ಅವರ ಕುಟುಂಬ ಪುಣೆಯಲ್ಲಿ ವಾಸವಾಗಿದ್ದಾಗ ೧೯೬೧ರ ಮಳೆಗಾಲದಲ್ಲಿ ಮುಳಾಮುಠಾ ನದಿಗೆ ಮಹಾಪೂರ ಬಂದು, ಪಾನಸೆಟ್ ಆಣೆಕಟ್ಟು ಒಡೆದು ಪುಣೆಯ ಬಹುಭಾಗ ನೀರಿನಲ್ಲಿ ಮುಳುಗಿದಾಗ ಗಾಬರಿಗೊಂಡು ಪುಣೆಯ ವಾಸ್ತವ್ಯ ಸಾಕೆಂದು ಅವರ ತಂದೆ ಕುಟುಂಬಸಹಿತ ಧಾರವಾಡಕ್ಕೆ ಮರಳಿದರು. ಕರೀಮಖಾನರು ಕರ್ನಾಟಕ ಕಾಲೇಜಿನಲ್ಲಿ ಸಿತಾರ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಹೀಗೆ ಪುಣೆಗಾದ ನಷ್ಟ ಧಾರವಾಡಕ್ಕೆ ಲಾಭವಾಯಿತು.

೧೯೬೮ ರಲ್ಲಿ ಆಕಾಶವಾಣಿಯ ಕಲಾವಿದರಾಗಿ ಮನ್ನಣೆ ಪಡೆದ ಬಾಲೆಖಾನ್ ಮುಂದೆ ೧೯೭೩ ರಲ್ಲಿ ಧಾರವಾಡ ಆಕಾಶವಾಣಿಯಲ್ಲಿ ನಿಲಯದ ಕಲಾವಿದರಾಗಿ ನಿಯುಕ್ತಿಗೊಂಡರು. ನಂತರ 'ಎ' ಶ್ರೇಣಿ ಕಲಾವಿದರಾಗಿ ಮನ್ನಣೆ ಪಡೆದರು. ಸಹಕಲಾವಿದರೊಂದಿಗೆ, ಆಕಾಶವಾಣಿಗೆ ಧ್ವನಿಮುದ್ರಣಕ್ಕಾಗಿ ಭೇಟಿ ನೀಡುತ್ತಿದ್ದ ಹಿರಿ ಕಿರಿಯ ಸಂಗೀತಗಾರರೊಂದಿಗೆ ಆತ್ಮೀಯ, ಸೌಹಾರ್ದ ಸಂಬಂಧ ಹೊಂದಿದ್ದ

ಬಾಲೆಖಾನ್ ಅವರು ಧ್ವನಿಮುದ್ರಣದ ಮೇಲ್ವಿಚಾರಣೆಯ ಕೆಲಸವನ್ನೂ ಸಂತೋಷದಿಂದಲೇ ಮಾಡುತ್ತಿದ್ದರು. ಹಲವು ಆಕಾಶವಾಣಿಯ ಕಾರ್ಯಕ್ರಮಗಳಿಗೆ ಸಂಗೀತ ಸಂಯೋಜನೆಯನ್ನೂ ಅವರು ಸಮರ್ಥವಾಗಿ ಮಾಡಿದ್ದಾರೆ. ದೇಶದಲ್ಲಿ ಖ್ಯಾತ ಸಿತಾರವಾದಕರೆಂದು ಹೆಸರು ಗಳಿಸುವ ಮೊದಲೇ ವಿದೇಶಗಳಲ್ಲಿ ಜಯಭೇರಿ ಬಾರಿಸಿದವರು ಬಾಲೆಖಾನ್. ಅವರು ವಿದೇಶ ಪ್ರವಾಸ ಕೈಕೊಂಡುದೊಂದು ಸ್ವಾರಸ್ಯಕರ ಕತೆ. ಪಂ. ಬಾಲಕೃಷ್ಣಬುವಾ ಕಪಿಲೇಶ್ವರಿಯವರು ಮುಂಬಯಿಯಲ್ಲಿ ಸರಸ್ವತಿ ಸಂಗೀತ ವಿದ್ಯಾಲಯ ನಡೆಸುತ್ತಿದ್ದರು. ೧೯೭೦ರಲ್ಲಿ ಅದರ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅತಿಥಿಕಲಾವಿದರಾಗಿ ಪಾಲ್ಗೊಂಡ ಬಾಲೇಖಾನರ ಸಿತಾರವಾದನ ಮೆಚ್ಚಿಕೊಂಡ ಷಿಪ್ಪಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾದ ಅಧ್ಯಕ್ಷ ಶ್ರೀವಾಸ್ತವ ಅವರಿಗೆ ವಿದೇಶ ಪಯಣದ ಆಮಂತ್ರಣ ನೀಡಿದರು. ಹಡಗಿನಲ್ಲಿ ಉಚಿತ ಪ್ರಯಾಣದ ಅವಕಾಶ. ಮೊದಲು ಪೂರ್ವ ಆಫ್ರಿಕಾದ ದೇಶಗಳಿಗೆ ತೆರಳಿದ ಬಾಲೆಖಾನರ ವಿದೇಶ ಯಾತ್ರೆ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಿಗೂ ವಿಸ್ತರಿಸಿತು. ಮೊಂಬಾಸಾ, ನೈರೋಬಿ, ಕಂಪಾಲಾ, ಲಂಡನ್, ಮ್ಯಾಂಚೆಸ್ಟರ್, ಪ್ಯಾರಿಸ್‌ಗಳಲ್ಲಿ ಅನೇಕ ಯಶಸ್ವಿ ಕಾರ್ಯಕ್ರಮಗಳನ್ನು ನೀಡಿ, ಅಲ್ಲಿಯ ಶ್ರೋತೃಗಳಿಂದ, ಪತ್ರಿಕೆಗಳಿಂದ, ಸಂಗೀತವಿಮರ್ಶಕರಿಂದ ಪ್ರಶಂಸೆ ಪಡೆದರು. ಅವರ ಸಿತಾರವಾದನದಿಂದ ಪ್ರಭಾವಿತಗೊಂಡ ನೈರೋಬಿಯ ಸಂಡೇ ನೇಶನ್ ಪತ್ರಿಕೆಯ ಸಂಗೀತ ಅಂಕಣಕಾರ "ಬಾಲೆಖಾನರ ಸಿತಾರ ಏನೆಲ್ಲವನ್ನೂ ಮಾಡಬಲ್ಲದು, ಅಡಿಗೆ ಮಾಡುವದೊಂದನ್ನು ಬಿಟ್ಟು" ಎಂದು ಬರೆದ. ಪ್ಯಾರಿಸಿನ ಲೆಟರ್ಸ್ ಫ್ರಾಂಚೇಸ್ ಪತ್ರಿಕೆಯ ಮಾರ್ಟಿನ್ ಕ್ಯಾಡ್ಯೂ ಬಾಲೆಖಾನರ ಸಿತಾರವಾದನ ವಿಮರ್ಶಿಸುತ್ತ "ಸಂಗೀತವೇ ಬಾಲೆಖಾನರ ಉಸಿರಾಗಿದೆ. ಅವರ ಸಿತಾರವಾದನದಲ್ಲಿ ಎದ್ದು ಕಾಣುವದೆಂದರೆ ಅಸಾಧಾರಣ ಸೂಕ್ಷ್ಮತೆ, ನವಿರು, ರೇಷ್ಮೆಬಟ್ಟೆಯ ಮೇಲೆ ಚಿತ್ರ ಬಿಡಿಸಿದಂತಹ ನಯಗಾರಿಕೆ" ಎಂದು ಹೊಗಳಿದ. ಲಂಡನ್ನಿನಲ್ಲಿ ಏಳು ತಿಂಗಳು ವಾಸ್ತವ್ಯ ಹೂಡಿದ್ದ ಬಾಲೆಖಾನ್ ಅಲ್ಲಿಯೂ ಹಲವು ಶಿಷ್ಯರಿಗೆ ಸಿತಾರ ಕಲಿಸಿದ್ದಿದೆ. ಗೌತಮ ಬುದ್ಧನನ್ನು ಕುರಿತಾದ ಬಿಬಿಸಿಯ ಟೆಲಿಫಿಲ್ಮ್‌ಗೆ ಹಿನ್ನೆಲೆ ಸಂಗೀತ ನುಡಿಸಿದ್ದಾರೆ. 'ಸೀಜನ್ಸ್ ಆಫ್ ಇಂಡಿಯಾ' ಮತ್ತು 'ಎ ಸೋಶಿಯಲ್ ಡ್ರಾಮಾ ಆನ್ ಈಸ್ಟ್ ಬೆಂಗಾಲ್' ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ.

ದೇಶದ ತುಂಬೆಲ್ಲ ಸಂಚರಿಸಿ ತಮ್ಮ ವಿಶಿಷ್ಟ ಶೈಲಿಯ ವಾದನದಿಂದ ಶ್ರೋತೃಗಳ ಮನಸೂರೆಗೊಂಡವರು ಬಾಲೆಖಾನ್. ನಿಧಾನಗತಿಯ ಆಲಾಪ, ಲಯಬದ್ಧ ಜೋಡ್, ಸ್ವರ ಮಾಧುರ್ಯಕ್ಕೆ, ರಾಗಭಾವಕ್ಕೆ ಚ್ಯುತಿ ಬಾರದಂತೆ ಗತ್‌ಗಳು ಮತ್ತು ಝಾಲಾ, ಇವುಗಳಿಗೆ ಪುಟವಿಟ್ಟಂತೆ ಗ್ವಾಲಿಯರ್-ಕಿರಾಣಾ ಘರಾಣೆಯ ಗಾಯಕೀ ಅಂಗದ ವಾದನ ಅವರ ಶೈಲಿಯಾಗಿತ್ತು. ಅವರ ವಾದನದಲ್ಲಿ ಗಿಮಿಕ್ಸ್‌ಗಳಿಗೆ ಅವಕಾಶವಿರಲಿಲ್ಲ. ಅವುಗಳ ಅವಶ್ಯಕತೆಯೂ ಇರಲಿಲ್ಲ.

ರಹಿಮತ್‌ಖಾನರು ಸ್ಥಾಪಿಸಿದ ಭಾರತೀಯ ಸಂಗೀತವಿದ್ಯಾಲಯದ ಸುವರ್ಣಮಹೋತ್ಸವದ ಸಂದರ್ಭದಲ್ಲಿ ಮೂರು ದಿನಗಳ ಸಂಗೀತೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದೇಶದ ಶ್ರೇಷ್ಠ ಸಂಗೀತ ವಿಮರ್ಶಕ, ಮುಂಬೈಯ ಶ್ರೀ ಮೋಹನ ನಾಡಕರ್ಣಿ ಬಾಲೆಖಾನರ ಸಿತಾರವಾದನವನ್ನು ಮೆಚ್ಚಿಕೊಂಡು, ಅವರೊಡನೆ

೪-೫ ದಿನ ಸುದೀರ್ಘ ಚರ್ಚೆ-ಸಂವಾದ ಮಾಡಿ, ಅವರ ಘರಾಣೆ-ಪರಂಪರೆಗಳ ಬಗ್ಗೆ ವಿವರ ಸಂಗ್ರಹಿಸಿ 'ಇಕಾನೊಮಿಕ್ ಟೈಮ್ಸ್' ದಿನಪತ್ರಿಕೆಯಲ್ಲಿ ೧೯೮೨ ರಲ್ಲಿ ಮೂರು ಸರಣಿ ಲೇಖನಗಳನ್ನು 'ಧಾರವಾಡ ಮತ್ತು ಸಿತಾರ ಸಂಸ್ಕೃತಿ' (Dharwad and Sitar Culture) ಶೀರ್ಷಿಕೆಯಡಿ ಬರೆದರು. ಕೆಲಸಮಯದ ನಂತರ ಮುಂಬೈಯಲ್ಲಿ ಬಾಲೆಖಾನರ ಸಿತಾರವಾದನವನ್ನು ಪೂರ್ತಿಯಾಗಿ ಕೇಳಿ ಅವರು 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆಯಲ್ಲಿ ಬರೆದ ವಿಮರ್ಶೆಯ ಕೆಲವು ತುಣುಕುಗಳು ಉಲ್ಲೇಖಾರ್ಹ :

"The two hour Programme by Balekhan was, in essence, an object lesson to many of our instrumental stylists,throughout the recital, the Satirist handled his delicate instrument with the utmost care and earnestness. Nor did he waste his musicianship on frivolous, Volatile enmeshments. Each note was full and pure, each phrase succinct each pattern imaginative. The quality of extemporization was far deeper, more profound in the pilu number. melodoic and rhythmic refinements truly sounded almost out of the world. Not surprisingly, Therefore, Rahimat Khan's blue blooded gharanadariis reflected so unmistakably in his grandson's music..."

'ಸ್ವರವೇ ಈಶ್ವರ' ಮತ್ತು 'ಸಂಗೀತ ಮನುಕುಲದ ವಿಶ್ವಭಾಷೆ' ಎಂದು ನಂಬಿದ್ದ ಬಾಲೇಖಾನ್ ಸಂಗೀತವನ್ನು ವೃತ್ತಿಯ ಬದಲು ಸರಸ್ವತಿಯ ಆರಾಧನೆಯನ್ನಾಗಿ ಮಾಡಿಕೊಂಡವರು.

ವೃತ್ತಿನಿರತ ಸಂಗೀತಗಾರರಾಗಿರುವದರೊಂದಿಗೆ ಬಾಲೆಖಾನ್ ಒಬ್ಬ ಅತ್ಯುತ್ತಮ ಸಂಗೀತ ಶಿಕ್ಷಕರೂ ಆಗಿದ್ದರು. ಭಾರತೀಯ ಸಂಗೀತ ವಿದ್ಯಾಲಯವನ್ನು ಮುನ್ನಡೆಸಿಕೊಂಡು ಹೋಗುವಲ್ಲಿ ತಂದೆಯವರಿಗೆ ನೀಡಿದ ಬೆಂಬಲ ಮತ್ತು ನಂತರ ಸಹೋದರರೊಂದಿಗೆ ಅವರ ಕೊನೆಯುಸಿರಿನ ವರೆಗೂ ಅದನ್ನು ಪೋಷಿಸಿ, ನೂರಾರು ಶಿಷ್ಯರಿಗೆ ಯಾವ ಭೇದಭಾವವೂ ಇಲ್ಲದೇ ಶಿಷ್ಯವತ್ಸಲರಾಗಿ ಅವರು ಮಾಡಿದ ವಿದ್ಯಾದಾನ ಸ್ತುತ್ಯರ್ಹ. ಧಾರವಾಡದಲ್ಲಷ್ಟೇ ಅಲ್ಲ, ಸುಮಾರು ಮೂರು ದಶಕಗಳ ಕಾಲ ನಿರಂತರವಾಗಿ ಪ್ರತಿ ತಿಂಗಳೂ ಎರಡನೇ ಶನಿವಾರ-ರವಿವಾರ ಬೆಂಗಳೂರಿಗೆ ತೆರಳಿ, ಅನೇಕ ಶಿಷ್ಯರಿಗೆ ಪ್ರೀತಿಯಿಂದ, ದಣಿವರಿಯದೇ ಸಿತಾರ ವಾದನದ ಪಾಠಗಳನ್ನು ಹೇಳಿದ್ದನ್ನು ಅವರ ಅಸಂಖ್ಯಾತ ಶಿಷ್ಯರು ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ೧೯೯೨ರಲ್ಲಿ ಬಾಲೆಖಾನರಿಗೆ ೫೦ ವರ್ಷ ಪೂರ್ತಿಯಾದ ಸಂದರ್ಭ, ಬಾಲೆಖಾನರ ಮೆಚ್ಚಿನ ಗಾಯಕರಾಗಿದ್ದ ಪಂ. ಭೀಮಸೇನ ಜೋಶಿಯವರ ಕಾರ್ಯಕ್ರಮವನ್ನೇರ್ಪಡಿಸಿ, ಬೆಂಗಳೂರಿನ ಪೀಟೀಲು ಚೌಡಯ್ಯ ಸ್ಮಾರಕ ಭವನದಲ್ಲಿ ಬಾಲೆಖಾನರನ್ನು ಅದ್ದೂರಿಯಾಗಿ ಸನ್ಮಾನಿಸಿದವರು ಅವರ ಶಿಷ್ಯರು, ಅಭಿಮಾನಿಗಳು, ಸ್ನೇಹಿತರು.

೨೦೦೨ ರಲ್ಲಿ ಬಾಲೆಖಾನರ ಷಷ್ಟ್ಯಬ್ದಿ ಪೂರ್ತಿ ಸಂದರ್ಭ, ಪ್ರೊ. ಸದಾನಂದ

ಕನವಳ್ಳಿಯವರ ನೇತೃತ್ವದಲ್ಲಿ ಅಭಿನಂದನ ಸಮಿತಿ ರಚನೆಯಾಗಿ ಬಾಲೆಖಾನರಿಗೆ 'ಸಿತಾರ ನವಾಜ' ಬಿರುದು ನೀಡಿ, ಅಹೋರಾತ್ರಿ ಸಂಗೀತ ಮಹೋತ್ಸವ ನಡೆಸಿ, ಧಾರವಾಡದಲ್ಲಿ ಯಥೋಚಿತ ಸನ್ಮಾನ ಸಮಾರಂಭ ನಡೆದಿದೆ.

ಅವರ ಸಂಗೀತಸಾಧನೆಯನ್ನು ಮನ್ನಿಸಿ 'ಕನಾಟಕ ಕಲಾಶ್ರೀ' ಮತ್ತು 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಗಳು ಅವರನ್ನಲಂಕರಿಸಿವೆ. ಡಾ॥ ಪುಟ್ಟರಾಜ ಪ್ರತಿಷ್ಠಾನದ ಸಮ್ಮಾನಕ್ಕೆ ಅವರು ಭಾಜನರಾಗಿದ್ದಾರೆ. ಮೂರು ಅವಧಿಗೆ ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿಯ ಸದಸ್ಯರಾಗಿ ಮತ್ತು 'ಕನಕ-ಪುರಂದರ' ಪ್ರಶಸ್ತಿ ಆಯ್ಕೆಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಕಲೆ-ಕಲಾವಿದರನ್ನು ಪೋಷಿಸಿ, ಬೆಳೆಸುವಲ್ಲಿ ಸಂಘಟನೆಗಳ ಪಾತ್ರ ಬಹು ಮುಖ್ಯ. ಕಲೆ ಸಾಮಾನ್ಯ ಜನರನ್ನು ತಲುಪಿದಾಗಲೇ ಅದನ್ನವರು ತಿಳಿಯಲು, ಆಸ್ವಾದಿಸಲು, ಪೋಷಿಸಲು ಸಾಧ್ಯ. ಈ ನಿಟ್ಟಿನಲ್ಲಿ ಬಾಲೆಖಾನರು ಒಬ್ಬ ಅತ್ಯುತ್ತಮ ಸಂಘಟಕರಾಗಿ ಮಾಡಿದ ಕಾರ್ಯ ಮೌಲಿಕವಾದದ್ದು. ೧೯೬೦ರ ದಶಕದಿಂದಲೇ ಅಂದರೆ ಅರ್ಧಶತಮಾನಕ್ಕೂ ಹೆಚ್ಚು ಕಾಲ 'ಸಿತಾರ ರತ್ನ' ರಹಿಮತ್‌ಖಾನರ ಸ್ಮರಣಾರ್ಥ ಪ್ರತಿವರ್ಷ ಧಾರವಾಡದಲ್ಲಿ ೧೯೮೧ ರವರೆಗೆ ಭಾರತೀಯ ಸಂಗೀತ ವಿದ್ಯಾಲಯದ ಆಶ್ರಯದಲ್ಲಿ, ನಂತರದ ಈ ಮೂರು ದಶಕಗಳ ಕಾಲ ಸಿತಾರ ರತ್ನ ಸಮಿತಿಯ ಆಶ್ರಯದಲ್ಲಿ ನಿರಂತರವಾಗಿ ಸಂಗೀತಸಮಾರೋಹ ನಡೆಯುತ್ತಿರುವದು ಒಂದು ದಾಖಲೆಯೇ ಎನ್ನಬಹುದು. ಪ್ರಾರಂಭದ ವರ್ಷಗಳಲ್ಲಿ ರಾತ್ರಿಯಿಂದ ಬೆಳಗಿನವರೆಗೆ ನಡೆಯುತ್ತಿದ್ದ ಸಂಗೀತಾರಾಧನೆ, ನಂತರದ ವರ್ಷಗಳಲ್ಲಿ ಬೆಳೆದು ಇಂದು ರಾಷ್ಟ್ರಖ್ಯಾತಿಯ ಸಂಗೀತಸಮಾರೋಹವಾಗಿದೆ. ಸಂಗೀತಪ್ರೇಮಿಗಳಿಗೆ ಉಚಿತ ಪ್ರವೇಶವಿರುವದು ವಿಶೇಷ. ನಾಲ್ಕು ದಶಕಗಳ ಕಾಲ ಈ ಕಾರ್ಯಕ್ರಮಗಳ ರೂವಾರಿ, ಶಕ್ತಿಯಾಗಿದ್ದವರು ಬಾಲೆಖಾನ್. ಅತಿಥಿಕಲಾವಿದರನ್ನು ಮನೆಗೆ ಆಮಂತ್ರಿಸಿ ಆದರಾತಿಥ್ಯ ನೀಡುವಲ್ಲಿಯೂ ಬಾಲೆಖಾನರದು ಎತ್ತಿದ ಕೈ. ಸಂಗೀತ ಅವರ ಮೊದಲ ಆದ್ಯತೆಯಾಗಿತ್ತು. ಅವರ ಬದ್ಧತೆ ಪ್ರಶ್ನಾತೀತ. ಸಂಭಾವನೆ ಬಗ್ಗೆ ತಲೆಕೆಡಿಸಿಕೊಂಡವರಲ್ಲ. ಸಂಘಟಕರೊಂದಿಗೆ ಸಂಭಾವನೆ ಬಗ್ಗೆ ಮಾತನಾಡಲೂ ಸಂಕೋಚಪಡುತ್ತಿದ್ದರು. ಸಂಭಾವನೆ ಕಡಿಮೆ ಇದ್ದಾಗಲೂ ದೇಶದ ಈಶಾನ್ಯಮೂಲೆಯಲ್ಲಿರುವ ಗೌಹಾತಿಯಂತಹ ದೂರದ ನಗರಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿ ಕಾರ್ಯಕ್ರಮ ನೀಡಿದ್ದಿದೆ. ಮುಂಬೈಗೆ ಒಂದು ಕಾರ್ಯಕ್ರಮಕ್ಕೆ ತೆರಳಿದಾಗ ತುಂಬಾ ಮಳೆಯಾಗಿ ರಸ್ತೆಯಲ್ಲಿ ಮೊಣಕಾಲೆತ್ತರಕ್ಕೆ ನೀರು ನಿಂತಿದ್ದರೂ ಸಹ ತಲೆಮೇಲೆ ಸ್ವತಃ ಸಿತಾರನ್ನು ಹೊತ್ತುಕೊಂಡು, ನೀರಿನಲ್ಲಿಯೇ ನಡೆದುಕೊಂಡು ಸಮಯಕ್ಕೆ ಸರಿಯಾಗಿ ಕಾರ್ಯಕ್ರಮದ ಸಭಾಭವನವನ್ನು ತಲುಪಿದವರು ಬಾಲೆಖಾನ್. ಶ್ರೋತೃಗಳ ಸಂಖ್ಯೆ ಹತ್ತಿರಲಿ, ನೂರಿರಲಿ, ಸಾವಿರವಿರಲಿ ಅವರ ಸಿತಾರವಾದನ ಪರಿಪೂರ್ಣವಾಗಿರುತ್ತಿತ್ತು. ಪೀಲು, ಖಮಾಜ, ಪಹಾಡಿ, ಶಿವರಂಜನಿ, ಭೈರವಿಯಂತಹ ಲಘು ರಾಗಗಳನ್ನು ವಿಸ್ತಾರವಾಗಿ ಗಂಟೆಗಟ್ಟಲೆ ಪ್ರಸ್ತುತಪಡಿಸುವ ಪರಿಣಿತಿ ಅವರಿಗಿತ್ತು.

ಮಿತಭಾಷಿ, ಮೃದುಭಾಷಿಯಾಗಿದ್ದ ಬಾಲೆಖಾನ್ ಸರಳತೆ, ಸಜ್ಜನಿಕೆ,

ವಿನಯವಂತಿಕೆಗಳಿಗೆ ಹೆಸರಾದವರು. ಸಮಕಾಲೀನ ಕಲಾವಿದರೊಂದಿಗೆ ಆತ್ಮೀಯ, ಸೌಹಾರ್ದಯುತ ಸಂಬಂಧವನ್ನು ಹೊಂದಿದ್ದರು. ಷಷ್ಟ್ಯಬ್ದಿ ಸಮಾರಂಭದಲ್ಲಿ ಭಾಗವಹಿಸಿ, ಬಾಲೆಖಾನರನ್ನು ಸನ್ಮಾನಿಸಿ, ಆಶೀರ್ವದಿಸುತ್ತ ಪದ್ಮವಿಭೂಷಣ ಡಾ. ಗಂಗೂಬಾಯಿ ಹಾನಗಲ್ ಹೇಳಿದ ನುಡಿಮುತ್ತುಗಳು; "ಬಾಲೆಖಾನ್ ಎಂದರೆ ಸಿತಾರ ತನ್ನಷ್ಟಕ್ಕೆ ತಾನೇ ಝೇಂಕರಿಸಲು ಪ್ರಾರಂಭವಾಗುತ್ತದೆ ಎನ್ನುವಷ್ಟು ಬಾಲೆಖಾನರ ಕೀರ್ತಿ ಪಸರಿಸಿದೆ...... ಅಜ್ಜ ರಹಿಮತ್‌ಖಾನರ ಪರಂಪರೆಯನ್ನು ಮುಂದುವರೆಸಿದ್ದಾನೆ. ಬಾಲೆಖಾನನ ವೈಶಿಷ್ಟ್ಯವೆಂದರೆ ದೊಡ್ಡದೊಡ್ಡ ನಗರಗಳಿಗೆ ಆಕರ್ಷಿತನಾಗಿ ಹೋಗದಿರುವದು. ಇದು ಹೆಮ್ಮೆಯ ಸಂಗತಿ, ಇದು ನಮ್ಮ ಕರ್ನಾಟಕಕ್ಕೆ ಸಂದ ಗೌರವವಾಗಿದೆ.

ದೇಶ ವಿದೇಶಗಳಲ್ಲಿ ಉಂಟಾದ ಗೌರವ, ಕೀರ್ತಿ ಇವುಗಳಿಂದ ಬೀಗದೆ, ಅತ್ಯಂತ ಸೌಜನ್ಯ ಮೂರ್ತಿಯಾಗಿದ್ದಾನೆ. ಎಲ್ಲರೊಂದಿಗೂ ಅದೇ ಸಖ್ಯ, ಅದೇ ವಿನಯದ ಮಾತು. ಬಾಲೆಖಾನ್ ಹಾಗೂ ಅವನ ಅಪಾರ ಶಿಷ್ಯವರ್ಗ ಸಿತಾರದ ಮಧುರ ಧ್ವನಿಯ ಮೂಲಕ ಸಂಗೀತವಿಶ್ವದಲ್ಲಿ ಹೊಸ ಚೇತನ ತುಂಬಿದ್ದಾರೆ... ಬಾಲೆಖಾನ್ ಶತಾಯುಷಿಯಾಗಿ ಸಂಗೀತವಿಶ್ವದಲ್ಲಿ ದಿಗ್ಗಜನಾಗಿ ಮೆರೆಯಲಿ"

ಅವರ ಅಭಿಮಾನಿಯಾಗಿದ್ದ ವಿಖ್ಯಾತ ಕಾದಂಬರಿಕಾರ, ಉತ್ಕಟ ಸಂಗೀತ ಪ್ರೇಮಿ ಡಾ. ಎಸ್.ಎಲ್. ಭೈರಪ್ಪ ತಮ್ಮ ಅಭಿನಂದನ ಸಂದೇಶದಲ್ಲಿ ಬರೆದ ಮಾತುಗಳು :

"...... ಅವರದು ಸದ್ದು-ಗದ್ದಲ ಮಾಡದೆ ಶಾಂತ ಗಂಭೀರ ಗತಿಯಲ್ಲಿ ಸಾಗುವ ಸಂಗೀತ; ವ್ಯಕ್ತಿತ್ವವೂ ಅಂಥದೇ. ಮೂರು ದಶಕಕ್ಕೂ ಮೀರಿ ಅವರು ಮೇಲ್ಮಟ್ಟದ ಸಿತಾರವಾದನದಿಂದ ಶ್ರೋತೃಗಳನ್ನು ತಣಿಸಿದ್ದಾರೆ; ಅದೇ ಮಟ್ಟದ ಗುರುವೂ ಆಗಿದ್ದಾರೆ. ಬಾಲೆಖಾನರನ್ನು ಹೊರತುಪಡಿಸಿದ ಧಾರವಾಡವನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ......"

ಭಾರತೀಯ ಸಂಗೀತ ವಿದ್ಯಾಲಯದ ಅಮೃತ ಮಹೋತ್ಸವದ ಅಂಗವಾಗಿ ಅಕ್ಟೋಬರ್ ೨೦೦೭ ರಲ್ಲಿ ನಡೆದ ಒಂಬತ್ತು ದಿನಗಳ ಸಂಗೀತೋತ್ಸವಕ್ಕೆ ಮಂಗಳ ಹಾಡುವಂತೆ ಕಿರಿಯ ಸಹೋದರ ಛೋಟೆ ರಹಿಮತ್‌ಖಾನನೊಂದಿಗೆ ಅವರು ನೀಡಿದ ಸಿತಾರ ಜುಗಲಬಂದಿ ಕಾರ್ಯಕ್ರಮವೇ ಅವರ ಕೊನೆಯ ಸಾರ್ವಜನಿಕ ಕಾರ್ಯಕ್ರಮ.

ನಂತರ ಕೆಲದಿನ ಅನಾರೋಗ್ಯದಿಂದ ಬಳಲಿ ಡಿಸೆಂಬರ್೨, ೨೦೦೭ರಂದು ಇಹಲೋಕ ಯಾತ್ರೆಯನ್ನು ಮುಗಿಸಿ ಸಂಗೀತಲೋಕದಲ್ಲಿ ಲೀನರಾದರು. ಆದರೆ ಅವರ ಸಂಗೀತಪರಂಪರೆಗೆ ಸಾವಿಲ್ಲ. ಅವರ ಸಹೋದರರು, ಮಕ್ಕಳು, ಶಿಷ್ಯರು ಅದನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಅವರ ಪುತ್ರರಾದ ರಯೀಸಖಾನ ಮತ್ತು ಹಫೀಜಖಾನ ಬೆಂಗಳೂರಿನಲ್ಲಿ 'ಉಸ್ತಾದ ಬಾಲೆಖಾನ್ ಮೆಮೋರಿಯಲ್ ಟ್ರಸ್ಟ್' ಸ್ಥಾಪಿಸಿ, ಅವರ ನೆನಪಿನಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಧಾರವಾಡದಲ್ಲಿ ಭಾರತೀಯ ಸಂಗೀತ ವಿದ್ಯಾಲಯದ ಆಶ್ರಯದಲ್ಲಿ ಪ್ರತಿವರ್ಷ ಉಸ್ತಾದ ಬಾಲೆಖಾನರ ಸ್ಮರಣಾರ್ಥ ಸಂಗೀತೋತ್ಸವ ನಡೆಯುತ್ತಿದೆ.

■■■



ಡಾ. ಬಿಂದುಮಾಧವ ಡಿ. ಪಾಠಕ

# ಸಿತಾರ ರುದ್ರವೀಣಾವಾದಕ ಸಂಗೀತಜ್ಞ
# ಡಾ. ಬಿಂದುಮಾಧವ ಡಿ. ಪಾಠಕ
# (೧೯೩೫-೨೦೦೪)

● ಪ್ರೊ. ರಾಮಚಂದ್ರ ವಿ. ಹೆಗಡೆ, ಹಳ್ಳದಕ್ಕೈ

ಭಾರತೀಯ ಸಂಗೀತಪರಂಪರೆಗೆ ಪ್ರಾಚೀನ ಇತಿಹಾಸವಿದೆ. ಅದರಲ್ಲೂ ಹಿಂದುಸ್ತಾನಿ ಸಂಗೀತಕ್ಕೆ ಅತಿ ಮಹತ್ವದ ಸ್ಥಾನವಿದೆ. ಈ ಹಿಂದುಸ್ತಾನೀ ಸಂಗೀತದಲ್ಲಿ ಪ್ರಮುಖವಾಗಿ ಎರಡು ವಿಭಾಗಗಳಿವೆ. ಅವುಗಳೆಂದರೆ ಗಾಯನ ಹಾಗೂ ವಾದನ. ಗಾಯನದಷ್ಟೇ ಪ್ರಮುಖವಾದದ್ದು ಈ ವಾದ್ಯಸಂಗೀತ. ಈ ವಾದ್ಯಸಂಗೀತದಲ್ಲಿ ಅನೇಕ ಪ್ರಕಾರಗಳಿವೆ. ಇವುಗಳಲ್ಲಿ ಗಂಭೀರ ವಾದ್ಯವಾದ ರುದ್ರವೀಣೆ ಪ್ರಾಚೀನ ಭಾರತದ ವಾದ್ಯಗಳಲ್ಲಿ ಅತ್ಯಂತ ಹಳೆಯ ವಾದ್ಯವಾಗಿದೆ.

ಈ ರುದ್ರವೀಣೆ ನುಡಿಸುವ ಕಲಾವಿದರು ಅತ್ಯಂತ ವಿರಳ. ಉತ್ತರ ಭಾರತದ ಅಲ್ಲಲ್ಲಿ ಕೆಲವೇ ಕಲಾವಿದರು ಈ ವಾದ್ಯವನ್ನು ಅರಿತಿದ್ದರು. ಇಡೀ ದಕ್ಷಿಣ ಭಾರತದಲ್ಲಿ ಸಿತಾರ ಮತ್ತು ರುದ್ರವೀಣೆ ನುಡಿಸುವ ಏಕೈಕ ಕಲಾವಿದರೆಂದರೆ ನಮ್ಮ ಹುಬ್ಬಳ್ಳಿಯ ಡಾ. ಬಿಂದುಮಾಧವ ಡಿ. ಪಾಠಕರಾಗಿದ್ದರು. ಕಳೆದ ನಾಲ್ಕು ದಶಕಗಳಿಂದ ಸಂಗೀತಶಾಸ್ತ್ರ, ಸಿತಾರ ಮತ್ತು ರುದ್ರವೀಣೆಯಲ್ಲಿ ಅದ್ಭುತ ಸಾಧನೆ ಮಾಡಿರುವ ಕರ್ನಾಟಕ ಕಂಡ ಏಕೈಕ ಸಾಧಕರಾಗಿದ್ದಾರೆ. ಈಗಾಗಲೇ ಕನಸಿನ ಮಾತಾಗಿರುವ ರುದ್ರವೀಣೆಯನ್ನು ಕೈಗೆತ್ತಿಕೊಂಡು ಅದಕ್ಕೆ ರಾಷ್ಟ್ರೀಯ ಸ್ಥಾನಮಾನ ಕಲ್ಪಿಸಿಕೊಟ್ಟವರಲ್ಲಿ ಡಾ. ಬಿ. ಡಿ. ಪಾಠಕರು ಮೊದಲಿಗರು.

ರುದ್ರವೀಣೆ ಅತ್ಯಂತ ಗಂಭೀರ ಸ್ವರ ಹೊಂದಿದೆ. ರುದ್ರವೀಣೆಗೆ "ಬೀನ್" ಅಂತಲೂ ಕರೆಯುತ್ತಾರೆ. ದಕ್ಷಿಣ ಭಾರತದ ವೀಣೆಗೆ "ಸರಸ್ವತಿ ವೀಣೆ" ಎಂತಲೂ ಉತ್ತರ ಭಾರತದಲ್ಲಿ "ರುದ್ರವೀಣೆ" ಎಂತಲೂ ಕರೆಯುವ ವಾಡಿಕೆ ಇದೆ. ಭಗವಾನ್ ಶಂಕರನು ಪಾರ್ವತಿಯು ನಿದ್ರಿಸುವುದನ್ನು ನೋಡಿ ಆ ಶಯನಮುದ್ರೆಯಿಂದ ಪ್ರೇರಿತನಾಗಿ ಈ ವೀಣೆಯನ್ನು ನಿರ್ಮಾಣ ಮಾಡಿದನೆಂಬ ಪ್ರತೀತಿ ಇದೆ. ಇದರಿಂದಲೇ ಅತೀ ಭಯಂಕರನಾದ ಶಿವನಿಂದ ನಿರ್ಮಿಸಲ್ಪಟ್ಟ ಈ ವೀಣೆಗೆ ರುದ್ರವೀಣೆ ಎಂಬ ಹೆಸರು ಬಂದಿದೆ. ಖ್ಯಾತ ಸಂಗೀತಗಾರ "ಉಸ್ತಾದ ಅಸದ್ ಅಲಿ ಖಾನ್" ಅವರ ಪ್ರಕಾರ ಎಲ್ಲ ರೀತಿಯ ತಂತಿವಾದ್ಯಗಳಿಗೆ ಈ ರುದ್ರವೀಣೆಯೇ ಮಾತೃಸ್ಥಾನೀಯವಾಗಿದೆ. ಮೊದಮೊದಲು ಗಾಯನಕ್ಕೆ ಸಾಥಿಯಾಗಿ ಬಳಸಲ್ಪಟ್ಟ ಈ ವಾದನ ನಂತರದಲ್ಲಿ ಸ್ವತಂತ್ರ ವಾದ್ಯವಾಗಿ ಬೆಳೆಯಿತು. ನಂತರದ ದಿನಗಳಲ್ಲಿ ಕೆಲವು ಪ್ರಸಿದ್ಧ ಸಂಗೀತಗಾರರು ಈ ಭಯಂಕರ ವಾದ್ಯವನ್ನು ಪಳಗಿಸಿಕೊಂಡರು.

ರುದ್ರವೀಣಾ ಪರಂಪರೆಯಲ್ಲಿ ಅನೇಕರು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು

ಸ್ಥಾಪಿಸಿದ್ದಾರೆ. ಈ ವೀಣೆಯಲ್ಲಿ "ಸೇನಿಯ ಘರಾನೆ" ಅತ್ಯಂತ ಮಹತ್ವ ಪಡೆದಿದೆ. "ಅಮೃತ ಸೇನ್, ನಿಹಾಲ ಸೇನ್, ನ್ಯಾಮತ್ ಖಾನ್, ಇಮಾದಾದ ಖಾನ್, ಇನಾಯತ್ ಖಾನ್" ತುಂಬಾ ಪ್ರಸಿದ್ಧರು. ಜೊತೆಗೆ ಇಂದೋರದ ಬಂದೇ ಅಲಿ ಖಾನ್, ರಾಂಪುರ ವಜೀರ್ ಖಾನ್, ಮುರಾದ್ ಖಾನ್, ದೇವಾಸದ ರಜಬ ಅಲಿ ಖಾನ್, ಧಾರವಾಡದ ಸಿತಾರರತ್ನ ರಹಮತ್ ಖಾನ್, ಜಿಯಾ ಮೊಯಿನುದ್ದೀನ್ ಡಾಗರರು ಅತೀ ಶ್ರೇಷ್ಠ ರುದ್ರವೀಣಾವಾದಕರಾಗಿದ್ದರು. ಇವರೊಂದಿಗೆ ಕಣ್ಮರೆಯಾಗುತ್ತಿದ್ದ ಈ ರುದ್ರವೀಣೆಯನ್ನು ಮುಂದಿನ ಪರಂಪರೆಗೆ ಸಾಗಿಸುವಲ್ಲಿ ಯಶಸ್ವಿಯಾದವರೆಂದರೆ ದಿಲ್ಲಿಯ ಅಸದ್ ಅಲಿ ಖಾನ್ ಮತ್ತು ಹುಬ್ಬಳ್ಳಿಯ ಡಾ. ಬಿಂದುಮಾಧವ ಡಿ. ಪಾಠಕರವರು.

ಡಾ. ಬಿಂದುಮಾಧವ ಡಿ. ಪಾಠಕರವರು ವೈದಿಕ ಮನೆತನದಲ್ಲಿ ಜನಿಸಿದವರು. ಮೊದಲೇ ಸಂಗೀತ ಪರಂಪರೆ ಇದ್ದ ಈ ಮನೆತನ ಹುಬ್ಬಳ್ಳಿಯಲ್ಲಿ ನೆಲೆಸಿತ್ತು. ಮೂಲತಃ ಧಾರವಾಡ ಜಿಲ್ಲೆಯ ಬಂಕಾಪುರದಿಂದ ಹುಬ್ಬಳ್ಳಿಗೆ ಬಂದು ನೆಲೆಸಿದ ಈ ಮನೆತನ ಸಂಗೀತ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿತ್ತು. ಶ್ರೀಯುತ ದತ್ತೋ ಪಂತ ಪಾಠಕ ಮತ್ತು ಸಹೋದರ ಸುಖಾರಾಮ ಪಾಠಕ ಇವರಿಬ್ಬರೂ ಸಿತಾರ ಮತ್ತು ರುದ್ರವೀಣೆಯನ್ನು ಪ್ರಸಿದ್ಧ ಬೀನ್‌ಕಾರ ಉಸ್ತಾದ ಮುರಾದ ಖಾನ್ ಅವರಿಂದ ಕರಗತ ಮಾಡಿಕೊಂಡಿದ್ದರು. ಶ್ರೀ ದತ್ತೋಪಂತ ಪಾಠಕ ಮತ್ತು ಉಮಾಬಾಯಿಯರ ಪುತ್ರನಾಗಿ ೧೯೩೫ ಎಪ್ರಿಲ್ ೯ರಂದು ಶ್ರೀಯುತ ಬಿಂದುಮಾಧವ ಪಾಠಕ ಜನಿಸಿದರು. ತನ್ನ ಮಗ ಬಿಂದುಮಾಧವನು ಶಿಕ್ಷಣ ಪಡೆದು ವೈದ್ಯನಾಗಬೇಕೆಂಬುದು ತಂದೆಯ ಕನಸಾಗಿತ್ತು. ಆದರೆ ತಂದೆ ನುಡಿಸುವ ರುದ್ರವೀಣೆಯ ಗಾಂಭಿರ್ಯದ ನಾದ ಮಗನ ಮನಸ್ಸಿನಲ್ಲಿ ತಾಂಡವವಾಡುತ್ತಿತ್ತು. ತಂದೆಗೆ ಅರಿವಿಲ್ಲದೆ ತಂದೆಯ ವೀಣೆಯನ್ನು ನುಡಿಸುತ್ತಿದ್ದ ಮಾಧವ ಆ ಸಂಗೀತನಾದವನ್ನು ತನ್ನೊಳಗೆ ರೂಢಿಸಿಕೊಂಡಿದ್ದನು. ಬಿಂದುಮಾಧವ ಪಾಠಕರು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ದೆಹಲಿಯಲ್ಲಿ ಯುವಜನೋತ್ಸವ ನಡೆದಿತ್ತು. ತನ್ನ ತಂದೆಗೆ ತಿಳಿಯದಂತೆ ಆ ರುದ್ರವೀಣೆಯೊಂದಿಗೆ ದೆಹಲಿಗೆ ತೆರಳಿದ ಬಿಂದುಮಾಧವ ಶ್ರೇಷ್ಠ ಪ್ರಶಸ್ತಿಯೊಂದಿಗೆ ಮರಳಿದ ಬಳಿಕವೇ ತಂದೆ ದತ್ತೋಪಂತ ಪಾಠಕರಿಗೆ ಮಗನ ಸಂಗೀತಪ್ರತಿಭೆಯು ಅರಿವಾಯಿತು. ಮಗನ ಪ್ರತಿಭೆಗೆ ಸೋತ ತಂದೆ ಮಗನನ್ನು ಶಾಸ್ತ್ರೋಕ್ತವಾಗಿ ಶಿಷ್ಯನನ್ನಾಗಿ ಸ್ವೀಕರಿಸಿ ಸಂಗೀತ ಪ್ರಾರಂಭಿಸಿದರು. ಅಸಾಧಾರಣ ಪ್ರತಿಭೆಯನ್ನು ಹೊಂದಿದ ಮಗನನ್ನು ಮಧ್ಯಪ್ರದೇಶದ ದೇವಾಸದಲ್ಲಿನ ಪ್ರಸಿದ್ಧ ಬೀನ್ ವಾದಕ ಉಸ್ತಾದ ರಜಬ ಅಲಿ ಖಾನರಲ್ಲಿಗೆ ಹೆಚ್ಚಿನ ಅಭ್ಯಾಸಕ್ಕಾಗಿ ಕಳುಹಿಸಿದರು. ಅಲ್ಲಿನ ಕಠಿಣ ಪರಿಶ್ರಮ ಮತ್ತು ಗುರುಸೇವೆಗೆ ಹೆದರಿದ ಬಿಂದುಮಾಧವ ಕೆಲವೇ ದಿನಗಳಲ್ಲಿ ಊರಿಗೆ ಮರಳಿದರು. ತಂದೆಗೆ ತನಗಿಂತಲೂ ಮಗ ಎತ್ತರಕ್ಕೆ ಏರುವ ಹಂಬಲವಿತ್ತು. ಪುನಃ ಅಲ್ಲಿಗೆ ಕಳುಹಿಸಿದರು. ಕೆಲವು ವರ್ಷಗಳ ಕಾಲ ಕಠಿಣ ಅಭ್ಯಾಸ ಮಾಡಿದ ಬಳಿಕ ದೇಶದ ಶ್ರೇಷ್ಠ ಸಿತಾರ ವಾದಕರಾಗಿಯೂ ಮತ್ತು ಕಿರಿಯ ತಲೆಮಾರುಗಳಲ್ಲಿ ಏಕೈಕ ಶ್ರೇಷ್ಠ ರುದ್ರವೀಣಾವಾದಕರಾಗಿಯೂ ಪ್ರಸಿದ್ಧರಾಗಿ ಊರಿಗೆ ಮರಳಿದರು.

ಶಿಸ್ತು, ನಿಷ್ಠೆಯಿಂದ ಸಂಗೀತದ ಅಭ್ಯಾಸ ಮಾಡಿ ಭಾರತದ ಶ್ರೇಷ್ಠ ಸಂಗೀತಗಾರನಾಗಿ ಬೆಳೆದುನಿಂತ ಶ್ರೀ ಬಿಂದುಮಾಧವ ಪಾಠಕರು ೧೯೫೦ ರಿಂದಲೇ

ಸಾರ್ವಜನಿಕ ಸಂಗೀತ ಕಚೇರಿ ನಡೆಸಿದರು. ೧೯೫೬ರಲ್ಲಿ ಅಂತರ್ ವಿಶ್ವವಿದ್ಯಾಲಯ ಯುವಜನೋತ್ಸವದಲ್ಲಿ ಬಹುಮಾನ ಪಡೆದ ಇವರು ಸಾರ್ವಜನಿಕ ಕಾರ್ಯಕ್ರಮಕ್ಕೆ ಸೈ ಎನಿಸಿಕೊಂಡರು. ೧೯೫೮ರಲ್ಲಿ ಅಖಿಲ ಭಾರತ ಆಕಾಶವಾಣಿಯ ಎರಡನೆ ಬಹುಮಾನ ಪಡೆದು ಭಾರತಕ್ಕೆ ಎರಡನೆಯವನಾಗಿ ಬೆಳೆದುನಿಂತರು. ನಂತರದ ದಿನಗಳಲ್ಲಿ ಒಂದೊಂದೇ ಮಹತ್ತರ ಮೆಟ್ಟಿಲುಗಳನ್ನು ಏರತೊಡಗಿದರು. ೧೯೫೮ ರಲ್ಲಿ ನಡೆದ ಲಖನೌ ಕಾಂಗ್ರೆಸ್ ಅಧಿವೇಶನ, ೧೯೫೯ ರಲ್ಲಿ ದೆಹಲಿಯ ನೆಹರೂ ನಿವಾಸ ತೀನ್‌ಮೂರ್ತಿ ಭವನ, ೧೯೭೭ ರಲ್ಲಿ ಪುಣೆಯ ಸವಾಯಿ ಗಂಧರ್ವ ಪುಣ್ಯತಿಥಿ ಸಭೆಯಲ್ಲಿ ಯಶಸ್ವಿ ಕಲಾವಿದನಾಗಿ ಬೆಳೆದುನಿಂತರು. ೧೯೮೨ರಲ್ಲಿ ಭೂಪಾಲನಲ್ಲಿ ನಡೆದ "ದುರ್ಲಭ ವಾದ್ಯವಿನೋದ" ಸಮ್ಮೇಳನದಲ್ಲಿ ಭಾಗವಹಿಸಿ ರುದ್ರವೀಣೆಯ ಪರಂಪರೆ ಮುಂದುವರೆಯುವ ಆಶಾಭಾವನೆಯನ್ನು ಮೂಡಿಸಿದರು. ಮೈಸೂರು ಉತ್ಸವ, ಆಕಾಶವಾಣಿ ಕಾರ್ಯಕ್ರಮ ಮುಂತಾದೆಡೆ ರುದ್ರವೀಣೆ ನುಡಿಸಿ ಅಪಾರ ಜನಮೆಚ್ಚುಗೆ ಪಡೆದರು. ಇವರ ಈ ಕಲಾಪ್ರತಿಭೆಯಿಂದಾಗಿ ಇವರನ್ನು ಆಕಾಶವಾಣಿ ಮತ್ತು ದೂರದರ್ಶನ "ಎ-ಟಾಪ್" ಕಲಾವಿದರೆಂದು ಪರಿಗಣಿಸಿತು.

ಡಾ. ಬಿಂದುಮಾಧವ ಪಾಠಕರವರ ಬೀನ್ ವಾದನವು ದ್ರುಪದ್ ಅಂಗದ ಗೌರಿ ಹಾರಿ ವಾಣಿಯದು ಮತ್ತು ಕಿರಾಣಾ ಘರಾನಾದ ಖ್ಯಾಲ್ ಅಂಗದ್ದಾಗಿದೆ. ಸ್ವರಶುದ್ಧತೆ, ಸ್ವರದಿಂದ ಸ್ವರಕ್ಕೆ ಭಡತ, ರಾಗದ ವಿಸ್ತಾರ, ಜೋಡ, ಝಾಲ ಜೊತೆಗೆ ಸಾಂಪ್ರದಾಯಿಕ ಗತ್‌ಗಳ ಶೈಲಿ ಇವರ ಬೀನ್‌ವಾದನದಲ್ಲಿ ಸಮೃದ್ಧವಾಗಿದ್ದವು. ಇದರ ಜೊತೆಗೆ ಮತ್ತೊಂದು ವೈಶಿಷ್ಟ್ಯವೆಂದರೆ ಪಖಾವಾಜ ಬದಲಿಗೆ ತಬಲಾಸಾಥಿಯೊಂದಿಗೆ ರುದ್ರವೀಣೆ ನುಡಿಸುತ್ತಿರುವುದಾಗಿದೆ.

೧೯೬೩ ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಎಂ.ಎಂ. ಕಾಲೇಜಿನಲ್ಲಿ ಸಂಗೀತ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದರು. ಉ.ಕ. ಜಿಲ್ಲೆಯ ಸಮಸ್ತ ಸಂಗೀತ ಆಸಕ್ತರಲ್ಲಿ ಸಿತಾರ ಮತ್ತು ರುದ್ರವೀಣೆಯ ಅಭಿರುಚಿಯನ್ನು ಬೆಳೆಸಿದರು. ೧೮ ವರ್ಷಗಳ ಕಾಲ ಅಧ್ಯಾಪಕರಾಗಿ ಅನೇಕ ಸಂಗೀತ ಕಾರ್ಯಕ್ರಮ ನೀಡುವ ಮೂಲಕ ಜನಾನುರಾಗಿಯಾಗಿ ಮನೆಮಾತಾದರು. ಅನೇಕ ವಿದ್ಯಾರ್ಥಿಗಳನ್ನು ಸಂಗೀತಗಾರರನ್ನಾಗಿ ಬೆಳೆಸಿದರು. ಉ.ಕ ಜಿಲ್ಲೆಯಲ್ಲಿ ಅನೇಕ ಸಿತಾರವಾದಕರನ್ನು ಹುಟ್ಟುಹಾಕಿದರು. ನಂತರದಲ್ಲಿ ದೇಶದ ಎಲ್ಲೆಡೆಯಲ್ಲಿ ಈ ವಾದ್ಯಗಳನ್ನು ಪರಿಚಯಿಸಬೇಕೆಂಬ ಹಂಬಲದಿಂದ ಉನ್ನತ ಪದವಿ ಪಡೆಯಲು ನಿರ್ಧರಿಸಿದರು. ಕಾರಣ ಹಿಂದಿ ಎಂ.ಎ. ೧೯೬೫ರಲ್ಲಿ, ೧೯೬೬ರಲ್ಲಿ ಸಂಗೀತ ಎಂ.ಎ., ೧೯೭೨ರಲ್ಲಿ ಇಂಗ್ಲೀಷ್ ಎಂ.ಎ. ಮುಗಿಸಿದರು. ವಿದೇಶದಲ್ಲೂ ಈ ರುದ್ರವೀಣೆಯನ್ನು ಪಸರಿಸಬೇಕೆಂದು ಫ್ರೆಂಚ್ ಸರ್ಟಿಫಿಕೇಟ್ ಕೋರ್ಸ್ ಕೂಡ ಮುಗಿಸಿದರು. ನಂತರ ತನ್ನ ಸಂಗೀತಜ್ಞಾನಾರ್ಜನೆಯಿಂದ ಸಂಗೀತವಿಷಯದಲ್ಲಿ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಪಡೆದು ೧೯೮೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಗೀತ ವಿಭಾಗದ ಪ್ರಾಧ್ಯಾಪಕರಾಗಿ, ನಂತರ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ೧೯೯೫ರಲ್ಲಿ ಸೇವಾ ನಿವೃತ್ತಿ ಹೊಂದಿದರು.

ಕನ್ನಡ, ಹಿಂದಿ, ಮರಾಠಿ, ಇಂಗ್ಲೀಷ್, ಕೊಂಕಣಿ ಮತ್ತು ಫ್ರೆಂಚ್‌ಭಾಷೆಯನ್ನು

ಕರಗತ ಮಾಡಿಕೊಂಡ ಬಿಂದುಮಾಧವ ಪಾಠಕರವರು ಎಲ್ಲ ಭಾಷೆಗಳಲ್ಲಿ ಸಂಗೀತದ ಕುರಿತು ಅನೇಕ ವಿದ್ವತ್‌ಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಜೊತೆಗೆ ಇವರ "ಭಾರತೀಯ ಸಂಗೀತ ಚರಿತ್ರೆ" ಎಂಬ ಗ್ರಂಥವನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದೆ. ಇದಕ್ಕೆ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯು ಅತ್ಯುತ್ತಮ ಸಂಗೀತ ಗ್ರಂಥ ಎಂದು ಪರಿಗಣಿಸಿ ಪ್ರಶಸ್ತಿಯೊಂದಿಗೆ ಗೌರವಿಸಿದೆ. ಸಂಗೀತದಿಗ್ಗಜರಾದ ಡಾ. ಪುಟ್ಟರಾಜ ಗವಾಯಿ ಕುರಿತ ಗ್ರಂಥವನ್ನು ಇದೇ ಅಕಾಡೆಮಿ ಪ್ರಕಟಿಸಿದೆ. ಅನೇಕ ಶಿಷ್ಯರು ಇವರ ಜ್ಞಾನಧಾರೆಯಿಂದಲೇ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ.


ರುದ್ರವೀಣೆ ಅಪರೂಪದ ವಾದನ. ಇದು ಮುಂದಿನ ತಲೆಮಾರುಗಳಿಗೆ ಸಾಗಬೇಕು ಎಂಬುದು ಅವರ ಉತ್ಕಟ ಆಸೆ ಆಗಿತ್ತು. ಅದಕ್ಕಾಗಿ ಸದಾ ಶ್ರಮಿಸುತ್ತಿದ್ದ ಅವರು ಕೊನೆ ಪ್ರಯತ್ನವಾಗಿ ಕೆಲವೇ ಕೆಲವು ಶಿಷ್ಯರನ್ನು ಸನ್ನದ್ಧಗೊಳಿಸಿದರು. ಅವರಲ್ಲಿ ಈಗ, ಪ್ರೊ. ರಾಮಚಂದ್ರ ವಿ. ಹೆಗಡೆ, ಹಳ್ಳದಕೈ, ಶ್ರೀಮತಿ. ಜ್ಯೋತಿ ಹೆಗಡೆ, ಶಿರಸಿ ಇವರು ಜಗತ್ತಿನ ಏಕೈಕ ಮಹಿಳಾ ರುದ್ರವೀಣಾ ವಾದಕಿ. ಬಿಂದುಮಾಧವರ ಪುತ್ರನಾದ ಡಾ॥ ಶ್ರೀಕಾಂತ ಪಾಠಕ ಇವರೆಲ್ಲರೂ ರುದ್ರವೀಣಾ ವಾದನವನ್ನು ಆಧುನಿಕ ಜಗತ್ತಿಗೆ ಪರಿಚಯಿಸುತ್ತ ತಮ್ಮ ಸಂಗೀತಸೇವೆಯನ್ನು ಮುಂದುವರೆಸಿದ್ದಾರೆ. ದಕ್ಷಿಣ ಭಾರತದಲ್ಲಿ ಈ ಮೂವರನ್ನು ಹೊರತುಪಡಿಸಿದರೆ ಬೇರ‍್ಯಾರೂ ಈ ರುದ್ರವೀಣೆಯ ವಾದಕರನ್ನು ಕಾಣುವಂತಿಲ್ಲ. ಪ್ರಾಯಶಃ ಇವರೊಂದಿಗೆ ಈ ರುದ್ರವೀಣಾ ಸಂಗೀತ ಕಣ್ಮರೆಯಾದರೂ ಆಶ್ಚರ್ಯವಿಲ್ಲ. ಆದರೂ ಒಂದು ಆಶಾಭಾವನೆ ಇದೆ. ಪ್ರೊ. ರಾಮಚಂದ್ರ ಹೆಗಡೆ ಶಿರಸಿ (ಡಾ, ಬಿಂದುಮಾಧವ ಪಾಠಕರವರ ಹಿರಿಯ ಶಿಷ್ಯ) ತನ್ನ ಮಗನಾದ ಶ್ರೀ ಸುಬ್ರಹ್ಮಣ್ಯ ಹೆಗಡೆಯವರಿಗೆ ತರಬೇತಿ ನೀಡಿ ಸಿತಾರ ಮತ್ತು ರುದ್ರವೀಣೆಯಲ್ಲಿ ಪ್ರಾವೀಣ್ಯ ಪಡೆಯುವಲ್ಲಿ ಸಫಲರಾಗಿದ್ದಾರೆ. ದಕ್ಷಿಣ ಭಾರತದ ಏಕೈಕ ರುದ್ರವೀಣೆ ಆಶಾಭಾವನೆ ಇವರೊಂದೇ ಎನ್ನುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಸಂಗೀತವನ್ನು ಬೆಳೆಸುವ ಪ್ರವೃತ್ತಿ ಹೊಂದಿದ್ದ ಬಿ.ಡಿ.ಪಾಠಕರವರಿಗೆ ಅನೇಕ ಉನ್ನತ ಸ್ಥಾನಗಳು ದೊರೆತಿವೆ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಗೋವಾ ಕಲಾ ಅಕಾಡೆಮಿಯ ಸಂಗೀತ ಪಠ್ಯ ವಿಷಯ ಸಮಿತಿಯ ಸದಸ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಪಶ್ಚಿಮ ಬಂಗಾಲದ ಇಂಡಿಯನ್ ಮ್ಯೂಸಿಕ್ ಕಾಂಗ್ರೆಸ್‌ನ ಸದಸ್ಯರಾಗಿ, ಬರೋಡಾದ ಇಂಡಿಯನ್ ಮ್ಯೂಸಿಕ್ ಲೋಜಿಕಲ್ ಸೊಸೈಟಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಸಂಗೀತಶಾಸ್ತ್ರ ಮತ್ತು ಪ್ರಯೋಗ ಎರಡರಲ್ಲಿಯೂ ಪ್ರಾವೀಣ್ಯವನ್ನು ಪಡೆದ

ಡಾ.ಬಿ.ಡಿ.ಪಾಠಕರಿಗೆ ಅನೇಕ ಪ್ರಶಸ್ತಿಗಳು ಸಂದಿವೆ. ಕರ್ನಾಟಕ ನೃತ್ಯ ಸಂಗೀತ ಅಕಾಡೆಮಿಯ "ಕರ್ನಾಟಕ ಕಲಾತಿಲಕ" ಪ್ರಶಸ್ತಿ, ಕರ್ನಾಟಕ ಸರಕಾರದ 'ಕನಕ ಪುರಂದರ ಪ್ರಶಸ್ತಿ, "ಆರ್ಯಭಟ" ಪ್ರಶಸ್ತಿ ಮತ್ತು "ಸಂಗೀತ ವಿದ್ಯಾ ಪ್ರಪೂರ್ಣ" ಪ್ರಶಸ್ತಿಗಳು ದೊರೆತಿವೆ. ಸಂಗೀತ ಪರಂಪರೆಗೆ ಶ್ರಮಿಸಿ, ಅನೇಕ ಕಿರಿಯ ಸಂಗೀತ ಕಲಾವಿದರನ್ನು ಜಗತ್ತಿಗೆ ಪರಿಚಯಿಸಿ ಸಂಗೀತಶಾರದೆಯನ್ನು ಆರಾಧಿಸಿ ದಿನಾಂಕ ೦೪.೦೨.೨೦೦೪ರಂದು ಶಾರದೆಯ ಮಡಿಲು ಸೇರಿ ದಕ್ಷಿಣಭಾರತದ ರುದ್ರವೀಣೆಯ ಸೂರ್ಯ ಅಸ್ತಂಗತವಾಯಿತು..

■ ■ ■

ಸಾಂಸ್ಕೃತಿಕ ಧೃವ ತಾರೆಗಳು

# ರಂಗಭೂಮಿ





ಸವಣೂರು ವಾಮನರಾವ್ ಮಾಸ್ತರ

# ವೃತ್ತಿ ರಂಗಭೂಮಿಯ ಆದರಣೀಯ ಸವಣೂರು ವಾಮನರಾವ್ ಮಾಸ್ತರ (೧೮೮೩-೧೯೩೫)

● ಡಾ. ಪ್ರಕಾಶ ಗರುಡ

ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯ ಉಚ್ಛ್ರಾಯಕಾಲದಲ್ಲಿ ತಮ್ಮ ವಿಶ್ವ ಗುಣಾದರ್ಶ ನಾಟಕ ಕಂಪನಿಯ ಪ್ರದರ್ಶನಗಳ ಮೂಲಕ ರಂಗ ಸಂಗೀತಕ್ಕೆ ಒಂದು ಗಟ್ಟಿತನವನ್ನು ತಂದುಕೊಟ್ಟವರಲ್ಲಿ ನಟ, ನಾಟಕಕಾರಾದ ಸವಣೂರು ವಾಮನರಾವ್ ಮಾಸ್ತರರು ಅಗ್ರಗಣ್ಯರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆಗಿನ ವೃತ್ತಿ ರಂಗಭೂಮಿಯ ನಾಟಕ ಪ್ರಯೋಗಗಳಲ್ಲಿ ಶಿವಮೂರ್ತಿಸ್ವಾಮಿ ಕಣಬರಗಿಮಠ ಮತ್ತು ಶಿರಹಟ್ಟಿ ವೆಂಕೋಬರಾಯರ ನಾಟಕಗಳು ದೃಶ್ಯವೈಭವಕ್ಕೆ ಹೆಸರಾದರೆ ಗರುಡ ಸದಾಶಿವರಾಯರದು ನಾಟಕ, ಸಾಹಿತ್ಯ ಹಾಗೂ ಅಭಿನಯಕೌಶಲ್ಯಕ್ಕೆ ಜನಪ್ರಿಯವಾಗಿತ್ತು, ಹಲಗೇರಿ ಜಟ್ಟೆಪ್ಪನವರದು ಸುಸಂಬದ್ಧ ಹಾಸ್ಯನಾಟಕಗಳಿಗೆ ಪ್ರಸಿದ್ಧವಾದರೆ ವಾಮನರಾವ ಮಾಸ್ತರ ಕಂಪನಿಯ ನಾಟಕಗಳು ಅವುಗಳಲ್ಲಿಯ ಸಂಗೀತಕ್ಕೆ ಹೆಸರುವಾಸಿಯಾಗಿದ್ದವು.

ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯು ತನ್ನ ಉಚ್ಛ್ರಾಯಕಾಲದಲ್ಲಿ ಚತುರ್ದಿಕ್ಕಿನಲ್ಲಿ ಬೆಳೆದು ಆಗಿನ ಜನಮಾನಸದಲ್ಲಿ ತನ್ನ ಛಾಪನ್ನು ಮೂಡಿಸಿದ್ದವು. ವಾಮನರಾವ್ ಮಾಸ್ತರರು ಧಾರವಾಡದಲ್ಲೇ ನೆಲೆಸಿ ನಾಟ್ಯ ಸಂಗೀತದಲ್ಲಿ ವಿಭಿನ್ನ ಪ್ರಯೋಗಗಳನ್ನು ಮಾಡಿ, ತಮ್ಮ ಕಂಪನಿಯಲ್ಲಿ ಹಲವಾರು ಪ್ರತಿಭಾವಂತ ಸಂಗೀತ ಬಲ್ಲ ನಟರನ್ನು ಸೇರಿಸಿಕೊಂಡು ಮಾರ್ಗದರ್ಶನ ನೀಡಿ ವೃತ್ತಿರಂಗಭೂಮಿಯ ಸಮಗ್ರ ಸಂಗೀತನಾಟಕಗಳನ್ನು ನಿಜ ಅರ್ಥದಲ್ಲಿ ಶ್ರೀಮಂತ ಗೊಳಿಸಿದರು.

ಒಂದು ದೃಷ್ಟಿಯಲ್ಲಿ ಈ ಭಾಗದಲ್ಲಿ ಹಿಂದುಸ್ತಾನಿ ಸಂಗೀತ ಈ ಮಟ್ಟಕ್ಕೆ ಬೆಳೆಯಲು ವಾಮನರಾಯರು ರಂಗಸಂಗೀತದ ಮೂಲಕ ಆಗ ಹಾಕಿದ ಭದ್ರ ಬುನಾದಿಯೇ ಕಾರಣ ಎಂದು ಹೇಳಬಹುದು. ಅದಕ್ಕೆ ಸಾಕ್ಷಿಯಾಗಿ ಅವರ ಕಂಪನಿಯಲ್ಲಿ ಆಡುತ್ತಿದ್ದ ಪಾರ್ವತಿ ಸತ್ವ ಪರೀಕ್ಷೆ, ಸಂದೇಹ ಸಾಮ್ರಾಜ್ಯ, ವೀರ ಅಭಿಮನ್ಯು, ಎರಡನೆಯ ಬಾಜಿರಾಯ, ಸಂತ ಸಖೂಬಾಯಿ ಮುಂತಾದ ಸಂಗೀತಮಯ ನಾಟಕಗಳನ್ನು ಇಲ್ಲಿ ಉಲ್ಲೇಖಿಸಬಹುದು.

ವಾಮನರಾಯರಿಗೆ ಬಾಲ್ಯದಿಂದಲೂ ಸಂಗೀತದಲ್ಲಿ ಆಸಕ್ತಿ ಇತ್ತು. ಮುಲ್ಕಿ ಪರೀಕ್ಷೆಯ ನಂತರ ಕೆಲಕಾಲ ರಬಕವಿಯಲ್ಲಿ ಶಿಕ್ಷಕ ವೃತ್ತಿಯನ್ನು ಮಾಡಿದರು. ಆಗಿನ ಪದ್ಧತಿಯಂತೆ ಮರಾಠಿ ಶಿಕ್ಷಕರಾಗಿದ್ದ ಅವರು ಮರಾಠಿ ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿ ಪರಿಣಿತಿ ಪಡೆದಿದ್ದರು. ಹೀಗಾಗಿಯೇ ಮುಂದೆ ಅವರು ವೃತ್ತಿ

ರಂಗಭೂಮಿಗೆ ಪ್ರವೇಶ ಮಾಡಿದಾಗ ಹಲವಾರು ಪ್ರಸಿದ್ಧ ಮರಾಠಿಸಂಗೀತ ನಾಟಕಗಳನ್ನು ಕನ್ನಡಕ್ಕೆ ತಂದು ತಮ್ಮ ಕಂಪನಿ ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿಯಿಂದ ಆಡಿಸಿದರು. ವಾಮನರಾಯರಿಗೆ ಮರಾಠಿ ವೃತ್ತಿ ರಂಗಭೂಮಿಯ ಉತ್ತಮ ಪರಿಚಯವಿತ್ತು. ಅಣ್ಣಾಸಾಹೇಬ ಕಿರ್ಲೋಸ್ಕರ, ಬಾಲಗಂಧರ್ವರ ಸಂಗೀತ ನಾಟಕಗಳನ್ನೂ ನೋಡಿದ್ದರು. ಆಗ ಈ ಭಾಗಕ್ಕೆ ಮರಾಠಿ ವೃತ್ತಿ ರಂಗ ಮಂಡಳಿಗಳು ಭೇಟಿಕೊಟ್ಟು ತಮ್ಮ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಅವರ ನಾಟಕಗಳಿಗೆ ಆಕರ್ಷಿತರಾದಾಗ್ಯೂ ವಾಮನರಾಯರಂತಹ ಇಲ್ಲಿಯ ರಂಗಾಸಕ್ತಿಯುಳ್ಳ ಕಲಾವಿದರಿಗೆ ಕನ್ನಡದಲ್ಲಿಯೇ ಅಂಥದೊಂದು ರಂಗಭೂಮಿಯನ್ನು ಕಟ್ಟುವ ಕನಸು ಸೂಕ್ತವಾಗಿತ್ತು ಎಂಬುವುದನ್ನು ಕನ್ನಡ ರಂಗಭೂಮಿಯ ಪಿತಾಮಹ ಶಾಂತಕವಿಗಳಿಂದಲೇ ಕಾಣುತ್ತೇವೆ. ಹೀಗಾಗಿ ಮರಾಠಿ ಬಲ್ಲ ವಾಮನರಾಯರು ಮನಸ್ಸು ಮಾಡಿದ್ದರೆ ಮರಾಠಿ ವೃತ್ತಿ ರಂಗಭೂಮಿಯನ್ನು ಸೇರಿ ಪ್ರಸಿದ್ಧಿಯನ್ನು ಪಡೆಯಬಹುದಾಗಿತ್ತು. ಅಂತಹ ಅವಕಾಶಗಳು ಒದಗಿಬಂದಾಗ್ಯೂ ರಾಯರು ತಮ್ಮ ಕಲಾ ಜೀವನವನ್ನು ಮುಡುಪಿಟ್ಟದ್ದು ಕನ್ನಡರ ರಂಗಭೂಮಿಯ ಸಲುವಾಗಿಯೇ ಎಂಬುದು ಅವರ ಕನ್ನಡ ಪ್ರೀತಿಗೆ ಸಾಕ್ಷಿಯಾಗಿದೆ.

ವಾಮನರಾಯರಿಗೆ ತಮ್ಮ ಸಂಗೀತದಲ್ಲಿ ಪ್ರತಿಭೆಯನ್ನು ವರ್ಧಿಸಿಕೊಳ್ಳಲು ರಂಗಭೂಮಿಯು ಸೂಕ್ತ ಮಾಧ್ಯಮವೆಂಬುದು ತಿಳಿದಿತ್ತು. ಆದ್ದರಿಂದ ಅವರು ಧಾರವಾಡಕ್ಕೆ ಬಂದು ನೆಲೆ ನಿಂತು ಕೆಲ ಪ್ರಯತ್ನಮಾಡಿ ಕೊನೆಗೆ ಶಿರಹಟ್ಟಿ ವೆಂಕೋಬಾ ಕಂಪನಿಯಲ್ಲಿ ಗಾಯಕನಟರಾಗಿ ಸುಮಾರು ೧೯೧೦ ರಲ್ಲಿ ಸೇರಿಕೊಂಡರು. ಬಹುಬೇಗ ಆ ಕಂಪನಿಯ ಮುಖ್ಯ ನಟರಾಗಿ ಶಿರಹಟ್ಟಿ ವಾಮನರಾಯರು ಎನ್ನುವ ಮಟ್ಟಿಗೆ ಸವಣೂರು ವಾಮನರಾಯರು ಬೆಳೆದು ನಿಂತರು.

ಕವಿರತ್ನ ಕಾಳಿದಾಸ, ವಿವೇಕ ವಿಜಯ, ರಾಮರಾಜ್ಯ ವಿಯೋಗ ಮುಂತಾದ ನಾಟಕಗಳಲ್ಲಿ ಪ್ರಧಾನ ಪಾತ್ರ ವಹಿಸಿ ಮಂಗಳೂರು, ಮೈಸೂರು, ಕೊಯಿಮತ್ತೂರು ಮುಂತಾದ ನಗರಗಳಿಗೆ ಸಂಚರಿಸಿ ತಮ್ಮ ಸುಕುಮಾರ ಅಭಿನಯ, ಸುಶ್ರಾವ್ಯ ಹಾಡುಗಾರಿಕೆಯಿಂದ ಕಲಾ ರಸಿಕರನ್ನು ರಂಜಿಸಿದರು. ಅಷ್ಟೇ ಅಲ್ಲದೇ ವೆಂಕೋಬರಾಯರ ಕಂಪನಿಯಲ್ಲಿ ಅವರು ಇನ್ನುಳಿದ ನಟರಿಗೆ ಅಭಿನಯಸಂಗೀತ ಕಲಿಸಿಕೊಡುವ ಗುರುಗಳಾಗಿ ವಾಮನರಾವ ಮಾಸ್ತರರೆಂಬ ಅಭಿಧಾನವನ್ನು ಸಾರ್ಥಕಗೊಳಿಸಿಕೊಂಡರು. ಈ ಕಂಪನಿಯಲ್ಲಿದ್ದಾಗಲೇ ಅವರು ನಾಟ್ಯಗೀತೆಗಳನ್ನು ರಚಿಸಿ ಅವುಗಳಿಗೆ ವಿವಿಧ ಚಾಲ್ ಅಥವಾ ಧಾಟಿಗಳನ್ನು ಹಾಕುವ ಕಲೆಯನ್ನೂ ಕರಗತಮಾಡಿಕೊಂಡರು.

ನಾಟ್ಯಾಚಾರ್ಯರಾಗಿ, ಪ್ರಧಾನ ನಟರಾಗಿ, ಸಂಗೀತ ನಿರ್ದೇಶಕರಾಗಿ, ಹೀಗೆ ವೃತ್ತಿ ರಂಗಭೂಮಿಯ ಹಲವು ಆಯಾಮಗಳಲ್ಲಿ ದುಡಿದು ಅನುಭವ ಪಡೆದ ವಾಮನರಾಯರು ಕಂಪನಿಯ ಆಡಳಿತಾತ್ಮಕ ವಿಷಯಗಳಲ್ಲಿಯೂ ಪರಿಣಿತಿಯನ್ನು ಪಡೆದು, ತಾವೇ ಸ್ವತಂತ್ರವಾಗಿ ರಂಗಮಂಡಳಿಯೊಂದನ್ನು ಕಟ್ಟುವ ಕನಸು ಕಂಡರು. ಸಂಗೀತ ಪ್ರಧಾನವಾದ ಅವರ ನಟನಾಶೈಲಿಗೆ ದೃಶ್ಯ ಪ್ರಧಾನವಾದ ಶಿರಹಟ್ಟಿ

ವೆಂಕೋಬರಾಯರ ಕಂಪನಿಗಳ ನಾಟಕ ಪ್ರಯೋಗಗಳು ಅವರ ಸಂಗೀತ ಅಭಿರುಚಿ, ಪ್ರತಿಭೆಯ ಅಭಿವ್ಯಕ್ತಿಗೆ ಅಷ್ಟೊಂದು ಸೂಕ್ತ ಎಂದು ಅನ್ನಿಸಲಿಲ್ಲವಾದ್ದರಿಂದ ಅವರು ಸ್ವತಂತ್ರವಾಗಿ ೧೯೧೪ ರಲ್ಲಿ "ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿ" ಯನ್ನು ಸ್ಥಾಪಿಸಿದರು. ಹೀಗೆ ಒಂದು ಕಂಪನಿಯಲ್ಲಿದ್ದು ಒಬ್ಬ ಪ್ರತಿಭಾವಂತ ನಟ, ನಾಟಕಕಾರ ಅನುಭವ ಪಡೆದು ತನ್ನದೇ ಸ್ವತಂತ್ರ ನಾಟಕ ಕಂಪನಿ ಕಟ್ಟುವುದು ವೃತ್ತಿರಂಗಭೂಮಿಯ ಪರಂಪರೆಯಲ್ಲಿ ಸಹಜವಾದುದು. ಆದಾಗ್ಯೂ ತಮ್ಮ ಪೂರ್ವಾಶ್ರಮದ ಬಗ್ಗೆ ಪ್ರೀತಿ ಗೌರವಗಳನ್ನು ವಾಮನರಾಯರು ಎಂದಿಗೂ ಕಡಿಮೆ ಮಾಡಿಕೊಳ್ಳಲಿಲ್ಲ. ಆಗ ನಾಟಕ ಕಂಪನಿಗಳಲ್ಲಿ ತೊಡಗಿಸಿಕೊಂಡ ಕಲಾವಿದರ ವ್ಯಕ್ತಿತ್ವವು ಅತ್ಯಂತ ಉನ್ನತಮಟ್ಟದಲ್ಲಿರುತ್ತಿತ್ತು. ವಾಮನರಾಯರಂತಹ ಸುಶಿಕ್ಷಿತರಲ್ಲಂತೂ ಈ ಪ್ರವೃತ್ತಿ ಸ್ವಾಭಾವಿಕವಾಗಿತ್ತು. ಅಂದಾಜು ೨೦ ವರ್ಷಗಳ ಕಾಲ ವಾಮನರಾಯರು ತಮ್ಮ 'ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿ'ಯಿಂದ ಉತ್ತಮ ಸಂಗೀತ ಪ್ರಧಾನ ನಾಟಕಗಳನ್ನು ನಾಡಿನಾದ್ಯಂತ ಪ್ರದರ್ಶಿಸಿ ಒಬ್ಬ ಆದರ್ಶ ರಂಗಕರ್ಮಿಯಾಗಿ ಕನ್ನಡ ವೃತ್ತಿರಂಗಭೂಮಿಗೆ ಮಾದರಿಯಾದರು.


ವಾಮನರಾಯರು ತಮ್ಮ ನಟನೆಯಲ್ಲಿ ಗಾಯನ ಪ್ರೌಢಿಮೆಗೆ ಒತ್ತುಕೊಟ್ಟಿದ್ದರಿಂದ ಸಹಜವಾಗಿ ಅವರು ಸಂಗೀತ ಪ್ರಧಾನ ನಾಟಕಗಳನ್ನೇ ಪ್ರದರ್ಶಿಸಿದರು. ಅದಾಗಲೇ ಮರಾಠಿ ವೃತ್ತಿರಂಗಭೂಮಿಯಲ್ಲಿ ಪ್ರಸಿದ್ಧಿ ಪಡೆದ ಸಂಗೀತನಾಟಕಗಳನ್ನು ವಾಮನರಾಯರು ಕನ್ನಡಕ್ಕೆ ಭಾಷಾಂತರಿಸಿ ಪ್ರದರ್ಶನಗಳನ್ನು ನೀಡಿದರು. ಈ ಹಿನ್ನೆಲೆಯಲ್ಲಿ ಸಂಗೀತಕ್ಕಾಗಿ ಹಾತೊರೆಯುತ್ತಿದ್ದ, ಆಗಿನ ಕನ್ನಡ ರಸಿಕ ಪ್ರೇಕ್ಷಕರು ಮರಾಠಿನಾಟಕದತ್ತ ನುಗ್ಗುವುದು ಕಡಿಮೆಯಾಯಿತು.

ಮರಾಠಿ ರಂಗ ಸಂಗೀತದಲ್ಲಿ ಸಿಗುವ ಪ್ರೌಢಿಮೆ ವಾಮನರಾಯರ ನಾಟಕದಲ್ಲಿಯೂ ಸಿಗುತ್ತಿತ್ತು. ಅವರ ಕಂಪನಿಯಲ್ಲಿ ಬೇವೂರು ಬಾದಶಾ, ದೇಶಪಾಂಡೆ ಗುರುರಾಯರು, ರಾಣೇಬೆನ್ನೂರು ಮಲ್ಲಪ್ಪ, ಮಲ್ಲಿಕಾರ್ಜುನ ಮನಸೂರ, ಬಸವರಾಜ ಮನಸೂರ ಅವರಂಥ ಸಂಗೀತ ದಿಗ್ಗಜರು, ಯಲ್ಲೂಬಾಯಿ ಗುಳೇದಗುಡ್ಡ, ಗಂಗೂಬಾಯಿ ಗುಳೇದಗುಡ್ಡ ಅವರಂಥ ಶ್ರೇಷ್ಠ ನಟಿಯರು ಪಾತ್ರಮಾಡುತ್ತಿದ್ದರು. ಪಾರ್ವತಿ ಸತ್ವಪರೀಕ್ಷೆ, ವಿದ್ಯಾಸಾಧನೆ, ಕವಿರತ್ನ ಕಾಳಿದಾಸನ ವೀರ ಅಭಿಮನ್ಯು ಮುಂತಾದ ನಾಟಕಗಳಲ್ಲಿ ವಾಮನರಾಯರು ಹಾಗೂ ಯಲ್ಲೂಬಾಯಿ ಮತ್ತು ಗಂಗೂಬಾಯಿ ಗುಳೇದಗುಡ್ಡ ಅವರ ಜೋಡಿ ಅಭಿನಯ ಸುಶ್ರಾವ್ಯವಾದ ಸಂಗೀತ ಬಹಳ ಹೆಸರುವಾಸಿಯಾಗಿದ್ದವು: ಗುಳೇದಗುಡ್ಡ ಗಂಗೂಬಾಯಿ ಬಹಳ ದಿನಗಳಕಾಲ ವಾಮನರಾಯರ ಕಂಪನಿಯಲ್ಲಿ ಮುಖ್ಯ ನಟಿಯಾಗಿದ್ದರು.

ವಾಮನರಾಯರು ಪಾರ್ವತಿ ಸತ್ವಪರೀಕ್ಷೆ, ವಿದ್ಯಾಸಾಧನೆ, ಭೋಜಪ್ರಬಂಧ, ಶಾರದಾ, ವೀರ ಅಭಿಮನ್ಯು, ಸಂಶಯ ಸಾಮ್ರಾಜ್ಯ, ಸಾಧ್ವಿ ಸಖೂಬಾಯಿ, ಭಕ್ತ ಪ್ರಹ್ಲಾದ, ಕೃಷ್ಣಾರ್ಜುನ ಯುದ್ಧ, ಎರಡನೇ ಬಾಜಿರಾವ್ ಪೇಶ್ವೆ, ದ್ರೌಪದಿ ವಸ್ತ್ರಾಪಹರಣ ಮುಂತಾದ ನಾಟಕಗಳನ್ನು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರ ಅನುವಾದದ ಭಾಷೆ ಸುಕುಮಾರ ಅನ್ನುವಂಥದ್ದು, ಸಂಸ್ಕೃತ ಪದಗಳ ಬಳಕೆ ಬಹಳ

ಕಡಿಮೆ. ವೀರರಸ ಪ್ರಧಾನಕ್ಕಿಂತ ಶೃಂಗಾರರಸ, ಹಾಸ್ಯ ಇವು ವಾಮನರಾಯರ ರಂಗಪ್ರದರ್ಶನಗಳ ಮನೋಧರ್ಮ. ಹಿಂದುಸ್ತಾನಿ ರಂಗ ಸಂಗೀತವನ್ನು ಅತೀ ಹೆಚ್ಚು ಜನಪ್ರಿಯಗೊಳಿಸಿದ ಶ್ರೇಯಸ್ಸು ವಾಮನರಾಯರಿಗೆ ಸಲ್ಲುತ್ತದೆ. ಸುಮಾರು ೨೦ ವರ್ಷಗಳ ಕಾಲ ಬಹಳ ಶಿಸ್ತಿನಿಂದ ವೃತ್ತಿ ರಂಗಭೂಮಿಯ ಮೌಲ್ಯ ಹಾಗೂ ಪಾವಿತ್ರ್ಯತೆ ಕಾಪಾಡಿಕೊಂಡು ಹಲವಾರು ಹಣಕಾಸಿನ ತೊಂದರೆಯ ನಡುವೆಯೂ ಕನ್ನಡ ರಂಗಭೂಮಿ ಎಂದಿಗೂ ಮರೆಯಲಾರದ 'ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿ'ಯನ್ನು ನೀಡಿದ ಸವಣೂರಿನ ವಾಮನರಾವ್ ಮಾಸ್ತರರು ಕರ್ನಾಟಕ ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ಪ್ರಾತಃಸ್ಮರಣೀಯರಾಗಿದ್ದಾರೆ.

■ ■ ■



ಗರುಡ ಸದಾಶಿವರಾಯರು

# ಕರ್ನಾಟಕ ನಾಟಕಾಲಂಕಾರ
# ಗರುಡ ಸದಾಶಿವರಾಯರು
# (೧೮೮೨-೧೯೫೪)

● ಡಾ. ಪ್ರಕಾಶ ಗರುಡ

"ಕರ್ನಾಟಕ ನಾಟಕಾಲಂಕಾರ", 'ಅಭಿನಯಕೇಸರಿ' ಎಂದು ಕನ್ನಡ ಜನತೆಯಿಂದ ತಮ್ಮ ಶ್ರೇಷ್ಠ ಅಭಿನಯಕ್ಕೆ ಮೆಚ್ಚುಗೆಯ ಬಿರುದಾವಳಿಗಳನ್ನು ಪಡೆದ ಗರುಡ ಸದಾಶಿವರಾಯರು ಕರ್ನಾಟಕದ ವೃತ್ತಿರಂಗಭೂಮಿಯ ಇತಿಹಾಸದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ವೃತ್ತಿರಂಗಭೂಮಿಯ ಉಚ್ಛ್ರಾಯಕಾಲ ಅಂದರೆ ಸು. ೧೯೦೫ ರಿಂದ ೧೯೪೦ ರ ವರೆಗೆ ಬಂದ ವೃತ್ತಿನಿರತ ರಂಗಕರ್ಮಿಗಳಲ್ಲಿ ಇವರೂ ಒಬ್ಬರು ಎಂದು ಹೇಳುವದಕ್ಕಿಂತ ಆ ಉಚ್ಛ್ರಾಯಕಾಲದ ನಿರ್ಮಾಣಕ್ಕೆ ಕಾರಣೀಭೂತರಾದ ಬೆರಳೆಣಿಕೆಯ ಕೆಲವೇ ಕೆಲವು ವೃತ್ತಿಗಂಗಕರ್ಮಿಗಳಲ್ಲಿ ಗರುಡ ಸದಾಶಿವರಾಯರಿಗೆ ಅಗ್ರಸ್ಥಾನವಿದೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ತಾವು ರಚಿಸಿದ ೫೦ಕ್ಕೂ ಹೆಚ್ಚಿನ ವೃತ್ತಿರಂಗಭೂಮಿಯ ನಾಟಕಗಳಲ್ಲಿ ತಾವು ನಂಬಿಕೊಂಡು ಬಂದ 'ಭಾರತೀಯ ಸಂಸ್ಕೃತಿ' ಹಾಗೂ 'ರಾಷ್ಟ್ರೀಯತೆಯ ಪ್ರಜ್ಞೆ', ಸಮಾಜಪರ ಮೌಲ್ಯಗಳನ್ನು ಗಟ್ಟಿಯಾದ ಭಾಷೆಯಿಂದ ಅಭಿವ್ಯಕ್ತಿಸಿ, ಆ ರಂಗಭೂಮಿಯ ನಾಟಕಗಳ ಮೌಲ್ಯ ಹೆಚ್ಚಿಸಿ, ಅಪ್ಪಟ ನಾಟ್ಯಾಚಾರ್ಯರಾಗಿ ನಾಟಕ ಕಂಪನಿ ಕಟ್ಟಿ ಕರ್ನಾಟಕದಾದ್ಯಂತ ಹಾಗೆಯೇ ಕರ್ನಾಟಕದಾಚೆಗೂ ತಮ್ಮ ತಂಡದೊಂದಿಗೆ ತಿರುಗಾಡಿ, ನಾಟಕ ಪ್ರದರ್ಶನ ನೀಡಿ, ವೃತ್ತಿರಂಗಭೂಮಿಯಲ್ಲಿ ತಮ್ಮದೇ ಆದ 'ಗರುಡತನ' ದ ರಂಗಛಾಪು ಮೂಡಿಸಿದ ಶ್ರೇಯಸ್ಸು ಗರುಡರಿಗೆ ಸಲ್ಲುತ್ತದೆ.

ಗರುಡ ಸದಾಶಿವರಾಯರು ತಮ್ಮ ಸಮಕಾಲೀನ ಅಥವಾ ಒಟ್ಟು ರಂಗಭೂಮಿಯಲ್ಲಿ ತೊಡಗಿಸಿಕೊಂಡ ಇನ್ನಿತರ ರಂಗಕರ್ಮಿಗಳಿಗಿಂತ ಭಿನ್ನರಾಗುವುದು ಎಲ್ಲಿ ಎಂದರೆ ಅವರಿಗೆ ರಂಗಚಟುವಟಿಕೆ ಎನ್ನುವುದು ಕೇವಲ ರಂಗದ ಮೇಲೆ ಅಭಿನಯ ಕೌಶಲ ಪ್ರದರ್ಶಿಸುವ ವೃತ್ತಿಯಾಗಿರದೇ ಆ ಮಾಧ್ಯಮವು ಮನುಷ್ಯ ಸ್ವಾತಂತ್ರ್ಯದ ಅಭಿವ್ಯಕ್ತಿ, ಸ್ವಾಭಿಮಾನ, ಸಮಾನತೆ ಹಾಗೂ ದೇಶಾಭಿಮಾನ, ಭಾಷಾಭಿಮಾನ ಮತ್ತು ಸಹೃದಯ ಸುಸಂಸ್ಕೃತ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳುವ, ಚಿಂತನೆ ಮಾಡುವ ಮಾಧ್ಯಮವಾಗಿತ್ತು. ಕೇವಲ 'ಕಲೆಗಾಗಿ ಕಲೆ' ಎಂಬ ನೆಲೆಯನ್ನು ಅವರು ತಮ್ಮ ನಾಟಕ ಕೃತಿಗಳಲ್ಲಿ, ರಂಗ ಪ್ರದರ್ಶನಗಳಲ್ಲಿ ಮೀರಲು ಪ್ರಯತ್ನಿಸುತ್ತಿದ್ದರು. ಹೀಗಾಗಿಯೇ ಅವರು ತಮ್ಮ ನಾಟಕಗಳಲ್ಲಿ ಬ್ರಿಟೀಷರ ಆಡಳಿತದ ದಬ್ಬಾಳಿಕೆಯನ್ನು ತರಾಟೆಗೆ ತೆಗೆದುಕೊಂಡರು. ಅಸ್ಪೃಶತಾ ನಿವಾರಣೆ, ವಿಧವಾ ವಿವಾಹದಂತಹ ಸಾಮಾಜಿಕ ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ಬಿಂಬಿಸಿದರು. 'ಯಚ್ಚಮ್ಮ ನಾಯಕ' ನಂತಹ ನಾಟಕಗಳಲ್ಲಿ ಕನ್ನಡತನದ

ಕಹಳೆ ಊದಿದರು. ಆದರೆ ಈ ಎಲ್ಲಾ ಸಾಮಾಜಿಕ ಕಾಳಜಿಗಳು ಸೃಜನಶೀಲವಾಗಿ ಅಭಿವ್ಯಕ್ತಿ ಪಡೆದಿದ್ದು ಅವರು ನೆಚ್ಚಿಕೊಂಡ ವೃತ್ತಿರಂಗಭೂಮಿಯಲ್ಲಿ. ಅವರ ಸಾಮಾಜಿಕ ಕಾಳಜಿಗಳು ಕೇವಲ ರಂಗದ ಮೇಲಿನ ನೀರಸ ಘೋಷಣೆಗಳಾಗಿರಲಿಲ್ಲ. ಅವರ ರಂಗಪ್ರದರ್ಶನಗಳು ಕಲಾತ್ಮಕವಾಗಿ ಶ್ರೇಷ್ಠ ಅಭಿರುಚಿಯಿಂದ ಕೂಡಿದ್ದು, ಪ್ರೇಕ್ಷಕರ ಮನಸ್ಸಿನಲ್ಲಿ, ಅವರ ಭಾವನಾತ್ಮಕ ಪ್ರಪಂಚದಲ್ಲಿ ಶಾಶ್ವತವಾಗಿ ಈಗಲೂ ಉಳಿದುಕೊಂಡು ಬಂದಿವೆ. ಕನ್ನಡದ ಜನತೆ ಗರುಡರನ್ನು ನೆನೆಯುವುದು ಈ ಕಾರಣಕ್ಕಾಗಿ.

ಗರುಡರ ವಿಶೇಷತೆಯೆಂದರೆ ತಾವು ಬರೆದ ನಾಟಕಗಳಲ್ಲಿ ಹೆಚ್ಚಾಗಿ ಮುಖ್ಯ ಭೂಮಿಕೆಯನ್ನು ತಾವೇ ನಿರ್ವಹಿಸುತ್ತಿದ್ದುದು. ಅವರು ತಮ್ಮ ಅಭಿನಯದ ಅನುಸಂಧಾನವನ್ನು ಹಲವಾರು ವಿಭಿನ್ನ ಪಾತ್ರಗಳ ಮೂಲಕ ಮಾಡಿದ್ದಾರೆ. ದಶರಥ, ಕಂಸ, ಕೃಷ್ಣ, ರಾವಣ, ಮಾರುತಿ, ಯಚ್ಚಮನಾಯಕ, ಕೀಚಕ, ಕಬೀರ, ಶರಣಬಸವ ಹೀಗೆ ಹಲವಾರು ಪಾತ್ರಗಳನ್ನು ಅಭಿನಯಿಸಿ ಪ್ರೇಕ್ಷಕರ ಮನ ಗೆದ್ದಿದ್ದಾರೆ. ತಾವು ಅಭಿನಯಿಸುವ ರಸಪೋಷಣೆಗೆ ಅವರು ಇನ್ನಿಲ್ಲದ ಏಕಾಗ್ರತೆ ಹಾಗೂ ಧ್ಯಾನಸ್ಥ ಸ್ಥಿತಿಯನ್ನು ತೋರಿಸುತ್ತಿದ್ದರು. ಹಲವು ಭಿನ್ನ ರಸಗಳ ಪಾತ್ರಗಳು ಗರುಡರ ಅಭಿನಯದಲ್ಲಿ ಜೀವ ಪಡೆಯುತ್ತಿದ್ದವು. ಅಭಿನಯ ಕಲೆಯನ್ನೂ ಅಧ್ಯಾತ್ಮಿಕ ನೆಲೆಯಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುವ ಹಂಬಲ ಅವರಲ್ಲಿತ್ತು.

ಗರುಡ ಸದಾಶಿವರಾಯರು ಹುಟ್ಟಿದ್ದು ೧೮ನೇ ಅಗಸ್ಟ್ ೧೮೮೨ ರಲ್ಲಿ ಈಗಿನ ಕೊಪ್ಪಳಜಿಲ್ಲೆಯ ಅಳವುಂಡಿಯೆಂಬ ಚಿಕ್ಕ ಹಳ್ಳಿಯ ಸ್ಮಾರ್ತ ಬ್ರಾಹ್ಮಣ ಕುಟುಂಬದಲ್ಲಿ. ಇವರ ತಂದೆ ಗುರುನಾಥ ಭಟ್ಟ, ತಾಯಿ ಸುಭದ್ರಾಬಾಯಿ. ಬಹಳ ದಿನಗಳವರೆಗೆ ಇವರ ಮನೆತನದ ಹೆಸರು 'ವೈದ್ಯ' ಎಂತಲೂ ಇದ್ದು ಮುಂದೆ 'ಗರುಡ' ಎಂಬ ಅಡ್ಡ ಹೆಸರಿಗೆ (Sirname ) ಬದಲಾಯಿತಂತೆ. ರೂಢಿಯಲ್ಲಿರುವ ಕೆಲವು ಅಡ್ಡ ಹೆಸರುಗಳಲ್ಲಿಯೇ ಈ ಅಡ್ಡ ಹೆಸರು ವಿಶೇಷ. ತಮ್ಮ ಬಾಲ್ಯವನ್ನು ಕವಲೂರಿನಲ್ಲಿ ಕಳೆದರು. ಮುಂದೆ ರಾಯಚೂರು, ಗುಲಬರ್ಗಾದಲ್ಲಿ ವಿದ್ಯಾಭ್ಯಾಸ ಮಾಡಿದರು. ಗುಲಬರ್ಗಾದಲ್ಲಿದ್ದಾಗಲೇ ಅವರು ತಿಲಕ ಹಾಗೂ ಇನ್ನಿತರ ರಾಷ್ಟ್ರೀಯ ನಾಯಕರ ವಿಚಾರಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ, ಸ್ವಾಭಿಮಾನ, ರಾಷ್ಟ್ರೀಯತೆಯನ್ನು ಕುರಿತಾದ ತಮ್ಮ ಚಿಂತನೆಗಳನ್ನು ಬಲಪಡಿಸಿಕೊಂಡರು. ಅವರ ರಂಗಭೂಮಿಯ ಕಾಯಕ ಪ್ರಾರಂಭವಾದದ್ದೂ ಗುಲಬರ್ಗಾದಿಂದಲೇ.

ಮೊದಮೊದಲು ಗಣೇಶ ಉತ್ಸವದಂತಹ ಕಾರ್ಯಕ್ರಮಗಳಲ್ಲಿ ನಾಟಕವಾಡಲು ಪ್ರಾರಂಭಿಸಿದ ಸದಾಶಿವರಾಯರು ಮುಂದೆ ತಮ್ಮ ವಿಚಾರ, ವೃತ್ತಿಧರ್ಮದ ಅಭಿವ್ಯಕ್ತಿಗಾಗಿ ರಂಗಭೂಮಿಯೇ ಸೂಕ್ತ ಎಂಬುದನ್ನು ಬಹುಬೇಗ ಕಂಡುಕೊಂಡರು. ಇದಕ್ಕೆ ಪ್ರೇರಣೆ ಆಗ ಕರ್ನಾಟಕದಾದ್ಯಂತ ಭೇಟಿಕೊಡುತ್ತಿದ್ದ ಮರಾಠಿ ವೃತ್ತಿರಂಗ ತಂಡಗಳ ನಾಟಕಗಳ ಪ್ರದರ್ಶನವೂ ಒಂದು ಕಾರಣ. ಇವರಿಗೆ ಕೆಲವು ಕಾಲ ಮರಾಠಿ ರಂಗಭೂಮಿಯ ಮೇರುನಟ ಶಾಹೂನಗರದ ವಾಸಿ ಗಣಪತರಾವ್ ಅವರ ನಾಟಕ ಕಂಪನಿಯಲ್ಲಿ ದುಡಿದ ಅನುಭವವೂ ಇತ್ತು. ಬಹುಬೇಗ ಅವರು ಆಗ ಸ್ವಾಭಾವಿಕವಾಗಿದ್ದ ಮರಾಠಿಪ್ರಭಾವದಿಂದ ಬಿಡಿಸಿಕೊಂಡು ಕನ್ನಡದಲ್ಲಿ ರಂಗಭೂಮಿಯೊಂದನ್ನು ಕಟ್ಟುವ ಕನಸನ್ನು ಕಂಡರು,


ಅದರ ಪ್ರತಿಫಲವಾಗಿ ಕೆಲ ಸಮಾನ ಮನಸ್ಕರೊಂದಿಗೆ ಕೂಡಿಕೊಂಡು ಸುಮಾರು ೧೯೦೭ ರಲ್ಲಿ 'ಶಿವಸುತ ಪ್ರಾಸಾದಿಕ ನಾಟಕ ಮಂಡಳಿ' ಎಂಬ ವೃತ್ತಿ ಸಂಸ್ಥೆಯನ್ನು ಯಾದಗಿರಿಯಲ್ಲಿ ಪ್ರಾರಂಭಿಸಿ ಬಲಸಿಂಹತಾರ, ಸತ್ಯಹರಿಶ್ಚಂದ್ರ, ಶರಣಬಸವ ಮುಂತಾದ ನಾಟಕಗಳನ್ನು ಆಡುತ್ತ, ಕಲಬುರ್ಗಿಯ ಸುತ್ತಮುತ್ತಲಿನ ಭಾಗಗಳಲ್ಲಿ ಪ್ರದರ್ಶನ ನೀಡಿದರು. ಕೆಲ ವರ್ಷ ನಡೆದ ಈ ಕಂಪನಿ ಆರ್ಥಿಕ ಮುಗ್ಗಟ್ಟಿನಿಂದ ನಿಂತುಹೋಯಿತು. ಗರುಡರು ಕೆಲ ಕಾಲ ಕೊಪ್ಪಳ ಕಂಪನಿ, ಹೊಂಬಳ ಕಂಪನಿ, ಕಾಡಸಿದ್ಧೇಶ್ವರ ನಾಟಕ ಕಂಪನಿ ಹೀಗೆ ಕೆಲ ಕಂಪನಿಗಳಲ್ಲಿ ನಾಟ್ಯಾಚಾರ್ಯರಾಗಿ ಸೇವೆ ಸಲ್ಲಿಸಿ ಹಲವಾರು ನಟರಿಗೆ ತರಬೇತಿ ನೀಡಿದರು. ಮುಂದೆ ಗದುಗಿನಲ್ಲಿ "ಶ್ರೀ ದತ್ತಾತ್ರೇಯ ನಾಟಕ ಮಂಡಳಿ" ಯನ್ನು ೧೯೧೯ ರಲ್ಲಿ ಸ್ಥಾಪಿಸಿ ಸು. ೩೦ ವರ್ಷಗಳ ಕಾಲ ಕರ್ನಾಟಕದಾದ್ಯಂತ ಹಾಗೂ ಕರ್ನಾಟಕ ರಾಜ್ಯದಾಚೆಗೂ ತಿರುಗಾಡಿ ರಂಗ ಪ್ರದರ್ಶನ ನೀಡಿದರು. ಗರುಡರು ಇದೇ ಕಾಲಘಟ್ಟದಲ್ಲಿ ಯಚ್ಚಮನಾಯಕ, ವಿಷಮ ವಿವಾಹ, ಶ್ರೀ ರಾಮಪಾದುಕಾ ಪಟ್ಟಾಭಿಷೇಕ, ಚವತಿಯ ಚಂದ್ರ, ವತ್ಸಲಾ ಅಪಹರಣ, ನಮ್ಮ ಭಾಗ್ಯೋದಯ ಮೊದಲಾದ ನಾಟಕಗಳನ್ನು ರಚಿಸಿ, ಅಭಿನಯಿಸಿ ಕನ್ನಡ ವೃತ್ತಿರಂಗಭೂಮಿಗೆ ಹೊಸ ಮೆರಗನ್ನು ತಂದು, 'ಕರ್ನಾಟಕ ನಾಟಕಾಲಂಕಾರ' ಎಂಬ ಬಿರುದನ್ನು ಪಡೆದರು.

ದಾಖಲೆಯ ಪ್ರಕಾರ ಗರುಡ ಸದಾಶಿವರಾಯರು ಸುಮಾರು ೫೮ ನಾಟಕಗಳನ್ನು ಬರೆದಿದ್ದಾರೆ ಇವುಗಳಲ್ಲಿ ಕೆಲವೇ ಕೆಲವು ಮಾತ್ರ ಅಚ್ಚಾಗಿವೆ. ಆಗಿನ ವೃತ್ತಿ ರಂಗಭೂಮಿಯ ರೂಢಿಯಂತೆ ಇವರೂ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ರಚಿಸಿದ್ದಾರೆ. ಅದರಲ್ಲೇ ತಾವು ನಂಬಿಕೊಂಡ ರಾಷ್ಟ್ರೀಯ ಪ್ರಜ್ಞೆ, ಗಾಂಧೀಜಿಯ ಹಾಗೂ ಟಿಳಕರ ವಿಚಾರಧಾರೆ, ವ್ಯಕ್ತಿಯ ನೈತಿಕ ಮೌಲ್ಯಗಳನ್ನು ಅಭಿವ್ಯಕ್ತಿಸಲು ಪ್ರಯತ್ನಿಸಿದ್ದಾರೆ. ಗರುಡರು ಒಂದು ಕಡೆ ಪೌರಾಣಿಕ ನಾಟಕಗಳನ್ನು ಕುರಿತು ಹೀಗೆ ಹೇಳುತ್ತಾರೆ: "ನಮ್ಮ ಸಂಸ್ಕೃತಿಯು ಪುರಾಣರೂಪದಲ್ಲಿದ್ದ ಇತಿಹಾಸಗಳಿಂದಲೇ ಉಳಿದಿದೆ. ರಾಮಾಯಣ, ಮಹಾಭಾರತಗಳನ್ನು ಸರ್ವದೇಶದವರೂ ಮುಕ್ತ ಕಂಠದಿಂದ ಹೊಗಳಿದ್ದಾರೆ. ಶೃತಿ-ಸ್ಮೃತಿಗಳ ರಹಸ್ಯವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಹೇಳುವುದೇ ಪುರಾಣದ ಉದ್ದೇಶ. ಅದನ್ನೆ ನಾಟಕಗಳು ಇನ್ನೂ ಹೃದಯಂಗಮವಾಗಿ ಹೇಳುತ್ತವೆ". (ಶ್ರೀ ರಾಮಪಾದುಕಾಪಟ್ಟಾಭಿಷೇಕ ನಾಟಕದ ಮುನ್ನುಡಿಯಿಂದ) ಗರುಡರು ಯಾವುದೇ ನಾಟಕ ಬರೆಯಲಿ, ಅದರ ಕತೆ ಹೇಳುವದರ ಜೊತೆಗೆ ಮಾನವಸ್ವಭಾವದ ವಿಭಿನ್ನ ಸ್ಥಿತಿಯನ್ನು ವಾಸ್ತವದ ನೆಲೆಗಟ್ಟಿನಲ್ಲಿ ಹೇಳಲು ಪ್ರಯತ್ನಿಸಿದರು. ಆಗಿನ ಸಂಗೀತ ನಾಟಕದ ಸಂಪ್ರದಾಯದಂತೆ ನಾಟಕವನ್ನು ಸಂಗೀತವು ನುಂಗಿ ಹಾಕದಂತೆ ಸಂಭಾಷಣೆ ಮತ್ತು ಅಭಿನಯಕ್ಕೆ ತಮ್ಮ ಪ್ರದರ್ಶನಗಳಲ್ಲಿ ಒತ್ತುಕೊಟ್ಟರು. ಇವರು ರಚಿಸಿದ 'ಉಗ್ರ ಕಲ್ಯಾಣ ನಾಟಕ' ದೆಹಲಿಯ ನ್ಯಾಷನಲ್ ಡ್ರಾಮಾ ಫೆಸ್ಟಿವಲ್‌ನಲ್ಲಿ ೧೯೫೪ ರಲ್ಲಿ ಪ್ರದರ್ಶನಗೊಂಡಿತು. ಈ ಭಾಗದಿಂದ ಆಯ್ಕೆಯಾದ ನಾಟಕ ಇದೊಂದೇ ಆಗಿತ್ತು. ದಿನಾಂಕ ೦೫-೧೨-೧೯೪೮ ರಲ್ಲಿ ಜೋಳದ ರಾಶಿಯಲ್ಲಿ ನಡೆದ ಪ್ರಥಮ ಬಳ್ಳಾರಿ ಜಿಲ್ಲಾ ನಾಟಕ ಕಲಾ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಗರುಡರು ವಹಿಸಿದ್ದರು. ಸದಾಶಿವ

☆ ☆ ☆ ☆
☆ *ಸಾಂಸ್ಕೃತಿಕ ಧೃವ ತಾರೆಗಳು*
☆ ☆

ಗರುಡರ ಒಟ್ಟು ಸಾಧನೆಯ ಬಗ್ಗೆ ಹೆಸರಾಂತ ರಂಗತಜ್ಞ ಡಾ. ಮರುಳಸಿದ್ಧಪ್ಪ ಹೀಗೆ ಹೇಳುತ್ತಾರೆ: 'ಗರುಡ ಸದಾಶಿವರಿಗೆ ಇರುವಂತೆ ಸಾಮಾಜಿಕ ಎಚ್ಚರ, ದೇಶಭಕ್ತಿ ನಮ್ಮ ಬಹುಪಾಲು ವೃತ್ತಿನಾಟಕ ಸಂಸ್ಥೆಗಳಿಗಿಲ್ಲ ಎಂಬುದನ್ನು ಗಮನಿಸಿದರೆ ಗರುಡ ಸದಾಶಿವರಾಯರು ಕನ್ನಡ ರಂಗಭೂಮಿಗಿತ್ತ ಕಾಣಿಕೆ ಏನೆಂಬುದು ನಮಗೆ ಅರ್ಥವಾಗುತ್ತದೆ'. (ಆಧುನಿಕ ಕನ್ನಡ ನಾಟಕ ೨೦೦೨ ಪುಟ ೫೭) ಎಂದು ತಮ್ಮ ಅಭಿಪ್ರಾಯವನ್ನು ದಾಖಲಿಸುತ್ತಾರೆ.

■■■



ಕಂದಗಲ್ ಹಣಮಂತರಾಯರು

# ಕರ್ನಾಟಕದ ಶೇಕ್ಸಪಿಯರ್, ನಾಟ್ಯಕವಿಕೇಸರಿ ಕಂದಗಲ್ ಹಣಮಂತರಾಯರು

## (೧೮೯೬-೧೯೬೬)

● ಶ್ರೀ ಅಂಬೇಕರ ವಿನೋದ

"ರಕ್ತರಾತ್ರಿ" ಇಂದಿಗೂ ಹೊಸದೆ! ಅದರ ಅಶ್ವತ್ಥಾಮ ಸದಾ ಕಾಡುವ ಚಿರಂಜೀವಿಯೇ! ಇದನ್ನು ಹೇಳಿದವರು ಖ್ಯಾತ ಪತ್ರಕರ್ತ ಶ್ರೀ ರವಿ ಬೆಳಗೆರೆಯವರು. ದಿವಂಗತ ಕಂದಗಲ್ ಹಣಮಂತರಾಯರು ಕರ್ನಾಟಕ ರಂಗಭೂಮಿ ಇತಿಹಾಸದಲ್ಲಿ ಒಂದು ಧ್ರುವ ನಕ್ಷತ್ರ, ನಾಟ್ಯಕವಿಕೇಸರಿ, ಕರ್ನಾಟಕದ ಶೇಕ್ಸಪಿಯರ್ ಎಂದು ಖ್ಯಾತರಾದ ಇವರ ಬದುಕಿನಲ್ಲಿ ಈ ಉಕ್ತಿ ಬಹುಶಃ ತಿರುವು ಮುರುವು ಆಗಿ ಮೂಡಿ ಬಂದಿದೆ. "Past Events Leave Their Dark Shadows Behind" (ಗತಿಸಿದ ಘಟನೆಗಳು ತಮ್ಮ ಕರಿಛಾಯೆಯನ್ನು ಹಿಂದೆ ಬಿಟ್ಟು ಹೋದವೇ?) ಎಂಬುವುದು ಹೆಚ್ಚು ಪ್ರಸ್ತುತವಾಗಿ ಕಾಣುತ್ತದೆ.

ಕಂದಗಲ್ ಹಣಮಂತರಾಯರು ಜನಿಸಿದ್ದು ೧೮೯೬ ಜನೆವರಿ ೧೧ ರಂದು ಇಂದಿನ ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಕಂದಗಲ್ ಗ್ರಾಮದಲ್ಲಿ. ಈಗ ಆ ಗ್ರಾಮ ಮುಳುಗಡೆಯಾಗಿದೆ. ಅವರ ಮನೆತನದ ಅಡ್ಡಹೆಸರು ಕುಲಕರ್ಣಿ ಇದ್ದರೂ ಅವರು ತಮ್ಮ ಊರಿನ ಹೆಸರಿನಿಂದಲೇ ಹೆಸರುವಾಸಿಯಾದರು. ಕಂದಗಲ್ ಗ್ರಾಮದ ಭೀಮರಾಯ ಹಾಗೂ ಗಂಗಾಬಾಯಿಯರ ಮಗನಾಗಿ ಜನಿಸಿ, ಹುಟ್ಟೂರಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿ, ಮುಂದೆ ವಿಜಾಪುರದಲ್ಲಿ ಮ್ಯಾಟ್ರಿಕ್ ಪಾಸಾದ ನಂತರ ಕಂದಗಲ್‌ರು ಮೊದಲನೇ ಮಹಾಯುದ್ಧದ ಕಾಲದಲ್ಲಿ ಪುಣೆಯ ಮಿಲಿಟರಿಯಲ್ಲಿ ಅಕೌಂಟ್ಸ್ ವಿಭಾಗದಲ್ಲಿ ನೌಕರಿ ಮಾಡಿದರು. ಇಂಗ್ಲೀಷ್ ಭಾಷೆಯನ್ನು ಅವರು ಚೆನ್ನಾಗಿ ಬಲ್ಲವರಾಗಿದ್ದರಿಂದ ಅವರು ವಿಶ್ವವಿಖ್ಯಾತ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್‌ನ ಹಲವಾರು ನಾಟಕಗಳನ್ನು ಓದಿಕೊಂಡರು.

ಪುಣೆಯಲ್ಲಿ ಅವರಿಗೆ ಅಲ್ಲಿಯ ರಂಗವೈಭವವು ಕೈ ಬೀಸಿ ಕರೆಯಿತು. ಪುಣೆಯಲ್ಲಿ ಅವರು ಆಚಾರ್ಯ ಅತ್ರೆ, ಗಡಕರಿಯವರ ಸಂಪರ್ಕದಲ್ಲಿ ಬಂದರು. ಅನೇಕ ಮರಾಠಿ ನಾಟಕಗಳ ಕುರಿತು ಅವರೊಂದಿಗೆ ಚರ್ಚಿಸುತ್ತಿದ್ದರು. ಅಂದಿನ 'ಸೌಭದ್ರ', 'ಏಕಚಪ್ಯಾಲಾ' ನಾಟಕಗಳು ಕಂದಗಲ್‌ರ ಮನಸ್ಸನ್ನು ಕದಡಿದವು. ಈ ಎಲ್ಲವು ಅವರ ನಾಟಕಗಳ ಸೃಷ್ಟಿಗೆ ಕಾರಣವಾದವು. ಅವರ ಆರಾಧ್ಯ ದೈವವಾದ ಶ್ರೀ ರವೀಂದ್ರನಾಥ ಟಾಗೋರರ ಸಾಹಿತ್ಯ ಅಲ್ಲದೆ ಬಂಗಾಳಿ ಸಾಹಿತ್ಯ ಹಾಗೂ ರಂಗಭೂಮಿಯೊಂದಿಗೆ ಸಂಪರ್ಕಕ್ಕೆ ಬಂದರು .

ಅಂದು ಕಂದಗಲ್‌ರ ಆರ್ಥಿಕ ಸ್ಥಿತಿ ಚೆನ್ನಾಗಿಯೇ ಇತ್ತು. ಮುಂದೆ ಅವರು

ಗುಳೇದಗುಡ್ಡದ ಭೀಮರಾವ ಕಾರಕೂನ ಅವರ ಹಿರಿಯ ಮಗಳಾದ ಅಂಬೂತಾಯಿಯೊಂದಿಗೆ ಮದುವೆಯಾದರು. ಅಲ್ಲದೇ ಅವರಿಗೆ ಸೋನಾಬಾಯಿ ಹಾಗೂ ಗೀತಾ ಎಂಬ ಎರಡು ಹೆಣ್ಣುಮಕ್ಕಳಿದ್ದರು. ಮರಾಠಿ ಹಾಗೂ ಬೆಂಗಾಲಿ ರಂಗಭೂಮಿಯ ಅಗಾಧ ಪ್ರಭಾವಕ್ಕೊಳಗಾದ ಕಂದಗಲ್‌ರು ಕನ್ನಡ ರಂಗಭೂಮಿಗೆ ಇಳಿಯಲು ನಿರ್ಧರಿಸಿದರು. ಪುಣೆಯ ಸರಕಾರಿ ನೌಕರಿಗೆ ರಾಜೀನಾಮೆ ನೀಡಿ ಕನ್ನಡ ರಂಗಭೂಮಿಯನ್ನು ಪ್ರವೇಶಿಸಿ, ಹಲವಾರು ರಂಗನಾಟಕಗಳನ್ನು ಬರೆದು ನಿರ್ದೇಶಿಸಿ, ಅಕ್ಷರಶಃ ನಾಟಕಗಳ ಅಕ್ಷಯಾಂಬರವನ್ನೇ ಹರಿಸಿಬಿಟ್ಟರು ಕಂದಗಲ್ ಹಣಮಂತರಾಯರು.

ರಾಯರ ಮೊಟ್ಟಮೊದಲ ನಾಟಕ "ಸಂಧ್ಯಾರಾಗ" ಈ ನಾಟಕವನ್ನು ವ್ಹಿ. ಶಾಂತಾರಾಮ ಅವರು ಹಿಂದಿಯಲ್ಲಿ "ಸುಬಹ ಕಾ ತಾರಾ" ಎಂಬ ಚಲನಚಿತ್ರ ಮಾಡಿದರು. ನಾಟ್ಯಕವಿಕೇಸರಿ ಕಂದಗಲ್ ಹಣಮಂತರಾಯರು ಅಂದಾಜು ೩೬ ನಾಟಕಗಳನ್ನು ರಚಿಸಿದ್ದಾರೆ. ಅವೆಲ್ಲ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು. ಅಕ್ಷಯಾಂಬರ, ಚಿತ್ರಾಂಗದಾ, ಕುರುಕ್ಷೇತ್ರ, ಕಿರಾತಾರ್ಜುನ, ರಕ್ತರಾತ್ರಿ, ಬಾಣಸಿಗ ಭೀಮ, ಅಗ್ನಿಕಮಲ, ಮುಂತಾದವು ಪೌರಾಣಿಕ ನಾಟಕಗಳಾದರೆ, ವರಪ್ರದಾನ, ಸಂಧ್ಯಾರಾಗ ಹಾಗೂ ವೀರರಾಣಿ ಕಿತ್ತೂರು ಚೆನ್ನಮ್ಮ ಐತಿಹಾಸಿಕ ನಾಟಕಗಳು. ಬಡತನದ ಭೂತ, ಬೆಳ್ಳಿಚುಕ್ಕಿ, ಮಾತಂಗ ಕನ್ಯಾ ಮುಂತಾದವು ಸಾಮಾಜಿಕ ನಾಟಕಗಳು.

ತಮ್ಮ ನಾಟಕಗಳನ್ನು ತಾವೇ ಪ್ರಯೋಗಿಸಬೇಕು ಎಂಬ ಉತ್ಕಟ ಅಭಿಲಾಷೆಯಿಂದ ಕಂದಗಲ್ ಹಣಮಂತರಾಯರು ೧೯೨೪-೨೫ ರಲ್ಲಿ ಗುಳೇದಗುಡ್ಡದಲ್ಲಿ "ಲಲಿತ ಕಲಾ ನಾಟ್ಯಸಂಘ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆದರೆ ಕಾರಣಾಂತರಗಳಿಂದ ೧೯೨೯ರಲ್ಲಿ ಯರಾಶಿ ಭರಮಪ್ಪನವರ "ವಾಣೀವಿಲಾಸ ನಾಟಕ" ಕಂಪನಿಯಲ್ಲಿ ಕಂದಗಲ್‌ರು 'ಮಾಸ್ತರ' ಆಗಿ ಸೇರಿದರು. ಈ ಕಂಪನಿಯಲ್ಲಿ ಅವರು ಅನೇಕ ನಾಟಕಗಳನ್ನು ಬರೆದು ನಿರ್ದೇಶಿಸಿದರು, ಹಾಗೆಯೇ ಅನೇಕ ನಟ-ನಟಿಯರನ್ನು ತರಬೇತುಗೊಳಿಸಿದರು.

೧೯೪೦ನೆಯ ಇಸ್ವಿ ಹುಬ್ಬಳ್ಳಿಯ ವೃತ್ತಿರಂಗಭೂಮಿ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಿಂದ ಬರೆಯಬೇಕಾದ ವರ್ಷ. ಇದಕ್ಕೆ ಕಾರಣವೇನೆಂದರೆ ಕಂದಗಲ್ ಹಣಮಂತರಾಯರು ರಚಿಸಿದ 'ಬಡತನದ ಭೂತ' ನಾಟಕ ಅಭೂತಪೂರ್ವವಾಗಿ ನೂರು ಪ್ರಯೋಗಗಳನ್ನು ಕಂಡು ಶತಮಾನೋತ್ಸವವನ್ನು ಆಚರಿಸಿಕೊಂಡು ಹಣಮಂತರಾಯರನ್ನು ಕೀರ್ತಿ ಶಿಖರಕ್ಕೇರಿಸಿತು. ಆನಂತರದಲ್ಲಿ ಕಂದಗಲ್‌ರ ಸ್ನೇಹಿತರೆಲ್ಲರೂ ಸೇರಿ "ಅರವಿಂದ ನಾಟ್ಯಸಂಘ" ಎಂಬ ಸಂಸ್ಥೆಯನ್ನು ಕಟ್ಟಿ ಕಂದಗಲ್‌ರನ್ನು ಅದರ ಒಡೆಯರನ್ನಾಗಿಸಿದರು.

ಕನ್ನಡ ರಂಗಭೂಮಿಗೆ ಅತೀ ಹೆಚ್ಚು ಪರಿಣಾಮಕಾರಿ ನಾಟಕಗಳನ್ನು ನೀಡಿದ ಶ್ರೇಯಸ್ಸು ಕಂದಗಲ್‌ರಿಗೆ ಸೇರುತ್ತದೆ. ಕಂದಗಲ್‌ರು ನಾಟಕ ರಚನೆಯನ್ನು ಕೈಗೊಂಡ ಕಾಲ ಅತ್ಯಂತ ವಿಶಿಷ್ಟಕಾಲ. ಒಂದು ಕಡೆ ಅತ್ಯಂತ ಪ್ರತಿಭಾವಂತ ಪ್ರಬುದ್ಧ

ಕಲಾವಿದರಿದ್ದರೆ, ಇನ್ನೊಂದೆಡೆ ಆಸಕ್ತಿ ಇದ್ದರೂ ಅಕ್ಷರಾಭ್ಯಾಸವಿಲ್ಲದ ಕಲಾವಿದರಿದ್ದರು. ಚತುರ ಕಂದಗಲ್‌ರು ಇವೆಲ್ಲವನ್ನೂ ತೂಗಿಸಿಕೊಂಡು ಎಲ್ಲರ ಸಾಮರ್ಥ್ಯವನ್ನು ಬಳಸಿಕೊಂಡು ನಾಟಕಗಳನ್ನು ರಚಿಸಿ, ಯಶಸ್ವಿಯಾಗಿ ಪ್ರದರ್ಶಿಸುವ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸಿದರು. ಅವರು ಅಳವಡಿಸಿಕೊಂಡ ಪ್ರಾಸಬದ್ಧವಾದ ಪ್ರೌಢಶೈಲಿಯ ಸಂಭಾಷಣೆಗಳು ಅವರ ನಾಟಕಗಳಿಗೆ ಎಲ್ಲಿಲ್ಲದ ಮೆರಗನ್ನು ತಂದುಕೊಟ್ಟವು. ಕಂದಗಲ್‌ರ ನಾಟಕಗಳ ಸಂಭಾಷಣೆಯನ್ನು ಹೇಳುವುದೇ ಒಂದು ಸವಾಲು. ಸಾಹಿತ್ಯದ ಸೊಬಗಿನೊಂದಿಗೆ ಅರ್ಥಪೂರ್ಣವಾದ ಸಂಭಾಷಣೆಗಳು ನಾಟಕಾಸಕ್ತರ ಮನಸ್ಸನ್ನು ರಂಜಿಸುತ್ತಿದ್ದವು. ಕಂದಗಲ್ ಹಣಮಂತರಾಯರ ನಾಟಕ ರಚನೆಯನ್ನು, ವಿಷಯಗಳ ಸಮರ್ಥ ನಿವೇದನೆಯನ್ನು, ಭಾಷೆಯ ಸಮಯೋಚಿತ ಬಳಕೆಯನ್ನು, ಶಬ್ದದಲ್ಲಿ ಅಡಗಿರುವ ನವರಸಗಳನ್ನು ಹೊರಹೊಮ್ಮಿಸುವ ಪರಿಯನ್ನು ರಾಷ್ಟ್ರಕವಿ ಕುವೆಂಪುರವರು ಮನದುಂಬಿ ಮೆಚ್ಚಿದ್ದರು. ಇದೇ ಸಂದರ್ಭದಲ್ಲಿ ಕಂದಗಲ್ ಹಣಮಂತರಾಯರಿಗೆ ಕರ್ನಾಟಕ ಕವಿಕೇಸರಿ, ಕರ್ನಾಟಕದ ಶೇಕ್ಸಪಿಯರ್ ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಯಿತು.

ಕಂದಗಲ್‌ರ ನಾಟಕಗಳ ಸೃಷ್ಟಿಯ ಬಗ್ಗೆ ಒಂದು ಮಾತು ಹೇಳಲೇಬೇಕು. ಅವರೊಂದು ದಿನ ಕೆರೂರಿನಲ್ಲಿ ಅಡ್ಡ್ಯಾಡುತ್ತಿರುವಾಗ ಒಂದು ಕಿರಾಣಿ ಅಂಗಡಿಯಲ್ಲಿ ಒಂದು ಆಜಾನುಬಾಹು ವ್ಯಕ್ತಿ ಕುಳಿತಿತ್ತು. ಅವನನ್ನೇ ಕಂದಗಲ್ಲರು ನೋಡುತ್ತಾ ನಿಂತಾಗ ಗಿರಾಕಿಯೊಬ್ಬ ಬಂದು ಆ ವ್ಯಕ್ತಿಗೆ ಬೆಲ್ಲಾ ಕೊಡು ಎಂದ. ಆವಾಗ ಈ ಆಜಾನುಬಾಹು ವ್ಯಕ್ತಿ ಎಡಗೈಯಿಂದ ಬೆಲ್ಲದ ಪೆಂಟಿಯನ್ನು ಗುದ್ದಿ ಪುಡಿ ಮಾಡಿ ಕೊಟ್ಟ. ಇದನ್ನು ಗಮನಿಸಿದ ಕಂದಗಲ್‌ರು ಇವನನ್ನು ಗಮನದಲ್ಲಿಟ್ಟುಕೊಂಡೇ ನಾಟಕವೊಂದನ್ನು ರಚಿಸಿದರು. ಅದುವೇ ಜನಪ್ರಿಯವಾದ ನಾಟಕ 'ಬಾಣಸಿಗ ಭೀಮ' ಆ ಆಜಾನುಬಾಹು ವ್ಯಕ್ತಿಯೇ ಭೀಮನಾಗಿ ಅಭಿನಯಿಸಿದ, ಕರ್ನಾಟಕ ರಂಗಭೂಮಿಯಲ್ಲಿ ಶ್ರೇಷ್ಠ ನಟನೆಂಬ ಹೆಗ್ಗಳಿಕೆಗೆ ಪಾತ್ರನಾದ 'ಅದೃಶ್ಯಪ್ಪ ಮಾನ್ವಿ'.

ಕಂದಗಲ್‌ರ ಗರಡಿಯಲ್ಲಿ ನಟ–ನಟಿಯರು ಕರ್ನಾಟಕ ವೃತ್ತಿ ರಂಗಭೂಮಿಯಲ್ಲಿ ಅಜರಾಮರವಾದವರು: ಮಧ್ವರಾಜ ಉಮರ್ಜಿ, ಯಲಿವಾಳ ಸಿದ್ಧಯ್ಯ, ಹಂದಿಗನೂರು ಸಿದ್ಧರಾಮಪ್ಪ, ಕಿತ್ತಲಿ ಹೊಳಬಸಪ್ಪ, ಡಿ. ದುರ್ಗಾದಾಸ, ಲಾಡ್‌ಸಾಬ್ ಅಮೀನಗಡ, ಜುಬೇದಾಬಾಯಿ ಸವಣೂರ, ನಾಡೋಜ ಏಣಗಿ ಬಾಳಪ್ಪ, ಕುಕನೂರು ರಹೇಮಾನವ್ವ, ಸೋನುಬಾಯಿ ದೊಡ್ಡಮನಿ, ಡಾ.ಮಲ್ಲಿಕಾರ್ಜುನ ಮನಸೂರ, ಬಸವರಾಜ ಮನಸೂರ, ಮುಂತಾದವರು.

ಕನ್ನಡ ವೃತ್ತಿರಂಗಭೂಮಿಯ ಶ್ರೇಷ್ಠ ನಾಟಕ ತಂಡಗಳಾದ ಶ್ರೀ ಚೆನ್ನಬಸವೇಶ್ವರ ನಾಟ್ಯ ಸಂಘ, ಗುಬ್ಬಿ, ಶಾರದಾ ನಾಟ್ಯಸಂಘ, ಗೋಕಾಕ, ಕಲಾ ವೈಭವ ನಾಟ್ಯಸಂಘ, ಬೆಳಗಾವಿ, ಗಜಾನನ ನಾಟಕ ಸಂಘ, ಜಮಖಂಡಿ ಇವೆಲ್ಲ ಕಂಪನಿಗಳು ಕರ್ನಾಟಕದ ಒಳಗೆ ಮತ್ತು ಹೊರಗೆ ಕಂದಗಲ್‌ರ ಅನೇಕ ನಾಟಕಗಳನ್ನು ಪ್ರದರ್ಶಿಸಿವೆ.

ಕಂದಗಲ್‌ರ ಕರ್ಮಭೂಮಿ ಗುಳೇದಗುಡ್ಡ. ಪ್ರತಿ ಹುಣ್ಣಿಮೆಗೆ ಇಲ್ಲಿಯ ಮ್ಯಾಳಗಳು ನಾಟಕವನ್ನು ಪ್ರಯೋಗಿಸುತ್ತಿದ್ದವು. ಮುಪ್ಪಿನ ವಯಸ್ಸಿನಲ್ಲಿ ಕಂದಗಲ್‌ರಿಗೆ

ಹಸ್ತಪ್ರತಿ ಬರೆಯಲು ಸಾಧ್ಯವಾಗದಿದ್ದಾಗ ಅವರ ಮಾನಸ ಪುತ್ರರಾದ ದಿ.ಅಂಬೇಕರ ವಿಠಲರಾಯರು, ಕೃಷ್ಣಾಜಿ ಕಾರಕೂನ ಹಾಗೂ ಶ್ರೀ ವಸಂತ ಕುಲಕರ್ಣಿ ಮುಂತಾದವರು ಸಹಾಯ ಮಾಡುತ್ತಿದ್ದರು .

೧೯೫೮ ರಲ್ಲಿ ಸುಳ್ಳದ ದೇಸಾಯಿಯವರು ರಾಯರಿಂದ "ವೀರರಾಣಿ ಕಿತ್ತೂರ ಚೆನ್ನಮ್ಮಾ" ಎಂಬ ನಾಟಕವನ್ನು ಬರೆಸಿದರು. ನಾಟಕ ನೂರಾರು ಯಶಸ್ವಿ ಪ್ರಯೋಗಗಳನ್ನು ಕಂಡಿತು. ಭರ್ಜರಿ ಲಾಭ ಗಳಿಸಿತು. ರಂಗದ ಮೇಲೆ ಜೀವಂತ ಆನೆ, ಕುದುರೆಗಳನ್ನು ತರಲಾಯಿತು. ಅಂದಿನ ಖ್ಯಾತ ಸಿನೇಮಾ ನಟಿ ಎಚ್.ಪಿ.ಸರೋಜಾ ರಾಣಿ ಚೆನ್ನಮ್ಮನ ಪಾತ್ರದಲ್ಲಿ ಮಿಂಚಿದ್ದರು. ಈ ನಾಟಕದ ನೂರೈವತ್ತನೆಯ ಪ್ರಯೋಗಕ್ಕೆ ಅಂದಿನ ಕೇಂದ್ರ ಸಚಿವೆ ಶ್ರೀಮತಿ ಸರೋಜಿನಿ ಮಹಿಷಿ ಮುಖ್ಯ ಅತಿಥಿಯಾಗಿದ್ದರು. ಹಲಚಾದ ಮುಖ, ಸಾದುಗಪ್ಪು ಬಣ್ಣ, ಬಿಳಿ ಕೂದಲು, ಸಾಧಾರಣ ಎತ್ತರದ ನಿಲುವು, ತೆಳ್ಳಗಿನ ದೇಹ, ಬಿಳಿ ಅಂಗಿ, ಧೋತರ, ನಾಶಿಪುಡಿ ಬಣ್ಣದ ಕೋಟು, ಮೂಗಿನ ಮೇಲೆ ಕನ್ನಡಕ, ಕೈಯಲ್ಲಿ ಒಂದು ಬೆತ್ತದ ಕೋಲು, ಕಿಸೆಯಲ್ಲಿ ಸದಾ ಬೀಡಿಕಟ್ಟು, ಕಡ್ಡಿಪೆಟ್ಟಿಗೆ,. ಇದು ರಾಯರ ಭೌತಿಕ ಚಿತ್ರಣ. ಅವರು ಪಾದರಸದಂತೆ ಸದಾ ಕ್ರಿಯಾಶೀಲರಾಗಿರುತ್ತಿದ್ದರು.

ಅಂತ್ಯಕಾಲ ಕಂದಗಲ್ ಹಣಮಂತರಾಯರಿಗೆ ಕಷ್ಟಮಯವಾಗಿತ್ತು. ಅವರೇ ಬರೆದ 'ಬಡತನದ ಭೂತ' ನಾಟಕದ ಬಡತನ ಅವರನ್ನು ಭೂತದಂತೆ ಕಾಡಿತ್ತು. ಕೊನೆಗಾಲದಲ್ಲಿ ಬೆಲ್ಲದ ಚಹಾ, ಬೀಡಿ ಬಿಟ್ಟರೆ ಬೇರೇನೂ ಗತಿ ಇರಲಿಲ್ಲ. ತಮ್ಮ ಬಲಗೈ ಬಂಟ ಶ್ರೀ ಹಂಡಿ ಇವರ ತೊಡೆಯ ಮೇಲೆ ೧೩-೦೯-೧೯೬೬ರ ಬೆಳಗಿನ ೮ ಗಂಟೆಗೆ ರಾಯರ ಪ್ರಾಣಪಕ್ಷಿ ಹಾರಿಹೋಗಿತ್ತು.

ಕನ್ನಡ ವೃತ್ತಿರಂಗಭೂಮಿಯನ್ನು, ಕನ್ನಡಭಾಷೆ, ಸಂಸ್ಕೃತಿಯನ್ನು, ಭಾರತೀಯತೆಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಕಂದಗಲ್ ಹಣಮಂತರಾಯರು ತಾವು ಬಡವಾದರೂ ಕನ್ನಡರಂಗಭೂಮಿಯನ್ನು ಶ್ರೀಮಂತವಾಗಿಸಿದರು.

■ ■ ■



ಜುಬೇದಾಬಾಯಿ

# ರಂಗಕೋಗಿಲೆ

# ಜುಬೇದಾಬಾಯಿ

# (೧೯೩೧-೧೯೯೩)

● ಡಾ. ಶಶಿಧರ ನರೇಂದ್ರ

ಸಾದಾ ಬಣ್ಣದ ಪತ್ತಲ, ಕೈಯಲ್ಲೊಂದು ಬ್ಯಾಗು, ಸದಾ ಬಾಯಲ್ಲಿ ಸುವಾಸಿತ ತಾಂಬೂಲ, ತಲೆತುಂಬ ಸೆರಗು, ಮುಖದ ತುಂಬ ನಗು ಇಟ್ಟುಕೊಂಡು ಧಾರವಾಡ ಆಕಾಶವಾಣಿಯ ಆಲದಮರದ ಬುಡದ ಕಟ್ಟೆಯ ಮೇಲೆ ಯಾರಾದರೂ ಕುಳಿತಿದ್ದರೆ ಅವರೇ ಜುಬೇದಕ್ಕ ಎಂದು ಎಲ್ಲರೂ ದೂರದಿಂದಲೇ ತಿಳಿದು ಸ್ನೇಹದಿಂದ ಅವರ ಬಳಿ ಹೋದರೆ, ಅಕ್ಕ, ಅಣ್ಣ ಎಂದು ಆತ್ಮೀಯತೆಯಿಂದ ಮಾತನಾಡುವ ಜುಬೇದಾಬಾಯಿ ಆಕಾಶವಾಣಿಯಲ್ಲಿ ದಾಸರ ಪದ, ವಚನ, ರಂಗಗೀತೆಗಳ ಧ್ವನಿಮುದ್ರಣಕ್ಕೆ ಬಂದಾಗಿನ ದೃಶ್ಯವಿದು.

"ನಾನು ನಾಟಕಗಳಲ್ಲಿ ಅಭಿನಯಿಸುವುದರಿಂದ ಕೆಲವರಿಗೆ ಮಾತ್ರ ಪರಿಚಿತಳಾಗಿದ್ದೆ. ಆದರೆ ಆಕಾಶವಾಣಿಯ ನನ್ನ ಧ್ವನಿಯ ಮೂಲಕ ನಾನು ಬಹಳ ಜನರಿಗೆ ಸುಪರಿಚಿತಳಾಗಿದ್ದೇನೆ. ನನ್ನ ಹಾಡು ಕೇಳಿದ ಶ್ರೋತೃಗಳು ಅಭಿಮಾನದಿಂದ ಮಾತಾಡಿಸಿದಾಗ ಖುಷಿ ಆಗತೈತಿ, ಈ ಆಕಾಶವಾಣಿ ನನ್ನ ತವರಮನಿ ಇದ್ದಂಗ" ಎಂದು ಅಭಿಮಾನ ಪಡುತ್ತಿದ್ದ ಜುಬೇದಾಬಾಯಿ ನಮ್ಮ ವೃತ್ತಿ ರಂಗಭೂಮಿಯ ಅತ್ಯುತ್ತಮ ನಟಿ, ಗಾಯಕಿ. ಹಜರೆಸಾಬ್ ಮತ್ತು ಜೈನಬಿ ಅವರ ಮಗಳಾಗಿ ಹಜರೇಶಾ ಖಾದ್ರಿಯವರ ವರಪ್ರಸಾದದಿಂದ ಹುಟ್ಟಿದ ಮಗುವೇ ಹಜರತ್‌ಬೀ. ೧೯೩೧ರಲ್ಲಿ ಹುಟ್ಟಿದ ಈ ಹಜರತಬೀಯೇ ಜುಬೇದಾಬಾನು, ಜುಬೇದಾಬಾಯಿಯಾಗಿ ನಾಡಿಗೆಲ್ಲ ಹೆಸರಾದಳು. ಜುಬೇದಾರ ಅಜ್ಜ ಕಮಾಲ್ ಸಾಹೇಬರು ಸವಣೂರ ನವಾಬರ ಕಾಲದಲ್ಲಿ ಅತ್ಯುತ್ತಮ ಗಝಲ್ ಗಾಯಕರು. ಜುಬೇದಾರ ತಾಯಿ ಜೈನಬಿಗೂ ಸಂಗೀತದ ಸಂಸ್ಕಾರವಿತ್ತು. ಹಾಗಾಗಿ ಬಾಲ್ಯದಲ್ಲಿಯೇ ಅಜ್ಜ ಹಾಗೂ ತಾಯಿಯಿಂದ ಸಂಗೀತ ಬಳುವಳಿಯಾಗಿ ಜುಬೇದಾಬಾನುಗೆ ಬಂದಿತು. ಮನೆಯಲ್ಲಿ ಈ ಮಗುವನ್ನು ಹಜರತಬೀ ಎಂದು ಸಂತರ ಹೆಸರಿನಿಂದ ಹೇಗೆ ಕರೆಯುವುದು ಎಂದು ಜುಬೇದಾಬಾನು ಎಂದು ಕರೆಯತೊಡಗಿದರು.

ಜುಬೇದಾಳಿಗೆ ಬಾಲ್ಯದಿಂದಲೇ ಸಂಗೀತದೆಡೆ ವಿಶೇಷ ಆಕರ್ಷಣೆ, ಆಟ-ಪಾಠಗಳಿಗಿಂತ ಹಾಡುಗಳತ್ತಲೇ ಗಮನ. ಎಲ್ಲಿಯಾದರೂ ಹಾಡಿನ ಗ್ರಾಮೊಫೋನ್ ಹಚ್ಚಿದ್ದರೆ. ಬಾಲಕಿ ಜುಬೇದಾ ಹಸಿವೆ, ನೀರಡಿಕೆ ಮರೆತು ಆ ಗ್ರಾಮಾಫೋನ್ ಒದರುತ್ತಿರುವವರೆಗೂ ಆ ಜಾಗೆಯನ್ನು ಬಿಟ್ಟು ಕದಲುತ್ತಿರಲಿಲ್ಲ. ಎಷ್ಟೋಬಾರಿ ತಂದೆ-ತಾಯಿಗಳಿಂದ ಇದಕ್ಕೆ ಶಿಕ್ಷೆಯನ್ನು ಅನುಭವಿಸಿದ್ದಳು. ಆದರೆ ಸಂಗೀತದ ಹುಚ್ಚು

ಕಡಿಮೆಯಾಗುವುದರ ಬದಲು ಹೆಚ್ಚಾಗತೊಡಗಿತು. ಅಜ್ಜ ಬಾರಿಸುತ್ತಿದ್ದ ಹಾರ್ಮೋನಿಯಂದ ಮೇಲೆ ಮೊಮ್ಮಗಳ ಪುಟ್ಟ ಬೆರಳುಗಳು ಆಗಾಗ ಆಡುತ್ತಿದ್ದವು. ಒಟ್ಟಾರೆ ಬಾಲ್ಯದಲ್ಲಿ ನೆಮ್ಮದಿ ಎನಿಸಿದ್ದ ಬದುಕು ಬಹಳ ದಿನ ಉಳಿಯಲಿಲ್ಲ. ಜುಬೇದಾಳ ನಂತರ ಇಬ್ಬರು ಹೆಣ್ಣುಮಕ್ಕಳೇ ಹುಟ್ಟಿದರು. ತಂದೆ ಮತ್ತೊಂದು ಮದುವೆಯಾದರು. ಇತ್ತ ಜೈನಬಿ ಮೂರು ಹೆಣ್ಣು ಮಕ್ಕಳೊಂದಿಗೆ ಒಂಟಿಯಾದರು. ಜೈನಬಿಯ ತಂದೆ ತಾಯಿ ಈ ಕುಟುಂಬಕ್ಕೆ ಸಾಕಷ್ಟು ನೆರವಾಗಿದ್ದರು. ಆದರೂ ಉಂಡರೆ ಉಡಲು ಚಿಂತೆ. ಇಂತಹ ಸಂದರ್ಭದಲ್ಲಿ ಜುಬೇದಾ ೨ನೇ ಇಯತ್ತೆಯಲ್ಲಿಯೇ ಶಾಲೆಯನ್ನು ಬಿಟ್ಟು, ಸಂಸಾರದ ನೊಗಕ್ಕೆ ಹೆಗಲಾದರು.

ಆ ಸಂದರ್ಭದಲ್ಲಿ ಹಾವೇರಿಯಲ್ಲಿ ಹುಲಿಮನೆ ಸೀತಾರಾಮ ಶಾಸ್ತ್ರಿಗಳ ನಾಟಕ ಕಂಪನಿ ಪ್ರಯೋಗ ನಡೆದಿತ್ತು. ಸಂಗೀತದ ಗುಂಗಿನ ಜುಬೇದಾ ಕದ್ದು ಕದ್ದು ನಾಟಕಗಳನ್ನು ಹಾಡಿನ ಆಕರ್ಷಣೆಗೆ ನೋಡುತ್ತಿದ್ದಳು. ಆಗ ರಂಗಭೂಮಿಗೆ ಸ್ತ್ರೀ ಪಾತ್ರಧಾರಿಗಳು ಅಪರೂಪವೇ ಆಗಿದ್ದಂತಹ ಕಾಲ. ಅದರಲ್ಲೂ ಸಂಪ್ರದಾಯಸ್ಥ ಮುಸ್ಲಿಂ ಮಹಿಳೆಯನ್ನು ಆಯ್ಕೆ ಮಾಡಿಕೊಳ್ಳುವುದು ಕನಸಿನ ಮಾತೇ ಆಗಿತ್ತು. ಆದರೂ ಎಲ್ಲೂಬಾಯಿ ಗುಳೇದಗುಡ್ಡ, ವಜೀದಾಬಾಯಿ, ಗುಬ್ಬಿ ಜಯಮ್ಮ, ರೇಣುಕಮ್ಮ ಮುರಗೋಡರಂಥ ಕೆಲವು ಸ್ತ್ರೀಯರು ಅಲ್ಲಲ್ಲಿ ಕಂಪನಿಯಲ್ಲಿದ್ದರು. ಹಾವೇರಿಯ ಕಂಪನಿ ಕೆಲವೇ ದಿನಗಳಲ್ಲಿ ಹೊಸಪೇಟೆ ಹುಲಿಗೆಮ್ಮ ಜಾತ್ರೆಯಲ್ಲಿ ಕ್ಯಾಂಪ್ ಹಾಕಿದಾಗ ಜುಬೇದಾ ಸದ್ದಿಲ್ಲದೇ ಬಂದು ಕಂಪನಿ ಸೇರಿದಳು. ನಾನು ದೊಡ್ಡ ಗಾಯಕಳಾಗಬೇಕು, ರಂಗಭೂಮಿಗೆ ಬದುಕನ್ನು ಮೀಸಲಿಡಬೇಕು ಎಂಬಾಸೆ ಜುಬೇದಾಗೆ. ತಾಯಿಗೆ ಒಂದೆಡೆ ಮಗಳ ಚಿಂತೆ, ಮತ್ತೊಂದೆಡೆಗೆ ಮನೆತನದ ಮರ್ಯಾದೆ ಹಾಗೂ ಬಡತನದ ಚಿಂತೆ. ಆಗಲೂ ವಿಧಿ ಪೂರಕವಾಗಿರಲಿಲ್ಲ. ಸದ್ದಿಲ್ಲದೆ ಸೇರಿದ ಕಂಪನಿಯ ವಿಷಮಯ ವಾತಾವರಣದಿಂದ ಕಾಲ್ಕಿತ್ತು ಜುಬೇದಾ ನರೇಗಲ್ ಚೆನ್ನಬಸವಯ್ಯರ ಕಂಪನಿ ಸೇರಿದರು. ಅಲ್ಲಿ ಮೊದಲು ಬಣ್ಣ ಬಳಿದುಕೊಂಡಿದ್ದು 'ಚಂದ್ರಹಾಸ' ನಾಟಕದಲ್ಲಿ, ಮುಂದೆ ಜುಬೇದಾ ಎಂಬ ಶಿಲೆಯನ್ನೇ ತಿದ್ದಿ ತೀಡಿ ಮೂರ್ತಿಯನ್ನಾಗಿಸಿದವರು ಬಸವಲಿಂಗ ಶಾಸ್ತ್ರೀ ಬಾಳೀಮಠರು. ಇವರು ವಾರದ ಸಂಬಳ ನೀಡಿ, ಅಕ್ಷರಾಭ್ಯಾಸ ಮಾಡಿಸಿ, ರಂಗತರಬೇತಿ ನೀಡಿ, ಪಾತ್ರ ಮಾಡಿಸುತ್ತಿದ್ದರು. ಶಾಸ್ತ್ರಿಗಳ 'ಶ್ರೀವಾಗೀಶ ವಿಜಯ ನಾಟ್ಯ ಸಂಘ, ಹಾವೇರಿ' ಕಂಪನಿಯಲ್ಲಿ ಸಂಗೀತ ಪ್ರಧಾನವಾಗಿದ್ದ ಪ್ರಮುಖ ಪಾತ್ರಗಳನ್ನು ಜುಬೇದಾ ಮಾಡುತ್ತಿದ್ದರು. ಕಾರಣಾಂತರಗಳಿಂದ ವಾಗೀಶ ವಿಜಯ ನಾಟ್ಯ ಸಂಘ ಕಳಾಹೀನವಾದಾಗ ಬೇರೆ ಕಂಪನಿಗಳಲ್ಲಿ ಪಾತ್ರ ಮಾಡುತ್ತಿದ್ದರು. ಜೊತೆಗೆ ಆಗ ಖ್ಯಾತ ಸಂಗೀತಗಾರರಾಗಿದ್ದ ಕಣೇಕಲ್ ಗವಾಯಿಗಳು, ಕೋರಿಮಾಸ್ತರ್ ಹಾಗೂ ಪಂ. ಚಂದ್ರಶೇಖರ ಪುರಾಣಿಕಮಠ ಅವರಲ್ಲಿ ಸಂಗೀತದ ಅಧ್ಯಯನ ಮಾಡಿದರು. ಸುಶ್ರಾವ್ಯ ಶಾರೀರ ಮತ್ತು ರಂಗಭೂಮಿ ಇವರಿಗೆ ಒಲಿದಿತ್ತು. ಷೋಡಶಿ ಜುಬೇದಾ ಬಣ್ಣಹಚ್ಚಿ ರಂಗಪ್ರವೇಶಿಸಿ ಹಾಡಿದರೆ ಕಲಾರಸಿಕರು ಹಿರಿ ಹಿರಿ ಹಿಗ್ಗುತ್ತಿದ್ದರು. ಕಂದಗಲ್ಲರ–ರಕ್ತರಾತ್ರಿ, 'ಕುರುಕ್ಷೇತ್ರ'ದಲ್ಲಿ ದ್ರೌಪದಿಯ ಪಾತ್ರ, ರೇಣುಕಾ ಮಹಾತ್ಮೆಯ ರೇಣುಕಾ, ಹೇಮರೆಡ್ಡಿ ಮಲ್ಲಮ್ಮನಲ್ಲಿ, ಮಲ್ಲಮ್ಮ' ಇಂಥ ಪಾತ್ರಗಳನ್ನು ಮನಮುಟ್ಟುವಂತೆ ಅಭಿನಯಿಸಿ ಹಾಡುತ್ತಿದ್ದರು. ಆಗ ನಿನ್ನಂಥ ನಟಿಯನ್ನು ಪಡೆದದ್ದು ರಂಗಭೂಮಿಯ ಪುಣ್ಯ ಎಂದು ಕಂದಗಲ್‌ರು ಹಾರೈಸಿದರು. ರಕ್ತರಾತ್ರಿ ನಾಟಕದ ದ್ರೌಪದಿಪಾತ್ರದ

"ಹಂಬಲಿಸುವವನೊದೆದು ಕರ್ಮಕರಗುವಲ್ಲಿ ಪರಿಯಂತ ಶಾಂತಿಯಲಿ ಕಾಲ ಕಳೆ! ಉತ್ತರೆ! ಹಿಂದಿನ ಜನ್ಮದ ಅಗಾಧ ಕರ್ಮದಿಂದ ಹುಟ್ಟಿಬಂದ ಬಳಿಕ ಭೋಗವದು, ಭೋಗಿಸಲೇಬೇಕು. ಇಂತಹ ದೀರ್ಘ ಸಂಭಾಷಣೆಗಳನ್ನು ಅಸ್ಖಲಿತವಾಗಿ ಹೇಳುತ್ತಿದ್ದರೆ ಪ್ರೇಕ್ಷಕ ಮಂತ್ರ ಮುಗ್ಧನಾಗಿರುತ್ತಿದ್ದ.

ನಟ, ನಾಟಕಕಾರ ಗಿರಿಧರ ಪಾಟೀಲರ 'ಅಕ್ಕನ ಮಗಳು' ಅರ್ಥಾತ್ 'ನಾ ಮೆಚ್ಚಿದ ಹುಡುಗಿ' ನಾಟಕದಿಂದ ಜುಬೇದಾಬಾಯಿ ಪಾಟೀಲರ ಕಂಪನಿ ನಟಿಯಾದರು. 'ಅಕ್ಕಮಹಾದೇವಿ' ನಾಟಕದ ಹಿನ್ನೆಲೆ ಗಾಯಕಿಯಾಗಿಯೂ ಕೆಲಸ ಮಾಡಿದರು. ಗಿರಿಧರ ಪಾಟೀಲರು ಸೋದರರಾಗಿ ಅವರ ಬೆಂಗಾವಲಾಗಿದ್ದರು. ನಾಕೋಡರ ಕಂಪನಿ, ಭಾಂಡಗೆಯವರ ಕಂಪನಿ, ನಿಡಗುಂದಿ ಶೇಖರಯ್ಯ ನಾಟ್ಯ ಸಂಘ, ಹೀಗೆ ಅನೇಕ ಕಂಪನಿಗಳಲ್ಲಿ ಜುಬೇದಾಬಾಯಿ, ಯಲಿವಾಳ ಸಿದ್ದಯ್ಯ, ಕೆರೂರ ಬಸವರಾಜ, ಹಾವೇರಿ ಬಾಬಣ್ಣ, ಸೋಮಯ್ಯ ಶಿಗ್ಗಾಂವ, ಲಕ್ಷ್ಮೀದೇವಮ್ಮ ಮುಂತಾದವರೊಂದಿಗೆ ಪ್ರಮುಖ ಪಾತ್ರಗಳನ್ನು ಮಾಡುತ್ತಿದ್ದರು.

೧೯೭೦ರ ಹೊತ್ತಿಗೆ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದಾಗ ರಾಜರಾಜೇಶ್ವರಿ ಕಂಬೈನ್ಸ್‌ನ ಚಲನಚಿತ್ರದಲ್ಲಿ ಅಭಿನಯಿಸುವ ಅವಕಾಶವನ್ನು ಸ್ವೀಕರಿಸಲಿಲ್ಲ. ಹಾಗೆಂದು ಆರ್ಥಿಕವಾಗಿ ಉತ್ತಮ ಸ್ಥಿತಿಯನ್ನು ಅವರು ತಲುಪಲೇ ಇಲ್ಲ. ಕಡು ಬಡತನ, ತಾಯಿ, ಇಬ್ಬರು ತಂಗಿಯರು. ಈ ಇಡೀ ಕುಟುಂಬದ ನಿರ್ವಹಣೆ. ಮುಖ್ಯವಾಗಿ ತಂಗಿಯರ ವಿದ್ಯಾಭ್ಯಾಸಕ್ಕಾಗಿ ಜುಬೇದಾ ತುಂಬ ಕಷ್ಟಪಡುತ್ತಿದ್ದರು. ತಮಗೆ ಸಿಗದಿದ್ದ ವಿದ್ಯೆ ತಂಗಿಯರಿಗಾದರೂ ಸಿಗಲಿ ಎಂದು ಎಷ್ಟೇ ಕಷ್ಟ ಬಂದರೂ ಸೋದರಿಯರ ವಿದ್ಯಾಭ್ಯಾಸಕ್ಕೆ ನೆರವಾದರು. ಒಬ್ಬ ತಂಗಿಯ ಮದುವೆಯಾಯಿತು. ಇವರ ತಪಸ್ಸಿನ ಫಲವೆಂಬಂತೆ ತಂಗಿ ಗೌಹರಜಾನರಿಗೆ ಗುಲಬರ್ಗಾ ಆಕಾಶವಾಣಿಯಲ್ಲಿ ಉದ್ಘೋಷಕಿ ಹುದ್ದೆ ಲಭಿಸಿದಾಗ ಜುಬೇದಾರಿಗೆ ತುಂಬ ಸಂತಸವಾಯಿತು. ತಾಯಿ ಮತ್ತು ತಂಗಿಯರನ್ನು ಗುಲಬರ್ಗಾಕ್ಕೆ ಕಳಿಸಿ, ತಾವು ತಮ್ಮ ಒಂಟಿತನವನ್ನು ರಂಗಭೂಮಿಯ ನಂಟಿನೊಂದಿಗೆ ನಿಭಾಯಿಸಿದರು.

ಒಮ್ಮೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಪಂ. ಗುರುರಾವ್ ದೇಶಪಾಂಡೆ, ಪಂ. ಬಸವರಾಜ ರಾಜಗುರು, ಡಾ. ಮಲ್ಲಿಕಾರ್ಜುನ ಮನ್ಸೂರ, ಸುಭದ್ರಮ್ಮ ಮನ್ಸೂರ ಹಾಗೂ ಜುಬೇದಾರ ಸಂಗೀತ ಕಾರ್ಯಕ್ರಮ ಅಹೋರಾತ್ರಿ ನಡೆಯಿತು. ಸುಮಾರು ರಾತ್ರಿ ೨ ಘಂಟೆಗೆ ಜುಬೇದಾ ರೇಣುಕಾ ಮಹಾತ್ಮೆ, ಹೇಮರೆಡ್ಡಿ ಮಲ್ಲಮ್ಮ, ಕುರುಕ್ಷೇತ್ರ, ರಕ್ತರಾತ್ರಿ ನಾಟಕಗಳ ಗೀತೆಗಳನ್ನು ಹಾಡಿದಾಗ ಪ್ರೇಕ್ಷಕರಾದಿಯಾಗಿ ಹಿರಿಯ ಕಲಾವಿದರೆಲ್ಲರೂ ತುಂಬ ಮೆಚ್ಚಿಕೊಂಡರು. ಇಂಥ ಅಪರೂಪದ ರಂಗನಾಯಕಿ ಜಯ ಕರ್ನಾಟಕ ಸಂಘ, ಜಮಖಂಡಿ ಅನಂತರಾಯರ ಕಂಪನಿ, ಅರ್ಜುನಸಾ ನಾಕೋಡರ ಕಂಪನಿ, ಹೊಳೆಹಡಗಲಿ ಬಸವನಗೌಡರ ಆದಿಶಕ್ತಿ ನಾಟ್ಯಸಂಘ, ಕೊಟ್ಟೂರೇಶ್ವರ ನಾಟ್ಯಸಂಘ, ಮುಂತಾದ ಕಂಪನಿಗಳ ಪ್ರಮುಖ ನಾಟಕಗಳಲ್ಲಿ ಅಭಿನಯಿಸಿದರು. ೧೯೭೯ರಲ್ಲಿ ಗಿರಿಧರ ಪಾಟೀಲರೊಂದಿಗೆ ಮತ್ತೆ ನಾಟಕ ಕಂಪನಿ ಕಟ್ಟಿ ಸೋಲನ್ನು ಅನುಭವಿಸಿದರು. ಆ ಸಂದರ್ಭದಲ್ಲಿ ಅನಾರೋಗ್ಯದಿಂದ ಬಳಲಿದ ಪಾಟೀಲರನ್ನು ಜುಬೇದಾ ತಮ್ಮ ಕಾಳಜಿ, ಸೇವೆಯಿಂದ ಬದುಕಿಸಿಕೊಂಡರು.

☆ ☆

ಒಮ್ಮೆ ಹುಬ್ಬಳ್ಳಿಯ ಒಂದು ಸಭೆಯಲ್ಲಿ ಖ್ಯಾತ ನಾಟಕಕಾರ ಆರ್.ಡಿ. ಕಾಮತರು, ಎಚ್.ಕೆ. ಯೋಗಾನರಸಿಂಹ ಅವರು ಜುಬೇದಾರನ್ನು ಕಂಡು; ಜುಬೇದಮ್ಮ ರಂಗಭೂಮಿಗೊಂದು ಅಪರೂಪದ ಕೊಡುಗೆ ಎಂದು ಶ್ಲಾಘಿಸಿ, ಮುಂಬರುವ ಪೀಳಿಗೆಗಾಗಿ ರಂಗಗೀತೆಗಳನ್ನು ಸಂಗ್ರಹಿಸಲು ಇವರಿಂದ ೨೦ ಹಾಡುಗಳನ್ನು ಹಾಡಿಸಿ ಸಾಕಷ್ಟು ಗೌರವ ಧನವನ್ನು ನೀಡಿ ಕೊಂಡಾಡಿದರು. ಆಗ ಪತ್ರಿಕೆಗಳೂ ಹಾಡಿ ಹರಸಿದವು. ಜನರು 'ರಂಗಗೀತೆಗಳ ರಾಣಿ' ಎಂದು ಬಿರುದಿತ್ತು ಸನ್ಮಾನಿಸಿದರು. ಮುಂದೆ ೧೯೮೭ರಲ್ಲಿ ಎಂ.ಪಿ. ಪ್ರಕಾಶ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದಾಗ ದಿಲ್ಲಿಯಲ್ಲಿ ಆಚರಿಸಲಾದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜುಬೇದಾಬಾಯಿ ಅವರಿಂದ ಒಂದು ಘಂಟೆಗೂ ಮಿಕ್ಕಿ ರಂಗಗೀತೆಗಳ ಕಾರ್ಯಕ್ರಮ ನಡೆಯಿತು. ಅಲ್ಲಿ ಉಪಸ್ಥಿತರಿದ್ದ ಭಾರತೀಯ ಶ್ರೋತೃಗಳಲ್ಲದೇ ವಿದೇಶದ ಶ್ರೋತೃಗಳೂ ಕೂಡ ಜುಬೇದಾರ ಹಾಡುಗಳನ್ನು ತುಂಬ ಮೆಚ್ಚಿಕೊಂಡರು. ಮೈಸೂರು ದಸರಾ ಮಹೋತ್ಸವ, ಅನೇಕ ಪ್ರತಿಷ್ಠಿತ ಉತ್ಸವಗಳು, ದೇವರ ಹಿಪ್ಪರಗಿ, ಮುಧೋಳ, ಹಾವೇರಿ, ಚಿತ್ರದುರ್ಗ, ಹೀಗೆ ನಾಡಿನಾದ್ಯಂತ ತಮ್ಮ ಕೋಗಿಲೆಕಂಠದಿಂದ ಸುಗಮ ಸಂಗೀತ ಕಾರ್ಯಕ್ರಮ ನೀಡಿ ಸಮ್ಮಾನ, ಗೌರವಗಳನ್ನು ಸ್ವೀಕರಿಸಿದರು.

ತಂಗಿ ಗೌಹರಜಾನ್ ಧಾರವಾಡ ಆಕಾಶವಾಣಿಗೆ ಬಂದಾಗಿಂದ ಧಾರವಾಡದಲ್ಲಿ ತಾಯಿ, ತಂಗಿಯೊಂದಿಗೆ ನೆಲೆಸಿ ಸ್ವಲ್ಪ ನೆಮ್ಮದಿ ಹೊಂದಿದರು. ಈ ನಡುವೆ ಇವರ ಶ್ರೀಮಂತ ಅನುಭವಗಳನ್ನು ಆಕಾಶವಾಣಿ, ದಿನಪತ್ರಿಕೆಗಳು ಸಂದರ್ಶನದ ಮೂಲಕ ಹೊರಹಾಕತೊಡಗಿದವು. ೧೯೮೩ರಲ್ಲಿ ಆಕಾಶವಾಣಿ ಧಾರವಾಡ ನಿಲಯವು ಏರ್ಪಡಿಸಿದ್ದ 'ರಾಗ-ರಂಗ' ಎಂಬ ರಂಗಗೀತೆಗಳ ಕಾರ್ಯಕ್ರಮದಲ್ಲಿ ಪಂ. ಬಸವರಾಜ್ ರಾಜಗುರು, ಸುಭದ್ರಮ್ಮ ಮನ್ಸೂರ ಮುಂತಾದ ಗಾಯಕರ ಜೊತೆ ಇವರ ಕಾರ್ಯಕ್ರಮವನ್ನು ಏರ್ಪಡಿಸಿ ಸನ್ಮಾನಿಸಿತು. ೧೯೮೫ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಮತ್ತು ೧೯೯೩ರಲ್ಲಿ ನಡೆದ ದಿ. ಗುಬ್ಬಿ ವೀರಣ್ಣ ಶತಮಾನೋತ್ಸವ ಸಮಾರಂಭದಲ್ಲಿ ಜುಬೇದಾರನ್ನು ಸನ್ಮಾನಿಸಲಾಯಿತು. ಸುಮಾರು ಮೂರು ದಶಕಗಳ ಕಾಲ ಬೆಂಗಳೂರು, ಧಾರವಾಡ, ಹೈದರಾಬಾದ್ ಮುಂತಾದ ಆಕಾಶವಾಣಿ ಕೇಂದ್ರಗಳಲ್ಲಿ ಸುಗಮ ಸಂಗೀತ, ರಂಗಸಂಗೀತದ ಸುಧೆಯನ್ನು ಹರಿಸಿದರು.

ಈ ರೀತಿ ನೂರಾರು ನಾಟಕಗಳಲ್ಲಿ ಸಾವಿರಾರು ಗೀತೆಗಳನ್ನು ಹಾಡುತ್ತ 'ರಂಗಗೀತೆಗಳ ರಾಣಿ'ಯಾಗಿ, ಪ್ರೇಕ್ಷಕರಿಗೆ ಸ್ಮರಣೀಯ ಪಾತ್ರಗಳನ್ನು ನೀಡಿ, ಸುಶ್ರಾವ್ಯ ಗೀತೆಗಳನ್ನುಣಬಡಿಸಿದ ಜುಬೇದಾ ಅವರ ಮಧುರಮಯ ಬದುಕಿಗೆ ಮಧುಮೇಹ ತುಂಬ ಹಾನಿ ಮಾಡಿತು. ಅನಾರೋಗ್ಯ ಅವರನ್ನು ಬಿಡದೇ ಸತಾಯಿಸಿ, ಮೇ ೩೧, ೧೯೯೩ ರಂದು ಜುಬೇದಾರ ಪಾತ್ರವನ್ನು ತೆರೆಯ ಮರೆಗೆ ಸರಿಸಿತು. ಕರ್ನಾಟಕ ರಂಗಭೂಮಿ ಇತಿಹಾಸದಲ್ಲಿ ಸಂಪ್ರದಾಯವನ್ನು ಮೀರಿ ರಂಗನಿಷ್ಠೆಯನ್ನು ತೋರಿದ ದಿಟ್ಟ ಮಹಿಳೆ, ರಂಗಗೀತೆಗಳ ಸಾಮ್ರಾಜ್ಞಿ ಜುಬೇದಾಬಾಯಿ ಸವಣೂರ ಯುವಪೀಳಿಗೆಗೊಂದು ದಾರಿದೀಪ. (ನೆರವು ರಂಗಕೋಗಿಲೆ ಜುಬೇದಾಬಾಯಿ ಕೃತಿ-ಲೇ-ವೀಣಾ ಕುಲಕರ್ಣಿ.)

■■■



ಪಂ. ಬಸವರಾಜ ಮನಸೂರ

# ನಟಶೇಖರ

# ಪಂ. ಬಸವರಾಜ ಮನಸೂರ

## (೧೯೦೫-೧೯೭೬)

● ಮಾರ್ತಾಂಡಪ್ಪ ಎಮ್. ಕತ್ತಿ.

ಒಂದು ಕಲೆಯನ್ನು ಕರಗತಮಾಡಿಕೊಳ್ಳುವುದಕ್ಕೆ ಗುರುವಿನ ಪದತಲದಲ್ಲಿ ಕುಳಿತು ಕಲಿಯಲೇಬೇಕೆಂದು ಕಡ್ಡಾಯವೇನೂ ಇಲ್ಲ. ಕುರಿತು ಓದದಯೇ ಕನ್ನಡಿಗರು ಕಾವ್ಯಪ್ರಯೋಗ ಪರಿಣಿತಮತಿಗಳೆಂದು ನೃಪತುಂಗ ಚಕ್ರವರ್ತಿ ಹೇಳಿದ್ದಾನೆ. ಅಂತೆಯೇ ಬಸವರಾಜ ಮನಸೂರರು ಸಹ ನೋಡಿ ಕಲಿತ ರಸಾನುಭವವೇ ಹೆಚ್ಚು. ಅವರು ಒಬ್ಬ ರಂಗಕಲಾವಿದರಾಗಿ ಉಳಿಯದೆ ಸಂಗೀತ ಮತ್ತು ರಂಗಭೂಮಿಯ ಕಲಾವಿದರಾಗಿ, ಸಂಗೀತ ಮತ್ತು ರಂಗಭೂಮಿಯ ಉಳಿವಿಗಾಗಿ ದುಡಿದ ಹಿರಿಮೆ ಅವರದು. ಅಂಥ ಹಿರಿಯ ಜೀವಿಯ ಅವಲೋಕನ ಮಾಡುವುದು ಇಂದಿನ ಪೀಳಿಗೆಗೆ ಅವಶ್ಯಕತೆ ಇದೆ.

ಧಾರವಾಡದ ಪಶ್ಚಿಮ ದಿಕ್ಕಿನಲ್ಲಿ ಸುಮಾರು ಒಂಬತ್ತು ಕಿ.ಮೀ. ಅಂತರದಲ್ಲಿ ಮಲೆನಾಡಿನ ಅಂಚಿನಲ್ಲಿ ಹಸುರಿನ ಹೊನ್ನ ಹೊತ್ತ ರಮಣೀಯ ನಿಸರ್ಗದ ಮಡಿಲಲ್ಲಿ ಕಾಣಿಸುವುದೇ ಮನಸೂರೆಗೊಳ್ಳುವ ಪುಟ್ಟ ಗ್ರಾಮ ಮನಸೂರು. ಹಳ್ಳ-ಕೊಳ್ಳಗಳ ಬದಿಯಲ್ಲಿ ಗಿಡ-ಮರಗಳ ಮೈನೆರಳಿನಲ್ಲಿ ನೆಲೆಸಿರುವಳು ಭಕ್ತರ ಭಾಗ್ಯದೇವತೆ, ಆದಿಶಕ್ತಿಯ ಅವತಾರ ಹಳ್ಳದ ಕರೆಮ್ಮದೇವಿ. ಈ ದೇವಿಯೆ ಮನಸೂರ ಗ್ರಾಮದೇವತೆ. ಪಂಡಿತ ಬಸವರಾಜ ಮನಸೂರರ ಆರಾಧ್ಯ ದೇವತೆ. ಮನುಕುಲದ ಉದ್ಧಾರಕ್ಕೆ ಹೆಸರುವಾಸಿಯಾದ ಕರೆಮ್ಮ ತಾಯಿ ದುಷ್ಟರ ಪಾಲಿಗೆ ಉಗ್ರ ಸ್ವರೂಪಳೂ ಹೌದು, ಭಕ್ತಿಯಿಂದ ಆರಾಧಿಸುವ ಭಕ್ತರ ಸ್ವಪ್ನದಲ್ಲಿ ಬಂದು ವರ ನೀಡುವ ಮಹಾಶಕ್ತಿ ದೇವಿಯೂ ಕೂಡ.

ಮನಸೂರ ಗ್ರಾಮದ ಇತಿಹಾಸವನ್ನು ಅವಲೋಕಿಸಿದಾಗ ಅಂದು ಅದೊಂದು ಕುಗ್ರಾಮ. ದಟ್ಟ ಕಾಡು, ಗುಡ್ಡ ಹಳ್ಳಕೊಳ್ಳಗಳ ಮಧ್ಯೆ ಭತ್ತದ ಗದ್ದೆಗಳ, ಅಲ್ಲಲ್ಲಿ ವಾಸವಾಗಿರುವ ಒಕ್ಕಲಿಗ ಹಿಂದೂ ಅವಿಭಕ್ತ ಕುಟುಂಬಗಳು. ಅಲ್ಲೊಂದು ಇಲ್ಲೊಂದು ಮನೆಗಳ ಬೀಡು. ಈ ಕಾಡು ಹಳ್ಳಿನಾಡಾಗಿ ಪರಿವರ್ತನೆಗೊಳ್ಳಲು ದೈವಶಕ್ತಿಯ ಕೃಪೆಯೂ ಕಾರಣ. ಅಂದು ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾದಾಗ ಭಕ್ತಿ ಭಂಡಾರಿ ಅಣ್ಣ ಬಸವಣ್ಣನ ಅಕ್ಕನ ಮಗ ಚೆನ್ನಬಸವಣ್ಣನವರು ದಾಂಡೇಲಿಮಾರ್ಗವಾಗಿ ಉಳವಿಕ್ಷೇತ್ರಕ್ಕೆ ಹೋಗುವ ಸಮಯದಲ್ಲಿ ಮನಸೂರಿನಿಂದ ಎರಡು ಕಿ.ಮೀ. ಅಂತರದಲ್ಲಿ ಸ್ವಲ್ಪ ಸಮಯ ತಂಗಿದ್ದರು. ಅದರ ಕುರುಹು ಇಂದಿಗೂ ಗುಡ್ಡದ ಮೇಲೆ ಕಾಣಿಸುವ ದೇವಸ್ಥಾನ, ಅದು ಚೆನ್ನಬಸವಣ್ಣನವರ ಪ್ರಾರ್ಥನೆಯ

ಪೂಜಾಸ್ಥಳ. ಶಿವಲಿಂಗ, ಬಸವಣ್ಣ ಹಾಗೂ ಬಿಲ್ವ ಪತ್ರೆ ಗಿಡ ಇಂದಿಗೂ ಸಾರಿ ಸಾರಿ ಹೇಳುತ್ತವೆ ಶಿವಭಕ್ತರ ಪೂಜಾ ಪವಿತ್ರ ಸ್ಥಳವಿದೆಂದು.

ಮನಸೂರ ಆಗ್ನೇಯ ದಿಕ್ಕಿನಲ್ಲಿ ಪ್ರಸಿದ್ಧ ನುಗ್ಗಿಕೇರಿಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನವಿದೆ. ಕಾಲ್ನಡಿಗೆಯಿಂದ ಹೋದರೆ ಸುಮಾರು ೩–೪ ಕಿ.ಮೀ. ಅಂತರದಲ್ಲಿ ನುಗ್ಗಿಕೇರಿ ಇದೆ. ಪೂರ್ವಕ್ಕೆ ೨ ಕಿ.ಮೀ. ಅಂತರದಲ್ಲಿ ಡಾ. ಪಾವಟೆ ಶ್ರಮಪಟ್ಟು ಸ್ಥಾಪಿಸಿದ ಕರ್ನಾಟಕ ವಿಶ್ವವಿದ್ಯಾಲಯ. ಮನಸೂರಿನ ಬಹುಜನರ ಜೀವನೋಪಾಯಕ್ಕೆ ಆಧಾರಸ್ತಂಭವಾದ ವಿಶ್ವವಿದ್ಯಾಲಯ. ಮನಸೂರಿನ ಈಶಾನ್ಯದಿಕ್ಕಿನಲ್ಲಿ ಮಹಾ ತಪಸ್ವಿ, ತೇಜೋಮೂರ್ತಿ, ಜ್ಞಾನದ ಖಣಿ ಶ್ರೀ ಕುಮಾರಸ್ವಾಮಿಗಳ ತಪೋವನವಿದೆ. ದೇಶ ವಿದೇಶಗಳಿಂದ ಭಕ್ತಜನರು ಆಗಮಿಸಿ ಸ್ವಾಮಿಗಳ ದೇಗುಲದಲ್ಲಿ ಪ್ರಾರ್ಥನೆಗೈದು ಪುನೀತರಾಗುತ್ತಾರೆ. ಪ್ರತಿ ಪೌರ್ಣಿಮೆಯ ದಿನ ವಿಶೇಷ ಪ್ರಾರ್ಥನೆ, ಪ್ರಾರ್ಥನಾಮಂದಿರದ ದರ್ಶನವೂ ಸಹ ಅಂದು ಆಗುತ್ತದೆ.

ಪಂ. ಬಸವರಾಜರ ಪರಿಚಯದ ಹಿನ್ನೆಲೆ ತುಂಬಾ ಸರಳವಾಗಿದೆ. ಸಂಗೀತರತ್ನ, ಗಾನಗಂಧರ್ವ ಡಾ. ಮಲ್ಲಿಕಾರ್ಜುನ ಮನಸೂರರ ಹಿರಿಯ ಅಣ್ಣಂದಿರಾದ ಬಸವರಾಜರ ವ್ಯಕ್ತಿತ್ವ ಬಹುಮುಖ ಪ್ರತಿಭೆಯಿಂದ ಕೂಡಿದೆ. ಬಸವರಾಜರು ಸ್ನೇಹಜೀವಿ ಹಾಗೂ ಪುಸ್ತಕ ಪ್ರೇಮಿ, ಜಾತಿ ಭೇದವಿಲ್ಲದ ಗೆಳೆತನ. ಬೆಂಗಳೂರು ನಗರದ ಖ್ಯಾತ ಸಾಹಿತಿ ದಿ. ಶ್ರೀ ಅ.ನ.ಕೃ. ರವರು ಬಸವರಾಜರ ಆಪ್ತ ಸ್ನೇಹಿತ. ಸದಾ ಓದುವ ಗೀಳು ಬಸವರಾಜರಿಗೆ. ಬಂಗಾಲ ಸಾಹಿತ್ಯದ ಕಣ್ಮಣಿ ಶ್ರೀ ಹರಿಶ್ಚಂದ್ರ ಚಟ್ಟೋಪಾಧ್ಯಾಯ, ಬಂಕಿಮಚಂದ್ರ ಹಾಗೂ ರವೀಂದ್ರನಾಥ ಠಾಗೋರರ ಉತ್ಕೃಷ್ಟ ಕೃತಿಗಳನ್ನು ಓದುವದರಲ್ಲಿ ನಿಸ್ಸೀಮರು, ಓದುವಾಗ ಬಾಹ್ಯ ಪ್ರಪಂಚದ ಅರಿವೇ ಇರುತ್ತಿರಲಿಲ್ಲ. ಮ್ಯಾಕ್ಸಿಂಗಾರ್ಕಿಯವರ 'ಮದರ್' ಕಾದಂಬರಿಯ ಕನ್ನಡ ಅನುವಾದ ತಾಯಿ ಕಾದಂಬರಿ ಅವರ ಮನದಾಳದಲ್ಲಿ ಬೇರೂರಿತ್ತು. ತಮ್ಮ ಸಮಕಾಲೀನ ನಟವರ್ಗದವರ ಬಗ್ಗೆ ತುಂಬಾ ಹೆಮ್ಮೆ, ಅಭಿಮಾನ ಮನಸೂರ ಅವರಿಗೆ. ಬೇರೆಯವರ ಕಷ್ಟ ಕಾರ್ಪಣ್ಯಗಳಲ್ಲಿ ತಮ್ಮ ಕೈಲಾದ ಸಹಾಯವನ್ನು ಮಾಡುತ್ತಿದ್ದರು. ಸಹೋದರ ಡಾ. ಮಲ್ಲಿಕಾರ್ಜುನರ ಏಳಿಗೆಗೆ ಪರೋಕ್ಷವಾಗಿ ಶ್ರೀ ಬಸವರಾಜರೇ ನಿಜಕ್ಕೂ ಕಾರಣ. ಹಗಲಿರುಳು ತಮ್ಮನ ಗಾನಕಲೆಗೆ ಪ್ರೋತ್ಸಾಹಿಸಿ, ಇಷ್ಟೊಂದು ಹೆಸರುವಾಸಿಯಾಗಲು ಬಸವರಾಜರೇ ಕಾರಣ. ಎಲೆಯ ಮರೆಯ ಕಾಯಿಯಂತೆ ತಾವು ಹಿಂದೆ ನಿಂತು ಸಹೋದರನ ಏಳಿಗೆಗೆ ಆಸರೆಯಾದರು. ಅವರ ಮನಸ್ಸಿನಲ್ಲಿ ಕಿಂಚಿತ್ತೂ ಗರ್ವವಿರಲಿಲ್ಲ. ಮಾತೃಹೃದಯದ ಬಸವರಾಜರು ಕೋಮಲ ಸ್ವಭಾವದವರು. ಯಾರೊಡನೆಯೂ ವೈರತ್ವ ಹೊಂದಿದವರಲ್ಲ. ಚಿಕ್ಕ ಮಕ್ಕಳ ಜೊತೆ ತುಂಬಾ ಸ್ನೇಹದಿಂದ ಇರುತ್ತಿದ್ದರು. ಯಾರು ಎಷ್ಟೇ ಚಿಕ್ಕವರಿರಲಿ, ದೊಡ್ಡವರಿರಲಿ ಅವರೊಂದಿಗೆ ಪ್ರೀತಿ ವಿಶ್ವಾಸದಿಂದ ಮಾತನಾಡುತ್ತಿದ್ದರು. ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆ.

ಪಂಡಿತ ಬಸವರಾಜರ ಪೂರ್ವಜರು ಮೂಲತಃ ಬೆಳಗಾವಿ ಜಿಲ್ಲೆಯ ಪಾಚ್ಛಾಪುರದ ಸಮೀಪವಿರುವ ಬಸಾಪುರಗ್ರಾಮದವರೆಂದು ಅವರ ವಂಶಸ್ಥರಿಂದ ತಿಳಿದುಬರುತ್ತದೆ. ಇವರು ಬಸಾಪುರದ ಗೌಡಕಿಯ ಮನೆತನದವರು. ವಿಜಾಪುರದ ದೊರೆ ಆದಿಲ್‌ಶಾಹಿ ಸನದುರೂಪದಲ್ಲಿ ಈ ಮನೆತನಕ್ಕೆ ೪೦೦–೫೦೦ ಎಕರೆ ಜಮೀನು

ನೀಡಿದ್ದನಂತೆ. ಮೊದಲು ಆದಿಲ್‌ಶಾಹಿ ಒಡೆತನಕ್ಕೆ ಒಳಪಟ್ಟ ಗ್ರಾಮ ತದನಂತರ ಕೊಲ್ಲಾಪುರದ ಮರಾಠರ ವಶಕ್ಕೆ ಹೋಯಿತು. ರಾಜಕೀಯ ಗೊಂದಲಗಳಿಂದ ಕಿರಿಕಿರಿ ಅನುಭವಿಸಿದ ಕುಟುಂಬ ಆ ಗ್ರಾಮ ಬಿಟ್ಟು ಮನಸೂರ ಗ್ರಾಮಕ್ಕೆ ವಲಸೆ ಬಂದದ್ದು ಈಗ ಇತಿಹಾಸ. ಆಗ ಮನಸೂರ ಗ್ರಾಮ ಧಾರವಾಡದ ದೇಶಪಾಂಡೆಯವರ ಕಂದಾಯದ ಆಧೀನದಲ್ಲಿತ್ತು. ಬಸವರಾಜರ ಹಿರಿಯರಾದ ಭೀಮರಾಯಪ್ಪ, ದೇಶಪಾಂಡೆಯವರ ಒಕ್ಕಲಿಗರಾಗಿ ಜಮೀನು ಸಾಗುವಳಿ ಮಾಡುತ್ತ ಶತಮಾನ ಕಳೆದುಹೋಗಿತ್ತು. ಮನಸೂರರ ಮನೆತನಕ್ಕೆ ಮೊದಲು ಯರಿಹಕ್ಕಲ ಮನೆಯವರೆಂದು ಕರೆಯುತ್ತಿದ್ದರು.

ಮನಸೂರ ಕುಟುಂಬದವರು ಕಷ್ಟಜೀವಿಗಳು, ಹಗಲಿರುಳೆನ್ನದೆ ವರ್ಷವಿಡೀ ಕಷ್ಟಪಟ್ಟು ದುಡಿದು ದೇವಸ್ಥಾನಗಳಲ್ಲಿ ಇನಾಮದಾರರಿಗೆ ಹೆಚ್ಚಿನ ಪಾಲು ಕೊಟ್ಟು, ಸ್ವಲ್ಪದರಲ್ಲಿ ತಮ್ಮ ಬದುಕು ಸಾಗಿಸುತ್ತಿದ್ದರು. ಭೀಮರಾಯಪ್ಪನವರ ಮನೆ ಮನಸೂರು ಗ್ರಾಮದ ಈಗಿನ ಕೆಳಗಿನ ಓಣಿಯಲ್ಲಿತ್ತು. ಭೀಮರಾಯಪ್ಪನವರ ತಂದೆಗೆ ನಾಲ್ಕು ಜನ ಅಣ್ಣ-ತಮ್ಮಂದಿರು. ಒಂದೇ ಮನೆಯಲ್ಲಿ ನಾಲ್ಕು ಪಾಲು. ಒಂದು ಅಡುಗೆ ಮನೆ, ಒಂದು ಪಡಸಾಲೆ ಹಾಗೂ ದನಕರುಗಳನ್ನು ಕಟ್ಟಲು ಪ್ರತ್ಯೇಕ ಕೊಟ್ಟಿಗೆ. ಭೀಮರಾಯಪ್ಪನ ಸಹೋದರರು ಬಸಪ್ಪ, ಕಲ್ಲಪ್ಪ. ಲಿಂಗಪ್ಪ ಬಹಳ ಅನ್ಯೋನ್ಯ ಸಂಬಂಧ ಈ ಸಹೋದರರದು.

ಭೀಮರಾಯಪ್ಪನವರಿಗೆ ಅನುರೂಪಳಾದ ಪತ್ನಿ ನೀಲಮ್ಮಾ. ಹಿರಿಯರಿಂದ ಬಳುವಳಿಯಾಗಿ ಬಂದ ಮನೆ ಇತ್ತು. ಪಾಲಿಗೆ ಬಂದ ಮನೆಯಲ್ಲಿ ಸುಖದಿಂದಿದ್ದರು. ಭೀಮರಾಯಪ್ಪವರು ಮುಲ್ಕಿ ಪರೀಕ್ಷೆಯನ್ನು ಧಾರವಾಡದಲ್ಲಿ ಪಾಸಾಗಿದ್ದರು. ಮನಸೂರಿನಲ್ಲಿ ಯಾವ ಖಾಸಗಿ ಅಥವಾ ಸರಕಾರಿ ಗುರುಕುಲಗಳಿರಲಿಲ್ಲ. ಶಿಕ್ಷಣ ಪಡೆಯಬೇಕಾದರೆ ಒಂದೂರಿಂದ ಇನ್ನೊಂದೂರಿಗೆ ಹೋಗಿ ಬಹಳ ಕಷ್ಟಪಟ್ಟು ಕಲಿಯಬೇಕಾಗುತ್ತಿತ್ತು. ಹೀಗೆ ಶಿಕ್ಷಣ ಪಡೆದವರಿಗೆ ಊರಲ್ಲಿ ಬಹಳ ಗೌರವವಿತ್ತು. ಆದ್ದರಿಂದಲೇ ಪೊಲೀಸ್ ಪಾಟೀಲರೆಂದು ಭೀಮರಾಯಪ್ಪನವರು ನಿಯುಕ್ತರಾದರು. ಊರಲ್ಲಿನ ಯಾವುದೇ ತರಹದ ತಂಟೆ ತಕರಾರುಗಳನ್ನು ಭೀಮರಾಯಪ್ಪನವರೇ ಬಗೆಹರಿಸುತ್ತಿದ್ದರು. ಯಾವುದೇ ದೂರುಗಳು ಬಂದರೂ ಅವುಗಳನ್ನು ನಿಷ್ಪಕ್ಷಪಾತವಾಗಿ ತೆಗೆದುಕೊಂಡು ಅನ್ಯಾಯದ ವಿರುದ್ಧ ನ್ಯಾಯದ ಪರವಾಗಿ ತೀರ್ಪು ನೀಡುತ್ತಿದ್ದರು. ಅವರ ನ್ಯಾಯ 'ಹಂಸಕ್ಷೀರ ನ್ಯಾಯ'ದಂತೆ ಹೆಸರು ಮಾಡಿತ್ತು. ಭೀಮರಾಯಪ್ಪನವರ ಧರ್ಮಪತ್ನಿ ಸುಶೀಲಳು, ಮೃದುಸ್ವಭಾವದಳು, ಉದಾರ ಮನೋಭಾವ ಹೊಂದಿದ್ದ ಸಾಧ್ವಿ ಶಿರೋಮಣಿ. ಹಿಂದೂ ಸಂಸ್ಕೃತಿಯಂತೆ ಹೆಣ್ಣುಮಕ್ಕಳ ಮೊದಲ ಪ್ರಸೂತಿ ತವರಮನೆಯಲ್ಲಿಯಾಗುವ ಪ್ರತೀತಿ. ಅದರಂತೆ ನೀಲಮ್ಮನವರ ತವರುಮನೆಯಾದ ಕಮಲಾಪುರದಲ್ಲಿ ಬಸವರಾಜರ ಜನನವಾಯಿತು. ಚೆನ್ನವೀರಪ್ಪನವರಿಗೆ ಗಂಡುಸಂತಾನವಿಲ್ಲದ ವೇಳೆಯಲ್ಲಿ ಬಸವರಾಜರ ಜನನವಾದಾಗ ಅವರ ಕುಟುಂಬವರ್ಗದ ಆನಂದಕ್ಕೆ ಮಿತಿಯೇ ಇರಲಿಲ್ಲ. ಮೊದಲೇ ಶ್ರೀಮಂತ ಕುಟುಂಬ, ಹದಿಮೂರನೇ ದಿನದ ನಾಮಕರಣ ಉತ್ಸವ ಕಮಲಾಪುರ, ಮಾಳಾಪುರ, ಮೃತ್ಯಂಜಯ ನಗರ ನಿವಾಸಿಗಳಿಗೆ ಹಬ್ಬದ ವಾತಾವರಣ ಉಂಟುಮಾಡಿತ್ತು. ಬಸವರಾಜರಿಗೆ ಯಾವುದಕ್ಕೂ ಕೊರತೆಯಿರಲಿಲ್ಲ. ಲಾಲನೆ, ಪಾಲನೆ, ಪೋಷಣೆಯೆಲ್ಲ

ತವರಿನ ಆಶ್ರಯದಲ್ಲಿ ಜರುಗಿತು. ಭೀಮರಾಯಪ್ಪ ದಂಪತಿಗಳಿಗೆ ಮೊದಲು ಗಂಡುಮಗು ಎಂಬ ಹೆಗ್ಗಳಿಕೆಯಾದರೆ, ಅದನ್ನೇ ಚೆನ್ನವೀರಪ್ಪನವರು ದತ್ತಕಪುತ್ರನನ್ನಾಗಿ ಪಡೆಯಬೇಕೆಂದು ದೂರಾಲೋಚನೆ. ಬಸವರಾಜರು ಹುಣ್ಣಿಮೆಯ ಚಂದ್ರನಂತೆ ದಿನದಿಂದ ದಿನಕ್ಕೆ ಬೆಳೆಯಲಾರಂಭಿಸಿದರು. ಎರಡು ಮನೆತನಗಳ ಕರುಳಿನ ಕುಡಿಯಾದ್ದರಿಂದ ಇವರ ಬಾಲ್ಯಜೀವನ ಸುಖದ ಸುಪ್ಪತ್ತಿಗೆಯಲ್ಲಿ ಕಳೆಯಿತು.

ಬಸವರಾಜರ ಬಾಲಮನದ ಮೇಲೆ ಸಂಗೀತ–ಸಾಹಿತ್ಯದ ಪ್ರಭಾವ ಬೀರಿದವರು ಚೆನ್ನವೀರಪ್ಪನವರು ಎಂಬುದು ಖಚಿತ. ಅವರ ಮನೆಗೆ ಬರುವ ನೂರಾರು ಕಲಾವಿದರು, ಸಾಹಿತಿಗಳಿಂದ ಸ್ಫೂರ್ತಿ ಪಡೆದರು. ಕಲಾವಿದರು ಸಾಹಿತಿಗಳಿಗೆ ಅಜ್ಜನ ಮನೆಯಲ್ಲಿ ದೊರೆಯುವ ಆದರಾತಿಥ್ಯ ನೋಡಿ 'ಒಂದಲ್ಲ ಒಂದು ದಿನ ಬಸವರಾಜರು ಹೀಗೆ ದೊಡ್ಡ ಮನುಷ್ಯನಾಗಬೇಕು' ಎಂಬ ಕನಸು ಕಾಣುತ್ತಿದ್ದರು. ಚೆನ್ನವೀರಪ್ಪನವರಲ್ಲಿ ಪುಸ್ತಕಗಳ ಅಪಾರ ಸಂಗ್ರಹವಿತ್ತು. ಮನೆಯಲ್ಲಿ ಗ್ರಾಮಾಫೋನ್ ಇತ್ತು. ಆಗಿನ ಕಾಲದಲ್ಲಿ ಹಿಂದುಸ್ತಾನಿ ಸಂಗೀತದಲ್ಲಿ ಹೆಸರಾದ ಬಾಲಗಂಧರ್ವ, ಜಾನಕೀಬಾಯಿ, ಉಸ್ತಾದ ಮೋಜಿದ್ದೀನಖಾನ, ಜೋಹರಾಬಾಯಿ, ಮಲ್ಲಿಕಾಜಾನ್, ಭೂಗಂಧರ್ವ ರಹಿಮತಖಾನ್, ಕಲ್ಕತ್ತೆಯ ಪ್ಯಾರಾಸಾಹೇಬ, ಗ್ವಾಲಿಯರ್‌ನ ಶಂಕರ ಪಂಡಿತ್, ಪಂಡುಪುರಕರ್, ಜೋಗಳೇಕರ್, ಕೇಶವರಾವ್ ಭೋಸಲೆ, ಕೃಷ್ಣರಾವ ಮಾಸ್ತರ ಮೊದಲಾದವರ ಸಂಗೀತದ ಸ್ವರಗಳು ಅವರ ಎಳೆಯ ವಯಸ್ಸಿನಲ್ಲಿ ಧ್ವನಿಮುದ್ರಿಕೆಗಳ ಮೂಲಕ, ಸಂಗೀತ ಕಛೇರಿಗಳ ಮುಖಾಂತರ ಪರಿಣಾಮ ಬೀರಿದವು. ಆಗ ಅವರ ಮನಸ್ಸು ಬ್ಲಾಟಿಂಗ್ ಪೇಪರಾಗಿತ್ತು. ಕೇಳಿದ ರಾಗಗಳನ್ನ ಮರುದಿನ ಹಾಗೆಯೇ ಗುಣಗುಣಿಸುತ್ತಿದ್ದರು. ಅವರಲ್ಲಿ ಆಗ ರಾಗ–ತಾಳ–ಲಯ ಜ್ಞಾನವಿರಲಿಲ್ಲ. ಅನುಕರಣೆ ಮಾತ್ರ ಇತ್ತು. ಕೇಳಿದಂತೆ ಹಾಡುತ್ತಿದ್ದರು. ಅವರು ಯಾಕೆ ಹಾಡುತ್ತಿದ್ದಾರೆಂದು ಅವರಿಗೇ ಗೊತ್ತಿರಲಿಲ್ಲ. ಅವರ ಅಜ್ಜನ ಮನೆಗೆ ಬಂದವರೆಲ್ಲ ಅವರಿಂದ ಹಾಡು ಹಾಡಿಸಿ ಕೇಳುತ್ತಿದ್ದರು. ಆಗ ಅವರಿಗೆ ಅದೇ ಹೆಮ್ಮೆಯ ಸಂಗತಿ. ಅದರಿಂದ ಅವರಿಗೆ ಅರಿವಿಲ್ಲದೆ ಸಂಗೀತದ ಬಗ್ಗೆ ಆಸಕ್ತಿ ಮೊಳೆಯಿತು. ಮುಂದೆ ಅದು ತಾನಾಗಿ ಬೆಳೆಯಿತು. ಅದೇ ಬಾಳನ್ನು ರೂಪಿಸಿತು. ಅವರು ಪ್ರಾಥಮಿಕ ಶಿಕ್ಷಣ ತಮ್ಮೂರಿನಲ್ಲಿ ಮುಂದುವರೆಯಿಸಿದರು. ತಂದೆಯವರ ಕಣ್ಣರಿಕೆಯಲ್ಲಿ ನಿತ್ಯವೂ ಶಾಲೆಗೆ ಹೋಗುವುದು ರೂಢಿಯಾಯಿತು. ಕಾರಣ ಧಾರವಾಡದಲ್ಲಿದ್ದಂತಹ ಗೆಳೆಯರ ಬಳಗವೂ ಅಲ್ಲಿರಲಿಲ್ಲ. ಇಷ್ಟಾಗಿ ಆಗ ಅದೊಂದು ಸಣ್ಣ ಗ್ರಾಮ. ಅಲ್ಲಿರುವುದು ಒಂದೇ ಶಾಲೆ. ಒಂದು ದಿನ ಶಾಲೆ ತಪ್ಪಿಸಿದರೂ ಪುಕಾರು ತಪ್ಪಿದ್ದಲ್ಲ. ಶಾಲೆಗೆ ಹೋಗದಿದ್ದರೆ ತಂದೆಯವರಿಂದ ಮೈತುಂಬ 'ಕಡಬು' ತಪ್ಪುತ್ತಿರಲಿಲ್ಲ.

ಬಾಲ್ಯ ಶಿಕ್ಷಣಕ್ಕೆ ಅಡಿವಯ್ಯ ಮಾಸ್ತರ ನವಲೂರವರೇ ಮೊದಲ ಗುರುಗಳು. ಅವರ ತುಂಟತನಕ್ಕೆ ಕಡಿವಾಣ ಹಾಕಿ ಶಿಕ್ಷಣದಲ್ಲಿ ಆಸಕ್ತಿಯನ್ನುಂಟು ಮಾಡಿದ ಗುರುಗಳು. ತಮ್ಮ ಶಿಷ್ಯರು ಮಾಡಿದ ಮಹಾಪರಾಧಗಳನ್ನು ಕ್ಷಮಿಸುವ ತಾಳ್ಮೆ, ಔದಾರ್ಯ ಅವರಲ್ಲಿತ್ತು. ಹಿತಮಿತವಾದ ಮಾತು, ಮೃದುಹೃದಯ. ವಿದ್ಯಾರ್ಥಿಗಳು ಅವರ ಪಾಲಿಗೆ ಮಕ್ಕಳಿದ್ದಂತೆ. ಬಸವರಾಜರ ಮನಸ್ಸು ಗಿಡಮಂಗನಾಟವಾಡುತ್ತಿದ್ದಾಗ ಸ್ಥಿರತೆ ತಂದುಕೊಟ್ಟವರು. ಅವರಿಗೆ ಓದುವ ರುಚಿಯನ್ನು ಬೆಳೆಸಿದ ಮೊದಲ

ಗುರುವಾಗಿ ನಿಲ್ಲುತ್ತಾರೆ. ಗಳಗನಾಥ ಬಿ. ವೆಂಕಟಾಚಾರ್ಯರ ಕೃತಿಗಳನ್ನು ತಂದು ಅವುಗಳ ಸಾರ ಸಂಗ್ರಹಮಾಡಿ ಕಥೆ ಹೇಳುತ್ತಿದ್ದರು. ಬಸವರಾಜರು ಸೇರಿದಂತೆ ವಿದ್ಯಾರ್ಥಿಗಳಿಗೆ ಪುಸ್ತಕ ಕೊಟ್ಟು ಓದಿದ ಬಳಿಕ ಅವರಿಂದ ಕಥೆ ಹೇಳಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಅದರ ಜೊತೆಯಲ್ಲಿಯೇ ಶಾಲೆಯ ಪಾಠಗಳನ್ನು ನಿರ್ಲಕ್ಷ್ಯ ಮಾಡಿದರೆ ಸಹಿಸುತ್ತಿರಲಿಲ್ಲ. ಉತ್ತಮ ಶಿಕ್ಷಕರೆಂದು ಅವರಿಗೆ ರಾಷ್ಟ್ರೀಯ ಪ್ರಶಸ್ತಿ ಸಿಗಲಿಲ್ಲ. ಆದರೂ ಬಸವರಾಜರಂತಹ ಶಿಷ್ಯರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡಿದ್ದು ಪ್ರಶಸ್ತಿಗಿಂತಲೂ ಮೇಲಾಗಿತ್ತು. ಗಳಗನಾಥ ಮತ್ತು ಅ.ನ.ಕೃ ರವರ ಭಾಷಾ ಶೈಲಿಯ ಸೊಬಗು, ಲಾಲಿತ್ಯ, ತಾಜಾತನ, ರಮ್ಯತೆಗಳು ಓದುವ ಅಭಿರುಚಿಯನ್ನು ಬೆಳೆಸಿದು. ಓದುಗರನ್ನು ಮಂತ್ರ ಮುಗ್ಧಗೊಳಿಸುವ ಅ.ನ.ಕೃ. ಕನ್ನಡಿಗರಲ್ಲಿ ಓದುವ ದಾಹ ಹುಟ್ಟಿಸಿದರು.

ಬಸವರಾಜರು ಶಾಲೆಯಿಂದ ಬಂದೊಡನೆ ಅವರ ತಂದೆ– ಚಿಕ್ಕಪ್ಪನ ಜೊತೆ ಹೊಲಕ್ಕೆ ಹೋಗುತ್ತಿದ್ದರು. ಹೀಗೆ ನಾಟಕದ ಜೊತೆಗೆ ಓದುವುದನ್ನು ಮುಂದುವರೆಸಿ ಹೇಗೋ ಏಳನೆ ಇಯತ್ತೆ ಪಾಸಾದರು. ಅವರ ಊರಿನಲ್ಲಿ ಹೈಸ್ಕೂಲ್ ಇಲ್ಲದ ಕಾರಣ ಧಾರವಾಡದ ಬಾಸೆಲ್‌ಮಿಷನ್ ಹೈಸ್ಕೂಲಿನ ಹಾಜರಿ ಪುಸ್ತಕದಲ್ಲಿ ಹೆಸರು ಸೇರಿಸಿದರೂ ಶಾಲೆಗೆ ಹೋಗುತ್ತಿರಲಿಲ್ಲ. ಬಸವರಾಜರು ಸದಾ ಸಂಗೀತ ಗುಂಗಿನಲ್ಲಿರುವುದರಿಂದ ತರಗತಿಗಳು ಹಿಡಿಸುತ್ತಿರಲಿಲ್ಲ. ಹಾಗಾಗಿ ಶಾಲೆಯಲ್ಲಿ ಹೆಸರು ನೊಂದಣಿಗೆ ಮಾತ್ರ ಸೀಮಿತವಾಗಿತ್ತು. ಸದಾ ಹೊರಗೆ ಸಂಗೀತಗಾರರನ್ನು, ನಾಟಕದ ನಟರನ್ನು, ಬೀದಿ ನಾಟಕದ ನಟರನ್ನು ಹುಡುಕಿಕೊಂಡು ಅಲೆದಾಡುತ್ತಿದ್ದರು.

ಹೀಗೆ ಕೆಲವು ದಿನಗಳು ಕಳೆದವು. ಬಸವರಾಜರ ವ್ಯಕ್ತಿತ್ವ ಬಹಳ ಆಕರ್ಷಕವಾಗಿತ್ತು. ಹಾಗೆಯೇ ಅವರ ಸ್ವರವೂ ಇಂಪಾಗಿತ್ತು. ಇದನ್ನೆಲ್ಲ ನೋಡಿದ ವಾಮನರಾಯರು ಕರೆದು ಒಂದೆರಡು ಹಾಡು ಹೇಳಲು ಕೇಳಿದರು. ಅಂದಿನಿಂದ ಅವನಿಗೆ ತಮ್ಮ ಕಂಪನಿಯಲ್ಲಿರಲು ಒಪ್ಪಿಗೆ ಕೊಟ್ಟರು. ತಮ್ಮ ಮಧುರ ಕಂಠದಿಂದಲೇ ಎಲ್ಲರಿಗೂ ಪರಿಚಿತನಾಗಿ ನಾಟ್ಯಗೀತೆ, ಅಭಿನಯ ಕಲಿತುಕೊಳ್ಳಲು ಆಸಕ್ತಿ ಬೆಳೆಸಿಕೊಂಡರು. ಆಗಾಗ ಚಿಕ್ಕಪುಟ್ಟ ಪಾತ್ರಗಳನ್ನು ಅಭಿನಯಿಸಲು ವಾಮನರಾಯರು ಬಸವರಾಜನಿಗೆ ಹೇಳಿದರು. ಬಸವರಾಜ ಭಕ್ತಪ್ರಹ್ಲಾದನಾದರೆ ಮಲ್ಲಿಕಾರ್ಜುನನಿಗೆ ಗೊಟ್ಯಾ ಎಂಬ ಹಾಸ್ಯಪಾತ್ರ, ಕೃಷ್ಣಲೀಲೆಯಲ್ಲಿ ವಿಜಯ ಎರಡು ಪಾತ್ರಗಳಲ್ಲಿ ಮಲ್ಲಿಕಾರ್ಜುನ ಪ್ರೇಕ್ಷಕರ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದರು.

ವಿಶ್ವಗುಣಾದರ್ಶ ಮಂಡಳಿಯು ಹೆಸರಿಗೆ ತಕ್ಕಂತೆ ಒಂದು ಆದರ್ಶ ಮಂಡಳಿಯಾಗಿತ್ತು. ಪ್ರತಿಯೊಬ್ಬರು ಶಿಸ್ತು ಕಾಪಾಡಿಕೊಂಡು ಹೋಗಲು ವಾಮನರಾಯರು ಆಗ್ರಹದಿಂದ ಹೇಳುತ್ತಿದ್ದರು. ಯಾರಾದರು ಅಶಿಸ್ತಿನಿಂದ ವರ್ತಿಸುತ್ತಿದ್ದರೆ ಅವರ ಮೇಲೆ ಕ್ರಮ ಕೈಕೊಳ್ಳುತ್ತಿದ್ದರು. ಆದರೆ ಅವರು ಹೇಳಿಕೊಟ್ಟಂತೆ ನಡೆದುಕೊಳ್ಳುವವರಿಗೆ ಅಭಿಮಾನದಿಂದ ಬೆಂಬಲಿಸುತ್ತಿದ್ದರು. ಮುಂದೆ ಅವರ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಪಾತ್ರಕ್ಕೆ ತಕ್ಕ ಜೀವ ತುಂಬುತ್ತಿದ್ದರು. ವಿಶ್ವಗುಣಾದರ್ಶ ನಾಟಕ ಮಂಡಳಿಯಲ್ಲಿ 'ಪ್ರಲ್ಹಾದ' 'ಕೃಷ್ಣಲೀಲಾ' 'ಸೌಭದ್ರ' 'ಪದ್ಮಾವತಿ


ಪರಿಣಯ' 'ಇಂದಿರಾ' 'ವಿದ್ಯಾಹರಣವಲ್ಲ ವಿದ್ಯಾಸಾಧನೆ' 'ಸಂಶಯಕಲ್ಲೋಳ' 'ಮಹಾನಂದ' ' ಸಂತ ಸಖೂಬಾಯಿ' 'ಪುಂಡಲೀಕ' 'ಬಾಜಿರಾವ್ ಪೇಶ್ವೆ' 'ಅಭಿಮನ್ಯು' 'ಸಂದೇಹ ಸಾಮ್ರಾಜ್ಯ' 'ಕೃಷ್ಣಾರ್ಜುನ ಯುದ್ಧ' ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯಿಸಿದ ಹಿರಿಮೆ ಬಸವರಾಜರದು.

ಬಸವರಾಜರು ಜೀವನದ ಕೊನೆಯ ದಿನಗಳನ್ನು ಬಹಳ ಕಷ್ಟದಲ್ಲಿ ಕಳೆದರು. ಅವರು ಹಾಸಿಗೆ ಹಿಡಿದಾಗ ಔಷಧೋಪಚಾರ ಪಡೆಯಲು ಹಣವಿಲ್ಲದೇ ಒದ್ದಾಡಿದರೂ ಅವರ ಧರ್ಮಪತ್ನಿ ಅಂತ್ಯಕಾಲದಲ್ಲಿ ಪಕ್ಕದಲ್ಲಿದ್ದರು. ತಮ್ಮ ಸ್ಥಿತಿಗತಿಗಳನ್ನು ಮನದಲ್ಲಿ ಅರಿತು ಅದುಮಿಟ್ಟು ದುಃಖಿಸುತ್ತಿದ್ದರೂ ಯಾರ ಮುಂದೆಯೂ ಕಾಸಿಗಾಗಿ ಕೈಚಾಚಿದವರಲ್ಲ. ಅಪಾರ ಬಂಧು-ಬಳಗವಿದ್ದರೂ ಯಾರದೇ ಸಹಾಯ ಅಪೇಕ್ಷಿಸಲಿಲ್ಲ. ಬಂದದ್ದೆಲ್ಲ ಬರಲಿ, ಗುರುಗೋವಿಂದನ ದಯೆ ನಮ್ಮ ಮೇಲೆ ಇರಲಿ ಎಂದು ದೇವರಲ್ಲಿ ಮೊರೆ ಇಡುತ್ತಿದ್ದರೆ ಹೊರತು ಜನರಲ್ಲಿ ಅಲ್ಲ.

೧೯೬೩ರಲ್ಲಿ ಬಸವರಾಜರು ತಮ್ಮ ತಂದೆಯನ್ನು ಕಳೆದುಕೊಂಡಿದ್ದರು. ಹಲವು ವರ್ಷಗಳ ತರುವಾಯ ಅಂದರೆ ೧೯೭೬ರ ಸಪ್ಟೆಂಬರ್ ೧೩ರಂದು ನಟಶೇಖರ ಬಸವರಾಜರುಮರಣಹೊಂದಿದರು. ತಮ್ಮ ಅಣ್ಣನ ಬಗ್ಗೆ ಡಾ. ಮಲ್ಲಿಕಾರ್ಜುನ ಮನಸೂರ ಅವರು ಹೀಗೆ ಹೇಳುತ್ತಾರೆ: 'ನಾನು ನನ್ನ ಜೇಷ್ಠ ಬಂಧು ಬಸವರಾಜನನ್ನು ಎಂದೆಂದೂ ಮರೆಯಲಾರೆ. ಎಲ್ಲ ಸ್ಥಿತ್ಯಂತರದಲ್ಲಿ ನನಗೆ ಒತ್ತಾಸೆಯಾಗಿ ನಿಂತ ಇಂತಹ ಅಣ್ಣನನ್ನು ಪಡೆದದ್ದು ನನ್ನ ಪೂರ್ವಜನ್ಮದ ಪುಣ್ಯ. ನನ್ನ ಭಾಗ್ಯ ಮನೆಯಲ್ಲಿ, ನಾಟಕ ಕಂಪನಿಯಲ್ಲಿ, ಸಂಗೀತ ಸಭೆಯಲ್ಲಿ, ಜೀವನದಲ್ಲಿ, ಅಣ್ಣನಾಗಿ, ಗುರುವಾಗಿ, ಶಿಕ್ಷಕನಾಗಿ, ಗೆಳೆಯನಾಗಿ ಎಷ್ಟೊಂದು ಪಾತ್ರಗಳನ್ನು ಧರಿಸಿ ಈ ನಟ ಸಾಮ್ರಾಟ್ ನನಗೆ ಸುಖದ ಅಮೃತವನ್ನಿಟ್ಟರು. ತಂದೆಯನ್ನು ಕಳೆದುಕೊಂಡು ತಬ್ಬಲಿಯಾಗಿದ್ದಾಗ ಆಧಾರಸ್ತಂಭವಾಗಿದ್ದ ಅಣ್ಣನನ್ನು ಕಳೆದುಕೊಂಡು ಆಕಾಶವೇ ತಲೆಯ ಮೇಲೆ ಕಳಚಿಕೊಂಡು ಬಿದ್ದಂತಾಯಿತು' ಎಂದರು.

ಬಸವರಾಜರ ಪ್ರತಿಭೆಯನ್ನು ಕರ್ನಾಟಕ ಸರ್ಕಾರ, ಕರ್ನಾಟಕ ನಾಟಕ ಅಕಾಡೆಮಿ ಮತ್ತು ಸಂಗೀತ ಅಕಾಡೆಮಿಗಳು ಸರಿಯಾಗಿ ಬಳಸಿಕೊಳ್ಳುವಲ್ಲಿ ವಿಫಲವಾದವು. ಅವರು ರಂಗಭೂಮಿಗೆ ನೀಡಿದಷ್ಟೇ ಸೇವೆಯನ್ನು ಸಂಗೀತಕ್ಷೇತ್ರಕ್ಕೆ ನೀಡಿದ್ದರೂ ಅವರನ್ನು ಸಂಗೀತಕ್ಷೇತ್ರದ ಮಹನೀಯರು ಗುರುತಿಸಲಿಲ್ಲ. ಹಗಲಿರುಳು ಸಂಗೀತ ನಾಟಕಗಳನ್ನುಳಿದು ಬೇರೆ ಏನನ್ನೂ ಚಿಂತಿಸದ ಬಸವರಾಜರು ಕೊನೆಯ ದಿನಗಳಲ್ಲಿ ಸಂಪಾದನೆ ಇಲ್ಲದೆ ಪರಿತಪಿಸುವಂತಾಯಿತು. ಆದರೂ ಬಸವರಾಜರು ಕಾಯೇನ, ವಾಚಾ, ಮನಸಾ ಪರಿಶುದ್ಧರಾಗಿ ಬಾಳಿ ಬದುಕಿದವರು.

ಅವರ ಗುಣಗಳನ್ನು ರಂಗಭೂಮಿಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು ಅಳವಡಿಸಿಕೊಳ್ಳುವುದು ಮತ್ತು ರಂಗಭೂಮಿಯ ಕಲಾವಿದರು ಅವರ ಶಿಸ್ತುಬದ್ಧಜೀವನವನ್ನು ಅಳವಡಿಸಿಕೊಂಡರೆ ಅವರಿಗೆ ನೀಡುವ ಗೌರವಕ್ಕಿಂತಲೂ ಮಿಗಿಲಾಗಿರುತ್ತದೆ. ರಂಗಭೂಮಿಯನ್ನೇ ಉಳಿಸಿ ಬೆಳೆಸಲು ಜೀವ ಸವೆಸಿ, ಆದರ್ಶಗಳನ್ನು ಬಿಟ್ಟು ಹೋದ ಹಿರಿಯ ಜೀವವದು. ಅವರ ಆದರ್ಶಗಳೇ ಇಂದಿನ ರಂಗಭೂಮಿ ಕಲಾವಿದರಿಗೆ ಮಾರ್ಗದರ್ಶನವಾಗಲೆಂದು ಆಶಿಸುತ್ತೇನೆ. ■■■



ನಲವಡಿ ಶ್ರೀಕಂಠಶಾಸ್ತ್ರಿಗಳು

# ಕರ್ನಾಟಕ ಕುಲಚಂದ್ರ
# ನಲವಡಿ ಶ್ರೀಕಂಠಶಾಸ್ತ್ರಿಗಳು
# (೧೮೮೯-೧೯೬೭)

● ಮೃತ್ಯುಂಜಯ ಹೊರಕೇರಿ
ಹಾಗೂ ವಸಂತ ಕುಲಕರ್ಣಿ

ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಇತಿಹಾಸದಲ್ಲಿ ನಲವಡಿ ಶ್ರೀಕಂಠಶಾಸ್ತ್ರಿಗಳದು ದೊಡ್ಡ ಹೆಸರು. "ಕರ್ನಾಟಕ ಕುಲಚಂದ್ರ" ಬಿರುದಾಂಕಿತರಾದ ಶಾಸ್ತ್ರಿಗಳು ಧಾರವಾಡ ಜಿಲ್ಲಾ ನವಲಗುಂದ ತಾಲೂಕಿನ ನಲವಡಿ ಗ್ರಾಮದವರು. ಕಾಶಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡಿ ಪಂಡಿತ ಪದವಿ ಪಡೆದವರು. ತಮ್ಮ ಜೀವನೋಪಾಯಕ್ಕೆ ಕೀರ್ತನ ಕಾಯಕವನ್ನು ಕೈಕೊಂಡರಾದರೂ ರಂಗಭೂಮಿಗೆ ಆಕರ್ಷಿತರಾಗಿ ವೃತ್ತಿನಾಟಕಕಾರರಾಗಿ ಬೆಳೆದು ಬಂದರು.

೧೯೧೯ ರಲ್ಲಿ 'ವಿಚಿತ್ರ ವಿಲಾಸ' ಎಂಬ ಪೌರಾಣಿಕ ನಾಟಕ ಬರೆದರು. ಅದೇ ಅವರ ಮೊದಲ ನಾಟಕ. ೧೯೬೭ರಲ್ಲಿ 'ಲೀಲಾವತಾರ' ಎಂಬ ಭಕ್ತಿಪ್ರಧಾನ ನಾಟಕ ಬರೆದರು. ಅದೇ ಅವರ ಕೊನೆಯ ನಾಟಕ. ಈ ಐವತ್ತು ವರ್ಷಗಳ ಕಾಲಾವಧಿಯಲ್ಲಿ ಬಯಲಾಟಗಳೂ ಸೇರಿದಂತೆ ಪೌರಾಣಿಕ-ಚಾರಿತ್ರಿಕ-ಭಕ್ತಿಪ್ರಧಾನ-ಸಾಮಾಜಿಕ ವಿಷಯಗಳು ಸೇರಿದಂತೆ ಒಟ್ಟು ನಲವತ್ನಾಲ್ಕು ನಾಟಕಗಳನ್ನು ಬರೆದಿರುವರು.

ಬ್ರಿಟಿಷರ ಕಪಿಮುಷ್ಠಿಯಿಂದ ಪಾರಾಗಬೇಕೆಂಬ ಸ್ವಾತಂತ್ರ್ಯ ಆಂದೋಲನ ಒಂದು ಕಡೆಯಿತ್ತು. ಕರ್ನಾಟಕ ಏಕೀಕರಣವಾಗಬೇಕೆಂಬ ಹೋರಾಟ ಇನ್ನೊಂದೆಡೆಗೆ ನಡೆದಿತ್ತು. ಜೊತೆಗೆ ಗಾಂಧೀಜಿಯವರ ಸ್ವದೇಶಿ ಚಳುವಳಿಯೂ ನಡೆದಿತ್ತು. ಕನ್ನಡ ರಂಗಭೂಮಿ ಮರಾಠಿ ನಾಟಕಗಳನ್ನು ಹಿಮ್ಮೆಟ್ಟಿಸಿ ತನ್ನದೇ ಆದ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿತ್ತು. ಕನ್ನಡ ಕಂಪನಿ ನಾಟಕಗಳ ಭರಾಟೆಯ ಕಾಲವದು. ಚಲನಚಿತ್ರ ಸಹ ಬಂದುದಾಗಿತ್ತು. ಹವ್ಯಾಸಿರಂಗ ಆರಂಭಗೊಂಡು ವೃತ್ತಿರಂಗದ ಮೇಲೆ ದಾಳಿಯನ್ನಾರಂಭಿಸಿತು. ಜನರಲ್ಲಿ ಸಾಕ್ಷರತಾ ಪ್ರಜ್ಞೆ ಹೆಚ್ಚುತ್ತ ಸಾಗಿತ್ತು. ವೈಜ್ಞಾನಿಕ-ವೈಚಾರಿಕ ಬೆಳವಣಿಗೆ ನಡೆದಿತ್ತು. ಪಶ್ಚಿಮದ ಗಾಳಿ ನಮ್ಮಲ್ಲಿ ಬೀಸತೊಡಗಿ ನಮ್ಮ ನಾಗರಿಕಬದುಕು ಬದಲಾಗುತ್ತಿತ್ತು. ಇಂಥ ಕಾಲಾವಧಿಯಲ್ಲಿ ನಲವಡಿ ಶ್ರೀಕಂಠಶಾಸ್ತ್ರಿಗಳು ಪರಂಪರೆಯೊಂದಿಗೆ ಸಮಕಾಲೀನ ಸಂಗತಿಗಳನ್ನು ಸಮಾವೇಶಗೊಳಿಸುತ್ತಲೇ ಒಬ್ಬ ನಾಟಕಕಾರರಾಗಿ ರೂಪುಗೊಂಡರು. ಅದೇ ಕಾಲಕ್ಕೆ ಇವರ ಸಮಕಾಲೀನ ಸ್ನೇಹಿತರಾದ ಕಂದಗಲ್ ಹನುಮಂತರಾಯರು ಕನ್ನಡರಂಗಭೂಮಿಗೆ ಗದ್ಯಾತ್ಮಕವಾದ ನಾಟಕಗಳನ್ನು ನೀಡಿ 'ಕರ್ನಾಟಕದ ಷೇಕ್ಸಪಿಯರ್' ಎಂದೇ ಖ್ಯಾತರಾಗಿದ್ದರು. ಇವರಿಬ್ಬರ ಜೋಡಿ ಉತ್ತರ ಕರ್ನಾಟಕರಂಗಭೂಮಿಯಲ್ಲಿ ಅನ್ಯೋನ್ಯ ಹಾಗೂ ಆತ್ಮೀಯವಾಗಿತ್ತು. "ನಲವಡಿ ಶ್ರೀಕಂಠಶಾಸ್ತ್ರಿಗಳು ಹಾಗೂ ಕಂದಗಲ್ ಹನುಮಂತರಾಯರೆಂದರೆ

ವೃತ್ತಿರಂಗಭೂಮಿಯ ರಥದ ಎರಡು ಚಕ್ರಗಳಿದ್ದಂತೆ. ನಲವಡಿ ಎಂಬ ಚಕ್ರದಿಂದ ಸಂಗೀತದ ನಿನಾದ ಕೇಳಿ ಬಂದರೆ ಕಂದಗಲ್ ಎಂಬ ಇನ್ನೊಂದು ಚಕ್ರದಿಂದ ಗದ್ಯದ ಗುಡುಗು ಕೇಳಿ ಬರುತ್ತದೆ" ಎಂಬ ಬಿ. ಓಬಳೇಶ್ವರ ಅವರ ಅಭಿಮಾನದ ಮಾತು ಅರ್ಥಪೂರ್ಣವಾಗಿದೆ.

ಶ್ರೀಕಂಠಶಾಸ್ತ್ರಿಗಳು ಒಟ್ಟು ಹದಿಮೂರು ಪೌರಾಣಿಕ ನಾಟಕಗಳನ್ನು ವೃತ್ತಿಮಂಡಳಿಗಾಗಿ ಬರೆದಿರುವರು. ವಿಚಿತ್ರ ವಿಲಾಸ, ಲಂಕಾದಹನ, ಹಿರಣ್ಯಕಶ್ಯಪು, ಉದ್ದಾಲಕ ಚರಿತ್ರೆ, ಶೈವಶಾಂತಿ, ಸಂತಸಂಗ, ಶಕಪುರುಷ, ಹರಿದರುಶನ, ಶ್ವೇತರಾಜ ಎಂಬ ಪೌರಾಣಿಕ ನಾಟಕಗಳನ್ನು ಬರೆದಿದ್ದು, ಅವುಗಳೀಗ ಅನುಪಲಬ್ಧವಾಗಿದ್ದರೂ ಅವುಗಳನ್ನಾಡಿದ ಬಗೆಗೆ ಸಾಕಷ್ಟು ದಾಖಲೆಗಳು ಸಿಗುತ್ತವೆ. ಭಕ್ತ ಸುಧನ್ವ, ಧರ್ಮದ್ರೋಹ, ಲಿಖಿತಲೀಲಾ, ಗೃಹಲಕ್ಷ್ಮೀ ಎಂಬ ನಾಲ್ಕು ನಾಟಕಗಳು ಮಾತ್ರ ಲಭ್ಯವಿವೆ.

ಧರ್ಮ-ರಾಷ್ಟ್ರಧರ್ಮ, ಹಿಂಸೆ-ಅಹಿಂಸೆ, ಸಮತಾವಾದ-ಸಮಾಜವಾದ ಇವುಗಳ ಬಗೆಗೆ ಅರಿವನ್ನು ಮೂಡಿಸಿ ಚಿಂತನೆಗೆ ಹಚ್ಚುವ ಅವರ ನಾಟಕಗಳು ಆಗಿನ ಕಾಲಕ್ಕಷ್ಟೇ ಅಲ್ಲ; ಈಗಲೂ ಪ್ರಸ್ತುತವೆನಿಸುತ್ತವೆ. ಪೌರಾಣಿಕದೊಂದಿಗೆ ಸಮಕಾಲೀನತೆಯನ್ನು ಬಿಂಬಿಸುವ ಇಂಥ ನಾಟಕಗಳು ವೃತ್ತಿರಂಗದಲ್ಲಿ ಅಪರೂಪ.

ನಲವಡಿ ಶ್ರೀಕಂಠಶಾಸ್ತ್ರಿಗಳ ಪೌರಾಣಿಕ ನಾಟಕಗಳು ರಾಷ್ಟ್ರಭಕ್ತಿಯಿಂದ ಮೊದಲಾದರೆ ಅವರ ಭಕ್ತಿಪ್ರಧಾನವಾದ ನಾಟಕಗಳನ್ನು ಗಮನಿಸೋಣ. ಭಕ್ತಿ ಪ್ರಧಾನವಾದ ಹದಿನೆಂಟು ನಾಟಕಗಳನ್ನು ಶಾಸ್ತ್ರಿಗಳು ಬರೆದಿರುವರು. ಇವುಗಳಲ್ಲಿ ಪ್ರಭುವಿಜಯ, ದಾರುಕ ವಿಜಯ, ಶಿರಹಟ್ಟಿ ಫಕೀರೇಶ್ವರ ಇವು ಅನುಪಲಬ್ಧವಾಗಿವೆ. ಇನ್ನುಳಿದಂತೆ ಶಾಪವಿಮೋಚನೆಯು ಮಲುಹಣ-ಮಲುಹಣಿಯರ ಪ್ರೇಮ-ಪ್ರಣಯ-ಶಿವಭಕ್ತಿಯ ಕಥೆಯನ್ನು ಒಳಗೊಂಡಿದೆ. ಬೇಡರ ಕಣ್ಣಪ್ಪ ಎಲ್ಲರಿಗೂ ಗೊತ್ತಿರುವ ಕಥಾನಕವಾಗಿದೆ. ಭಕ್ತಮಾರ್ಕಂಡೇಯ ನಾಟಕವೂ ಅಂಥದೇ. ರೇಣುಕ ವಿಜಯವೆಂಬುದು ಪಂಚಪೀಠಾಧಿಪತಿಗಳಲ್ಲಿ ಒಬ್ಬರಾದ ರೇಣುಕಾಚಾರ್ಯರ ಜೀವನ ಚರಿತ್ರೆಯಾಗಿದ್ದು, "ಧರ್ಮಕ್ಕೆ ಜಯ" ಎಂಬ ತತ್ವವನ್ನು ಪ್ರತಿಪಾದಿಸುತ್ತದೆ. ಸತಿ ಸತ್ವಪರೀಕ್ಷೆಯೆಂಬುದು ಶಿವಭಕ್ತೆಯೊಬ್ಬಳ ವ್ರತಾಚರಣೆಯ ಕಥೆಯನ್ನೊಳಗೊಂಡಿದ್ದು ಶಕ್ತಿಗಿಂತಲೂ ಭಕ್ತಿ ಮೇಲು, ಆ ಭಕ್ತಿಯಿಂದಲೇ ಮುಕ್ತಿ ಸಾಧ್ಯ ಎಂಬ ತತ್ವವನ್ನು ನಿರೂಪಿಸುತ್ತದೆ. ಶಿವಶರಣೆ ನಂಬಿಯಕ್ಕ, ಜಗಜ್ಯೋತಿ ಬಸವೇಶ್ವರ, ಉಳವಿ ಚೆನ್ನಬಸವೇಶ್ವರ, ಶಿವಯೋಗಿ ಸಿದ್ಧರಾಮ, ಉಜ್ಜೈನಿ ಸಿದ್ಧಲಿಂಗ ವಿಜಯ, ಮಳಲಿ ಮಹಾತ್ಮೆ ಮತ್ತು ಲೀಲಾವತಾರ ಈ ಮುಂತಾದವು ಸಂತಶ್ರೇಷ್ಠರ, ಭಕ್ತಶಿರೋಮಣಿಗಳ, ಮಹಾತ್ಮರ ಜೀವನವನ್ನಾಧರಿಸಿ ರಚಿತವಾದ ನಾಟಕಗಳಾಗಿವೆ. ಇವುಗಳಲ್ಲಿ ಕೆಲವು ಚಾರಿತ್ರಿಕವಾಗಿದ್ದರೂ ಪೌರಾಣಿಕ ಲೇಪನದಿಂದ, ಪವಾಡ ಪ್ರದರ್ಶನದಿಂದ, ರಂಗಪ್ರದರ್ಶನ ಪದ್ಧತಿಯಿಂದ ಹೆಚ್ಚು ಜನಪ್ರಿಯವಾಗಿವೆ. ಇವುಗಳಲ್ಲಿ ಪ್ರಂಪಚ ಪರೀಕ್ಷೆ ಎಂಬ ನಾಟಕ ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ.

ಶ್ರೀಕಂಠಶಾಸ್ತ್ರಿಗಳ ಭಕ್ತಿಪರ ನಾಟಕಗಳನ್ನು ಕುರಿತು ಒಟ್ಟಾಗಿ ಈ ಅಭಿಪ್ರಾಯವನ್ನು

ನೀಡಬಹುದಾಗಿದೆ. ಈ ನಾಟಕಗಳು ಜನಮನ ಗೆಲ್ಲಲು ಕಾರಣವೇನೆಂದರೆ ಆ ನಾಟಕದ ಕಥೆಗಳು ಪ್ರೇಕ್ಷಕರಿಗೆ ಚಿರಪರಿಚಿತವಾದವುಗಳಾಗಿದ್ದವು. ಆ ಮಹಾಮಹಿಮರನ್ನು ರಂಗದ ಮೇಲೆ ಕಾಣುವಾಗ ಭಾವುಕತೆಯಿಂದಲೇ ಕಾಣುತ್ತಾರೆ. ಅತಿರಂಜಿತ, ಅಲೌಕಿಕ, ಪವಾಡ ಸನ್ನಿವೇಶಗಳಿಂದ ಕೂಡಿದ ಅದ್ಭುತ ಪ್ರದರ್ಶನಗಳನ್ನು ನಮ್ಮ ಪ್ರೇಕ್ಷಕ ಮೆಚ್ಚಿಕೊಳ್ಳುತ್ತಿದ್ದ. "ಐತಿಹಾಸಿಕ ಕಥಾವಸ್ತುವನ್ನು ಬಳಸಿಕೊಳ್ಳುವಲ್ಲಿ ಮೊದಲ ಪ್ರಯೋಗವೆಂದರೆ ನಮ್ಮ ರಾಷ್ಟ್ರದ ಸಂತಭಕ್ತರ ಜೀವನವನ್ನು ಕುರಿತು ಕಟ್ಟಿದ ನಾಟಕಗಳ ಪ್ರಯೋಗ. ಭಕ್ತಿಪ್ರಧಾನವಾದ ಈ ನಾಟಕಗಳಲ್ಲಿ ಪವಾಡಗಳು, ಪೌರಾಣಿಕ ನಾಟಕಗಳೇ ಎನ್ನಬೇಕು. ಆದರೆ ಇವು ನಮ್ಮಂತೆ ಬದುಕಿ ಬಾಳಿ ಅಳಿದು ಹೋದ ಮೇಲೆ ಮಾನವನೊಬ್ಬನ ಜೀವಿತವನ್ನು ಆತನ ಧ್ಯೇಯ, ತಪಸ್ಸು, ಸಾಧನೆ, ಸಿದ್ಧಿಗಳನ್ನು ಕುರಿತು ಕಟ್ಟಿದವಾದ್ದರಿಂದ ರಾಮ-ಕೃಷ್ಣರಂತಹ ಪೌರಾಣಿಕ ವ್ಯಕ್ತಿಗಳ ಕುರಿತು ರಚನೆಗೊಂಡ ನಾಟಕಗಳಿಗಿಂತ ಇವು ಜನಕ್ಕೆ ಹತ್ತಿರವಾದವು" ಎಂಬ ಡಾ. ಎಚ್. ಕೆ. ರಂಗನಾಥರ ಅಭಿಪ್ರಾಯ ಸಮಂಜಸವಾದುದಾಗಿದೆ.

ನಾಟಕ ಪೌರಾಣಿಕವಾಗಿರಲಿ, ಸಾಮಾಜಿಕವಾಗಿರಲಿ ಜನರಿಗೆ ಧರ್ಮ-ನೀತಿಗಳನ್ನು ಬೋಧಿಸಿ, ಜನರನ್ನು ಸುಧಾರಿಸುವ ನಾಟಕಗಳು ಯಾವಾಗಲೂ ಬೇಕು. ಎನ್ನುವ ಧೋರಣೆ ಶಾಸ್ತ್ರಿಗಳದಾಗಿತ್ತು. ಅದಕ್ಕಾಗಿಯೇ ಆದರ್ಶವನ್ನು ಸಾರುವ ಮಹಾತ್ಮರ ಜೀವನ ಕಥೆಗಳನ್ನು ನಾಟಕವನ್ನಾಗಿ ಮಾಡಿದರು. ಸಾಮಾಜಿಕ ಸನ್ನಿವೇಶಗಳನ್ನು ಕಲ್ಪಿಸಿ ಜನರ ನಡೆ-ನುಡಿ ತಿದ್ದಲು ಯತ್ನಿಸಿದರು.

ಹೇಮರೆಡ್ಡಿ ಮಲ್ಲಮ್ಮ ನಾಟಕ ಸತತವಾಗಿ ಗದಗ ನಗರವೊಂದರಲ್ಲಿಯೇ ೩೭೫ ಪ್ರಯೋಗಗಳನ್ನು ಕಂಡು ವೃತ್ತಿರಂಗದಲ್ಲಿ ಮೊದಲ ದಾಖಲೆಯನ್ನು ನಿರ್ಮಿಸಿದ ನಾಟಕವಾಗಿದೆ. ಇನ್ನು ಕೆಲವೆಡೆಗಳಲ್ಲಿ ಆಗಿನ ಕಾಲದಲ್ಲಿ ನೂರು, ಐವತ್ತು, ಇಪ್ಪತ್ತೈದು ಪ್ರಯೋಗಗಳಿಲ್ಲದೇ ಮುಂದಿನ ಊರಿಗೆ ಸಾಗಿಲ್ಲ. ಈ ನಾಟಕದ ಪ್ರಯೋಗಗಳ ಸಂಖ್ಯೆಯನ್ನು ಲೆಕ್ಕ ಹಾಕಿದರೆ ಆಶ್ಚರ್ಯವಾಗುತ್ತದೆ. ಇದನ್ನು ಅಭಿನಯಿಸುವ ಮೂಲಕ ಗದಗಿನ ಗವಾಯಿಗಳ ಕಂಪನಿ ಖ್ಯಾತಿಯನ್ನು ಪಡೆಯಿತು, ಕೀರ್ತಿಯನ್ನು ಗಳಿಸಿತು. ಮಾನ-ಸನ್ಮಾನ ಸ್ವೀಕರಿಸಿತು.

ನಲವಡಿ ಶ್ರೀಕಂಠಶಾಸ್ತ್ರಿಗಳು ಪೌರಾಣಿಕ ಹಾಗೂ ಭಕ್ತಿಪ್ರಧಾನ ನಾಟಕಗಳನ್ನು ಬರೆದು ಖ್ಯಾತರಾದರೂ ಸಂದರ್ಭಕ್ಕನುಸಾರವಾಗಿ ಸಾಮಾಜಿಕ ನಾಟಕಗಳನ್ನು ಬರೆದಿರುವರು. ಶಾಸ್ತ್ರಿಗಳಾಗಲಿ ಅಥವಾ ಕಂದಗಲ್ ಹನುಮಂತರಾಯರದಾಗಲಿ ಕೇವಲ ಕೆಲವೇ ಸಾಮಾಜಿಕ ನಾಟಕಗಳ ವಿಚಾರ ಇಂದೂ ಸಹ ಪ್ರಸ್ತುತವೆನಿಸುತ್ತದೆ.

ವೃತ್ತಿರಂಗದಲ್ಲಿ ಕಥಾನಕವನ್ನು ಅವಲಂಬಿಸಿ ಪೌರಾಣಿಕ, ಐತಿಹಾಸಿಕ-ಸಾಮಾಜಿಕ ಎಂಬ ಮೂರು ವಿಧದ ಪ್ರಕಾರಗಳನ್ನು ಮಾಡುತ್ತಾರೆ. ಶಾಸ್ತ್ರಿಗಳು ಮೂರೂ ಪ್ರಕಾರದ ನಾಟಕಗಳನ್ನು ಬರೆದಿರುವರು. "ನಾಟಕ ಪ್ರಬಂಧವು ಕಾಲ್ಪನಿಕವೇ ಇರಲಿ, ಪೌರಾಣಿಕವೇ ಇರಲಿ, ಬರೆ ಗುಬ್ಬಿ-ಕಾಗೆಯ ಕಥೆಯಂತೆ ಸಮಾಪ್ತಿಯಾಗದೇ ಪ್ರತಿಯೊಂದು ಕಥೆಗೆ ಲೋಕಸುಧಾರಣೆಗೆ ಕಾರಣಗಳಾದ ಧರ್ಮ-ನೀತಿ-ಆಚಾರಗಳು ಜನರಲ್ಲಿ ಚೆನ್ನಾಗಿ ಪ್ರತಿಬಿಂಬಿಸುವಂತೆ ದೃಷ್ಟಾಂತಪೂರ್ವಕ ಹೊಳಪು ಆಗಿಂದಾಗ್ಗೆ

ತೋರುತ್ತಿರಬೇಕು. ನಾನಾದರೂ ಧಾರ್ಮಿಕ, ನೈತಿಕ ಪ್ರಶ್ನೆಗಳನ್ನೇ ಮುಂದಿಟ್ಟುಕೊಂಡು ಸಮಾಜಸೇವೆಯನ್ನು ನನ್ನ ಕೈಲಾದಮಟ್ಟಿಗೆ ಮಾಡಬೇಕೆಂಬ ಮನಸ್ಸಿನ ಅತ್ಯುತ್ಕಟೇಚ್ಛೆಯಿಂದಲೂ ಕನ್ನಡ ಭಾಷೆಯ ಮೇಲಿರುವ ನನ್ನ ಅನುರಾಗ–ಅಭಿಮಾನ, ಭಕ್ತಿ–ವಿಶ್ವಾಸಗಳಿಂದ ನಾಟಕಗಳನ್ನು ರಚಿಸಿದ್ದೇನೆ" ಎಂದು ಲಿಖಿತಲೀಲಾ ನಾಟಕದಲ್ಲಿ ಹೇಳಿಕೊಂಡಿರುವರು. ಈ ಮಾತುಗಳನ್ನು ಗಮನಿಸಿದಾಗ ತಮ್ಮ ಯೋಗ್ಯತೆಗೆ ಮೀರಿದ ನಾಟಕಗಳನ್ನು ನಮಗೆ ನೀಡಿದ್ದಾರೆನ್ನಬಹುದು.

ಒಟ್ಟಿನಲ್ಲಿ ಶ್ರೀಕಂಠಶಾಸ್ತ್ರಿಗಳ ನಾಟಕಗಳು ಅಂದಿನ ಕಾಲದ ನೀತಿಗೆ ಅನುಗುಣವಾಗಿ ರಚಿತವಾಗಿವೆ. ಸಾಹಿತ್ಯಸೃಷ್ಟಿಗಿಂತಲೂ ಅವರಿಗೆ ಸಾಮಾಜಿಕ ಕಳಕಳಿ ಹೆಚ್ಚಾಗಿತ್ತು. ಸಾಮಾನ್ಯ ಜನರಿಗೆ ತಿಳಿಹೇಳಬೇಕಾಗಿತ್ತು. ಅವರದೇ ಆದ ಭಾಷೆಯಲ್ಲಿ ಸರಳವಾಗಿ ನಿರೂಪಿಸಬೇಕಾಗಿತ್ತು. ಮೇಲಾಗಿ ಅಂದಿನ ರಂಗಭೂಮಿ ಸಂಗೀತಕ್ಕೆ ಹೆಚ್ಚು ಗಮನ ಹರಿಸಿತ್ತು. ಅದರೊಂದಿಗೆ ಪ್ರೇಕ್ಷಕರು ನುರಿತ ಕಲಾವಿದನ ನಟನೆಯನ್ನು ನೋಡಬಯಸುತ್ತಿದ್ದರು. ಇದರಿಂದಾಗಿ ಸಾಹಿತ್ಯದ ಕಡೆಗೆ ಗಮನ ಕಡಿಮೆಯಾಗಿ ರಂಗಪ್ರದರ್ಶನಕ್ಕೆ ಹೆಚ್ಚು ಒತ್ತುಕೊಟ್ಟು ಅಂದಿನ ನಾಟಕಗಳು ಹುಟ್ಟಿಕೊಂಡವು. ಹೀಗಾಗಿ ಅವುಗಳಲ್ಲಿ ಸೃಜನಶೀಲತೆ ಇಲ್ಲವೆಂಬ ಕಾರಣ ಮುಂದೆಮಾಡಿ ಬುದ್ಧಿಜೀವಿ ವಿಮರ್ಶಕವರ್ಗ ಅವುಗಳನ್ನು ಕಡೆಗಣಿಸಿದರೂ ಸಾಮಾನ್ಯ ಜನ ಸ್ವೀಕರಿಸಿದರು.

ಕನ್ನಡ ರಂಗಭೂಮಿಗೆ, ವಿಶೇಷವಾಗಿ ಉತ್ತರ ಕರ್ನಾಟಕ ವೃತ್ತಿರಂಗಭೂಮಿಗೆ ನಲವಡಿ ಶ್ರೀಕಂಠಶಾಸ್ತ್ರಿಗಳು ಸಲ್ಲಿಸಿದ ಸೇವೆ, ನೀಡಿದ ಕೊಡುಗೆ ಸ್ಮರಣೀಯ.

■ ■ ■



ಏಣಗಿ ಬಾಳಪ್ಪನವರು

# ರಂಗಭೂಮಿಯ ಸಾಕ್ಷಿಪ್ರಜ್ಞೆ ಏಣಗಿ ಬಾಳಪ್ಪನವರು.

● ರವಿ ಕುಲಕರ್ಣಿ

ಸದ್ಯ ಅವರಿಗೀಗ ಶತಮಾನದ ಸಂಭ್ರಮ. ಬಡತನದ ತುಂಬು ಕುಟುಂಬದಲ್ಲಿ ಜನಿಸಿದ ಆ ಬಾಲಕನಿಗೆ ಸುಂದರ ಶರೀರ ಮತ್ತು ಶಾರೀರವಿತ್ತು. ಶಾಲೆಯಲ್ಲಿ ಸುಂದರವಾಗಿ ಕವಿತೆಗಳನ್ನು ಹಾಡುತ್ತಿದ್ದ. ಭಜನಾಮೇಳದಲ್ಲಿ ಹಾಡತೊಡಗಿದರೆ ಊರವರು ತನ್ಮಯರಾಗಿ ಕೇಳುತ್ತಿದ್ದರು. ಗ್ರಾಮದಲ್ಲಿ ರಸಿಕರು ಆಡುತ್ತಿದ್ದ ಬಯಲಾಟಗಳಲ್ಲಿ ಬಾಲಪಾತ್ರ ಕೊಡುತ್ತಿದ್ದರು. ಪಾತ್ರ ಮೆಚ್ಚಿ ಬೆನ್ನು ತಟ್ಟುತ್ತಿದ್ದರು. ಅದೇ ಕಲೆ ಮುಂದೆ ಬದುಕು ಕಟ್ಟಿಕೊಟ್ಟಿತು. ರಂಗಭೂಮಿಯಲ್ಲಿ ಅಚ್ಚಳಿಯದ ಸ್ಥಾನ ಒದಗಿಸಿಕೊಟ್ಟಿತು. ಅವರೇ ನಡೆದಾಡುವ ರಂಗಭೂಮಿ ಎಂದೇ ಖ್ಯಾತರಾಗಿರುವ ಏಣಗಿ ಬಾಳಪ್ಪನವರು.

ಬಾಲನಟರಾಗಿ, ಸ್ತ್ರೀಪಾತ್ರಧಾರಿಯಾಗಿ, ನಟರಾಗಿ, ಗಾಯಕರಾಗಿ, ಕಂಪನಿ ಮಾಲಿಕರಾಗಿ ಒಂದು ಕಾಲಘಟ್ಟದ ರಂಗಭೂಮಿಯ ಇತಿಹಾಸಕ್ಕೆ ಸಾಕ್ಷಿಯಾದವರು ಬಾಳಪ್ಪನವರು.

ಅವರೇ ಹೇಳುವ ಪ್ರಕಾರ ಅವರು ಹುಟ್ಟಿದ್ದು ೧೯೧೪ ನೇ ಇಸ್ವಿಯಲ್ಲಿ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಏಣಗಿಯಲ್ಲಿ ಜನನ. ಇಂದಿಗೂ ಕೂಡಾ ಏಣಗಿ ಅವರ ಮನೆತನದ ಹೆಸರಾಗಿಯೂ ಚಾಲ್ತಿಯಲ್ಲಿದೆ.

ಸಾದಾ ಕುಟುಂಬ, ಇವರ ತಂದೆ ತಾಯಿಗೆ ಇವರು ಸೇರಿ ಮೂವರು ಮಕ್ಕಳು. ಬಾಳಪ್ಪನವರು ಹುಟ್ಟಿದ ಮೂರು ವರ್ಷಕ್ಕೆ ತಂದೆ ತೀರಿಕೊಂಡರು. ೧೪ ನೇ ವಯಸ್ಸು ತಲುಪುವಷ್ಟರಲ್ಲೇ ಅಣ್ಣ ಕೂಡಾ ಕಾಲರಾಕ್ಕೆ ಬಲಿಯಾದ. ಹೀಗಾಗಿ ತಾಯಿಯೊಂದಿಗೆ ತಾನು ಎನ್ನುವ ಸ್ಥಿತಿ ಬಾಳಪ್ಪನವರದಾಯಿತು. ಇದ್ದ ಹದಿನಾಲ್ಕು ಎಕರೆ ಹೊಲ ಸಾಲದಲ್ಲಿ ಒತ್ತೆಯಾಯಿತು. ಬದುಕೊಂದು ಸವಾಲಾಯ್ತು.

ಓದಿದ್ದು ನಾಲ್ಕನೆಯ ತರಗತಿವರೆಗೆ ಮಾತ್ರ. ಜೊತೆಗಿದ್ದದ್ದು ದೈವದತ್ತವಾಗಿ ಬಂದಿದ್ದ ಶ್ರೀಮಂತ ಕಂಠ. ಅದೇ ನಾಟಕದೆಡೆಗೆ ಕರೆದು ತಂದಿತು. ಊರಿನಲ್ಲಿ ಗರುಡ ಸದಾಶಿವರಾಯರ 'ಪಾದುಕಾ ಪಟ್ಟಾಭಿಷೇಕ' ನಾಟಕ ಆರಂಭಿಸಿದ್ದರು. ಅದರಲ್ಲಿ ಭರತನ ಪಾತ್ರದ ಮೂಲಕ ಗಮನ ಸೆಳೆದರು. ನಂತರ ಕಂಪನಿಯಿಂದ ಪಾತ್ರ ಮಾಡಲು ಬುಲಾವ್ ಬಂತು. ಆ ನಾಟಕದಲ್ಲಿ ದಶರಥನ ಪಾತ್ರ ಮಾಡಿದವರು ಚಿಕ್ಕೋಡಿ

ಶಿವಲಿಂಗಸ್ವಾಮಿಗಳು. ಇಂದಿಗೂ ಬಾಳಪ್ಪನವರು ಅವರನ್ನು ಗುರುಸದೃಶರಾಗಿಯೇ ನೋಡುತ್ತಾರೆ. ಗೌರವಿಸಿ ನೆನಪಿಸಿಕೊಳ್ಳುತ್ತಾರೆ. ಅವರು ೧೯೨೮ರಲ್ಲಿ ಬಾಳಪ್ಪನವರನ್ನು ತಮ್ಮ ಲಿಂಗರಾಜ ನಾಟ್ಯ ಸಂಘಕ್ಕೆ ಕರೆಸಿಕೊಂಡರು. ಅಲ್ಲಿಂದ ಆರಂಭಗೊಳ್ಳುತ್ತದೆ ಬಾಳಪ್ಪನವರ ರಂಗಪಯಣ. ತಮ್ಮ ವೃತ್ತಿಬದುಕಿನ ಬಹುತೇಕ ಕಾಲವನ್ನು ಬಾಳಪ್ಪನವರು ಚಿಕ್ಕೋಡಿ ಶಿವಲಿಂಗಸ್ವಾಮಿಗಳ ಜೊತೆ ಕಳೆದಿದ್ದಾರೆ.

ಅದಕ್ಕಿಂತ ಪೂರ್ವದಲ್ಲಿಯೇ ಏಣಗಿಯಲ್ಲಿ ಮಾರ್ಕಂಡೇಯ ಬಯಲಾಟದಲ್ಲಿ ಆಕಸ್ಮಿಕವಾಗಿ ನಟಿಸುವ ಅವಕಾಶ ದೊರಕಿತ್ತು. ಅದರಲ್ಲಿ ಗಣಪತಿ ಪಾತ್ರ. ಅಣ್ಣ ಮಾಡಬೇಕಿದ್ದ ಪಾತ್ರವದು. ಬೀಗರ ಊರಿಗೆ ಹೋಗಿದ್ದ ಅಣ್ಣ ಆಟದ ದಿನ ಬರಲಿಲ್ಲ. ಅನಿವಾರ್ಯವಾಗಿ ಆ ಪಾತ್ರ ಬಾಲಕ ಬಾಳಪ್ಪನವರ ಪಾಲಿಗೆ ಬಂದಿತ್ತು. ಗಣಪತಿಯಾಗಿ ಹಾಡಿದ ನಾಂದಿಪದ್ಯ ರಂಗಬದುಕಿಗೂ ನಾಂದಿಯಾಯ್ತು.

ಹೀಗೆ ಆರಂಭಗೊಂಡ ರಂಗಭೂಮಿಯ ನಂಟು ಇಂದಿಗೂ ಮುಂದುವರಿದಿದೆ. ಒಂಭತ್ತಕ್ಕಿಂತ ಹೆಚ್ಚು ದಶಕಗಳ ಅಪಾರ ಅನುಭವದ ಮೂಟೆ ಬಾಳಪ್ಪನವರೊಂದಿಗಿದೆ. ಇಷ್ಟೊಂದು ದೀರ್ಘ ಅವಧಿಯಲ್ಲಿ ಅವರು ಸವೆಸಿದ ಹಾದಿ, ಎದುರಿಸಿದ ಸವಾಲುಗಳು, ಅವುಗಳನ್ನು ಮೆಟ್ಟಿ ನಿಂತು ಸಾಧನೆಯ ಒಂದೊಂದೇ ಮೆಟ್ಟಿಲನ್ನು ಏರಿದ ರೀತಿ ರೋಚಕವಾದುದು.

ತಂದೆ ತೀರಿದ ನಂತರ ಅಣ್ಣನ ದುಡಿಮೆ, ಸೋದರಮಾವನ ಮಾರ್ಗದರ್ಶನದಿಂದ ಸಾಲ ತೀರಿ, ಋಣಮುಕ್ತವಾದ ಕುಟುಂಬ, ಅಕ್ಕ ವೀರಮ್ಮನಿಗೆ ಮದುವೆ ಮಾಡಿ ಸಮಾಧಾನದ ನಿಟ್ಟುಸಿರಿಟ್ಟಿತ್ತು. ಅಣ್ಣನ ಅಗಲಿಕೆಯ ಆಘಾತದಿಂದ ಹೊರಬರುವುದು ಬಾಳಪ್ಪನವರಿಗೆ ಅಸಾಧ್ಯವಾಗಿತ್ತು. ಅದೇ ಹೊತ್ತಿನಲ್ಲಿ ಅಂಕಲಿಯ ಚೆನ್ನಯಸ್ವಾಮಿಗಳು ಆರಂಭಿಸಿದ್ದ ಕಂಪನಿಗೆ ಕರೆ ಬಂದಿತ್ತು. ದು:ಖ ಮರೆಯಲಿ ಎಂದು ಅವ್ವ ಮತ್ತು ಸೋದರಮಾವ ಬಾಳಪ್ಪನವರನ್ನು ಕಳಿಸಲು ಒಪ್ಪಿಕೊಂಡಿದ್ದು ಒಂದು ರೀತಿಯಲ್ಲಿ ರಂಗಭೂಮಿಗೆ ಆದ ದೊಡ್ಡ ಲಾಭವೇ. ಕೆಲವು ದಿನ ಅಲ್ಲಿದ್ದವರು, ಕಂಪನಿ ಬಾಗಿಲು ಮುಚ್ಚಿದ್ದರಿಂದ ಮರಳಿ ಮನೆಗೆ ಬರಬೇಕಾಯಿತು. ಅಲ್ಲಿಂದ ಅಬ್ಬಿಗೇರಿ ಕಂಪನಿಗೆ ಪ್ರಯಾಣ. ಅದೇ ಸಂದರ್ಭದಲ್ಲಿ ಸೋದರಮಾವನ ಮಗಳು ಸಾವಿತ್ರಿಯೊಂದಿಗೆ ಕಂಕಣಬಲ ಕೂಡಿ ಬಂತು. ದಾಂಪತ್ಯ ಜೀವನಕ್ಕೆ ಕಾಲಿಟ್ಟ ಬಾಳಪ್ಪನವರು ಮತ್ತೆ ಕಂಪನಿಗೆ ಮರಳಿದರು.

ಅದಾದ ಕೆಲವು ವರ್ಷಗಳ ನಂತರ ಯರಾಶಿ ಭರಮಪ್ಪನವರ ಕಂಪನಿಯಲ್ಲಿ ಸ್ತ್ರೀಪಾತ್ರ ಮಾಡುವ ಅವಕಾಶ ದೊರೆಯಿತು. ಅದು ಬಾಳಪ್ಪನವರ ಮತ್ತೊಂದು ಕಲಾಪ್ರತಿಭೆಯನ್ನು ಅನಾವರಣಗೊಳಿಸಿ ದೊಡ್ಡ ಜನಪ್ರಿಯತೆ ತಂದು ಕೊಟ್ಟಿತು.

ಈ ಮಧ್ಯೆ ಅಕ್ಕ ವೀರಮ್ಮ ಇಹಲೋಕ ತ್ಯಜಿಸಿದ್ದಳು. ಈ ಆಘಾತವನ್ನು ತಡೆದುಕೊಳ್ಳುವುದು ಬಾಳಪ್ಪನವರಿಗೆ ಕಷ್ಟವಾಯ್ತು. ಆದರೆ ಕರ್ತವ್ಯದ ಕರೆಯ ಮುಂದೆ ಅದನ್ನು ಸಹಿಸಲೇಬೇಕಿತ್ತು. ಹೀಗೆ ಬದುಕಿನ ಬಂಡಿ ಎಳೆಯಲು ವೃತ್ತಿಯಾಗಿ ಸ್ವೀಕರಿಸಿದ್ದ ರಂಗಭೂಮಿಯ ನಂಟನ್ನು ಮುಂದುವರಿಸಲೇಬೇಕಿತ್ತು.

ಇವರು ನಾಟಕವಾಡುತ್ತಿದ್ದ ಕಂಪನಿ ಬೆಳಗಾವಿ, ಧಾರವಾಡದಲ್ಲಿ ಮೊಕ್ಕಾಂ

ಮಾಡಿತ್ತು. ಕೆಲವು ಕಲಾವಿದರ ದುರಾಸೆಯಿಂದ ಸಂಘ ಬಾಗಿಲು ಮುಚ್ಚಿತು. ನಂತರ ಕಿತ್ತೂರಿನ ಹುಚ್ಚಪ್ಪ ಸೂಡಿಯವರೊಂದಿಗೆ ಪಾಲುದಾರಿಕೆಯಲ್ಲಿ ಸ್ವಂತ ಕಂಪನಿಯೊಂದನ್ನು ಹುಟ್ಟು ಹಾಕುವ ಸಾಹಸಕ್ಕೆ ಹಿರಿಯರು ಪ್ರೋತ್ಸಾಹಿಸಿದರು. ಹೀಗಾಗಿ ೧೯೩೭ರಲ್ಲಿ ಶ್ರೀ ಗುರುಸೇವಾ ಸಂಗೀತ ನಾಟ್ಯ ಮಂಡಳಿ ಜನ್ಮ ತಾಳಿತು.

ಒಂದೊಂದು ಹೊಡೆತ ಬಿದ್ದಾಗಲೂ ಅದರಿಂದ ಗಟ್ಟಿಯಾಗುತ್ತಲೇ ಮುಂದೆ ಸಾಗಿದರು. ನಟನಾಗಿ, ಕಂಪನಿ ಕಟ್ಟಿ, ಆರ್ಥಿಕ ತೊಂದರೆಯಿಂದ ಬಾಗಿಲು ಮುಚ್ಚಿ, ಮುಂದೇನು ಎನ್ನುವ ಪ್ರಶ್ನೆ ಎದುರಾದರೂ ಧೃತಿಗೆಡದೆ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ಮುಂದುವರಿದವರು ಅವರು.

೧೯೪೭ರಲ್ಲಿ ಕಲಾವೈಭವ ನಾಟ್ಯಸಂಘ ಸ್ವಂತ ಕಂಪನಿ ಹುಟ್ಟುವವರೆಗೂ ಬದುಕು ಅತಂತ್ರವಾಗಿದ್ದರೂ, ಅವರೊಳಗಿನ ಕಲಾವಿದ ಪ್ರಬುದ್ಧನಾಗುತ್ತಲೇ ಹೋದ. ಅವರ ಕಂಪನಿಯಲ್ಲಿ ಸಿದ್ಧಗೊಂಡ ಜಿ.ಜಿ.ಹೆಗಡೆ ಅವರ 'ಹರಿಶ್ಚಂದ್ರ' ಸೇರಿದಂತೆ 'ವಧು-ವರ', ಏಕದೃಶ್ಯ ತಂತ್ರದ 'ಕುಂಕುಮ' ಅತ್ಯಂತ ಯಶಸ್ವಿ ನಾಟಕಗಳು. 'ಕುಂಕುಮ'ದಂಥ ವಿಶಿಷ್ಟ ಪ್ರಯೋಗದ ನಂತರ ಅತ್ಯಂತ ಯಶಸ್ವಿ ನಾಟಕ 'ಜಗಜ್ಯೋತಿ ಬಸವೇಶ್ವರ'. ಇದು ಬಾಳಪ್ಪನವರಿಗೆ ಆರ್ಥಿಕ ಸದೃಢತೆ ತರುವುದರ ಜೊತೆ ಅತ್ಯಂತ ದೊಡ್ಡ ಹೆಸರು ತಂದುಕೊಟ್ಟಿತು. ಈ ನಾಟಕದ ಬಸವಣ್ಣನ ಪಾತ್ರವನ್ನು ಹಳಬರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ನವಲಗುಂದದಲ್ಲಿ ಈ ನಾಟಕದ ಯಶಸ್ಸಿನಿಂದ ಸಂಪ್ರೀತಗೊಂಡ ಸಾರ್ವಜನಿಕರು ಬಾಳಪ್ಪನವರಿಗೆ 'ನಾಟ್ಯಭೂಷಣ' ಬಿರುದು ನೀಡಿ ಸನ್ಮಾನಿಸಿದರು.

ಕಂಪನಿ ಕಟ್ಟಿ, ತಮ್ಮ ವ್ಯಾವಹಾರಿಕ ಜಾಣ್ಮೆಯಿಂದ ಅದನ್ನು ಯಶಸ್ವಿಯಾಗಿ ಮುನ್ನಡೆಸಿದ ಅವರು, ರಾಜ್ಯದಲ್ಲಿ ಮಾತ್ರವಲ್ಲದೇ ಮುಂಬೈ, ಇಚಲಕರಂಜಿ, ಸಾಂಗಲಿ, ಮಿರಜ, ಸೊಲ್ಲಾಪುರ, ಕೊಲ್ಲಾಪುರಗಳಲ್ಲೂ ನಾಟಕ ಆಡಿದರು. ರಸಿಕರು ಅವುಗಳನ್ನು ಪ್ರೀತಿಯಿಂದ ಬರಮಾಡಿಕೊಂಡರು. ಇದಾದ ಕೆಲವು ವರ್ಷಗಳ ನಂತರ ಹಲವಾರು ಕಾರಣಗಳಿಂದ ವೃತ್ತಿಕಂಪನಿ ನಾಟಕಗಳ ವೈಭವ ಮಸುಕಾಗತೊಡಗಿತ್ತು. ವಿಲಾಸಿ ರಂಗಭೂಮಿ ಚಟುವಟಿಕೆಗಳು ಗರಿಗೆದರತೊಡಗಿದ್ದವು. ಜೊತೆಗೆ ಎರಡು ಪ್ರಕಾರಗಳ ನಡುವೆ ಕಂದರವೊಂದು ನಿರ್ಮಾಣಗೊಳ್ಳತೊಡಗಿತ್ತು. ಈ ಕಂದರವನ್ನು ಕಡಿಮೆಗೊಳಿಸುವ ಪ್ರಯತ್ನವನ್ನು ಬಾಳಪ್ಪನವರು ನಿರ್ವಂಚನೆಯಿಂದ ಮಾಡಿದರೂ ಅದರ ಫಲ ದೊರೆಯಲಿಲ್ಲ. ಹೀಗಾಗಿ ದಶಕಗಳ ಕಾಲ ವೈಭವದಿಂದ ಮೆರೆದಿದ್ದ 'ಕಲಾವೈಭವ ನಾಟ್ಯ ಸಂಘ' ನಿಲ್ಲುವ ಹಂತಕ್ಕೆ ಬಂದಿತ್ತು. ಒಲ್ಲದ ಮನಸ್ಸಿನಿಂದಲೇ ಕಂಪನಿಯ ಬಾಗಿಲು ಮುಚ್ಚಿದರೂ, ರಂಗಭೂಮಿಯ ಬೆಳವಣಿಗೆ ದೃಷ್ಟಿಯಿಂದ ಬಾಳಪ್ಪನವರು ಈ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿಯೇ ಮುಂದುವರಿದರು.

ರಂಗಗೀತೆಗಳು ತಮ್ಮ ಉಸಿರು ಎಂದು ಭಾವಿಸಿದ್ದ ಬಾಳಪ್ಪನವರು, ಅವು ಉಳಿಯಬೇಕು, ಮುಂದಿನ ಪೀಳಿಗೆಗೆ ದಕ್ಕಬೇಕು ಎಂದು ಕಾರ್ಯಾಗಾರ ನಡೆಸಿದರು. ಧ್ವನಿಸುರುಳಿ ಮಾಡಿಟ್ಟರು. ಪ್ರತಿ ಸಮಾರಂಭದಲ್ಲೂ ಒಂದು ರಂಗಗೀತೆಯನ್ನು ಹಾಡುವುದು ಅವರ ರೂಢಿಯಾಗಿತ್ತು. ಅವುಗಳನ್ನು ಕೆಲವು ಸಮಾರಂಭದಲ್ಲಿ ಕೇಳುವ ಅವಕಾಶ ನನಗೂ ದಕ್ಕಿದ್ದು ಒಂದು ರೀತಿಯಲ್ಲಿ ಸೌಭಾಗ್ಯವೇ ಸರಿ. ಬಾಳಪ್ಪನವರು

☆ ☆

ರಂಗಭೂಮಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಹಲವು ಪುರಸ್ಕಾರಗಳು ಅವರನ್ನು ಹುಡುಕಿಕೊಂಡು ಬಂದವು. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಗೌರವ ಡಾಕ್ಟರೇಟ್, ಹೀಗೆ ಹತ್ತು ಹಲವು ಪ್ರಶಸ್ತಿ, ಪುರಸ್ಕಾರಗಳಿಂದ ಭೂಷಿತರಾದವರು ನಾಟ್ಯಭೂಷಣ ಏಣಗಿ ಬಾಳಪ್ಪನವರು.

ಕಾಲಾನುಕ್ರಮದಲ್ಲಿ ಹಲವು ಸ್ಥಿತ್ಯಂತರಗಳಿಗೆ ಒಳಗಾದ ರಂಗಭೂಮಿಗೆ ಸಾಕ್ಷಿಯಾದ ಹಿರಿಯ ಜೀವದ ದೇಹಕ್ಕೆ ವಯಸ್ಸಾದರೂ, ಮನಸ್ಸಿಗಿರುವ ತಾರುಣ್ಯ, ರಂಗಭೂಮಿಯಡೆಗಿರುವ ಬಾಳಪ್ಪನವರ ತುಡಿತ ಕಡಿಮೆಯಾಗದಂತೆ ಕಾಪಾಡಿಕೊಂಡಿತ್ತು. ವೃತ್ತಿರಂಗಭೂಮಿಯ ವೈಭವವನ್ನು ಉಳಿಸಿಕೊಂಡು, ಹವ್ಯಾಸಿ ರಂಗಭೂಮಿಯ ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡರೆ ಮಾತ್ರ ರಂಗಭೂಮಿಗೆ ಭವಿಷ್ಯವಿದೆ ಎನ್ನುವ ಬಾಳಪ್ಪನವರ ಆಸೆ ಮತ್ತು ನಂಬಿಕೆಗೆ ಬೇರೆ ಪರೀಕ್ಷೆಯ ಅಗತ್ಯವೇ ಇಲ್ಲ. ಅದು ಇಂದಿನ ತುರ್ತು ಕೂಡಾ ಹೌದು.

■ ■ ■



ಡಾ. ರಾಜಕುಮಾರ

# ನಟಸಾರ್ವಭೌಮ

# ಡಾ. ರಾಜಕುಮಾರ

## (೧೯೨೯-೨೦೦೬)

● ಡಾ. ಶಶಿಧರ ನರೇಂದ್ರ

ಅಭಿಮಾನಿ ದೇವರುಗಳೇ! ಎಂದು ಪ್ರೇಕ್ಷಕರನ್ನು, ಕನ್ನಡನಾಡಿನ ಜನರನ್ನು ತುಂಬು ಹೃದಯದಿಂದ, ಭಕ್ತಿಯಿಂದ ಕರೆದು ನಾಡು, ನುಡಿಯನ್ನು ಪ್ರೀತಿಸಿದವರು 'ಕರ್ನಾಟಕರತ್ನ' ನಟಸಾರ್ವಭೌಮ ಡಾ. ರಾಜಕುಮಾರರು. "ಹುಟ್ಟಿದರೇ ಕನ್ನಡನಾಡಲಿ ಹುಟ್ಟಬೇಕು, ಮೆಟ್ಟಿದರೇ ಕನ್ನಡದ ಮಣ್ಣನ್ನು ಮೆಟ್ಟಬೇಕು" ಎಂದು ಹಾಡಿ ತಮ್ಮ ಬದುಕಿನ ಜಟಕಾಬಂಡಿಯನ್ನು ಕನ್ನಡ ಭಾಷೆ, ಕಸ್ತೂರಿ ಮಣ್ಣಿಗಾಗಿ ತೇದವರು, ಕಸ್ತೂರಿ ನಿವಾಸಿಯಾದವರು ಚಿತ್ರರಂಗದ ಮುತ್ತು 'ಅಣ್ಣಾವ್ರು'. ಅವರೇ ನಮ್ಮ ಒಡಹುಟ್ಟಿದ ರಾಜಕುಮಾರರು.

ಕಾವೇರಿತೀರದಲ್ಲಿ ಒಂದು ಕಾಡು. ಆ ಕಾಡಲ್ಲಿ ಗಾಜನೂರೆಂಬ ಊರು. ಇಲ್ಲಿ ಪುಟ್ಟಸ್ವಾಮಯ್ಯ ಮತ್ತು ಲಕ್ಷ್ಮಮ್ಮರ ಆರಾಧ್ಯದೈವ ಮುತ್ತೆತ್ತಿ ಹನಮಂತರಾಯನ ಕೃಪೆಯಿಂದ ೧೯೨೯ ಎಪ್ರಿಲ್ ೨೪, ಶ್ರೀರಾಮನವಮಿಯಂದು ಜನಿಸಿದ ಮುತ್ತಣ್ಣ, ಮುತ್ತುರಾಜ ಮುಂದೆ ತಮ್ಮ ಆರಾಧ್ಯ ದೇವರನ್ನು

'ಎತ್ತಲೋ ಮಾಯವಾದ ಮುತ್ತಿನ ಮೂಗುತಿ ನೀನು,
ಎತ್ತಿತಂದೆ ಎಲ್ಲಿಂದ ರಾಯ ಮುತ್ತೆತ್ತಿ ರಾಯ'.

ಎಂದು ಭಕ್ತಿಯಿಂದ ಸುಶ್ರಾವ್ಯವಾಗಿ ಹಾಡಿದ, ಬಾಲ್ಯದಲ್ಲಿ ತುಂಟನಾಗಿದ್ದ ಮುತ್ತುರಾಜನಿಗೆ ಬೆಣ್ಣೆ, ಕುರುಕಲು ತಿಂಡಿ ಅಂದರೆ ಪ್ರೀತಿ. ಹಾಗಾಗಿ ಮುಂದೆ "ಬಿಸಿ ಬಿಸಿ ಕಜ್ಜಾಯ ರುಚಿ ರುಚಿ ಕಜ್ಜಾಯ ಮಾಡಿಕೊಡಲೇ ನಾನು"- ಎಂದು ಹಾಡಿ ನಲಿದವರು. ಗಾಜನೂರಿಗೆ ಹತ್ತಿರದಲ್ಲಿದ್ದ ಹಿರೀಪುರದ ಶಾಲೆಯಲ್ಲಿ ವಿದ್ಯಾಭ್ಯಾಸ ಶುರುವಾಯಿತು. ಆದರೆ ಮುತ್ತುರಾಜನಿಗೆ ಗಣಿತ, ಇತಿಹಾಸಕ್ಕಿಂತ ಭಜನೆ, ನಾಟಕದ ಕಂದಪದ್ಯಗಳು, ಮರಕೋತಿ ಆಟ, ಗೆಳೆಯರೊಂದಿಗೆ ಹಳ್ಳಕೊಳ್ಳ ಸುತ್ತಾಟಗಳೇ ಇಷ್ಟ. ತಂದೆ ಪುಟ್ಟಸ್ವಾಮಯ್ಯನವರ ನಾಟಕದ ಮಾಸ್ತರಿಕೆಯಿಂದ ಬಾಲಕನಿಗೆ ನಾಟಕದ ಪದ್ಯಗಳು, ಸಂಭಾಷಣೆಗಳು ಮುಖೋದ್ಗತವಾಗಿದ್ದವು. ಮೂರನೇ ಇಯತ್ತೆವರೆಗೆ ಶಾಲೆಯ ವಿದ್ಯಾಭ್ಯಾಸ ಮಾಡಿದರೂ; 'ಜೇನಿನ ಹೊಳೆಯೋ ಹಾಲಿನ ಮಳೆಯೋ ಸುಧೆಯೋ ಕನ್ನಡ ಸವಿನುಡಿಯೋ' ಅಂತ ಕನ್ನಡ ಭಾಷೆಯ ಮೇಲೆ ಪ್ರಭುತ್ವವನ್ನು ಸ್ಥಾಪಿಸಿ ತಮಿಳು, ತೆಲುಗು, ಹಿಂದಿ, ಇಂಗ್ಲೀಷ್ ಭಾಷೆಗಳನ್ನು ಕೂಡ ಆಡುತ್ತಿದ್ದ ಮುತ್ತುರಾಜ, ರಾಜ್‌ಕುಮಾರನಾದ ಮೇಲೆ "ನಾನು ಕಲಿತದ್ದು ಬಹಳ ಕಡಿಮೆ, ಕಲಿಯಬೇಕಾದ್ದು

ಬಹಳಷ್ಟು ಇದೆ. ಅದಕ್ಕೆ ಜೀವನ ಸಾಲದು"- ಎಂದರು. ಮುತ್ತುರಾಜನ ತಮ್ಮ ವರದರಾಜ; ಇಬ್ಬರು ತಂಗಿಯರು ನಾಗಮ್ಮ, ಶಾರದಾ. ಸಂಗೀತ, ನಾಟಕದ ಗುಂಗಿದ್ದ ಮುತ್ತಣ್ಣನನ್ನು ಸಂಗೀತಪಾಠಕ್ಕಾಗಿಯೇ ನಂಜನಗೂಡಿನಲ್ಲಿದ್ದ ಸೋದರಮಾವ ಅಪ್ಪಾಜಿಗೌಡ, ಸಣ್ಣೇಗೌಡರ ಹತ್ತಿರ ಕಳಿಸಿದರು ತಂದೆ ಪುಟ್ಟಸ್ವಾಮಯ್ಯ. ನಂಜನಗೂಡಿನಲ್ಲಿ ಜಾತ್ರೆ-ಉತ್ಸವ ಗುಡಿಗಳಲ್ಲಿ ಭಜನೆ ಮಾಡುತ್ತಿದ್ದ ಮುತ್ತಣ್ಣ, ಇಲ್ಲಿಯೇ ಕದ್ದು ಮುಚ್ಚಿ ಕಷ್ಟಪಟ್ಟು ಟೆಂಟ್‌ಸಿನಿಮಾ ನೋಡಿದರು; ಮುಂದೆ ತಾವೇ ನಾಯಕನಟರಾದರು.

ಪುಟ್ಟಸ್ವಾಮಯ್ಯನವರು ಗುಬ್ಬಿ ಕಂಪನಿಯ ನಟರಾಗಿ ಬೆಂಗಳೂರಿನಲ್ಲಿ ವಾಸಿಸಲಾರಂಭಿಸಿದಾಗ ಪುಟ್ಟಸ್ವಾಮಯ್ಯ ಮುತ್ತುನ ಮುಖಕ್ಕೆ ಬಣ್ಣ ಬಳಿದು ಆಶೀರ್ವದಿಸಿದರು. 'ಕೃಷ್ಣಲೀಲೆ' ನಾಟಕದಲ್ಲಿಯ ಅಭಿನಯದೊಂದಿಗೆ ಮುತ್ತಣ್ಣನ ಕಲಾಲೀಲೆ ಬೆಳಗತೊಡಗಿತು, 'ಕುರುಕ್ಷೇತ್ರ' ನಾಟಕದಲ್ಲಿ ಅರ್ಜುನನ ಪಾತ್ರ, ಭಕ್ತ ಅಂಬರೀಷದಲ್ಲಿ ಅಂಬರೀಷನ ತಮ್ಮ ರಮಾಕಾಂತನ ಪಾತ್ರ, ಸುಬ್ಬಯ್ಯನಾಯ್ಡು ಅವರ ಕಂಪನಿಯ ಎಲ್ಲ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ಮುತ್ತುರಾಜರೇ ಮಾಡುತ್ತಿದ್ದರು. ನಾರದ, ಬಿಜ್ಜಳ ಬಸವೇಶ್ವರ ನಾಟಕದಲ್ಲಿನ ಬಸವಣ್ಣನ ಪಾತ್ರ ಬಹಳ ಜನಪ್ರಿಯವಾಗಿತ್ತು. ಅನೇಕ ನಾಟಕಗಳಲ್ಲಿ ರಾಜಕುಮಾರ ಸ್ತ್ರೀವೇಷಗಳನ್ನು ಹಾಕಿದ್ದರು. ಇದೇ ಸಮಯದಲ್ಲಿ ಪುಟ್ಟಸ್ವಾಮಯ್ಯನವರು ಅನಾರೋಗ್ಯದಿಂದ ವಿಧಿವಶರಾದರು. ಇಡೀ ಕುಟುಂಬದ ಜವಾಬ್ದಾರಿ ಎಲ್ಲಾ ಮುತ್ತುರಾಜನ ಮೇಲೆ ಬಿತ್ತು. ಸುಬ್ಬಯ್ಯನಾಯ್ಡು ಅವರ ಕಂಪನಿಯಲ್ಲಿ ನಾಟಕಗಳನ್ನಾಡುತ್ತ ಸಂಸಾರವನ್ನು ಸಲಹತೊಡಗಿದರು. ತಂದೆ ಪುಟ್ಟಸ್ವಾಮಯ್ಯ, ತಾಯಿ ಲಕ್ಷ್ಮಮ್ಮರ ಆಸೆಯಂತೆ ಸೋದರಮಾವ ಅಪ್ಪಾಜಿಗೌಡರ ಮಗಳಾದ ಪಾರ್ವತಿಯೊಂದಿಗೆ ಜೂನ್ ೨೫-೧೯೫೩ರಲ್ಲಿ ಮದುವೆಯಾಯಿತು. ಇಲ್ಲಿಂದ ರಾಜ್‌ಕುಮಾರ ಅವರ ಯಶಸ್ಸಿನ ಬಹುಪಾಲು ಶ್ರೇಯಸ್ಸು ಪಾರ್ವತಮ್ಮನವರಿಗೆ ಸಲ್ಲುತ್ತದೆ.

ನಾಟಕಗಳಲ್ಲಿ ಪ್ರಮುಖ ಪಾತ್ರಗಳ ಮೂಲಕ ಒಳ್ಳೆಯ ನಟನೆಂದು ರಾಜ್ ಜನಪ್ರಿಯರಾಗಿದ್ದರು. ಎಚ್.ಎಲ್.ಎನ್. ಸಿಂಹ ಅವರ 'ಶ್ರೀನಿವಾಸ ಕಲ್ಯಾಣ' ಚಿತ್ರದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾಗಿ ಪುಟ್ಟ ಪಾತ್ರದಲ್ಲಿ ಮುತ್ತುರಾಜ ಅಭಿನಯಿಸಿದರು. ಗುಬ್ಬಿ ವೀರಣ್ಣನವರು ಆಗಲೇ ಕೆಲ ಚಿತ್ರಗಳನ್ನು ನಿರ್ಮಿಸಿದ್ದರು. ಈಗ ಬೇಡರ ಕಣ್ಣಪ್ಪ ಚಿತ್ರವನ್ನು ಕೈಗೆತ್ತಿಕೊಂಡು ಸಿಂಹ ಅವರಿಗೆ ನಿರ್ದೇಶಿಸಲು ಹೇಳಿದ್ದರು. ಇಲ್ಲಿ ಸ್ಕ್ರೀನ್ ಟೆಸ್ಟಿನಲ್ಲಿ ಆಯ್ಕೆ ಆದವರೇ ಸ್ಫುರದ್ರೂಪಿ, ಉತ್ತಮ ಶರೀರ ಹಾಗೂ ಶಾರೀರ ಹೊಂದಿದ್ದ ಮುತ್ತುರಾಜ. ಆಗ ನಾಯಕನಟರಿಗೆ ಚಿತ್ರರಂಗದ ವಾತಾವರಣಕ್ಕೆ ಹೊಂದಿಕೆಯಾಗುವಂತೆ, ಸಿಂಹ ಹಾಗೂ ಗುಬ್ಬಿ ವೀರಣ್ಣನವರು ಮುತ್ತುರಾಜ್‌ಗೆ 'ರಾಜ್‌ಕುಮಾರ್' ಎಂದು ನಾಮಕರಣ ಮಾಡಿದರು. 'ಬೇಡರ ಕಣ್ಣಪ್ಪ'ನಾಗಿ ಉತ್ತಮವಾಗಿ ಅಭಿನಯಿಸಿದ ರಾಜ್‌ಕುಮಾರ್ ಅಚ್ಚಳಿಯದ ಬೇಡಿಕೆಯನ್ನು ಎಂದೆಂದೂ ಉಳಿಸಿಕೊಂಡರು. 'ಶಿವಪ್ಪ ಕಾಯೋ ತಂದೆ ಮೂರು ಲೋಕ ಸ್ವಾಮಿ ದೇವ' ಎಂದು ಹಾಡಿ ಅಭಿನಯಿಸಿದ ರಾಜ್‌ಕುಮಾರ ಶಿವನ ಕರುಣೆಯಿಂದ ಅಪ್ರತಿಮ ಕಲಾವಿದರಾದರು. ಮದ್ರಾಸಿನಲ್ಲಿ ಮನೆ ಮಾಡಿದರು. ತುಂಬು ಸಂಸಾರ, ಪ್ರತಿದಿನ ಶೂಟಿಂಗಿಗೆ ಹೋಗುವಾಗ ತಾಯಿ ಲಕ್ಷ್ಮಮ್ಮಗೆ ನಮಸ್ಕರಿಸಿಯೇ ಹೊರಡುತ್ತಿದ್ದರು.

ಇತರರಿಗೆ ಮಾರ್ಗದರ್ಶನ ಮಾಡುವುದು ಸುಲಭ, ಆದರೆ ನಾವೇ ಹೊಸಮಾರ್ಗ ಹುಡುಕುವುದು ಕಷ್ಟ ಎಂದು ಹೇಳುತ್ತಿದ್ದ ರಾಜ್‌ಕುಮಾರ್ ತಮ್ಮ ಜೀವನದುದ್ದಕ್ಕೂ ಶಿಸ್ತು, ನೀತಿ, ನಿಯತ್ತುಗಳನ್ನುಳಿಸಿಕೊಂಡು ಬಂದರು. ಧರ್ಮ ಮೀರಿ ನಡೆಯಲಿಲ್ಲ. ಮಾನವೀಯತೆ ಬಿಡಲಿಲ್ಲ.– "ಮಾನವನಾಗುವೆಯಾ ಇಲ್ಲಾ ದಾನವನಾಗುವೆಯಾ ನೀ ಮಾನವಕುಲಕೆ ಮುಳ್ಳಾಗುವೆಯಾ" ಎಂದು ಹಾಡುತ್ತಾ ನುಡಿದಂತೆ ನಡೆದು ಮಹಾಮಾನವರಾದವರು. ಮುಂದೆ 'ಸೋದರಿ'ಯಾಗಿ, ಹರಿಭಕ್ತ, ಓಹಿಲೇಶ್ವರ, ಜಗಜ್ಯೋತಿ ಬಸವೇಶ್ವರರಾಗಿ 'ಕಣ್ಣು ತೆರೆದು ನೋಡಿ' 'ಕರುಣೆಯೇ ಕುಟುಂಬದ ಕಣ್ಣಾಗಿ', 'ಚಂದವಳ್ಳಿಯ ತೋಟ'ದಿಂದ, 'ಮಂತ್ರಾಲಯ ಮಹಾತ್ಮೆಯಿಂದ' ರಾಘವೇಂದ್ರಸ್ವಾಮೀಜಿಯ ಭಕ್ತರಾಗಿ "ವಾರ ಬಂತಮ್ಮಾ ಗುರುವಾರ ಬಂತಮ್ಮಾ ರಾಯರ ನೆನೆಯಮ್ಮಾ"– ಎಂದು ರಾಜ್‌ಕುಮಾರ ತಮ್ಮ ಬಾಳಿನುದ್ದಕ್ಕೂ ರಾಘವೇಂದ್ರಸ್ವಾಮಿಜಿಯ ಸೇವೆ ಮಾಡಿದರು.

**ಚಿತ್ರರಂಗದಲ್ಲಿ ಶಿಸ್ತನ್ನು ರೂಢಿಸಿಕೊಂಡರು. ಯಾರೇ ನಿರ್ಮಾಪಕರಿರಲಿ,** ಒಪ್ಪಿಕೊಂಡ ಮೇಲೆ ಅದು ಎಷ್ಟೇ ಕಷ್ಟವಾದರೂ ಕೆಲಸ ಮಾಡುತ್ತಿದ್ದರು. ಕೆಲವು ಸಲ; ಅನಿರೀಕ್ಷಿತವಾಗಿ ಚಿತ್ರ ಸೋತಾಗ ಅಂಥ ನಿರ್ಮಾಪಕರಿಗೆ ಮತ್ತೆ ಡೇಟ್ಸ ಕೊಟ್ಟು ಅವರಿಗೆ ನೆರವಾಗುತ್ತಿದ್ದರು. 'ಶ್ರೀಕೃಷ್ಣ ರುಕ್ಮಿಣಿ', ಚಿತ್ರದಲ್ಲಿ ಎಳೆಂಟು ವಿಧದ ವೇಷ ಬದಲಿಸುತ್ತ ಸತತ ೨೪ ಗಂಟೆಗಳ ಕಾಲ ಅವಿಶ್ರಾಂತವಾಗಿ ಅಭಿನಯಿಸಿದ್ದರು. ನಂದಾದೀಪ, ಸರ್ವಮಂಗಳ ಚಿತ್ರೀಕರಣದ ಸಂದರ್ಭದಲ್ಲಿ ರಾಜ್ ಅವರಿಗೆ ತುಂಬು ಜ್ವರ. ಆದರೆ ಚಿತ್ರೀಕರಣಕ್ಕೆ ಗೈರಾಗದೇ ಸಹಜವಾಗಿ ಅಭಿನಯಿಸಿದರು. 'ಸಂತ ತುಕಾರಾಂ' ಚಿತ್ರೀಕರಣದ ಸಂದರ್ಭದಲ್ಲಿ ಜೋಳದ ಹೊಲದಲ್ಲಿ ಕೂತು 'ಆದಿ ಬೀಜ ಒಂದೇನೆ' ಎಂಬ ಹಾಡು ಹಾಡುತ್ತಿದ್ದಾಗ ತುಕಾರಾಂನ ವೈರಿಗಳು ಅವನನ್ನು ಮುಗಿಸಲು ಹೊಲಕ್ಕೆ ಬೆಂಕಿ ಹಚ್ಚುತ್ತಾರೆ. ಹೀಗೆ ಬೆಂಕಿ ಹಚ್ಚಿದ ಸಂದರ್ಭದಲ್ಲಿ ಗಾಳಿ ಜೋರಾಗಿ ಬೀಸತೊಡಗಿತು. ರಾಜ್‌ಕುಮಾರ ತುಕಾರಾಂ ಪಾತ್ರದಲ್ಲಿ ತಲ್ಲೀನರಾಗಿ ಮೈ ಮರೆತು ಬಿಟ್ಟಿದ್ದರು. ಬೆಂಕಿ ಉರಿದು ನಿಜವಾಗಿಯೂ ರಾಜ್‌ಕುಮಾರರಿಗೆ ಮುಖ ಮೀಸೆ ಹುಬ್ಬುಗಳೆಲ್ಲ ಸುಟ್ಟು ಹೋಗಿದ್ದವು. ಯಾರೋ ನೀರೆರೆದಾಗ ರಾಜ್‌ಕುಮಾರರಿಗೆ ಎಚ್ಚರವಾಯಿತು. ಇಂಥ ಅನೇಕ ಪ್ರಸಂಗಗಳು ರಾಜ್ ಅವರ ವೃತ್ತಿಪರತೆಯನ್ನು ಬಿಂಬಿಸುತ್ತವೆ. ವೃತ್ತಿಯನ್ನು ದೇವರ ಕೆಲಸವೆಂದೇ ತಿಳಿದಿದ್ದರು. ಪರಭಾಷಾ ಚಿತ್ರಗಳ ನಿರ್ಮಾಪಕರು ಕೇಳಿದಷ್ಟು ಹಣ ಕೊಡುತ್ತೇವೆ ಎಂದರೂ ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸಲಿಲ್ಲ.– 'ಕನ್ನಡವೇ ತಾಯ್ನುಡಿಯು, ಕರುನಾಡು ತಾಯ್ನಾಡು.. ಕನ್ನಡಿಗನು ನೀನೆಂಬ ಅಭಿಮಾನವಿರಲಿ' ಎಂದು ಸದಾ ಕನ್ನಡ ಅಭಿಮಾನಿಯಾಗಿದ್ದರು.

'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬುದನ್ನರಿತಿದ್ದ ರಾಜ್‌ಕುಮಾರ ಪ್ರತಿದಿನ ವ್ಯಾಯಾಮ, ಯೋಗಾಸನ, ಪ್ರಾಣಾಯಾಮಗಳನ್ನು ತಪ್ಪದೆ ಮಾಡುತ್ತಿದ್ದರು. ಹಾಗಾಗಿ ೫೦ ವರ್ಷ ಮೀರಿದಾಗ್ಯೂ ಚಿರ ಯುವಕನ ಪಾತ್ರ ಮಾಡುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ನೈಜವಾಗಿ ಹೊಡೆದಾಟ ಇತ್ಯಾದಿಗಳನ್ನು ಮಾಡುತ್ತಿದ್ದರು. ಶಂಕರನಾಗ್ ನಿರ್ದೇಶನದ 'ಒಂದು ಮುತ್ತಿನ ಕಥೆ' ಚಿತ್ರದಲ್ಲಿ ಆಮ್ಲಜನಕ ಉಪಯೋಗಿಸದೇ, ಸಮುದ್ರದಾಳದಲ್ಲಿ ಯೋಗಬಲದಿಂದ ಉಸಿರು ಬಿಗಿ ಹಿಡಿದು ಈಜಾಡಿದರು. ಕುದುರೆ

ಸವಾರಿ, ಕತ್ತಿವರಸೆ, ಮುಷ್ಠಿ ಯುದ್ಧಗಳಲ್ಲೆಲ್ಲ ನೈಜವಾಗಿ ಪಾಲ್ಗೊಳ್ಳುತ್ತಿದ್ದರು.

ರಾಜ್ ಪರಿಪೂರ್ಣ ನಟ ಭಕ್ತಿ, ಶೌರ್ಯ, ಜಾನಪದ, ಸಾಮಾಜಿಕ, ಪತ್ತೇದಾರಿ, ಧನಿಕ, ಬಡವ, ರಾಕ್ಷಸ, ಹೀಗೆ ಯಾವುದೇ ಕಥೆ, ಪಾತ್ರ ಇದ್ದರೂ ಸಹಜವಾಗಿ, ಪರಕಾಯ ಪ್ರವೇಶ ಮಾಡಿ ಅಭಿನಯಿಸುವವರು, ಅದರಲ್ಲೂ ಭಕ್ತಿಪ್ರಧಾನ ಪಾತ್ರಗಳಲ್ಲಿ ಬಹಳ ತನ್ಮಯರಾಗಿ ಅಭಿನಯಿಸುತ್ತಿದ್ದರು. ಬೇಡರ ಕಣ್ಣಪ್ಪದಿಂದ ಶುರುವಾಗಿ, ಭಕ್ತ ವಿಜಯ, ಹರಿಭಕ್ತ, ಓಹಿಲೇಶ್ವರ, ಧರ್ಮವಿಜಯ, ಭಕ್ತ ಕನಕದಾಸ, ಕೈವಾರ ಮಹಾತ್ಮೆ, ಭಕ್ತಚೇತ, ಮಹಾತ್ಮಾ ಕಬೀರ, ಸಂತ ತುಕಾರಾಂ, ನವಕೋಟಿ ನಾರಾಯಣ, ಶಿವರಾತ್ರಿ ಮಹಿಮೆ, ಶಿವಗಂಗೆ ಮಹಾತ್ಮೆ, ಮಂತ್ರಾಲಯ ಮಹಾತ್ಮೆ, ಭಕ್ತ ಕುಂಬಾರ ಮುಂತಾದ ಪಾತ್ರಗಳಲ್ಲಿ ಅವರು ಭಕ್ತಿಯ ಪರಾಕಾಷ್ಠೆಯ ಅಭಿನಯವನ್ನು ಮಾಡಿದ್ದಾರೆ.

ಬಾಲ್ಯದಲ್ಲಿ ಸಂಗೀತಾಭ್ಯಾಸ ಮಾಡಿ, ಉತ್ತಮ ಧ್ವನಿಯನ್ನು ಹೊಂದಿ ನಾಟಕಗಳಲ್ಲಿ ಅನೇಕ ಗೀತೆಗಳನ್ನು ಸುಶ್ರಾವ್ಯವಾಗಿಯೇ ಹಾಡುತ್ತಿದ್ದ ರಾಜ್ ಅವರಿಗೆ ಚಿತ್ರಗಳಲ್ಲಿ ಶಾರೀರವಾದವರು ಡಾ. ಪಿ.ಬಿ. ಶ್ರೀನಿವಾಸ ಅವರು. ಕನ್ನಡ ಚಿತ್ರರಂಗ ಕಂಡ ಮೇರು ಬಾಂಧವ್ಯಗಳಲ್ಲಿ ರಾಜ್‌ಕುಮಾರ ಪಿ.ಬಿ.ಎಸ್. ಒಂದು ಅದ್ಭುತ ಮಾದರಿ. ವರನಟ ರಾಜ್‌ಕುಮಾರರ ಅಭಿನಯ, ವರಗಾಯಕ ಪಿ.ಬಿ.ಎಸ್. ಅವರ ಗಾಯನಗಳ ಸಂಯೋಜನೆಯ ಹಾಡುಗಳು ಸಾವಿರಾರು. ನವರಸಾಭಿನಯದ ರಾಜ್ ಅವರಿಗಾಗಿ ಪಿ.ಬಿ. ಶ್ರೀನಿವಾಸ ಹಾಡಿದ ಗೀತೆಗಳು ಅಜರಾಮರ. ರಾಜ್‌ಕುಮಾರ ಆರಂಭದಲ್ಲಿ 'ಮಹಿಷಾಸುರ ಮರ್ದಿನಿ' ಚಿತ್ರದಲ್ಲಿ– 'ತುಂಬಿತು ಮನವ ತಂದಿತು ಸುಖವ' ಗೀತೆಯನ್ನು ಎಸ್. ಜಾನಕಿ ಅವರೊಂದಿಗೆ ಚೆನ್ನಾಗೇ ಹಾಡಿದ್ದರು. ಮುಂದೆ ೧೯೭೪ರಲ್ಲಿ ಪಿ.ಬಿ. ಶ್ರೀನಿವಾಸ್ ಅವರ ಅಲಭ್ಯತೆಯಿಂದ ರಾಜ್ ಅವರು ಹಾಡಿದ 'ಸಂಪತ್ತಿಗೆ ಸವಾಲ್' ಚಿತ್ರದ 'ಯಾರೇ ಕೂಗಾಡಲಿ ಊರೇ ಹೋರಾಡಲಿ' ಹಾಡಿನಿಂದ ರಸಿಕರ ಮನದಲ್ಲಿ ರಾಜ್‌ಕುಮಾರ ಮೇರು ಗಾಯಕರಾಗಿ ಪ್ರತಿಷ್ಠಾಪಿತರಾದರು. ಇಲ್ಲಿಂದ ಸಾವಿರಾರು ವಿಭಿನ್ನವಾದ ಗೀತೆಗಳನ್ನು ಹಾಡಿದರು. ಜೀವನ ಚೈತ್ರ ಚಿತ್ರದಲ್ಲಿಯ 'ನಾದಮಯ ಲೋಕವೆಲ್ಲ' ಹಾಡಿಗೆ ರಾಷ್ಟ್ರೀಯ ಗಾಯಕ ಪ್ರಶಸ್ತಿ ಪಡೆದರು.

ರಾಜ್‌ಕುಮಾರ ಅಭಿನಯದ ಮಯೂರ ಚಿತ್ರದಲ್ಲಿ 'ನಾನಿರುವುದೇ ನಿಮಗಾಗಿ ನಾಡಿರುವುದು ನಮಗಾಗಿ' ಎಂಬ ಹಾಡನ್ನು ರಾಜ್‌ಕುಮಾರ ಅವರೇ ಹಾಡಿದ್ದಾರೆ.– ಇದರಲ್ಲಿ

ಸಾವಿರ ಜನುಮದ ಪುಣ್ಯವೋ ಏನೋ

ನಾನೀ ನಾಡಲಿ ಜನಿಸಿರುವೆ

ತಪಸಿನ ಫಲವೋ, ಹಿರಿಯರ ಒಲವೋ

ನಿಮ್ಮೀ ಪ್ರೀತಿಯ ಗಳಿಸಿರುವೆ.

ಎಂದು ಹಾಡಿದ್ದಾರೆ. ಹೀಗೆ ಕನ್ನಡ ನಾಡಿನಲ್ಲಿ ಜನಿಸಿದ್ದಕ್ಕಾಗಿ, ಅದು ತಪದ ಫಲವೊ ಹಿರಿಯರ ಆಶೀರ್ವಾದವೋ ಎಂದು ಅಭಿಮಾನಪಟ್ಟಿದ್ದಾರೆ. ಹಾಗೇ ಇಲ್ಲಿ ಜನ ನೀಡಿರುವ ಪ್ರೀತಿ–ವಿಶ್ವಾಸಕ್ಕೆ ಎಣೆ ಇಲ್ಲ ಎಂದಿದ್ದಾರೆ, ನಾಡು ನುಡಿಗೆ ತೊಂದರೆ ಬಂದಾಗ

ಅದನ್ನು ನಿವಾರಿಸಲು ಶ್ರಮಿಸಿದ್ದಾರೆ. ೧೯೬೧ರಲ್ಲಿ ಭೀಕರ ಬರಗಾಲ ಬಂದಾಗ; ೧೯೭೧ರಲ್ಲಿ ಭಾರತ-ಪಾಕ್ ನಡುವೆ ಯುದ್ಧವಾಗಿ; ರಾಷ್ಟ್ರೀಯ ರಕ್ಷಣಾ ನಿಧಿಗೆ; ೧೯೯೯ರಲ್ಲಿ ಕಾರ್ಗಿಲ್ ಯುದ್ಧ ಸಂತ್ರಸ್ತರಿಗಾಗಿ ತಮ್ಮ ಕಲಾವಿದರ ಬಳಗದೊಂದಿಗೆ, ಸಂಚಾರ ಮಾಡಿ ನಿಧಿಯನ್ನು ಸಂಗ್ರಹಿಸಿ ನೀಡಿದ್ದಾರೆ. ೧೯೮೨ರಲ್ಲಿ ಕರ್ನಾಟಕದಲ್ಲಿ ಕನ್ನಡಭಾಷೆ, ಕನ್ನಡ ಜನರಿಗೆ ಪ್ರಥಮ ಆದ್ಯತೆ ಇರಬೇಕು ಎಂದು ಗೋಕಾಕ ಚಳುವಳಿ ಆರಂಭವಾದಾಗ ರಾಜಕುಮಾರ- "ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಪಟ್ಟ, ಅದಕ್ಕಾಗಿ ಏನೇ ಕಷ್ಟ ಬಂದರೂ ಸಹಿಸಲು ಸಿದ್ಧ, ಎಂಥ ತ್ಯಾಗಕ್ಕೂ ಬದ್ಧ"- ಎಂದು ಸಿಂಹಗರ್ಜನೆಯನ್ನು ಮಾಡಿದರು. ಚಳುವಳಿ ಯಶಸ್ವಿಯಾಯಿತು, ಹೀಗೆ ಅನೇಕ ಸಂದರ್ಭಗಳಲ್ಲಿ ಕನ್ನಡ, ಕರ್ನಾಟಕಕ್ಕಾಗಿ ಹೋರಾಡಿದರು.

ಕನ್ನಡ ಚಿತ್ರರಂಗದ ಏಳ್ಗೆಗಾಗಿ ಸದಾ ತುಡಿಯುತ್ತಿದ್ದ ಅವರ ಮನಸ್ಸು ಸಹಕಲಾವಿದರು, ತಂತ್ರಜ್ಞರು, ಅಶಕ್ತ ಕಲಾವಿದರಿಗಾಗಿ ಸಾಕಷ್ಟು ರೀತಿಯಲ್ಲಿ ಸಹಾಯ ಸಲ್ಲಿಸಿದ್ದಾರೆ. ಕೋಟ್ಯಂತರ ಕನ್ನಡಿಗರ ಕಣ್ಮಣಿಯಾದ ರಾಜಕುಮಾರರಿಗೆ ರಾಜ್ಯ, ರಾಷ್ಟ್ರಮಟ್ಟದ ರಾಜಕೀಯಕ್ಕೆ ಬರಲು ಪ್ರಧಾನಮಂತ್ರಿಗಳಾದಿಯಾಗಿ ಅನೇಕ ಗಣ್ಯರು ಒತ್ತಾಯಿಸಿದರು. ಆದರೆ ಸರಳ ಸಜ್ಜನಿಕೆಯ ರಾಜ್ ರಾಜಕೀಯಕ್ಕೆ ಕಾಲಿಡದೇ ಅಭಿಮಾನಿಗಳಲ್ಲಿ ತಮ್ಮ ಬಗೆಗಿನ ಅಭಿಮಾನವನ್ನು ಇಮ್ಮಡಿಗೊಳಿಸಿಕೊಂಡವರು.

ರಾಜ್‌ಕುಮಾರ ಅವರು ತಮ್ಮ ಅದ್ಭುತ, ವೈವಿಧ್ಯಮಯ ಪಾತ್ರಗಳ ಮೂಲಕ, ಸದಭಿರುಚಿಯ, ಸಂಪೂರ್ಣ ಕುಟುಂಬ ಕೂತು ನೋಡಬಹುದಾದ ಚಿತ್ರಗಳನ್ನು ನೀಡುವುದರ ಮೂಲಕ, ತಮ್ಮ ಸರಳ ಸಜ್ಜನಿಕೆಯಿಂದ, ಸುಂದರ ಸುಶ್ರಾವ್ಯ ಹಾಡುಗಾರಿಕೆಯು ಮುಖಾಂತರ ಕನ್ನಡಿಗರ ಆರಾಧ್ಯದೈವವಾದರು, ಗಾನಗಂಧರ್ವರಾದರು, ನಟ ಸಾರ್ವಭೌಮರಾದರು. ಇಂಥ ರಾಜ್‌ರು ಚಿತ್ರಜೀವನದಲ್ಲಿ ಬಂಗಾರದ ಹೂವು, ಕುಲಗೌರವ, ಬಬ್ರುವಾಹನ, ಹೊಸಬೆಳಕು, ದೇವತಾ ಮನುಷ್ಯ, ಒಡಹುಟ್ಟಿದವರು, ಚಿತ್ರಗಳ ಅಭಿನಯಕ್ಕೆ ೬ ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದರು. ಇವರ ಅಭಿನಯದ ಅನೇಕ ಚಿತ್ರಗಳು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಅನೇಕ ಪ್ರಶಸ್ತಿಗಳನ್ನು ಪಡೆದಿವೆ. ಭಾರತದ ಆಸ್ಕರ್ ಪುರಸ್ಕಾರ ಎಂದೇ ಪ್ರಸಿದ್ಧವಾಗಿರುವ ಫಿಲ್ಮಂಫೇರ್ ಪ್ರಶಸ್ತಿ ಅನೇಕ ಬಾರಿ ಬಂದಿದೆ. ೧೯೭೩ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತು. ೧೯೮೨ರಲ್ಲಿ ಅಮೇರಿಕಾ ದೇಶದ ಗೌರವ ಪ್ರಶಸ್ತಿ, ೧೯೮೩ರಲ್ಲಿ ಭಾರತ ಸರಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು. ಮುಖ್ಯವಾಗಿ ೧೯೯೨ರಲ್ಲಿ ಪ್ರಥಮ ಬಾರಿಗೆ ಡಾ. ರಾಜ್‌ಕುಮಾರ ಹಾಗೂ ಕುವೆಂಪು ಅವರಿಗೆ 'ಕರ್ನಾಟಕರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೆಲ್ಲಕ್ಕಿಂತ ಪ್ರಮುಖವಾಗಿ ಭಾರತ ಸರಕಾರ ರಾಷ್ಟ್ರಮಟ್ಟದ ಚಲನಚಿತ್ರ ಶ್ರೇಷ್ಠ ಪ್ರಶಸ್ತಿ ದಾದಾಸಾಹೇಬ ಪಾಲ್ಕೆ ಪ್ರಶಸ್ತಿಯನ್ನು ೧೯೯೬ರಲ್ಲಿ ನೀಡಿ ಹರ್ಷಿಸಿತು.

ಸ್ವಚ್ಛಂದ ಆಗಸದಲ್ಲಿ ಬೆಣ್ಣೆಯುಂಡೆಯಂತೆ ಸಕಲರಿಗೂ ಮುದ ನೀಡುವ ಚಂದ್ರನನ್ನು ಕಪ್ಪು ಮೋಡ ಮುಸುಕುವಂತೆ ಕಾಡುಗಳ ವೀರಪ್ಪನ್ ಕನ್ನಡಿಗರ ಕಣ್ಮಣಿಯನ್ನು ಅಪಹರಿಸಿದ. ಅನೇಕ ಬೇಡಿಕೆಗಳನ್ನು ಮುಂದಿಟ್ಟ. ಆದರೆ ರಾಜ್‌ಕುಮಾರ

೧೦೮ ದಿನ ಕಾಡು–ಮೇಡು ಅಲೆದು ಉಪವಾಸ, ವನವಾಸ ಅನುಭವಿಸಿದರು. ವೀರಪ್ಪನ್ ಕೂಡ ರಾಜ್‌ಕುಮಾರ ಅವರನ್ನು 'ಪೆರಿಯವರೆ' (ದೊಡ್ಡವರೆ) ಎಂದೇ ಕರೆಯುತ್ತಿದ್ದ. ರಾಜ್ ಎಲ್ಲವನ್ನು ತಾಳ್ಮೆಯಿಂದ ಸಹಿಸಿದರು. ಆ ಸಂದರ್ಭದಲ್ಲಿ ಕನ್ನಡಿಗರೆಲ್ಲರೂ ತಲ್ಲಣಿಸಿದರು. ಮಮ್ಮಲ ಮರುಗಿದರು. ಪ್ರಕರಣ ಸುಖಾಂತವಾಗಿ ರಾಜ್ ಸುರಕ್ಷಿತವಾಗಿ ಮರಳಿದಾಗ ಸಂಭ್ರಮಿಸಿದರು.


ಬೇಡರ ಕಣ್ಣಪ್ಪ ಚಿತ್ರದಿಂದ 'ಶಬ್ದವೇಧಿ' ಚಿತ್ರದ ವರೆಗೆ ೨೦೮ ಚಿತ್ರಗಳಲ್ಲಿ ನಾಯಕನ ಪಾತ್ರ ಮಾಡಿದ್ದಾರೆ, ಅಲ್ಲಿ–ಇಲ್ಲಿ ಗೌರವಪಾತ್ರಗಳಲ್ಲೂ ನಟಿಸಿದ್ದಾರೆ. "ಅನುಮಾನವೇ ಇಲ್ಲ, ಒಂದು ವೇಳೆ ನಾನು ನಟ ಆಗದಿದ್ದರೆ ನನ್ನೂರಿನಲ್ಲಿ ಹೊಲ ಊಳುತ್ತಾ ರೈತನಾಗಿರುತ್ತಿದ್ದೆ" ಎಂದು ಹೇಳುತ್ತಿದ್ದ ಈ ಬಂಗಾರದ ಮನುಷ್ಯ ನಿಜವಾಗಿಯೂ ರಾಜೀವಪ್ಪನೇ ಆಗಿದ್ದರು. ರಾಜ್‌ರ ತಮ್ಮ ವರದಪ್ಪ ಚಿತ್ರದ ವ್ಯವಹಾರಗಳನ್ನು ನೋಡಿಕೊಂಡರೆ ಪಾರ್ವತಮ್ಮ ಖ್ಯಾತ ನಿರ್ಮಾಪಕಿಯಾಗಿದ್ದರು. ಮಕ್ಕಳಾದ ಶಿವರಾಜ, ರಾಘವೇಂದ್ರ, ಪುನೀತ ಕನ್ನಡ ಚಿತ್ರರಂಗದ ಖ್ಯಾತನಟರು. ಮಗಳು ಪೂರ್ಣಿಮಾ, ಲಕ್ಷ್ಮೀ ಎಲ್ಲರೂ ಸಂತೃಪ್ತರು.

ಡಾ. ರಾಜ್‌ರದು ತುಂಬಿದ ಸಮೃದ್ಧ ಕುಟುಂಬ, ರಾಜ್ಯವಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲೆ ಪ್ರತಿಷ್ಠಿತ ಕುಟುಂಬ. ಗಾನಗಂಧರ್ವ, ನಟ ಸಾರ್ವಭೌಮ, ಸುರಸುಂದರಾಂಗ–ಸರಳ ಸಜ್ಜನ, ಜನಾನುರಾಗಿ ಎಲ್ಲ ಆಗಿದ್ದ ರಾಜ್‌ಕುಮಾರ ಅಂಥವರನ್ನೂ ವಿಧಿ ಬಿಡಲಿಲ್ಲ– ಅವರೇ ಹೊಸಬೆಳಕಿನಲ್ಲಿ ಹಾಡಿದಂತೆ– 'ವಿಧಿಯಾಟವೇನು ಬಲ್ಲವರು ಯಾರು, ಮುಂದೇನು ಎಂದು ಹೇಳುವರು ಯಾರು, ಬರುವುದು ಬರಲೆಂದು ನಗುನಗುತ ಬಾಳದೆ, ನಿರಾಸೆ, ವಿಷಾದ ಇದೇಕೆ' ಎಂದ ರಾಜ್‌ಕುಮಾರರು ೧೨/೦೪/೨೦೦೬ ರಂದು ಹೃದಯಾಘಾತದಿಂದ ನಿಧನರಾದಾಗ ಇಡೀ ನಾಡು ಸ್ತಬ್ಧವಾಯಿತು.– ಮಾನವದೇಹದ ಗಂಧರ್ವ ಅಜರಾಮರ ಎಂದೇ ನಂಬಿದ್ದ ಅಭಿಮಾನಿಗಳು ಬಿಕ್ಕಿ–ಬಿಕ್ಕಿ ಅತ್ತರು. ಅವರ ಅಭಿನಯದ ಓಹಿಲೇಶ್ವರ ಚಿತ್ರದ ಗೀತೆಯಂತೆ– 'ಈ ದೇಹದಿಂದ ದೂರವಾದೆ ಏಕೆ ಆತ್ಮನೆ, ಈ ಸಾವು ನ್ಯಾಯವೆ, ಆಧಾರ ನೀನೆಂದು ಈ ಲೋಕ ನಂಬಿದೆ'.

ಕಂಠೀರವ ಸ್ಟುಡಿಯೋದಲ್ಲಿ ರಾಜ್‌ಸಮಾಧಿ ಅವರ ಅಭಿಮಾನಿಬಳಗದ ತೀರ್ಥಕ್ಷೇತ್ರವಾಗಿದೆ. ಇಂಥ ಮೇರುನಟನ ಆದರ್ಶಬಾಳು, ಸಾಧನೆ ಸರ್ವರಿಗೂ ಮಾದರಿ. "ಅಣ್ಣಾ, ಮತ್ತೊಮ್ಮೆ ಹುಟ್ಟಿ ಬಾ."

■■■

ಸಾಂಸ್ಕೃತಿಕ ಧೃವ ತಾರೆಗಳು



ಗಜಾನನ ಮಹಾಲೆ

# "ಮೇಕಪ್ ಮಾಂತ್ರಿಕ"
# ಗಜಾನನ ಮಹಾಲೆ
# (೧೪-೦೧-೧೯೩೬)

● ಸಂತೋಷ ಗಜಾನನ ಮಹಾಲೆ

ಕಲೆ, ಸಾಹಿತ್ಯ, ಸಂಸ್ಕೃತಿಗೆ ಹೆಸರಾದ ನಾಡು ನಮ್ಮ ಕನ್ನಡನಾಡು ಹಲವು ವಿಧವಾದ ಕಲಾಪ್ರಕಾರಗಳು, ಜಾನಪದ, ಬಯಲಾಟ, ಸಣ್ಣಾಟ, ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳನ್ನೊಳಗೊಂಡು ಎಲ್ಲಾ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ದುಡಿದ ಅಸಂಖ್ಯಾತ, ಹೆಸರಾಂತ ಕಲಾವಿದರನ್ನು ರಂಗ ಜಗತ್ತಿಗೆ ನೀಡಿದ ಹೆಗ್ಗಳಿಕೆ ನಮ್ಮ ಕರ್ನಾಟಕದ್ದು, ಕಲಾಕ್ಷೇತ್ರದಲ್ಲಿ ವಿವಿಧ ಆಯಾಮಗಳಲ್ಲಿ ರಂಗಕರ್ಮಿಗಳಾಗಿ ದುಡಿದು ತಮ್ಮದೇ ಆದ ಕಲಾ ವ್ಯಕ್ತಿತ್ವದಲ್ಲಿ ಗುರುತಿಸಿಕೊಂಡ ಸಾಕಷ್ಟು ವ್ಯಕ್ತಿಗಳು ನಾಡಿನಾದ್ಯಂತ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಅದರಲ್ಲಿಯೂ ಕರ್ನಾಟಕದ ರಂಗಭೂಮಿಯಲ್ಲಿ ಪ್ರಸಾಧನಕಲೆ (Make up) ತಮ್ಮ ವೃತ್ತಿಯನ್ನಾಗಿ ತಿಳಿದುಕೊಂಡು ಅದರಲ್ಲಿಯೇ ಯಶಸ್ಸು ಕಂಡು ಮೇಲುಗೈ ಸಾಧಿಸಿದವರು ಅತೀ ವಿರಳ. ರಂಗಭೂಮಿಯ ಅಥವಾ ಇನ್ನಾವುದೇ ಕಲಾ ಪ್ರಕಾರಗಳಲ್ಲಿಯೂ ಪ್ರಸಾಧನ ಕಲೆ ಅವಶ್ಯಕ ಮತ್ತು ಅನಿವಾರ್ಯವಾಗಿರುತ್ತದೆ. ಅಂತಹ ಪ್ರಸಾಧನ ಕಲೆಯನ್ನು ತಮ್ಮ ಉಸಿರಾಗಿಸಿಕೊಂಡು ಅದರಲ್ಲಿ ಪರಿಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು. ಈವರೆಗೆ ೮ ಸಾವಿರಕ್ಕೂ ಹೆಚ್ಚು ನಾಟಕಗಳಿಗೆ ಪ್ರಸಾಧನ ಮಾಡಿ, ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಗಳಿಸಿದ ಯಶಸ್ವೀ ಪ್ರಸಾಧನ ಕಲಾವಿದರೆಂಬ ಹೆಗ್ಗಳಿಕೆ ಧಾರವಾಡದ ಶ್ರೀ 'ಗಜಾನನ ಮಹಾಲೆ' ಯವರಿಗೆ ಸಲ್ಲುತ್ತದೆ. ಇವರು ಉತ್ತರ ಕರ್ನಾಟಕದ ಏಕೈಕ ಪ್ರಸಾಧನ ಕಲಾವಿದರು ಎಂದರೆ ಅತಿಶಯೋಕ್ತಿಯಾಗಲಾರದು.

ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿ ಶ್ರೀ ಗಜಾನನ ಹರಿ ಮಹಾಲೆಯವರು ತಮ್ಮ ಮುಗ್ಧ ಮನಸ್ಸಿನಿಂದ ಎಲ್ಲಾ ಕಲಾರಸಿಕರ ಹೃದಯ ಗೆದ್ದು, ಸದಾ ಕ್ರಿಯಾಶೀಲರಾಗಿ ಲವಲವಿಕೆಯಿಂದ ತಮ್ಮ ಕಾರ್ಯ ಚಟುವಟಿಕೆಯಿಂದ 'ಉತ್ತರ ಕರ್ನಾಟಕದ ನಾಣಿ' ಎಂದೇ ಮನೆಮಾತಾದ ಈ ನಮ್ಮ ಮನಸ್ಸಿನ ಕಲಾವಿದನಿಗೆ ಈಗ ೮೨ ವರ್ಷ. ಈ ಇಳಿ ವಯಸ್ಸಿನಲ್ಲಿಯೂ ಕೂಡಾ ಅವರ ಕಲಾಸೇವೆ ಮಾತ್ರ ಕಡಿಮೆಯಾಗಿಲ್ಲ.

'ಮಹಾಲೆ' ಮನೆತನ ಮೊದಲಿನಿಂದಲೂ ಕಲಾವಿದರ ಕುಟುಂಬ. ಮದುವೆ ಮಂಟಪ, ಬಾಸಿಂಗ, ಮಣ್ಣಿನ ಮೂರ್ತಿಮಾಡುವುದು, ಯಕ್ಷಗಾನದಲ್ಲಿ ವೇಷದ ಜೊತೆಗೆ ಪ್ರಸಾಧನ ಮಾಡುವ ಕಾರ್ಯದಲ್ಲಿ ಮಹಾಲೆ ಕುಟುಂಬ ಹೆಸರುವಾಸಿ. ಪೂರ್ವಜರ ಕಲಾಸೇವೆಯ ಪುಣ್ಯದಿಂದ ಗಜಾನನ ಮಹಾಲೆ ಕೂಡ ಹುಟ್ಟಿನಿಂದಲೇ ಕಲೆಯನ್ನು

ಕರಗತ ಮಾಡಿಕೊಂಡವರು. ತಂದೆ ಹರಿಕೃಷ್ಣ, ತಾಯಿ ವತ್ಸಲಾ ಮಹಾಲೆ ದಂಪತಿಗಳ ಪುಣ್ಯಗರ್ಭದಲ್ಲಿ ಗಜಾನನ ಮಹಾಲೆಯವರು ಹುಟ್ಟಿದ್ದು ಉತ್ತರ ಕನ್ನಡ ಜಿಲ್ಲೆ ಅಂಕೋಲಾದ ಕಾಕರಮಠದಲ್ಲಿ ೧೪-೦೧-೧೯೩೬ ರಂದು. ಕೇವಲ ಕಲಾವಿದರಷ್ಟೇ ಅಲ್ಲದೇ ಸ್ವಾತಂತ್ರ್ಯ ಹೋರಾಟಗಾರಾಗಿಯೂ ಹೆಸರು ಮಾಡಿ ದೇಶಕ್ಕಾಗಿ ಮಹಾತ್ಮಾ ಗಾಂಧೀಜಿಯವರೊಡನೆ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಜೈಲುವಾಸವನ್ನು ಅನುಭವಿಸಿದ ದೇಶಭಕ್ತ ಪುಂಡಲೀಕ ಮಹಾಲೆ ಗಜಾನನ ಮಹಾಲೆಯವರ ದೊಡ್ಡಪ್ಪ. ಇಂತಹ ಹಿನ್ನೆಲೆಯಿಂದ ಬಂದ ಗಜಾನನ ಮಹಾಲೆ ಸರಳ ಮತ್ತು ಸದಾಚಾರದ ವ್ಯಕ್ತಿ. ಇವರ ತಂದೆ ವೃತ್ತಿಯಿಂದ ನಾಪಿತರಾಗಿದ್ದರು. ಅವರ ಕಾರ್ಯವೈಖರಿಯನ್ನು ಗುರುತಿಸಿದ ಧಾರವಾಡದ ಅಂಕೋಲಾ ಕಿರಾಣಿ ಸ್ಟೋರ್ಸ್‌ನ ಮಾಲಿಕ ತಮ್ಮಣ್ಣ ಅಂಕೋಲೆಯವರು ಮಹಾಲೆಯವರನ್ನು ಧಾರವಾಡಕ್ಕೆ ಆಹ್ವಾನಿಸಿದರು. ಅದರಂತೆ ಹರಿಕೃಷ್ಣ ಮಹಾಲೆ ತಮ್ಮ ಕುಟುಂಬ ಸಮೇತ ಧಾರವಾಡಕ್ಕೆ ಬಂದರು. ಕರ್ನಾಟಕ ಕಾಲೇಜಿನ ಆಗಿನ ಪ್ರಾಚಾರ್ಯರಾಗಿದ್ದ ಪ್ಯಾರೇನ್ ಅವರ ಔಟ್ ಹೌಸ್‌ನಲ್ಲಿ ಮಹಾಲೆ ಕುಟುಂಬ ವಾಸವಾಗಿತ್ತು. ನಂತರದ ದಿನಗಳಲ್ಲಿ ಅಲ್ಲಿನ ಪ್ರಾಚಾರ್ಯರಾಗಿದ್ದ ಆರ್ಮಾಂಡೋ ಮೆನಜೆಸ್ ಅವರ ಸಹಕಾರದಲ್ಲಿ ಅಂಜುಮನ್ ಶಾಲೆಯ ಆವರಣದಲ್ಲಿ "ಕಾರವಾರ ಮೆಜೆಸ್ಟಿಕ್ ಹೇರ್ ಸಲೂನ್" ಎಂಬ ಹೆಸರಿನಲ್ಲಿ ಅಂಗಡಿಯನ್ನು ತೆರೆದು ಜೀವನ ಸಾಗಿಸುತ್ತಿದ್ದರು.

ಗಜಾನನ ಮಹಾಲೆಯವರು ಪ್ರಾಥಮಿಕ ಶಿಕ್ಷಣವನ್ನು ಬಾಸೆಲ್ ಮಿಶನ್ ಶಾಲೆಯಲ್ಲಿ ಪ್ರಾರಂಭಿಸಿದರು ಜೊತೆಗೆ ತಮ್ಮ ಕುಲಕಸುಬಿನೊಂದಿಗೆ ಪ್ರಸಾಧನ ಕಲೆಯನ್ನು ರೂಢಿಸಿಕೊಂಡರು. ತಂದೆಯ ಪ್ರೇರಣೆ ಮತ್ತು ಹಿರಿಯರ ಆಶೀರ್ವಾದದಿಂದ ಗಜಾನನ ಮಹಾಲೆ ನಾಟಕ, ನೃತ್ಯ ಮತ್ತು ಸಂಗೀತದಲ್ಲಿ ತೊಡಗಿಸಿಕೊಂಡರು. ೭ನೇ ಇಯತ್ತೆ ವ್ಯಾಸಂಗ ಮುಗಿಸುವ ಹೊತ್ತಿಗೆ ತಂದೆಯ ಜೊತೆಗೆ ಕುಟುಂಬ ಸಾಗಿಸಲು ಹೆಗಲು ನೀಡಿ ಚಿತ್ರಕಲೆ ಮತ್ತು ಪ್ರಸಾಧನ ಕಲೆಯಲ್ಲಿ ಪಾತ್ರಗಳಿಗೆ ಜೀವ ತುಂಬುತ್ತಾ ಸಾಗಿದರು. ಬಾಸೆಲ್ ಮಿಶನ್ ಪ್ರಾಥಮಿಕ ಶಾಲೆಯಲ್ಲಿ ನಾಟಕಗಳು ಪ್ರದರ್ಶನಗೊಳ್ಳುತ್ತಿರುವ ಸಂದರ್ಭದಲ್ಲಿ ಮೊಟ್ಟ ಮೊದಲನೇ ಬಾರಿಗೆ ತಮ್ಮ ೧೩ನೇ ವಯಸ್ಸಿನಲ್ಲಿ "ಭಕ್ತ ಪ್ರಹ್ಲಾದ" ನಾಟಕಕ್ಕೆ ಪ್ರಸಾಧನ ಮಾಡಿದರು. ಅಲ್ಲದೆ ಶಾಲೆಯಲ್ಲಿ ಓದುತ್ತಿರುವಾಗಲೇ "ತುಝಾ ಆಯಿ ತುಝಾ ಫಾಸಿ" ಎಂಬ ಮರಾಠಿ ನಾಟಕವೊಂದನ್ನು ನಿರ್ದೇಶನ ಮಾಡಿದ್ದರು. ಇದರಿಂದ ತಂದೆ ಹರ್ಷಿತರಾಗಿ ಕೊಂಕಣಿ ಭಾಷೆಯಲ್ಲಿ "ಗಜೂ.. ತುಕ್ಕಾ ದೇವ್ ಬರೆ ಕರೂಂ.." ಎಂದು ಮನಸಾರೆ ಹಾರೈಸಿದ್ದರು. ಅಂದರೆ ದೇವರು ನಿನಗೆ ಮುಂದೆ ಯಶಸ್ಸು ನೀಡಲಿ ಎಂಬ ಅವರ ತಂದೆಯ ಹಾರೈಕೆ ಸುಳ್ಳಾಗಲಿಲ್ಲ. ಇದು ಅವರನ್ನು ಈ ಮಟ್ಟಕ್ಕೆ ಬೆಳೆಯುವಂತೆ ಮಾಡಿತು. ತಂದೆ ಹರಿಕೃಷ್ಣರಿಗೆ ಗಜಾನನ ಮಹಾಲೆ ಸೇರಿ ಮೂವರು ಗಂಡು ಮತ್ತು ಇಬ್ಬರು ಹೆಣ್ಣುಮಕ್ಕಳು ತುಂಬು ಸಂಸಾರ ನಡೆಸುವದು ಕಷ್ಟಕರವಾಗಿತ್ತು. ಅದರ ನಡುವೆ ದುರ್ದೈವವೆಂಬಂತೆ ಹೆಂಡತಿ ವತ್ಸಲಾ ೧೯೫೫ ರಲ್ಲಿ ಕೊನೆಯುಸಿರೆಳೆದರು, ಹಿರಿಯರ ಮಾತಿಗೆ ಕಟ್ಟುಬಿದ್ದು ಹರಿಕೃಷ್ಣ ವತ್ಸಲಾಳ ತಂಗಿ ಸುಮಿತ್ರಾರನ್ನು ಮದುವೆಯಾಗಿ ೬ ಮಕ್ಕಳನ್ನು ಪಡೆದರು. ಪರಿವಾರ ದೊಡ್ಡದಾದಂತೆ ಜವಾಬ್ದಾರಿಗಳೂ ಹೆಚ್ಚಾಗಿ ೧೯೬೫ ರಲ್ಲಿ ಹರಿಕೃಷ್ಣರವರು

ಅಶಕ್ತರಾದರು. ಇಲ್ಲಿಂದ ಇಡೀ ಕುಟುಂಬದ ಸಂಪೂರ್ಣ ಜವಾಬ್ದಾರಿ ಗಜಾನನ ಮಹಾಲೆಯವರ ಹೆಗಲಿಗೆ ಬಿತ್ತು. ಈ ನಡುವೆ ಅಣ್ಣ ಮೋಹನ ಅಕಾಲಿಕ ಮರಣ ಹೊಂದಿದರು. ಇದು ಗಜಾನನ ಮಹಾಲೆಯವರ ಮೇಲೆ ಪ್ರಭಾವ ಬೀರಿತು. ಆದರೂ ಧೃತಿಗೆಡದ ಗಜಾನನ ಮಹಾಲೆಯವರು ತಮ್ಮ ಕಾಯಕದಲ್ಲಿ ಮುಂದುವರೆದರು. ನಂತರ ಕಾರವಾರದ ಕುಮುದಿನಿ (ಜಯಾ)ಯೊಡನೆ ೧೯೬೬ ರಲ್ಲಿ ಮದುವೆಯಾಗಿ ಸುಖಸಂಸಾರ ನಡೆಸಿದರು. ಆ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಅಂಗಡಿ ತೆರೆಯಲು ಟೆಂಡರ್ ಪ್ರಕಟಣೆ ಬಂತು. ಆಗಲೇ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದ ಮಹಾಲೆಯವರಿಗೆ ಅದು ವರದಾನವಾಗಿ ಅಲ್ಲಿ ಅಂಗಡಿ ಹಾಕಲು ಡಿ.ಸಿ. ಪಾವಟೆಯವರು ಮಹಾಲೆಯವರನ್ನು ಅಂಗಡಿ ನಡೆಸಲು ಅನುಮತಿ ನೀಡಿದರಲ್ಲದೇ ಸಹಕರಿಸಿ ಹರಸಿದರು. ಆದರೆ ಮನೆಯಲ್ಲಿ ಮಲತಾಯಿಯ ಧೋರಣೆಯಿಂದ ಮನನೊಂದು ಮತ್ತೆ ಅಂಕೋಲೆಗೆ ಹೋದರು. ಆದರೆ ಧಾರವಾಡದ ಕಲಾಬಳಗ ಮತ್ತು ಆಪ್ತರು ಅವರನ್ನು ಮತ್ತೆ ಧಾರವಾಡಕ್ಕೆ ಆಹ್ವಾನಿಸಿದರು. ಆಗ ಧಾರವಾಡದ ಶ್ರೀಪಾದ ಶೆಟ್ಟಿ ತಮ್ಮ ಸ್ವಂತ ಖರ್ಚಿನಿಂದ ಅವರನ್ನು ಕರೆತಂದರು.

ಗಜಾನನ ಮಹಾಲೆ ದಂಪತಿಗಳಿಗೆ ಭಾರತಿ, ಕಿರಣ ಮತ್ತು ಸಂತೋಷ ಎಂಬ ಮಕ್ಕಳು ಜನಿಸಿದರು ಮತ್ತು ಧಾರವಾಡದಲ್ಲೇ ಮಕ್ಕಳಿಗೆ ಶಿಕ್ಷಣ ನೀಡಿದರು.

ತಮ್ಮ ಕಲಾಜೀವನದಲ್ಲಿ ಅವಿಸ್ಮರಣೀಯ ಘಟನೆಗಳು ಅನೇಕ. ಅವುಗಳಲ್ಲಿ ಒಂದು ನಾಟಕದ ಸಂದರ್ಭ, ಹಿರಿಯ ನಾಟಕಕಾರ ಶ್ರೀರಂಗರಿಗೆ ಮಹಾಲೆಯವರು ಬೇಂದ್ರೆಯವರ ರೂಪ ಕೊಟ್ಟಿದ್ದರು ಈ ಪ್ರಸಾಧನ ಕಲೆಗೆ ಸ್ವತಃ ಬೇಂದ್ರೆಯವರೇ ಬೆರಗಾಗಿದ್ದುಂಟು. ಜೊತೆಗೆ ಶ್ರೀರಂಗರು ಮತ್ತು ಬೇಂದ್ರೆಯವರು ಮಹಾಲೆಯವರಿಗೆ ಶಭ್ಬಾಷಗಿರಿ ಕೊಟ್ಟು ಹಾರೈಸಿದ್ದುಂಟು. ಇನ್ನೊಮ್ಮೆ ದೆಹಲಿಯಲ್ಲಿ ನಡೆದ ನಾಟಕೋತ್ಸವದಲ್ಲಿ ಉಮ್ರಾಣಿಯವರ ಲೇಖಕನ ಪಾತ್ರಕ್ಕೆ ಜೀವತುಂಬಿದ ಮಹಾಲೆಯವರ ಪ್ರಸಾಧನ ಕಂಡು ಅಂದಿನ ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಸಹ ಇವರಿಗೆ ಅಭಿನಂದಿಸಿ, ಸವಿನೆನಪಿಗಾಗಿ ಇವರ ಜೊತೆಗೆ ಭಾವಚಿತ್ರ ತೆಗೆಸಿಕೊಂಡದ್ದು ಒಂದು ಇತಿಹಾಸವೆ.

ಕರ್ನಾಟಕ ವಿಶ್ವವಿದ್ಯಾಲಯದ ಚಿಕ್ಕ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವಾಗ ಚಿತ್ರಕಲೆಯಲ್ಲಿಯೂ ಆಸಕ್ತಿ ಇರುವುದರಿಂದಾಗಿ ಡಿ.ಸಿ. ಪಾವಟೆಯವರ ಭಾವಚಿತ್ರವನ್ನು ಚಿತ್ರಿಸಿ, ಪಾವಟೆಯವರಿಗೆ ನೀಡಿದಾಗ ಅವರೂ ಕೂಡಾ ಇವರ ಕಲಾಪ್ರತಿಭೆಯನ್ನು ಹೊಗಳಿ ಹರಸಿದ್ದುಂಟು. ಈ ರೀತಿಯ ಹಾರೈಕೆಗಳಿಂದ ಮತ್ತಷ್ಟು ಹುರುಪುಗೊಂಡು ಹೊಸ ಹೊಸ ಪ್ರಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಕ್ರಿಯಾಶೀಲತೆ, ಕರ್ತವ್ಯನಿಷ್ಠೆಯಿಂದ ಪ್ರಸಾಧನದಲ್ಲಿ ಹೊಸ ಸಂಶೋಧನೆಗಳನ್ನು ಮಾಡಲು ಕಾರ್ಯಪ್ರವೃತ್ತರಾದರು.

ಮೊದಮೊದಲು ಇವರು ಕೊಬ್ಬರಿಯೆಣ್ಣೆ ಹಾಗೂ ವ್ಯಾಸಲೀನ್‌ನಿಂದ ಪ್ರಸಾಧನದ ಬಣ್ಣವನ್ನು ತಾವೇ ತಯಾರಿಸಿ ಹಚ್ಚುತ್ತಿದ್ದರು. ಕ್ರಮೇಣ ಧಾರವಾಡ ಅಷ್ಟೇ ಅಲ್ಲದೇ ಇಡೀ ಉತ್ತರ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ವಿವಿಧ ಬಣ್ಣಗಳಲ್ಲಿ ವಿಭಿನ್ನ ಆಕಾರದ

ಮುಖವರ್ಣಿಕೆಗಳಿಗೆ ಬಳಕೆಯಾಗುವ ಸಿದ್ಧ ಸಾಮಗ್ರಿಗಳನ್ನು ತರಿಸಿ ಪ್ರಸಾಧನ ಕಲೆಗೆ ಮತ್ತೊಂದು ಆಯಾಮ ನೀಡಿದರು. ಇವರ ನೈಪುಣ್ಯ ಹಾಗೂ ಕಾರ್ಯದಕ್ಷತೆಯ ಫಲವಾಗಿ ಅಸಂಖ್ಯ ಕಾರ್ಯಕ್ರಮಗಳು ಇವರನ್ನು ಅರಸಿಕೊಂಡು ಬಂದವು. ಶ್ರೀ ಗಜಾನನ ಮಹಾಲೆಯವರ ಮೇಕಪ್ ಕೈಚಳಕ ಅನೇಕರನ್ನು ಅವರ ಅಭಿಮಾನಿಯನ್ನಾಗಿಸಿದೆ. ಪ್ರೊ. ಆರ್ಮೆಂಡೋ ಮೆನೆಜಿಸ್. ವಿ.ಕೃ.ಗೋಕಾಕ, ಸ.ಸ. ಮಾಳವಾಡ, ಶ್ರೀರಂಗರು ಮುಂತಾದವರು. ಖ್ಯಾತ ಹಿರಿಯ ರಂಗಕರ್ಮಿ ನಾಡೋಜ ಏಣಗಿ ಬಾಳಪ್ಪನವರ "ಬಸವೇಶ್ವರ" ನಾಟಕದಿಂದ ಪ್ರಭಾವಿತರಾಗಿ ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳಿಗೂ ಪ್ರಸಾಧನ ಪ್ರಯೋಗ ಮಾಡುವ ರೀತಿಯನ್ನು ಮಹಾಲೆ ರೂಢಿಸಿಕೊಂಡರು. ಸ್ಟೈಲಿಶ್ ಮೇಕಪ್, ಕ್ಯಾರೆಕ್ಟರ್ ಮೇಕಪ್, ಟ್ರಾಜಿಡಿ ಮೇಕಪ್, ಸ್ಟೇಜ್ ಮೇಕಪ್ ಇವುಗಳ ಮಾಹಿತಿ ಪಡೆದು ಅದರಲ್ಲಿ ಹೊಸತನವನ್ನು ರೂಢಿಸಿಕೊಂಡು ಇಂದಿನ ಹವ್ಯಾಸಿ ಕಲಾವಿದರಿಗೆ ಇಷ್ಟವಾಗುವ ಪ್ಯಾನ್ ಕೇಕ್‌ನಿಂದ ಪ್ರಸಾಧನ ಮಾಡಲು ಆರಂಭಿಸಿದರಲ್ಲದೇ ಇಂಥ ಪ್ರಯೋಗವನ್ನು ಮಾಡಿದ ಕರ್ನಾಟಕದ ಮೊದಲ ಪ್ರಸಾಧನ ಕಲಾವಿದರೆನಿಸಿದರು.

ಪ್ರಸಾಧನ ಕಲೆಯೊಂದೇ ಅಲ್ಲದೆ ಹಾರ್ಮೋನಿಯಂ ನುಡಿಸುವ ಆಸಕ್ತಿಯನ್ನು ಹೊಂದಿದ್ದ ಮಹಾಲೆಯವರು ಅನೇಕ ಕಲಾವಿದರಿಗೆ ಹಾರ್ಮೋನಿಯಂ ಸಾಥ್ ನೀಡಿದ್ದಾರೆ. ಸಂಗೊಳ್ಳಿ ರಾಯಣ್ಣ, ವಿಜಯ ಕಂಕಣ ಚಲನಚಿತ್ರಗಳಿಗೂ ಗಜಾನನ ಮೇಕಪ್ ಮಾಡಿದ್ದಾರೆ. ಶ್ರುತಿ, ದೇವರಾಜ, ಅಂಬರೀಶ ಮೊದಲಾದವರಿಗೆ ವಿಜಯಕಂಕಣದಲ್ಲಿ ಪ್ರಸಾಧನ ಮಾಡಿದ್ದಾರೆ. ಸುಪ್ರಸಿದ್ಧ ಚಲನಚಿತ್ರ ನಿರ್ದೇಶಕ ಟಿ.ಎಸ್. ರಂಗಾ ಅವರ ಧಾರಾವಾಹಿಗಳಿಗೂ, ಟಿ.ಎಸ್. ನಾಗಾಭರಣ ಅವರ ಚಲನಚಿತ್ರಗಳಿಗೂ ಮೇಕಪ್ ಮಾಡಿದ್ದಾರೆ.

ಗಜಾನನ ಅವರು ಮನಸ್ಸು ಮಾಡಿದ್ದರು ಅದೇಷ್ಟೋ ಹಣ ಗಳಿಸಬಹುದಿತ್ತು. ಆದರೆ ಅವರು ಬಾಯಿ ಬಿಟ್ಟು ಕೇಳಿದವರಲ್ಲ. ಸದ್ದು ಗದ್ದಲವಿಲ್ಲದೇ ಕಲಾಸೇವೆ ಮಾಡುತ್ತಿರುವವರು. ಮಹಾಲೆಯವರಲ್ಲಿ ಸಜ್ಜನಿಕೆ ತುಂಬಿಕೊಂಡಿದೆ. ಅದರಿಂದಾಗಿಯೇ ಅವರು ಸಮಸ್ತ ಕರ್ನಾಟಕದಲ್ಲಿ ಗೌರವಾನ್ವಿತರು.


ಮಹಾಲೆಯವರನ್ನು ಅರಸಿಕೊಂಡು ಅನೇಕ ಪ್ರಶಸ್ತಿಗಳು ಬಂದಿವೆ. ರಾಜ್ಯೋತ್ಸವ ಪ್ರಶಸ್ತಿ, ಆಂಧ್ರ ಪ್ರದೇಶದ ಪ್ರಶಸ್ತಿ, ಅನೇಕ ಸಂಘ ಸಂಸ್ಥೆಗಳು ಅವರನ್ನು ಸತ್ಕರಿಸಿವೆ.

ಮಹಾಲೆಯವರು ಒಬ್ಬ ಶ್ರೇಷ್ಠ ಪ್ರತಿಭಾವಂತ ಮೇಕಪ್‌ಮ್ಯಾನ್, ಕಲ್ಪನಾಶೀಲ ಸೃಜನಪ್ರಜ್ಞೆಯ ಮೇಕಪ್‌ಮ್ಯಾನ್. ಇಷ್ಟೆಲ್ಲ ಸಾಧನೆ ಇದ್ದರೂ ಅಹಂಕಾರ ಅವರ ಹತ್ತಿರ ಸುಳಿದಿಲ್ಲ. ಇಂಥ ನಿರಾಡಂಬರತೆಗೆ ಗಜಾನನ ಮಹಾಲೆ ಎಂಬ ಹೆಸರು ಸಾರ್ಥಕ.

■■■

ಸಾಂಸ್ಕೃತಿಕ ಧೃವ ತಾರೆಗಳು

# ಜಾನಪದ ಸಂಗೀತ





ಸಾವಿರ ಹಾಡಿನ ಸರದಾರ ಹುಕ್ಕೇರಿ ಬಾಳಪ್ಪ

# ಸಾವಿರ ಹಾಡಿನ ಸರದಾರ ಹುಕ್ಕೇರಿ ಬಾಳಪ್ಪ

## (೧೯೧೧-೧೯೯೨)

● ಡಾ. ಬಾಳಣ್ಣ ಶೀಗಿಹಳ್ಳಿ

೧೯೧೧, ಅಗಸ್ಟ್ ೨೧ ರಂದು ವೀರಭದ್ರಪ್ಪ ಮತ್ತು ಚೆನ್ನವೀರಮ್ಮನವರ ಪುಣ್ಯಗರ್ಭದಲ್ಲಿ ಹುಕ್ಕೇರಿ ಬಾಳಪ್ಪನವರು ಜನಿಸಿದರು. ೧೨-೧೧-೧೯೯೨ ರಲ್ಲಿ ಅವರು ವಿಧಿವಶರಾದರು. ೮೧ ವರ್ಷ ಅರ್ಥಪೂರ್ಣವಾಗಿ ಬದುಕಿದ್ದ ಬಾಳಪ್ಪನವರು ತಮ್ಮ ಜನಪದ ಶೈಲಿಯ ಹಾಡು ಮತ್ತು ಮಾತುಗಾರಿಕೆಯ ಮೂಲಕ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದರು. ಕೇವಲ ೫ನೆ ಇಯತ್ತೆವರೆಗೆ ಮಾತ್ರ ಓದಿದ ಹುಡುಗನೊಬ್ಬ ದೇಶ-ಭಾಷೆ-ಸಂಸ್ಕೃತಿಗಳ ಸೀಮೆ ದಾಟಿ, ಜನ-ಮನವನ್ನು ಆವರಿಸಿಕೊಂಡ ಉದಾಹರಣೆ ತೀರ ಕಡಿಮೆ. ಬಹುಶಃ ನಮ್ಮ ತಲೆಮಾರಿನವರೆಲ್ಲ ಎಳೆಯ ವಯಸ್ಸಿನಲ್ಲಿ ಗ್ರಾಮೊಫೋನ್‌ಗಳಲ್ಲಿ ಅವರು ಹಾಡಿದ ಹಾಡುಗಳನ್ನು ಕೇಳಿಯೇ ಬೆಳೆದವರು. ನಾಟಕ ಕಂಪನಿಗಳು, ಜಾತ್ರಾ ಮಹೋತ್ಸವಗಳು, ಮದುವೆ ಮಂಟಪಗಳು, ಚುನಾವಣೆಯ ಕ್ಯಾಂಪೇನ್‌ಗಳು, ಕೌಟುಂಬಿಕ ಸಮಾರಂಭಗಳು, ಕುಸ್ತಿ, ಥಿಯೇಟರ್‌ಗಳು, ಸುಗ್ಗಿಯ ಸಂಭ್ರಮಗಳು ಅವರ ಹಾಡಿನ ತಟ್ಟೆಗಳಿಂದಲೇ ಶುರುವಾಗುತ್ತಿದ್ದವು. ಯಾರೂ ಅನುಕರಿಸಲಾರದ ಅಸಲು ಹಾಡುಗಾರಿಕೆ ಬಾಳಪ್ಪನವರದು. ಹೀಗಾಗಿ ಬಾಳಪ್ಪನವರಂತೆ ಸಾಭಿನಯವಾಗಿ, ಭಾವಪೂರ್ಣವಾಗಿ, ಸ್ಪಷ್ಟವಾಗಿ, ಶುದ್ಧ ಸ್ವರಸಂಚಾರದೊಂದಿಗೆ ಹಾಡುವ ಮತ್ತು ತಾವು ಹಾಡುವ ಪ್ರತಿಯೊಂದು ಹಾಡಿಗೆ ಇಡೀ ಪರಿಸರವನ್ನು ನಿರ್ಮಿಸುವ ಮತ್ತೊಬ್ಬ ಗಾಯಕರು ಸಿಗುವದು ದುಸ್ತರ. ಅಂದರೆ ಬಾಳಪ್ಪನವರಿಗೆ ಬಾಳಪ್ಪನವರೇ ಸಾಟಿ.

ಕೆಲವು ಪಂಡಿತರು ಹುಕ್ಕೇರಿ ಬಾಳಪ್ಪನವರು ಜನಪದ ಹಾಡುಗಾರರಲ್ಲವೆಂದು ವಾದಿಸುತ್ತಾರೆ. ಇದು ಒಪ್ಪಬೇಕಾದ ವಿಚಾರವೇ. ಯಾಕೆಂದರೆ ಅವರು ಗೀಗಿ, ಲಾವಣಿ, ಅಲಾವಿ, ಹೋಳಿ, ಸೋಬಾನೆ, ತೊಟ್ಟಿಲು, ಕೋಲುಪದಗಳನ್ನು ಹಾಡಿದ್ದಕ್ಕಿಂತಲೂ ಹೆಚ್ಚಾಗಿ ಬೇಂದ್ರೆ, ಕುವೆಂಪು, ಬೆಟಗೇರಿ ಕೃಷ್ಣಶರ್ಮ, ಸಿದ್ಧಯ್ಯ ಪುರಾಣಿಕ, ಕೆ.ಎಸ್. ನರಸಿಂಹಸ್ವಾಮಿ, ಕವಿಗಳ ಹಾಡುಗಳನ್ನು, ಕಬೀರರ ಭಜನೆ, ತುಕಾರಾಮರ ಅಭಂಗ, ಶರಣರ ವಚನ, ದಾಸರ ಕೀರ್ತನೆ, ಸರ್ವಜ್ಞನ ತ್ರಿಪದಿ, ಶಿಶುನಾಳರ ತತ್ವಪದಗಳನ್ನು ಹೆಚ್ಚಾಗಿ ಹಾಡಿದ್ದಾರೆ. ಕೃಷಿಪ್ರಚಾರಕರಾಗಿ ನೇಮಕವಾದ ಮೇಲೆ ಅನಿವಾರ್ಯವಾಗಿ ಕೃಷಿಸಂಸ್ಕೃತಿ ಪ್ರಸಾರ, ಕುಟುಂಬಯೋಜನೆಗೆ ಸಂಬಂಧಪಟ್ಟ ಮಿತಸಂಸಾರದ, ಸುಖೀಸಂಸಾರ ಪ್ರಚಾರದ ಹಾಡುಗಳನ್ನೂ ಅವರು ಹಾಡುತ್ತಿದ್ದರು. ಕೆಲವು ಹಾಡುಗಳನ್ನು ಸ್ವತಃ ಕಟ್ಟಿ ಹಾಡಿದ ನಿದರ್ಶನಗಳೂ ಇವೆ. ಹೀಗಾಗಿ ಬಾಳಪ್ಪನವರನ್ನು

ಜಾನಪದ ಹಾಡುಗಾರರೆಂದು ಕರೆಯುವದು ಅಷ್ಟೊಂದು ಸಮಂಜಸವಾಗಿ ಕಾಣುವದಿಲ್ಲ. ಈ ಹಿನ್ನೆಲೆಯಲ್ಲಿ ಅವರನ್ನು ಜಾನಪದ ಶೈಲಿಯಲ್ಲಿ ಹಾಡುವ ಹಾಡುಗಾರರೆಂದು ಕರೆಯುವದು ಹೆಚ್ಚು ಸೂಕ್ತವೆನಿಸುತ್ತದೆ. ಕರ್ನಾಟಕದ ಮಟ್ಟಿಗಂತೂ ಅವರು ಸಂಚರಿಸದ ಹಳ್ಳಿಗಳೇ ಇಲ್ಲ. ಅವರ ಹಾಡುಗಾರಿಕೆಯೆಂದರೆ, ಅದೊಂದು ಜಾನಪದ ಶೈಲಿಯ ಹಾಡುಗಳ ಕಚೇರಿಯೇ ಆಗಿರುತ್ತಿತ್ತು. ಅವರು ಹಾಡಲು ಬರುತ್ತಾರೆಂದರೆ ಸಾಕು, ಇಡೀ ಊರಿಗೆ ಊರೇ ಅವರನ್ನು ಎದುರುಗೊಳ್ಳುತ್ತಿತ್ತು. ಮಕ್ಕಳಾದಿಯಾಗಿ ಎಲ್ಲ ವಯೋಮಾನದವರು, ಅನಕ್ಷರರು, ವಿದ್ಯಾವಂತರು, ಎಲ್ಲ ವೃತ್ತಿಮೂಲದವರು, ಸರ್ವಜಾತಿ-ಧರ್ಮೀಯರು ಅವರ ಹಾಡುಗಳನ್ನು ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದರು. ಅವರ ಅಭಿನಯವನ್ನು ಕಂಡು, ಮಾತುಗಾರಿಕೆಯನ್ನು ಕೇಳಿ ಸಂಭ್ರಮ ಪಡುತ್ತಿದ್ದರು. ಅತ್ಯಂತ ಉತ್ಸಾಹಪೂರ್ಣವಾಗಿ ಹಾಡುವದು ಅವರ ವ್ಯಕ್ತಿತ್ವದ ಒಂದು ಮುಖವಾದರೆ, ಆ ವ್ಯಕ್ತಿತ್ವಕ್ಕೆ ಮಾತಿನ ಹದಗಾರ, ಊಟದ ಸವಿಗಾರ, ಎಂಥವರನ್ನೂ ಮಾತಾಡಿಸುವ ಎದೆಗಾರ ಎನ್ನುವ ಬೇರೆ ಆಯಾಮಗಳೂ ಇವೆ.

ಬಾಳಪ್ಪನವರು ಮಾತಾಡಿದರೆ ಎಂಥ ಅರಸಿಕನೂ ಹೊಟ್ಟೆ ಹುಣ್ಣಾಗುವಂತೆ ನಗಲೇಬೇಕು. ತಾವು ಹಾಡುವ ಹಾಡುಗಳ ಮಧ್ಯೆ ಮಧ್ಯೆ ಅವುಗಳಿಗೆ ಪೂರಕವಾಗುವ ಹಲವಾರು ದೃಷ್ಟಾಂತಗಳನ್ನು, ಕಥೆ, ಉಪಕತೆಗಳನ್ನು, ಅನುಭವ ಕಥನಗಳನ್ನು, ಕಲ್ಪಿತ ಸಂಗತಿಗಳನ್ನು, ಪ್ರಸಂಗಗಳನ್ನೂ ಬೆರೆಸಿ ಆ ಹಾಡುಗಾರಿಕೆಗೆ ಅಭೂತಪೂರ್ವವಾದ ರಂಗೇರಿಸುತ್ತಿದ್ದರು. ಅಲ್ಲಿ ಸೇರಿದ್ದ ಶ್ರೋತೃಗಳು ಹಾಡು ಕೇಳಿ ಪಡುತ್ತಿದ್ದ ಸಂತೋಷಕ್ಕೆ ಇಮ್ಮಡಿಯಾದ ಸಂತೋಷವನ್ನು ಅವರ ವಿನೋದಪೂರ್ಣ ಮಾತು ಕೇಳಿ ಪಡುತ್ತಿದ್ದರು. ಅವರು ಸಭೆ ನೋಡಿ ಹಾಡುತ್ತಿದ್ದರು, ಮಾತಾಡುತ್ತಿದ್ದರು. ಅವರು ಅಪ್ರತಿಮ ಪ್ರತ್ಯುತ್ಪನ್ನಮತಿ ಮತ್ತು ಪ್ರಸಂಗಾವಧಾನಿಯಾಗಿದ್ದರು. ಯಾವುದೇ ಊರಿಗೆ ಹೋಗಲಿ, ಯಾರದೇ ಮನೆಗೆ ಹೋಗಲಿ, ಯಾವುದೇ ವ್ಯಕ್ತಿಯನ್ನು ಭೆಟ್ಟಿಯಾಗಲಿ 'ಇವ ನಮ್ಮವ' ಎನಿಸಿ ಬಿಡುತ್ತಿದ್ದರು. ಊರಿಗೊಂದು ಮನೆ ಕಟ್ಟು ಎನ್ನುತ್ತಾರಲ್ಲ, ಅದರ ಅನ್ವಯಿಕ ರೂಪವೇ ಹುಕ್ಕೇರಿ ಬಾಳಪ್ಪ. ಒಮ್ಮೆ ಭೆಟ್ಟಿಯಾದ ಯಾರೂ ಅವರನ್ನು ಮರೆಯುವದು ಸಾಧ್ಯವಿಲ್ಲ.

ಊಟದ ವಿಷಯಕ್ಕಂತೂ ಬಾಳಪ್ಪ ಹೇಳಿಮಾಡಿಸಿದ ಗಿರಾಕಿ. ಮನೆಯಲ್ಲೂ ಅಷ್ಟೇ, ಹೊರಗೂ ಅಷ್ಟೇ. ಎಂಥ ಮರುಭೂಮಿಯಲ್ಲೂ 'ಓಯಾಸಿಸ್' ಶೋಧಿಸುವ ಹಾಡುಗಾರ ಬಾಳಪ್ಪ. ತಿನ್ನು-ಉಣ್ಣುವ ಪದಾರ್ಥಗಳನ್ನು ಅವರು ವರ್ಣನೆ ಮಾಡುವುದನ್ನು ನೋಡಿದರೆ ರೋಗಿ ಕೂಡಾ ಮನೆಗೆ ಹೋಗಿ ಆ ಖಾದ್ಯಗಳನ್ನು ಮಾಡಿಸಿ ತಿನ್ನಲೇಬೇಕು. ಅವರು ಹೇಳುತ್ತಿದ್ದ ಅನೇಕ ಖಾದ್ಯಗಳು ಇಂದಿನವರಿಗೆ ಗೊತ್ತೇ ಇಲ್ಲ. ಹೋಳಿಗಿ-ತುಪ್ಪ ಅವರಿಗೆ ಬಲು ಇಷ್ಟ. 'ಬರಿ ಅಡಿಗಿ ಅಷ್ಟ ಛಲೊ ಇದ್ರ ಅಲ್ರಿ, ಬಡಿಸೋರ ಮನಸೂ ಛಲೊ ಇರಬೇಕ್ರಿ, ಮನಸ್ಯಾ ಖಮ್ಮಗ ಉಣಬೇಕ್ರಿ, ಉಣ್ಣಾಕಾಗ್ಯನ ಹೊಲಮನಿ ಕಳಕೊಂಡವರದಾರ್ರಿ' ಎಂದು ಹೇಳಿ ಬಾಳಪ್ಪನವರು ಕೇಳುಗರ ಬಾಯಾಗ ನೀರೂಡಿಸುತ್ತಿದ್ದರು.

ಇನ್ನು ಎದೆಗಾರಿಕೆ ಬಗ್ಗೆ ಹೇಳೋದಾದರೆ ಬೇಂದ್ರೆ, ಕುವೆಂಪು ಮೊದಲಾದ ದೊಡ್ಡ

ದೊಡ್ಡ ಕವಿಗಳ ರಚನೆಗಳನ್ನು ಅವರ ಮನೆಗೇ ಹೋಗಿ ಹಾಡಿ ಸೈ ಅನಿಸಿಕೊಂಡವರು ಬಾಳಪ್ಪನವರು. ಯಾವದೇ ದೊಡ್ಡ ಸ್ಥಾನದಲ್ಲಿರುವ ವ್ಯಕ್ತಿಯಿರಲಿ, ಅವರ ಕೂಡ ಯಾವುದೇ ದಾಕ್ಷಿಣ್ಯ, ಹೆದರಿಕೆ, ಕೀಳರಿಮೆ ಇಲ್ಲದೆ ಮಾತಾಡಬಲ್ಲ ಮೋಡಿಕಾರ ಅವರಾಗಿದ್ದರು. ಹೆಣ್ಣುಮಕ್ಕಳನ್ನೂ ಅಷ್ಟೇ ನಿರ್ವಂಚನೆಯಿಂದ ಅವರು ಮಾತಾಡಿಸುತ್ತಿದ್ದರು. ಅಡಿಗೆ ಕೋಣೆಯವರೆಗೂ ಯಾವುದೇ ನಿರ್ಬಂಧವಿರುತ್ತಿರಲಿಲ್ಲ. 'ಅಡಗಿ ಕ್ವಾಣಿ ಸರಿ ಇದ್ದರ ಎಲ್ಲಾ ಸರಿ' ಎನ್ನುವ ತತ್ವ ಅವರದಾಗಿತ್ತು. ಹೀಗಾಗಿ ಯಾವುದೇ ಗೃಹಿಣಿಯೂ ಅವರು ಬಯಸಿದ್ದಕ್ಕಿಂತಲೂ ಹೆಚ್ಚೇ ಮಾಡಿ ಉಣಬಡಿಸುತ್ತಿದ್ದಳು. ನಾಡಗೀತೆ, ರಾಷ್ಟ್ರಗೀತೆ, ರಾಷ್ಟ್ರನಾಯಕರ ಮೇಲಿನ ಗೀತೆಗಳನ್ನು ಅವರಷ್ಟು ಉತ್ಕಟವಾಗಿ ಹಾಡುವವರು ಇನ್ನೊಬ್ಬರಿಲ್ಲ.

ಅವರೊಬ್ಬ ಅತ್ಯುತ್ತಮ ವಿಡಂಬನಕಾರರಾಗಿದ್ದರು. ಬೇರೆಯವರನ್ನು ಎಷ್ಟು ಚೆನ್ನಾಗಿ ಪರಿಹಾಸ ಮಾಡಬಲ್ಲರೋ ತಮ್ಮನ್ನೂ ಅಷ್ಟೇ ಸೊಗಸಾಗಿ ಅವರು ವಿಡಂಬಿಸಿಕೊಳ್ಳುತ್ತಿದ್ದರು. ಬರೀ ಇನ್ನೊಬ್ಬರತ್ತ ಹೋಗಿ ತಿನ್ನುವದಷ್ಟೇ ಅವರಿಗೆ ಗೊತ್ತಿರಲಿಲ್ಲ. ಬೇರೆಯವರಿಗೂ ಅವರು ವೇಗ್ಗಳವಾಗಿ ತಿನ್ನಿಸುತ್ತಿದ್ದರು. ಹೀಗಾಗಿ ಅವರನ್ನು ಜನಪದ ಜಂಗಮನೆಂದು ಕರೆಯುವದು ಅತ್ಯಂತ ಸೂಕ್ತವಾಗಿದೆ.

ಕರ್ನಾಟಕ ಸರಕಾರ, ಕೇಂದ್ರ ಸರಕಾರ, ವಿವಿಧ ಅಕಾಡೆಮಿಗಳು, ಕರ್ನಾಟಕ ಗಾನಕಲಾಪರಿಷತ್ತು, ಕೇರಳದ ದಕ್ಷಿಣಭಾರತದ ಸಾಮಾಜಿಕ ಸಾಂಸ್ಕೃತಿಕ ಸಂಘ, ಮಧ್ಯಪ್ರದೇಶ ಸರಕಾರದ ತುಳಸಿ ಸಮ್ಮಾನ ಮುಂತಾದವುಗಳಿಂದ ಸಾವಿರ ಹಾಡಿನ ಸರದಾರ ಹುಕ್ಕೇರಿ ಬಾಳಪ್ಪನವರು ಸತ್ಕರಿಸಲ್ಪಟ್ಟರು.

■ ■ ■



ಶ್ರೀಮತಿ ಫಕೀರವ್ವ ಗುಡಿಸಾಗರ

# ಜಾನಪದ ಕೋಗಿಲೆ
# ಶ್ರೀಮತಿ ಫಕೀರವ್ವ ಗುಡಿಸಾಗರ
## (೧೯೨೪-೨೦೦೨)

● ಸಿ.ಎಂ.ಚೆನ್ನಬಸಪ್ಪ

ತಾಯಿ ಸರಸ್ವತಿ/ಕೊಡು ಎಮಗೆ ಮತಿ/ಪೂಜೆ ಮಾಡುವೆನು ಸಾಹಿತ್ಯ ತರಿಸಿ/ಹೂಸಬಂದ ನಿನ್ನ ಧ್ಯಾನ ಮಾಡತೀನಿ/ಬಂದು ಆಗ ನೀ ಸಾರಥಿ ಸರಸ್ವತಿ.

ಎಂದು ತನ್ನ ಕಂಚಿನ ಕಂಠದಿಂದ ಡಪ್ಪು ಬಾರಿಸುತ್ತ ಕುಣಿ ಕುಣಿದು ವೇದಿಕೆಯ ಮೇಲೆ ಗೀಗಿ ಪದ ಹಾಡುತ್ತ ಜನಸ್ತೋಮವನ್ನು ರಂಜಿಸುತ್ತಿದ್ದ ಖ್ಯಾತ ಜಾನಪದ ಕಲಾವಿದೆ, ಜನಪದಶ್ರೀ ಪ್ರಶಸ್ತಿ ವಿಜೇತೆ ಶ್ರೀಮತಿ ಫಕೀರವ್ವ ಗುಡಿಸಾಗರ ದಿ: ೧೨-೦೯-೨೦೦೨ ರಂದು ನವಲಗುಂದದ ಸರಕಾರಿ ದವಾಖಾನೆಯಲ್ಲಿ ನಿಧನಳಾದ ಸುದ್ದಿ ಕೇಳಿ, ನಾಡಿನ ಜನತೆ ಅಪಾರ ಕಂಬನಿ ಮಿಡಿಯಿತು. ಗಂಡುಮೆಟ್ಟಿನ ಉತ್ತರ ಕರ್ನಾಟಕ ಸಾಹಿತ್ಯ, ಸಂಗೀತ, ಕಲೆಗಳಿಗೆ ದಿಗ್ಗಜರನ್ನು ನೀಡಿದ ಕೀರ್ತಿ, ಖ್ಯಾತ ಹಿಂದುಸ್ತಾನಿ ಗಾಯಕಿ ಡಾ: ಶ್ರೀಮತಿ ಗಂಗೂಬಾಯಿ ಹಾನಗಲ್, ಪಂ. ಭೀಮಸೇನ ಜೋಶಿ, ಬಾಳಪ್ಪ ಹುಕ್ಕೇರಿ, ಏಣಗಿ ಬಾಳಪ್ಪ, ಖ್ಯಾತ ಸಾಹಿತಿ ಶ್ರೀ ಚೆನ್ನವೀರ ಕಣವಿ, ಶ್ರೀ ಎನ್ಕೆ ಕುಲಕರ್ಣಿ ಮೊದಲಾದವರ ಮೇಲ್ಪಂಕ್ತಿಯಲ್ಲಿ ಜಾನಪದಕ್ಷೇತ್ರದಲ್ಲಿ ೬೮ ವರ್ಷಗಳ ಕಾಲ ಸಾಧನೆ ಮಾಡಿದ ಕೀರ್ತಿ ಶ್ರೀಮತಿ ಫಕೀರವ್ವ ಗುಡಿಸಾಗರ ಅವರಿಗೆ ಸಲ್ಲುತ್ತದೆ.

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಗುಡಿಸಾಗರ ಗ್ರಾಮದಲ್ಲಿ ೧೯೨೪ ರಲ್ಲಿ ಕಡುಬಡತನದ ದಲಿತ ಕುಟುಂಬದ ಶ್ರೀ ಮರಿಯಪ್ಪ ಮಾದರ ಹಾಗೂ ಶ್ರೀಮತಿ ನೀಲಮ್ಮ ಮಾದರ ಅವರ ಚೊಚ್ಚಿಲ ಮಗಳಾಗಿ ಜನಿಸಿದಳು. ಆಗಿನ ಖ್ಯಾತ ಜಾನಪದ ಕಲಾವಿದೆ ಶ್ರೀಮತಿ ಮಣಿಕಟ್ಟಿ ಗಂಗವ್ವ ಗುಡಿಸಾಗರಕ್ಕೆ ಗೀಗಿ ಪದ ಹಾಡಲು ಬಂದಾಗ ಆಕೆಯ ಹಾಡುಗಾರಿಕೆಗೆ ಮನಸೋತು, ತಾನೂ ಆ ರೀತಿ ಹಾಡಬೇಕೆಂದು ಬಯಸಿದ ಫಕೀರವ್ವನಿಗೆ ಆಗಿನ್ನು ೧೦ ವರ್ಷ. ಶ್ರೀಮತಿ ಮಣಿಕಟ್ಟಿ ಗಂಗವ್ವ, ಸೈದುಸಾಬ ಹಂಚಿನಾಳ, ನಿಂಗಪ್ಪ ಕುಂಬಾರ ಅವರ ಗೀಗಿ ಪದಗಳು ನಾಡಿನ ತುಂಬಾ ಪ್ರಸಿದ್ಧಿ ಪಡೆದಿದ್ದವು. ಬೆಳಗಾವಿ ಜಿಲ್ಲೆಯ ಹುಲಕುಂದ ಶಿವಯೋಗಿಗಳ ಗರಡಿಯಲ್ಲಿ ಬೆಳೆದವರು. ಊರಿನ ಜಾತ್ರೆ, ಹಬ್ಬ ಹರಿದಿನಗಳಲ್ಲಿ ಈ ಕಲಾವಿದರಿಗೆ ಆಮಂತ್ರಣ ಇರುತ್ತಿತ್ತು. ಆದರೆ ತಂದೆ ಮರಿಯಪ್ಪನಿಗೆ ಫಕೀರವ್ವ ಹಾಡುವದು ಸರಿ ಕಾಣಲಿಲ್ಲ. ಮಗಳಿಗೆ ಮಾಸ್ತರ ನೌಕರಿ ಮಾಡುತ್ತಿದ್ದ ಯುವಕನನ್ನು ಮದುವೆಗೆ ಗೊತ್ತುಮಾಡಿದ. ಇದನ್ನು ತಿಳಿದ ಫಕೀರವ್ವ ತನ್ನ ಹಾಡುಗಾರಿಕೆಗೆ ಧಕ್ಕೆ ಬರುತ್ತದೆ ಎಂದು ಹೇಳದೇ ಕೇಳದೇ ಹಂಚಿನಾಳ ಗ್ರಾಮಕ್ಕೆ ಬಂದು ಮಣಿಕಟ್ಟಿ ಗಂಗವ್ವ, ಕುಂಬಾರ ನಿಂಗಪ್ಪನ

ಮೇಳದ ಸದಸ್ಯೆಯಾಗಿ ಅಲ್ಲಿಯೇ ಉಳಿದಳು. ಇದರಿಂದ ಸಿಟ್ಟಾದ ತಂದೆ ಮಗಳ ಹಟಮಾರಿತನಕ್ಕೆ ತಾನೂ ಅಷ್ಟೇ ಹಟಮಾರಿಯಾಗಿ ಆಕೆಯ ಬಳಿ ಬರಲಿಲ್ಲ. ಇದ್ದೊಬ್ಬ ಮಗಳು ಸುಖವಾಗಿರಲೆಂದು ತಾಯಿ ನೀಲಮ್ಮ ಎಷ್ಟು ಪರಿಯಾಗಿ ಅತ್ತು ಕರೆದರೂ ಫಕೀರವ್ವ ಸೊಪ್ಪು ಹಾಕಲಿಲ್ಲ. ತಿರುಗಿ ಗುಡಿಸಾಗರಕ್ಕೆ ಬಂದರೂ ಅಪ್ಪ ಮಗಳ ನಡುವೆ ಮಾತುಕತೆ ನಡೆಯಲಿಲ್ಲ.

ಇಂತಹ ಹೊತ್ತಿನಲ್ಲಿ ಗುಡಿಸಾಗರ ಗ್ರಾಮದಲ್ಲಿ ಚಳ್ಳಪ್ಪ ಚಲವಾದಿ ಎಂಬ ಗೀಗಿಪದ ಕಲಾವಿದ ಫಕೀರವ್ವನ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ ಗುರುವಾಗಿ ಫಕೀರವ್ವನ ಹಾಡುಗಾರಿಕೆಗೆ ನಾಂದಿ ಹಾಕಿದ. ಫಕೀರವ್ವ ಗುಡಿಸಾಗರ ಯೌವ್ವನ ದಿನಗಳಲ್ಲಿ ಮದುವೆ ಬೇಡವೆಂದು ದೇವದಾಸಿಯಾದಳು. ಆದರೆ ಮುತ್ತು ಕಟ್ಟಿಸಿಕೊಂಡು ದೇವದಾಸಿಪದ್ಧತಿಗೆ ಇಂಬುಕೊಡದೇ ಹಾಡುಗಾರಿಕೆಯನ್ನು ತನ್ನ ವೃತ್ತಿಯನ್ನಾಗಿಸಿಕೊಂಡಳು. ಶಿವರಾತ್ರಿಯ ದಿನ ರೋಣ ತಾಲೂಕಿನ ಮೆಣಸಗಿ ಗ್ರಾಮದ ಮಠದ ಕಾರ್ಯಕ್ರಮದಲ್ಲಿ ಹಾಡಲು ಪ್ರಥಮ ವೀಳ್ಯ ಸ್ವೀಕರಿಸಿದ ಶ್ರೀಮತಿ ಫಕೀರವ್ವ, ಸೈದುಸಾಬ ಹಂಚಿನಾಳ, ಹನುಮಂತಪ್ಪ ಹಾಡಕಾರರ ಜೊತೆಗೂಡಿ ನೀಡಿದ ಪ್ರಥಮ ಕಾರ್ಯಕ್ರಮದಲ್ಲಿ ಜನಮನ ಗೆಲ್ಲುವಲ್ಲಿ ಯಶಸ್ವಿಯಾದಳು. ಅಂದಿನ ಸಮಾರಂಭದಲ್ಲಿ ಸೇರಿದ ನಾಲ್ಕೈದು ಗೀಗೀ ಮೇಳಗಳಲ್ಲಿ ಮೇಲುಗೈ ಸಾಧಿಸಿದ ಶ್ರೀಮತಿ ಗುಡಿಸಾಗರ ಹಿಂತಿರುಗಿ ನೋಡಲಿಲ್ಲ. ಮುಂದೆ ಹೆಬ್ಬಾಳದ ಸೋದರಮಾವ ಹನುಮಂತಪ್ಪ ಹಾಡಕಾರ ಜೊತೆಗೂಡಿ ಜೈಹಿಂದ್ ಗೀತಮೇಳ ಕಟ್ಟಿ, ನಾಡಿನ ತುಂಬ ಹಾಡಿದ ಶ್ರೀಮತಿ ಫಕೀರವ್ವ ಗುಡಿಸಾಗರ ಹರದೇಸಿ, ನಾಗೇಶಿ ಪಂಥ ಅಂದರೆ ಗಂಡು ಹೆಚ್ಚೋ, ಹೆಣ್ಣು ಹೆಚ್ಚೋ ಎನ್ನುವ ಸವಾಲ ಜವಾಬ ಗೀಗಿ ಸ್ಪರ್ಧೆ ನಾಗೇಶಿ ಪಂಥ, ಹೆಣ್ಣು ಹೆಚ್ಚು ಎನ್ನುವ ಚಾಲಾಕತನವನ್ನು ತೋರಿಸುವದರಲ್ಲಿ ಶ್ರೀಮತಿ ಫಕೀರವ್ವ ಗುಡಿಸಾಗರ ಸೋಲು ಕಾಣಲಿಲ್ಲ. ಗದಗ, ಗುಲಬರ್ಗ, ರಾಮದುರ್ಗ, ಬೆಂಗಳೂರು ಮೊದಲಾದ ಕಡೆ ಪ್ರಸಿದ್ಧಿಯಾದಳು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಸೆಡ್ಡು ಹೊಡೆದು ಗೀಗೀ ಪದ ಹಾಡಿ ಜೈಲು ಸೇರಿದ ಇತಿಹಾಸವೂ ಈಕೆಗಿದೆ.

ಶ್ರೀಮತಿ ಫಕೀರವ್ವ ಗುಡಿಸಾಗರ ಗೀಗೀ ಹಾಡುವದನ್ನೆ ವೃತ್ತಿಯನ್ನಾಗಿಸಿಕೊಂಡು ಚುನಾವಣೆ ಪ್ರಚಾರದಲ್ಲಿ ಕಾಂಗ್ರೆಸ್ಸಿನ ಪರವಾಗಿ ಗೀಗೀ ಹಾಡಿ ಅಭ್ಯರ್ಥಿಯ ಗೆಲುವಿಗೆ ಕಾರಣವಾಗುತ್ತಿದ್ದಳು. ಗೆದ್ದ ವ್ಯಕ್ತಿ ಮಂತ್ರಿಯಾಗಿ ಮೆರೆಯುತ್ತಿದ್ದರೆ ವಿನಾ ಬಡತನದ ಬವಣೆಗೆ ಅಷ್ಟಾಗಿ ಸ್ಪಂದಿಸುತ್ತಿರಲಿಲ್ಲ ಎಂದು ವಿಷಾದದಿಂದ ಸ್ಮರಿಸುತ್ತಿದ್ದ ಶ್ರೀಮತಿ ಫಕೀರವ್ವ ಗುಡಿಸಾಗರ ಬದುಕಿನ ಏಳು ಬೀಳಿಗೆ ಅಷ್ಟು ಲಕ್ಷ್ಯ ಕೊಡದೇ ಕಟ್ಟಾ ಕಾಂಗ್ರೆಸ್‌ನ ಪರವಾಗಿ ಪ್ರಚಾರ ಮಾಡುತ್ತಿದ್ದಳು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್ ಎಂದು ದೃಢವಾಗಿ ನಂಬಿದ್ದಳು. ವಿರೋಧ ಪಕ್ಷದವರು ಎಷ್ಟೇ ಆಮಿಷ ತೋರಿದರೂ ಕಾಂಗ್ರೆಸ್ಸಿನ ನಿಷ್ಠೆಯನ್ನು ಬಿಟ್ಟು ಕೊಡಲಿಲ್ಲ.

ಶ್ರೀಮತಿ ಫಕೀರವ್ವ ಗುಡಿಸಾಗರ ತನ್ನ ಬದುಕಿನುದ್ದಕ್ಕೂ ಗೀಗಿ ಪದ ಹಾಡುತ್ತಲೇ ಜೀವ ಸವೆಸಿದಳು. ತಾನು ಸರಕಾರದ ಮಗಳೆಂದು ಹೇಳಿಕೊಳ್ಳುತ್ತಿದ್ದಳು. ಕುಟುಂಬ ಯೋಜನಾ ಇಲಾಖೆ, ನೀರಾವರಿ ಇಲಾಖೆ, ವಾರ್ತಾ ಇಲಾಖೆ, ಸಾಕ್ಷರತಾ ಪ್ರಚಾರದ

ಸಲುವಾಗಿ ಹೆಬ್ಬಟ್ಟಿನ ಶ್ರೀಮತಿ ಫಕೀರವ್ವ ಗುಡಿಸಾಗರ ಅಕ್ಷರ ಕಲಿಯಿರೆಂದು ಸಾರುತ್ತಿದ್ದಳು. ಮಕ್ಕಳೇ ಇರದಿದ್ದ ಶ್ರೀಮತಿ ಫಕೀರವ್ವ ಗುಡಿಸಾಗರ ಹತ್ತು ಹಡೆಯುವದಕ್ಕಿಂತ ಮುತ್ತಿನಂಥ ಎರಡು ಮಕ್ಕಳು ಸಾಕು ಎನ್ನುತ್ತಿದ್ದಳು. ಸೆರೆ, ಸಿಂಧಿ, ಸಹವಾಸವೇ ಗೊತ್ತಿರದ ಫಕೀರವ್ವ ಕುಡುಕತನದ ಕೆಡಕನ್ನು ತಿಳಿಸಿ, ಬಡತನ ದರಿದ್ರತನಕ್ಕೆ ಕುಡಿತದ ದುಷ್ಪರಿಣಾಮವನ್ನು ಮನದಟ್ಟು ಮಾಡುತ್ತಿದ್ದಳು. ವರದಕ್ಷಿಣೆ ಪಿಡುಗು, ಜಾತೀಯತೆ, ದೇವದಾಸಿಪದ್ಧತಿಯ ವಿರುದ್ಧ ಹಾಡಿದ ಹೆಗ್ಗಳಿಕೆ ಶ್ರೀಮತಿ ಫಕೀರವ್ವ ಗುಡಿಸಾಗರಳಿಗೆ ಸಲ್ಲುತ್ತದೆ. ಆಶು ಕವಯಿತ್ರಿಯಾಗಿ ಸಾಮಾಜಿಕ ಅನಿಷ್ಟ, ಮೂಢನಂಬಿಕೆಯ ಕುರಿತು ಹಾಡಿದ ಪದಗಳು ಸಾವಿರಾರು, ದಾಖಲೆಯಲ್ಲಿ ಇಲ್ಲದಿದ್ದರೂ ಕೇಳಿದವರ ಮನದಲ್ಲಿ ಹೆಪ್ಪುಗಟ್ಟಿರುವದು ಶಾಶ್ವತ ಸತ್ಯ.

ಗದುಗಿನ ಶಿವಾನಂದ ಮಠದಲ್ಲಿ ಸೋದರಮಾವ ಹನಮಂತಪ್ಪ ಹಾಡಕಾರ ಜೊತೆಗೂಡಿ ಲಿಂಗದೀಕ್ಷೆ ಪಡೆದು ಕಪ್ಪು ಕಡಿ ತಿನ್ನುವದನ್ನು ತ್ಯಜಿಸಿ, ಲಿಂಗಪೂಜೆ ಇಲ್ಲದೇ ನಿತ್ಯದ ಊಟ ಮಾಡುತ್ತಿದ್ದಿಲ್ಲ. ನಾಡ ತುಂಬ ಮಠ ಮಾನ್ಯಗಳಲ್ಲಿ, ಜಾತ್ರೆಗಳಲ್ಲಿ ತನ್ನ ಕಂಚಿನ ಕಂಠದ ಇಂಪನ್ನು ಸೂಸುತ್ತಿದ್ದ ಶ್ರೀಮತಿ ಫಕೀರವ್ವ ಗುಡಿಸಾಗರ ಸಾವಳಗಿ ಶ್ರೀ ಶಿವಲಿಂಗ ಸ್ವಾಮಿಗಳು, ಗದುಗಿನ ಜಗದ್ಗುರು ಶ್ರೀ ತೋಂಟದ ಸ್ವಾಮಿಗಳು, ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರ ಆದರ ಅಭಿಮಾನ ಗಳಿಸಿದ್ದಳು. ಧರ್ಮಸ್ಥಳದ ಶ್ರೀ ಹೆಗಡೆಯವರು ಕಳೆದ ೧೦ ವರ್ಷಗಳಿಂದ ಶ್ರೀಮತಿ ಫಕೀರವ್ವ ಗುಡಿಸಾಗರಳಿಗೆ ತಿಂಗಳಿಗೆ ೪೦೦ ರೂಪಾಯಿ. ಮಾಸಾಶನ ಕಳಿಸುತ್ತಿದ್ದರು. ವರ್ಷಕ್ಕೆ ಎರಡು ಜತೆ ಸೀರೆ ಕೊಡಿಸುತ್ತಿದ್ದರು. ದಿ: ೧೨-೦೯-೨೦೦೨ ರಂದು ತೀರಿಕೊಂಡಾಗ ನವಲಗುಂದದಲ್ಲಿದ್ದ ಶ್ರೀಮತಿ ಫಕೀರವ್ವ ಗುಡಿಸಾಗರ ಕೊನೆಯ ಮಾಸಾಶನ ಪಡೆಯದೇ ಹೋಗಿದ್ದು ವಿಧಿವಿಪರ್ಯಾಸ.

ಶ್ರೀಮತಿ ಫಕೀರವ್ವ ಗುಡಿಸಾಗರಳ ಕಲಾಪ್ರತಿಭೆಯನ್ನು ಗಮನಿಸಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ೧೯೮೪ ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ೧೯೯೩ ರಲ್ಲಿ ನೀಡಿ ಗೌರವಿಸಿದೆ. ನಾಡಿನ ಜಾನಪದ ಕಲಾವಿದರಿಗೆ ನೀಡುವ ಪ್ರತಿಷ್ಠಿತ 'ಜನಪದಶ್ರೀ' ಪ್ರಶಸ್ತಿಯನ್ನು ಡಾ; ಕಾಳೇಗೌಡ ನಾಗವಾರ ಹಾಗೂ ಡಾ: ದೇವೇಂದ್ರ ಕುಮಾರ ಹಕಾರಿ ನೇತೃತ್ವದ ಸಮಿತಿ ೧೯೯೭ರಲ್ಲಿ ನೀಡಿ ಗೌರವಿಸಿದೆ. ಇದರ ಮೊತ್ತ ಒಂದು ಲಕ್ಷ ರೂಪಾಯಿ ಹೆಬ್ಬಾಳದ ತಂಗಿ ಶ್ರೀಮತಿ ಮರಿಯವ್ವ ಮಾದರ ಜೊತೆ ಗುಡಿಸಿಲಿನಲ್ಲಿ ವಾಸಿಸುತ್ತಿದ್ದ ಫಕೀರವ್ವ ಜನಪದಶ್ರೀ ಪ್ರಶಸ್ತಿಯಿಂದ ಬಂದ ಒಂದು ಲಕ್ಷ ರೂಪಾಯಿ. ಮೊತ್ತದಲ್ಲಿ ಮನೆಯನ್ನು ಕಟ್ಟಿಸಿ ತನ್ನ ಅಸ್ತಿತ್ವವನ್ನು ಉಳಿಸಿದ್ದಾಳೆ.

ಆಕಾಶವಾಣಿ, ಬೆಂಗಳೂರು ಕೇಂದ್ರದವರು ವರ್ಷದ ಶ್ರೇಷ್ಠ ಕಲಾವಿದರಿಗೆ ನೀಡುವ ಪ್ರಶಸ್ತಿಯನ್ನು ೧೯೯೮ ರಲ್ಲಿ ಬೆಂಗಳೂರಿನ ಯವನಿಕಾ ಕೇಂದ್ರದಲ್ಲಿ ಖ್ಯಾತ ಸಾಹಿತಿ ಕಲಾವಿದರಾದ ಡಾ: ಎನ್ಕೆ ಕುಲಕರ್ಣಿ, ಖ್ಯಾತ ಗಾಯಕ ಸಿ. ಅಶ್ವತ್ಥರ ಜೊತೆಗೆ ಆಗಿನ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಸಚಿವೆ ಡಾ. ಶ್ರೀಮತಿ ಲೀಲಾದೇವಿ ಪ್ರಸಾದರಿಂದ ಫಕ್ಕೀರವ್ವಳಿಗೆ ಸನ್ಮಾನಿಸಿ ಪ್ರೋತ್ಸಾಹಿಸಿದ್ದಾರೆ.

☆ ☆ ☆ ☆
☆ *ಸಾಂಸ್ಕೃತಿಕ ಧೃವ ತಾರೆಗಳು*
☆ ☆

೧೯೯೬ರಲ್ಲಿ ಕರ್ನಾಟಕ ಸರಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನವಲಗುಂದ ತಾಲೂಕಿನ ಬೆಳವಟಿಗೆ ಗ್ರಾಮದಲ್ಲಿ ಶ್ರೀಮತಿ ಫಕೀರವ್ವ ಗುಡಿಸಾಗರ ನೇತೃತ್ವದಲ್ಲಿ ಗುರುಶಿಷ್ಯ ಪರಂಪರೆಯನ್ನು ಪ್ರಾರಂಭಿಸಿದ ಆಯ್ದ ಐದು ಜನ ಕಲಾವಿದರಿಗೆ ಸಂಭಾವನೆ ನೀಡಿ ತರಬೇತಿ ಕೊಡಿಸಿದ್ದಾರೆ. ಶ್ರೀಮತಿ ಫಕೀರವ್ವ ಗುಡಿಸಾಗರ ನೂರಾರು ಜನ ಕಲಾವಿದರಿಗೆ ಮಾರ್ಗದರ್ಶನ ನೀಡಿ, ಕಲಾಪ್ರತಿಭೆಗಳು ನಾಡಿನಲ್ಲಿ ಮಿಂಚುವಂತೆ ಮಾಡಿದ ಹೆಗ್ಗಳಿಕೆ ಪಡೆದಿದ್ದಾಳೆ.


ನವಲಗುಂದ ತಾಲೂಕಿನ ಗುಡಿಸಾಗರ ಗ್ರಾಮದ ತನ್ನ ಮನೆಯನ್ನು ಅಂಬೇಡ್ಕರ್ ಭವನ ನಿರ್ಮಿಸಲು ೧೯೯೮ ರಲ್ಲಿ ದಾನ ಮಾಡಿ ಫಕೀರವ್ವ ತನ್ನ ಹಿರಿಮೆಯನ್ನು ಮೆರೆದಿದ್ದಾಳೆ. ಮೈಸೂರು ಬ್ಯಾಂಕ್ ಕನ್ನಡ ಸಂಘ, ಹುಬ್ಬಳ್ಳಿ ಹಾಗೂ ನಾಡಿನ ಅನೇಕ ಸಂಘ ಸಂಸ್ಥೆಗಳು ಶ್ರೀಮತಿ ಫಕೀರವ್ವ ಗುಡಿಸಾಗರಳನ್ನು ಸನ್ಮಾನಿಸಿವೆ.

ದಿ: ೧೫-೦೯-೨೦೦೨ ರಂದು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಖ್ಯಾತ ಜಾನಪದ ಕಲಾವಿದ ಡಾ: ಬಾನಂದೂರ ಕೆಂಪಯ್ಯ ಅಧ್ಯಕ್ಷತೆಯಲ್ಲಿ ಸೇರಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಸಹಕಾರಿಧುರೀಣ ಎಸ್.ಎಂ. ಹೊಳೆಯಣ್ಣವರರು ದತ್ತಿ ನಿಧಿಯನ್ನು ಸ್ಥಾಪಿಸಿ ಪ್ರತಿವರ್ಷ ವಿದ್ಯಾವರ್ಧಕ ಸಂಘದಲ್ಲಿ ಆಕೆಯ ಹೆಸರಿನಲ್ಲಿ ಜಾನಪದ ಕಾರ್ಯಕ್ರಮ ಹಮ್ಮಿಕೊಳ್ಳಲು ಚಾಲನೆ ನೀಡಿದ್ದಾರೆ. ಅಂದಿನ ಸಭೆಯಲ್ಲಿ ಕಳೆದ ಏಳೆಂಟು ವರ್ಷದ ನಿಕಟ ಸಂಪರ್ಕ ಇರಿಸಿಕೊಂಡಿದ್ದ ನಾನು ಆಕಾಶವಾಣಿ ಕಲಾವಿದೆ, ಜಾನಪದ ಕೋಗಿಲೆ ಶ್ರೀಮತಿ ಫಕೀರವ್ವ ಗುಡಿಸಾಗರ ಕುರಿತು ಬರೆದ ಕವಿತೆಯ ಸಾಲು "ಅಕ್ಕ ಫಕೀರವ್ವ ಸತ್ತಿಲ್ಲ। ಬಿಕ್ಕಿ ಬಿಕ್ಕಿ ಅಳುವದು ಹೇಗೆ? ತಾಳ ತಪ್ಪಡಿ ಹಿಡಿದು ಡಪ್ಪು ಬಾರಿಸುತ್ತ। ಕುಣಿ ಕುಣಿದು ಗೀಗೀ ಹಾಡ್ತಿದ್ದ ಅಕ್ಕ ಸತ್ತಿದ್ದು ಹೇಗೆ?" ಎನ್ನುವ ಕವನದೊಂದಿಗೆ ಅಗಲಿದ ಹಿರಿಯ ಚೇತನಕ್ಕೆ ಶ್ರದ್ಧಾಂಜಲಿ ಸಲ್ಲಿಸಿದೆ.

■ ■ ■

# ನೃತ್ಯ





ನಾಟ್ಯಾಚಾರ್ಯ ಪುತ್ತಿಗೆ ವೆಂಕಟರಮಣ ಉಪಾಧ್ಯಾಯ

# ನಾಟ್ಯಾಚಾರ್ಯ
# ಪುತ್ತಿಗೆ ವೆಂಕಟರಮಣ ಉಪಾಧ್ಯಾಯ
# (೧೯೨೦-೧೯೯೫)

**●ಆರೂರು ಲಕ್ಷ್ಮಣ ಶೇಟ್**

ಅಂತರಂಗದ ಆಶಯಗಳ ಆಪ್ತ ಅನಾವರಣಕ್ಕೆ ಮಾಧ್ಯಮಗಳು ಹಲವಾರು. ಚುಕ್ಕಿಗಳ ಹಂಗಿಲ್ಲದ ಮಾನವೀಯ ರಂಗವಲ್ಲಿ ಅರಳಿಸುವಲ್ಲಿ ಕಲೆಗಳ ಮಹತ್ವ, ಪಾತ್ರ ಹಿರಿದು. ಕಣ್ಣುಗಳಲ್ಲಿ ಉಕ್ಕುವ ಜೀವನಪ್ರೀತಿಯ ಬೆಳಕು ಮನದ ಮಬ್ಬನ್ನು ದೂರಕ್ಕಟ್ಟುತ್ತದೆ. ಸದಭಿರುಚಿ ಸಂವರ್ಧಿಸುವ ಕಲೆ ಎದೆಯ ಕದ ತಟ್ಟುತ್ತದೆ.

ಸಂಗೀತ, ಸಾಹಿತ್ಯ, ನೃತ್ಯ, ನಾಟಕ, ಚಿತ್ರ, ಶಿಲ್ಪಕಲೆಗಳೆಲ್ಲ ಮನಸ್ಸಿಗೆ ಮುದತುಂಬುವ, ಬಾಳಿಗೆ ಹದತರುವ ಕಲಾಪ್ರಕಾರಗಳು. ನಾಟ್ಯಶಾಸ್ತ್ರ ಪುರಾತನವಾದುದು. ಭರತನಾಟ್ಯದ ಪರಂಪರೆ ರೋಚಕವಾದುದು. "ನಾಟ್ಯಂ ಭಿನ್ನ ರುಚೇ: ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ" ಎಂಬುದು ಕವಿ ಕಾಳಿದಾಸನ ಉವಾಚ. 'ಸರ್ವಶಾಸ್ತ್ರಾರ್ಥಸಂಪನ್ನಂ ಸರ್ವಶಿಲ್ಪಪ್ರವರ್ತಕಂ। ನಾಟ್ಯಾಖ್ಯಂ ಪಂಚಮಂ ವೇದಂ ಸೇತಿಹಾಸಂ ಕರೋಮ್ಯಹಮ್॥' ಎಂದಿದ್ದಾನೆ ಭರತಮುನಿ. 'ನಿಸರ್ಗದ ರಸಗಟ್ಟಿಯೇ ಕಲೆ'ಯಾಗಿದ್ದು, ಭರತನಾಟ್ಯದ ರಂಗು, ಗುಂಗನ್ನು ರಸಗ್ರಾಹಿಗಳಷ್ಟೇ ಬಲ್ಲರು. ಉತ್ತರ ಕರ್ನಾಟಕಭಾಗದಲ್ಲಿ 'ನಾಟ್ಯ ಪಿತಾಮಹ' ಎನ್ನಿಸಿಕೊಂಡಿದ್ದವರು ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರು. ದೇಶಾದ್ಯಂತ ಸಂಚರಿಸಿ, ವಿವಿಧ ನೃತ್ಯಶೈಲಿಗಳನ್ನು ಅಭ್ಯಸಿಸಿ, ತಮ್ಮದೇ ಆದ ನೃತ್ಯಶೈಲಿಯನ್ನು ಪ್ರಚುರ ಪಡಿಸಿದ ಪ್ರತಿಭಾನ್ವಿತರು. ಅನೇಕ ನೃತ್ಯಾಸಕ್ತರ ಪಾಲಿಗೆ ಮಮತೆಯ ಗುರು. ೧೯೫೯ ರಲ್ಲಿ 'ನಾಟ್ಯಭಾರತಿ' ಸಂಗೀತ, ನೃತ್ಯಶಾಲೆ ತೆರೆದ ಶ್ರೀನಿವಾಸ ಕುಲಕರ್ಣಿಯವರು ಧಾರವಾಡ ಪರಿಸರದ ಪ್ರತಿಭಾನ್ವಿತರ ಪಾಲಿಗೆ ಪರಮಗುರು. ಇವರ ಪ್ರತಿಭಾವಂತ ಶಿಷ್ಯರಲ್ಲಿ ಒಬ್ಬರಾಗಿದ್ದು, ಧಾರವಾಡ ನೆಲದಲ್ಲಿ ಹೊಸ ಸಂಚಲನ ಮೂಡಿಸಿದವರು ಪುತ್ತಿಗೆ ವೆಂಕಟರಮಣ ಉಪಾಧ್ಯಾಯರು. ಮಯೂರಿ ಲಾಸ್ಯಕ್ಕೆ ತಂಪು ನೀಡಿದ ತರು.

'ಉಪಾಧ್ಯೆ ನೃತ್ಯ ವಿಹಾರ' ಧಾರವಾಡದಲ್ಲಿ ಹುಟ್ಟಿಕೊಂಡ ಅತೀ ಹಳೆಯ ಭರತನಾಟ್ಯ ಕೇಂದ್ರ. ಅಕ್ಟೋಬರ್ ೨೬, ೧೯೫೫ರಲ್ಲಿ ಸ್ಥಾಪಿಸಲ್ಪಟ್ಟ ಈ ನೃತ್ಯಸಂಸ್ಥೆ ೬ ದಶಕಗಳು ಜಾರಿದ ಮೇಲೆ ಕೂಡ ಕ್ರಿಯಾಶೀಲವಾಗಿದ್ದು, ಕಿರಿಯ ನೃತ್ಯಾಸಕ್ತರ ಕನಸುಗಳನ್ನು ಅರಳಿಸುತ್ತಿರುವದೊಂದು ಮೇರು ಸಾಧನೆ. ಪಿ. ವಿ. ಉಪಾಧ್ಯಾಯರ ಕನಸಿನ ಕೂಸು ಬೃಹತ್ತಾಗಿ ಬೆಳೆದು, ಹಿಂದುಸ್ತಾನಿ ಸಂಗೀತ ವಿಜೃಂಭಿಸುತ್ತಿರುವ ನೆಲದಲ್ಲಿ, ನೂಪುರ ನಿನಾದದಿಂದ ನಲಿವು, ಚೆಲುವು, ಗೆಲುವು ತುಂಬುತ್ತಿರುವುದು ಅಭಿಮಾನದ ಸಂಗತಿ.

ಮೂಡಬಿದರೆ ದಕ್ಷಿಣದ ಜೈನಕಾಶಿ ಎಂದೇ ಪ್ರಸಿದ್ಧ. ಇಲ್ಲಿಂದ ಮೂರು ಕಿ.ಮೀ. ಅಂತರದಿಂದ ಹಳ್ಳಿ ಪುತ್ತಿಗೆ ಪಿ.ವಿ.ಉಪಾಧ್ಯಾಯರ ಹುಟ್ಟೂರು. ಕೃಷ್ಣ ಹಾಗೂ ಲಕ್ಷ್ಮೀ ಉಪಾಧ್ಯಾಯ ದಂಪತಿಯ ಪ್ರಥಮ ಚಿರಂಜೀವ ವೆಂಕಟರಮಣ ಕೃಷಿಯಾಧಾರಿತ ಮನೆತನದಲ್ಲಿ ಬೆಳೆದ ಹುಡುಗ. ಯಕ್ಷಗಾನದ ಚಂಡೆಸದ್ದಿಗೆ ಕಿವಿ ನಿಮಿರಿಸಿದ ಹುಡುಗ. ತಂದೆ ಕೃಷ್ಣ ಉಪಾಧ್ಯಾಯರು ದ್ವಿತೀಯ ಪತ್ನಿ ಸರಸ್ವತಿ ಅಮ್ಮನವರಿಂದ ೭ ಮಕ್ಕಳನ್ನು ಪಡೆದಾಗ ಮನೆತುಂಬ ಜನವೋ ಜನ. ಇಷ್ಟಿದ್ದು ಮಾಣಿಗ್ಯಾಕೋ ಮನೆ ಭಣ ಭಣ. ಕಣ್ಣುಗಳ ತುಂಬ ಕನಸುಗಳ ದಿಬ್ಬಣ. ೧೮ ನೆಯ ವಯಸ್ಸಿನಲ್ಲಿ (ಜನನ ೨೧-೧೨-೧೯೨೧) ತಂದೆಯೊಂದಿಗೆ ಜಗಳಾಡಿ, ಮನೆಬಿಟ್ಟು ಘಟ್ಟ ಹತ್ತಿದ ಹುಡುಗ ಧಾರವಾಡಕ್ಕೆ ಬಂದಿದ್ದು; ನೊಂದು ಬೆಂದದ್ದು; ಹುಬ್ಬಳ್ಳಿಯ ಅಶೋಕ ಹೋಟೆಲ್ಲಿನಲ್ಲಿ ಬಾಣಸಿಗನಾದುದ್ದು; ಮತ್ತೆ ನಾಟಕ, ನೃತ್ಯಗಳ ಬೆಂಬತ್ತಿದ್ದು, ಎಲ್ಲವೂ ರೋಚಕ ಕಥೆ. ಕರುಳು ಹಿಂಡುವ ವ್ಯಥೆ. ನೃತ್ಯದಾಹಿಗಳ ಪಾಲಿಗೆ ಯಶೋಗಾಥೆ. ಪೌರೋಹಿತ್ಯ, ಜ್ಯೋತಿಷ್ಯ, ಯಕ್ಷಗಾನ ಎಂದೆಲ್ಲಾ ಕರಾವಳಿಯಲ್ಲಿ ಕುಂಮ್ಟೆಟ್ ಕುಣಿದದ್ದು ನಿಜ. ಐದನೇ ತರಗತಿಗೆ ಓದು ನಿಲ್ಲಿಸಿ, ಪುತ್ತಿಗೆಯ ಪುಟಿಯುವ ಮಾಣಿ ಕದ್ರಿಮೇಳ, ಇರುವೈಎಲ್ ಮೇಳಗಳಲ್ಲಿ ಸ್ತ್ರೀಪಾತ್ರ ಮಾಡಿದ್ದು ಹೌದು. ಹೀಗಿದ್ದೂ, ಹರೆಯದ ಉಮೇದು ಊರು ಬಿಡಿಸಿತು. ಧಾರವಾಡದಲ್ಲಿ ಚಿಕ್ಕಪ್ಪ ಸುಬ್ಬಣ್ಣಾಚಾರ್ಯರ ಆಶ್ರಯ. ಹೊಟೆಲ್ ನೌಕರಿ. ನೂರೆಂಟು ಚಾಕರಿ. ಏನೇನೋ ಕಿರಿಕಿರಿ. ಈ ನಡುವೆ, ಒಂದು ದಿಢೀರ್ ತಿರುವು. ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರ ಭೆಟ್ಟಿ. ಭರತನಾಟ್ಯ ಕಲಿಯುವ ಹಂಬಲ. ನೃತ್ಯ, ಅಭಿನಯಗಳನ್ನು ಮೈಗೂಡಿಸಿಕೊಳ್ಳುವ ಛಲ. ಹಗಲೆಲ್ಲ ಅಡುಗೆ, ರಾತ್ರಿ ನಾಟಕದ ಉಡುಗೆ-ತೊಡುಗೆ. 'ಶ್ರೀ ಲಕ್ಷ್ಮೀವಿಲಾಸ' ಹೋಟೆಲಿನ ಸಾಹುಕಾರ, ಬಣ್ಣದ ಬೆಂಬತ್ತಿದ ಸರದಾರ.

ಹಂಸಭಾವಿಯ ನಾಟಕಕಂಪನಿಯಲ್ಲಿ ನೃತ್ಯಸಂಯೋಜಕ. ಧಾರವಾಡದಲ್ಲಿರುವ ಹೋಟೆಲಿನಲ್ಲಿ ನಳಪಾಕ. 'ನಾಟ್ಯಭಾರತಿ'ಯ ಕಲಾವಿದರೆಲ್ಲರಿಗು ಸಖ. ಕಲೆಯ ಬೆಂಬತ್ತುವುದರಲ್ಲೇ ಪರಮಸುಖ. 'ವೆಂಕಟರಮಣ' ಶಿಷ್ಯ. 'ಶ್ರೀನಿವಾಸ' ಗುರು. ಒಲಿದದ್ದು 'ಸರಸ್ವತಿ'ಯೇ ಹೊರತು 'ಲಕ್ಷ್ಮೀ ಅಲ್ಲ!' ಗುರುಗಳು ಹಂಸಭಾವಿಗೆ ಗುರುಕುಲ ಕಟ್ಟಲು ತೆರಳಿದರು. ತರುಣಶಿಷ್ಯ ಧಾರವಾಡದಲ್ಲಿ ಹೊಸ ನೃತ್ಯಶಾಲೆ ತೆರೆದು, ಹೆಜ್ಜೆ-ಗೆಜ್ಜೆಗಳ ಬೆಂಬತ್ತಿದರು. 'ಉಪಾಧ್ಯೆ ನೃತ್ಯ ವಿಹಾರ' ಕ್ರಮೇಣ ನಾಟ್ಯಮಯೂರಿಗಳ ಕನಸುಗಳ ಸಾಗರ, ಆನಂದದ ಆಗರ. ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರ ನಾಟ್ಯಶೈಲಿಯನ್ನು ಕರಗತಮಾಡಿಕೊಂಡರು. ತಂಜಾವೂರಿ ಶೈಲಿ, ಪಿಳ್ಳೈ ಶೈಲಿ, ಕಥಕ್ಕಳಿ, ಕುಚಿಪುಡಿಗಳ ರಸಪಾಕ ಸವಿದರು. ವಿನಾಯಕ ಕೃಷ್ಣರಾವ್ ಪಾಟೀಲ, ಗೋಪಾಲಕೃಷ್ಣ ನಾಯಕ, ಉಡುಪಿ ಮಂದಾಕಿನಿ, ಸುನಂದಾ ಹಾನಗಲ್, ವನಮಾಲಾ ಸವದತ್ತಿ, ಗೀತಾ ಚಿಲಕವಾಡ, ವಿದ್ಯಾ ನಾಯಕ ಹೀಗೆ ನೃತ್ಯಾಸಕ್ತರ ಸಮ್ಮಿಲನ ಸಾಧ್ಯವಾಯಿತು. 'ಲಕ್ಷ್ಮೀವಿಲಾಸ' ಹೋಟೆಲ್ಲಿನ ಅಟ್ಟದ ಮೇಲೆ ನೃತ್ಯಕ್ಲಾಸು. ಆರಂಭದಲ್ಲಿ ಇದ್ದ ಶಿಷ್ಯರ ಸಂಖ್ಯೆ ಕೇವಲ ೫. ತಿಂಗಳಿಗೆ ೩ ರೂಪಾಯಿ ಗುರುದಕ್ಷಿಣೆ ಮೂವರಿಂದ. ಉಳಿದಿಬ್ಬರಿಗೆ ಉಚಿತಕಲಿಕೆ, ನಂಬ್ತೀರಾ? ನಗ್ತೀರಾ? ಕ್ರಮೇಣ ಮಾಳಮಡ್ಡಿಯ ಕರಂದಿಕರ ಕಟ್ಟಡದಲ್ಲಿ ಕ್ಲಾಸುಗಳನ್ನು ನಡೆಸತೊಡಗಿದರು. ತಿಂಗಳ ಬಾಡಿಗೆ ಮೂರು ರೂಪಾಯಿ, ಮೂಲೆಯಲ್ಲಿ

ಅಡುಗೆ. ಪತ್ನಿ ಮನೋರಮಾರೊಂದಿಗೆ ಹರ್ಷದ ಘಳಿಗೆ. ಹಿಂದುಸ್ತಾನಿ ಸಂಗೀತದ ನೆಲದಲ್ಲಿ ಕರ್ನಾಟಕಿ ಸಂಗೀತದ ಹಿಮ್ಮೇಳದೊಂದಿಗೆ ಭರತನಾಟ್ಯಕಲೆಯನ್ನು ಬೆಳೆಸಿದ್ದು ಇವರ ಹೆಗ್ಗಳಿಕೆ. ಲೀನಾ ಚಂದಾವರಕರ, ಮೀನಾಕ್ಷಿ ಹೆಬ್ಳೀಕರ. ಚಿಂದೋಡಿ ಲೀಲಾ, ಮೈಸೂರು ಜಯಮ್ಮ, ಮೀನಾ ಕರಂದಿಕರ, ಸಂಧ್ಯಾ ಮರಾಠೆ, ಗಿರಿಜಾ ನರೇಂದ್ರ, ಬೀನಾ ಜವಳಿ, ಸುಲಭಾ ಡಂಬಳ ಹೀಗೆ ಅಸಂಖ್ಯಾತ ಮುದ್ದು ಮದನಿಕೆಗಳನ್ನು ಕಟೆದ ಅದ್ಭುತ ರೂವಾರಿ ವೆಂಕಟರಮಣ ಉಪಾಧ್ಯಾಯರು.

ಅಕಾಡೆಮಿಕ್ ವಲಯದಲ್ಲಿ ಹೆಚ್ಚೇನೂ ಗುರುತಿಸಲ್ಪಡದ ಉಪಾಧ್ಯಾಯರು ಸಾಂಸ್ಕೃತಿಕ ವಲಯದಲ್ಲಿ ಜನಪ್ರಿಯತೆಯನ್ನು ಗುರುತಿಸಿಕೊಂಡರು. ನಾಲ್ಕು ದಶಕಗಳ ಕಾಲ ನೃತ್ಯಕ್ಕಾಗಿ ದುಡಿದರು. ತಮ್ಮ ಶಿಷ್ಯೆಯರನ್ನು ರಂಗಕ್ಕೇರಿಸಿ ಮೆರೆಸಿದರು. ಭರತನಾಟ್ಯತರಗತಿಗಳನ್ನು ಧಾರವಾಡ ಹಾಗೂ ಹುಬ್ಬಳ್ಳಿಯಲ್ಲಿ ನಡೆಸುತ್ತಾ ಕಿರಿಯರ ಕನಸುಗಳಿಗೆ ಕಸುವು ತುಂಬಿದರು. ಅತ್ಯಂತ ಕಡಿಮೆ ಶುಲ್ಕ ವಿಧಿಸಿ, ಬಡ-ಮಧ್ಯಮವರ್ಗದ ಮಕ್ಕಳಲ್ಲಿ ನೃತ್ಯಾಸಕ್ತಿ ಮೂಡಿಸಿ, ಧಾರವಾಡ ಪರಿಸರದಲ್ಲಿ ನಾಟ್ಯಕಲೆಯನ್ನು ಮನೆಮಾತಾಗಿಸಿದ ಶ್ರೇಯಸ್ಸು ಉಪಾಧ್ಯಾಯರಿಗೆ ಸಲ್ಲುತ್ತದೆ. ಅದೀಗ ಮುಂದುವರೆದಿದೆ. ಇಂದು ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ೩೦ಕ್ಕೂ ಅಧಿಕ ಸಂಖ್ಯೆಯ ಭರತನಾಟ್ಯ ಕಲಿಕಾ ಸಂಸ್ಥೆಗಳಿವೆ. ಎಲ್ಲಕ್ಕೂ ಮೂಲ ಪ್ರೇರಣೆ ಪರಮಗುರು ಶ್ರೀನಿವಾಸ ಕುಲಕರ್ಣಿ ಹಾಗೂ ಸೋಲದ ಸಾಹಸಿ ವೆಂಕಟರಮಣ ಉಪಾಧ್ಯಾಯ. ಒಂಟಿ ಸಲಗ, ಸಜ್ಜನ ಸುಭಗ, ನೃತ್ಯಕ್ಕಾಗಿ ಬದುಕು ಸವೆಸಿದ ಸಾಹಸಿಗ. ಉತ್ತರ ಕರ್ನಾಟಕದ ಶಿಕ್ಷಣಕಾಶಿಯಲ್ಲಿ ನೃತ್ಯಶಾಲೆ ತೆರೆದ ಮೊದಲಿಗ. ಪ್ರತಿ ಹೆಜ್ಜೆಯೂ ಸೋಜಿಗ.

ಮೂರು ಹೆಣ್ಣು ಹಾಗೂ ಮೂರು ಗಂಡು ಮಕ್ಕಳ ತಂದೆಯಾಗಿದ್ದ ಇವರು ಸಾಧನಾ ಪಥದಲ್ಲಿ ಮನ್ನುಗ್ಗುವಾಗ ಸಾಂಸಾರಿಕ ಸಂಬಂಧಗಳಿಗೆ ಹೆಚ್ಚು ಆದ್ಯತೆ ನೀಡಲಿಲ್ಲ. ವಾದಿರಾಜ, ಗುರುರಾಜ, ನಟರಾಜ ಮೂವರು ತಮ್ಮಷ್ಟಕ್ಕೆ ತಾವಿದ್ದರು. ಶಶಿಕಲಾ, ಸರೋಜಿನಿ, ಶೈಲಜಾ ತಮ್ಮಷ್ಟಕ್ಕೆ ಇದ್ದರು. ಪತ್ನಿ ಮನೋರಮಾ ಹೆಚ್ಚಾಗಿ ಪುತ್ತಿಗೆಯಲ್ಲಿಯೇ ಉಳಿದರು. ಕಿರಿಯ ಮಗಳೊಂದಿಗೆ ಅರಳುವ ದಿನಚರಿ. ಉಡುಪಿ ಮಂದಾಕಿನಿ ಆಗೆಲ್ಲಾ ಒಲವಿನ ನಾಟ್ಯಮಯೂರಿ. ನಾಡಿನಾದ್ಯಂತ ಭರತನಾಟ್ಯ ಪ್ರದರ್ಶನಗಳನ್ನು ನೀಡಿದರು. ಶಿಷ್ಯೆಯರಿಗೂ ವೇದಿಕೆ ಒದಗಿಸಿದರು. ಮಗ ನಟರಾಜನಿಗೆ ಗೆಜ್ಜೆ ಕಟ್ಟಿ ಹರಸಿದ್ದುಂಟು. ಪುತ್ತಿಗೆಯ ಶ್ರೀ ಸೋಮನಾಥೇಶ್ವರ ದೇವಸ್ಥಾನದಲ್ಲಿ ನವರಾತ್ರಿ ಸಂದರ್ಭದಲ್ಲಿ ಭರತನಾಟ್ಯದಿಂದ ಮಗ ರಂಜಿಸಿದ್ದುಂಟು.

"ಗುರುತಿಸಿಕೊಳ್ಳಲಿಕ್ಕೆ ಒಂದು ಡಿಗ್ರಿ ಇಲ್ಲದೆ ತೊಂದರೆಯಾಗಿದೆ ಮಾರಾಯರೇ, ಈಗೆಲ್ಲಾ ಪದಕ, ಪ್ರಶಸ್ತಿಗಳ ಕಾಲ, ನನ್ನಂಥ ಬಡ ಹೆಡ್ಡ ಕಲಾವಿದ ಯಾರಿಗೆ ಬೇಕಾಗಿದೆ ಸ್ವಾಮಿ?" ಎಂದು ತಮಾಷೆ ಮಾಡುತ್ತ ನಗುತ್ತಿದ್ದರು. ಆದರೆ ಅವರ ನಗುವಿನಲ್ಲಿ ವಿಷಾದದ ಛಾಯೆ ಗೋಚರಿಸುತ್ತಿತ್ತು. ಹೀಗಿದ್ದು ಎಲ್ಲಾ ಊರುಗಳಲ್ಲಿ ಅವರಿಗೆ ಗೌರವ, ಮನ್ನಣೆ ಇತ್ತು. ಕುಣಿದು ದಣಿಯದ ನೃತ್ಯಗುರುವನ್ನು ೧೯೮೨ ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿಯು ಬೆಂಬತ್ತಿ ಬಂತು. ಅಂದಿನ ಮುಖ್ಯಮಂತ್ರಿ

ವೀರಪ್ಪ ಮೋಯ್ಲಿ ಪ್ರಶಸ್ತಿ ಪ್ರದಾನ ಮಾಡಿದರು. ಸ್ವಂತ ಸೂರು ಇಲ್ಲದ, ಹುಟ್ಟೂರು ಬಿಟ್ಟು ನೂರಾರು ಊರು ಸುತ್ತಿದ ನಾಟ್ಯಗುರುವಿಗೆ ಕಣ್ಣು ತುಂಬಿಬಂತು. ಧಾರವಾಡದ ಮಣ್ಣನ್ನು ಕಣ್ಣಹನಿ ತೋಯಿಸಿತು. ವೇಷ ಆವೇಶ ಸಾರ್ಥಕವೆನಿಸಿತು.

ಸಾವಿರ ಕಂಬಗಳ ಬಸದಿಯ ಊರಿನಿಂದ ಬಂದ ನೃತ್ಯಸಾಧಕ ಧಾರವಾಡದಲ್ಲಿ ಭರತನಾಟ್ಯ ಕಲೆಯನ್ನು ಕಲಿಸಿ ಬೆಳೆಸಿದರು. ಕಿರಿಯ ಪೀಳಿಗೆಯಲ್ಲಿ ನೃತ್ಯಾಭಿರುಚಿ ಮೂಡಿಸಿದರು. ಬಿಳಿ ಧೋತರ, ನಿಲುವಂಗಿ, ದಪ್ಪ ಕನ್ನಡಕ, ಬಕ್ಕ ತಲೆ, ಬಗಲಿಗೊಂದು ಚೀಲ, ಮಾತು ಸರಳ, ಹರಟೆ ರಸಗವಳ, ನಟುವಾಂಗದಲ್ಲಿ ಶಿಸ್ತು ಬಹಳ, ಹೀಗಿದ್ದ ಉಪಾಧ್ಯಾಯರು ಒಂದಿಷ್ಟು ದಣಿದರು. ಅನಾರೋಗ್ಯದಿಂದ ತತ್ತರಿಸಿದರು. ಬಣ್ಣ ಹಚ್ಚಿಕೊಂಡ ಮುಖದಲ್ಲಿ ವೇದನೆಯ ಸುಕ್ಕುಗಳು ಕಂಡುಬಂದವು. ೭೫ನೆಯ ವಯಸ್ಸಿನವರೆಗೂ ಗೆಜ್ಜೆ ಕಟ್ಟಿಕೊಂಡು ನರ್ತಿಸುತ್ತಿದ್ದ ವಯಸ್ಸಿನ ಇಳಿತನದೊಂದಿಗೆ ಗೆಳೆತನ ಮಾಡಿಕೊಂಡಿದ್ದ ಉಪಾಧ್ಯಾಯರು ಜುಲೈ ೧೫, ೧೯೯೧ ರಂದು ಗೆಜ್ಜೆ ಬಿಚ್ಚಿ ನಡೆದರು. ಮಾಳಮಡ್ಡಿಯ ಕೊಟ್ಟಿಗೆಯ "ಪುಣ್ಯ ಕೋಟಿ" ಉರುಳಿಬಿತ್ತು.


'ಉಪಾಧ್ಯೆ ನೃತ್ಯ ವಿಹಾರ' ಬಿಕೋ ಎನ್ನತೊಡಗಿತು. ನೂಪುರ ನಿನಾದ ನಿಂತಿತು. ನವಿಲಮರಿಗಳು ನರಳ ತೊಡಗಿದವು. ಧಾವಿಸಿ ಬಂದ ಪತ್ನಿ ಮನೋರಮಾ ಮಮ್ಮಲ ಮರುಗಿದರು. ಆದರೂ ಕಾಲ ಕಾಯುವದಿಲ್ಲ. ಗಡಿಯಾರದ ಮುಳ್ಳಿನ ಚಲವೆ ನಿಲ್ಲುವುದಿಲ್ಲ. ಚಲನಶೀಲತೆ ಕ್ಷಯಿಸುವುದಿಲ್ಲ. ಕತ್ತಲೆಯ ಗರ್ಭದಿಂದ ಬೆಳಕಿನ ಬೆಳ್ಳೀರೇಖೆ ಮೂಡಿಬರುವುದು ಜಗದ ನಿಯಮ, ಆದರೆ ಬೇಕು ಒಂದಿಷ್ಟು ಸಂಯಮ. ಎರಡು ತಿಂಗಳ ಮೌನದ ನಂತರ ನಾಟ್ಯ ಮಯೂರಿಗಳ ಕಿಲ ಕಿಲ ಕೇಳಿಸತೊಡಗಿತು. ಮಗ ನಟರಾಜ ಹಾಗೂ ಸೊಸೆ ಪ್ರಮೋದಾ ಚೈತ್ರಯಾತ್ರೆಯನ್ನು ಮುನ್ನಡೆಸತೊಡಗಿದರು. ಉತ್ಸಾಹಿ ನಟರಾಜ ಹಾಗೂ ಪ್ರತಿಭಾನ್ವಿತ ನೃತ್ಯಗಾರ್ತಿ ಪ್ರಮೋದಾ ನೃತ್ಯಶಾಲೆಯನ್ನು ಕ್ರಿಯಾಶೀಲವಾಗಿಸಿದರು. ಹೊಸ ಪರಿಕಲ್ಪನೆಯೊಂದಿಗೆ ಪ್ರಗತಿಪಥದಲ್ಲಿ ಸಾಗತೊಡಗಿದರು. ಈ ನಡುವೆ ಗುರುಪತ್ನಿ ಮನೋರಮಾ ವಿಧಿವಶರಾದರು. ಹೇಗಿದೆ ನೋಡಿ! .. .. ಈ ಸಂಸ್ಥೆ ನೊಂದಾಯಿಸಲ್ಪಟ್ಟದ್ದು ಜನವರಿ ೨೦೦೬ರಲ್ಲಿ, ಆದರೆ ಸ್ಥಾಪಿಸಲ್ಪಟ್ಟ ಅರ್ಧ ಶತಮಾನ ಜಾರಿದ ಮೇಲೆ! ನಟರಾಜ ತಬಲಾ, ಹಾರ್ಮೋನಿಯಂ ನುಡಿಸುವಲ್ಲಿ ಸಮರ್ಥರು. ಪ್ರಮೋದಾ ವಿದ್ವತ್ ಹಾಗೂ ಅಲಂಕಾರ ಎರಡನ್ನೂ ಮುಗಿಸಿದ ಮೇಧಾವಿ. ಕರ್ನಾಟಕಿ ಸಂಗೀತದಲ್ಲಿ 'ಸೀನಿಯರ್' ಆಗಿದೆ.


ನಟರಾಜ-ಪ್ರಮೋದಾ ದಂಪತಿಗಳ ಮಗಳು ನವಮಿ ಅತ್ಯಂತ ಪ್ರತಿಭಾವಂತ ನೃತ್ಯಪಟು. ಮನೆಮಂದಿಯೆಲ್ಲಾ ಕಲಾರಾಧನೆಯಲ್ಲಿ ತೊಡಗಿರುವುದು ಈ ಕುಟುಂಬದ ವಿಶೇಷ.

ರಸಋಷಿಯ ಕನಸುಗಳು ಫಳಫಳಿಸುತ್ತಿವೆ. ವರ್ಚಸ್ಸು, ತೇಜಸ್ಸು, ತಪಸ್ಸು ಪುಟ್ಟಪಾದಗಳ ನೂಪುರದಲ್ಲಿ ನಿನದಿಸುತ್ತಿದೆ. "ಉಪಾಧ್ಯೆ ನೃತ್ಯ ವಿಹಾರ" ನಾಟ್ಯ ದೇವತೆಯ ಕೊರಳಲ್ಲಿ ಮಿಂಚುವ ಹೂ ಹಾರ ಕನಕಾಂಬರ ... ...

■■■

# ಚಿತ್ರಕಲೆ





ಶ್ರೀ ಡಿ.ವ್ಹಿ. ಹಾಲಭಾವಿ

# ವರ್ಣಶಿಲ್ಪ ಪ್ರಶಸ್ತಿ ಪುರಸ್ಕೃತ
# ಶ್ರೀ ಡಿ.ವ್ಹಿ. ಹಾಲಭಾವಿ
# (೧೯೦೭-೧೯೯೭)

● ಸುರೇಶ. ಡಿ. ಹಾಲಭಾವಿ

ಸಾಂಸ್ಕೃತಿಕ ನಗರಿ, ವಿದ್ಯಾ ಕೇಂದ್ರವೆಂದೇ ಹೆಸರು ಪಡೆದ ಧಾರವಾಡ – ಶಿಕ್ಷಣ, ಕಲೆ, ಸಾಹಿತ್ಯ, ಸಂಗೀತಕ್ಕೆ ತನ್ನದೇ ಆದ ಸ್ಥಾನ ಪಡೆದಿದೆ. ಅದರ ಪ್ರಶಾಂತವಾದ ವಾತಾವರಣ, ಸುಂದರ ನೈಸರ್ಗಿಕ ಪರಿಸರ, ಹಿತವಾದ ಹವಾಮಾನ ಕಲಾವಿದರಿಗೆ, ಕವಿಗಳಿಗೆ, ಸಂಗೀತಗಾರರಿಗೆ ಪ್ರೇರಣೆ ನೀಡುತ್ತದೆ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾಡಿದ ಅದ್ವಿತೀಯ ಸಾಧನೆಗಳಿಂದ ಅಮರರಾಗಿರುವ ಅನೇಕ ದಿಗ್ಗಜರು ಅದನ್ನು ಶ್ರೀಮಂತಗೊಳಿಸಿದ್ದಾರೆ. ಅವರಲ್ಲಿ ಬಹಳಷ್ಟು ಮಹನೀಯರು ವಿಶ್ವವಿಖ್ಯಾತರೂ ಆಗಿದ್ದಾರೆ. ಧಾರವಾಡ ಸುಪ್ರಸಿದ್ಧ ಪೇಢಾ ನೀಡುತ್ತಿರುವ ಸಿಹಿಯಂತೆ ಕಲೆ, ಸಾಹಿತ್ಯ, ಸಂಗೀತದ ಕಂಪನ್ನು ಅವರು ಎಲ್ಲೆಡೆ ಪಸರಿಸಿದ್ದಾರೆ. ಅವರಂತೆ ಚಿತ್ರಕಲಾ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟವರು ಶ್ರೀ ಡಿ.ವ್ಹಿ. ಹಾಲಭಾವಿಯವರು.

ನಾಡಿನ ಮಹಾ ಕಲಾಚೇತನ ಶ್ರೀ ದಾನಪ್ಪ ವೀರಭದ್ರಪ್ಪ ಹಾಲಭಾವಿಯವರು ೧೯೦೭ರ ನವ್ಹೆಂಬರ್ ೨೯ರಂದು ಧಾರವಾಡದಲ್ಲಿ ಜನಿಸಿದರು. ದಕ್ಷ ಹಾಗೂ ಪ್ರಾಮಾಣಿಕ ನ್ಯಾಯಾಧೀಶರೆಂದೇ ಖ್ಯಾತಿ ಗಳಿಸಿದ ಶ್ರೀ ವೀರಭದ್ರಪ್ಪ ಮತ್ತು ಶ್ರೀಮತಿ. ಚೆನ್ನಬಸವ್ವನವರ ನಾಲ್ಕು ಜನ ಸುಪುತ್ರರಲ್ಲಿ ಇವರು ಒಬ್ಬರು. ನ್ಯಾಯಾಧೀಶರಾಗಿದ್ದ ವೀರಭದ್ರಪ್ಪನವರಿಗೆ ತಮ್ಮ ಮಕ್ಕಳೂ ಸಹ ಉತ್ತಮ ಶಿಕ್ಷಣ ಪಡೆದು, ಸರಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಬೇಕೆಂಬ ಇಚ್ಛೆ ಇದ್ದದ್ದು ಸಹಜವಾಗಿತ್ತು. ಆದರೆ ಡಿ.ವ್ಹಿ. ಹಾಲಭಾವಿಯವರ ಒಲವೇ ಬೇರೆಯಾಗಿತ್ತು. ಬಾಲ್ಯದಿಂದಲೂ ಚಿತ್ರಕಲೆಯ ಗೀಳು ಹಚ್ಚಿಕೊಂಡಿದ್ದ ಅವರಿಗೆ, ತಂದೆ ನ್ಯಾಯಾಧೀಶರಿಗೆ ಬೇರೆ ಬೇರೆ ಸ್ಥಳಗಳಿಗೆ ವರ್ಗಾವಣೆ ಆಗುತ್ತಿದ್ದುದರಿಂದ ಅಲ್ಲಿಯ ನೈಸರ್ಗಿಕ ಪರಿಸರ, ಸೃಷ್ಟಿ ಸೌಂದರ್ಯ ಇವು ಅವರಿಗೆ ಮತ್ತಷ್ಟು ಪುಷ್ಟಿ ಕೊಡುತ್ತಿದ್ದವು. ತಂದೆ ಅವರ ಸಾಮಾನ್ಯ ಶಿಕ್ಷಣಕ್ಕೆ ಎಷ್ಟೇ ಅನುಕೂಲ ಮಾಡಿಕೊಟ್ಟರೂ, ತಿಳಿವಳಿಕೆ ಹೇಳಿದರೂ ಅದರಲ್ಲಿ ಆಸಕ್ತಿ ತೋರದೆ ಚಿತ್ರಕಲೆಯನ್ನೇ ಕಲಿಯುವದಾಗಿ ಹಠ ಹಿಡಿದರು. ಶಾಲೆಯಲ್ಲಿ ಹಾಲಭಾವಿಯವರು ಬರಿ ಚಿತ್ರ ಬಿಡಿಸುವದನ್ನು ನೋಡುತ್ತಿದ್ದ ಶಿಕ್ಷಕರು ಅವರನ್ನು ಉನ್ನತ ಚಿತ್ರಕಲಾ ಅಭ್ಯಾಸಕ್ಕೆ ಕಳಿಸುವುದು ಯೋಗ್ಯವೆಂದು ಸಲಹೆ ನೀಡಿದರು. ಆಗಿನ ದಿನಗಳಲ್ಲಿ ಹತ್ತಿರದಲ್ಲಿ ಇಲ್ಲಿ ಎಲ್ಲೂ ಚಿತ್ರಕಲಾ ಶಾಲೆಗಳಿರಲಿಲ್ಲವಾದ್ದರಿಂದ, ದೂರದ ಮುಂಬಯಿಗೆ ಹೋಗಬೇಕಾಯಿತು. ಅಲ್ಲಿಯ ಪ್ರತಿಷ್ಠಿತ 'ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ'ನ್ನು ಹಾಲಭಾವಿಯವರು ತಮ್ಮ ವಿದ್ಯಾಕೇಂದ್ರವನ್ನಾಗಿ ಆಯ್ಕೆ ಮಾಡಿಕೊಂಡರು. ಅದು

ಬಹಳ ಖ್ಯಾತಿವೆತ್ತ ಸಂಸ್ಥೆಯಾಗಿತ್ತು. ಹಾಲಭಾವಿಯವರ ಜೊತೆಗೆ ಉತ್ತರ ಕರ್ನಾಟಕದ ಎಂ.ವ್ಹಿ. ಮಿಣಜಿಗಿ, ಜಿ.ಎಸ್. ದಂಡಾವತಿಮಠ, ಡಿ.ಜಿ. ಬಡಿಗೇರ, ವ್ಹಿ.ಕೆ. ಪಾಟೀಲ, ಸಿ.ವ್ಹಿ. ಕಾರಡಗಿ, ಎಮ್.ಎ. ಚೆಟ್ಟಿ, ಎ.ಎ. ಆತ್ಮೇಲ್ಕರ್, ಎ.ಎಂ. ಕಮಡೊಳ್ಳಿಯವರೂ ಅಲ್ಲಿ ಚಿತ್ರಕಲಾ ಅಭ್ಯಾಸವನ್ನು ಬಹಳ ಕಷ್ಟಪಟ್ಟು, ಶ್ರದ್ಧೆಯಿಂದ ಮಾಡಿದರು. ನಾಲ್ಕೈದು ವರ್ಷ ಶ್ರಮವಹಿಸಿ ಕಲಿತು, ಡ್ರಾಯಿಂಗ್ ಮತ್ತು ಪೇಂಟಿಂಗ್‌ನಲ್ಲಿ ಡಿಪ್ಲೋಮಾ ಪದವಿ ಹಾಗೂ 'ಆರ್ಟ ಮಾಸ್ಟರ್' ಕೋರ್ಸ್‌ಗಳನ್ನು ೧೯೩೫ರಲ್ಲಿ ಮುಗಿಸಿದರು.

ಇತ್ತ ಕಡೆಯಿಂದ ಮುಂಬಯಿಗೆ ಹೋಗಿ ಚಿತ್ರಕಲೆ ಕಲಿಯುವವರು ಕಷ್ಟಪಡುತ್ತಿದ್ದುದನ್ನು ಮನಗಂಡು ಧಾರವಾಡದಲ್ಲಿಯೇ ಒಂದು ಚಿತ್ರಕಲಾಶಾಲೆಯನ್ನು ಸ್ಥಾಪಿಸಲೇಬೇಕೆಂಬ ಛಲದಿಂದ ಹಾಲಭಾವಿಯವರು ೧೯೩೫ರಲ್ಲಿ 'ಸ್ಕೂಲ್ ಆಫ್ ಆರ್ಟ್' ಹೆಸರಿನಿಂದ ಚಿತ್ರಕಲಾಶಾಲೆಯನ್ನು ಪ್ರಾರಂಭಿಸಿದರು. ಯಾರೂ ಮಾಡಿರದಂತಹ ಕಾರ್ಯವನ್ನು ತಾವು ಮಾಡಿದ್ದರಿಂದ ಚಿತ್ರಕಲೆಯ ಉಳಿವಿಗಾಗಿ ಹಾಗೂ ಬೆಳವಣಿಗೆಗಾಗಿ ಬಹಳ ಕಷ್ಟಪಡಬೇಕಾಯಿತು. ಇದು ಕರ್ನಾಟಕದಲ್ಲಿಯೇ ಪ್ರಪ್ರಥಮ ಚಿತ್ರಕಲಾ ಶಾಲೆ ಎನ್ನುವದು ಹೆಮ್ಮೆಯ ವಿಷಯವಾಗಿದೆ. ಸ್ವಂತ ಕಟ್ಟಡ ಇರಲಿಲ್ಲವಾದುದರಿಂದ ಮೊದಲಿನ ಎರಡು ಮೂರು ವರುಷ ಆರ್.ಎಲ್.ಎಸ್. ಶಾಲೆ, ನಂತರ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ವರ್ಗಗಳನ್ನು ನಡೆಸಿದರು. ೧೯೩೮ರಲ್ಲಿ ಧಾರವಾಡದ ಮಧ್ಯವರ್ತಿ ಸ್ಥಳವಾದ ಸಿವ್ಹಿಲ್ ಕೋರ್ಟಿನ ಎದುರಿಗೆ ಅವರ ತಂದೆಯವರು ಕಟ್ಟಡವನ್ನು ಕಟ್ಟಿಸಲು ಆರ್ಥಿಕ ಸಹಾಯ ನೀಡಿದರು. ಅದನ್ನು ಹಾಲಭಾವಿಯವರು ತಾವು ಕಲಿತ 'ಜೆ.ಜೆ. ಸ್ಕೂಲ್ ಆಫ್ ಆರ್ಟ್' ಮಾದರಿಯಲ್ಲಿ ಕಲಾಶಾಲೆಗೆ ಅನುಕೂಲವಾಗುವಂತೆ ಸುವ್ಯವಸ್ಥಿತವಾಗಿ ಕಟ್ಟಡವನ್ನು ತಾವೇ ಸ್ವತಃ ನಿಂತು ಕಟ್ಟಿಸಿದರು. ಅದು ಆಗ ಧಾರವಾಡಕ್ಕೇ ಒಂದು ಆಕರ್ಷಣೀಯ ಕಟ್ಟಡವಾಗಿತ್ತೆಂದು ಜನರು ಹೇಳುತ್ತಾರೆ. ಬಹಳ ಜನರು, ವಿದೇಶೀಯರು ಕೂಡ ಕಟ್ಟಡವನ್ನು ನೋಡಿ ಆಕರ್ಷಿತರಾಗಿ ಒಳಗಡೆ ಬರುತ್ತಿದ್ದರು. ನಂತರ ಅಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು, ಕಲಿಸುತ್ತಿದ್ದ ಹಾಲಭಾವಿಯವರನ್ನು ನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಚಿತ್ರಕಲೆ ಸಾಮಾನ್ಯ ಶಿಕ್ಷಣದಂತಲ್ಲವಾದುದರಿಂದ ಮತ್ತು ಆ ದಿನಗಳಲ್ಲಿ ಚಿತ್ರಕಲೆಯ ಬಗ್ಗೆ ಜನರಲ್ಲಿ ಅರಿವಿರಲಿಲ್ಲವಾದುದರಿಂದ ಪಾಲಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿವಳಿಕೆ ನೀಡಿ ಕಲಿಯಲು ಮನವೊಲಿಸಿ, ಚಿತ್ರಕಲಾಶಾಲೆಯನ್ನು ನಡೆಸಿಕೊಂಡು ಬಂದಿರುವದೇ ಒಂದು ಸಾಹಸವೆನ್ನಬಹುದು. ಪ್ರಾರಂಭದಲ್ಲಿ ಬೆರಳೆಣಿಕೆಯಷ್ಟು ಇರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಬೆಳೆಯಿತು. ಕಲೆಯೇ ಜೀವನ, ಜೀವನವೇ ಕಲೆ ಎಂದು ಬದುಕಿದ ಹಾಲಭಾವಿಯವರ ನೇತೃತ್ವದಲ್ಲಿ ಕಲಾಶಾಲೆ ಉತ್ತರೋತ್ತರವಾಗಿ ಬೆಳೆಯುತ್ತ, ಬೆಳಗುತ್ತ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಒಳ್ಳೆಯ ಹೆಸರನ್ನು ಪಡೆಯಿತು. ಇಲ್ಲಿ ಕಲಿತಂತಹ ಸಾವಿರಾರು ವಿದ್ಯಾರ್ಥಿಗಳು ಶ್ರೇಷ್ಠಕಲಾವಿದರಾಗಿ, ಕಲಾಶಿಕ್ಷಕರಾಗಿ ನಾಡಿನಾದ್ಯಂತ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ. ಇವರಲ್ಲಿ ಅನೇಕರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದಾರೆ.

ಚಿತ್ರಕಲೆ ಅಲ್ಲದೆ ಈ ಕಲಾಶಾಲೆಯಲ್ಲಿ ಫೋಟೊಗ್ರಾಫಿ ತರಬೇತಿ ಮತ್ತು ಸಂಗೀತ, ನೃತ್ಯ, ಹವ್ಯಾಸಿ ವರ್ಗಗಳನ್ನು ಕೂಡ ನಡೆಸಲಾಗುತ್ತಿತ್ತು. ಚಿತ್ರಕಲಾ ವಿದ್ಯಾರ್ಥಿಗಳಿಗೆ ಕಲಾ

ಇತಿಹಾಸ ಕುರಿತು ಉಪನ್ಯಾಸಗಳು, ವಿಚಾರ ಸಂಕಿರಣ, ವಿವಿಧ ಕಡೆಯ ಕಲಾವಿದರಿಂದ ಪ್ರದರ್ಶನಗಳು, ಪ್ರಾತ್ಯಕ್ಷಿಕೆಗಳು ಹೀಗೆ ವರ್ಷವಿಡೀ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದರು. ಇವು ವಿದ್ಯಾರ್ಥಿಗಳಿಗೂ ಕಲೋಪಾಸಕರಿಗೂ ಜ್ಞಾನಾರ್ಜನೆಗೆ ಪೂರಕವಾಗಿದ್ದವು. ಹೀಗೆ ಇದು ಕಲೆ, ಸಾಹಿತ್ಯ, ಸಂಸ್ಕೃತಿಯ ತ್ರಿವೇಣಿ ಸಂಗಮವಾಗಿತ್ತು. ಈ ಎಲ್ಲ ಚಟುವಟಿಕೆಗಳಿಗೆ ಹಾಲಭಾವಿಯವರು ಪ್ರೇರಕ ಶಕ್ತಿ ಆಗಿದ್ದರು.

ಹಾಲಭಾವಿಯವರು ಒಬ್ಬ ಉತ್ತಮ ಶಿಕ್ಷಕ ಎಂದಷ್ಟೇ ಆಗದೆ, ಒಬ್ಬ ಅಂತಾರಾಷ್ಟ್ರ ಮಟ್ಟದ ಚಿತ್ರಕಲಾವಿದರಾಗಿಯೂ ಬೆಳೆದರು. ಅವರು ರಚಿಸಿದ ಕಲಾಕೃತಿಗಳು ಸಾವಿರಾರು. ವಿವಿಧ ಮಾಧ್ಯಮಗಳಾದ ಪೆನ್ಸಿಲ್, ಚಾರಕೋಲ್, ಪೇಸ್ಟಲ್, ಜಲವರ್ಣ, ತೈಲವರ್ಣ ಹೀಗೆ ಎಲ್ಲ ಮಾಧ್ಯಮಗಳಲ್ಲೂ, ಎಲ್ಲ ವಿಷಯಗಳಲ್ಲೂ ಪಳಗಿದವರಾಗಿದ್ದರು. ಅವರು ರಚಿಸಿದ ತೈಲವರ್ಣದ ಭಾವಚಿತ್ರಗಳಲ್ಲಿ ಗಣ್ಯರಾದ ಭಾರತದ ಉಪರಾಷ್ಟ್ರಪತಿಯಾಗಿದ್ದ ಸನ್ಮಾನ್ಯ ಬಿ.ಡಿ. ಜತ್ತಿ, ಧಾರವಾಡದ ಕಲೆಕ್ಟರರಾಗಿದ್ದ ಆರ್.ಎಸ್. ಹಿರೇಮಠ, ವಂಟಮುರಿ ದೇಸಾಯರು, ರೊದ್ದ ಶ್ರೀನಿವಾಸರಾಯರು, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ಪ್ರಭಾ ಅತ್ರೆ ಮತ್ತು ಜಲವರ್ಣಗಳಲ್ಲಿ ಕಲಾಶಾಲೆಗೆ ಭೇಟಿ ನೀಡಿದ ವಿದೇಶೀಯರ ಭಾವಚಿತ್ರಗಳು, ನಿಸರ್ಗಚಿತ್ರಣದಲ್ಲಿ ಬಾದಾಮಿ ಗುಹೆ, ಧಾರವಾಡದ ರೇಲ್ವೆ ನಿಲ್ದಾಣ, ಕೆಲಗೇರಿ ಕೆರೆ, ಯಾದಗಿರಿ ಕೋಟೆ, ಮುಂಬಯಿಯ ಗಗನಚುಂಬಿ ಕಟ್ಟಡಗಳು, ದಾಂಡೇಲಿ, ಹೊನ್ನಾವರ, ಕಾಶ್ಮೀರದ ಸೃಷ್ಟಿಸೌಂದರ್ಯ, ಹಂಪಿ, ವಿಜಾಪುರದ ಐತಿಹಾಸಿಕ ಸ್ಮಾರಕಗಳು, ಸಂಯೋಜನಾಚಿತ್ರಗಳಲ್ಲಿ ಯುದ್ಧ ಮಾಡುತ್ತಿರುವ ರಾಣಿ ಚೆನ್ನಮ್ಮ, ಗೊರವ, ಗೋರಖನಾಥ, ಪೌರಾಣಿಕ ಚಿತ್ರಗಳಾದ 'ಗಿರಿಜಾ ಕಲ್ಯಾಣ', 'ಅರ್ಜುನನಿಗೆ ಪಾಶುಪತಾಸ್ತ್ರದಾನ' ಇವು ಪ್ರಸಿದ್ಧಿ ಪಡೆದಿವೆ. ಪ್ರಾಚೀನ ಕಾವ್ಯಗಳಾದ ಚೆನ್ನಬಸವ ಪುರಾಣ, ಪ್ರಭುಲಿಂಗಲೀಲೆ ಇವುಗಳಿಗೆ ಸಂಬಂಧಿಸಿದ ಕೆಲವು ಸನ್ನಿವೇಶಗಳನ್ನು ಬಹು ಮನೋಜ್ಞವಾಗಿ ಚಿತ್ರಿಸಿದ್ದಾರೆ. ದೆಹಲಿಯ ರಾಷ್ಟ್ರಪತಿಭವನದ ಗುಮ್ಮಟದೊಳಭಾಗದ ಮೇಲೆ ಚಿತ್ರಗಳನ್ನು ಬಿಡಿಸಿದವರಲ್ಲಿ ಹಾಲಭಾವಿಯವರೂ ಒಬ್ಬರಾಗಿದ್ದಾರೆ. ಅವರೆಷ್ಟೋ ಕಲಾಕೃತಿಗಳು ದೇಶ ವಿದೇಶಗಳಲ್ಲಿ, ಪ್ರಮುಖ ಸ್ಥಳಗಳಲ್ಲಿ, ಗಣ್ಯರಲ್ಲಿ ಸಂಗ್ರಹಗೊಂಡಿವೆ. ವಿವಿಧೆಡೆ ಪ್ರದರ್ಶನಗೊಂಡಿವೆ.

೧೯೩೨ರಲ್ಲಿ ಸೌ॥ ಸರ್ವಮಂಗಳಾ ಅವರ ಜೊತೆಗೆ ಹಾಲಭಾವಿಯವರ ವಿವಾಹವಾಯಿತು. ಅವರಿಗೆ ಮೂವರು ಹೆಣ್ಣು ಮಕ್ಕಳು ಪ್ರೇಮಾ, ಲೀಲಾ, ವಿಮಲಾ ಹಾಗೂ ಇಬ್ಬರು ಗಂಡು ಮಕ್ಕಳು ವಿಶ್ವನಾಥ ಮತ್ತು ಸುರೇಶ. ಅವರಲ್ಲಿ ಮಗಳು ವಿಮಲಾ ಮತ್ತು ಮಗ ಸುರೇಶ ಇವರು ಚಿತ್ರಕಲೆಯ ಅಭ್ಯಾಸ ಮಾಡಿದರು. ತಂದೆ ಪ್ರಾರಂಭಿಸಿದ ಚಿತ್ರಕಲಾಶಾಲೆಯನ್ನು, ಎಷ್ಟೇ ಅಡೆ-ತಡೆಗಳು ಬಂದರೂ ಮಗ ಸುರೇಶ ಮತ್ತು ಸೊಸೆ ಪಾರ್ವತಿ ಮುಂದುವರೆಸಿಕೊಂಡು ಬಂದದ್ದು ಹಾಲಭಾವಿಯವರಿಗೆ ಸಂತಸ ಹಾಗೂ ನೆಮ್ಮದಿ ಉಂಟು ಮಾಡಿತ್ತು. ದೇಶದ ಉತ್ತಮ ಕಲಾಶಾಲೆಗಳಲ್ಲಿ ಇದೂ ಒಂದಾಗಿ ಹೆಸರು ಪಡೆದಿದ್ದು ಈಗ ಎಪ್ಪತ್ತೇಳನೆ ವರ್ಷದಲ್ಲಿ ಪಾದಾರ್ಪಣೆ ಮಾಡಿದ್ದು ಹೆಮ್ಮೆಯ ಸಂಗತಿ ಆಗಿದೆ. ಡಿ.ವ್ಹಿ. ಹಾಲಭಾವಿಯವರ ಕುರಿತು ಸಾಕಷ್ಟು ಲೇಖನಗಳು, ಪುಸ್ತಕಗಳು ಪ್ರಕಟಗೊಂಡಿವೆ. ಕರ್ನಾಟಕ ಲಲಿತ ಕಲಾ ಅಕಾಡೆಮಿಯಿಂದ ಅವರ ಜೀವನ ಹಾಗೂ ಕಲಾಕೃತಿಗಳನ್ನೊಳಗೊಂಡ ಪುಸ್ತಕ ಪ್ರಕಟವಾಗಿದೆ. ಅದೇ ರೀತಿ 'ಚಿತ್ರಕಲಾವಿದ ಡಿ.ವ್ಹಿ.

ಹಾಲಭಾವಿ' ಎಂಬ ಪುಸ್ತಕವನ್ನು ಕಲಾವಿದ ಶಂಕ್ರಪ್ಪ ಕುಂದಗೋಳ ಅವರು ಬರೆದಿದ್ದಾರೆ.

ಹಾಲಭಾವಿಯವರಿಗೆ ಪ್ರವಾಸ ಮಾಡುವದೆಂದರೆ ಬಹಳ ಪ್ರೀತಿ. ಟೀಚರ್ ಎಸ್ಕಾರ್ಟ್ ಎಂದು ಕೆಲ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನು ಶ್ರೀಲಂಕಾಕ್ಕೆ ಕರೆದುಕೊಂಡು ಹೋಗಲು ಭಾರತ ಸರಕಾರದ ಆಮಂತ್ರಣದ ಮೇರೆಗೆ ಅವರು ಶ್ರೀಲಂಕಾಕ್ಕೆ ಹೋಗಿದ್ದರು. ಕುಟುಂಬದ ಸದಸ್ಯರೊಡನೆ ಹಾಗೂ ವಿದ್ಯಾರ್ಥಿಗಳನ್ನು ಹೊರಾಂಗಣ ಚಿತ್ರಣಕ್ಕೆಂದು ಐತಿಹಾಸಿಕ ಹಾಗೂ ಕಲಾತ್ಮಕ ಊರುಗಳಾದ ವಿಜಾಪುರ, ಬಾದಾಮಿ, ಪಟ್ಟದಕಲ್ಲು, ಹಂಪಿ ಮುಂತಾದ ಕಡೆಗೆ ಹೋಗುವರು. ಅದರಲ್ಲಿ ಹಂಪಿ ಎಂದರೆ ಅವರಿಗೆ ಬಹಳ ಪ್ರೀತಿಯ ತಾಣವಾಗಿತ್ತು, ಹಂಪಿಯಲ್ಲಿ ಕಲಾ ವಿಶ್ವವಿದ್ಯಾಲಯ ಆಗಬೇಕೆಂಬ ಕನಸು ಅವರದಾಗಿತ್ತು.

ಹಾಲಭಾವಿಯವರ ವ್ಯಕ್ತಿತ್ವದ ಬಗ್ಗೆ ಹೇಳುವದಾದರೆ, ಅವರ ಜೀವನ ಒಂದು ಶಿಸ್ತಿನ ಜೀವನವಾಗಿತ್ತು. ದಿನಚರಿಯಂತೆ ಆಯಾ ವೇಳೆಗೆ ಆಯಾ ಕೆಲಸಗಳನ್ನು ಮಾಡುವದು, ಮತ್ತು ಶಿಸ್ತು ಮತ್ತು ವೇಳೆಗೆ ಬಹಳ ಮಹತ್ವ ಕೊಡುತ್ತಿದ್ದರು. ವರ್ಗಗಳಿಗಾಗಲಿ, ಸಭೆ ಸಮಾರಂಭಗಳಿಗಾಗಲಿ, ನಿಗದಿತ ವೇಳೆಗಿಂತ ಮುಂಚೆಯೇ ಹೋಗುವ ರೂಢಿ. ವೇಷಭೂಷಣದಲ್ಲಿಯೂ ಅಷ್ಟೆ. ಯಾವಾಗಲೂ ಸೂಟು, ಬೂಟು, ಟೈ ಧರಿಸುತ್ತಿದ್ದರು. ಮಿತಭಾಷಿಯಾಗಿದ್ದರು. ಆದರೆ ಎಲ್ಲರನ್ನೂ ಆತ್ಮೀಯತೆಯಿಂದ ಕಾಣುವದು, ಮಾತನಾಡುವದು ಮತ್ತು ಅವರ ಬಗ್ಗೆ ಕುತೂಹಲದಿಂದ ತಿಳಿದುಕೊಳ್ಳುವ ಸ್ವಭಾವ. ಅವರಲ್ಲಿ ತಾಳ್ಮೆ ಬಹಳವಾಗಿತ್ತು. ಒಂದು ಸಂಸ್ಥೆಯನ್ನು ನಡೆಸುವದು ಸುಲಭದ ಮಾತು ಅಲ್ಲ. ಆಡಳಿತವಾಗಲಿ, ಶಿಕ್ಷಕ ವಿದ್ಯಾರ್ಥಿಗಳದ್ದಾಗಲಿ ಯಾವದೇ ಸಮಸ್ಯೆ ಬಂದರೂ ತಾಳ್ಮೆಯಿಂದ ಕೇಳಿ ಯಾರ ಮನಸ್ಸಿಗೂ ನೋವಾಗದಂತೆ ಪರಿಹರಿಸುತ್ತಿದ್ದರು. ವಿದ್ಯಾರ್ಥಿಗಳೆಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಬಡ ವಿದ್ಯಾರ್ಥಿಗಳಿಂದ ಎಂದೂ ಫೀ ಕೇಳುತ್ತಿರಲಿಲ್ಲ. ಎಷ್ಟೋ ಪರ ಊರಿನ ವಿದ್ಯಾರ್ಥಿಗಳನ್ನು ಮನೆಯಲ್ಲಿಟ್ಟುಕೊಂಡು ಕಲಿಸಿದ್ದುಂಟು. ಎಷ್ಟೊ ವರ್ಷ ಮೊದ ಮೊದಲು ಸರಕಾರದಿಂದ ಯಾವದೇ ಆರ್ಥಿಕ ನೆರವಿಲ್ಲದ್ದರಿಂದ ಸ್ವಂತ ಆಸ್ತಿಯನ್ನು ಮಾರಿ ಕಲಾಶಾಲೆಯನ್ನು ನಡೆಸಿದರು. ಹಾಲಭಾವಿಯವರು ತಮ್ಮ ಬದುಕನ್ನು ಕೇವಲ ಚಿತ್ರಕಲೆಗಷ್ಟೇ ಸೀಮಿತಗೊಳಿಸದೇ ಸಂಗೀತ, ನೃತ್ಯ, ನಾಟಕ, ಫೋಟೋಗ್ರಾಫಿ, ಸಾಹಿತ್ಯ, ಭಾಷೆ ಹೀಗೆ ಹತ್ತು ಹಲವು ಹವ್ಯಾಸಗಳನ್ನಾಗಿಟ್ಟುಕೊಂಡಿದ್ದರು. ಫೋಟೋಗ್ರಾಫಿಯಲ್ಲೂ ಅವರು ಪರಿಣಿತಿ ಹೊಂದಿದ್ದರು. ಒಳ್ಳೆಯ ಕ್ಯಾಮೆರಾ ಮತ್ತು ಒಂದು ೮ mm Home Movie Camera ಮತ್ತು Projectorನ್ನು ಇಟ್ಟುಕೊಂಡು ಕಲಾಶಾಲೆಯ ಎಲ್ಲ ಚಟುವಟಿಕೆಗಳನ್ನು ಚಿತ್ರೀಕರಣ ಮಾಡಿ, ಫೋಟೋಗಳನ್ನು ತೆಗೆದು ದಾಖಲಿಸುತ್ತಿದ್ದರು. ಕೊಳಲು, ಹಾರ್ಮೋನಿಯಮ್, ದಿಲ್‌ರುಬಾ, ತಬಲಾವಾದ್ಯಗಳನ್ನು ನುಡಿಸುತ್ತಿದ್ದರು. ವಿವಿಧ ಭಾಷೆಗಳ ಮೇಲೆಯೂ ವಿಶೇಷ ಪ್ರೀತಿ. ನಾಟಕಗಳು, ಮರಾಠಿ ನಾಟ್ಯಗೀತೆಗಳನ್ನು ಅವರು ಇಷ್ಟ ಪಡುತ್ತಿದ್ದರು. ಎಲ್ಲ ದೊಡ್ಡ ದೊಡ್ಡ ಕಲಾವಿದರು, ಸಾಹಿತಿಗಳು, ನಾಟಕಕಾರರು, ಸಂಗೀತಗಾರರು ಎಲ್ಲರ ಬಗ್ಗೆಯೂ ಪ್ರೀತಿ, ಅಭಿಮಾನ, ಎಲ್ಲರ ಜೊತೆಗೂ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದರು. ಹಾಲಭಾವಿಯವರಿಗೆ ಪುಸ್ತಕಗಳ ಬಗ್ಗೆಯೂ ಅಪಾರ ಪ್ರೀತಿ ಇತ್ತು. ವಿವಿಧ ಕಲೆಗಳ, ವಾಸ್ತುಶಿಲ್ಪ, ಫೋಟೊಗ್ರಾಫಿ ಬಗ್ಗೆ

ಪುಸ್ತಕಗಳು ಅಲ್ಲದೆ ಸಾಮಾನ್ಯ ಪುಸ್ತಕಗಳ, ಕಲೆಗೆ ಸಂಬಂಧಪಟ್ಟ ಪತ್ರಿಕೆಗಳ ಸಂಗ್ರಹವನ್ನು ಸಾಕಷ್ಟು ಮಾಡಿದ್ದಾರೆ. ಶಿಕ್ಷಣಪ್ರೇಮಿ ಆಗಿದ್ದ ಅವರು ತಮ್ಮ ಎಲ್ಲ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವದರ ಜೊತೆಗೆ, ಅವರು ತಮ್ಮ ಅರವತ್ತನೆ ವಯಸ್ಸಿನಲ್ಲಿ ಕಾಲೇಜಿಗೆ ಹೋಗಿ ಬಿ.ಎ. ಪದವಿ ಪಡೆದಿದ್ದಾರೆ. ಓದುವ, ಬರೆಯುವ ಹವ್ಯಾಸವನ್ನು ಕೂಡ ಬೆಳೆಸಿಕೊಂಡವರಾಗಿದ್ದ ಅವರು ಕಲೆಗೆ ಸಂಬಂಧಿಸಿದ ಒಂದು ಕನ್ನಡ–ಇಂಗ್ಲೀಷ್ ತ್ರೈಮಾಸಿಕ 'ಆರ್ಟ್‌ಗಿಲ್ಡ್'ನ್ನು ಸಂಪಾದಿಸಿ ಪ್ರಕಟಿಸುತ್ತಿದ್ದರು. 'ಮೈ ಕಾಂಟೆಂಪರರಿ ಆರ್ಟಿಸ್ಟ್' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದು ಅವರ ಜೊತೆಗೆ ಮುಂಬೈಯಲ್ಲಿ ಚಿತ್ರಕಲಾ ಅಭ್ಯಾಸ ಮಾಡುತ್ತಿದ್ದ ಉತ್ತರ ಕರ್ನಾಟಕದ ಕಲಾವಿದರ ಜೀವನ ಮತ್ತು ಅವರ ಕಲಾಕೃತಿಗಳ ಚಿತ್ರಗಳನ್ನೊಳಗೊಂಡಿದೆ. ಶ್ರೀಲಂಕಾಕ್ಕೆ ಹೋಗಿದ್ದ ಅವರ ಪ್ರವಾಸದ ಅನುಭವವನ್ನು 'ನನ್ನ ಸಿಲೋನ್ ಸಂದರ್ಶನ' ಎಂಬ ಕಿರು ಪುಸ್ತಕದಲ್ಲಿ ಬರೆದಿದ್ದಾರೆ. ಬಹುಮುಖ ಪ್ರತಿಭೆಯ ಹಾಲಭಾವಿಯವರು ತಮ್ಮ ವಿದ್ಯೆಯನ್ನು ಸಹಸ್ರಾರು ಜನರಿಗೆ ಧಾರೆ ಎರೆದು, ಕಲೆಯ ಕಂಪನ್ನು ಎಲ್ಲೆಡೆ ಪಸರಿಸಿದವರಾಗಿದ್ದಾರೆ. ಅವರು ಕಟ್ಟಿದ ಒಂದು ವಿಶೇಷ ಸಂಸ್ಥೆಯಿಂದ ಪ್ರಯೋಜನ ಪಡೆದ ಅನೇಕರು ಜೀವನೋಪಾಯಕ್ಕೆ ದಾರಿ ಕಂಡುಕೊಂಡಿದ್ದಾರೆ.

ಕಲೆಗಾಗಿ ಕಲೆ ಎಂದು ಬದುಕಿದ ಹಾಲಭಾವಿಯವರು ಯಾವುದೇ ಪ್ರಶಸ್ತಿಗಳಿಗೆ ಆಸೆ ಪಡಲಿಲ್ಲ. ಪ್ರಶಸ್ತಿಗಳೇ ಅವರನ್ನು ಅರಸಿ ಬಂದವು. ಚಿತ್ರಕಲಾಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಗುರುತಿಸಿ, ಅನೇಕ ಸಂಘ–ಸಂಸ್ಥೆಗಳು ಮತ್ತು ಸರಕಾರ ಅವರಿಗೆ ಸನ್ಮಾನ, ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಅವುಗಳಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಸನ್ಮಾನ, ಗದಗಿನ ಶ್ರೀ ತೋಂಟದಾರ್ಯ ಮಠದಿಂದ ಸನ್ಮಾನ, ದಿಲ್ಲಿಯ 'ಆಲ್ ಇಂಡಿಯಾ ಫೈನ್ ಆರ್ಟ್ ಅಂಡ್ ಕ್ರಾಫ್ಟ್ ಸೊಸೈಟಿ'ಯಿಂದ ಸನ್ಮಾನ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯದ ಚಿತ್ರಕಲಾವಿದರಿಗೆ ಕೊಡುವ ಅತ್ಯುನ್ನತ ಪ್ರಶಸ್ತಿಯಾದ ಕೆ. ವೆಂಕಟಪ್ಪ ಪ್ರಶಸ್ತಿಯನ್ನು ೧೯೯೫ರಲ್ಲಿ ಆಗಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ದೇವೆಗೌಡ ಅವರು ಧಾರವಾಡಕ್ಕೆ ಬಂದು ಹಾಲಭಾವಿಯವರಿಗೆ ಪ್ರದಾನ ಮಾಡಿದ್ದಾರೆ. ಕರ್ನಾಟಕ ಸರಕಾರವು ೨೦೦೪ರಲ್ಲಿ ಅವರ ಕಲಾಕೃತಿಗಳ ಪ್ರದರ್ಶನ, ಹಾಗೂ ಅವರ ಕುರಿತಾದ ವಿಚಾರ ಸಂಕಿರಣವನ್ನು ಧಾರವಾಡದಲ್ಲಿ ಏರ್ಪಡಿಸಿ, ಅವರಿಗೆ ಗೌರವ ಸಲ್ಲಿಸುವದರ ಮೂಲಕ ಅವರ ಜನ್ಮಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿತು.


ಚಿತ್ರಕಲೆಗೆ ಸಂಬಂಧಿಸಿದಂತೆ ಹಾಲಭಾವಿಯವರು ಮಾಡಿದ ಕಾರ್ಯಗಳು ಅನೇಕ. ಉನ್ನತ ಚಿತ್ರಕಲಾ ಪರೀಕ್ಷೆಗಳ ಚೇರಮನ್ನರಾಗಿ, 'ಕರ್ನಾಟಕ ಆರ್ಟ್ ಸೊಸೈಟಿ'ಯ ಸಂಸ್ಥಾಪಕರಾಗಿ, ಮುಂಬಯಿಯ 'ಫೆಡರೇಶನ್ ಆಫ್ ಆರ್ಟ್ ಇನ್ಸಟಿಟ್ಯೂಷನ್ಸ್'ನ ಸದಸ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ದಾವಣಗೆರೆಯ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಸಲಹಾಮಂಡಳಿಯ ಸದಸ್ಯರಾಗಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ತಮ್ಮ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ. ಚಿತ್ರಕಲಾಶಿಕ್ಷಕರು, ಕಲಾವಿದರು ಯಾವಾಗಲೂ ಚಟುವಟಿಕೆಯಿಂದ ಇರಬೇಕೆಂಬ ಇಚ್ಛೆಯಿಂದ 'ಪೋಸ್ಟ್ ಡಿಪ್ಲೋಮಾ ಕ್ಲಬ್'ನ್ನು ಪ್ರಾರಂಭಿಸಿದರು. ಅಲ್ಲಿ

☆ ☆

ಕಲಾವಿದರು ಕಲಾಕೃತಿಗಳನ್ನು ರಚಿಸಿ, ತಮ್ಮ ಕಲಾಪ್ರತಿಭೆಯನ್ನು ಹೆಚ್ಚಿಸಿಕೊಳ್ಳಲು, ತಮ್ಮ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಒಂದು ವೇದಿಕೆಯನ್ನು ಕಲ್ಪಿಸಿದ್ದರು. ನಂತರ ಹುಟ್ಟಿದ ಎಲ್ಲ ಕಲಾಶಾಲೆಗಳಿಗೆ ಇದು ಒಂದು ಮಾದರಿ ಹಾಗೂ ಮಾತೃ ಸಂಸ್ಥೆಯಾಗಿದೆ.

ಕಲೆಯನ್ನೇ ಉಸಿರಾಗಿಸಿಕೊಂಡಿದ್ದ ಕಲಾಭೀಷ್ಮ, ಕುಂಚಬ್ರಹ್ಮರೆನಿಸಿದ್ದ ಹಾಲಭಾವಿಯವರು ತೊಂಭತ್ತು ವರ್ಷಗಳ ತುಂಬು ಜೀವನ ನಡೆಸಿ, ೨೬ ಡಿಸೆಂಬರ್ ೧೯೯೭ರಂದು ದೈವಾಧೀನರಾದರು. ಅವರು ಮಾಡಿದ ಸಾಧನೆ, ನಾಡು ನುಡಿ ಸೇವೆ ಚಿರಸ್ಮರಣೀಯವಾಗಿದೆ.

■ ■ ■



ಎಮ್.ಎ. ಚೆಟ್ಟಿ

# ಅಪ್ರತಿಮ ಚಿತ್ರಕಲಾವಿದ

# ಎಮ್.ಎ. ಚೆಟ್ಟಿ

# (೧೯೦೭-೨೦೦೩)

● ಸುರೇಶ. ಡಿ. ಹಾಲಭಾವಿ

ಕಲೆ ಮಾನವನ ಜೀವನದ ಒಂದು ಅವಿಭಾಜ್ಯ ಅಂಗವೆಂದರೆ ತಪ್ಪಾಗಲಾರದು. ಲಲಿತ ಕಲೆಗಳಲ್ಲಿ ಚಿತ್ರಕಲೆ ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಒಂದು ಚಿತ್ರ ನೂರಾರು ಮಾತುಗಳನ್ನು ಅಭಿವ್ಯಕ್ತಗೊಳಿಸುತ್ತದೆ. ಒಂದು ಸುಂದರವಾದ ಕಲಾಕೃತಿ ಸಹಸ್ರಾರು ಜನರನ್ನು ಸಂತೋಷಪಡಿಸುತ್ತದೆ. ಅಂತಹ ಸುಂದರವಾದ ಕಲಾಕೃತಿಗಳನ್ನು ಅನೇಕ ಕಲಾವಿದರು ರಚಿಸಿದ್ದಾರೆ. ಅವರಲ್ಲಿ ಕರ್ನಾಟಕದ ಗಣ್ಯಮಾನ್ಯ, ಹೆಸರಾಂತ ಚಿತ್ರಕಲಾವಿದರಲ್ಲಿ ಮುರಿಗೆಪ್ಪ ಚೆಟ್ಟಿಯವರು ಒಬ್ಬರಾಗಿದ್ದಾರೆ.

ಮುರಿಗೆಪ್ಪ ಚೆಟ್ಟಿಯವರ ತಂದೆ, ತಾಯಿಯರಾದ ಅಡಿವೆಪ್ಪ, ಶಿವಗಂಗಮ್ಮ ದಂಪತಿಗಳು ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ವಾಸವಾಗಿದ್ದರು. ಅವರಿಗೆ ಮೂವರು ಪುತ್ರಿಯರಿದ್ದರು. ಶಿವಗಂಗಮ್ಮ ಅಥಣಿ ಮುರುಘೇಂದ್ರ ಶಿವಯೋಗಿಗಳ ಆಶೀರ್ವಾದ ಪಡೆಯಲು ಪ್ರತಿ ದಿನ ಗಚ್ಚಿನಮಠಕ್ಕೆ ಹೋಗುತ್ತಿದ್ದರು. ಅವರ ಆಶೀರ್ವಾದದ ಫಲವಾಗಿ ಶಿವಗಂಗಮ್ಮರಿಗೆ ಮಾರ್ಚ್ ೭, ೧೯೦೭ ರಂದು ಗಂಡುಮಗು ಜನಿಸಿತು. ಅವರೇ ಮುರುಘೇಂದ್ರ ಶಿವಯೋಗಿಗಳ ಹೆಸರು ಹೊತ್ತ ಮುರಿಗೆಪ್ಪ ಚೆಟ್ಟಿಯವರು.

ಮುರಿಗೆಪ್ಪನವರು ಬಾಲಕನಿರುವಾಗಲೇ ಚಿತ್ರಕಲೆಯ ಗೀಳನ್ನು ಹಚ್ಚಿಕೊಂಡಿದ್ದರು. ಎಷ್ಟೋ ದಿವಸ ಶಿವಯೋಗಿಗಳ ಮಠದಲ್ಲಿ ರಂಗೋಲಿ ಬಿಡಿಸುತ್ತಿದ್ದರು. ಒಂದು ದಿನ ಶಿವಯೋಗಿಗಳು ಅವರು ರಂಗೋಲಿ ಬಿಡಿಸುತ್ತಿರುವಾಗ ಅದನ್ನು ನೋಡಿ ಬಹಳ ಸಂತೋಷಪಟ್ಟು "ಎಂತಹ ಸುಂದರ ರಂಗೋಲಿ ಬಿಡಿಸುತ್ತಿರುವಿ ಪುಟ್ಟ! ನಿನ್ನ ಕೈಗಳಲ್ಲಿ ಅದ್ಭುತ ಶಕ್ತಿ ಇದೆ. ಅದನ್ನು ಸದುಪಯೋಗ ಪಡಿಸಿಕೊ" ಎಂದು ಆಶೀರ್ವಾದ ಮಾಡಿದರು. ಇಂತಹ ಮಹಾತ್ಮರ ಆಶೀರ್ವಾದದಿಂದ ಮುರಿಗೆಪ್ಪನವರು ಒಬ್ಬ ಶ್ರೇಷ್ಠ ಮಟ್ಟದ ಕಲಾವಿದರಾಗಿ ಬೆಳೆದರು.

ಮುರಿಗೆಪ್ಪನವರು ಐದನೆಯ ಇಯತ್ತೆವರೆಗೆ ಅಥಣಿಯಲ್ಲಿ ಓದಿದರು. ೧೯೧೩ರಲ್ಲಿ ಅವರ ತಂದೆ ಪ್ಲೇಗ್ ಬೇನೆಯಿಂದ ತೀರಿಕೊಂಡರು. ಮುರಿಗೆಪ್ಪನವರು ಅವರ ಚಿಕ್ಕಪ್ಪ ಬಶೆಟ್ಟೆಪ್ಪನವರ ಪೋಷಣೆಯಲ್ಲಿ ಬೆಳೆದರು. ಶಿರಸ್ತೆದಾರ ಆಗಿದ್ದ ಬಶೆಟ್ಟೆಪ್ಪನವರ ವರ್ಗಾವಣೆಯಿಂದಾಗಿ ಕುಟುಂಬ ೧೯೧೮ರಲ್ಲಿ ಹುಕ್ಕೇರಿಗೆ ಸ್ಥಳಾಂತರಗೊಂಡಿತು. ಮುರಿಗೆಪ್ಪನವರು ಐದನೆ ಇಯತ್ತೆ ಸೇರಿದರು. ಅಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ ಬಸವಪ್ರಭು ನಾಯಕರು ಅವರನ್ನು ಎಲ್ಲ ರೀತಿಯಲ್ಲಿ ಪ್ರೋತ್ಸಾಹಿಸಿದರು.

೧೯೧೯ರಲ್ಲಿ ಅವರು ಪ್ರಾಥಮಿಕ ಚಿತ್ರಕಲಾ ಪರೀಕ್ಷೆಯಲ್ಲಿ ಮೊದಲಿಗರಾಗಿ ಉತ್ತೀರ್ಣರಾದರು. ೧೯೨೦ರಲ್ಲಿ ಮಾಧ್ಯಮಿಕ ಚಿತ್ರಕಲಾ ಪರೀಕ್ಷೆಯಲ್ಲಿ ಕೂಡ ಪ್ರಥಮ ಶ್ರೇಣಿ ಪಡೆದರು. ಕಲಾವೃತ್ತಿಯನ್ನು ಅನುಸರಿಸಲು ಇದು ಸಾಕಷ್ಟು ಪ್ರೇರಣೆ ಒದಗಿಸಿತು. ೧೯೨೪ರಲ್ಲಿ ಅವರು ಮೆಟ್ರಿಕ್ ಪರೀಕ್ಷೆಗೆ ಕುಳಿತರು. ಚಿತ್ರಕಲೆಯ ಬಗ್ಗೆಯೇ ಒಲವು ಇದ್ದುದರಿಂದ ಅಂದು ಇಡೀ ಭಾರತದಲ್ಲಿಯೇ ಏಕೈಕ ಕಲಾಶಾಲೆಯಾಗಿದ್ದ ಮುಂಬಯಿಯ 'ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್' ಸೇರಿದರು. ಅಲ್ಲಿ ಓದುತ್ತಿರುವಾಗ ಆ ಶಾಲೆಯ ಹಿತ್ತಲಲ್ಲಿದ್ದ ಒಂದು ಗಿಡದ ಬೊಡ್ಡೆಯ ಚಿತ್ರ ಬಿಡಿಸಿದ್ದರು. ಅದನ್ನು 'ಮುಂಬಯಿ ಆರ್ಟ್ ಸೊಸೈಟಿ' ಪ್ರದರ್ಶನಕ್ಕೆ ಕಳಿಸಿದ್ದರು. ಕಲಾಶಾಲೆಯ ಪ್ರಿನ್ಸಿಪಾಲ್ ಸಾಲೋಮನ್ ಗ್ಲ್ಯಾಡಸ್ಟನ್ ಆ ಚಿತ್ರಕ್ಕೆ 'ಮಾರಾಟವಾಗಿದೆ' ಎಂಬ ಚೀಟಿಯನ್ನು ಮೊದಲೇ ಅಂಟಿಸಿದರು. ಅದನ್ನು ತಮ್ಮ ಶಾಲೆಗಾಗಿ ಕೊಂಡುಕೊಂಡರು. ಅಂಥದೇ ಇನ್ನೊಂದು ಚಿತ್ರ ಬಿಡಿಸಿ ಲಂಡನ್ನಿಗೆ ಕಳಿಸಿಕೊಡಲು ಉಪದೇಶಿಸಿದರು. ಅಲ್ಲಿಯೂ ಕೂಡ ಅದು ಎಲ್ಲರ ಮೆಚ್ಚುಗೆ ಪಡೆಯಿತು. ಮತ್ತೊಂದು ಸ್ಪರ್ಧೆಯಲ್ಲಿ ಅವರು ಬಿಡಿಸಿದ ಒರಗಿದ ಜಿಂಕೆಯ ಚಿತ್ರ ಪ್ರಥಮ ಬಹುಮಾನ ಪಡೆಯಿತು.

೧೯೩೦ರಲ್ಲಿ ಮುರಿಗೆಪ್ಪನವರು ಡಿಪ್ಲೋಮಾ ಪರೀಕ್ಷೆಯನ್ನು ಸುವರ್ಣಪದಕದೊಂದಿಗೆ ಉತ್ತೀರ್ಣರಾದರು. ೧೯೩೧ ರಿಂದ ೧೯೩೪ರವರೆಗೆ ಜೆ.ಜೆ. ಕಲಾ ಶಾಲೆಯ ಫೆಲೊ ಆಗಿ ನೇಮಕಗೊಂಡರು. ನಂತರ ಅವರು ಸೊಲ್ಲಾಪುರದಲ್ಲಿ ನೆಲೆಸಿದರು. ಔಂಧದ ರಾಜ ಸಂಘಟಿಸಿದ್ದ ಅಖಿಲ ಭಾರತ ಚಿತ್ರ ಸ್ಪರ್ಧೆಗೆ ಭಗವದ್ಗೀತೆಯಲ್ಲಿ ಬರುವ ವಿಶ್ವರೂಪ ದರ್ಶನ ವಿಷಯ ಕುರಿತು, ಮುರಿಗೆಪ್ಪನವರು ಒಂದು ತಿಂಗಳು ಅಭ್ಯಸಿಸಿದರು. ಹದಿನೈದು ದಿನ ಬಿಡಿಸಿದ ೪' X ೩' ಅಳತೆಯ ತೈಲವರ್ಣ ಅದ್ಭುತವಾಗಿ ಮೂಡಿ ಬಂದಿತ್ತು. ಅದಕ್ಕೆ ಪ್ರಥಮ ಬಹುಮಾನ ಬಂತು. ಹೀಗೆ ಅವರ ಕಲಾಪ್ರತಿಭೆ ಅಖಿಲ ಭಾರತದ ಗಮನ ಸೆಳೆಯಿತು. ಸೊಲ್ಲಾಪುರದ ರುದ್ರಮ್ಮ ಶರಣೆ 'ವೀರಶೈವ ಪುರಾಣ'ಕ್ಕೆ ಸಂದರ್ಭ ಚಿತ್ರಗಳನ್ನು ಬಿಡಿಸಲು ಕೇಳಿದರು. ಅದಕ್ಕೆ ಮುರಿಗೆಪ್ಪನವರು ಶರಣರ ಅಧ್ಯಾತ್ಮಿಕ ಸಾಧನೆಯ ಕುರಿತು ಸಂದರ್ಭ ಚಿತ್ರ ಬಿಡಿಸಿದರು. ಅವು ಕೂಡ ಉತ್ತಮವಾಗಿ ಮೂಡಿ ಬಂದು ಎಲ್ಲರ ಮೆಚ್ಚುಗೆ ಪಡೆದವು. ಇದು ಶರಣರ ಜೀವನ ಕುರಿತ ಚಿತ್ರಗಳಿಗೆ ನಾಂದಿಯಾಯಿತು. ಸೊಲ್ಲಾಪುರದಲ್ಲಿದ್ದ ಎಂಟು ವರ್ಷಗಳಲ್ಲಿ ಅವರು ಅನೇಕ ಕಲಾಕೃತಿಗಳನ್ನು ರಚಿಸಿದರು. ಅವುಗಳನ್ನು ಹಲವಾರು ಪ್ರದರ್ಶನಗಳಲ್ಲಿ ಇಡಲಾಯಿತು. ಅಕ್ಕಲಕೋಟದ ಅರಸ ಮುರಿಗೆಪ್ಪನವರಿಗೆ ಸುವರ್ಣ ಪದಕವಿತ್ತು ಸನ್ಮಾನಿಸಿದರು.

ಚಿಕ್ಕಪ್ಪನ ಒತ್ತಾಸೆಯಂತೆ ಮುರಿಗೆಪ್ಪನವರು ೧೯೩೯ರಲ್ಲಿ ಗದಗಿಗೆ ಬಂದರು. ಅಲ್ಲಿ ಶ್ರೀ ಟಿ.ಪಿ. ಅಕ್ಕಿಯವರು ಆರಂಭಿಸಿದ 'ವಿಜಯಕಲಾ ಮಂದಿರ'ದಲ್ಲಿ ಮುರಿಗೆಪ್ಪನವರು ಮೂವತ್ತೇಳು ವರ್ಷಗಳ ಕಾಲ ಪಾಠ ಮಾಡಿದರು. ಆ ಕಲಾ ಶಾಲೆ ಪ್ರಖ್ಯಾತ ಸಂಸ್ಥೆಯಾಗಿ ಬೆಳೆಯಲು ಶ್ರಮಿಸಿದರು. ಶಾಸ್ತ್ರೀಯ ಕಲೆಯ ಕ್ರಮಬದ್ಧ ಅಭ್ಯಾಸ ಪ್ರತಿಯೊಬ್ಬ ಕಲಾವಿದನಿಗೆ ಅತ್ಯಗತ್ಯವೆಂದು ಅಲ್ಲಿಯ ವಿದ್ಯಾರ್ಥಿಗಳಿಗೆ ಒತ್ತಿ ಹೇಳುತ್ತಿದ್ದರು. ಶಾಲೆಯಿಂದ ಮನೆಗೆ ಬರುತ್ತಲೇ ದೊಡ್ಡ ಕ್ಯಾನವಾಸ್‌ಗಳ ಮೇಲೆ ಚಿತ್ರ

ರಚಿಸಲು ತೊಡಗುತ್ತಿದ್ದರು. ಅವರು ಜಲವರ್ಣ, ತೈಲವರ್ಣ, ಇದ್ದಿಲು, ಪೆನ್ಸಿಲ್ ಮಾಧ್ಯಮಗಳಲ್ಲಿ ಚಿತ್ರ ರಚಿಸಿದ್ದಾರೆ. ಭಾವಚಿತ್ರ, ಪ್ರಕೃತಿ ಚಿತ್ರ, ಸಂಯೋಜನೆಗಳನ್ನು ಬಿಡಿಸಿದ್ದಾರೆ. ನೈಜಾಕಾರದಲ್ಲಿ ಮೈಸೂರು ಮಹಾರಾಜ ಚಾಮರಾಜ ಒಡೆಯರ, ರಂಗರಾವ್ ದಿವಾಕರ, ಬಾಳಾಸಾಹೇಬ ಖೇರ್, ನ್ಯಾಯಮೂರ್ತಿ ಲೋಕೂರ, ಡಿ.ಸಿ. ಪಾವಟೆ, ತೋಂಟದಾರ್ಯ ಜಗದ್ಗುರುಗಳ, ಇಂದಿರಾಗಾಂಧಿಯವರ ಭಾವಚಿತ್ರಗಳು ಪ್ರಮುಖವಾಗಿವೆ. ಚಿಲುಮೆ ಸೇದುತ್ತಿರುವ ಮುದುಕನ ಚಿತ್ರ ಗಮನಾರ್ಹವಾಗಿದೆ. ಸಂಯೋಜನಾಚಿತ್ರಗಳಲ್ಲಿ 'ಮಾಯೆಯ ಮೇಲೆ ಅಲ್ಲಮಪ್ರಭುವಿನ ವಿಜಯ', ನದಿ ಇಬ್ಭಾಗವಾಗಿ ದಾರಿ ಮಾಡಿ ಕೊಟ್ಟದ್ದು, ಅದನ್ನು ದಾಟುತ್ತಿರುವ ಎಡೆಯೂರು ಸಿದ್ಧಲಿಂಗೇಶ್ವರರು ಹಾಗೂ ಅವರ ಅನೇಕ ಭಕ್ತರು, ಮತ್ತೊಂದು ಚಿತ್ರ 'ಅರ್ಧ ನಾರೀಶ್ವರ' ಪ್ರಮುಖವಾಗಿವೆ.

ಜೆ.ಜೆ. ಕಲಾಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ, ಉದಯಪುರದ ಜಲಮಂದಿರ ಹಾಗೂ ಸರೋವರದಲ್ಲಿ ಅದರ ಪ್ರತಿಬಿಂಬದ ಪ್ರಕೃತಿಚಿತ್ರವನ್ನು ಬಿಡಿಸಿದ್ದರು. ಅದನ್ನು ಬೇರೆ ಯಾರಾದರೂ ಕೊಂಡುಕೊಂಡಾರೆಂದು, ಮಹಾರಾಜ ಕೂಡಲೆ ಕೊಂಡು ತಮ್ಮ ಅರಮನೆಯಲ್ಲಿ ತೂಗುಹಾಕಿದರು. ಲಿಂಗಾಯತ ಧರ್ಮದ, ಸ್ವಾಮಿಗಳ, ಶರಣರ ಚಿತ್ರಗಳನ್ನು ಮುರಿಗೆಪ್ಪನವರು ರಚಿಸಿದಷ್ಟು ಚಿತ್ರಗಳನ್ನು ಬೇರೆ ಯಾವ ಕಲಾವಿದರೂ ರಚಿಸಿಲ್ಲ. ದೇಶದ ಹಲವಾರು ನಗರಗಳಲ್ಲಿ ಮತ್ತು ಕರ್ನಾಟಕದಲ್ಲಿ, ಹೆಚ್ಚಾಗಿ ಎಲ್ಲ ವೀರಶೈವ ಮಠಗಳಲ್ಲಿ ಅವರ ಚಿತ್ರಗಳು ಕಾಣಸಿಗುತ್ತವೆ. ಅಥಣಿ ಗಚ್ಚಿನಮಠದಲ್ಲಿ, ಗದಗಿನ ತೋಂಟದಾರ್ಯ ಮಠದಲ್ಲಿ, ಧಾರವಾಡದ ಮುರುಘಾಮಠದಲ್ಲಿ ಮುರುಘೇಂದ್ರ ಶಿವಯೋಗಿಗಳ ಭಾವಚಿತ್ರ, ಅವರ ಪವಾಡಗಳ ಕುರಿತು ಸಾಕಷ್ಟು ಸಂಯೋಜನಾಚಿತ್ರಗಳು ಅಲ್ಲದೆ ಮೃತ್ಯುಂಜಯಪ್ಪಗಳ, ಮಹಾಂತಸ್ವಾಮಿಗಳ, ಬಸವಣ್ಣನವರ ಮತ್ತು ಇನ್ನೂ ಅನೇಕ ಸ್ವಾಮಿಗಳ ಭಾವಚಿತ್ರಗಳು ಇರುತ್ತವೆ. ಪುರಾಣಗಳಿಗೆ ಸಂದರ್ಭಚಿತ್ರ, ಶಿವಶರಣರ ಜೀವನದ ಸಂದರ್ಭಚಿತ್ರ, ಹುಬ್ಬಳ್ಳಿ ಮೂರುಸಾವಿರಮಠ ಪ್ರಕಟಿಸಿದ ಅರವತ್ತೈದು ಪುಸ್ತಕಗಳಿಗೆ ಮುಖಪುಟ, ಭಾವಚಿತ್ರ ರಚಿಸಿರುವರು. ೧೯೫೫ರಲ್ಲಿ ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಹದಿನಾರನೆ ಸರ್ವಸದಸ್ಯರ ಅಧಿವೇಶನ ನಡೆದ ಸಂದರ್ಭದಲ್ಲಿ ೮' X ೬' ಅಳತೆಯಲ್ಲಿ ಹನ್ನೆರಡನೆ ಶತಮಾನದ ಶರಣರ ಅನುಭವ ಮಂಟಪದ ಚಿತ್ರ ಬಿಡಿಸಿದರು. ಅಧಿವೇಶನದ ಅಧ್ಯಕ್ಷರಾಗಿದ್ದ ಬಂಥನಾಳ ಶಿವಯೋಗಿಗಳು, ಮತ್ತು ಬಿ.ಡಿ. ಜತ್ತಿ, ಎಂ.ಪಿ. ಪಾಟೀಲರು ಮೆಚ್ಚುಗೆ ವ್ಯಕ್ತಪಡಿಸಿ "ಇದು ನಿಜಕ್ಕೂ ಅನುಭವ ಮಂಟಪ" ಎಂದರು. ಭಗವದ್ಗೀತೆಗಾಗಿ ಕೃಷ್ಣನ ಅವತಾರಗಳ ಚಿತ್ರ ಬಿಡಿಸಿದರು. ಗ್ರಂಥ ಬಿಡುಗಡೆ ಮಾಡಿದ ಇಂದಿರಾಗಾಂಧಿ ಹೀಗೆಂದರು: "ಕಲಾವಿದರು ಹುಟ್ಟುವರು, ಸಾಯುವರು. ಆದರೆ ಮುರಿಗೆಪ್ಪ ಚೆಟ್ಟಿಯವರ ಚಿತ್ರಗಳನ್ನು ನೋಡಿದರೆ ಕಲೆ ಎಂದೆಂದಿಗೂ ಬಾಳುವುದು ಎಂದೆನಿಸುವುದು". ಇನ್ನೊಂದು ಸಂದರ್ಭದಲ್ಲಿ ಅ.ನ.ಕೃ. ಅವರು ಇವರನ್ನು ಕರ್ನಾಟಕದ ರವಿವರ್ಮರೆಂದು ಬಣ್ಣಿಸಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮಳ ಭಾವಚಿತ್ರವನ್ನು ಮುರಿಗೆಪ್ಪ ೧೯೬೩ರಲ್ಲಿ ರಚಿಸಿದರು. ಅದನ್ನು

ಬೆಂಗಳೂರಿನಲ್ಲಿ ಮಹಿಳಾ ದಿನಾಚರಣೆಯಂದು ಬಿಡುಗಡೆ ಮಾಡಲಾಯಿತು. ಪಂಚವ್ವತಾಯಿ ಸರದಾರ ಅದನ್ನು ಕೊಂಡು ತಮ್ಮ ದಿವಂಗತ ಪತಿ ಬ್ಯಾರಿಸ್ಟರ್ ಎಂ.ಎಸ್. ಸರದಾರ ಸ್ಮರಣಾರ್ಥ ಕಿತ್ತೂರಿನಲ್ಲಿರುವ ಚೆನ್ನಮ್ಮ ಸ್ಮಾರಕ ಭವನಕ್ಕೆ ಕಾಣಿಕೆ ಕೊಟ್ಟರು. ಅದು ಕ್ಯಾಲೆಂಡರ್ ಮೇಲೂ ಅಚ್ಚಾಗಿದೆ. ಮುರಿಗೆಪ್ಪನವರು ರಚಿಸಿದ ಕಥಾಚಿತ್ರಗಳು ಶ್ರೇಷ್ಠ ಮಟ್ಟದ್ದಾಗಿವೆ. 'ಸಿದ್ಧಲಿಂಗ ಪುರಾಣ'ಕ್ಕೆ ಚಿತ್ರಗಳನ್ನು ರಚಿಸಿದ್ದಾರೆ.

ಮುರಿಗೆಪ್ಪನವರು ಬಹಳ ಶಿಸ್ತಿನ ವ್ಯಕ್ತಿಯಾಗಿದ್ದರು. ಅವರು ಹಾಕಿಕೊಂಡ ದಿನಚರಿಯಂತೆ ಹೊತ್ತಿಗೆ ಸರಿಯಾಗಿ ಆಹಾರ, ವಿಹಾರ, ಕಲಾಕೃತಿ ರಚನೆ ಎಲ್ಲವನ್ನೂ ಚಾಚೂ ತಪ್ಪದೇ ನಡೆಸಿಕೊಂಡು ಬಂದಿದ್ದರು. ಶಿಸ್ತು, ಅಚ್ಚುಕಟ್ಟುತನ ಮನುಷ್ಯನಲ್ಲಿಲ್ಲದಿದ್ದರೆ ಜೀವನ ಅಸ್ತವ್ಯಸ್ತವಾಗುವದೆಂದು ಹೇಳುತ್ತಿದ್ದರು. ತಮ್ಮ ಇಳಿವಯಸ್ಸಿನವರೆಗೂ ಸದೃಢ ಕಾಯದವರಾಗಿದ್ದ ಅವರ ಹಿತ ಮಿತವಾದ ಆಹಾರ, ವಾಯು ವಿಹಾರ, ಒಳ್ಳೆಯ ಮನಸ್ಸು, ಚಿಂತನೆ ಇವೇ ಅವರ ಆರೋಗ್ಯವನ್ನು ಕಾಪಾಡಿಕೊಂಡು ಬಂದಿವೆ ಎನ್ನುತ್ತಿದ್ದರು. ಅವರ ಮಕ್ಕಳಿಗೂ ಯಾವ ರೀತಿ ಬದುಕಬೇಕೆನ್ನುವದನ್ನು ಕಲಿಸಿಕೊಟ್ಟಿದ್ದರು. ದುಡ್ಡಿನ ಮಹತ್ವ ತಿಳಿದಿರಬೇಕು, ಅನವಶ್ಯಕವಾಗಿ ಖರ್ಚು ಮಾಡಬಾರದು, ತಂದೆ-ತಾಯಿಯರ ಮೇಲೆ ಅವಲಂಬಿತರಾಗಬಾರದು, ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೆನ್ನುವದೇ ಅವರ ಉದ್ದೇಶ. ಮಕ್ಕಳಿಗೆ ಖರ್ಚಿಗೆ ದುಡ್ಡು ಕೊಟ್ಟರೆ ಅದರ ಲೆಕ್ಕ ಕೇಳುತ್ತಿದ್ದರು. ಅಲ್ಲದೆ ತಾವು ಖರ್ಚು ಮಾಡಿದ್ದನ್ನು ತಮ್ಮ ಡೈರಿಯಲ್ಲಿ ಬರೆಯುತ್ತಿದ್ದರು. ಯಾವ ವಸ್ತುವನ್ನೂ ನಿರ್ಲಕ್ಷಿಸಬಾರದೆಂದು ಅವರ ಭಾವನೆ. ಯಾವಾಗಲೂ ಶುಭ್ರವಾದ ಬಿಳಿ ಅಂಗಿ, ಧೋತರ, ರುಮಾಲು, ಕೋಟು ಧರಿಸಿದ ಗಂಭೀರ ವ್ಯಕ್ತಿತ್ವ ಉಳ್ಳವರಾಗಿದ್ದರು.

೧೯೪೦ರಲ್ಲಿ ಮುರಿಗೆಪ್ಪನವರ ಚಿಕ್ಕಪ್ಪ ಬಶೆಟ್ಟೆಪ್ಪನವರು ತಹಶೀಲದಾರರಾಗಿ ನಿವೃತ್ತರಾದರು. ಅವರು ಪ್ರಾಮಾಣಿಕರಾಗಿದ್ದರಿಂದ ದುಡ್ಡು ಮಾಡಲಿಲ್ಲ, ಗದಗಿನಲ್ಲಿದ್ದ ತಮ್ಮ ಒಂದೇ ಮನೆಯನ್ನು ಮುರಿಗೆಪ್ಪನವರ ಹೆಸರಿಗೆ ಮಾಡಿದರು. ಆದರೆ ಅದರ ಹಿಂದೆ ಸಾಲ ಇತ್ತು. ಚಿತ್ರಗಳನ್ನು ಬಿಡಿಸಿ, ಸಾಲ ತೀರಿಸಿ ಮುರಿಗೆಪ್ಪನವರು ಋಣಮುಕ್ತರಾದರು. ದೊಡ್ಡ ಕುಟುಂಬ ನೋಡಿಕೊಳ್ಳುವ ಹೊಣೆ ಅವರ ಮೇಲಿತ್ತು.

ಚಿಕ್ಕಪ್ಪ ಬಶೆಟ್ಟೆಪ್ಪರಂತೆ ಮುರಿಗೆಪ್ಪನವರು ನಿಷ್ಠಾವಂತ ಲಿಂಗಾಯತರಾಗಿದ್ದರು. ಗುರು, ಲಿಂಗ, ಜಂಗಮಗಳ ಆರಾಧಕರಾಗಿದ್ದರು. ದಿನಕ್ಕೆ ಮೂರು ಸಲ ಲಿಂಗಪೂಜೆ ಮಾಡಿಕೊಳ್ಳುತ್ತಿದ್ದರು. ತಮ್ಮ ಮನೆಗೆ ಭಿಕ್ಷೆಗೆ ಬಂದವರಿಗೆಲ್ಲ ಭಿಕ್ಷೆ ನೀಡುವರು. ಒಂದು ದಿನ ವಯೋವೃದ್ಧ ಜಂಗಮರೊಬ್ಬರು ಗದಗ ರೈಲುನಿಲ್ದಾಣದಲ್ಲಿ ವಿಜಾಪುರ ಗಾಡಿಗೆ ಕಾಯುತ್ತ ಕುಳಿತಿದ್ದು, ಅವರು ಲಿಂಗಪೂಜೆ ಮಾಡಿಕೊಳ್ಳದೆ ಪ್ರಸಾದ ಸ್ವೀಕರಿಸುತ್ತಿರಲಿಲ್ಲವೆಂಬುದನ್ನು ತಿಳಿದು ಮುರಿಗೆಪ್ಪನವರು ಅವರನ್ನು ಮನೆಗೆ ಕರೆದುಕೊಂಡು ಹೋಗಿ, ಅವರ ಲಿಂಗಪೂಜೆ, ಪ್ರಸಾದದ ವ್ಯವಸ್ಥೆ ಮಾಡಿ, ತಿರುಗಿ ಅವರನ್ನು ರೈಲುನಿಲ್ದಾಣಕ್ಕೆ ಕಳಿಸಿದರು. ಬಸವೇಶ್ವರರ ತತ್ವಾದರ್ಶದಂತೆ ಎಲ್ಲ ಜೀವಿಗಳಿಗೂ ದಯೆ ತೋರುತ್ತಿದ್ದರು. ಮೂಕಪ್ರಾಣಿಗಳಿಗೆ ಆಹಾರ ಕೊಡುವದು ಕೋಟಿ ಲಿಂಗಪೂಜೆಗೆ ಸಮ ಎಂದು ಅವರು ನಂಬಿದ್ದರು. ಪ್ರಕೃತಿ ಪ್ರೇಮಿಯಾಗಿದ್ದ ಅವರು

ಹೂವಿನ ಗಿಡಗಳಿಂದ ಹೂವುಗಳನ್ನು ಹರಿಯದೆ ಅಲ್ಲಿಯೆ ಅವುಗಳ ಸೌಂದರ್ಯವನ್ನು ಸವಿಯುತ್ತಿದ್ದರು. ಅವರೆಂದೂ ಗುಡಿಗಳಿಗೆ ಹೋಗುತ್ತಿರಲಿಲ್ಲ. ಅವರು ಕಾಯಕದಲ್ಲಿಯೇ ದೇವರನ್ನು ಕಾಣುತ್ತಿದ್ದರು. ಆದರೆ ನಿತ್ಯ ತೋಂಟದಾರ್ಯ ಮಠಕ್ಕೆ ಹೋಗುತ್ತಿದ್ದರು. ಯಾವ ದುಶ್ಚಟಕ್ಕೂ ಬಲಿಯಾಗಲಿಲ್ಲ.

ಮುರಿಗೆಪ್ಪನವರು ಸಮಾಜಸೇವೆಯೆಂದು ವರಕನ್ಯಾಸಂಸ್ಥೆಯನ್ನು ನಡೆಸುತ್ತಿದ್ದರು. ಶ್ರದ್ಧಾ-ಭಕ್ತಿಯ ಮನೋಭಾವ ಹೊಂದಿದ್ದರು. ಅವರು ಮುಂಬಯಿಯ ಜೆ.ಜೆ. ಕಲಾ ಶಾಲೆಯಲ್ಲಿ ಕಲಿಯುತ್ತಿರುವಾಗಲೂ ಅವರಿಗೆ ಒಳ್ಳೆಯ ಪರಿಸರ ಮತ್ತು ಸಹಪಾಠಿಗಳಿದ್ದರು. ಅವರಲ್ಲಿ ಉತ್ತರ ಕರ್ನಾಟಕದ ಎಂ.ವ್ಹಿ. ಮಿಣಜಿಗಿ, ಜಿ.ಎಸ್. ದಂಡಾವತಿಮಠ, ಡಿ.ವ್ಹಿ. ಹಾಲಭಾವಿ, ಡಿ.ಜಿ. ಬಡಿಗೇರ, ಟಿ.ಪಿ. ಅಕ್ಕಿ, ವ್ಹಿ.ಕೆ. ಪಾಟೀಲ, ಅಮಿನಸಾಬ ಕಮಡೊಳ್ಳಿ ಮೊದಲಾದವರಿದ್ದರು.

ಮುರಿಗೆಪ್ಪನವರ ನಿಃಸ್ವಾರ್ಥ ಬದುಕು, ಶ್ರದ್ಧೆ, ಭಕ್ತಿ, ಪರಿಶ್ರಮದ ಕಾರ್ಯಗಳಿಗೆ ಜನತೆಯಿಂದ ಮನ್ನಣೆ, ಗೌರವ, ಸನ್ಮಾನ, ಪ್ರಶಸ್ತಿಗಳು ದೊರೆತವು. ೧೯೬೫ರಲ್ಲಿ ಕಾರವಾರದಲ್ಲಿ ಜರುಗಿದ ನಲವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಸತ್ಕರಿಸಲಾಯಿತು. ೧೯೮೩ರಲ್ಲಿ ಮೈಸೂರಿನಲ್ಲಿ ಜರುಗಿದ ವೀರಶೈವ ಮಹಾಸಭೆಯ ಸರ್ವಾಧಿವೇಶನದಲ್ಲಿ ಸತ್ಕರಿಸಲಾಯಿತು.

ಮುರಿಗೆಪ್ಪ ಚೆಟ್ಟಿಯವರು ೧೯೩೯ರಲ್ಲಿ ಸೊಲ್ಲಾಪುರ ಪ್ರದರ್ಶನದಲ್ಲಿ, ಮತ್ತು ೧೯೭೫ರಲ್ಲಿ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣಪದಕ ಪಡೆದಿದ್ದಾರೆ. ೧೯೬೬ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ, ೧೯೮೮ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿವೆ. ೧೯೯೬ರಲ್ಲಿ ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ ಸಂದಿದೆ. ೧೯೯೬ರಲ್ಲಿ ಚಿತ್ರಕಲೆಗೆ ಕರ್ನಾಟಕದ ಅತ್ಯುನ್ನತ ಪ್ರಶಸ್ತಿಯಾದ ವೆಂಕಟಪ್ಪ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಮುರಿಗೆಪ್ಪ ಚೆಟ್ಟಿಯವರು ತಮ್ಮ ಕೊನೆಯ ದಿನಗಳನ್ನು ವಿಜಾಪುರದಲ್ಲಿ ಮಗನೊಂದಿಗೆ ಕಳೆದರು. ಅವರ ಎಲ್ಲ ಕಾರ್ಯಗಳಿಗೆ ಅವರ ಶ್ರೀಮತಿಯವರ ಸಹಕಾರ ದೊರೆತಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಮುರಿಗೆಪ್ಪನವರು ವಿಜಾಪುರದಲ್ಲಿ ಮೇ ೨೫, ೨೦೦೩ ರಂದು ಶಿವಾಧೀನರಾದರು. ಅವರ ಕಲೆ ಅಮರವಾಗಿದೆ.

■ ■ ■

## ಗ್ರಂಥದ ಲೇಖಕರ ವಿಳಾಸ :

೧) ಶ್ರೀ ಅನಿಲ ನಾರಾಯಣರಾವ್ ದೇಸಾಯಿ
ಭಾವದೀಪ, ಕಲ್ಯಾಣನಗರ, ಹೊಸ ನೀರಿನ ಟ್ಯಾಂಕ್ ಹತ್ತಿರ, ೬ ನೆಯ ಅಡ್ಡರಸ್ತೆ, ಧಾರವಾಡ-೦೭

೨) ಪ್ರೊ. ಸದಾನಂದ ಕನವಳ್ಳಿ
ಜಲದರ್ಶಿನಿ ನಗರ, ರಾಧಾಕೃಷ್ಣ ನಗರ ಧಾರವಾಡ

೩) ಪಂ. ವೆಂಕಟೇಶ ಕುಮಾರ
ಕೆ. ವಿ. ಜಿ. ಬ್ಯಾಂಕ್ ಹತ್ತಿರ, ಗಾಂಧಿನಗರ ಧಾರವಾಡ-೦೪

೪) ಡಾ. ಮೃತ್ಯುಂಜಯ ಶೆಟ್ಟರ
ಸೂರಶೃಂಗಾರ, ಹೊಸ ಬಸವಶಾಂತನಗರ ಪ್ಲಾಟ್ ನಂ. ೧೮, ಶಂಕರಮಠದ ಹತ್ತಿರ, ಯಾಲಕ್ಕಿ ಶೆಟ್ಟರ ಕಾಲೋನಿ, ಧಾರವಾಡ-೦೪

೫) ಶ್ರೀಮತಿ ದಮಯಂತಿ ನರೇಗಲ್
'ಇಂಪನ' ೪ ನೇ ಅಡ್ಡ ರಸ್ತೆ, ಸಾಧನಕೇರಿ ಧಾರವಾಡ-೦೮

೬) ಡಾ. ಶಶಿಧರ ನರೇಂದ್ರ
ಇಂದ್ರಪ್ರಸ್ಥ, ಹೊಸಯಲ್ಲಾಪೂರ ಧಾರವಾಡ-೦೧

೭) ಡಾ. ಮಲ್ಲಿಕಾರ್ಜುನ ಎಸ್. ತರ್ಲಗಟ್ಟಿ
ಪ್ರಾಚಾರ್ಯರು, ಕ.ವಿ.ವಿ. ಸಂಗೀತ ಮತ್ತು ಲಲಿತಕಲಾ ಮಹಾವಿದ್ಯಾಲಯ ಧಾರವಾಡ-೦೮

೮) ಡಾ. ಶಾಂತಾರಾಮ ಹೆಗಡೆ
ಸಪ್ತಶ್ರೀ, ನಂ.೨೫, ಉಳವಿ ಚನ್ನಬಸವೇಶ್ವರ ನಗರ, ಹಳಿಯಾಳ ರಸ್ತೆ, ಧಾರವಾಡ-೦೭

೯) ಡಾ. ಜಯದೇವಿ ಜಂಗಮಶೆಟ್ಟಿ
ಸಪ್ತಾಪೂರ ೧ ಕ್ರಾಸ್, ಧಾರವಾಡ-೦೧

೧೦) ಶ್ರೀಮತಿ ಜಿ. ಸುರೇಖಾ ಸುರೇಶ
ನಂ.೯೫, ಸೌರಭ ನಿವಾಸ ೩ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಧಾರವಾಡ-೦೩

೧೧) ಡಾ. ಮೀರಾ ಶಿವಶಂಕರ ಗುಂಡಿ
ಪ್ರವಾಚಕರು, ಸ್ನಾತಕೋತ್ತರ ಸಂಗೀತ ಮತ್ತು ಲಲಿತಕಲಾ ವಿಭಾಗ ಕ.ವಿ.ವಿ. ಧಾರವಾಡ-೦೩

೧೨) ಡಾ. ಹನುಮಂತ ಬುರ್ಲಿ
ಗುರುಪೂರ್ಣಿಮಾ, ತತ್ವಾನ್ವೇಷಣ ಮಂದಿರದ ಹತ್ತಿರ. ಪಿ.ಬಿ. ರಸ್ತೆ. ಧಾರವಾಡ

೧೩) ಶ್ರೀ ಶಂಕರ ಹಲಗತ್ತಿ
# ೫೬, ಚಿಲಿಪಿಲಿ, ೪ ನೇ ತಿರುವು ಶಿವಾನಂದ ನಗರ ಧಾರವಾಡ-೦೧

೧೪) ಡಾ. ಶಾರದಾ ವ್ಹಿ ಭಟ್
ಸಹ ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಕ.ವಿ.ವಿ. ಧಾರವಾಡ-೦೩

೧೫) ಡಾ. ವೀರಣ್ಣ ಹೂಗಾರ
ಸಹ ಪ್ರಾಧ್ಯಾಪಕರು, ಸಂಗೀತ ವಿಭಾಗ, ಕ.ವಿ.ವಿ. ಧಾರವಾಡ-೦೩

೧೫) ಶ್ರೀ ರವೀಂದ್ರ ಕವಠೇಕರ
ಎಲ್.ಐ.ಜಿ. ೨೫೭, ನವನಗರ
ಹುಬ್ಬಳ್ಳಿ–೨೫

೧೬) ಶ್ರೀ ದಿವಾಕರ ಹೆಗಡೆ
ಬದುಕು, ಮೊದಲ ಅಡ್ಡರಸ್ತೆ,
ಹೊಯ್ಸಳ ನಗರ, ಹಳಿಯಾಳ ರಸ್ತೆ
ಧಾರವಾಡ–೦೩

೧೭) ಡಾ. ಚಂದ್ರಿಕಾ ಕಾಮತ
ಸುಕ್ರಿತ, ೭೭/೩, ರಾಜನಗರ
ಹುಬ್ಬಳ್ಳಿ–೩೨

೧೯) ಡಾ. ರವಿಕಿರಣ ನಾಕೋಡ
ಝೇಂಕಾರ, ಉಳವಿ ಚೆನ್ನಬಸವೇಶ್ವರ
ನಗರ, ಧಾರವಾಡ–೦೭

೨೦) ಶ್ರೀ ಸತೀಶ ಬಿ. ಪರ್ವತೀಕರ
ಕಾರ್ಯಕ್ರಮ ನಿವಾಹಕರು
ಆಕಾಶವಾಣಿ, ಧಾರವಾಡ–೦೮

೨೧) ಶ್ರೀ ರಾಘವೇಂದ್ರ ಆಯಿ
ನಂ.೭೭, ೬ನೇ ಅಡ್ಡರಸ್ತೆ
ಉಳವಿ ಚೆನ್ನಬಸವೇಶ್ವರ ನಗರ
ಧಾರವಾಡ–೦೭

೨೨) ಪ್ರೊ. ರಾಮಚಂದ್ರ ಷ್ಠಿ ಹೆಗಡೆ
ಹಳ್ಳದಕೈ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಸಂಗೀತ ವಿಭಾಗ, ಎಂ.ಎಂ.
ಕಾಲೇಜು, ಸಿರ್ಸಿ, ಉತ್ತರ ಕನ್ನಡ

೨೩) ಡಾ. ಪ್ರಕಾಶ ಗರುಡ
ಗೊಂಬೆಮನೆ, ಕಬ್ಬೂರ ರಸ್ತೆ,
ಮಾಳಮಡ್ಡಿ ಧಾರವಾಡ–೦೧

೨೪) ಶ್ರೀ ವಿನೋದ ಅಂಬೇಕರ
'ವಿಜಯರಂಗ' ಬಿ೧/೭, ಪಿ&ಟಿ
ಕ್ವಾರ್ಟರ್ಸ್ ಮಹಾಂತೇಶ ನಗರ,
ಬೆಳಗಾವಿ–೧೬

೨೫) ಶ್ರೀ ಮಾರ್ತಂಡಪ್ಪ ಕತ್ತಿ
ಮಾಸ್ತರ್ ಬಿಲ್ಡಿಂಗ್, ಮಿಚಗಿನ್
ಕಂಪೌಂಡ್, ಸಪ್ತಾಪೂರ, ಧಾರವಾಡ

೨೬) ದಿ. ಡಾ. ಮೃತ್ಯುಂಜಯ ಹೊರಕೇರಿ
ಬದಾಮಿ, ಜಿಲ್ಲಾ ಬಾಗಲಕೋಟಿ

೨೭) ಶ್ರೀ ರವಿ ಕುಲಕರ್ಣಿ
೭/ಬಿ, ಕೆ.ಎಚ್.ಬಿ. ಕಾಲೋನಿ
ಆರ್.ಎನ್. ಶೆಟ್ಟಿ ಕ್ರೀಡಾಂಗಣ ಹತ್ತಿರ
ಧಾರವಾಡ–೦೮

೨೮) ಶ್ರೀ ಸಂತೋಷ ಮಹಾಲೆ
ಮಹಿಷಿ ಬ್ಲಾಕ್, ಗಂಡು ಮಕ್ಕಳ
ತರಬೇತಿ ಕಾಲೇಜು ರಸ್ತೆ
ಕೆ.ಸಿ. ಪಾರ್ಕ್ ಹತ್ತಿರ,
ಧಾರವಾಡ–೦೮

೨೯) ಡಾ. ಬಾಳಣ್ಣ ಶೀಗಿಹಳ್ಳಿ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಶ್ರೀನಗರ, ಧಾರವಾಡ–೦೩

೩೦) ಶ್ರೀ ಸಿ.ಎಂ.ಚೆನ್ನಬಸಪ್ಪ
(ಮೂಡಲಗಿರಿ)೪/ಬಿ. ಓಂ ನಗರ
ಸಾಯಿನಗರ ರಸ್ತೆ, ಉಣಕಲ್
ಹುಬ್ಬಳ್ಳಿ–೩೧

೩೧) ಶ್ರೀ ಆರೂರು ಲಕ್ಷ್ಮಣ ಶೇಟ್
೩೭. ನಿಸರ್ಗ, ಶಕ್ತಿ ಕಾಲೋನಿ
ಹುಬ್ಬಳ್ಳಿ–೩೨

೩೨) ಶ್ರೀ ಸುರೇಶ ಡಿ. ಹಾಲಭಾವಿ
ಉಳವಿ ಚೆನ್ನಬಸವೇಶ್ವರ
ದೇವಸ್ಥಾನದ ಹತ್ತಿರ
ಧಾರವಾಡ–೦೭

೩೮) ಶ್ರೀ ವಸಂತ ಕುಲಕರ್ಣಿ
ಮನೆ ನಂ. ೩೧.ಇಂದಿರಾ ಕಾಲೋನಿ
ನಾಗಶೆಟ್ಟಿಕೊಪ್ಪ, ಹುಬ್ಬಳ್ಳಿ

## ಕರ್ನಾಟಕ [redacted]

| ಅ.ಸಂ. | ಪುಸ್ತಕದ ಹೆಸರು | ಲೇಖಕರು | ಬೆಲೆ | ಪ್ರಕಟಣೆ ವರ್ಷ |
|---|---|---|---|---|
| *೧. | ಉತ್ತರರಾಮ ಚರಿತ್ರೆ | ಧೋಂಡೋ ನರಸಿಂಹ ಮುಳಬಾಗಲ | ೯ಆಣೆ | ೧೮೯೨ |
| ೨. | ವೇಣಿ ಸಂಹಾರ | ಧೋಂಡೋ ನರಸಿಂಹ ಮುಳಬಾಗಲ | | ೧೮೯೨ |
| ೩. | ಆರ್ಯ ಕುಲಾಂಗನಾ | ಎಚ್. ತಿಮ್ಮ ಕೃಷ್ಣರಾವ್ | | ೧೮೯೬ |
| ೪. | ಕಂಠ, ತಗಾಯಿ, ಇಳಿವತ್ತಿ | ಆರ್. ಎಸ್. ಕುಲಕರ್ಣಿ | ೧ಆ೬ಪೈ | ೧೮೯೬ |
| ೫. | ಮಾಳವಿಕಾಗ್ನಿ ಮಿತ್ರ | ಧೋಂಡೋ ನರಸಿಂಹ ಮುಳಬಾಗಲ | ೪೪ಪೈ | ೧೮೯೭ |
| ೬. | ಕನ್ನಡ ಸುಶೀಲಾ ಪರಿಣಯಂ (ನಾಟಕ) | ಎಚ್. ಚಿದಂಬರಯ್ಯ | ೪ಆಣೆ | ೧೮೯೯ |
| ೭ | ಕನ್ನಡಿಗರ ಜನ್ಮ ಸಾರ್ಥಕತೆ | ವಲ್ಲಭಮಹಾಲಿಂಗ ತಟ್ಟಿ | ೩ಆಣೆ | ೧೮೯೯ |
| ೮. | ಹಿತೋಪದೇಶ ಭಾಗ-೩ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ಆಣೆ | ೧೯೦೦ |
| ೯. | ಹಿತೋಪದೇಶ ಭಾಗ-೪ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ಆಣೆ | ೧೯೦೦ |
| ೧೦. | ಬಾಲ್ಯವಿವಾಹಶಾಸ್ತ್ರ ನಿಷೇಧ | ತಿಮ್ಮಾಜಿ ಅನಂತ ಕಾಳಿ | ೫ಆಣೆ | ೧೯೦೦ |
| ೧೧. | ನಿದ್ದೆಯಲ್ಲೆಬ್ಬಿಸಲ್ಪಟ್ಟ ಚಂದನದಾಸನು (ನಾಟಕ) | ಗಂಗಾಧರರಾವ ಹುಯಿಲಗೋಳ | ೪ಆಣೆ | ೧೯೦೧ |
| ೧೨. | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ಸಿದ್ಧಾಂತಿ ಶಿವಶಂಕರಶಾಸ್ತ್ರಿ | ೩ಆಣೆ | ೧೯೦೧ |
| ೧೩. | ವೀರಮಣಿ | ತೋಂಟೇಶ ಅನ್ನದಾನಿ ಮಂಗಳೂರು | ೨ಆಣೆ | ೧೯೦೨ |
| ೧೪. | ಸತ್ಯರಾಜಾ ಪೂರ್ವದೇಶ ಯಾತ್ರೆಗಳು | ಅನುಃ ರಾಮರಾವ್ ಬೆನಗಲ್ | ೮ಆಣೆ | ೧೯೦೩ |
| ೧೫. | ಸುಭದ್ರಾ ಹರಣಂ | | ೨ಆಣೆ | ೧೯೦೩ |
| ೧೬ | ಅಭಿನವ ಕಾದಂಬರಿ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೫ಆಣೆ | ೧೯೦೩ |
| ೧೭ | ಅರ್ಥರ್ ಡ್ಯೂಕ್ ಆಫ್ ವೆಲಿಂಗ್ಟನ್ ಚರಿತ್ರೆಯು | ಗುರುಬಸಪ್ಪಾ ಫಕೀರಪ್ಪಾ ಹಳಕಟ್ಟಿ | ೧ ರೂ | ೧೯೦೪ |
| ೧೮. | ಆರ್ಯವಿದ್ಯಾದರ್ಶನವು | ಗುರುನಾಥ ವೆಂಕಟೇಶ ಕಿತ್ತೂರ | ೮ಆಣೆ | ೧೯೦೪ |
| ೧೯. | ಚಿತ್ತೂರಿನ ಮುತ್ತಿಗೆ | ಕೃಷ್ಣಾಜಿ ಹ. ಮುದವೇಡಕರ | ೬ಆಣೆ | ೧೯೦೫ |
| ೨೦. | ಸುಭದ್ರಾವಿಜಯ ನಾಟಕಂ | ಬಿ. ರಾಮರಾವ್ | ೧೨ಆಣೆ | ೧೯೦೬ |
| ೨೧. | ಕರ್ನಾಟಕ ಕಥಾಸರಿತ್ಸಾಗರ | ಸೋಮದೇವ ಮಹಾಕವಿ | ೬ಆಣೆ | ೧೯೦೬ |
| ೨೨. | ಕೃಷಿಕರ್ಮ ಶಾಸ್ತ್ರವು | ರಾಮಚಂದ್ರ ಮಧ್ವ ಮಹಿಷಿ | ೧೨ಆಣೆ | ೧೯೦೬ |
| ೨೩. | ದಕ್ಷಿಣ ಮುಸಲ್ಮಾನ ರಾಜ್ಯಗಳ ಇತಿಹಾಸವು | ರಾಘವೇಂದ್ರ ಕೃ. ಇನಾಮತಿ | ೬ಆಣೆ | ೧೯೦೭ |
| ೨೪. | ವಿಜಯನಗರದ ಸಾಮ್ರಾಜ್ಯವು | ವೀರಭದ್ರ ಬಸಪ್ಪಾ | ೧ರೂ | ೧೯೦೮ |
| ೨೫. | ಮಾನವಶಾಸ್ತ್ರವು | ಗೊಡ್ಡೋ ಮುಕುಂದ ಉದಕಟ್ಟಿ | ೮ಆಣೆ | ೧೯೦೮ |
| ೨೬ | ಎಂಟು ಸ್ತ್ರೀ ರತ್ನಗಳು | ಗದಿಗೆವ್ವ ಕುರಹಟ್ಟಿ | ೬ಆಣೆ | ೧೯೦೯ |
| ೨೭ | ನಾಮದಾರ ವಿಲಿಯಮ್ ಎವರ್ಟ ಗ್ಲಾಡಸ್ಟನ್ ದೊರೆಗಳ ಚರಿತ್ರೆಯು | ಗುರುಬಸಪ್ಪ ಫಕ್ಕೀರಪ್ಪ ಹಳಕಟ್ಟಿ | ೧ರೂ | ೧೯೦೯ |

## ☆ ಸಾಂಸ್ಕೃತಿಕ ಧೃವ ತಾರೆಗಳು

| | | | | |
|---|---|---|---|---|
| ೨೮. | ವಿಶ್ವ | ಜೀವಾಜಿ ವಿಷ್ಣು ಗೋರೆ | ೪ಆಣೆ | ೧೯೧೦ |
| ೨೯. | ಮೋಹಿನಿ ಅಥವಾ ನಿಂದಕರ ನಡುವಳಿ | ಗದಿಗೆಯ್ಯಾ ಹು. ಹೊನ್ನಾಪುರಮಠ | ೮ಆಣೆ | ೧೯೧೧ |
| ೩೦. | ಕನ್ನಡ ಮಾತು ತಲೆ ಎತ್ತುವ ಬಗೆ | ಬಿ.ಎಂ.ಶ್ರೀಕಂಠಯ್ಯ | | ೧೯೧೧ |
| ೩೧. | ಶಿಕ್ಷಣ ಮೀಮಾಂಸೆ | ವೆಂಕಟೇಶ ಬಿ. ಆಲೂರ<br>ವೆಂಕಟೇಶ ನ. ಮಗದಾಳ | ೨ ರೂ<br>೪ಆಣೆ | ೧೯೧೧ |
| ೩೨. | ಕೌಸಲ್ಯಾ ಪರಿಣಯಂ | ಕೆ. ರಾಮಸ್ವಾಮಯ್ಯಂಗಾರ | ೩ಆಣೆ | ೧೯೧೨ |
| ೩೩. | ಕಾಲಿದಾಸ ಚರಿತ್ರ | ಗುರುನಾಥ ವೆಂಕಟೇಶ ಕಿತ್ತೂರ | ೬ಆಣೆ | ೧೯೧೨ |
| ೩೪. | ಕರ್ನಾಟಕ ಯಯಾತಿ ನಾಟಕಂ | ಶಾ. ವೆಂಕಟರಮಯ್ಯ | ೪ಆಣೆ | ೧೯೧೩ |
| ೩೫. | ಕವಿಕಾರ್ಯ ಪ್ರಶಂಸೆ | ಮ. ಅ. ರಾಮಾನುಜಯ್ಯಂಗಾರ | ೩ಆಣೆ | ೧೯೧೩ |
| ೩೬. | ಸರಸ್ವತೀ | ಅನು: ಲಿಂಗೋ ರಾಮಚಂದ್ರ ಅಕ್ಕೂರ | ೧೨ಆಣೆ | ೧೯೧೩ |
| ೩೭. | ಭಾರತೀಯ ವಿದುಷಿಯರು | ಮ. ಪ್ರ. ಪೂಜಾರ | ೫ಆಣೆ | ೧೯೧೪ |
| ೩೮. | ಪ್ರಾಚೀನ ಹಿಂದೂಸ್ತಾನ | ವೆಂಕಟೇಶ ಮಗದಾಳ | ೧ ರೂ | ೧೯೧೪ |
| ೩೯. | ಪಂ. ಈಶ್ವರಚಂದ್ರ ವಿದ್ಯಾಸಾಗರ ಇವರ ಚರಿತ್ರವು | ಕೆ. ರಾಮಸ್ವಾಮಯ್ಯಂಗಾರ | ೧ ರೂ | ೧೯೧೭ |
| ೪೦. | ಅಶೋಕ ಅಥವಾ ಪ್ರಿಯದರ್ಶಿನಿ | ಎಂ. ಪಿ. ಪೂಜಾರ | ೧ರೂ. ೬ಆ. | ೧೯೧೯ |
| ೪೧. | ಬೇಗಮ ಸಮರೂ | ಎಸ್. ಎ. ಕುಲಕರ್ಣಿ | ೬ಆಣೆ | ೧೯೨೦ |
| ೪೨. | ಹಜರತ ಮಹಮ್ಮದ ಪೈಗಂಬರರು | ಎಂ. ಪಿ. ಪೂಜಾರ | ೬ಆಣೆ | ೧೯೨೦ |
| ೪೩. | ಅಮೇರಿಕೆಯೊಳಗಿನ ಬಡ ವಿದ್ಯಾರ್ಥಿಗಳು | ಶ್ರೀನಿವಾಸ ಪಾಂಡುರಂಗ ಕೋಟಿ | ೫ಆಣೆ | ೧೯೨೦ |
| ೪೪. | ಮದುವೆ | ಮ. ಪ್ರ. ಪೂಜಾರ | ೨ಆಣೆ | ೧೯೨೦ |
| ೪೫. | ಹರೀಶನ ಪ್ರೇಮ | | ೪ಆಣೆ | ೧೯೨೦ |
| ೪೬. | ಇಸೋಪನ ಚರಿತ್ರೆ | ತ. ನಾ. ಅಮ್ಮಿನಭಾವಿ | ೩ಆಣೆ | ೧೯೨೦ |
| ೪೭. | ಪಂಡಿತರಾಜ | ಕೇಶವ ರಂಗಭಟ್ಟ ಜೋಶಿ | ೪ಆಣೆ | ೧೯೨೦ |
| ೪೮. | ವಿದ್ಯಾರಣ್ಯ ಸ್ವಾಮಿಗಳು | ಭೀ. ಜೀ. ಹುಲಿಕವಿ | ೧ ರೂ | ೧೯೨೨ |
| ೪೯. | ಅಭಿಷೇಕ ನಾಟಕ | ಪಾನ್ಯಂ ಸುಂದರಶಾಸ್ತ್ರಿ | ೬ಆಣೆ | ೧೯೨೪ |
| ೫೦. | ಕರ್ನಾಟಕ ಸ್ವಪ್ನವಾಸವದತ್ತಂ | ಅನು: ಭೀ. ಜೀ. ಹುಲಿಕವಿ | ೬ಆಣೆ | ೧೯೨೫ |
| ೫೧. | ಸತ್ಕಥಾ ಕುಸುಮಮಂಜರಿ | ನಾರಾಯಣ ವೆಂಕಟೇಶ ಕುರಡಿ | ೧೦ಆಣೆ | ೧೯೨೫ |
| ೫೨. | ದಿವಾಣ ಬಹಾದ್ದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆಯು | | | ೧೯೨೫ |
| ೫೩. | ಭಾಸಕವಿ ಅಭಿಷೇಕ ನಾಟಕ | ಅನು: ಪಾನ್ಯ ಸುಂದರಶಾಸ್ತ್ರಿ | ೬ಆಣೆ | ೧೯೨೫ |
| ೫೪. | ರಘುವಂಶ (ಕಾಳಿದಾಸ ವಿರಚಿತ) | ಅನು: ಕಲಮಡಿ ನರಹರಿರಾಯರು | ೨ ರೂ | ೧೯೨೮ |
| ೫೫. | ಆರ್ಯರ ಶಿಕ್ಷಣ ಪದ್ಧತಿ | ಎಸ್. ಎನ್. ನರಹರಯ್ಯ | ೪ಆಣೆ | ೧೯೨೮ |
| ೫೬. | ಭೀಷ್ಮಾಚಾರ್ಯ | ಮ. ಪ್ರ. ಪೂಜಾರ | ೫ಆಣೆ | ೧೯೨೮ |
| ೫೭. | ಜೈನಧರ್ಮ ಪರಿಭಾಷೆ | ಮಹಾದೇವ ಪ್ರಭಾಕರ ಪೂಜಾರ | ೧ರೂ,೪ಆಣೆ | ೧೯೩೦ |
| ೫೮. | ನರಗುಂದ ಬಂಡಾಯ | ಪಂ. ಭೀ. ಜೀ. ಹುಲಿಕವಿ | ೧ ರೂ | ೧೯೩೦ |
| ೫೯. | ವೇಣೀಬಂಧನ | ತಮ್ಮಾಜಿ. ನಾ. ಅಮ್ಮಿನಭಾವಿ | ೪ಆಣೆ | ೧೯೩೭ |
| ೬೦. | ಕರ್ನಾಟಕ ಜನಜೀವನ | ಬೆಟಗೇರಿ ಕೃಷ್ಣಶರ್ಮ | ೨ರೂ | ೧೯೩೯ |
| ೬೧. | ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ | ಪ್ರೊ. ಸ. ಸ. ಮಾಳವಾಡ | ೨ ರೂ | ೧೯೩೯ |

| | | | | |
|---|---|---|---|---|
| ೬೨. | ಕಾವ್ಯಾಲೋಕನ | ಪ್ರೊ. ಎಸ್. ಎಸ್. ಬಸವನಾಳ | | ೧೯೩೯ |
| ೬೩. | ಶಬ್ದಾನುಶಾಸನ ಭಾಗ-೧ | ಕುಂಡಲಗಿರಿ ಆಚಾರ್ಯ | | ೧೯೪೧ |
| | ಶಬ್ದಾನುಶಾಸನ ಭಾಗ-೨ | ಕುಂಡಲಗಿರಿ ಆಚಾರ್ಯ | | ೧೯೪೧ |
| ೬೪. | ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆ ಭಾಗ-೨ | ಶಿ. ಶಿ. ಬಸವನಾಳ | ೨ ರೂ | ೧೯೪೧ |
| ೬೫. | ಕರ್ನಾಟಕ ವಿದ್ಯಾವರ್ಧಕ ಸಂಘ ಐವತ್ತು ವರ್ಷ | | | ೧೯೪೧ |
| ೬೬. | ಜೀವನ ವ್ಯಾಙ್ಮಯ ವಿಮರ್ಶೆ | ಗಳಗನಾಥ | ೧ರೂ.೮ಆಣೆ | ೧೯೪೧ |
| ೬೭. | A CULTURL HISTORY OF KARNATAKA | ಕರಮಕರ ಎ. ಪಿ. ಹಾಗೂ ಕಲಮದಾನಿ. | ೫ ರೂ | ೧೯೪೬ |
| ೬೮. | ನಾನು ಓದುವುದೇನು ? | ವಿವಿಧ ಲೇಖಕರು | ೧ ರೂ | ೧೯೬೮ |
| ೬೯. | ಕಾರ್ಯಾಲಯ ದೀಪಿಕೆ | | ೨೦ ರೂ | ೧೯೭೬ |
| ೭೦. | ಅಸಂಗತ ನಾಟಕಗಳು | ಕೀರ್ತಿನಾಥ ಕುರ್ತಕೋಟಿ | ೧ ರೂ | ೧೯೭೬ |
| ೭೧. | ಲಾವಣಿ ಸಾಹಿತ್ಯ | ಸಿಂಪಿ ಲಿಂಗಣ್ಣ | ೧ ರೂ | ೧೯೭೬ |
| ೭೨. | ಚೆನ್ನವೀರ ಕಣವಿ ಕಾವ್ಯದೃಷ್ಟಿ | ಗೌರೀಶ ಕಾಯ್ಕಿಣಿ | ೪ ರೂ | ೧೯೭೭ |
| *೭೩. | ಆಲ್ಬರ್ಟ್ ಐನ್‌ಸ್ಟೀನ್ | ಡಾ. ಎಂ. ಆಯ್. ಸವದತ್ತಿ ಡಾ. ವಿ. ಎಂ. ಪೂಜಾರ | ೩ ರೂ | ೧೯೮೧ |
| ೭೪. | ರುಚಿ | ಡಾ. ಕೆ. ಕೃಷ್ಣಮೂರ್ತಿ | ೧.೮೦ | ೧೯೮೧ |
| ೭೫. | ಜಾನಪದ | ಡಾ. ಜೀ. ಶಂ. ಪರಮಶಿವಯ್ಯ | ೧.೮೦ | ೧೯೮೧ |
| ೭೬. | ಬಾಣ ಕಾದಂಬರಿ(೧೦ನೇ ಮುದ್ರಣ) | ಗಂಗಾಧರ ಮಡಿವಾಳೇಶ್ವರ ತುರಮರಿ | ೩೫ ರೂ. | ೧೯೯೫ |
| *೭೭. | ಕನ್ನಡ ಕರ್ನಾಟಕ ಏನು ಮಾಡಬೇಕು ? | ಡಾ. ಪಾಟೀಲ ಪುಟ್ಟಪ್ಪ | ೨ ರೂ | ೧೯೯೫ |
| *೭೮. | ಕಾವ್ಯಯಾನ | ಡಾ. ಬಸವರಾಜ ಸಾದರ | ೩೦ ರೂ | ೨೦೦೦ |
| *೭೯. | ಸ್ವಾತಂತ್ರ್ಯ ಚಿಂತನೆ | ಮೋಹನ ನಾಗಮ್ಮನವರ | ೫೦ ರೂ | ೨೦೦೦ |
| *೮೦. | ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು | ಡಾ. ಬಸವರಾಜ ಸಾದರ | ೧೫೦ ರೂ | ೨೦೦೨ |
| ೮೧. | ಗೋಕಾಕ ವರದಿ ಹೋರಾಟದ ಕಥೆ | ಡಾ. ಪಾಟೀಲ ಪುಟ್ಟಪ್ಪ | ೧೫ ರೂ | ೨೦೦೨ |
| *೮೨. | ಕಥನ ಕುತೂಹಲ | ಮೋಹನ ನಾಗಮ್ಮನವರ | ೬೦ ರೂ | ೨೦೦೩ |
| *೮೩. | ಬಯಲ ಬೇರ ಚಿಗುರು | ಮೋಹನ ನಾಗಮ್ಮನವರ | ೧೫೦ ರೂ | ೨೦೦೩ |
| *೮೪. | ಮಾನವ್ಯ ಕವಿ, ಜಿ. ಎ. ಸನದಿ | ಬಿ. ವ್ಹಿ. ಗುಂಜೆಟ್ಟಿ | ೧೦ ರೂ | ೨೦೦೩ |
| ೮೫. | ಸ್ನೇಹ ಸೌರಭ ಕನ್ನಡ ಸಮ್ಮೇಳನ ಮುಂಬೈ ಧಾರವಾಡ | ಬಿ. ವ್ಹಿ. ಗುಂಜೆಟ್ಟಿ | ೬೦ ರೂ | ೨೦೦೪ |
| *೮೬. | ಕನ್ನಡ ಪೋಷಕರು | ಡಾ. ಜಿ. ಡಿ. ಜೋಶಿ | ೫೦ ರೂ | ೨೦೦೫ |
| ೮೭ | ಸ್ವಾತಂತ್ರ್ಯ ಶರಣ್ಯರು | ಮೋಹನ ನಾಗಮ್ಮನವರ | ೧೦೦ ರೂ | ೨೦೦೫ |
| *೮೮. | ಸುವರ್ಣ ಕರ್ನಾಟಕ ರಾಜಕೀಯ ಸಿಂಹಾವಲೋಕನ | ಆರ್. ವಿ. ಹೊರಡಿ | ೪೦ ರೂ | ೨೦೦೮ |
| *೮೯. | ಬೇಂದ್ರೆ ಕಾಳಿದಾಸ: ಕಾವ್ಯಕಾರಣ | ವೀಣಾ ಕುಲಕರ್ಣಿ | ೧೦೦ ರೂ | ೨೦೦೮ |
| *೯೦. | ಸಾಂಸ್ಕೃತಿಕ ಧ್ರುವ ತಾರೆಗಳು | ಸಂ. ಅನಿಲ ದೇಸಾಯಿ | ೨೦೦ ರೂ | ೨೦೧೪ |

(* ಮಾರಾಟಕ್ಕೆ ಲಭ್ಯವಿವೆ)

## ಸಂಘದ ಪದಾಧಿಕಾರಿಗಳು

| | | |
|---|---|---|
| ಅಧ್ಯಕ್ಷರು | : | **ನಾಡೋಜ ಡಾ. ಪಾಟೀಲ ಪುಟ್ಟಪ್ಪ** |
| ಉಪಾಧ್ಯಕ್ಷರು | : | **ಶ್ರೀ ಶಿವಣ್ಣ ಬೆಲ್ಲದ** |
| ಗೌರವ ಉಪಾಧ್ಯಕ್ಷರು | : | **ಶ್ರೀ ಜಿ. ಜಿ. ದೊಡವಾಡ,** |
| | | **ಡಾ. ಜೆ. ಎ. ಗೌಡ,** |
| | | **ಶ್ರೀಮತಿ ಪದ್ಮಲತಾ ನಿರಂಜನಕುಮಾರ** |
| | | **ಡಾ. ಭರತಕುಮಾರ ಪೊಲಿಪು, ಮುಂಬಯಿ,** |
| | | **ಶ್ರೀಮತಿ ಶೋಭನಾ ಆರ್. ಹೂಗಾರ** |

| | | | |
|---|---|---|---|
| **ಪ್ರೊ. ಬಿ. ಫ಼ಿ. ಗುಂಜೆಟ್ಟಿ** | **ಕೃಷ್ಣ ಜೋಶಿ** | **ಶಂಕರ ಹಲಗತ್ತಿ** | **ಶಿವಾನಂದ ಭಾವಿಕಟ್ಟಿ** |
| ಕಾರ್ಯಾಧ್ಯಕ್ಷರು | ಕೋಶಾಧ್ಯಕ್ಷರು | ಪ್ರಧಾನ ಕಾರ್ಯದರ್ಶಿ | ಸಹ ಕಾರ್ಯದರ್ಶಿ |

ಕಾರ್ಯಕಾರಿ ಸಮಿತಿ ಸದಸ್ಯರು

**ಸಿದ್ಧಲಿಂಗ ದೇಸಾಯಿ, ಶಂಕರ ಕುಂಬಿ, ಮೋಹನ ನಾಗಮ್ಮನವರ,**


**ಡಾ. ಸಂಜೀವ ಕುಲಕರ್ಣಿ, ಬಸವಪ್ರಭು ಹೊಸಕೇರಿ**

**ಗುರು ಹಿರೇಮಠ, ವಿಶ್ವೇಶ್ವರಿ ಬ. ಹಿರೇಮಠ, ಪ್ರಕಾಶ ಎಸ್. ಉಡಿಕೇರಿ**

**ಹಾಗೂ**

**ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು**

**(ಸರಕಾರದ ಪ್ರತಿನಿಧಿ)**



# ಸಾಂಸ್ಕೃತಿಕ ಧ್ರುವ ತಾರೆಗಳು

**ಸಂಪಾದಕರು : ಅನಿಲ ದೇಸಾಯಿ**

ಧಾರವಾಡ ಹಲವು ಸಾಂಸ್ಕೃತಿಕ ಜರಿಗಳ ನಗರ, ಇಂಥ ಹಲವು ಜರಿಗಳಿಗೆ ಉಗಮ ಸ್ಥಾನವಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ನಿಂತಿದೆ. ಇಂಥ ಸಂಘದ ಕಟ್ಟಡದ ಒಳಗೆ ಕನ್ನಡದ ನೆಲವನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿದ ಚೇತನಗಳ ಭಾವಚಿತ್ರಗಳನ್ನು ಹಾಕಿದ್ದು ನಾಡಿನ ಸಾಂಸ್ಕೃತಿಕ ಲೋಕವನ್ನೇ ತೆರೆದಿಟ್ಟಂತೆ ಭಾಸವಾಗುತ್ತದೆ.

'ಸಾಂಸ್ಕೃತಿಕ ಧ್ರುವ ತಾರೆಗಳು' ಈ ಕೃತಿಯೊಳಗೆ ಹಿಡಿದಿಟ್ಟ ಸಂಗೀತ, ನಾಟಕ, ಚಿತ್ರಕಲೆಯ ಸಾಧಕರ ಕಿರು ಪರಿಚಯ ಮಾಡಿಕೊಡುವ ಪ್ರಯತ್ನ ಅಭಿನಂದನೀಯ. ಸಂಘದ ಆಶಯದಂತೆ ನಟ, ಶ್ರೇಷ್ಠ ಮಾತುಗಾರ, ಆಕಾಶವಾಣಿಯ ಕಾರ್ಯಕ್ರಮ ಅಧಿಕಾರಿ ಶ್ರೀ ಅನಿಲ ದೇಸಾಯಿ ಅವರು ಸಾಕಷ್ಟು ಕಾಳಜಿಯೊಂದಿಗೆ ಅಂದವಾಗಿ ಹಾಗೂ ಕ್ರಮಬದ್ಧವಾಗಿ ಈ ಕೃತಿಯ ಸಂಪಾದನೆ ಮಾಡಿದ್ದು ಮೆಚ್ಚುವಂತಹದ್ದು. ಮುಂದಿನ ಪೀಳಿಗೆಗೆ ಈ ನಾಡಿನ ಕೀರ್ತಿ ಹೆಚ್ಚಿಸಿದ ಮಹಾನ್ ಚೇತನಗಳನ್ನು ಪರಿಚಯಿಸುವಲ್ಲಿ ಈ ಕೃತಿ ಸಾಹಿತ್ಯ ಲೋಕದಲ್ಲಿ ಮಹತ್ವದ್ದಾಗಿ ನಿಲ್ಲುತ್ತದೆ. ಒಬ್ಬ ವ್ಯಕ್ತಿಯ ಅಪಾರ ಸಾಧನೆಯ ಪರಿಚಯವನ್ನು ನಾಲ್ಕಾರು ಪುಟಗಳಲ್ಲಿ ಕಟ್ಟಿಕೊಡುವುದು ಕಷ್ಟಸಾಧ್ಯ. ಆದರೆ ಈ ಕೃತಿಯೊಳಗೆ ಬರುವ ಲೇಖಕರು ಆ ಕಾರ್ಯವನ್ನು ಸಮರ್ಥವಾಗಿ ಮಾಡಿದ್ದಾರೆ.

ಸಾಂಸ್ಕೃತಿಕ ರಂಗದಲ್ಲಿ ಇರುವ ಮತ್ತು ಆಸಕ್ತಿ ಹೊಂದಿದವರು ಸದಾ ತಮ್ಮ ಹತ್ತಿರ ಇಟ್ಟುಕೊಳ್ಳಬೇಕಾದ ಆಕರ ಗ್ರಂಥ ಇದಾಗಿದೆ. ಕಲಾ ಲೋಕದ ತಾರೆಗಳನ್ನು ಓದುಗರ ಅಂಗಳಕ್ಕೆ ತಂದಿಟ್ಟಿದ್ದಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದ ಆಡಳಿತವರ್ಗವನ್ನು ಹಾಗೂ ಸಂಪಾದನೆ ಮಾಡಿದ ಅನಿಲ ದೇಸಾಯಿ ಅವರನ್ನು ಅಭಿನಂದಿಸುವೆ.

**ಪಂ. ಸಿದ್ದರಾಮಯ್ಯ ಮಠಪತಿ (ಗೋರ್ಟಾ)**
ಸಂಗೀತ ಪ್ರಾಧ್ಯಾಪಕರು,
ಬಾಗಲಕೋಟ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ